# ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯ ವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು

ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆ ಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಯಾವುದೇ ಸಮುದಾಯದ ಅಥವಾ ಬುಡಕಟ್ಟಿನ ಚರಿತ್ರೆಯೆಂದರೆ ಒಂದು ಸಮಗ್ರವಾದ ಇತಿಹಾಸ. ಇಂದು ನಾವು ಕಟ್ಟುವ ಇತಿಹಾಸ ಲಿಖಿತ ದಾಖಲೆಗಳನ್ನು ಆಧರಿಸಿದ ಇತಿಹಾಸ, ಯಶೋಗಾಥೆಗಳ ಇತಿಹಾಸ. ತ್ಯಾಗ-ಬಲಿದಾನದಂತಹ ಕೆಲವೊಂದು ಸಂಗತಿಗಳು ಶಾಸನ ಮುಖಾಂತರ ವ್ಯಕ್ತವಾದರೂ ಸಹ ಸಮುದಾಯವನ್ನು ಇಡಿಯಾಗಿ ಪ್ರತಿನಿಧಿಸುವ ಸಾಧ್ಯತೆಗಳು ಕಡಿಮೆ. ಹೀಗಾಗಿ ಲಿಪಿ ಸಂಪ್ರದಾಯ ಹಾಗೂ ಮೌಖಿಕ ಸಂಪ್ರದಾಯಗಳೆರಡನ್ನೂ ಒಳ ಗೊಂಡಂತಹ ಇತಿಹಾಸ ವಾಸ್ತವತೆಗೆ ಸಮೀಪವಾಗಿರುವ ಸಾಧ್ಯತೆ ಇದೆ. ಅಲ್ಲದೇ ಲಿಪಿ ಮತ್ತು ಮೌಖಿಕತೆ ಎರಡನ್ನೂ ಹೊರತುಪಡಿಸಿ ಜನಪದರು ಉಳಿಸಿಕೊಂಡು ಬಂದಿರುವ ಪ್ರಾಚೀನ ಪರಿಕರಗಳು, ನಂಬಿಕೆಗಳು ಹಾಗೂ ಆಚರಣೆಗಳ ಮುಖಾಂತರ ಮೂಲಸಂಸ್ಕೃತಿ ಯನ್ನು ಪುನರ್‌ರೂಪಿಸುವ ಅವಶ್ಯಕತೆ ಇದೆ ಎಂದು ಭಾವಿಸಿದ್ದೇನೆ. ಅಂದಿನ ಭೌತಿಕ ಪರಿಸರ ಹಾಗೂ ಬೌದ್ಧಿಕ ಪರಿಸರವನ್ನು ಒಳಗೊಂಡ ಸಂಸ್ಕೃತಿಯಿಂದ ರೂಪಿತವಾಗಿರುವ ನಂಬಿಕೆಗಳು ಮತ್ತು ಆಚರಣೆಗಳು ಅಂದಿನ ಸಂಸ್ಕೃತಿಯ ನಂತರವೂ ಉಳಿದುಕೊಂಡು ಬಂದಿರುವ ಸಾಧ್ಯತೆ ಇರುವ ಕಾರಣ ಇವೆಲ್ಲವೂ ಮೌನವಾಗಿ ಪ್ರಾಚೀನ ಸಂಸ್ಕೃತಿಯ ಪ್ರತೀಕಗಳಾಗಿ ಇಂದು ಜೀವಂತವಾಗಿವೆ.

ಹಾಗೆ ನೋಡಿದರೆ ನಾಗರಿಕ ಸಂಸ್ಕೃತಿಗೆ ಮೂಲವಾದ ಬೇಟೆ, ಪಶುಪಾಲನೆ, ಕೃಷಿಯನ್ನೇ ಪ್ರಧಾನವಾಗಿರಿಸಿಕೊಂಡ ಸಮುದಾಯಗಳು ಪ್ರದೇಶದಿಂದ ಪ್ರದೇಶಕ್ಕೆ ಸ್ಥಳಾಂತರಗೊಳ್ಳುತ್ತ ನಾಗರೀಕರಣಕ್ಕೆ ಎಡೆ ಮಾಡಿಕೊಟ್ಟಿವೆ. ಇಂದಿನ ಇತಿಹಾಸ ನಾಗರೀಕರಣದ ನಂತರದ ನಾಗರಿಕ ಸಮುದಾಯದ ಚಿತ್ರಣವಾಗಿರುವಂತೆ ಭಾಸವಾಗುತ್ತದೆ. ಆದರೂ ಬಯಲು ಬಂಡೆಗಳಲ್ಲಿ ಗುಹೆ, ಗುವ್ವರಗಳಲ್ಲಿ ಮೂಡಿಬಂದಿರುವ ರೇಖಾಚಿತ್ರಗಳು, ವರ್ಣಚಿತ್ರಗಳು, ಅಂದಿನ ಬೇಟೆ ಸಂಸ್ಕೃತಿಯನ್ನು ಇಂದಿಗೂ ನೆನಪಿಸುತ್ತವೆ. ಈ ಸಂಸ್ಕೃತಿಯನ್ನು ಇಂದಿಗೂ ಒಂದಲ್ಲಾ ಒಂದು ರೀತಿಯಲ್ಲಿ ಉಳಿಸಿಕೊಂಡುಬಂದಿರುವ ಪಶು-ಕುರಿ ಪಾಲನ ಸಮುದಾಯ ಗಳ ಬೇಟೆಯನ್ನು ಆಶ್ರಯಿಸಿದ ಬೇಡ ಸಮುದಾಯಗಳು ತಮ್ಮ ಕಣ್ಣೆದುರಿಗಿವೆ. ಹೀಗಾಗಿ ಇಂತಹ ಸಮುದಾಯಗಳನ್ನು ಅವರ ಮೌಖಿಕ ಪರಂಪರೆ, ಬಳಕೆಯಲ್ಲಿಲ್ಲದಿದ್ದರೂ ಆಚರಣೆಯ ಭಾಗವಾಗಿ ಪೂಜೆ-ಪ್ರದರ್ಶನಗಳಲ್ಲಿ ಅಥವಾ ಬೇಟೆ, ಯುದ್ಧ, ಕಾವಲು ಇತ್ಯಾದಿ ಸಂದರ್ಭಗಳಲ್ಲಿ ಬಳಸಿರಬಹುದಾದ ಪರಿಕರಗಳು, ಉಡುಗೆ-ತೊಡುಗೆಗಳು, ಊಟ- ಆಚರಣೆ, ನಂಬಿಕೆಗಳ ಮೂಲಕ ಸಮಗ್ರ ಸಂಸ್ಕೃತಿಯನ್ನು ರೂಪಿಸಲು ಸಾಧ್ಯ. ಈ ದಿಸೆಯಲ್ಲಿ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ವಾಲ್ಮೀಕಿ ಸಮುದಾಯವನ್ನು ಪುನರ್‌ರಚಿಸ ಬಹುದಾದ ಸಾಧ್ಯತೆಗಳನ್ನು ಸಂಪಾದಿತ ಕೃತಿಯಲ್ಲಿ ಒದಗಿಸಿದ್ದಾರೆ. ನಾಡಿನ ಪ್ರಮುಖ ಸಮುದಾಯದ ಚಿಂತಕರ ಮೂಲಕ ಕಾಳಜಿಪೂರ್ವಕವಾಗಿ ಮಾಹಿತಿಯನ್ನು ಒದಗಿಸಿದ್ದಾರೆ. ಪ್ರಸ್ತುತ ಕೃತಿಯ ಇಪ್ಪತ್ತೈದು ಲೇಖನಗಳಲ್ಲಿ ಬೇಡ ಬುಡಕಟ್ಟಿನ ಸಾಂಸ್ಕೃತಿಕ ಅಂಶಗಳು ಎಳೆಎಳೆಯಾಗಿ ಬಿಚ್ಚಿಕೊಂಡಿವೆ. ಇದಕ್ಕಾಗಿ ಲೇಖಕರನ್ನು ಹಾಗೂ ಸಂಪಾದಕರನ್ನು ಅಭಿನಂದಿ ಸುತ್ತೇನೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನ ಮೂರ್ತಿ ಅವರಿಗೆ ಅಭಿನಂದನೆಗಳು.

**ಡಾ. ಎ. ಮುರಿಗೆಪ್ಪ**
ಕುಲಪತಿ

# ಲೇಖಕರ ವಿಳಾಸ

೧. **ಡಾ. ವಿರೂಪಾಕ್ಷಿ ಪೂಜಾರಹಳ್ಳಿ**
(ಸಂ.), ಪ್ರವಾಚಕರು,
ಚರಿತ್ರೆ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬.

೨. **ಡಾ. ಹನುಮನಾಯಕ**,
ಪ್ರವಾಚಕರು,
ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ,
ಮಂಗಳಗಂಗೋತ್ರಿ, ಕೋಣಾಜೆ,
ಮಂಗಳೂರು.

೩. **ಡಾ. ಎಂ. ಕೆ. ದುರಗಪ್ಪ**,
ಉಪನ್ಯಾಸಕರು,
ಇತಿಹಾಸ ಸರ್ಕಾರಿ ಜ್ಯುನಿಯರ್ ಕಾಲೇಜು ಕನಕಗಿರಿ,
ಕೊಪ್ಪಳ ಜಿಲ್ಲೆ.

೪. **ಡಾ. ಓ ದೇವರಾಜ**,
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ,
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ ೫೮೩ ೨೭೬.

೫. **ಶ್ರೀ ಡಿ.ಬಿ. ಕರಡೋಣಿ,**
ಅಧ್ಯಾಪಕರು,
ಕನ್ನಡ ವಿಭಾಗ, ಕರ್ನಾಟಕ ಕಾಲೇಜು,
ಧಾರವಾಡ.

೬. **ಶ್ರೀ ಜಗದೀಶ ಕುಮಾರ ಚ. ನಾಯಕ**,
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ ೫೮೩ ೨೭೬.

೭. **ಡಾ. ವೈ.ಎಫ್. ಸೈದಾಪುರ**,
ಪ್ರವಾಚಕರು, ಕನ್ನಡ ವಿಭಾಗ

ಡಾ. ಆರ್.ಸಿ. ಹಿರೇಮಠ ಅಧ್ಯಯನ ಕೇಂದ್ರ ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

೮. **ಡಾ. ಎಸ್.ಎಂ. ಮುತ್ತಯ್ಯ**,
ಅಧ್ಯಾಪಕರು,
ಕನ್ನಡ ವಿಭಾಗ, ಸಹ್ಯಾದ್ರಿ ಕಾಲೇಜು,
ಶಿವಮೊಗ್ಗ.

೯. **ಶ್ರೀ ಹೂಲೆಪ್ಪ ಸಂಡೂರು**,
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ,
ಭಾಷಾಭಿವೃದ್ಧಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ ೫೮೩ ೨೭೬.

೧೦. **ಡಾ. ಟಿ. ಕೊತ್ಲಮ್ಮ**,
ಉಪನ್ಯಾಸಕಿ, ಸಮಾಜಶಾಸ್ತ್ರ ಸರ್ಕಾರಿ ಜ್ಯುನಿಯರ್ ಕಾಲೇಜು
ಕೂಡ್ಲಿಗಿ.

೧೧. **ಶ್ರೀ ರಮೇಶ್ ಕುಮಾರ್ ವಾಲ್ಮೀಕಿ**,
ಅಧ್ಯಾಪಕರು, ಬೆಸ್ಟ್‌ಸ್ಕೂಲರ ಅಲ್ಲೀಪುರ,
ಬಳ್ಳಾರಿ.

೧೨. **ಶ್ರೀ ಪಿ. ಕೊಟ್ರೇಶ್**,
ಅಧ್ಯಾಪಕರು, ಸಮಾಜಶಾಸ್ತ್ರ,
ಕೂಡ್ಲಿಗಿ.

೧೩. **ಶ್ರೀ ಬಿ. ಗೋವಿಂದಪ್ಪ**,
ಉಪನ್ಯಾಸಕರು,
ಕನ್ನಡ ಸರ್ಕಾರಿ ಜ್ಯುನಿಯರ್ ಕಾಲೇಜು,
ಕೂಡ್ಲಿಗಿ.

೧೪. **ಡಾ. ಕರಿಯಪ್ಪ ಜೆ. ಮಾಳಿಗಿ**,
ಹಿರಿಯಶ್ರೇಣಿ ಅಧ್ಯಾಪಕರು,
ಕನ್ನಡ ಸರ್ಕಾರಿ ಪ್ರಥಮ ದರ್ಜೆಕಾಲೇಜು,
ಚಿತ್ರದುರ್ಗ.

೧೫. **ಡಾ. ಜಿ. ಪ್ರಶಾಂತನಾಯಕ,**
ಪ್ರವಾಚಕರು,
ಕನ್ನಡ ವಿಭಾಗ, ಕುವೆಂಪು ವಿಶ್ವ ವಿದ್ಯಾಲಯ,
ಶಂಕರಘಟ್ಟ ೫೭೭ ४೫೧.

೧೬. **ಶ್ರೀ ಡಿ. ಓಬಯ್ಯ ದೇವರಹಟ್ಟಿ,**
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ,
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ ೫೮೩ ೨೭೬.

೧೭. **ಡಾ. ಎಸ್. ಮಾರುತಿ,**
ಉಪನ್ಯಾಸಕರು,
ಕನ್ನಡ ವಿಭಾಗ, ಸಹ್ಯಾದ್ರಿ ಕಾಲೇಜು,
ಶಿವಮೊಗ್ಗ.

೧೮. **ಶ್ರೀ ಆರ್.ಬಿ. ಕಿತ್ತೂರ,**
ನಂ. ೩೫ ಸುಪ್ರಭಾತ,
ನಿವೃತ್ತ ಶಿಕ್ಷಕರು, ರಾಣಿಚನ್ನಮ್ಮ ನಗರ ಸತ್ತಾಪುರ,
ಧಾರವಾಡ.

೧೯. **ಶ್ರೀ ದೇವೇಂದ್ರ ಮಾಧವನವರ,**
ನಿವೃತ್ತ ಅಧ್ಯಾಪಕರು,
ಕನ್ನಡ ಹೊಳೆ ಆಲೂರು,
ರೋಣಾ ತಾಲೂಕು, ಗದಗ ಜಿಲ್ಲೆ.

೨೦. **ಶ್ರೀ ಆಂಜನೇಯ ಉರ್ತಾಳ್,**
ಅಧ್ಯಾಪಕರು,
ಕನ್ನಡ ಕಲ್ಪತರು ಜ್ಯುನಿಯರ್ ಕಾಲೇಜು,
ಕಿಟ್ಟದಾಳ, ಹೊಸದುರ್ಗ ತಾ.

# ಸಂಪಾದಕರ ಮಾತು

ಕನ್ನಡ ವಿಶ್ವವಿದ್ಯಾಲಯವು ೧೯೯೧ರಲ್ಲಿ ಸ್ಥಾಪನೆಯಾಗಿ ಇಂದಿನವರೆಗೆ ಕನ್ನಡ ನಾಡು-ನುಡಿ ಸಂಸ್ಕೃತಿಗೆ ತನ್ನ ಅಭೂತಪೂರ್ವ ಕೊಡುಗೆಯನ್ನು ನೀಡಿದೆ. ಹೀಗೆ ತನ್ನ ಕಬಂಧ ಬಾಹುಗಳನ್ನು ವಿಸ್ತರಿಸಿಕೊಳ್ಳುತ್ತಾ ಬೆಳೆದು ಬರಲು ಅಧ್ಯಯನ ವಿಭಾಗ, ಪೀಠಗಳು ಪ್ರಾರಂಭವಾದವು. ಇಂಥ ಅಧ್ಯಯನ ಪೀಠಗಳಲ್ಲಿ ವಾಲ್ಮೀಕಿ ಅಧ್ಯಯನ ಪೀಠವು ಒಂದು. ಇದು ೨೦೦೩ರಲ್ಲಿ ಸ್ಥಾಪನೆಯಾಯಿತು. ಇದರ ಆಶಯವು ಸ್ಪಷ್ಟವಾಗಿ ವಾಲ್ಮೀಕಿ ಮತ್ತು ರಾಮಾಯಣ ಹಾಗೂ ವಾಲ್ಮೀಕಿ ಸಮುದಾಯವನ್ನು ಕುರಿತು ಅಧ್ಯಯನ, ಸಂಶೋಧನೆ ಮಾಡುವುದರ ಜೊತೆಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದಾಗಿರುತ್ತದೆ. ವಾಲ್ಮೀಕಿ ಒಬ್ಬ ಐತಿಹಾಸಿಕ ವ್ಯಕ್ತಿ. ಮಹರ್ಷಿಯಾಗಿ, ಆದಿಕವಿಯಾಗಿ ಈ ದೇಶದ ನಾಗರಿಕತೆ ಮತ್ತು ಸಂಸ್ಕೃತಿಯ ಸ್ಥಾಪಕ ಹರಿಕಾರರಾಗಿ ಕಂಡುಬರುತ್ತಾರೆ. ವಾಲ್ಮೀಕಿ ಬಿಟ್ಟು ಹೋಗಿರುವ ಆದರ್ಶಗಳು, ಮಾನವೀಯ ಮೌಲ್ಯಗಳು ಇಂದಿಗೂ ಪ್ರಸ್ತುತ. ಈ ಕುರಿತು ದೇಶದಾದ್ಯಂತ ಚಿಂತನೆಗಳು ನಡೆದಿವೆ ಸದಾ ನಡೆಯುತ್ತಲಿವೆ. ಉತ್ತರ ಭಾರತಕ್ಕೆ ಹೋಲಿಸಿಕೊಂಡರೆ, ದಕ್ಷಿಣ ಭಾರತದಲ್ಲಿ ವಾಲ್ಮೀಕಿ ಮತ್ತು ರಾಮಾಯಣದ ಬಗ್ಗೆ ಜನರಲ್ಲಿ ಏಕಾಭಿಪ್ರಾಯವಿಲ್ಲ. ತುಳಸಿ ರಾಮಾಯಣ, ಕಂಬ ರಾಮಾಯಣ, ಕುವೆಂಪು ರಾಮಾಯಣದರ್ಶನಂ, ವೀರಪ್ಪ ಮೊಯಿಲಿ ರಾಮಾಯಣ ಮಹಾನ್ವೇಷಣಂ ಹೀಗೆ ಯಾವ ಕವಿ ಕಾವ್ಯ ಬರೆದನೋ ಆತನ ಹೆಸರಿನಿಂದಲೇ ರಾಮಾಯಣಕ್ಕೆ ಕೀರ್ತಿ ಹೆಚ್ಚಾಯಿತು. ಹಾಗಾಗಿ ಸದಾ ಗೊಂದಲದಲ್ಲಿ ಕಥಾ ಸನ್ನಿವೇಶಗಳನ್ನು ವಿಶ್ಲೇಷಿಸಲಾಗಿದೆ. ವಾಲ್ಮೀಕಿ ರಚಿಸಿದ ಮೂಲರಾಮಾಯಣ ದೊರೆಯದೆ ಇರುವ ಕಾರಣ ಈ ರೀತಿ ಭಿನ್ನ ಕಥೆಗಳು ಹುಟ್ಟಲು ಕಾರಣವಾಗಿರಬೇಕು ಅಥವಾ ಮೇಲ್ವರ್ಗಗಳು ಶೂದ್ರರನ್ನು ಮಟ್ಟಹಾಕಲು ಹುನ್ನಾರದಿಂದ ವಾಲ್ಮೀಕಿ ರಾಮಾಯಣವನ್ನು ತಮ್ಮ ಜಾತಿ, ಧರ್ಮ, ಸಂಸ್ಕೃತಿಗೆ ತಕ್ಕಂತೆ ರೂಪಿಸಿಕೊಂಡಿರಬೇಕು. ಈ ಕಾರಣವಾಗಿ ಜಾತಿ-ಜಾತಿಗಳಲ್ಲಿ, ಧರ್ಮ-ಸಂಸ್ಕೃತಿಗಳಲ್ಲಿ ವೈರುಧ್ಯಗಳು, ಸಂಘರ್ಷಗಳು ಆರಂಭವಾಗಿ ತಾನು ಮೇಲು ತಾನು ಕೀಳು ಎಂಬ ಭಾವನೆ ಇಂದಿಗೂ ನಡೆಯುತ್ತಿದೆ.

ಈ ಎಲ್ಲ ಕಾರಣಗಳಿಂದ ಭಾರತ ಮತ್ತು ನೆರೆಹೊರೆಯ ದೇಶಗಳಲ್ಲಿ ಪ್ರಚಲಿತವಿರುವ ರಾಮಾಯಣ ಮಹಾಕಾವ್ಯದ ಬಗ್ಗೆ ವಿವರಗಳನ್ನು ಸಂಗ್ರಹಿಸುವ ಅಗತ್ಯವಿದೆ. ಸಹಸ್ರಾರು ಕೃತಿಗಳು ಈ ಬಗ್ಗೆ ಬೆಳಕು ಚೆಲ್ಲಿದರೂ ಇನ್ನು ಸಂಶೋಧನೆ-ಅಧ್ಯಯನಗಳು ನಡೆಯುತ್ತಲಿವೆ. ನಾವು ಸಹಾ ವಾಲ್ಮೀಕಿ ಮತ್ತು ರಾಮಾಯಣ ಕುರಿತು ಅನೇಕ ಬಗೆಯಲ್ಲಿ ಚಿಂತಿಸುತ್ತಿದ್ದೇವೆ. ಈ ನಿಟ್ಟಿನಲ್ಲಿ ಬೇಡ (ವಾಲ್ಮೀಕಿ) ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ ಎಂಬ ವಿಚಾರ ಸಂಕಿರಣವನ್ನು ೧೮ ಮತ್ತು ೧೭ ಆಗಸ್ಟ್ ೨೦೦೮ ರಂದು ಕೂಡ್ಲಿಗಿಯಲ್ಲಿ ನಡೆಸಲಾಯಿತು. ಎರಡು ದಿನಗಳ ಕಾಲ ನಡೆದ ಈ ವಿಚಾರ ಸಂಕಿರಣದಲ್ಲಿ ನಾಲ್ಕು ಗೋಷ್ಠಿಗಳು ಒಂದು ಸಂವಾದ ಕಾರ್ಯಕ್ರಮ ಜರುಗಿತು. ಸುಮಾರು ನಲವತ್ತು ಜನಕ್ಕು ಹೆಚ್ಚು ವಿದ್ವಾಂಸರು, ಸಹಸ್ರಾರು ಜನ ಕೇಳುಗರು ಆಗಮಿಸಿದ್ದರು. ಮಹರ್ಷಿ ವಾಲ್ಮೀಕಿ ಬಿಟ್ಟು ಹೋಗಿರುವ ಆದರ್ಶಗಳು, ಮಾನವೀಯ ಮೌಲ್ಯಗಳನ್ನು ಕುರಿತು ಚರ್ಚಿಸಲಾಯಿತು. ಬೇಟೆ, ಪಶು ಪಾಲನೆ, ಸಮುದಾಯಗಳ ಚರಿತ್ರೆ ರಚನೆ ಇಂದು ನಡೆಯಬೇಕಾಗಿದೆ. ಎಷ್ಟೋ ಅಲಕ್ಷಿತ, ಶೋಷಿತ ಸಮುದಾಯಗಳು ಈ ನಾಡು-ನುಡಿಗಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದರೂ ಚರಿತ್ರೆಯಲ್ಲಿ ಅವರು ದಾಖಲಾಗಿಲ್ಲ. ಹೀಗೆ ಬೇಡ, ನಾಯಕ, ವಾಲ್ಮೀಕಿ ಬುಡಕಟ್ಟಿನ ಚರಿತ್ರೆ ಕೂಡ ನಿರ್ಲಕ್ಷ್ಯೆಗೊಳಗಾಗಿದೆ. ಭವ್ಯವಾದ ಚಾರಿತ್ರಿಕ ಪರಂಪರೆ ಪಡೆದ ಈ ಸಮುದಾಯ ವಿವಿಧ ರಾಜ್ಯ-ಸಂಸ್ಥಾನಗಳಲ್ಲಿ ತಳವಾರರಾಗಿ, ಸೈನಿಕರಾಗಿ, ಪಾಳೆಯಗಾರರಾಗಿ ಆಳ್ವಿಕೆ ನಡೆಸಿರುವುದು ಸ್ಮರಣೀಯ. ಮೌರ್ಯ ಸಾಮ್ರಾಜ್ಯ, ವಿಜಯನಗರ ಪೂರ್ವ- ನಂತರ ಹಾಗೂ ಬ್ರಿಟಿಷರ ಕಾಲದವರೆಗಿನ ಇವರ ಚಾರಿತ್ರಿಕ ಸನ್ನಿವೇಶಗಳನ್ನು ಇಲ್ಲಿ ಬೆಳಕಿಗೆ ತರುವ ಪ್ರಯತ್ನವನ್ನು ವಿವಿಧ ಲೇಖಕರು ಮಾಡಿದ್ದಾರೆ. ವಾಸ್ತವಕ್ಕೆ ಹತ್ತಿರವಾದ ಸಂಗತಿಗಳ ಮೂಲಕ ಇಲ್ಲಿನ ವಿಷಯಗಳ ನಿರೂಪಣೆ, ಚರಿತ್ರೆ ಪುನರ್‌ರಚನೆಗೆ ಆಸ್ಪದ ನೀಡಿದಂತಾಗಿದೆ. ಈ ಒಂದು ಕಾರ್ಯವನ್ನು ಮಾಡಲು ಪ್ರೋಹಿಂದಿನ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ, ಶ್ರೀ ಬಿ. ಶ್ರೀರಾಮುಲು, ಮಂತ್ರಿಗಳು, ಶ್ರೀ ತಿಪ್ಪೇಸ್ವಾಮಿ, ಶಾಸಕರು, ಚಳ್ಳಕೆರೆ, ಶ್ರೀ ಎನ್.ಟಿ. ಬೊಮ್ಮಣ್ಣ, ಮಾಜಿಶಾಸಕರು, ಕೂಡ್ಲಿಗಿ, ಶ್ರೀ ಟಿ. ಸೋಮಪ್ಪ, ಮಾಜಿಶಾಸಕರು, ಕೂಡ್ಲಿಗಿ, ಪ್ರೊ. ಸುಕನ್ಯಾ ಮಾರುತಿ, ಧಾರವಾಡ, ಪ್ರೊ. ಆರ್. ರಾಜಣ್ಣ, ಮೈಸೂರು, ಕೂಡ್ಲಿಗಿಯ

ವಾಲ್ಮೀಕಿ ಸಂಘದ ಅಧ್ಯಕ್ಷರಾದ ಕೆ. ಮಲ್ಲಣ್ಣ, ಈ ಕೃತಿಯ ಎಲ್ಲಾ ಲೇಖಕರಿಗೆ ಹಾಗೂ ಈ ವಿಚಾರ ಸಂಕಿರಣಕ್ಕೆ ಆಗಮಿಸಿದ, ಪ್ರೋಎಲ್ಲಾ ಹಿತೈಶಿಗಳಿಗೆ ಕೃತಜ್ಞತೆಗಳು.

ವಿಚಾರ ಸಂಕಿರಣದ ಲೇಖನಗಳನ್ನು ಒಂದೆಡೆ ಸಂಕಲಿಸಿ ಪ್ರಕಟಿಸಿಲು ಪ್ರೋನೆಚ್ಚಿನ ಕುಲಪತಿಗಳಾದ ಪ್ರೊ. ಎ. ಮುರಿಗೆಪ್ಪ ಅವರಿಗೆ, ಕುಲಸಚಿವರಾದ ಡಾ. ಹಿ.ಚಿ. ಬೋರಲಿಂಗಯ್ಯ, ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್, ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ, ಮುಖಪುಟ ವಿನ್ಯಾಸಗಾರರಾದ ಶ್ರೀ ಕೆ.ಕೆ. ಮಕಾಳಿ, ಅಕ್ಷರ ಸಂಯೋಜನೆ ಮಾಡಿದ ವಿದ್ಯಾರಣ್ಯ ಗಣಕ ಕೇಂದ್ರ ಜೆ. ಶಿವಕುಮಾರ, ಮೊದಲಾದ ಅನೇಕ ಮಹನೀಯರಿಗೆ ಮತ್ತೊಮ್ಮೆ ಕೃತಜ್ಞತೆಗಳನ್ನು ಹೇಳಬಯಸುತ್ತೇನೆ.

**ಡಾ. ವಿರೂಪಾಕ್ಷಿ ಪೂಜಾರಹಳ್ಳಿ**

# ನಾಯಕರ ಉದ್ಧಾರ ಅಥವಾ ಪರರ ಪಾದಸೇವೆ

ನಾಯಕ ಸಮುದಾಯದ ಉದ್ಧಾರ ಆಗಬೇಕು. ಆದರೆ ಯಾಕೆ ಆಗಬೇಕು? ಇದೊಳ್ಳೆಯ ಪ್ರಶ್ನೆ ಅನ್ನಬಹುದು, ಅಲ್ಲವೇ? ಉದ್ಧಾರ ಯಾರಿಗೆ ಬೇಡ? ಉದ್ಧಾರದಲ್ಲಿ ಸುಧಾರಣೆ ಇದೆ, ಹೆಚ್ಚಳ(ಅಭಿವೃದ್ಧಿ) ಇದೆ ಸುಖ ಇದೆ, ಸ್ವಾಭಿಮಾನ ಇದೆ, ಸ್ಥಾನಮಾನ ಇದೆ, ಶಾಂತಿಯೂ ಇದೆ, ಆದರೆ ಉದ್ಧಾರವನ್ನು ಬಯಸದವರಿಗೆ ಅದು ಹೇಗೆ ಸಾಧ್ಯ!ಬಯಸಿದರೂ ಕೂಡ ಕೈಗೂಡಲು ಅದೇನು ಹಗಲುಗನಸೆ? ! ಅದರ ಸಾಧನೆಗೆ ಬೇಕು ಜ್ಞಾನ, ದೃಡನಿರ್ಧಾರ, ಸಾಹಸ, ಹೋರಾಟ, ಒಕ್ಕಟ್ಟು ಹಾಗೆ ನೋಡಿದರೆ ಈ ಜಾತಿ ಎಂದೋ ಉದ್ಧಾರ ಆಗಬೇಕಾಗಿತ್ತು. ಯಾಕೆಂದರೆ: ಮೊದಲನೆಯದಾಗಿ ಸ್ಪೂರ್ತಿ ನೀಡಲು ದೊಡ್ಡ ಇತಿಹಾಸದ ಪರಂಪರೆ ಇದೆ. ನಾಡನ್ನು ಕಟ್ಟಿ ಬೆಳೆಸಿದ ವೀರಾಧಿವೀರರ ಸಾಲೇ ಇದೆ. ಅವರ ತ್ಯಾಗ, ಬಲಿದಾನ, ಆದರ್ಶಗಳು ನಮ್ಮ ಮುಂದಿವೆ. ಹಲವಾರು ಕವಿಪುಂಗವರು ಸಾಧು ಸಜ್ಜನರು ಬೆಳಗಿ ಹೋಗಿದ್ದಾರೆ. ಈ ಜನರು ನಾಡಿಗಾಗಿ ದುಡಿದು ಸಣ್ಣಾಗಿದ್ದಾರೆ. ಬಡವರಾಗಿದ್ದಾರೆ. ಇದನ್ನು ತಿಳಿದುಕೊಂಡು ಬೇರೆಯವರು ಇವರನ್ನು ಪ್ರೋಈ ಜನರಾದರೂ ತಮ್ಮ ಪೂರ್ವಜರ ಕ್ರಾಂತಿಯ ಕಿರಣಗಳಿಂದ ತಮ್ಮ ಬುದ್ಧಿಯನ್ನು ಪ್ರಜ್ವಲಗೊಳಿಸಿಕೊಳ್ಳಬೇಕಾಗಿತ್ತು. ಹಾಗೆ ಮಾಡದಿದ್ದುದೇ ಇಂದು ಸಮಾಜ ತೀವ್ರ ಹಿಂದುಳಿಯಲು ಕಾರಣವಾಗಿದೆ. ಇವರು ತ್ಯಾಗ, ಆದರ್ಶಗಳಿಗೆ ಬೆಲೆಕೊಟ್ಟರು. ಆದರೆ ಮುಂಧೋರಣೆ ವ್ಯಾವಹಾರಿಕತೆಗಳನ್ನು ಇಟ್ಟುಕೊಂಡು ಬಾಳ್ವೆಮಾಡಲಿಲ್ಲ. ಈಗಲೂ ಅಷ್ಟೇ. ಇದು ದಡ್ಡತನವಲ್ಲವೆ? ಬೇರೆ ಕೆಲವು ಸಮಾಜಗಳ ಬಾಂಧವರು ಬದುಕುವ ಕಲೆಯನ್ನು ಸಾಧಿಸಿಕೊಂಡು ಈಗ ಸುಖಪಡುತ್ತಿದ್ದಾರೆ, ಮೆರೆಯುತ್ತಿದ್ದಾರೆ. ಎರಡನೆಯದಾಗಿ ಈ ಜನರು ದಡ್ಡರಲ್ಲ. ಸಾಕಷ್ಟು ಬುದ್ದಿವಂತರು. ಆದರೆ ಶಿಕ್ಷಣ, ತರಬೇತಿ, ಮಾರ್ಗದರ್ಶನ ಇಲ್ಲದು ದಕ್ಕೆ ದಡ್ಡರಂತೆ ಕಾಣುತ್ತಾರೆ. ದಡ್ಡರಾಗಿದ್ದಾರೆ. ಮೂರನೆಯದಾಗಿ ಈ ಜನ ಧೈರ್ಯವಂತರು. ಆದರೆ ಆ ಧೈರ್ಯ ಸದ್ವಿನಿಯೋಗವಾಗದ ಹುಂಬತನ, ಒರಟುತನ, ಅವಿವೇಕಗಳಾಗಿ ಮಾರ್ಪಟ್ಟಿದೆ. ಮಾರ್ಗದರ್ಶನವಿಲ್ಲದ್ದಕ್ಕೆ ಅದು ಆಗಾಗ ಅಡ್ಡ ದಾರಿಯನ್ನೂ ಹಿಡಿದಿದೆ. ಈಗಲೂ ಈ ಜನರು ಶೂರತನದ ಲಕ್ಷಣ ಉಳಿಸಿಕೊಂಡಿದ್ದಾರೆ. ನಾಲ್ಕನೆಯದಾಗಿ ಈ ಸಮುದಾಯದ ಜನಸಂಖ್ಯೆಯೂ ಅಪಾರವಾಗಿದೆ. ೬೫ ಲಕ್ಷ ಎಂಬ ಅಂದಾಜು ಇದ್ದು, ಇದು ರಾಜ್ಯದಲ್ಲಿ ನಾಲ್ಕು ಅಥವಾ ಐದನೆಯ ದೊಡ್ಡ ಸಮುದಾಯವಾಗಿದೆ. (ಹಲವಾರು ಕಾಲಕಾಲಕ್ಕೆ ಮತಾಂತರವಾಗಿ ಬೇರೆ ಧರ್ಮ, ಜಾತಿಗಳನ್ನು ಶ್ರೀಮಂತಗೊಳಿಸಿದ್ದಾರೆ) ದಕ್ಷಿಣ ಭಾರತದಲ್ಲೂಈ ದೊಡ್ಡಸ್ಥಾನ ಇದೆ. ಐದನೆಯದಾಗಿ ದೊಡ್ಡ ಆಸ್ತಿವಂತರು, ಶ್ರೀಮಂತರು, ಉದ್ಯಮಪತಿಗಳು ಇಲ್ಲದಿದ್ದರೂ, ಶೇ. ೫೦ರಷ್ಟು ಜನರು ತಕ್ಕಮಟ್ಟಿಗೆ ಹೊಲಮನೆ ಹೊಂದಿದವರಾಗಿದ್ದಾರೆ. ಆದರೆ ದುಶ್ಚಟ, ಬಾಳ್ವೇಗೇಡಿತನ, ದುಂದುಗಾರಿಕೆಗಳಿಂದ ಆಸ್ತಿ ಕಳೆದುಕೊಳ್ಳುತ್ತಲೇ ಬಂದಿದ್ದಾರೆ. ಆರನೇಯದಾಗಿ ಹಲವಾರು ಊರುಗಳಲ್ಲಿ, ಕೆಲವು ಕಡೆ ಜಹಗೀರದಾರರು, ದೊರೆಗಳ ವಂಶಜರು ಜಮೀನುದಾರರೂ ಇದ್ದಾರೆ. ಅಲ್ಲಲ್ಲಿ ರಾಜಕೀಯ ಮುಖಂಡರು ಬೆಳೆದಿದ್ದಾರೆ. ಏಳನೇಯದಾಗಿ ಸಾಮಾಜಿಕ ಜೀವನದಲ್ಲಿ ಎಲ್ಲ ಜಾತಿಯವ ರೊಡನೆ ಬೆರೆತು ಬಾಳಲು ಅವಕಾಶವಿದೆ. ಇತ್ತೀಚೆಗೆ ಧರ್ಮಗುರುಗಳೂ ದೊರೆತಿದ್ದಾರೆ. ಇಷ್ಟೆಲ್ಲ ಇದ್ದರೂ ಅವರ ಉದ್ಧಾರವಾಗಿಲ್ಲ. ಈ ಸಮುದಾಯಕ್ಕಿಂತ ಚಿಕ್ಕಪುಟ್ಟ ಸಮುದಾಯ ಗಳು ತಮ್ಮ ಮುತ್ಸದ್ದಿತನ, ಜಿಗುಟುಗಾರಿಕೆ,

ಒಕ್ಕಟ್ಟುಗಳಿಂದ ಮುಂದುವರಿದಿದ್ದು ರಾಜ್ಯದ ರಾಜಕೀಯ, ಕೈಗಾರಿಕೆ, ವ್ಯಾಪಾರೋದ್ಯಮಗಳಲ್ಲಿ ನಾಯಕ ಸಮುದಾಯದವರಿಗಿಂತ ಮೇಲಿನ ಸ್ಥಾನದಲ್ಲಿದ್ದಾರೆ, ಬಲಿಷ್ಠರಾಗಿದ್ದಾರೆ.

ಈ ಜನ ಬಾಳೆವಂತರಲ್ಲ, ಚೆನ್ನಾಗಿ ದುಡಿದು ಗಳಿಸುವುದಿಲ್ಲ. ಗಳಿಸಿದರೂ ಉಳಿಸುವು ದಿಲ್ಲ. ತಳವಾರನ ತಟ್ಟೆಯಲ್ಲಿ ರೊಟ್ಟಿ ಇರದಿದ್ದರೂ ಹೊಟ್ಟೆಯಲ್ಲಿ ಸಿಟ್ಟು ಬಹಳ. ಹಿಂದುಮುಂದಿನ ವಿಚಾರವಿಲ್ಲ. ಕೊಡಲಿತಾ ಕಡೀತೀನಿ, ಕುಡುಗೋಲುತಾ ಕೊಯ್ಯತೀನಿ ಅಂತಾರೆ. ಇತ್ಯಾದಿ ಮಾತುಗಳು ಈ ಸಮಾಜದ ಬಗ್ಗೆ ಕೇಳಿಬರುತ್ತವೆ. ಇವುಗಳನ್ನು ಆಡುವ ಹಿರಿಯರಲ್ಲಿ ನಾಯಕರೂ ಇದ್ದಾರೆ. ಬೆಳವನಿಗೆ ಬಚ್ಚು ಮಾಡಲು ಬರಲಿಲ್ಲ. ಬೇಡನಿಗೆ ಬಾಳೆ ಮಾಡಲು ಬರಲಿಲ್ಲ ಎಂಬ ಗಾದೆ ಇದೆ. ಬೆಳವ ಪಾರಿವಾಳದಂತಹ ಒಂದು ಮುದ್ದಾದ ಪಕ್ಷಿ ಬಚ್ಚು ಎಂದರೆ ಗೂಡು. ಇತರ ಎಲ್ಲ ಪಕ್ಷಿಗಳೂ ಹೆಚ್ಚು ಕಡ್ಡಿ ಕಸ ತಂದು ಬಚ್ಚನ್ನು ಭದ್ರವಾಗಿ ಕಟ್ಟುತ್ತುವೆ. ಆದರೆ ಬೆಳವ ಬೇಜವಾಬ್ದಾರಿ ಪಕ್ಷಿ, ಗೂಡಿನಲ್ಲಿ ಇಟ್ಟತತ್ತಿಗಳೆಲ್ಲ ಕೆಳಗೆ ಬಿದ್ದು ಹೋಗಿ ಕೇವಲ ೧-೨ ಉಳಿಯುತ್ತವೆ. ಅಷ್ಟೇ ಮರಿ ಆಗುತ್ತವೆ. ತನ್ನ ಸಂತತಿ ರಕ್ಷಣೆಯಂಥ ಮಹತ್ವದ ಕಾರ್ಯದಲ್ಲಿ ಕೂಡ ಬೆಳವ ಹೊಣೆಗೋಡಿ. ಬಾಳ್ವೆಗೇಡಿ, ಬೇಡನು ಸಹ ಇಂಥ ಹೊಣೆಗೇಡಿಯೇ ಎಂದು ಅರ್ಥ. ಇದು ಎಂಥ ಅರ್ಥಪೂರ್ಣ ಅನುಭವಜನ್ಯ ಮಾತಾಗಿದೆಯಲ್ಲವೆ! ರೀತಿನೀತಿಗಳಿಗಿಂತ ಬಿರುಸುತನ, ಒಣಪ್ರತಿಷ್ಠೆ, ಮೂಢನಂಬಿಕೆಗಳೇ ನಾಯಕರಲ್ಲಿ ಜಾಸ್ತಿ, ಸೊಸೆಯನ್ನು ಹೇಗೆ ನಡೆಸಿಕೊಳ್ಳಬೇಕು, ಮಗಳನ್ನು **ಹೇಗೆ ನಡೆಸಬೇಕು ಎಂಬುದೂ ಗೊತ್ತಿಲ್ಲದ ಅನೇಕ ದಾಂಪತ್ಯಗಳನ್ನು** ನರಕದಂಿ ಮಾಡುತ್ತಾರೆ. ಮನೆ ಮುಂದೆ ಶಾಲೆ ಇದ್ದರೂ ಮಕ್ಕಳನ್ನು ಅಲ್ಲಿಗೆ ಕಳಿಸುವುದಿಲ್ಲ, ಪಕ್ಕದಲ್ಲಿ ಹಳ್ಳ ಹರಿದಿದ್ದರೂ ದಿನಾಲು ಸ್ನಾನ ಮಾಡುವುದಿಲ್ಲ (ಕೆಲವು ಸುಧಾರಿಸಿದ ಪ್ರದೇಶಗಳ ನಾಯಕರಿಗೆ ಈ ಮಾತುಗಳು ಅನ್ವಯಿಸಲಿಕ್ಕಿಲ್ಲ. ಸಾರಾಸಗಟವಾಗಿ ಎಲ್ಲರಿಗೂ ಇವು ಅನ್ವಯಿಸುವುದಿಲ್ಲ).

ಉದ್ಧಾರವೇನೋ ಆಗಬೇಕು. ಆದರೆ ಹೇಗೆ ಎಂಬುದೇ ಪ್ರಶ್ನೆ ನಾವು ವಿಫಲರಾದದ್ದು ಇಲ್ಲಿಯೇ. ಎಲ್ಲರೂ ಹಿಂದಿನ ನಮ್ಮ ಹಿರಿಯರ ಪೌರುಷ ಕೊಚ್ಚಿಕೊಳ್ಳುತ್ತ ಕಂಬಳಿ ಹೊದ್ದು ಕೊಂಡು ಮಲಗಿಬಿಡುತ್ತೇವೆ; ಆಲಸ್ಯ ನಮಗೆ ಶಾಪವಾಗಿದೆ. ಉದ್ಧಾರದ ಕನಸನ್ನು ಕಾಣುತ್ತಿ ದ್ದೇವೆ; ಪ್ರಯತ್ನ ಮಾತ್ರ ಬೇಕಾಗಿಲ್ಲ. ಹಣೆಬರಹ, ನಶೀಬ, ದೈವಬಲ, ದೇವರಾಟ ಅನ್ನುತ್ತ ಕುಳಿತರೆ, ಅವೇ ನಮ್ಮ ವೈರಿಗಳಾಗುತ್ತವೆ. ಉಪಾಯ, ಪ್ರಯತ್ನಗಳಿಲ್ಲದೆ ವನರಾಜನೆನೆಸಿ ಕೊಂಡ ಸಿಂಹದ ಬಾಯಿಗೆ ಯಾವ ದುರ್ಬಲ ಮೊಲವೂ ಬಂದು ಬೀಳುವುದಿಲ್ಲ. ಭೂಮಿ ಯಲ್ಲಿ ಧಾನ್ಯ ಬೆಳೆಯಲು ಸಾಕಷ್ಟು ದಿನ ಕಷ್ಟಪಡಬೇಕು. ಧಾನ್ಯಗಳಿಂದ ಅಡಿಗೆ ತಯಾರಿಸಲು ಹಲವಾರು ಕ್ರಮ ಅನುಸರಿಸಬೇಕು. ಆದರೂ ಅಡಿಗೆ ತಾನೇ ಬಾಯಿಗೆ ಬರುವುದಿಲ್ಲ. ತುತ್ತು ತುತ್ತುಗಿ ಬಾಯಿಗಿರಿಸಿಕೊಂಡು ಚೆನ್ನಾಗಿ ನುರಿಸಿ ನುಂಗಬೇಕಾಗುತ್ತದೆ. ಗಡಿಗೆಯೋಳ್ ಮಾಡಿಟ್ಟಡಿಗೆಯು ಗಡಗಡನೆ ಬಂದು ಬೀಳ್ವುದೆ ಬಾಯೋಳ್? ಎಂಬ ಮಾತಿದೆ. ಎಲ್ಲದಕ್ಕೂ ಕ್ರಿಯೆಬೇಕು, ಕ್ರಿಯಾಶೀಲನ ಆರೋಗ್ಯವು ಚನ್ನಾಗಿರುತ್ತದೆ. ಮನಸ್ಸೂ ತೃಪ್ತವಾಗಿರುತ್ತದೆ. ಶ್ರೀಮಂತನಾದರೂ ಕೆಲಸ ಮಾಡದೆ ಉಣ್ಣಲು ಅಧಿಕಾರವಿಲ್ಲ ಎಂಬುದು ಇಂಗ್ಲಿಷ್‌ನಲ್ಲಿಯ ಬುದ್ಧಿ ಮಾತು. ಜ್ಞಾನಪ್ರಾಪ್ತಿಯ ನಂತರವೂ ಅದನ್ನು ಉಳಿಸಿಕೊಳ್ಳಲು ಜ್ಞಾನಿಗಳು ಕರ್ಮ (ಉದ್ಯೋಗ) ಮಾಡುತ್ತಿರಬೇಕು ಎಂದು ಭಗವದ್ಗೀತೆ ಹೇಳುತ್ತದೆ.

ನಮ್ಮ ಅವಗುಣಗಳು ನಮ್ಮನ್ನು ಮುಂದೆ ಹೋಗಲು ಬಿಡುತ್ತಿಲ್ಲ. ಎಲ್ಲೋ ಒಬ್ಬ ಮುಂದೆ ಹೋದರೆ, ಅವನನ್ನು ನಾವು ಸಹಿಸುವುದಿಲ್ಲ. ಹೊಟ್ಟೆ ಕಿಚ್ಚು ಯಾರನ್ನು ಉದ್ಧಾರ ಮಾಡಿತು! ದೇಶಸೇವೆ ಮಾಡಿ ತ್ಯಾಗಿಗಳೆಂದು ಹೆಸರಾದ ಈ ಜನರಲ್ಲಿ ಎಂಥ ಸಂಕುಚಿತ ಮತ್ತು ಅಪಾಯಕಾರಿ ಗುಣ ಹೇಗೆ ಬಂತು? ವಿಶಾಲ ಗುಣ (ಉದಾರತೆ ಮತ್ತು ಇತರರ ಕುಲಬಾಂಧವರ ಏಳಿಗೆ ಕಂಡು ಪ್ರೋ) ಪ್ರಯತ್ನ (ಸಾಹ), ಸಾಮಾನ್ಯ ಶಿಕ್ಷಣ-ತಂತ್ರಜ್ಞಾನಗಳಿಂದ ಮಾತ್ರ ಮುಂದುವರಿಯಲು ಸಾಧ್ಯ. ಈ ಮೂರು ಅಂಶಗಳನ್ನು ಇವರಲ್ಲಿ ಬೆಳೆಸುವುದು ಹೇಗೆ ? ಈ ಕುರಿತೇ ನಾವು ಬಹಳ ತಲೆ ಕೆಡಿಸಿಕೊಳ್ಳಬೇಕು. ವ್ಯಾವಹಾರಿಕವಾಗಿ ಚಿಂತನೆ ಮಾಡಬೇಕು. ಸಭೆಗಳಲ್ಲಿ ಆವೇಶದಿಂದ ಭಾಷಣ ಮಾಡಿ ಚಪ್ಪಾಳೆ ಗಿಟ್ಟಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ಮುಖಂಡರಿಂದ ಅಂಥ ಪ್ರಯೋಜನವಾಗುವುದಿಲ್ಲ. ಪ್ರಸಂಗ ಬಂದಾಗ ಇಂಥವರು ಸಾಮಾನ್ಯರನ್ನು ಶೋಷಿಸಲೂ ಹಿಂಜರಿಯುವುದಿಲ್ಲ. ನಿಜವಾದ ಕಳಕಳಿಯ ಮುಖಂಡರಿಂದ ದೊಡ್ಡ ಕೆಲಸಗಳನ್ನು ಮಾಡಿಸಿಕೊಳ್ಳಬಹುದು.

ಒಟ್ಟಿನಲ್ಲಿ ದೊಡ್ಡ ಮುಖಂಡರಿಂದ ತಳಮಟ್ಟದ ಸುಧಾರಣೆ ಸಾಧ್ಯವಾಗುವುದಿಲ್ಲ. ಹೆಚ್ಚು ಪ್ರಚಾರ ಬಯಸದೆ, ಸ್ವಾರ್ಥಕ್ಕೂ ಬೀಳದೆ ಜನರನ್ನು ಸಮೀಪದಿಂದ ಕಂಡು ಅಲ್ಲಲ್ಲಿ ಚಿಕ್ಕ ಸಭೆ ನಡೆಸಿ ಸಂಘ – ಸಂಸ್ಥೆ ಕಟ್ಟುವ ಮತ್ತು ಜನರಿಗೆ ಮಾರ್ಗದರ್ಶನ ಮಾಡುವ ಸಮಾಜ ಸೇವಕರು ಈಗ ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ಸೇವೆ ಮಾಡಲು ಸಮಾಜ ಬಾಂಧವರು ಸ್ವಯಂ ಪ್ರೇರಣೆಯಿಂದ ಮುಂದೆ ಬರಬೇಕು. ಇಂತವರನ್ನು ಸಮಾಜದ ಸದಸ್ಯರು ಹೆಚ್ಚಾಗಿ ಪ್ರೋಸಬೇಕು, ಸಹಕರಿಸಬೇಕು. ಇವರು ನಾಳೆ ಅಕಸ್ಮತ್ತಾಗಿ ದೊಡ್ಡ ಮುಖಂಡರಾಗಿ ಏನಾದರೂ ಸ್ಥಾನಮಾನ ಪಡೆದರೆ ಒಳ್ಳೆಯದೆ. ಆಗಲೂ ಇವರು ಸ್ವಾರ್ಥಿಗಳೂ, ಶೋಷಕರೂ ಆಗದಿದ್ದರೆ ಸಮಾಜಕ್ಕೆ ಕ್ಷೇಮ. ಇಂಥ ಗುಣ ಇರುವವರನ್ನು ಸಮಾಜ ಸೇವಕರನ್ನು ಹುಡುಕುವುದೂ, ಸೇವಾಕಾರ್ಯದಲ್ಲಿ ತೊಡಗಿಸುವುದೂ ಸಮಾಜದ ಕರ್ತವ್ಯವಾಗಿದೆ. ಈ ಕ್ರಮದಿಂದ ಮಾತ್ರ ಸಂಘಟನೆ ಸಾಧ್ಯ. ಬುದ್ದಿವಂತ ಸ್ವಾರ್ಥಿಗಳಿಗಿಂತ ದಡ್ಡರಾದರೂ ಪ್ರಮಾಣಿಕರಾದ ಸಮಾಜ ಸೇವಕರು ನಮಗಿಂದು ಬೇಕಾಗಿದ್ದಾರೆ. ಪ್ರಮಾಣಿಕತೆ, ಕಳಕಳಿಯೊಡನೆ ಬುದ್ದಿವಂತಿಕೆಯೂ ಇದ್ದರೆ ಬಂಗಾರಕ್ಕೆ ಸುವಾಸನೆ ಸೇರಿದಂತಾಗುತ್ತದೆ. ಇತರ ಸಮುದಾಯಗಳ ಜೀವನ, ಸಂಘಟನೆಯಿಂದಲೂ ಕಲಿತುಕೊಳ್ಳುವುದು ಸಾಕಷ್ಟಿವೆ.

ವ್ಯಕ್ತಿ (ಕುಟುಂಬ) ಮಟ್ಟದ ಸುಧಾರಣೆ ಆತ್ಯಾವಶ್ಯಕವಾಗಿದೆ. ದುಡಿಯದೆ, ಹಣ ಸಂಪಾದಿಸದೆ ಇದ್ದುದನ್ನು ಹಾಳು ಮಾಡುತ್ತ ಮದ್ಯಪಾನ ಇತ್ಯಾದಿಗಳ ದಾಸರಾಗಿ ತಾವೂ ಹಾಳಾಗಿ ಏನೂ ಅರಿಯದೆ ಚಿಕ್ಕ ಮಕ್ಕಳನ್ನೂ ವಿದ್ಯಾವಂತರನ್ನಾಗಿ ಮಾಡುವುದು ಸಮಾಜದ ಅವನತಿಯ ಮೊದಲ ಹಂತವಾಗಿದೆ. ಮತ್ತು ಈ ಮೌನ ಕ್ರಮ ಅಪಾಯಕಾರಿಯಾಗಿದೆ. ನಾಶದ ಮುಂದಿನ ಹಂತಗಳಿಗೆ ತಳಪಾಯವಾಗಿದೆ. ಈ ಮೊದಲ ಹಂತದ ಅವನತಿಯನ್ನು ತಡೆ ಹಿಡಿದು ಸುಧಾರಣೆಗೆ ದಾರಿ ಮಾಡಬೇಕಾದುದು ಅಗತ್ಯ. ಪ್ರಾಥಮಿಕ ಶಿಕ್ಷಣವಾದರೂ ಇಲ್ಲದೆ, ಹೊಟ್ಟೆಗೆ ಹಿಟ್ಟು ತಲೆ ಮೇಲಿನ ಸೂರಿಗಾಗಿ ಪರದಾಡುವವರಿಂದ ಬಲಿಷ್ಠ ಸಮಾಜ (ದೇಶ) ಕಟ್ಟಲು ಹೇಗೆ ಸಾಧ್ಯ? ಎಲ್ಲ ವಿಷಯಗಳಲ್ಲಿ ದಾರಿ ತೋರಿಸಲು ಸಮಾಜದ ಹಿರಿಯರು, ವಿದ್ಯಾವಂತರು, ಹಳ್ಳಿ ಮಟ್ಟದ ಸಂಘಗಳು ಮುಂದಾಗಬೇಕು. ಸಮಾಜದ ಋಣ ತೀರಿಸುವದೆಂದರೆ ಇದೇ ಆಗಿದೆ.

# ಮ್ಯಾಸಬೇಡರ (ಬುಡಕಟ್ಟು) ಭಾಷೆ

ಬುಡಕಟ್ಟು ಸಮುದಾಯಗಳ ಇತಿಹಾಸ, ಸಂಸ್ಕೃತಿ, ಜೀವನಪದ್ಧತಿ, ಬದುಕುವ ಕ್ರಮ, ವೃತ್ತಿ, ಆಚಾರ-ವಿಚಾರ, ಸಂಪ್ರದಾಯ, ದೈವ, ನಂಬಿಕೆ ಮೊದಲಾದ ಸಾಂಸ್ಕೃತಿಕ ಅಂಶಗಳ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ಭಾಷೆಯ ಮುಖೇನ ಬುಡಕಟ್ಟು ಅಧ್ಯಯನಗಳು ನಡೆದಿರುವುದು ಬಹಳ ವಿರಳ. ಈ ದಿಸೆಯಲ್ಲಿ ಬುಡಕಟ್ಟು ಸಮುದಾಯವಾದ ಮ್ಯಾಸಬೇಡರ ಭಾಷೆಯನ್ನು ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ. ಭಾಷೆ ಕೇವಲ ಸಂವಹನ ಮಾಧ್ಯಮವಷ್ಟೆ ಆಗಿರುವುದಿಲ್ಲ. ಭಾಷೆಯಿಂದ ಒಂದು ಸಮುದಾಯ, ಒಬ್ಬ ವ್ಯಕ್ತಿಯ ಇತಿಹಾಸ, ಸಂಸ್ಕೃತಿ, ಬದುಕುವ ಕ್ರಮ, ಜೀವನ ಪದ್ಧತಿ, ಜೀವನ ಮೌಲ್ಯ, ಆಲೋಚನ ವಿಧಾನ ಆಚಾರ-ವಿಚಾರ, ಸಂಪ್ರದಾಯ, ದೈವ, ನಂಬಿಕೆ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಈ ಹಿನ್ನೆಲೆ ಯಲ್ಲಿ ಮ್ಯಾಸಬೇಡರ ಭಾಷೆಯ ಸ್ವರೂಪವನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ. ಒಂದು ಸಮುದಾಯದಲ್ಲಿ ಬಳಕೆಯಾಗುವ ಭಾಷೆ ಹಲವು ರೀತಿಯ ಮಾತಿನ ಶೈಲಿ, ಹಲವು ರೀತಿಯ ಭಾಷಾ ವೈವಿಧ್ಯತೆಯನ್ನು ಹೊಂದಿರುತ್ತದೆ. ಅವುಗಳು ಒಂದೇ ಸಮನಾಗಿರುವುದಿಲ್ಲ.

ಭಾಷೆಯಲ್ಲಿ ಧ್ವನಿ, ಪದ-ವಾಕ್ಯ, ಅರ್ಥ ಮುಂತಾದ ಅಂಶಗಳಿರುವಂತೆ ಸಾಮಾಜಿಕ ರಚನೆಯಲ್ಲಿ ಮನುಷ್ಯನಿಗೆ ಲಿಂಗ, ವರ್ಗ, ಜಾತಿ, ವಯಸ್ಸು, ವೃತ್ತಿ, ಶಿಕ್ಷಣ, ಕುಟುಂಬ ಮುಂತಾದ ಅಂಶಗಳಿರುವುದು ಗೋಚರವಾಗುತ್ತದೆ. ಇವುಗಳಿಂದ ಸಾಮಾಜಿಕ ರಚನೆಯಲ್ಲಿ ಮನುಷ್ಯನಿಗೆ ಇರುವ ಭಾಷಾ ಸಂಬಂಧವನ್ನು ತಿಳಿಯಬಹುದಾಗಿದೆ. ಸಾಮಾಜಿಕ ಭಿನ್ನಾಂಶಗಳು ಸಮಾಜದಲ್ಲಿ ದಿನನಿತ್ಯ ಬಳಕೆಯಾಗುವ ಭಾಷೆಯನ್ನು ನಿಯಂತ್ರಿಸುತ್ತಿರುತ್ತವೆ. ಭಾಷೆ ವರ್ಗದಿಂದ ವರ್ಗಕ್ಕೆ, ಜಾತಿಯಿಂದ ಜಾತಿಗೆ, ಸಮುದಾಯದಿಂದ ಸಮುದಾಯಕ್ಕೂ,

ವೃತ್ತಿಯಿಂದ ವೃತ್ತಿಗೂ, ವಿದ್ಯಾವಂತರಿಂದ ಅವಿದ್ಯಾವಂತರಿಗೂ, ಪುರುಷರಿಂದ ಮಹಿಳೆ ಯರಿಗೂ ಬಳಕೆಯಾಗುವಲ್ಲಿ ವ್ಯತ್ಯಾಸ ಹೊಂದಿರುತ್ತದೆ.

ಸಮಾಜ ಮತ್ತು ಭಾಷೆ ಇವೆರಡರ ಆಂತರಿಕ ಸಂಬಂಧ ವಿಶಿಷ್ಟವಾದುದು. ಭಾಷೆಯಿಂದ ಸಮಾಜದ ರಚನಾ ವ್ಯವಸ್ಥೆಯನ್ನು ಬಹುಸುಲಭವಾಗಿ ಅರಿಯಬಹುದು. ಮನುಷ್ಯ ಸಮಾಜ ದಲ್ಲಿ ಸರ್ವಸ್ವತಂತ್ರನಾಗಿರದೆ ಆಯಾ ಸಮುದಾಯ ಅವಿಚ್ಛಿನ್ನ ಘಟಕವಾಗಿರುವನು. ವ್ಯಕ್ತಿಯನ್ನು ಸಮಾಜದಿಂದ ಬೇರ್ಪಡಿಸಲಾಗದು, ವ್ಯಕ್ತಿಯಿಂದ ಭಾಷೆಯನ್ನು ಬೇರ್ಪಡಿಸ ಲಾಗದು. ಹಾಗಾಗಿ ಭಾಷೆ ಸಮಾಜದ ಎಲ್ಲಾ ಚಟುವಟಿಕೆಗಳ ಬುನಾದಿ. ಸಮಾಜದ ಬೆಳವಣಿಗೆಗೆ ಹಾಗೂ ಬದಲಾವಣೆಗೆ ಭಾಷೆ ಅನಿವಾರ್ಯವೆನಿಸುತ್ತದೆ. ಭಾಷೆಯನ್ನು ಸಮಾಜದ ಹಿನ್ನೆಲೆಯಲ್ಲಿ ಗಮನಿಸದೆ ಅಧ್ಯಯನ ಮಾಡಿದರೆ ಭಾಷೆಯ ಸಂಪೂರ್ಣ ವೈಜ್ಞಾನಿಕ ವಿಶ್ಲೇಷಣೆ ಮಾಡಿದಂತಾಗುವುದಿಲ್ಲ ಎಂದು ಪೀಟರ್ ಟ್ರಡ್ಜಿಲ್ (೧೯೭೮) ಅವರು ಅಭಿಪ್ರಾಯಪಡುತ್ತಾರೆ.

ಸಮುದಾಯಗಳ ಜನರು ಬೇರೆ ಬೇರೆ ಭೂ ಪ್ರದೇಶಗಳಿಗೆ ಹೋಗಿ ನೆಲಸುವುದು ವಲಸೆ ಇತ್ಯಾದಿ ಕಾರಣಗಳಿಂದಾಗಿ ಅಂತಹ ಸಂದರ್ಭದಲ್ಲಿ ಬೇರೆ ಭಾಷಾ ಸಮುದಾಯ ಗಳೊಂದಿಗೆ ಬೆರೆಯುವುದು ಅನಿವಾರ್ಯವುಂಟಾಗುತ್ತದೆ. ಇಂತಹ ಪರಿಸ್ಥಿತಿಗಳು ಬಹುಹಿಂದಿ ನಿಂದಲೂ ಉಂಟಾಗಿರುವುದಕ್ಕೆ ಪುರಾವೆಗಳಿವೆ. ಅದೇನೆ ಇರಲಿ ಒಂದು ಸಮುದಾಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಾಗುವ ಸಂದರ್ಭವಿದ್ದಾಗ ಅದನ್ನೊಂದು ಬಹುಭಾಷಿಕ ಸನ್ನಿವೇಶ ಎನ್ನುತ್ತೇವೆ. ಇಂಥ ಸನ್ನಿವೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಭಾಷೆ ಗಳನ್ನು ಕಲಿತು ಬಳಸಬೇಕಾದ ಅವಕಾಶ ಒತ್ತಡಗಳು ಉಂಟಾಗುತ್ತವೆ. ಜನರು ಹೀಗೆ ಎರಡು ಭಾಷೆಗಳನ್ನು ಕಲಿತು ಬಳಸತೊಡಗಿದಾಗ ಆ ಪರಿಸರದಲ್ಲಿ ದ್ವಿಭಾಷಿಕತೆ ಇದೆ ಎನ್ನುತ್ತೇವೆ. ಉದಾ. ಕರ್ನಾಟಕದ ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಕನ್ನಡ ತೆಲುಗು ಈ ಎರಡೂ ಭಾಷೆಗಳನ್ನು ಕಲಿತು ಬಳಸುವ ಜನಸಮುದಾಯಗಳು ಹಲವಾರು ಚದರ ಕಿ.ಮೀ ಪ್ರದೇಶದಲ್ಲಿ ಹರಡಿಕೊಂಡಿದ್ದಾರೆ. ಹಾಗಾಗಿ ಇದೊಂದು ದ್ವಿಭಾಷಿಕ ಪ್ರದೇಶ. ಅದೇ ರೀತಿಯಾಗಿ ಚಿತ್ರದುರ್ಗ ಪರಿಸರದ ಮೊಳಕಾಲ್ಮೂರು, ಚಳ್ಳಕೆರೆ, ಚಿತ್ರದುರ್ಗ ತಾಲ್ಲೂಕುಗಳಲ್ಲಿ ಕನ್ನಡ ತೆಲುಗು ಎರಡು ಭಾಷೆಗಳನ್ನು ಬಳಸುವ ಜನಸಮುದಾಯಗಳು ಕಾಣಬರುತ್ತವೆ. ಅಂಥ ಸಮುದಾಯಗಳಲ್ಲಿ ಮ್ಯಾಸಬೇಡರ ಸಮುದಾಯವೂ ಒಂದು.

ಕರ್ನಾಟಕದಲ್ಲಿ ಕೆಲವು ಸಮುದಾಯಗಳು ತಮ್ಮ ಮೂಲಭಾಷೆಯನ್ನು ಕಳೆದುಕೊಂಡು ಕನ್ನಡವನ್ನೇ ತಮ್ಮ ಭಾಷೆಯನ್ನಾಗಿ ಸ್ವೀಕರಿಸಿರುವುದು ಸಾಧ್ಯವಾಗಿದೆ. ಆದರೆ ಕೆಲ ಸಮುದಾಯಗಳು ಚಿಕ್ಕ ಚಿಕ್ಕ ದ್ವಿಭಾಷಿಕ ಸಮುದಾಯಗಳಾಗಿ ರೂಪಗೊಂಡಿವೆ. ಉತ್ತರ ಕನ್ನಡ ಜಿಲ್ಲೆಯ ಹಲವಾರು ಬುಡಕಟ್ಟು ಸಮುದಾಯಗಳು ಇದಕ್ಕೆ ನಿದರ್ಶನ. ಮಧ್ಯ ಮತ್ತು ದಕ್ಷಿಣ ಕರ್ನಾಟಕದಲ್ಲಿ ಕಾಣಸಿಗುವ ಹತ್ತಾರು ಅಲೆಮಾರಿ ಸಮುದಾಯಗಳಾದ ಹಕ್ಕಿ ಪಿಕ್ಕಿಗಳು, ಬುಂಡೆ ಬೆಸ್ತರು, ಗೊಂಬೆಯಾಟದವರು, ದೊಂಬರು, ಜೋಗಿಗಳು ತಮ್ಮ ಮಾತೃಭಾಷೆ ಅಂದರೆ ಮನೆಭಾಷೆಯೊಂದಿಗೆ ತಮ್ಮ ಪರಿಸರದ ಇನ್ನೊಂದು ಭಾಷೆಯನ್ನು ಕಲಿಯುವುದರ ಮೂಲಕ ದ್ವಿಭಾಷಿಕ ಸಮುದಾಯಗಳಾಗಿ ಮಾರ್ಪಟ್ಟಿವೆ. ಇದೇ ರೀತಿ ಚಿತ್ರದುರ್ಗ ಪರಿಸರದ ಮ್ಯಾಸಬೇಡರ ಸಮುದಾಯವೂ ಕೂಡ ದ್ವಿಭಾಷಿಕ ಸಮುದಾಯವಾಗಿದ್ದು ಅಧ್ಯಯನ ಯೋಗ್ಯ ಅಂಶಗಳನ್ನು ಒಳಗೊಂಡಿದೆ.

ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಂಸ್ಕೃತಿ, ಜೀವನ ಪದ್ಧತಿ, ಕಸುಬು, ವೃತ್ತಿಗಳನ್ನು ಅಳವಡಿಸಿಕೊಂಡಂತೆ ತಮ್ಮದೇ ಆದ ಭಾಷೆಯನ್ನು ಅಳವಡಿಸಿಕೊಂಡಿರುತ್ತವೆ. ಮ್ಯಾಸಬೇಡರು ತಮ್ಮ ಆಪ್ತವಲಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ತಮ್ಮ ಮಾತೃಭಾಷೆಯಾದ ತೆಲುಗು ಭಾಷೆಯನ್ನು ಬಳಸಿ ವ್ಯವಹಾರಿಕ ವಲಯದಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಬಳಸುವುದು ಕಾಣಬರುತ್ತದೆ. ಈ ಸಮುದಾಯ ಯಾವ ಭಾಷೆಯ ಮುಖೇನ ತನ್ನ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ. ಹಾಗೂ ಆಧುನೀಕರಣದ ಸಂದರ್ಭದಲ್ಲಿ ಯಾವ ಭಾಷೆಯ ಮೂಲಕ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

ಚಿತ್ರದುರ್ಗ ಪರಿಸರದಲ್ಲಿ ಇತರೆ ಸಮುದಾಯಗಳು ತೆಲುಗು ಭಾಷೆಯನ್ನು ಬಳಕೆ ಮಾಡಿದರೂ ಸಹ ಮ್ಯಾಸಬೇಡರು ಮಾತ್ರ ವಿಶಿಷ್ಟವಾದ 'ತೆಲುಗುಗನ್ನಡ' ಅಥವಾ ಭಾಷೆ ಯನ್ನು 'ಕಂದೆಲುಗು' ಬಳಸುವುದು ಕಾಣಬರುತ್ತದೆ. ನಿದರ್ಶನಕ್ಕಾಗಿ ಕೆಲವು ವಿಶಿಷ್ಟ ಪದಗಳೊಂದಿಗೆ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

| **ಶಿಷ್ಟಕನ್ನಡ** | **ಮ್ಯಾಸಬೇಡರ ತೆಲುಗು** | **ಶಿಷ್ಟಕನ್ನಡ ಶಿಷ್ಟ ತೆಲುಗು** | **ಪ್ರಯೋಗಗಳು ಮತ್ತು ವಿವರಣೆ** |
|---|---|---|---|
| ೧. ಕಟ್ಟಿಗೆ | ಪುಡುಕಲು | ಕಟ್ಟಿಗೆ | ಶಿಷ್ಟ ತೆಲುಗಿನ 'ಕಟ್ಟಲು' ಎಂಬ ಪದದ ಬದಲು 'ಪುಡುಕಲು' ಎಂಬ ಪದವನ್ನು ಬಳಸುತ್ತಾರೆ. 'ಪುಡು ಕಲು' ಎಂದರೆ ಇವರ ಭಾಷೆಯಲ್ಲಿ 'ಕಟ್ಟಿಗೆ' ಎಂದರ್ಥ. ಕನ್ನಡದ 'ಕಟ್ಟಿಗೆ ಪುಳ್ಳೆ' ಎಂಬ ಪದದ ಪ್ರಭಾವದಿಂದ ಬಳಕೆಯಾಗುತ್ತಿರಬಹುದೆನಿಸುತ್ತದೆ. ಉದಾ.**ಮ್ಯಾ.ತೆ :** ಉರ್ತಾಳಾನ ಪುಡುಕಲು ಸ್ಯಾನ ನೊರಕುತಾರ. **ಶಿ.ಕ :** ಉರ್ತಾಳನಲ್ಲಿ ಕಟ್ಟಿಗೆ ಬಹಳ ಕಡಿಯುತ್ತಾರೆ. |
| ೨. ಚೀಲ | ತಿತ್ತಿ | ಸಂಚಿ | ಶಿಷ್ಟ ತೆಲುಗಿನ 'ಸಂಚಿ' ಎಂಬ ಪದದ ಬದಲು ಇವರ ತೆಲುಗಿನಲ್ಲಿ 'ತಿತ್ತಿ' ಎಂಬ ಪದವನ್ನು ಬಳಕೆ ಮಾಡುತ್ತಾರೆ. ಈ ಪದಕ್ಕೆ ತೆಲುಗಿನ ಆಡು ನುಡಿಯಲ್ಲಿ ಬಳಕೆಯಾಗುವ 'ತಿತ್ತಿ' ಪದದ ಪ್ರಭಾವ ಬೀರಿರುವುದು ತಿಳಿದು ಬರುತ್ತದೆ. ಉದಾ. **ಮ್ಯಾ.ತೆ :** ಈ ತಡವು ಮಾಮು ನೂರು ತಿತ್ತಿಲು ಜೊಂಡ್ಲು ಬೆಳಸೆಮಿ. **ಶಿ.ಕ. :** ಈ ಸಲ ನಾವು ನೂರು ಚೀಲ ಚೋಳ ಬೆಳೆದಿದ್ದೇವೆ. |
| ೩. ದೊಡ್ಡಪ್ಪ | ಗೊಪ್ಪಯ್ಯ | ಪೆದ್ದನಾಯನ | ಶಿಷ್ಟತೆಲುಗಿನ 'ಪೆದ್ದನಾಯನ' ಎಂಬ ಪದದ ಬದಲಾಗಿ ಇವರ ತೆಲುಗಿನಲ್ಲಿ 'ಗೊಪ್ಪಯ್ಯ' ಎಂಬ ಪದವನ್ನು ಸಂಬಂಧ ಸೂಚಕವಾಗಿ ಬಳಸುತ್ತಾರೆ. ತೆಲುಗಿನಲ್ಲಿ 'ಗೊಪ್ಪ' ಎಂದರೆ ಉತ್ತಮ, ಒಳ್ಳೆಯ ಎಂಬ ಅರ್ಥವಿರುವುದು ತಿಳಿದುಬರುತ್ತದೆ. ಉದಾ. **ಮ್ಯಾ.ತೆ :** ಮಾ ಗೊಪ್ಪಯ್ಯ ನಾಮಿಂದ ಪಂಚಪ್ರಾಣಮು. **ಶಿ.ಕ :** ನಮ್ಮ ದೊಡ್ಡಪ್ಪ ನನ್ನ ಮೇಲೆ ಪಂಚಪ್ರಾಣ. |
| ೪. ಬೆಳಿಗ್ಗೆ | ರೆಕಾಡು | ಪೊದ್ದುನ | ಮ್ಯಾಸಬೇಡರು 'ಬೆಳಿಗ್ಗೆ' ಎನ್ನುವ ಪದಕ್ಕೆ ಇವರ ತೆಲುಗಿನಲ್ಲಿ 'ರೆಕಾಡು' ಎಂಬ ಪದವನ್ನು ಬಳಸುತ್ತಾರೆ. ಶಿಷ್ಟ ತೆಲುಗಿನಲ್ಲಿ 'ಪೊದ್ದನ' ಎಂಬ ಪದ |

| | | | |
|---|---|---|---|
| | | | ಪ್ರಯೋಗದಲ್ಲಿದೆ. ಆದರೆ ಇವರ ತೆಲುಗಿನಲ್ಲಿ ಈ ಪದ ಬಳಕೆಯಾಗುತ್ತಿರುವುದು ವಿಶಿಷ್ಟವೆನಿಸುತ್ತದೆ. ಉದಾ. **ಮ್ಯಾ.ತೆ. :** ನಾನು ರೆಕಾಡು ಲೇಸಿ ದುರ್ಗ ಮುಕಿ ಪೊವ್ವಾಲ. **ಶಿ.ಕ. :** ನಾನು ಬೆಳಿಗ್ಗೆ ಎದ್ದು ದುರ್ಗಕ್ಕೆ ಹೋಗಬೇಕು. |
| ೫. ಮೊಲೆ | ಸೊನ್ನು | ಕೊಮ್ಮು | ಶಿಷ್ಟ ತೆಲುಗಿನ 'ಕೊಮ್ಮು' ಎಂಬ ಪದದ ಬದಲಾಗಿ 'ಸೊನ್ನು' ಎಂಬ ಪದ ಬಳಕೆ ಮಾಡುವುದು ವಿಶೇಷವಾಗಿದೆ. ಕನ್ನಡದಲ್ಲಿ 'ಮೊಲೆ' ಎಂಬ ಪದ ಬಳಕೆಯಲ್ಲಿರುವುದು ಕಾಣಬರುತ್ತದೆ. ಉದಾ. **ಮ್ಯಾ.ತೆ. :** ಮಾ ಅಮ್ಮ ಪಾಪಕಿ ಸೊನ್ನು ಇಚ್ಚಾಕಿ ಪೊಯ್ಯಿದ. **ಶಿ.ಕ:** ನಮ್ಮ ಅಮ್ಮ ತಂಗಿಗೆ ಮೊಲೆ ಕುಡಿಸುವುದಕ್ಕೆ ಹೋಗಿದ್ದಾರೆ. |
| ೬. ಮುಗಳಿ | ಪುಟ್ಟಿ | ಗುದ್ದ | ಶಿಷ್ಟತೆಲುಗಿನ 'ಗುದ್ದ' ಎಂಬ ಪದದ ಬದಲು ಇವರ ತೆಲುಗಿನಲ್ಲಿ 'ಪುಟ್ಟಿ' ಎಂಬ ಪದ ಬಳಕೆಯಾಗುವುದು ವಿಶಿಷ್ಟವೆನಿಸುತ್ತದೆ. ಕನ್ನಡದಲ್ಲಿ 'ಮುಗಳಿ' ಎಂಬ ಪದ ಬಳಕೆಯಲ್ಲಿರುವುದು ಕಾಣಬರುತ್ತದೆ. ಉದಾ. **ಮ್ಯಾ.ತೆ:** ರಾಮನಿಕಿ ಪುಟ್ಟಿ ಮಿದ ಗಾಯಮು ಆಯಿದಾ **ಶಿ.ಕ:** ರಾಮನಿಗೆ ಮುಗಳಿ ಮೇಲೆಗಾಯವಾಗಿದೆ. |
| ೭. ಸಗಣಿ | ತಪ್ಪ | ಪ್ಯಾಡ | ಶಿಷ್ಟ ತೆಲುಗಿನ 'ಪ್ಯಾಡ' ಎನ್ನುವ ಪದದ ಬದಲು ಇವರ ತೆಲುಗಿನಲ್ಲಿ 'ತಪ್ಪ' ಎಂಬ ಪದವನ್ನು ಬಳಸುತ್ತಾರೆ. 'ತಪ್ಪ' ಎಂದರೆ 'ಸಗಣಿ' ಎನ್ನುವ ಅರ್ಥದಲ್ಲಿ ಬಳಸುತ್ತಾರೆ. ಕನ್ನಡದ 'ತೊಪ್ಪ' ಎನ್ನುವ ರೂಪದಿಂದ ಪ್ರಭಾವ ಬೀರಿದೆನಿಸುತ್ತದೆ. ಉದಾ. **ಮ್ಯಾ.ತೆ:** ಪ್ರತಿ ಶನಿವಾರಮು ಇಂಟ ಮುಂದಾ ತಪ್ಪಮು ನೀಡ್ಲು ಏಸ್ತಾರಾ. **ಶಿ.ಕ:** ಪ್ರತಿ ಶನಿವಾರ ಮನೆ ಮುಂದೆ ಸಗಣಿ ನೀರು ಹಾಕುತ್ತಾರೆ. |
| ೮. ಸಾರು | ಅಗಲಿಕಾ/ಹಾಸ | ಸಾರು | 'ಅಗಲಿಕ' ಎನ್ನುವ ಪದವು ಇವರ ತೆಲುಗಿನಲ್ಲಿ 'ಸಾರು' ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತದೆ. ಈ ಪದವು ಎರಡು ಭಾಷೆಗಳಿಗಿಂತ ಭಿನ್ನವಾಗಿ ಬಳಕೆ ಮಾಡುವುದು ವಿಶಿಷ್ಟವೆನಿಸುತ್ತದೆ. ಕೆಲವೊಂದು ಹಳ್ಳಿಗಳಲ್ಲಿ 'ಹಾಸ' ಎಂದು ಸಹ ಬಳಕೆ ಮಾಡುತ್ತಾರೆ. ಉದಾ. **ಮ್ಯಾ.ತೆ :** ಬ್ಯಾಡ್ಲು |

| | | | |
|---|---|---|---|
| | | | ‘ಅಗಲಿಕಾ’ ಬಾಗುವುಂಡೆ. **ಶಿ.ಕ :** ಬೇಳೆ ‘ಸಾರು’ ಚೆನ್ನಾಗಿತ್ತು. |
| ೯. ಹೊಟ್ಟೆ | ವಡ್ಲು | ಕಡಪು | ‘ವಡ್ಲು’ ಎಂಬ ಪದವು ಇವರ ತೆಲುಗಿನಲ್ಲಿ ‘ಹೊಟ್ಟೆ’ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಶಿಷ್ಟ ತೆಲುಗಿನಲ್ಲಿ ‘ಕಡಪು’ ಎಂಬ ಪದ ಪ್ರಯೋಗದಲ್ಲಿದೆ. ಕನ್ನಡದಲ್ಲಿ ‘ಒಡಲು’ ಎಂದರೆ ದೇಹ, ಶರೀರ ಎನ್ನುವ ಅರ್ಥವಿದೆ. ಈ ಪದದ ಪ್ರಭಾವ ಇವರ ತೆಲುಗಿನ ಮೇಲೆ ಬೀರಿರಬಹುದೆನಿಸುತ್ತದೆ.<br>ಉದಾ. **ಮ್ಯಾ.ತೆ :** ರೆಕಾಡು ನುಂಚಿ ಬದ್ಕು ಸೇಸಿ ವಡ್ಲಕ್ಲಾ ಆಯಂದಿ. **ಶಿ.ಕ. :** ಬೆಳಿಗ್ಗೆಯಿಂದ ಕೆಲಸ ಮಾಡಿ ಹೊಟ್ಟೆ ಹಸಿವು ಆಗಿದೆ. |
| ೧೦. ಹೊರಗೆ | ಎಲ್ಲಿಕಾ | ಬಯಟ | ಶಿಷ್ಟ ತೆಲುಗಿನ ‘ಬಯಟ’ ಎಂಬ ಪದದ ಬದಲು ಮ್ಯಾಸಬೇಡರ ತೆಲುಗಿನಲ್ಲಿ ‘ಎಲ್ಲಿಕಾ’ ಎಂಬ ಪದವನ್ನು ಬಳಸುತ್ತಾರೆ. ಕನ್ನಡದಲ್ಲಿ ‘ಹೊರಗೆ’ ಎಂಬ ಪದವನ್ನು ಬಳಕೆ ಮಾಡುವುದು ಕಾಣಬರುತ್ತದೆ.<br>ಉದಾ. **ಮ್ಯಾ.ತೆ. :** ಮಾ ಅನ್ನಾ ಇವುಡು ಎಲ್ಲಿಕಾ ಪೊಯ್ಯಡೆ. **ಶಿ.ಕ.:** ನಮ್ಮ ಅಣ್ಣ ಇವಾಗ ಹೊರಗೆ ಹೋಗಿದ್ದಾನೆ. |

ಮ್ಯಾಸಬೇಡರ ಮಾತೃಭಾಷೆಯಾದ ತೆಲುಗು ಭಾಷೆಯಲ್ಲಿ ಕನ್ನಡ ಮತ್ತು ತೆಲುಗು ಎರಡು ಅಲ್ಲದ ವಿಶಿಷ್ಟ ಪದಗಳು ಬಳಕೆಯಾಗುತ್ತವೆ. ಇವರು ಕನ್ನಡ ಪರಿಸರದಲ್ಲಿ ನೆಲಸಿ ಹಲವು ಶತಮಾನಗಳು ಗತಿಸಿದ್ದರೂ ಸಹ ವಿಶಿಷ್ಟ ಭಾಷಿಕ ಸಂಸ್ಕೃತಿಯನ್ನು ಅಳವಡಿಸಿಕೊಂಡಿ ರುವುದು ಮೇಲಿನ ಮಾಹಿತಿಯಿಂದ ತಿಳಿದುಬರುತ್ತದೆ. ಈ ಪದಗಳ ಮೂಲ, ನಿಷ್ಪತ್ತಿ, ಅರ್ಥ ಮುಂತಾದ ಅಂಶಗಳನ್ನು ಕುರಿತು ಹೆಚ್ಚಿನ ಅಧ್ಯಯನ ನಡೆಸುವುದು ಅವಶ್ಯಕತೆಯಿದೆ. ಇದರಿಂದ ಮ್ಯಾಸಬೇಡರ ಭಾಷಿಕ ಸಂಸ್ಕೃತಿಯನ್ನು ಅರಿತಂತಾಗುತ್ತದೆ.

ಸಮಾಜದ ಎಲ್ಲಾ ದ್ವಿಭಾಷಿಕ ಸಮುದಾಯಗಳ ಕೌಟುಂಬಿಕ ವಲಯದ ಭಾಷೆಯು ವ್ಯವಹಾರಿಕ ವಲಯದ ಭಾಷೆಗಿಂತ ಭಿನ್ನವಾಗಿ ಬಳಕೆಯಾಗುವುದನ್ನು ಸಾಮಾನ್ಯವಾಗಿ ಕಾಣಬಹುದು. ಹಾಗೆಯೇ ಮ್ಯಾಸಬೇಡರು ಕೌಟುಂಬಿಕ ವಲಯದಲ್ಲಿ ಬಳಸುವ ಭಾಷೆ ವ್ಯವಹಾರಿಕ ವಲಯದ ಭಾಷೆಗಿಂತ ಹೇಗೆ ಭಿನ್ನವಾಗಿದೆಂಬುದನ್ನು ಅಪ್ತರು, ರಕ್ತಸಂಬಂಧಿಗಳು, ಬಂಧು ಬಳಗದವರ ಜೊತೆ ಬಳಕೆಯಾಗುವ ಸಂಬಂಧ ವಾಚಕಗಳನ್ನು ಸಾಮಾಜಿಕ ನೆಲೆಯಲ್ಲಿ ಚರ್ಚಿಸಲಾಗಿದೆ.

ಸಂಬಂಧ ವಾಚಕಗಳನ್ನು ಭಾಷಿಕ ರಚನೆಗಳೆಂದು ಪರಿಗಣಿಸಲಾಗುವುದು. ಸಾಮಾಜಿಕ ಭಾಷಾಶಾಸ್ತ್ರಜ್ಞರು ಹೆಸರುಗಳನ್ನು ಸ್ಥಳನಾಮಗಳ ಮತ್ತು ವ್ಯಕ್ತಿನಾಮಗಳೆಂದು ವಿಂಗಡಿಸಿ ದ್ದಾರೆ. ವ್ಯಕ್ತಿನಾಮಗಳ ಕಕ್ಷೆಯಲ್ಲಿ ಬರುವ ಸಂಬಂಧವಾಚಕಗಳ ಸಂಖ್ಯೆ ಸೀಮಿತವಾಗಿದ್ದರೂ ಅವುಗಳ ಸಾಮಾಜಿಕ ಅರ್ಥಛಾಯೆ ವೈವಿಧ್ಯಮಯವಾಗಿದೆ. ಇವುಗಳ ಬಳಕೆಯಲ್ಲಿ ಭಾಷಿಕರ ಬಯಕೆ ಹಾರೈಕೆಗಳು ಹಾಗೂ ಅವರ ಕೌಟುಂಬಿಕ ಪರಂಪರೆ ಅಡಗಿರುತ್ತದೆ. ಹೀಗಾಗಿ ಸಂಬಂಧವಾಚಕಗಳು ಸಂಸ್ಕೃತಿ ಅಧ್ಯಯನಕ್ಕೆ ಮೌಲಿಕ ಆಕರಗಳಾಗಿ ಕಾಣಬರುತ್ತವೆ.

ಹೆತ್ತ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ, ದೊಡ್ಡಪ್ಪ-ದೊಡ್ಡಮ್ಮ, ಚಿಕ್ಕಪ್ಪ-ಚಿಕ್ಕಮ್ಮ, ಅಜ್ಜ-ಅಜ್ಜಿ ಮುಂತಾದವರಿಂದ ಉಂಟಾದ ಸಂಬಂಧವನ್ನು ರಕ್ತಸಂಬಂಧವೆಂತಲೂ ಮತ್ತು ಕಳ್ಳು-ಬಳ್ಳಿ ಸಂಬಂಧವೆಂತಲೂ ಕರೆಯಲಾಗುವುದು. ಇಂತಹ ಸಂಬಂಧದಿಂದ ಉಂಟಾದ ಸಂಬಂಧವಾಚಕಗಳನ್ನು ಮ್ಯಾಸಬೇಡರು ಕೌಟುಂಬಿಕ ವಲಯದಲ್ಲಿ ಮಾತೃಭಾಷೆ ಯಾದ ತೆಲುಗಿನಲ್ಲಿ ಮತ್ತು ವ್ಯವಹಾರಿಕ ವಲಯದ ಕನ್ನಡದಲ್ಲಿ ಬಳಕೆಯಾಗುವುದು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಉದಾ.

| **ಶಿಷ್ಟ ಕನ್ನಡ** | **ಮ್ಯಾಸಬೇಡರ ಕನ್ನಡ** | **ಮ್ಯಾಸಬೇಡರ ತೆಲುಗು** | **ಶಿಷ್ಟ ತೆಲುಗು** |
|---|---|---|---|
| ತಂದೆ | ಅಪ್ಪ/ಯಪ್ಪ | ಅಯ್ಯ/ಯಯ್ಯ | ನಾಯನ |
| ತಾಯಿ | ಅಮ್ಮ/ಯಮ್ಮ | ಅವ್ವ/ಯವ್ವ | ಅಮ್ಮ |
| ಅಜ್ಜ | ತಾತ | ತಾತ | ತಾತ |
| ಅಜ್ಜಿ | ಅವ್ವ/ಯವ್ವ | ಅಬ್ಬ/ಯಬ್ಬ | ಅವ್ವ |
| ಅತ್ತೆ | ಅತ್ತೆ/ಯತ್ತೆ | ಅತ್ತ/ಯತ್ತ | ಅತ್ತ |
| ಮಾವ | ಮಾಮ | ಮಾಮ | ಮಾಮ |
| ದೊಡ್ಡಪ್ಪ | ದೊಡ್ಡಪ್ಪ | ಗೊಪ್ಪಯ್ಯ | ಪೆದ್ದನಾಯನಾ |
| ದೊಡ್ಡಮ್ಮ | ದೊಡ್ಡಮ್ಮ | ಗೊಪ್ಪವ್ವ | ಪೆದ್ದಮ್ಮ |
| ಚಿಕ್ಕಪ್ಪ | ಸಣ್ಣಪ್ಪ | ಸನ್ನಯ್ಯ | ಚಿನ್ನಾಯನ |
| ಚಿಕ್ಕಮ್ಮ | ಸಣ್ಣಮ್ಮ | ಸನ್ನಮ್ಮ | ಪಿನ್ನಮ್ಮ |
| ಮಗ | ಮಗ | ಕೊಡಕು | ಕೊಡಕು |
| ಮಗಳು | ಮಗ್ಳು | ಬಿಡ್ಡ/ಕೂತ್ರು | ಕೂತ್ರ |
| ತಂಗಿ | ತಂಗಿ | ತಂಗಿ | ಚೆಲ್ಲಿ |
| ಮೈದುನ | ಮದಿನ | ಮದಿನ | ಮದಿನ |
| ಹೆಂಡತಿ | ಎಂಡಿ/ಯೆಂಡ್ತಿ | ಆಲು | ಬಾರ್ಯ |

ಮ್ಯಾಸಬೇಡರಲ್ಲಿ ತಂದೆ, ತಾಯಿ, ಅಜ್ಜಿ, ದೊಡ್ಡಪ್ಪ, ದೊಡ್ಡಮ್ಮ, ತಂಗಿ, ಹೆಂಡತಿ, ಚಿಕ್ಕಪ್ಪ, ಚಿಕ್ಕಮ್ಮ, ಮೈದುನ ಮುಂತಾದ ಸಂಬಂಧವಾಚಕಗಳು ಶಿಷ್ಟ ತೆಲುಗುಗಿಂತ ಭಿನ್ನವಾಗಿ ಅಯ್ಯ, ಅವ್ವ, ಅಬ್ಬ, ಗೊಪ್ಪಯ್ಯ, ಗೊಪ್ಪವ್ವ, ತಂಗಿ, ಆಲು, ಸನ್ನಯ್ಯ, ಸನ್ನಮ್ಮ, ಮರ್ದಿ ಮುಂತಾದ ಪದಗಳು ಬಳಕೆಯಾಗುವುದು ವಿಶಿಷ್ಟವೆನಿಸುತ್ತದೆ. ಹಾಗೆಯೇ ಸಂಬಂಧ ವಾಚಕಗಳಲ್ಲಿ ಪದದಾದಿಯ 'ಅ' ಕಾರವು 'ಯ' ಕಾರವಾಗುವುದು ಮತ್ತು ಪದಾದಿಯ 'ಚ' ಕಾರವು 'ಸ' ಕಾರವಾಗುವ ಧ್ವನಿ ನಿಯಮದ ಪ್ರಕ್ರಿಯೆಗಳು ಕಾಣಬರುತ್ತವೆ. ಈ ಮೇಲಿನ ಸಂಬಂಧವಾಚಕಗನ್ನು ಗಮನಿಸಿದಾಗ ಮ್ಯಾಸಬೇಡರು ಇತರೆ ಸಮುದಾಯದವರು ಬಳಸುವ ಸಂಬಂಧವಾಚಕಗಳಗಿಂತ ಭಿನ್ನವಾದ ಸಂಬಂಧವಾಚಕಗಳನ್ನು ಬಳಸುವುದು ವೇದ್ಯವಾಗುತ್ತದೆ.

ಮ್ಯಾಸಬೇಡರ ಭಾಷಿಕ ಸಂಸ್ಕೃತಿಯನ್ನು ತಿಳಿಯಲು ಸಂಬಂಧವಾಚಕಗಳನ್ನಷ್ಟೇ ಅಲ್ಲದೇ ಸಂಬೋಧನಾ ರೂಪಗಳು, ವ್ಯಕ್ತಿನಾಮ, ಸ್ಥಳನಾಮಗಳು ಮತ್ತು ನಿತ್ಯೋಪಯೋಗಿ ಸಂಬಂಧಿಸಿದ ವಸ್ತುಸೂಚಕ ಪದಗಳೊಂದಿಗೆ ಮೊದಲಾದ ಭಾಷಿಕ ಅಂಶಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಇವರು ವಂಶಪರಂಪರೆಯಾಗಿ ದೈವ, ಆಚರಣೆ, ಸಂಪ್ರದಾಯ, ನಂಬಿಕೆ ಬದುಕುವ ಕ್ರಮವನ್ನು ಉಳಸಿಕೊಂಡು

ಬಂದಂತೆ ಭಾಷೆಯನ್ನು ಉಳಿಸಿಕೊಳ್ಳಬೇಕೆಂಬ ಹಂಬಲ ಇವರಲ್ಲಿದೆ. ಆದರೆ ಆಧುನಿಕ ಸಂದರ್ಭದಲ್ಲಿ ಮೂಲಸೌಲಭ್ಯಗಳನ್ನು ಪಡೆಯುವ ಸಲುವಾಗಿ ಹಾಗೂ ಪ್ರಾದೇಶಿಕ, ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮೊದಲಾದ ಕಾರಣಗಳಿಂದ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಕಲಿಯುವ ಅವಶ್ಯಕತೆ ಮತ್ತು ಅನಿವಾರ್ಯತೆಗಳು ಇವರಲ್ಲಿ ದಟ್ಟವಾಗಿ ಕಾಣಬರುತ್ತವೆ.

# ಬೇಡಸಮುದಾಯದ ಮುಂದಿರುವ ಸಮಸ್ಯೆಗಳು, ಸವಾಲುಗಳು

ರಾಜ್ಯದ ಬೇಡಸಮುದಾಯದ ಸಧ್ಯದ ಪರಿಸ್ಥಿತಿಯ ಸ್ಪಷ್ಟವಾದ ಮತ್ತು ವಿವರವಾದ ಚಿತ್ರಣ ಒಂದು ಕಡೆ ದೊರೆಯದಿರುವದೇ ಒಂದು ಸವಾಲು. ಈ ವ್ಯಾಪಕ ಸವಾಲಿನಲ್ಲಿ ಉಳಿದೆಲ್ಲ ಉಪಸವಾಲುಗಳು ಅಡಕವಾಗುತ್ತವೆ. ಈ ಚಿತ್ರಣ ಅಥವಾ ಸ್ವರೂಪವನ್ನು ತಿಳಿದುಕೊಳ್ಳುವುದು ಅವಶ್ಯ. ಆಗ್ರ ಸಮುದಾಯದ ಉತ್ತಮ ಅಂಶಗಳು, ಉಪಯುಕ್ತ ಮತ್ತು ಪ್ರೇರಕ ಅಂಶಗಳೊಂದಿಗೆ ಅದರ ಸಮಸ್ಯೆಗಳು, ಕುಂದುಕೊರತೆಗಳು, ಲೋಪದೋಷಗಳು, ಅನಿಷ್ಟ ಸಂಗತಿಗಳು, ದೌರ್ಬಲ್ಯಗಳು, ಮಾರಕ ವಿಚಾರಧಾರೆ, ಅಲ್ಲದೆ ಸಂಪ್ರದಾಯಗಳು ಗೊತ್ತಾಗುತ್ತವೆ. ವಾಲ್ಮೀಕಿ ಸಮಾಜ ಹಾಳಾಗಿರುವುದೇ ಅಸಂಘಟನೆ, ಅಜ್ಞಾನ, ಅವಿವೇಕಗಳಿಂದ ಮತ್ತು ತಕ್ಕ ಮಟ್ಟಿನ ಸೋಮಾರಿತನದಿಂದ. ಸಮಾಜದ ಸ್ಥಿತಿಗತಿಯ ಅರಿವಾದರೆ, ಅದರ ಉತ್ತಮ ಅಂಶಗಳನ್ನು ಚೆನ್ನಾಗಿ ದುಡಿಸಿಕೊಳ್ಳಬಹುದು, ಲೋಪದೋಷಗಳ ನಿವಾರಣೆಗೆ ಮಾರ್ಗದರ್ಶನ, ತರಬೇತಿ, ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು. ಹೀಗಾದರೆ ಸಮಾಜ ತನ್ನ ಜಡತ್ವವನ್ನು ಹೇಡಿತನವನ್ನು ಕಿತ್ತೊಗೆದು ಈ ಯುಗದ ಆಧುನಿಕತೆಯನ್ನು ಮೈಗೂಡಿಸಿಕೊಂಡು ಕ್ರಿಯಾಶೀಲವಾಗಿ ಸಮೃದ್ಧಿಯನ್ನು ಸಾಧಿಸಬಹುದು, ತೃಪ್ತಿ, ಗೆಲುವು, ಉತ್ಸಾಹಗಳಿಂದ ಮೆರೆಯಬಹುದು, ತನ್ನ ಪೂರ್ವಜರ ಸಾಂಸ್ಕೃತಿಕ ಔನ್ನತ್ಯವನ್ನು ಪುನಃ ಎತ್ತಿಹಿಡಿದು, ರಾಷ್ಟ್ರಕ್ಕೆ ತನ್ನದೇ ಆದ ಕಾಣಿಕೆ ನೀಡಬಹುದು. ಜವಾಹರಲಾಲ ನೆಹರೂ ಹೀಗೆ ಹೇಳುತ್ತಾರೆ: “Success comes to those who dare and act, it seldom goes to the timid,” ಈ ಸಮಾಜದ ಸಮೃದ್ಧಿಗಾಗಿ ಆಗತಕ್ಕ ಕಾರ್ಯಗಳು ಆಗದೇ ಇರುವದೇ ಸವಾಲು. ಈ ಆಗತಕ್ಕ ಕಾರ್ಯಗಳ ಪರಿಚಯ ಹಾಗೂ ಪರಿಹಾರಗಳನ್ನು ಇಲ್ಲಿ ಗಮನಿಸೋಣ. ಪೂರ್ವಜರ ಕಾರ್ಯದ ಪೌರುಷ ಮತ್ತು ನಮ್ಮ ಆವೇಶಗಳನ್ನು ಸಧ್ಯ ಬದಿಗಿಟ್ಟು ಹಿಂದೆ ಬಿದ್ದ ಈ ಸಮುದಾಯದ ಸುಧಾರಣೆಗಾಗಿ ವ್ಯಾವಹಾರಿಕವಾಗಿ ವಿವೇಚಿಸಬೇಕಾಗಿದೆ.

**ಜನಸಂಖ್ಯೆ**

ನಾಯಕ ಸಮುದಾಯದ ನಿರ್ದಿಷ್ಟ ಜನಸಂಖ್ಯೆ ತಿಳಿಯದಿರುವುದು ಸ್ವಲ್ಪ ತೊಡಕಿನ ವಿಷಯ. ಇದು ಎಲ್ಲ ಜಾತಿಗಳ ಸಮಸ್ಯೆಯೂ ಹೌದು. ರಾಜ್ಯದಲ್ಲಿ ನಾಯಕರ ಸಂಖ್ಯೆ ೬೦ ಲಕ್ಷ, ೬೫ ಲಕ್ಷ-ಹೀಗೆ ಬೇರೆ ಬೇರೆಯಾಗಿ ಹೇಳಲಾಗುತ್ತದೆ. ಸಮಾಜದ ಒಕ್ಕಟ್ಟು ಮತ್ತು ಪ್ರಗತಿಗೆ ಜನಸಂಖ್ಯೆಯ ಸ್ಪಷ್ಟ ಚಿತ್ರಣ ಅವಶ್ಯ. ಸರಕಾರಕ್ಕೆ ಬೇಡಿಕೆ ಸಲ್ಲಿಸಲು, ಚುನಾವಣೆಯಲ್ಲಿ ಸ್ಪರ್ಧಿಸಲು ಹಾಗೂ ಇತರ ಕಾರಣಗಳಿಗಾಗಿ ಜನಸಂಖ್ಯೆಯ ಮಾಹಿತಿ ಬೇಕು. ಸರ್ ಎಂ. ವಿಶ್ವೇಶ್ವರಯ್ಯನವರು ಎಲ್ಲ ಇಲಾಖೆಗಳಿಂದ, ಪ್ರತಿಯೊಂದು ವಿಷಯ ದಲ್ಲಿ ಅಂಕಿಅಂಶ ಸಂಗ್ರಹಿಸಿ ತಿಳಿಸಲು ಒತ್ತಾಯಿಸುತ್ತಿದ್ದರು, ಯೋಜನೆಗಳಿಗೆ ಅಂಕಿ-ಅಂಶಗಳ ಅಗತ್ಯವಿದೆ. ೧೯೪೦ರ ವರೆಗೆ ಜಾತಿವಾರು ಜನಗಣತಿ ನಡೆಯುತ್ತಿತ್ತು. ಆಗಿನ ಬೇರೆ ಬೇರೆ ರಾಜ್ಯಗಳಲ್ಲಿ ಸೇರಿದ ಕನ್ನಡ ಪ್ರದೇಶಗಳ ನಾಯಕರ ಜನಸಂಖ್ಯೆ ಆಧರಿಸಿ ಈಗಿನ ಸಂಖ್ಯೆ ಹೆಚ್ಚಾದ ಜನಸಂಖ್ಯಾ ಪ್ರಮಾಣ ಅರ್ಥಶಾಸ್ತ್ರದ ಪುಸ್ತಕಗಳಲ್ಲಿ ದೊರೆಯುತ್ತದೆ. ಸರಕಾರವೇ ಇತ್ತೀಚೆಗೆ ಪ.ಜಾ. ಪ.ಪಂ. ಮತ್ತು ಹಿಂದುಳಿದವರ ಜಾತಿವಾರು ಜನಗಣತಿ ಮಾಡಲು ನಿರ್ಧರಿಸಿದ್ದು ಸ್ವಾಗತಾರ್ಹ. ೨೦೦೧ರ ಜನಗಣತಿಯಲ್ಲಿ ಕರ್ನಾಟಕದ ಪರಿಶಿಷ್ಟ ಪಂಗಡಗಳ ಜನಸಂಖ್ಯೆ ೩೪ ಲಕ್ಷ ಎಂದು ದಾಖಲಾಗಿರುವುದು ವಾಸ್ತವಿಕವಲ್ಲ. ಪ. ಪಂಗಡದಲ್ಲಿಯ ೫೦ ಜಾತಿ ಸೇರಿ ಈ ಜನಸಂಖ್ಯೆ ರೂಪಿತವಾಗಿದೆ. ಇದೇ ಆಧಾರದಿಂದ ಯೋಜನೆಯಲ್ಲಿ ಹಣಕಾಸಿನ ಮಂಜೂರಿಯಾಗುವುದರಿಂದ ಪ.ಪಂ. ಗಳಿಗೆ ಬಹಳ ಅನ್ಯಾಯವಾಗುತ್ತದೆ. ನಾಯಕರಲ್ಲೇ

ಕೆಲವು ಪರ್ಯಾಯ ಜಾತಿವಾಚಕಗಳು ಇನ್ನೂ ಪರಿಶಿಷ್ಟ ಪಂಗಡಕ್ಕೆ ಸೇರಿಲ್ಲ. ಕೇಂದ್ರ ಸರಕಾರದಲ್ಲಿ ಮತ್ತು ಬೇರೆ ಕೆಲವು ರಾಜ್ಯಗಳಲ್ಲಿ ಪ.ಪಂ. ಕ್ಕೆ ಮೀಸಲಾತಿ ೭.೫ ಇದ್ದುದನ್ನು ಆಧರಿಸಿ ಮಾಡಬೇಕಾದ ಹೋರಾಟ ತೀವ್ರವಾಗಿ ಮತ್ತು ಕಳಕಳಿಯಿಂದ ನಡೆದೇ ಇಲ್ಲ. ಸಧ್ಯದ ಶೇ. ೩ ಯಾತಕ್ಕೂ ಸಾಲದು. ಇದು ಪರಮ ಅನ್ಯಾಯ, ಇತ್ತೀಚೆಗೆ ಇತರ ಗುಂಪು(ಕೆಟೆಗೆರಿ)ಗಳಿಂದ ಕೆಲವು ಜಾತಿಗಳನ್ನು ಪ.ಪಂಗಡಕ್ಕೆ ಸೇರಿಸಿದ್ದರೂ (ನಾಯಕರದೂ ಸಹ) ಅಲ್ಲಿ ಅವರ ಪ್ರಮಾಣದ ಮೀಸಲಾತಿ ಕಡಿಮೆಗೊಳಿಸಿ ಪ.ಪಂಗಡಕ್ಕೆ ಸೇರಿಸಿಲ್ಲ. ಕರ್ನಾಟಕದಲ್ಲಿ ಪ.ಪಂಗಡಗಳ ಜನಸಂಖ್ಯೆಯ ಸಮಗ್ರ ಮಾಹಿತಿ ಆಧರಿಸುವುದಾದರೆ, ಶೇ.೧೦ರ ಮೀಸಲಾತಿ ಯೋಗ್ಯವಾದುದಾಗಿದೆ.

**ಆರ್ಥಿಕ ಪರಿಸ್ಥಿತಿ**

ವಾಲ್ಮೀಕಿ ಸಮುದಾಯದ ಶೇ.೭೦ ಜನರಿಗೆ ಎಷ್ಟಾದರೂ ಆಸ್ತಿ, ಜಮೀನು ಇರುತ್ತದೆ. ಆದರೆ ಕುಟುಂಬ ನಿರ್ವಹಣೆಗೆ, ಹೆಚ್ಚಿನ ಅಭಿವೃದ್ಧಿಗೆ ಸಾಕಾಗುವಷ್ಟು ಆಸ್ತಿ ಇದ್ದವರು ಬಹಳ ಕಡಿಮೆ. ಬಯಲು ಸೀಮೆಯಲ್ಲಿ ಭೂಮಿಯ ಉತ್ಪನ್ನ ನೆಚ್ಚುವಂತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೆಲವರು ನೌಕರಿ ಸೇರಿ ಸುಧಾರಿಸುತ್ತಿದ್ದಾರೆ. ಮಿಕ್ಕವರೆಲ್ಲ ಕೂಲಿ, ಕೆಳದರ್ಜೆ ಸೇವೆ ಮಾಡುತ್ತಾರೆ. ಮುಸಲ್ಮಾನರಂತೆ ಕೈಗಾರಿಕೆ, ವ್ಯಾಪಾರ, ತಾಂತ್ರಿಕ ಕೆಲಸಗಳಿಂದ ವಾಲ್ಮೀಕಿಗಳು ಸ್ವಾವಲಂಬಿಗಳಾಗುವದನ್ನು ಕಲಿಸಬೇಕಾಗಿದೆ. ಆಲಸ್ಯೆ, ದುಂದುವೆಚ್ಚ, ದುಶ್ಚಟಗಳಿಂದಲೂ ಇವರ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಇವರಲ್ಲಿ ಉಳಿತಾಯ, ಪ್ರವೃತ್ತಿಯೂ ಬಹಳ ಕಡಿಮೆ. ಸರಕಾರದಿಂದ ದೊರೆಯುವ ಆರ್ಥಿಕ ಸವಲತ್ತು, ತರಬೇತಿಗಳ ಮಾಹಿತಿ ಇಲ್ಲದಷ್ಟು ಇವರು ಅಜ್ಞಾನಿಗಳಾಗಿದ್ದಾರೆ. ಇವರಿಗೆ ಕಳೆದ ೧೦೦ ವರ್ಷಗಳಿಂದ ಆನುವಂಶಿಕ ಉದ್ಯೋಗವೆಂಬುದಿಲ್ಲ. ಇದಕ್ಕೆ ಐತಿಹಾಸಿಕ ಕಾರಣವಿದೆ. ಆರ್ಥಿಕ ಜಡತ್ವವನ್ನು ಕಿತ್ತುಹಾಕು ವುದೇ ಒಂದು ದೊಡ್ಡ ಸವಾಲು.

**ಸಾಮಾಜಿಕ ಸ್ಥಿತಿ**

ಬಡತನ ನಿರಕ್ಷರತೆಯಿಂದಾಗಿ ಬಹುಪಾಲು ಜನರನ್ನು ಕೀಳರಿಮೆ ಕಾಡುತ್ತಿದೆ. ಮೂಢ ನಂಬಿಕೆಗಳೂ ಸಾಕಷ್ಟಿವೆ. ವೈಚಾರಿಕ ಜಾಗೃತಿ ಇಲ್ಲ. ಹುಂಬತನ, ತಿಳಿಗೇಡಿತನಗಳಿಂದ ಇವರು ಒರಟರೆನಿಸಿಕೊಂಡಿದ್ದಾರೆ. ಆದ್ದರಿಂದ ಅಜ್ಞಾನ ಹೋಗಲಾಡಿಸಿ ಪೂರ್ವಜರ ಸಾಧನೆಗಳ ಪರಿಚಯ ಮಾಡಿಕೊಟ್ಟರೆ, ಶಿಕ್ಷಣ ನೀಡಿದರೆ ಬಾಳೆವಂತರಾಗಿ ಸಮಾಜದಲ್ಲಿ ಗೌರವಯುತ ವಾಗಿ ಬಾಳಬಲ್ಲರು. ಇವರಲ್ಲಿ ಒಕ್ಕಟ್ಟು ಇಲ್ಲದಿರುವದೂ ಒಂದು ಕೊರತೆ United we stand, Divided we fall ಎಂಬುದರ ಮನವರಿಕೆ ಆಗಬೇಕು. ಈ ಮಾತಿಗೆ ಹಲವಾರು ಉದಾಹರಣೆ ಕೊಡಬಹುದು. ಈ ಸಮಾಜದಲ್ಲಿ ಸ್ವಚ್ಛತಾ ಪ್ರಜ್ಞೆಕಡಿಮೆ. ವೈಯಕ್ತಿಕ ಹಾಗೂ ಕೌಟುಂಬಿಕ ಮಟ್ಟದಲ್ಲಿ ಮತ್ತು ತಮ್ಮ ಓಣಿಕಟ್ಟುಗಳಲ್ಲಿ ಸ್ವಚ್ಛತೆಗೆ ಪ್ರಾಧಾನ್ಯ ನೀಡಿದರೆ, ಸಾಮಾಜಿಕ ಸ್ಥಾನಮಾನವೂ ಹೆಚ್ಚುತ್ತದೆ. ಸ್ವಚ್ಛತೆ ಇಲ್ಲದವರನ್ನು ಸಾಮಾನ್ಯವಾಗಿ ಕೀಳಾಗಿ ಕಾಣಲಾಗುವುದು. ಬಡಲಿಂಗಾಯತರು, ಬ್ರಾಹ್ಮಣರು ಕೂಡ ಬೆಳಿಗ್ಗೆ ಸ್ನಾನ ಮಾಡಿ, ನಾಮ ವಿಭೂತಿ ಧರಿಸಿ, ಮಡಿ ಬಟ್ಟೆ ಧರಿಸಿ ಹೊರಹೋಗುವ ಪರಂಪರೆ ಹೊಂದಿದ್ದಾರೆ. Cleanliness is next to the godliness ಎನ್ನುವ ಮಾತು ಅರ್ಥಗರ್ಭಿತವಾಗಿದೆ.

**ಧಾರ್ಮಿಕ ಸ್ಥಿತಿ**

ಇತರ ಹಿಂದುಳಿದ ವರ್ಗದವರಲ್ಲಿಯಂತೆ ನಾಯಕರಲ್ಲೂ ಧರ್ಮ, ದೇವರ ಹೆಸರಿನಲ್ಲಿ ಹಲವಾರು ಅರ್ಥಹೀನ ಆಚರಣೆ, ನಂಬಿಕೆಗಳು ಬೆಳೆದಿವೆ. ಕೆಲವು ಸಲ ಹುಚ್ಚಾಟಗಳೇ ಮೆರೆಯುತ್ತವೆ. ಇದಕ್ಕಾಗಿ ಸಮಯ, ಹಣ ಶ್ರಮ ಪೋಲಾಗುತ್ತವೆ. ಆದರೆ ಪ್ರಗತಿ ಸರಳ ಪೂಜಾ ವಿಧಾನ ರೂಢಿಸುವದು ಅವಶ್ಯ. ಸದ್ಭಾವನೆ, ಸೌಹಾರ್ದತೆ, ತಾಳ್ಮೆ, ಪ್ರೀತಿಗಳನ್ನು ಬೆಳೆಸುವ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪರೋಪಕಾರ, ಮಾನವ ಸೇವೆ ನಿಜವಾದ ಪೂಜ ಎಂಬ ಪರಿಕಲ್ಪನೆ ಬೆಳೆಸಬೇಕಾಗುತ್ತದೆ. god helps those who help them selves ಎಂಬುದು ಇಂಗ್ಲಿಷಿನಲ್ಲಿಯ ಮಾತು. ಬುದ್ಧ, ಬಸವಣ್ಣನವರ ತತ್ತ್ವಗಳ ಆಚರಣೆಗೆ ಒತ್ತುಕೊಡಲು ಕಲಿಸಬೇಕು. ಈ ಸಮಾಜಕ್ಕೆ ಮೊದಲು ಪಾರಂಪರಿಕ ಮಠಾಧೀಶರಿರಲಿಲ್ಲ. ಇತ್ತೀಚೆಗೆ ವಾಲ್ಮೀಕಿ ಗುರುಪೀಠ ಸ್ಥಾಪಿತವಾಗಿದ್ದು ಅದನ್ನು ಬೆಳೆಸಬೇಕಾಗಿದೆ.

ಶಿವ-ವಿಷ್ಣು ಬೇಧವಿಲ್ಲದೆ ಇರುವುದು, ಮದುವೆ ಮತ್ತು ಅಂತ್ಯ ಸಂಸ್ಕಾರಗಳಲ್ಲಿ ಪುರೋಹಿತ, ಜಂಗಮರನ್ನು ಅವಲಂಬಿಸಿದೆ ಅಂಥಕಾರ್ಯಗಳಿಗೆ ಸಮಾಜದ ವ್ಯಕ್ತಿಗಳನ್ನು ತಯಾರಿಸುವ ಸಂಪ್ರದಾಯ ಬೆಳೆಯಬೇಕಾಗಿದೆ. ಅರ್ಹರಾದ ಪುರೋಹೀತ, ಜಂಗಮರೂ ಇತ್ತೀಚೆ ಅಲಭ್ಯರಾಗುತ್ತಿದ್ದಾರೆ.

**ಶೈಕ್ಷಣಿಕ ಸಮಸ್ಯೆ**

ಈ ಕಾಲದಲ್ಲಿ ಎಸ್.ಎಸ್.ಎಲ್.ಸಿ ವರೆಗಾದರೂ ಎಲ್ಲ ಮಕ್ಕಳಿಗೆ ಸಾಮಾನ್ಯ ಶಿಕ್ಷಣ ಬೇಕು. ಆದರೆ ನೌಕರಿ ನಿರೀಕ್ಷಿಸದೆ ಸ್ವಂತ ಉದ್ಯೋಗದ ಗುರಿ ಇರಬೇಕು. ಚಿಕ್ಕ ಚಿಕ್ಕ ಸಮಾಜಗಳು ಸಹ ತಮ್ಮ ದೊಡ್ಡ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮವರಿಗೆ ಹೆಚ್ಚು ಅವಕಾಶ ಕೊಡುತ್ತಾರೆ. ಈ ವಿಷಯದಲ್ಲಿ ವಾಲ್ಮೀಕಿ ಸಮಾಜ ಬಹಳ ಹಿಂದಿದೆ. ವೈಜ್ಞಾನಿಕ, ತಾಂತ್ರಿಕ ಶಿಕ್ಷಣ, ವೃತ್ತಿ ಶಿಕ್ಷಣಗಳಿಗೆ ಹೆಚ್ಚು ಗಮನಕೊಡಬೇಕಾಗಿದೆ. ಇದು ಸ್ಪರ್ಧಾಯುಗ. ಕೇವಲ ವಿಜಾಪುರ, ಗುಲಬರ್ಗಾ ಜಿಲ್ಲೆಗಳಲ್ಲೇ ಬಂಜಾರ ಸಮಾಜ ನಡೆಸುವ ೬೦ ಶಾಲೆಗಳಿವೆ.

**ರಾಜಕೀಯ ಸ್ಥಿತಿ**

ಅಪಾರ ಜನಸಂಖ್ಯೆ ಇದ್ದರೂ ರಾಜಕೀಯ ಸ್ಥಾನಮಾನ ಕಮ್ಮಿ. ರಾಜಕೀಯ ಅಧಿಕಾರ ವಿಲ್ಲದೆ ಪ್ರಗತಿ ಸಾಧ್ಯವಿಲ್ಲವೆಂದು ಹೇಳಲಾಗುತ್ತದೆ. ಪಕ್ಷ ಯಾವುದೇ ಇರಲಿ ಎಲ್ಲ ಹಂತ ಗಳಲ್ಲೂ ರಾಜಕೀಯ ಪ್ರವೇಶ ಮಾಡಬೇಕು. ಜನಹಿತಕ್ಕಾಗಿ ಹೋರಾಟ ಗುರಿಯಾಗಿರಬೇಕು. ರಾಜಕಾರಣ ಸಮಾಜ ಸೇವೆಯ ಒಂದು ಪ್ರಮುಖ ಅಂಗ. ಚುನಾವಣಾ ಆಯೋಗ ಪರಿಶಿಷ್ಟ ಪಂಗಡದವರಿಗೆ ಇತ್ತೀಚೆಗೆ ೧೫ ವಿಧಾನ ಸಭಾ ೨ ಲೋಕಸಭಾ ಕ್ಷೇತ್ರಗಳನ್ನು ಮೀಸಲಿರಿಸಲು ಉದ್ದೇಶಿಸಿರುವುದು ಸ್ವಲ್ಪ ಸಮಾಧಾನದ ಸಂಗತಿ.

**ಐತಿಹಾಸಿಕ ಸ್ಥಿತಿ**

ನಾಯಕರ ಐತಿಹಾಸಿಕ ಪರಂಪರೆ ಅದ್ಭುತವಾದುದು. ಅವರು ಕೋಟೆಕೊತ್ತಲ, ಕೆರೆಕಾಲುವೆ ಕಟ್ಟಿಸಿ ಸ್ವದೇಶ, ಸ್ವಧರ್ಮ ರಕ್ಷಣೆಗಾಗಿ ಹೋರಾಡಿ ರಾಜ್ಯ, ಸಾಮ್ರಾಜ್ಯ ಸ್ಥಾಪಿಸಿ ನಾಡಸೇವೆಗೈದವರು, ಬಲಿದಾನ ಮಾಡಿದವರು. ಸೋತು ಸುಣ್ಣವಾದವರು, ಈ ಪ್ರಜ್ಞೆ ನಾಯಕರಿಗೆ ಇದ್ದರೆ ತಮ್ಮ ಏಳಿಗೆಗೆ ಪಣತೊಡುತ್ತಾರೆ. ನಾಯಕರ ಇಂದಿನ ಹೀನ ಸ್ಥಿತಿಗೆ ಈ ಐತಿಹಾಸಿಕ ಕಾರಣವೂ ಒಂದೆಂದು ಬಗೆದು ಮುಂದುವರಿದ ಸಮಾಜಗಳೂ ನಾಯಕರ ಹಿತವರ್ಧನೆಗೆ ಕೈಗೂಡಿಸಬೇಕಾಗಿದೆ. ತಮ್ಮ ಇತಿಹಾಸವನ್ನು ಅರಿಯದವರು ಭವಿಷ್ಯವನ್ನು ರೂಪಿಸಲಾರರು ಎಂದು ಡಾ. ಅಂಬೇಡ್ಕರ್ ಹೇಳಿದ್ದಾರೆ. ಆದರೆ ಇತ್ತೀಚೆ ನಾಯಕರ ಚರಿತ್ರೆ ಯನ್ನು ಇತರ ಸ್ವಾರ್ಥಿಗಳು ಕಸಿದುಕೊಳ್ಳುತ್ತಿದ್ದಾರೆ. ಉದಾ: ಹಕ್ಕಬುಕ್ಕ, ಕನಕದಾಸ. ಈಗ ಇತಿಹಾಸ ನಿರ್ಮಿಸಲಾರದ ನಾವು ನಮ್ಮ ಪೂರ್ವಜರ ಇತಿಹಾಸವನ್ನಾದರೂ ಉಳಿಸಿಕೊಳ್ಳ ಬೇಕಲ್ಲ! ಈ ಸಾವಾಲನ್ನು ಧೀರ ನಾಯಕರು ಸ್ವೀಕರಿಸುವರೆ? ನಾಯಕರ ಇತಿಹಾಸ, ರಾಜ್ಯ, ಐತಿಹಾಸಿಕ ಸ್ಥಳಗಳು, ಧಾರ್ಮಿಕ ಕ್ಷೇತ್ರಗಳು, ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ವ್ಯಕ್ತಿಗಳ ಚಿಕ್ಕ ಚಿಕ್ಕ ಪರಿಚಯ ಪುಸ್ತಕಗಳನ್ನು ಯೋಗ್ಯದರದಲ್ಲಿ ಪ್ರಕಟಿಸಿ ಪ್ರಸಾರ ಮಾಡಬೇಕು.

**ಮಹಿಳಾ ಸಮಸ್ಯೆ ಮಕ್ಕಳ ಕೂಲಿ ಸಮಸ್ಯೆ:-** ಮಹಿಳೆಯೊಬ್ಬಳು ಕಲಿತರೆ ಮನೆಯಲ್ಲಿ ಶಾಲೆಯೊಂದನ್ನು ತೆರೆದಂತೆ ಎಂದು ಹೇಳುತ್ತಾರೆ. ಇದು ಸತ್ಯವೂ ಹೌದು. ಆಕೆ ತಾಳ್ಮೆಯ ಮೂರ್ತಿ, ತ್ಯಾಗ ಮೂರ್ತಿ. ಆದರೆ ಅವಳನ್ನು ಗುಲಾಮಳಂತೆ ನಡೆಸಿಕೊಂಡರೆ, ಹಿಂಸಿಸಿದರೆ ಮನೆತನ ಹಾಳಾದಂತೆ ಅವಳ ಮನಸ್ಸು ಅರಳುವಂತೆ ನಡೆಯಬೇಕಾದುದು ಪುರುಷನ ಕರ್ತವ್ಯ.

ವಿದ್ಯೆಕೊಡದೆ ತಂದೆ ಮಗುವಿನ ವೈರಿಯೆಂದು ಹಿರಿಯರು ಹೇಳಿದ್ದಾರೆ. ರಟ್ಟೆ ಬಲಿಯದ ಮುಗ್ಧ ಮಕ್ಕಳನ್ನು ಕೂಲಿ ಕೆಲಸಕ್ಕೆ ಕಳಿಸುವುದಾದರೆ ಮಕ್ಕಳನ್ನಾದರೂ ಏಕೆ ಹೆರಬೇಕು! ಬಾಲ್ಯದ ಸಂತೋಷವೇ ಭವಿಷ್ಯದ ಬುನಾದಿ. ಇಂದಿನ ಮಕ್ಕಳೇ ನಾಳಿನ ನಾಗರಿಕರಲ್ಲವೆ? ೧೪ ವರ್ಷಗಳ ಒಳಗಿನ ಮಕ್ಕಳನ್ನು ಶಾಲೆಗೆ ಕಳಿಸದೇ ದುಡಿಯಲು ಹಚ್ಚುವುದು ಅಪರಾಧವೂ ಆಗಿದೆ. ಇದಕ್ಕೆ ಶಿಕ್ಷೆಯುಂಟು.

**ವೇಶ್ಯಾ ಸಮಸ್ಯೆ**

ವೇಶ್ಯಾವೃತ್ತಿ ಎಲ್ಲದೇಶ ಕಾಲಗಳಲ್ಲೂ ಇದೆ. ಭಾರತದಲ್ಲೂ ಇದೊಂದು ಸಮಸ್ಯೆ. ಈ ದೇಶದಲ್ಲಿ ಈ ಬಗ್ಗೆ ಹಿಂದೆ ಇನ್ನೊಂದು ದೃಷ್ಟಿಕೋನವೂ ಇತ್ತು. ಅಲ್ಲಿ ಅವಳು ದೇವರದಾಸಿ ಮಾತ್ರ ಆಗಿದ್ದಳು, ದೇವಾಲಯದಲ್ಲಿ ದೇವರ ಸೇವೆಯೆಂದು ಕಲಾ ಸೇವೆ ಸಲ್ಲಿಸುತ್ತಿದ್ದಳು. ಸಂಗೀತ, ನೃತ್ಯ, ವೀಣೆ, ನಾಟಕದಂತಹ ಕಲೆಗಳಲ್ಲಿ ಪ್ರವೀಣತೆ ಇರುತ್ತಿತ್ತು. ಒಬ್ಬ ಸದ್ಗೃಹಸ್ಥನ ಜೊತೆಗೂಡಿ ಗೃಹಿಣಿಯಂತೆ ಜೀವನ ಸಾಗಿಸುತ್ತಿದ್ದಳು. ಸಮಾಜದಲ್ಲಿ ಅವಳಿಗೆ ಗೌರವವಿತ್ತು. ಆದರೆ ಅವಳು ಕಾಲಮಾನ ಗತಿಸಿದಂತೆ ವೇಶ್ಯಾರೂಪಕ್ಕೆ ಜಾರಿದಳು. ಹೀಗೆ ಬರಬರುತ್ತ ದಾರಿ ತಪ್ಪಲು ಶ್ರೀಮಂತರ, ಮೇಲ್ವರ್ಗಗಳ ಪ್ರಚೋದನೆಯೂ ಕಾರಣ.

ಹಲವಾರು ಹಿಂದುಳಿದ ವರ್ಗಗಳಲ್ಲಿ ಈ ವೇಶ್ಯಾ ಪದ್ಧತಿ ಪ್ರಾರಂಭವಾಯಿತು. ಸೈನಿಕರೂ ಜಹಗೀರದಾರರೂ, ಗೌಡರು, ಜಮೀನುದಾರರು, ಮಾಂಡಲೀಕರು, ರಾಜರು ಆಗಿದ್ದ ನಾಯಕರಲ್ಲಿ, ಯುದ್ಧದಲ್ಲಿ ಜಯಿಸಿ ಹಲವು ವೈರಿವಲಯದ ಸ್ತ್ರೀಯರನ್ನು ಅಪಹರಿಸಿ ಸುಖಿಸುತ್ತಿದ್ದ ನಾಯಕರ ಮನೆತನಗಳಲ್ಲಿ ವೇಶ್ಯಾವೃತ್ತಿ ಪರಂಪರೆಯಾಗಿ ಬೆಳೆಯಲು ಹೇಗೆ ಸಾಧ್ಯ? ಆದರೂ ಯುದ್ಧದಲ್ಲಿ ಸಾವಿರಾ ಸಾವಿರ ಹತರಾದ ವೀರಯೋಧರ ಪತ್ನಿಯರು ಅಸಹಾಯಕರೂ ಪರಾವಲಂಬಿಗಳೂ ಆಗಿ ತಮ್ಮ ಚಿಕ್ಕಮಕ್ಕಳು, ವೃದ್ಧರನ್ನು ಕಾಪಾಡಲು ಇತರರ ಸೇವೆಗೆ ನಿಲ್ಲಬೇಕಾಯಿತು. ಅವರು ಬರುಬರುತ್ತಾ ಪ್ರಚೋದನೆ, ಆಮಿಷಗಳಿಗೆ ಒಳಗಾಗಿರುವುದು ಸಹಜ. ತಾರುಣ್ಯದ ವೈಧವ್ಯವೂ ಕಾಡಿರಬೇಕಷ್ಟೇ. ಇದೇ ಒಂದು ರೂಢಿ, ಪದ್ಧತಿಯಾಗಿ ಬೆಳೆದಿರಬೇಕು. ಹೀಗೆ ಬೇಡರ ಕೆಲವು ಮನೆತನಗಳಲ್ಲಿ ಈ ಪದ್ಧತಿ ಬೆಳೆದು ಬರಲು ಐತಿಹಾಸಿಕ ಕಾರಣಗಳಿವೆ. ಪುರೋಹಿತಶಾಹಿಯೂ ಈ ಪದ್ಧತಿಯನ್ನು ಧರ್ಮದ ಹೆಸರಿನಲ್ಲಿ ಮೂಢ ಜನರಲ್ಲಿ ಪ್ರೋಬಂದಿದೆ. ವೈದಿಕ ಪರಂಪರೆಯಲ್ಲಿ ಪ್ರಭಾವಶಾಲಿಯಾಗಿ ಬೆಳೆದು ಎಲ್ಲ ಹಿಂದೂಗಳ ದೇವರೆಂದು ಮಾನ್ಯವಾಗಿರುವ ಬ್ರಹ್ಮಚಾರಿ ಹನುಮಂತ ದೇವರ ಗುಡಿಯ ಸುತ್ತ ಯುಗಾದಿ ಹಬ್ಬದಲ್ಲಿ (ಕೆಲವು ಕಡೆ ಬೇರೆ ಹಬ್ಬಗಳಲ್ಲಿ) ವೇಶ್ಯೆಯನ್ನು ಪ್ರದಕ್ಷಿಣೆ ಹಾಕಿಸುತ್ತ (ತಿರುಗಿಹೊಡೆಯಲು ಆಕೆಯ ಕೈಯಲ್ಲಿ ಉದ್ಧವಾದ ಹಸಿಬರಲುಗಳೂ ಇರುತ್ತವೆ.) ಪಡ್ಡೆ ಹುಡುಗರು ಬುಟ್ಟಿ ಬುಟ್ಟಿಗಳಲ್ಲಿ ಅವಳ ಉಸುರು ಗಟ್ಟುವಂತೆ ಆಕೆಯ ಮುಖಕ್ಕೆ ನೀರು ಗೊಜ್ಜುವ ಒಕುಳಿಯೂಟವೇಕೆ?

ಹಿಂದೆಯಾದರೂ ನಾಯಕರ ಎಲ್ಲ ಮನೆತನಗಳಲ್ಲೂ ಈ ವೇಶ್ಯಾ ಪದ್ಧತಿ ಇರಲಿಲ್ಲ; ಅಲ್ಲಲ್ಲಿ ಹಲವಾರು ಮನೆತನಗಳಲ್ಲಿ, ಕೆಲವು ಪ್ರದೇಶಗಳಲ್ಲಿ ಇದು ವ್ಯಾಪಿಸಿತು. ವೇಶ್ಯಾ ಪದ್ಧತಿ ಹೊಂದಿದ ಮನೆತನಗಳೊಂದಿಗೆ ಹೊಂದಿರದ ಮನೆತನಗಳು ಬೀಗತನ ಮಾಡುತ್ತಿರಲಿಲ್ಲ. ಅವರವರಲ್ಲೇ ಸಂಬಂಧ ನಡೆಯುತ್ತಿತ್ತು. ಇದು ಸಮಾಜದಲ್ಲಿ ಬದುಕಿಗೂ ಕಾರಣವಾಯಿತು. ಮೇಲು ಕೀಳುಗಳ ಸೃಷ್ಟಿಯೂ ಆಯಿತು. ಇತ್ತೀಚೆ ಈ ಪದ್ಧತಿ ಬಹುತೇಕ ನಿಂತುಹೋಗಿದೆ; ಒಂದೆರಡು ಜಿಲ್ಲೆಗಳ ಕೆಲವು ಊರುಗಳಲ್ಲಿ ಮಾತ್ರ ಉಳಿದುಕೊಂಡಿದೆ. ಇನ್ನು ಕೆಲವೇ ವರ್ಷಗಳಲ್ಲಿ ಅದೂ ಅಂತ್ಯವಾಗುತ್ತದೆ. ಆದರೆ ಈಗಿರುವ ದೇವದಾಸಿಯರ, ಅವರ ಮಕ್ಕಳ ಭವಿಷ್ಯ ಸುಂದರವಾಗಬೇಕು. ಅದಕ್ಕೆ ಸರಕಾರವೂ ಯೋಜನೆ ರೂಪಿಸಿದೆ. ಎಲ್ಲ ಸಮಾಜಗಳೂ ಅವರನ್ನು ಮಾನವೀಯತೆಯಿಂದ ಕಂಡು, ಅವರ ಪ್ರಗತಿಗೆ ಸಹಕರಿಸ ಬೇಕು, ಅವರು ನೊಂದುಕೊಳ್ಳದಂತೆ ನಡೆದುಕೊಳ್ಳಬೇಕು. ಅವರ ಮಕ್ಕಳನ್ನು ಈ ವಿಷಯ ದಲ್ಲಿ ಕೆಣಕಬಾರದು; ಅದು ಮನುಷ್ಯತ್ವವಾಗುವುದಿಲ್ಲ, ಹಿರಿಯರು ಮಾಡಿದ ತಪ್ಪಿಗೆ ಈಗ ಉಳಿದಿರುವ ದೇವದಾಸಿಯರಿಗೆ, ಅವರ ಮುಗ್ಧ ಮಕ್ಕಳಿಗೇಕೆ, ಅಪಮಾನ!

ಬೇರೆ ಜಾತಿಯ ಕೆಲವರು ವೇಶ್ಯಾವೃತ್ತಿ ರೂಢಿಯಲ್ಲಿದ್ದ ಜಾತಿಯವರನ್ನು ಅಣಕಿಸ ಬಹುದು, ಕೀಳಾಗಿ ಕಾಣಬಹುದು. ಇದು ಬಹಳ ಕ್ವಚಿತ್ರ. ಆದರೆ ಹಿಂದೆ ಇಂಥವರಲ್ಲೂ ಈ ಪದ್ಧತಿ ಇದ್ದ ಬಗ್ಗೆ ದಾಖಲೆಗಳಿವೆ. ಕುರುಬರಲ್ಲೂ ಈ ಪದ್ಧತಿ ಇತ್ತು (ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ

ಕನ್ನಡನಾಡಿನ ಚರಿತ್ರೆ, ಭಾಗ-೧ ಇದರಲ್ಲಿ ಸಂಶೋಧಕರಾಗಿದ್ದ ಡಾ. ಪಿ.ಬಿ. ದೇಸಾಯಿಯವರ ಲೇಖನ ನೋಡಿ). ಅಂಬಿಗರು (ಬೆಸ್ತ) ಡೊಂಬರಲ್ಲಿಯೂ ಈ ಪದ್ಧತಿ ಇತ್ತು, ಮುಸಲ್ಮಾನರಲ್ಲಿದೆ. ದಲಿತರಲ್ಲಿ ಸಾಮಾನ್ಯ. ವಿಚಿತ್ರವೆಂದರೆ ಉದಾಹರಣೆಗೆ: ಕೂಡಲ ಸಂಗಮದ ಜಾತ್ರೆ ಕಾಲದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಕೂಸಾದ ಬಸವಣ್ಣ ನವರನ್ನು ತೊಟ್ಟಿಲದಲ್ಲಿ ಹಾಕಿ ನಾಮಕರಣ ಮಾಡುವದೂ ಒಂದು. ಆಗ ''ವೇಶ್ಯೆಯರು (ವೀರಶೈವ ವೇಶ್ಯೆಯರೂ) ತೊಟ್ಟಿಲು ತೂಗಿ ಜೋಗುಳ ಹಾಡುತ್ತಾರೆ'' ಎಂಬ ವಾಕ್ಯವಿದೆ (ಕೂಡಲ ಸಂಗಮ ಕ್ಷೇತ್ರ ಪರಿಚಯದ ಚಿಕ್ಕ ಪುಸ್ತಕ ನೋಡಿ). ಒಂದೆರಡು ದೊಡ್ಡ ಊರುಗಳಲ್ಲಿ ವೀರಶೈವ ವೇಶ್ಯಾಮನೆತನಗಳಿದ್ದದನ್ನು ಬಹಳ ವರ್ಷಗಳ ಹಿಂದೆ ನಾನು ನೋಡಿರುವೆ ಹಾಗೂ ಕೇಳಿರುವೆ. ಈಗ ಅಂಥ ಅವಶೇಷ ಇಲ್ಲವೆಂದು ಲಿಂಗಧಾರಿಗಳಾದ ವೇಶ್ಯಾಯರನ್ನು ಕೀಳಾಗಿ ಕಾಣಬಹುದೆಂದು ಕೆಲವು ಶಿವಶರಣರು ತಮ್ಮ ವಚನಗಳಲ್ಲಿ ಉಪದೇಶಿಸಿದ್ದಾರೆ. ಆದ್ದರಿಂದ ಇಂಥ ಪದ್ಧತಿ ಹೊಂದಿದ್ದ ಸಮಾಜದವರ ಬಗ್ಗೆ ಯಾರಾ ದರೂ ಆಡಿಕೊಂಡರೆ, ಅವರಿಗೆ ಮೇಲಿನ ಸಂಗತಿಗಳನ್ನು ಹೇಳಿ ಬಾಯಿ ಮುಚ್ಚಿಸಬೇಕು. ಇನ್ನು, ಪರಿಸ್ಥಿತಿಯ ಒತ್ತಡದಿಂದ ಅಥವಾ ತಾವೇ ಜಾರಿ ವೇಶ್ಯೆಯರಾದಂಥವರಂತೂ ಎಲ್ಲ ಜಾತಿಗಳಲ್ಲೂ ಇದ್ದಾರಲ್ಲವೆ?

**ವ್ಯಕ್ತಿತ್ವ ವಿಕಸನ ಹಾಗೂ ಸಮಾಜ ಸೇವಾ ಶಿಬಿಗಳು**

ಇತರ, ಜಾತಿಗಳವರಲ್ಲಿ ಮತ್ತು ದಲಿತರು, ಚಿಕ್ಕ ಚಿಕ್ಕ ಕೋಮಿನವರಲ್ಲಿ ಸಹ ಜಾಗೃತಿ ಮೂಡಿದ್ದು ಸಂಘಟನೆ, ಹೋರಾಟಗಳು ಅವ್ಯಾಹತವಾಗಿ ನಡೆಯುತ್ತಿವೆ. ತಮ್ಮವರನ್ನು ಗೌರವಿಸುವ, ಪ್ರೀತಿಸುವ, ಎತ್ತಿ ಹಿಡಿಯುವ, ಅವರಿಗೆ ಮಾರ್ಗದರ್ಶನ ಸಹಾಯ ಮಾಡುವ ಮನೋಭಾವ ಮತ್ತು ಸರಕಾರವನ್ನು ಮಣಿಸಿ ತಮ್ಮ ಕೆಲಸ ಮಾಡಿಸಿಕೊಳ್ಳುವ ಕೆಚ್ಚು-ಇವು ಅವರಲ್ಲಿ ಕೆಲಸ ಮಾಡುತ್ತವೆ. ಆದರೆ ಸಾಮಾನ್ಯವಾಗಿ ನಾಯಕರಲ್ಲಿ ತಾತ್ಸಾರ, ಅಸೂಯೆ, ತಮ್ಮವರನ್ನು ನಿಷ್ಠುರವಾಗಿ ಆಡಿಕೊಳ್ಳವದು, ಮುಂದೋರಣೆಯ ಕೊರತೆ, ಜಡತೆ-ಇವು ಮನೆಮಾಡಿಕೊಂಡಿವೆ. ಹೀಗಾಗಿ ತಮಗಾಗುವ ಅನ್ಯಾಯ, ಅಸಡ್ಡೆಗಳನ್ನು ಪ್ರತಿಭಟಿಸಿ ಸರಕಾರವನ್ನು ಬಗ್ಗಿಸುವ ಒಂದಾದರೂ ರಾಜ್ಯ ಮಟ್ಟದ ಚಳವಳಿ ನಡೆಸಲು ಇಲ್ಲಿಯವರೆಗಿನ ೫೦ ವರ್ಷಗಳಲ್ಲಿ ಸಾಧ್ಯವಾಗಿಲ್ಲ. ಈ ಕಾರಣಗಳಿಂದಾಗಿ ಈ ಸಮುದಾಯದ ವ್ಯಕ್ತಿಯ ಮನೋಭಾವ ಬದಲಿಸಬೇಕಾಗಿದೆ, ಹೊಸ ವ್ಯಕ್ತಿತ್ವನ್ನು ನಿರ್ಮಿಸಬೇಕಾಗಿದೆ, ಚೈತನ್ಯ ತುಂಬಿದ ಮನುಷ್ಯನನ್ನಾಗಿ ಮಾಡಬೇಕಾಗಿದೆ.

ಹೀಗೆ ವಾಲ್ಮೀಕಿ ಸಮಾಜ ಛಿದ್ರ ಹಾಗೂ ಹೀನ ಸ್ಥಿತಿ ತಲುಪಿರುವುದರಿಂದ ಕೇವಲ ಉಪದೇಶ, ಲೇಖನಗಳಿಂದ ಅದನ್ನು ಸುಧಾರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವ್ಯಕ್ತಿತ್ವ ವಿಕಸನ ಹಾಗೂ ಸಮಾಜ ಸೇವಾ ಶಿಬಿರಗಳು ಅಥವಾ ತರಬೇತಿಗಳನ್ನು ೫ರಿಂದ ೧೦ದಿನ ನಡೆಸಬೇಕು. ಇದಕ್ಕಾಗಿ ಕೆಳಗಿನ ಅಂಶಗಳಿಂದ ಕೂಡಿದ ಅಭ್ಯಾಸ ಪತ್ರಿಕೆ (ಸಿಲ್ಯಾಬಸ್) ರಚಿಸಬೇಕು.

ಜಡ, ದುರ್ಬಲ ಮತ್ತು ಅಜ್ಞಾನಿ ವ್ಯಕ್ತಿಗಳನ್ನು ಸಮರ್ಥರನ್ನಾಗಿಸಿ ಜೀವನದ ಸಮಸ್ಯೆಗಳನ್ನು ಎದುರಿಸಲು ಮತ್ತು ಶಕ್ತಿಶಾಲಿ ಜೀವನವನ್ನು ನೆಡಸುವಂತೆ ಅಣಿಗೊಳಿಸಲು ಸಹಾಯವಾಗುವ ಹೊಸ ವಿಚಾರಧಾರೆ, ಮನಃ ಶಾಸ್ತ್ರದಲ್ಲಿಯ ಸಂಶೋಧನೆಗಳು ಜಗತ್ತಿನ ಅನೇಕ ಮುಂದುವರಿದ ದೇಶಗಳಲ್ಲಿ ಪ್ರಚಲಿತವಾಗಿವೆ, ಪ್ರಯೋಗಿಸಲ್ಪಡುತ್ತಿವೆ. ಈ ಕುರಿತು ಇಂಗ್ಲೀಷಿನಲ್ಲಿ ಹಲವಾರು ಪುಸ್ತಕಗಳ ಲಕ್ಷ ಲಕ್ಷ ಪ್ರತಿಗಳು ಪ್ರಕಟವಾಗಿವೆ. ಇವುಗಳಿಗೆ ಭಾರಿ ಬೇಡಿಕೆ ಇದೆ. ಟ್ರ್ಯಾಂಜ್ಯಾಕ್ಶನಲ್ ಆ್ಯನ್‌ಲಿಸಿಸ್(T.A), ನ್ಯೂರೋ ಲಿಂಗ್ವಿಸ್ಟಿಕ್ ಪ್ರೊಗ್ರ್ಯಾಮ (N.L.P.), ಸಿಲ್ವಾ ಮೈಂಡ್ ಕಂಟ್ರೋಲ್ ಮೆಥಡ್ ಇತ್ಯಾದಿಗಳು ವ್ಯಕ್ತಿತ್ವ ವಿಕಸನ ಕ್ರಿಯೆಯಲ್ಲಿ ಬಹಳ ಪ್ರಭಾವ ಬೀರುತ್ತವೆ. ಇವುಗಳೊಡನೆ ಯೋಗ, ಧ್ಯಾನಗಳನ್ನು ಸೇರಿಸಿಕೊಳ್ಳಬಹುದು. ಬುದ್ಧ ಬೋಧಿಸಿದ ವಿಪಶ್ಯನ ಧ್ಯಾನ, ಮೈತ್ರಿ ಧ್ಯಾನಗಳು ಬಹಳ ಪರಿಣಾಮಕಾರಿಯಾಗಿವೆ. ಮುಖಂಡತ್ವದ ತರಬೇತಿಯೂ ಅವಶ್ಯ.

ಸಮಾಜ ಸೇವೆಯ ಪರಿಕಲ್ಪನೆಯೊಂದಿಗೆ, ನಾಯಕ ಸಮಾಜದ ಸೇವೆಗಾಗಿ ಈ ಸಮುದಾಯದ ಚರಿತ್ರೆ, ಸ್ವಭಾವ, ಸಾಧನೆ, ಸಾಹಸ, ತ್ಯಾಗ, ಮಹಾನ್ ವ್ಯಕ್ತಿಗಳು, ಧಾರ್ಮಿಕ ರೀತಿನೀತಿ, ಈ ರಾಜ್ಯ ಮತ್ತು ಇತರ ರಾಜ್ಯಗಳಲ್ಲಿರುವ ವಾಲ್ಮೀಕಿಗಳ ಪರಿಸ್ಥಿತಿಯ ಅಧ್ಯಯನ ಲೋಪದೋಷಗಳು, ಮಾಡಬೇಕಾದ ಸಂಘಟನೆ, ಮಾರ್ಗದರ್ಶನ ಕುರಿತ ವಿಷಯಗಳನ್ನು ಬೋಧಿಸಬೇಕು.

ವಯಸ್ಸಾದವರನ್ನು ತಿದ್ದುವದು ಕಷ್ಟ. ಆದ್ದರಿಂದ ೧೬ರಿಂದ ೩೫ ವರ್ಷಗಳೊಳಗಿನ ಕನಿಷ್ಠ ೭ನೇ ವರ್ಗ ಅಥವಾ ಹೆಚ್ಚು ಕಲಿತ ೫೦-೬೦ ತರುಣರನ್ನು (ಅನುಕೂಲವಿದ್ದಾಗ ತರುಣಿಯರನ್ನು) ಆರಿಸಿ ತಾಲೂಕು ಮಟ್ಟದಲ್ಲಿ ತಜ್ಞರಿಂದ, ಸಮಾಜ ಸೇವಕರಿಂದ ತರಬೇತಿ ಕೊಡಿಸಬೇಕು. ಪ್ರಾರಂಭದಲ್ಲಿ ಕೆಲವು ಪ್ರಮುಖ ಸ್ಥಳಗಳಲ್ಲಿ ಶಿಬಿರ ಇಟ್ಟುಕೊಂಡು ಎಲ್ಲ ಭಾಗಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದು, ಈ ಅನುಭವದ ಹಿನ್ನೆಲೆಯಲ್ಲಿ ಮುಂದೆ ತಾಲೂಕಾ ಮಟ್ಟದಲ್ಲಿ ಶಿಬಿರ ನಡೆಸಬಹುದು. ಶಿಬಿರಾರ್ಥಿಗಳನ್ನು ಬೀಳ್ಕೊಡುವಾಗ ಸಮಾಜ ಸೇವೆ, ನಾಯಕ ಸಮಾಜದ ಸಾಹಿತ್ಯ ಮತ್ತು ವ್ಯಕ್ತಿತ್ವ ವಿಕಸನದ ಹಲವಾರು ಉಪಯುಕ್ತ ಪುಸ್ತಕಗಳನ್ನು ಪುಕ್ಕಟೆಯಾಗಿ ಕೊಡಬೇಕು. ಬೇಕಾದರೆ, ಪ್ರಾರಂಭದಲ್ಲಿ ಶಿಬಿರಾರ್ಥಿಗಳಿಂದ ೧೦೦-೧೫೦ ರೂ. ಶುಲ್ಕ ಪಡೆಯಬಹುದು. ಅದನ್ನೇ ಈ ಪುಸ್ತಕಗಳನ್ನು ಕೊಳ್ಳಲು ವಿನಿಯೋಗಿಸಬಹುದು. ಅವರ ವಿಳಾಸ ಇಟ್ಟುಕೊಂಡು ಬೇಕಾದರೊಡನೆ ಮುಂದೆ ಸಂಪರ್ಕ ಇಟ್ಟುಕೊಳ್ಳಬಹುದು. ಹೀಗೆ ೧೦ ವರ್ಷಗಳಲ್ಲಿ ಎಲ್ಲ ತಾಲೂಕುಗಳಲ್ಲಿ ೨-೩ ಸಾರೆ ಉಚಿತ ತರಬೇತಿ ನೀಡಿದರೆ, ಮುಂದಿನ ಪೀಳಿಗೆಯ ಬಹಳ ವ್ಯಕ್ತಿಗಳು ಸಮರ್ಥ ನಾಗರಿಕರಾಗಿ, ಉತ್ತಮ ಸಂಘಟಕರಾಗಿ ತ್ಯಾಗ ಸೇವೆಗಳಿಗೆ ಒಗ್ಗುವ ಮನೋಭಾವದವ ರಾಗುತ್ತಾರೆ. ಶಿಬಿರ ನಡೆಸಲು ಬೇಕಾಗುವ ಹಣಕಾಸನ್ನು ಶ್ರೀಮಂತರು, ದಾನಿಗಳು, ಹಾಗೂ ಸ್ಥಳೀಯರಿಂದ ಪಡೆಯಬೇಕು. ಇದನ್ನೆಲ್ಲ ನಡೆಸಲು, ಪ್ರೇರಿಸಲು ಒಂದೆರಡು ಸಂಸ್ಥೆಗಳನ್ನು ಹುಟ್ಟುಹಾಕಬೇಕು. ಇವೂ ಸಾಧ್ಯವಾದಷ್ಟು ಹಣಕಾಸು ಒದಗಿಸಬೇಕು. ರಜ ದಿನಗಳಲ್ಲಾದರೆ, ಶಾಲೆಗಳ ಕಟ್ಟಗಳಲ್ಲಿ ಶಿಬಿರಗಳನ್ನು ನಡೆಸಲು ಅನುಕೂಲವಾಗುತ್ತದೆ.

**ಸಮಾಜದ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ**

ವಾಲ್ಮೀಕಿ ಸಮಾಜಕ್ಕೆ ಎಷ್ಟಾದರೂ ಸಂಬಂಧವಿರುವ, ಸಮಾಜದ ವ್ಯಕ್ತಿಗಳ, ವಿಷಯಗಳ ಪ್ರಸ್ತಾಪವಿರುವ, ಪೂರ್ಣವಾಗಿ, ಈ ಸಮಾಜವನ್ನು ಕುರಿತೇ ಬರೆದಿರುವ ಎಲ್ಲ ಪುಸ್ತಕ ಸ್ಮರಣ ಸಂಚಿಕೆ, ಪತ್ರಿಕೆಗಳ (ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲಿಶ್, ಅಥವಾ ಲಭ್ಯವಿರುವ ಇತರ ಭಾಷೆ) ಮಾಹಿತಿ ಸಂಗ್ರಹಿಸಬೇಕು. (ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಾಶಕರು, ಬೆಲೆ, ಒಳಗೊಂಡ ವಿಷಯದ ಮುಖ್ಯಾಂಶಗಳು), ಈ ಮಾಹಿತಿಯನ್ನು ಟೈಪ್ ಅಥವಾ ಝೆರಾಕ್ಸ್ ಮಾಡಿಸಬೇಕು. ಲಭ್ಯವಿದ್ದ ಪುಸ್ತಕ, ಪತ್ರಿಕೆಗಳನ್ನು ಕೊಂಡು ಅವನ್ನು ಹಾಗೂ ಮಾಹಿತಿಯನ್ನು ಸಮಾಜದ ಜಿಲ್ಲಾ ಗ್ರಂಥಾಲಯ ಸ್ಥಾಪಿಸಿ ಅಲ್ಲಿಡಬೇಕು. ಹಲವಾರು ವೈಚಾರಿಕ ಗ್ರಂಥಗಳು ಇರಬೇಕು. ಮತ್ತು ಜ್ಞಾನದಾಯಕ ಸಮಾಜದ ಸದಸ್ಯರಿಗೆ ಅವಶ್ಯ ವಾಗಿರುವ ಹಾಗೂ ಮಾರ್ಗದರ್ಶಕವಾದ ಉದ್ಯೋಗ, ತರಬೇತಿ, ಕೃಷಿ, ವ್ಯಾಪಾರ, ಕೈಗಾರಿಕೆ, ಸಂಶೋಧನೆ, ಸಂಸ್ಕೃತಿ, ಇತಿಹಾಸ, ಸರಕಾರದಿಂದ ಸಿಗುವ ಸವಲತ್ತು, ಸಮಾಜದ ಮುಖ್ಯ ಸಂಘ ಸಂಸ್ಥೆ, ಮುಖಂಡರ ವಿಳಾಸ ಮೊದಲಾದವುಗಳ ಮಾಹಿತಿಯೂ ಇಲ್ಲಿ ದೊರಕಬೇಕು. ಇಂಥ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ತಾಲೂಕು ಮಟ್ಟದಲ್ಲೂ ಅವಶ್ಯಕವಾಗಿವೆ. ಇವು ಜಿಲ್ಲಾ ಮತ್ತು ತಾಲೂಕಾ ಮಟ್ಟದ ನಾಯಕರ ಸಂಘಗಳ ಕರ್ತವ್ಯದ ಒಂದು ಭಾಗವಾಗಿ ಅಥವಾ ಸೇವೆಯಾಗಿ ಕೆಲಸ ಮಾಡಬೇಕು.

ತಮ್ಮ ಸಮಾಜಕ್ಕೆ ಸಂಬಂಧಿಸಿದ ಇಂಥ ಸಮಸ್ಯೆಗಳನ್ನು ಪರಿಹರಿಸಿಕೊಂಡು, ದೊಡ್ಡ ಸವಾಲುಗಳನ್ನು ಎದುರಿಸಲು ಬೇರೆ ಬೇರೆ ಸಮಾಜಗಳಲ್ಲಿ ಬಲಿಷ್ಠ ಸಂಘ-ಸಂಸ್ಥೆಗಳು, ಮಠ-ಮಂದಿರಗಳು, ಅವರವರ ಶಿಕ್ಷಣ ಸಂಸ್ಥೆಗಳು ಇವೆ. ಆದರೆ ಹಲವಾರು ಹಿಂದುಳಿದ ಸಮಾಜಗಳಲ್ಲಿ ಇಂಥ ಸಂಸ್ಥೆಗಳಿಲ್ಲ. ಇದ್ದವುಗಳೂ ಸಮರ್ಪಕವಾಗಿ ಹಾಗೂ ಕಳಕಳಿಯಿಂದ ಕೆಲಸ ಮಾಡುವುದಿಲ್ಲ, ಸಬಲವಾಗಿಲ್ಲ. ಇದೇ ಇವುಗಳ ದುರ್ದೈವ, ಆದರೆ ಈ ಬಗ್ಗೆ ನಿರಾಶೆ, ದೈವಾವಲಂಬನೆ, ಕರ್ಮಸಿದ್ಧಾಂತದ ಹಾಗೂ ಬರಹ, ಸೊಲ್ಲು ಸಲ್ಲದು, ಧೈರ್ಯ, ತ್ಯಾಗ, ಪ್ರಯತ್ನ, ಸಾಹಸಗಳೇ ನಮ್ಮ ಏಳಿಗೆಗೆ ತಾರಕವೆಂದು ಅರಿತಷ್ಟೂ ಕ್ಷೇಮ. ನೆಹರೂ ಹೇಳಿದಂತೆ (Daring and acting) ಕ್ರಿಯಾಶೀಲತೆ ಬೇಕು. ಹಂಪಿ ಕನ್ನಡ ವಿಶ್ವವಿದ್ಯಾಲಯ ದಲ್ಲಿ ಸ್ಥಾಪಿತವಾಗಿರುವ ವಾಲ್ಮೀಕಿ ಅಧ್ಯಯನ ಪೀಠವಾದರೂ, ಈ ಸಾಹಸಕ್ಕೆ ಕೈ ಹಾಕಲಿ. ಆದರೆ ಇದಕ್ಕೆ ಕೆಲವು ಮಿತಿಗಳಿವೆ. ಅಲ್ಲದೆ ಸಧ್ಯ ಹಣದ ಬಲವಿಲ್ಲ. ಇದಕ್ಕೆ ಕೋಟಿಗಟ್ಟಲೆ ರೂ. ಗಳ ಅನುದಾನ ಸರಕಾರದಿಂದ ದೊರೆಯುವಂತೆ ಹೋರಾಡುವ ಸವಾಲನ್ನಾದರೂ ‘ನಾಯಕರು’ ಸ್ವೀಕರಿಸುವರೆ?

# ಪ್ರಸ್ತಾವನೆ

ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿರುವ ವಾಲ್ಮೀಕಿ ಅಧ್ಯಯನ ಪೀಠವು ೨೦೦೨ರಲ್ಲಿ ಸ್ಥಾಪನೆಯಾದರೂ, ಅಧಿಕೃತವಾಗಿ ೩ ನವೆಂಬರ ೨೦೦೩ರಂದು ಉದ್ಘಾಟನೆಯಾಯಿತು. ವಾಲ್ಮೀಕಿ ಸಮುದಾಯವನ್ನು ಕುರಿತು ಅಧ್ಯಯನ, ಸಂಶೋಧನೆ, ಚಿಂತನೆ ಮಾಡುವುದರ ಜೊತೆಗೆ ವಿಚಾರ ಸಂಕಿರಣ ನಡೆಸುವುದು ಮುಖ್ಯ ಉದ್ದೇಶವಾಗಿದೆ. ಪೀಠವು ವಾಲ್ಮೀಕಿ ಜೀವನ, ಕಾವ್ಯ, ಸಾಹಿತ್ಯ, ಸಂಸ್ಕೃತಿ,ಕಲೆ, ಇತಿಹಾಸ, ಜನಪದ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಚಿಂತನೆಗಳನ್ನು ಕುರಿತು ಅಧ್ಯಯನ ಮಾಡುವ ಪ್ರಧಾನ ಗುರಿಯನ್ನು ಹೊಂದಿದೆ. ವಾಲ್ಮೀಕಿಯ ಮೂಲಕ ರಾಮಾಯಣವನ್ನು ರಾಮಾಯಣದ ಮೂಲಕ ಭಾರತದ ಜನ ಜೀವನವನ್ನು ಕುರಿತು ಅಧ್ಯಯನ ಮಾಡಬೇಕಾಗಿರುವುದು ಇಂದಿನ ಅಗತ್ಯವೇ ಸರಿ. ಪೀಠವು ಪ್ರತಿ (ಶೈಕ್ಷಣಿಕ) ಸಾಲಿನಲ್ಲಿ ವಿಚಾರ ಸಂಕಿರಣ, ವಿಶೇಷ ಉಪನ್ಯಾಸ, ವಾಲ್ಮೀಕಿ ಜಯಂತಿ ಆಚರಣೆ ಕಾರ್ಯಕ್ರಮಗಳನ್ನು ನಡೆಸುವ ಸಲುವಾಗಿ ರಾಜ್ಯ ಸರ್ಕಾರ ರೂ.೧೫.೦೦ ಲಕ್ಷಗಳನ್ನು (೨೦೦೨) ಕೊಟ್ಟಿರುತ್ತದೆ. ಈ ಹಣವನ್ನು ಠೇವಣಿಯಾಗಿಟ್ಟು ಬಂದ ಬಡ್ಡಿ ಹಣದಿಂದಲೇ ಪೀಠದ ಕಾರ್ಯಕ್ರಮಗಳನ್ನು ನಡೆಸಲಾಗುವುದು.

ವಾಲ್ಮೀಕಿ ಅಧ್ಯಯನ ಪೀಠವು ೨೦೦೩ ರಿಂದ ಇಂದಿನವರೆಗೆ ಅನೇಕ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಂಡಿದೆ. ದಿನಾಂಕ : ೦೨ – ೧೧ – ೨೦೦೪ ರಂದು ದಲಿತ ಅಧ್ಯಯನ ಪೀಠದ ಸಹಯೋಗದೊಂದಿಗೆ ''ದಲಿತರು ಮತ್ತು ಭಾರತದ ಸಂವಿಧಾನ'' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ದಿನಾಂಕ : ೧೮ – ೧೦ – ೨೦೦೫ ರಂದು ವಾಲ್ಮೀಕಿ ಜಯಂತಿ ಆಚರಣೆ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಅನಿವಾರ್ಯ ಕಾರಣಗಳಿಂದ ಮುಂದೂಡಲಾಯಿತು.

ಕಳೆದ ಮೂರು ವರ್ಷಗಳಲ್ಲಿ ನಾಲ್ಕು ಯೋಜನೆಗಳನ್ನು ಪೂರೈಸಲಾಗಿದೆ. ವಾಲ್ಮೀಕಿ ಸಮುದಾಯದ ಪ್ರಾತಃ ಸ್ಮರಣೀಯರು, ತರೀಕೆರೆ ಪಾಳೆಯಗಾರ ಸರ್ಜಪ್ಪನಾಯಕನ ಕಥನ ಕಾವ್ಯ, ಕರ್ನಾಟಕದಲ್ಲಿ ತಳವಾರಿಕೆ ಮತ್ತು ಕಾಮಗೇತಿ ವಂಶಜರ ಚರಿತ್ರೆ. ಕೈಗೊಂಡ ಯೋಜನೆಗಳೇ ಅಂದು ಪುಸ್ತಕ ರೂಪದಲ್ಲಿ ಪ್ರಕಟಗೊಂಡು ಬಿಡುಗಡೆಯಾದವು.

ಪ್ರಸ್ತುತ ಸಾಲಿನಲ್ಲಿ ''ವಾಲ್ಮೀಕಿ ಸಮುದಾಯದ ಸಾಂಸ್ಕೃತಿಕ ಕೋಶ'' ಎಂಬ ಯೋಜನೆ ಯನ್ನು ಕೈಗೆತ್ತಿಕೊಳ್ಳಲು ಸಿದ್ದತೆ ನಡೆಸಲಾಗಿದೆ. ಇಂದಿನ ಜಾಗತೀಕರಣ ಪ್ರಕ್ರಿಯೆಗಳಿಂದ ನಮ್ಮ ಪ್ರಾಚೀನ ಪರಂಪರೆ, ಸಂಸ್ಕೃತಿ, ಚರಿತ್ರೆ ಮೊದಲಾದ ಕ್ಷೇತ್ರಗಳ ಅರಿವು-ತಿಳುವಳಿಕೆ ಎಂದರೆ ನಮ್ಮ ಜನ ಜೀವನ, ಭಾಷೆ, ಸಂಸ್ಕೃತಿ ಅರಿತುಕೊಳ್ಳುವುದು ಎಂದರ್ಥ. ನಮ್ಮ ಚರಿತ್ರೆಯಿಂದ ಸದಾ ಪಾಠ ಕಲಿಯುವ ಪ್ರಕ್ರಿಯೆ ಸ್ಥಗಿತಗೊಂಡಿದೆ. ಹಾಗಾಗಿ ಗತ ಕಾಲದ ನೆನಪುಗಳು ಮಾಸಿ ಹೋದಾಗ ವರ್ತಮಾನ ಕಣ್ಣಿಗೆ ಕಾಣುವುದಿಲ್ಲ. ಇನ್ನು ಭವಿಷ್ಯವು ಕತ್ತಲೆ ಎಂಬುದು ನಿಜ. ಹಿಂದೆ ಹೇಗಿದ್ದರು, ಇಂದು ಹೇಗಿದ್ದಾರೆ, ಮುಂದೆ ಹೇಗಿರಬೇಕೆಂಬ ಚಿಂತನೆ ಅಗತ್ಯ. ಇಂದು ಪ್ರತಿಯೊಂದು ಸಮುದಾಯವು ತಮ್ಮ ಛಾಯೆಗಳನ್ನು ಚರಿತ್ರೆ ಎಂಬ ಕನ್ನಡಿಯಲ್ಲಿ ನೋಡಲು ಇಚ್ಚಿಸುವುದು ಸಾಮಾನ್ಯ. ಜಾಗೃತಗೊಂಡ ಇಂಥ ಸಮುದಾಯಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಸಲುವಾಗಿ ಚರಿತ್ರೆಯುದ್ದಕ್ಕೂ ಸಂಘರ್ಷ ಮತ್ತು ಹೋರಾಟ ನಡೆಸುತ್ತಾ ಬಂದಿರುವುದು ವಾಸ್ತವ ಸಂಗತಿ.

ಮೇಲಿನಂತೆ, ಅನೇಕ ಸಮುದಾಯಗಳು ಈ ನೆಲದ ಮೇಲೆ ತಲೆ ಎತ್ತಿದ ಬಳಿಕ ಆದ ಪರಿವರ್ತನೆಗಳು ಹಲವು. ತಮ್ಮ ಜೀವನ ವಿಧಾನವನ್ನು ರೂಪಿಸಿಕೊಳ್ಳುವ ಕಾತರ, ಆತುರ ದಿಂದ ಅನೇಕ ಪಲ್ಲಟಗಳಾಗಿವೆ. ಇಂಥ ಪಲ್ಲಟಗಳನ್ನು ಕಂಡ ಸಮುದಾಯ ಬೇಡ, ನಾಯಕರದು. ಬೇಡರು ಕರ್ನಾಟಕದ ವಿವಿಧ ಭಾಗಗಳಲ್ಲಿ ವೈವಿಧ್ಯಮಯವಾಗಿ ಬದುಕುತ್ತಿ ರುವುದು ಗಮನಾರ್ಹ. ಇವರ ಚರಿತ್ರೆ, ಸಾಮಾಜಿಕತೆ, ಆರ್ಥಿಕ ಸ್ಥಿತಿ, ರಾಜಕೀಯ ಸ್ಥಿತಿ, ಶೈಕ್ಷಣಿಕ ವ್ಯವಸ್ಥೆಯಲ್ಲಿ ತೀವ್ರತರವಾದ ಬದಲಾವಣೆಗಳಾಗಿವೆ. ಆದರೂ ಬಡತನ, ನಿರುದ್ಯೋಗ, ಅನಕ್ಷರತೆ ಇವರಿಗೆ ಪೆಡಂಭೂತವಾಗಿ ಕಾಡುತ್ತದೆ.

ಬೇಡ – ನಾಯಕರ ಸಮಸ್ಯೆ – ಸವಾಲುಗಳನ್ನು ಕುರಿತು ಚಿಂತಿಸುವ ಅಗತ್ಯ ಇಂದಿನ ದಾಗಿದೆ. ಏನೆಲ್ಲ ಸಂಶೋಧನೆ, ಚಿಂತನೆ ಅಧ್ಯಯನಗಳು ನಡೆದರೂ ಬೇಡರ ಸ್ಥಿತಿ ಸುಧಾರಣೆ ಗೊಂಡಿಲ್ಲ. ಈ ಫಲಿತಾಂಶಗಳು ಜನ ಸಾಮಾನ್ಯರ ಮಟ್ಟಕ್ಕೆ ತಲುಪಿಲ್ಲ. ಬೇಡರ ಸ್ಥಿತಿ – ಗತಿಯನ್ನು ಕುರಿತು ಇಂದು ಸಮಗ್ರವಾಗಿ ಅರ್ಥೈಸುವ, ವಿಶ್ಲೇಷಿಸುವ ನಿಟ್ಟಿನಲ್ಲಿ ''ಬೇಡ ಬುಡಕಟ್ಟಿನ : ಚರಿತ್ರೆ ಮತ್ತು ಸಂಸ್ಕೃತಿ'' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳ ಲಾಗಿತ್ತು. ಇಲ್ಲಿ ಪ್ರಾಚೀನ, ಮಧ್ಯ ಕಾಲ ಮತ್ತು ಆಧುನಿಕ ಕಾಲಘಟ್ಟಗಳಲ್ಲಿ ಬೇಡರ ವೈವಿಧ್ಯಮಯ ಚಿತ್ರಣವನ್ನು ಕುರಿತು ಪ್ರಬಂಧಗಳು ಮಂಡನೆಯಾದವು. ಐದು ಗೋಷ್ಠಿಗಳು ಮತ್ತು ಒಂದು ಸಂವಾದ ಕಾರ್ಯಕ್ರಮ ನಡೆಯಿತು. ಇದರಲ್ಲಿ ಬಹುದೊಡ್ಡ ಚಿಂತಕರು, ಲೇಖಕರು, ವಿದ್ವಾಂಸರು, ಸಂಶೋಧಕರು ಭಾಗವಹಿಸಿದ್ದು ಸಂತೋಷದ ಸಂಗತಿ. ಬೇಡ ಸಮುದಾಯದ ಸರ್ವತೋಮುಖ ಅಭಿವೃದ್ಧಿ ಕುರಿತು ಚಿಂತಿಸುವುದು ಇಲ್ಲಿನ ಮುಖ್ಯ ಆಶಯಗಳಲ್ಲೊಂದಾಗಿತ್ತು.

ವಾಲ್ಮೀಕಿ ಅಧ್ಯಯನ ಪೀಠ ಕನ್ನಡ ವಿಶ್ವವಿದ್ಯಾಲಯ ಹಂಪಿ ಹಾಗೂ ವಾಲ್ಮೀಕಿ ಸಂಘ ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ ಇವರ ಸಹಯೋಗದಲ್ಲಿ ನಡೆದ ''ಬೇಡ ಬುಡಕಟ್ಟಿನ : ಚರಿತ್ರೆ ಮತ್ತು ಸಂಸ್ಕೃತಿ" ವಿಚಾರ ಸಂಕಿರಣ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮದ ಸಂಕ್ಷಿಪ್ತ ವರದಿ ಹೀಗಿದೆ :

ದಿನಾಂಕ: ೧೯ – ೦೮ – ೨೦೦೯ ರಂದು ಬೆಳಿಗ್ಗೆ ೧೧ ಗಂಟೆಗೆ ಕಾರ್ಯಕ್ರಮದ ಉದ್ಘಾಟನೆ ಹಾಗೂ ಪುಸ್ತಕ ಬಿಡುಗಡೆಯ ಕಾರ್ಯಕ್ರಮವನ್ನು ಮಾನ್ಯ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರು ನೆರವೇರಿಸಿದರು. ಕೂಡ್ಲಿಗಿ ಮಾಜಿ ಶಾಸಕರಾದ ಶ್ರೀಯುತ ಎನ್.ಟಿ. ಬೊಮ್ಮಣ್ಣನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೂಡ್ಲಿಗಿ ವಾಲ್ಮೀಕಿ ಸಂಘಟನೆಯ ಅಧ್ಯಕ್ಷರಾದ ಶ್ರೀಯುತ ಕೆ. ಮಲ್ಲಣ್ಣನವರು ಭಾಗವಹಿಸಿ ದ್ದರು.

ವಿಚಾರ ಸಂಕಿರಣ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಹಾಗೂ ಸ್ವಾಗತ ಕೋರುವಿಕೆಯನ್ನು ಪೀಠದ ಸಂಚಾಲಕರಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಯವರು ನಡೆಸಿಕೊಟ್ಟರು. ಶ್ರೀಮತಿ ಗೀತಾ ಅವರು ಪ್ರಾರ್ಥಿಸಿದರು, ವಂದನಾರ್ಪಣೆಯನ್ನು ಟಿ. ಓಂಕಾರಪ್ಪ ಮತ್ತು ಡಾ. ಎಸ್.ಎಂ. ಮುತ್ತಯ್ಯನವರು ನಿರೂಪಣೆ ನಡೆಸಿಕೊಟ್ಟರು.

ದಿನಾಂಕ ೧೯-೦೮-೨೦೦೯ ಪೂರ್ವಹ್ನ ೧೧-೩೦ಕ್ಕೆ ವಿಚಾರ ಸಂಕಿರಣದ ಗೋಷ್ಠಿ ೧ ಆರಂಭವಾಯಿತು. ಇದರಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಮೂರು ಪ್ರಬಂಧಗಳು ಮಂಡನೆಯಾದವು. ಪ್ರೊ. ಆರ್. ರಾಜಣ್ಣ ಇತಿಹಾಸ ವಿಭಾಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಇವರ ಅಧ್ಯಕ್ಷತೆಯಲ್ಲಿ 'ವಿಜಯನಗರ ಪೂರ್ವಕಾಲೀನ ಬೇಡರು' ಎಂಬ ಪ್ರಬಂಧವನ್ನು ಡಾ. ಹನುಮನಾಯಕರವರು ಮಂಡಿಸಿದರು. ''ವಿಜಯನಗರ ಕಾಲದ ಬೇಡರು ಪ್ರಬಂಧವನ್ನು ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರು, "ವಿಜಯನಗರೋತ್ತರ ಕಾಲದ ಬೇಡರು'' ಪ್ರಬಂಧವನ್ನು ಡಾ.ಎಂ.ಕೆ. ದುರುಗಪ್ಪನವರು ಮಂಡಿಸಿದರು. ಸಭಿಕರು ಚರ್ಚೆ ಯಲ್ಲಿ ಪಾಲ್ಗೊಂಡಿದ್ದರು.

ಎರಡನೆಯ ಗೋಷ್ಠಿ ಮಧ್ಯಾಹ್ನ ೨.೦೦ಕ್ಕೆ ಆರಂಭವಾಯಿತು. 'ವಸಾಹತುಕಾಲದ ಬೇಡ ನಾಯಕರ ಆಳ್ವಿಕೆ'ಗೆ ಸಂಬಂಧಿಸಿದ ಈ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ರಂಗರಾಜು ವನದುರ್ಗ, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ ಇವರು ವಹಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಬೇಡರು ಎಂಬ ಪ್ರಬಂಧವನ್ನು ಶ್ರೀ. ಓ. ದೇವರಾಜು, ''ಬ್ರಿಟಿಷರ ವಿರುದ್ಧ ಹಲಗಲಿ ಬೇಡರ ಪ್ರತಿಭಟನೆ'' ಎಂಬ ಪ್ರಬಂಧವನ್ನು ಡಾ. ಡಿ.ಬಿ. ಕರಡೋಣಿ ಅವರು ''ಸುರಪುರದ ವೆಂಕಟಪ್ಪನಾಯಕ ಮತ್ತು ಬ್ರಿಟಿಷರು'' ಎಂಬ ಪ್ರಬಂಧವನ್ನು ಶ್ರೀ ಜಗದೀಶ, ''ಸಿಂಧೂರ ಲಕ್ಷ್ಮಣ ಮತ್ತು ಬ್ರಿಟಿಷರ ಆಳ್ವಿಕೆ'' ಎಂಬ ಪ್ರಬಂಧವನ್ನು ಡಾ. ಎಫ್.ವೈ. ಸೈದಾಪುರ ಅವರು ಮಂಡಿಸಿದರು.

ವಿಚಾರ ಸಂಕಿರಣ ಮೂರನೆಯ ಗೋಷ್ಠಿಯು ದಿನಾಂಕ ೧೭.೦೮.೨೦೦೬ ರಂದು ಬೆಳಿಗ್ಗೆ ೧೧.೦೦ ಗಂಟೆಗೆ ಆರಂಭವಾಯಿತು. ''ಕರ್ನಾಟಕದ ಪಾಳೆಯಗಾರರು: ಅವಲೋಕನ'' ಎಂಬ ವಿಷಯಕ್ಕೆ ಸಂಬಂಧಿಸಿದ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಲಕ್ಷ್ಮಣ್ ತೆಲಗಾವಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ – ಹಂಪಿ ಇವರು ವಹಿಸಿದ್ದರು.

ಶ್ರೀ ರಮೇಶ ನಾಯಕ್ ಅವರು 'ವಾಯುವ್ಯ ಕರ್ನಾಟಕದ ಬೇಡ ಪಾಳೆಯಗಾರರು' ಕುರಿತ ಪ್ರಬಂಧವನ್ನು ಮಂಡಿಸಿದರು. ಡಾ. ಅಮರೇಶ ಯತಗಲ್ ಅವರು 'ಈಶಾನ್ಯ ಕರ್ನಾಟಕದ ಬೇಡ ಪಾಳೆಯಗಾರರ' ಕುರಿತು ಪ್ರಬಂಧ ಮಂಡಿಸಿದರು. ಅದೇ ದಿನಾಂಕ ಮಧ್ಯಾಹ್ನ ೧೨.೦೦ ಗಂಟೆಗೆ ''ಬೇಡರ ಸಂಸ್ಕೃತಿ''ಗೆ ಸಂಬಂಧಿಸಿದ ಮೂರನೆಯ ಗೋಷ್ಠಿ ಆರಂಭವಾಯಿತು. ಇದರ ಅಧ್ಯಕ್ಷತೆಯನ್ನು ಡಾ. ಎಂ.ಜಿ. ಈಶ್ವರಪ್ಪ, ಪ್ರಾಧ್ಯಾಪಕರು, ಎಂ.ಎಸ್.ಬಿ. ಕಾಲೇಜು, ದಾವಣಗೆರೆ ಇವರು ವಹಿಸಿದ್ದರು. ಈ ಗೋಷ್ಠಿಯಲ್ಲಿ ಡಾ. ಎಸ್.ಎಂ. ಮುತ್ತಯ್ಯನವರು 'ಬುಡಕಟ್ಟುನೆಲೆಯಲ್ಲಿ ಬೇಡರು' ಎಂಬ ಪ್ರಬಂಧ ಮಂಡಿಸಿ ದರು. ಶ್ರೀಅರುಣ್ ಜೋಳದ ಕೂಡ್ಲಿಗಿಯವರು 'ಬೇಡರ ಸಾಂಸ್ಕೃತಿಕ ನಾಯಕರು' ಎಂಬ ಪ್ರಬಂಧ ಮಂಡಿಸಿದರು. ಹಾಗೆಯೇ ಶ್ರೀಮತಿ ಕೊತ್ತಲಮ್ಮನವರು 'ಬೇಡ ಬುಡಕಟ್ಟಿನ ಮಹಿಳೆ' ಕುರಿತ ಪ್ರಬಂಧ ಮಂಡಿಸಿದರು. ಹೊಲೆಪ್ಪ ಸಂಡೂರು 'ಬೇಡ ಬುಡಕಟ್ಟಿನ ವೈಶಿಷ್ಟ್ಯ ಗಳು' ಕುರಿತು ಪ್ರಬಂಧ ರಚಿಸಿರುವರು.

ಗೋಷ್ಠಿ ೫ ಮಧ್ಯಾಹ್ನ ೨.೦೦ ಗಂಟೆಗೆ ಆರಂಭವಾಯಿತು. ಪ್ರೊ. ಸುಕನ್ಯಾ ಮಾರುತಿ ಜೆ.ಎಸ್.ಎಸ್. ಕಾಲೇಜ್ ಧಾರವಾಡ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಮೇಶ್ ಕುಮಾರ ವಾಲ್ಮೀಕಿಯವರು ರಾಜಕೀಯ ಕ್ಷೇತ್ರದಲ್ಲಿ ಬೇಡರು ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಿದರು. ಶ್ರೀ ಪಿ.ಕೋಟ್ರೇಶ್ ಅವರು ಬೇಡರು ಮತ್ತು ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಡಾ. ಕರಿಯಪ್ಪ ಜಿ.ಮಾಳಗಿಯವರು "ಬೇಡರ ಶೈಕ್ಷಣಿಕ ಸ್ಥಿತಿ-ಗತಿಗಳ'' ಕುರಿತು ಪ್ರಬಂಧ ಮಂಡಿಸಿದರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬೇಡರು ಎಂಬ ಪ್ರಬಂಧವನ್ನು ಡಾ. ಜಿ. ಪ್ರಶಾಂತ ನಾಯಕ ಇವರು ಮಂಡಿಸಿದರು.

ಅದೇ ದಿನಾಂಕ ಮಧ್ಯಾಹ್ನ ೩.೩೦ಕ್ಕೆ 'ಬೇಡ ಸಮುದಾಯ: ಸಮಸ್ಯೆ-ಸವಾಲುಗಳು' ಕುರಿತು ಸಂವಾದ ಕಾರ್ಯಕ್ರಮ ನಡೆಯಿತು. ಶ್ರೀ ಹರ್ತಿಕೋಟೆ ವೀರೇಂದ್ರಸಿಂಹ ಕಾರಾಗೃಹ ಅಧೀಕ್ಷಕರು, ಬಳ್ಳಾರಿ ಇವರು ವಿಷಯ ಮಂಡಿಸಿದರು. ಶ್ರೀಮತಿ ಗೀತಾ, ಶ್ರೀ ವೀರಭದ್ರಪ್ಪ, ಶ್ರೀ ಆರ್.ಬಿ. ಕಿತ್ತೂರ, ಶ್ರೀ ಎಚ್.ಎಂ. ಎಸ್. ನಾಯಕ, ಶ್ರೀದಳವಾಯಿ ಚಕ್ರಪಾಣಿ, ಡಾ. ಎಸ್. ಮಾರುತಿ, ಶ್ರೀ ದೇವೇಂದ್ರ ಮಾಧವನವರ, ಶ್ರೀ ದೇವರ ಓಬಯ್ಯ, ಶ್ರೀ ಬಿ. ತಿಪ್ಪೇಸ್ವಾಮಿ, ಎಚ್. ಆರ್. ತಿಪ್ಪೇಸ್ವಾಮಿ ಹಾಗೂ ಇತರರು ಭಾಗವಹಿಸಿದ್ದರು.

ಅದೇ ದಿನಾಂಕ ಸಂಜೆ, ೫.೩೦ಕ್ಕೆ ಸಮಾರೋಪ ಸಮಾರಂಭ ನಡೆಯಿತು. ಪ್ರೊ. ಸುಕನ್ಯಾ ಮಾರುತಿ ಸಮಾರೋಪ ಭಾಷಣ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕೆ. ಮಲ್ಲಣ್ಣನವರು ಭಾಗವಹಿಸಿದ್ದರು. ವಿಶೇಷ ಆಹ್ವಾನಿತರಾಗಿ ಶ್ರೀಮತಿ ಬಿ.ಕೆ. ಜಯಮ್ಮ, ಶ್ರೀಮತಿ ಕೆ. ನಾಗರತ್ನಮ್ಮ, ಶ್ರೀ ಟಿ. ಓಂಕಾರಪ್ಪ, ಹೆಚ್. ವೀರಣ್ಣ, ವೀರಭದ್ರಪ್ಪ, ನಾಗರಾಜ, ಶ್ರೀ ಎ. ಓಬಯ್ಯ, ಕೆ. ಮಾರಪ್ಪ, ಎನ್. ಮುದ್ದಪ್ಪ, ಸಿದ್ದಪ್ಪ, ಭೀಮಣ್ಣ, ರಾಜು, ಡಾ. ರಾಮಚಂದ್ರ ನಾಯಕ, ಕಾವಲಿ ಶಿವಪ್ಪ ನಾಯಕ, ಎಸ್.ಪಿ. ಪ್ರಕಾಶ, ತಮ್ಮಣ್ಣ ಹಾಗೂ ಮೊದಲಾದವರು ಪಾಲ್ಗೊಂಡಿದ್ದರು. ಸಮಾರೋಪದ ಅಧ್ಯಕ್ಷತೆಯನ್ನು ಕೂಡ್ಲಿಗಿಯ ಮಾಜಿ ಶಾಸಕರಾದ ಟಿ. ಸೋಮಪ್ಪ ಅವರು ವಹಿಸಿದ್ದರು. ಈ ಸಂದರ್ಭದಲ್ಲಿ ಪಾಲ್ಗೊಂಡ ವಿದ್ವಾಂಸರಿಗೆ, ಪತ್ರಕರ್ತರಿಗೆ, ವಿಶೇಷ ಆಹ್ವಾನಿತ ಗಣ್ಯರಿಗೆ ನೆನಪಿನ ಕಾಣಿಕೆ ಕೊಡಲಾಯಿತು. ಪೀಠದ ಸಂಚಾಲಕಾರಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಎಲ್ಲರನ್ನು ವಂದಿಸಿದರು. ಸಾವಿರಾರು ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಬೇಡರು

ಸಮಕಾಲೀನತೆಯ ಸಂದರ್ಭಕ್ಕೆ ಪರಂಪರೆಯೆನ್ನುವುದು ಅಗತ್ಯವಾಗುವುದು ಔಚಿತ್ಯವೆನ್ನಬಹುದಾದ ಮಿತಿಯ ಕಾರಣಕ್ಕಲ್ಲ. ಪರಂಪರೆ ಪುರಾಣ, ಇತಿಹಾಸ, ಜಾನಪದ ಗಳನ್ನೆಲ್ಲಾ ಅರಿತು ಬೆಸುಗೆ ಹಾಕುವ ಕೆಲಸ ಮಾಡುತ್ತಲೇ, ನಿರಂತರತೆಯನ್ನು ಕಾಯ್ದು ಕೊಳ್ಳುತ್ತದೆ. ಅಗತ್ಯಕ್ಕನುಗುಣವಾದ ಕಾಲಿಕ ಸಂಸ್ಕಾರದೊಂದಿಗೆ ಉಳಿದು, ಬೆಳೆದು, ರೂಪಾಂತರವೋ, ಸೃಜನಶೀಲವೋ ಆಗುತ್ತಲೇ ಭೂತದೊಂದಿಗೆ ವರ್ತಮಾನ ಮತ್ತು ಭವಿಷ್ಯತ್ತನ್ನು ಕಾಣಲು ಸಹಕರಿಸುತ್ತದೆ. ಆದ್ದರಿಂದಲೇ ಪುರಾಣದಿಂದ ಇತಿಹಾಸವೂ, ಇತಿಹಾಸದಿಂದ ಆಧುನಿಕತೆಯೂ ಪರಸ್ಪರತೆಯ ಅರ್ಥದಲ್ಲಿ ಅಸ್ತಿತ್ವದ ಹುಡುಕಾಟ ದಲ್ಲಿರುತ್ತದೆ.

ಈ ಹಿನ್ನೆಲೆಯಿಂದಲೇ ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ಬೇಡರು ಎನ್ನುವ ವಿಚಾರವನ್ನು ಕುರಿತು ಚರ್ಚಿಸುವಾಗ ಸಂಸ್ಕೃತಿಯ ನೆಲೆಗಟ್ಟು ಬಹಳ ಮುಖ್ಯವಾಗುತ್ತದೆ. ಅದು ಪುರಾಣದ ಹಲವು ಆಧಾರಗಳೊಂದಿಗೆ, ಸ್ಮೃತಿಗಳೊಂದಿಗೆ ಒಂದು ಭವ್ಯ ಪರಂಪರೆಯನ್ನು, ಕನವರಿಸುವುದು ಸಹ ಸಾಧ್ಯವಾಗುತ್ತದೆ. ಹಾಗೆಯೇ ಸಾಹಿತ್ಯದ ನಂಟೂ ಸಹ. ಆದ್ದರಿಂದಲೂ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಸಹ ಪರಸ್ಪರತೆಯ ಅರ್ಥದಲ್ಲಿ ಒಂದರಿಂದ ಒಂದು, ಒಂದರೊಡನೊಂದು ಎಂದೇ ಪರಿಭಾವಿಸುವುದಾಗುತ್ತದೆ. ಬದುಕುವ ಕ್ರಮ ಸಂಸ್ಕೃತಿಯದಾದರೆ, ದಾಖಲೆಯ ಸ್ವರೂಪ ಸಾಹಿತ್ಯದ್ದಾಗುತ್ತದೆ.

ಸಂಸ್ಕೃತಿಗೂ, ಶ್ರಮಕ್ಕೂ ಸಮೀಪ ಸಂಬಂಧವಿರುವ ಸಮುದಾಯಗಳಲ್ಲಿ ಬದುಕುತ್ತಲೇ, ಬುದುಕಿನೊಳಗಿನಿಂದಲೇ ಜ್ಞಾನವನ್ನು ಸಹ ದಾಹದ ಸ್ವರೂಪದಿಂದಲೇ ಪಡೆಯುವ ಕ್ರಿಯೆ ಸಹಜವೆಂಬಂತೆ ಘಟಿಸುತ್ತದೆ. ಅದು ಮೂಲತಃ ಸಮುದಾಯದ ಅರ್ಥವನ್ನು ಪ್ರತಿನಿಧಿ ಸುತ್ತಲೇ ಜನಪದ, ಜನಪರವಾಗುತ್ತದೆ. ಸತ್ಯ ಮತ್ತು ಸತ್ವಗಳ ಹುಡುಕಾಟವೂ ಇಲ್ಲಿ ಸುಲಭವಾಗುತ್ತದೆ.

ಜನಾಂಗದ ಹೆಸರೇ ಆಗಿ ರೂಪುಗೊಳ್ಳುವ ವಾಲ್ಮೀಕಿ ಈ ಬಗೆಯ ಭಿತ್ತಿಯಲ್ಲಿ ಕಾಣಿಸಿ ಕೊಳ್ಳುತ್ತಾನೆ. ಅವನ ಮೂಲವೃತ್ತಿ ಸಮುದಾಯದ್ದಾಗಿತ್ತು. ಅವನು ಜ್ಞಾನಿಯಾಗಲು ತೆಗೆದುಕೊಂಡ ತೀರ್ಮಾನ ವ್ಯಕ್ತಿಗತವಾಗಿತ್ತು. ತಪಸ್ಸು ಹುತ್ತಗಳೆಲ್ಲವೂ ಅವನ ಪ್ರಯತ್ನಗಳ ಹಠದ ಫಲಿತಗಳೇ ಆಗಿತ್ತು ಮತ್ತು ಬಹಳ ಮುಖ್ಯವಾಗಿ ಅದು ಜಾತಿಯಾಧಾರಿತ ವೃತ್ತಿ, ಜ್ಞಾನ, ತೀರ್ಮಾನಗಳ ವ್ಯವಸ್ಥೆಯ ಸಂಚನ್ನು ಒಡೆದು ಸಾಧಿಸಿದ ಬಂಡಾಯವಾಗಿತ್ತು.

ಈ ದೇಶದ ಆದಿಮ ಕಾವ್ಯ ನಿಜದ ನೆಲೆಯಲ್ಲಿ ಸೃಷ್ಟಿಗೊಂಡಿದ್ದು ಹೀಗೆ. ಒಬ್ಬ ಬೇಟೆಗಾರನಿಂದ ಎನ್ನುವುದೇ ಅತಿಮುಖ್ಯವಾದ ಸಂಗತಿ. ಜ್ಞಾನವನ್ನು ಬ್ರಹ್ಮತ್ವದ ಅರ್ಥ ದಲ್ಲೇ ಸಾಧಿಸಿದವನು ವಾಲ್ಮೀಕಿ. ಅದು ದರ್ಶನದ ರೂಪದಲ್ಲೂ ಘಟಿಸಿದುದರಿಂದಲೇ ಆತ ಕಾವ್ಯದೊಳಗೆ ತಾನೂ ಒಂದು ಪಾತ್ರವಾಗುವುದಾಯಿತು. ಇಂದಿಗೂ ಈ ಸತ್ಯವನ್ನು ಅರಗಿಸಿಕೊಳ್ಳಲಾಗದ ವ್ಯವಸ್ಥೆ ಅದನ್ನು ಮರೆಮಾಚುವ ಹತ್ತು ಹಲವು ತಂತ್ರಗಳನ್ನು ರೂಪಿಸುತ್ತಲೇ ಇದೆ.

ಇಡೀ ದೇಶ ಸಂಸ್ಕೃತಿಗಳಿಗೆ ಪರ್ಯಾಯದ ಹೆಸರಾಗಿ, ಸ್ಫೂರ್ತಿ ಶಕ್ತಿಯಾಗಬಹುದಾದ ವಾಲ್ಮೀಕಿ ಒಂದು ಜನಾಂಗ ಅಥವಾ ಸಮುದಾಯದ ಅರ್ಥಗಳಿಗೇಕೆ ಮಾದರಿಯಾಗುವುದಿಲ್ಲ ಆತ್ಮಾವಲೋಕನದ ಅರ್ಥಗಳಿಗೆ ಉತ್ತರ ದೊರಕಬೇಕಿರುವುದಿಲ್ಲಿಯೇ. ವಾಲ್ಮೀಕಿ ಪುರಾಣ ದಿಂದ ಇತಿಹಾಸವಾಗುತ್ತಾ, ಸಂಸ್ಕೃತಿಯೇ ಆಗಿ ಅದರೊಂದಿಗೆ ಸಾಹಿತ್ಯವೂ ಆಗಿ ದಾಖಲಾಗು ವುದು ಒಂದು ಬಗೆಯಾದರೆ, ಅವನ ಕೃತಿಯೊಳಗೆ ದಾಖಲಾಗುವ ಮತ್ತೊಬ್ಬ ಬೇಡ ಹೆಣ್ಣುಮಗಳು ಶಬರಿ….

ನಿರೀಕ್ಷೆಯಲ್ಲಿಯೇ ಹಣ್ಣಾಗುವ ಆದರೆ ಬೇಕಾದ್ದನ್ನು ದಾಖಲಿಸಿಯೇ ತೀರುವ ಛಲದ ಪರ್ಯಾಯವಾಗಿ ಪ್ರತಿಬಿಂಬಿತವಾಗುತ್ತಾಳೆ. ನಿರೀಕ್ಷೆ ಎನ್ನುವುದೇ ತಪಸ್ಸಿನ ರೂಪವಾದಾಗ ಕಡೆಗೆ ಫಲ ಪಡೆದೇ ತೀರುತ್ತಾಳೆ. ದೇವರ ರೂಪವೆಂದೇ ಭಾವಿಸಬಹುದಾದ ಪುರುಷೋತ್ತಮ ನನ್ನು

ಕಾಣುವ ಅವಳ ಹಂಬಲ ಶುದ್ಧಪ್ರೇಮದ ಸ್ವರೂಪವಾಗಿಯೂ ಕಾಣುವಂತಹದು. ಆಯ್ಕೆ, ಸ್ವಾತಂತ್ರ್ಯ, ತಪಸ್ಸು, ಸಾಧನೆ, ಸಮಾನತೆ ಇದೇ ಮೊದಲಾದ ಆಶಯಗಳು, ಸಂವೇದನೆಗಳ ಮೊದಲ ಮಹಿಳಾ ಹೆಜ್ಜೆಯಾಗಿ ಅವಳ ವ್ಯಕ್ತಿತ್ವದ ದಾಖಲೆಯಾಗುತ್ತದೆ.

ಮಹಾಭಾರತದ ಕಾವ್ಯದಲ್ಲಿಯೂ ಬಿಡಿಪಾತ್ರವಾಗಿ, ಸಮುದಾಯಕ್ಕೆ ಸವಾಲಾಗುವ, ಸಾಂಸ್ಕೃತಿಕ ನಾಯಕನಂತೆ ಕಾಣಸಿಗುವ ಏಕಲವ್ಯನ ಪಾತ್ರ ಮತ್ತೊಂದು ಬಗೆಯದು. ವಾಲ್ಮೀಕಿಯಂತೆ ಭಿನ್ನ ಸಾಧಕನಾಗಿ ಕಾಣಸಿಗುವ ಈತ ತನ್ನ ಮಿತಿಯಿಂದಲೇ ಅಪಾರವನ್ನು, ಒಂದು ಬೃಹತ್ ವ್ಯಾಪ್ತಿಯನ್ನು ಮುಟ್ಟಿಬಿಡುತ್ತಾನೆ. ಜಗದೇಕ ವೀರನೆಂಬ ಅರ್ಜುನನ ಅಹಂಕಾರಕ್ಕೆ ಏಕಾಗ್ರತೆಯ, ಸಾಧನೆಯ ಉತ್ತರವಾಗುತ್ತಾನೆ. ಇದು ಧ್ಯಾನಸ್ಥ ನೆಲೆಯಿಂದ ಸಾಧಿತವಾದ ಅಪರಿಮಿತ ಆಕಾಂಕ್ಷೆ ಮತ್ತು ಜೀವನದ ಎಲ್ಲಾ ಆಯ್ಕೆ ಮತ್ತು ಎಚ್ಚರಗಳ ಸಾಧನೆಯ ಮಾದರಿ. ಕಣ್ಣಪ್ಪ ಭಕ್ತಿಯ ಮತ್ತೊಂದು ನೆಲೆಯ ಸಂಶೋಧನೆಗಳಿಗೆ ಅರ್ಥ ತೋರಿಸಿದವನು. ದೇವರನ್ನು ಕಾಣುವ, ಹೊಂದುವ, ಮಾತನಾಡುವ ಹತ್ತು-ಹಲವು ಉತ್ತರ ಗಳಿಗೆ ವ್ಯವಸ್ಥೆಯ ಕಟ್ಟು ಪಾಡುಗಳಿಗೆ ಸಡ್ಡು ಹೊಡೆದಂತೆ ಎಲ್ಲ ಧರ್ಮ ಜ್ಞಾನಗಳ ಆಚೆಗೂ ತನ್ನ ಮುಗ್ಧತೆಯ ವ್ಯಕ್ತಿ ವಿಶೇಷತೆಗಳಿಂದಲೇ ದೇವರನ್ನು ಗೆದ್ದವನು. ಭಕ್ತಿಗೆ ಹೊಸ ಭಾಷೆ ಬರೆದು ದೇವರನ್ನು ಮೂರ್ತಿಯಾಗಿ ಕಂಡು ಜೀವವಾಗಿಸಿ ಕಣ್ಣು ಕೊಡುವ ತನ್ಮಯತೆಗೆ ದಾಟಿದವನು. ಮುಗ್ಧತೆಯಿಂದಲೇ ತನ್ನದೇ ಅರಿವಿಗೂ, ಜ್ಞಾನಕ್ಕೂ ಸಾಗಿದ ಕಣ್ಣಪ್ಪ ತನ್ನ ಬದುಕಿನ ಕ್ರಮದಿಂದಲೇ ಹಬ್ಬವೊಂದರ ಸೃಷ್ಟಿಕರ್ತನಾಗಿ ಸಾಂಸ್ಕೃತಿಕ ವೀರನಾಗು ವತ್ತ ಚಲಿಸುತ್ತಾನೆ. ಈಚಿನ ದಿನಗಳಲ್ಲಿ ಈ ಕತೆಯನ್ನೂ ತಿರುಚುವ ಅಪಾಯಗಳು ಅಲ್ಲಲ್ಲಿ ನಡೆದಿವೆ.

ಅಂದರೆ ಈ ಮೇಲಿನ ಪಾತ್ರಗಳ ಅವಲೋಕನದ ಸಂದರ್ಭದಲ್ಲಿ ಕಂಡದ್ದು, ಸಾಂಸ್ಕೃತಿಕ ದಾಖಲೆಗಳೇ ಎಲ್ಲವೂ ಕಾಡು, ಬುಡಕಟ್ಟು ಮತ್ತು ಏಕಾಂತಗಳ ಸಾಧಿತ ನೆಲೆಯಲ್ಲಿ ರೂಪು ಗೊಂಡವು. ಹಾಗೆಯೇ ನಾಗರೀಕ ಬದುಕಿನ ಭ್ರಮೆಗಳಿಗೆ ಸವಾಲುಗಳಾಗಿಯೂ ಸೃಷ್ಟಿ ಯಾದವು. ಇದನ್ನು ಜಾಣತನದ ಜ್ಞಾನದ, ವ್ಯವಸ್ಥೆಗಳೆಲ್ಲವೂ ಲಿಖಿತ ಆಧಾರಗಳಲ್ಲಿ ಉಳಿಸಿಕೊಳ್ಳಬೇಕಾದ ತುರ್ತಿಗೆ ಒಳಗಾದದ್ದು ಅಚ್ಚರಿಯ ಹಾಗೆ. ಅನಿವಾರ್ಯತೆಯನ್ನು ಹೇಳುವಂಥಹವುಗಳು ಹಾಗಾಗಿಯೂ ಇವು ನಿಜದ ನೆಲೆಯ ಸಂಸ್ಕೃತಿಯ ಪರಿಭಾಷೆಗಳಾಗಿವೆ. ತನ್ನ ಪರಂಪರೆಯ ಬಗೆಗೆ ಮಾತನಾಡಿಕೊಳ್ಳುತ್ತಲೇ ಅದನ್ನು ಭವ್ಯ ದಿವ್ಯಗಳ ಐತಿಹ್ಯ ವನ್ನಾಗಿಸಿಕೊಂಡು ವರ್ತಮಾನ ಕಟ್ಟಿಕೊಳ್ಳುವ ಜಾಯಮಾನ ಮನುಷ್ಯನ ಮೂಲ ಪ್ರವೃತ್ತಿ ಗಳಲ್ಲಿ ಒಂದಾಗಿರಬಹುದು. ಆದ್ದರಿಂದಲೇ ಪ್ರತಿಯೊಬ್ಬನಿಗೂ ತನ್ನ ಹಿಂದಿನ ಒಂದಷ್ಟು ರೋಮಾಂಚನದ ನೆನಪುಗಳು ಸದಾ ಜಾಗೃತವಾಗಿರುತ್ತವೆ. ಇದು ತನ್ನ ಆ ಹೊತ್ತಿನ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವಂತಾದರೆ ಅದಕ್ಕೆ ಮತ್ತಷ್ಟು ಬೆಲೆಯೂ ಬಂದಿತು. ಆದರೆ ಬಹಳಷ್ಟು ಸಲ ಹಾಗಾಗುವುದಿಲ್ಲ. ಪ್ರತಿ ಬುಡಕಟ್ಟು-ಸಮುದಾಯಗಳಿಗೆಲ್ಲಾ ಈಬಗೆಯ ಒಂದಷ್ಟು ಸಾಂಸ್ಕೃತಿಕ ಭವ್ಯತೆಯ ನೆನಪುಗಳು ಅಗತ್ಯ ಎನ್ನುವಂತೆಯೇ ಉಳಿದುಬಿಟ್ಟಿದೆ. ಅದು ಈ ದೇಶದ ಯಾವ ಜಾತಿ-ಸಮುದಾಯವನ್ನು ಬಿಟ್ಟಿಲ್ಲ ಎಂದು ಅವರು ಉತ್ಪ್ರೇಕ್ಷೆ ಯಾಗಬೇಕಿಲ್ಲ.

ಹಾಗೆಯೇ ವಾಲ್ಮೀಕಿ ಸಮುದಾಯಕ್ಕೂ, ವಾಲ್ಮೀಕಿ, ಶಬರಿ, ಏಕಲವ್ಯ, ಕಣ್ಣಪ್ಪ ಎಂಬೆಲ್ಲಾ ಪುರಾಣದ ಸ್ಮೃತಿಗಳೂ ಅದರೊಂದಿಗೆ, ಮದಕರಿನಾಯಕ, ಕುಮಾರರಾಮ, ಸಿಂಧೂರ ಲಕ್ಷ್ಮಣ ಎನ್ನುವ ಐತಿಹಾಸಿಕ ದಾಖಲೆಗಳೂ ಪರಂಪರೆಯ ಬಗೆಗಿನ ಮಾತು ಮತ್ತು ನಂಬಿಕೆಗಳನ್ನು ಮತ್ತಷ್ಟು ಗಟ್ಟಿಗೊಳಿಸಿವೆ. ಹೀಗೆ ಪುರಾಣದಿಂದ ಇತಿಹಾಸ, ಇತಿಹಾಸದಿಂದ ವರ್ತಮಾನಕ್ಕೆ ಸಾಗುವ ಯಾನದಲ್ಲಿ ವರ್ತಮಾನದಲ್ಲಿ ಈ ಜನರ ಸಂಸ್ಕೃತಿ, ಸಾಹಿತ್ಯದ ನೆಲೆ ಬೆಲೆಯೇನು? ಎನ್ನುವುದು ಎಷ್ಟು ಮುಖ್ಯ ಪ್ರಶ್ನೆಯೇ ಅಷ್ಟು ಸಮಾಧಾನಕರ ಉತ್ತರಗಳಂತೂ ಸಾಧ್ಯವಿಲ್ಲ. ಆಧುನಿಕತೆಯ, ನಾಗರೀಕತೆಯ ಉತ್ಕರ್ಷದ ಈ ಹೊತ್ತಿನಲ್ಲಿ ಸಂಸ್ಕೃತಿ ಕುರಿತ ಚರ್ಚೆ ತುಂಬಾ ವಿಭಿನ್ನವಾಗಿಯೇ ತೆರೆದುಕೊಳ್ಳುತ್ತಿದೆ. ಸಂಸ್ಕೃತಿಯ ಅವಲೋಕನದ ಜೊತೆಗೆ ಅದರ ನೆಲೆ-ಬೆಲೆ-ಪರ್ಯಾಯಗಳು ಇತ್ಯಾದಿಗಳು ಕಾಲಿಕ ಬದಲಾವಣೆಯ ಹೊತ್ತಿನಲ್ಲಿ ಅದನ್ನು ಮುರಿದು ಕಟ್ಟುವ ಬಗೆ ಮತ್ತು ಅನಿವಾರ್ಯತೆಗಳು, ವಿಭಿನ್ನ ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತಿವೆ.

ವಿಶ್ವ ಪ್ರಜ್ಞೆಯ ಜೊತೆಗೆ ಜಾತ್ಯಾತೀತತೆಯ ಮಾತುಗಳು ಸೇರಿಕೊಂಡು ಅನ್ವೇಷಣೆಯ ಅರ್ಥದಲ್ಲಿ ರಾಜಕಾರಣವೆನ್ನುವುದು ಜಾತಿಗಳ ಸಂಘಟನೆಯನ್ನು ಕಾಲಿಕ ತುರ್ತನ್ನಾಗಿ ನಿರ್ಮಿಸಿಬಿಟ್ಟಿದೆ. ಕೆಲವೊಮ್ಮೆ ಮಾನವೀಯ ನೆಲೆಗಟ್ಟಿನಲ್ಲಿ ಬೇಡವಾದ ಜಾತಿಗಳು, ಧರ್ಮ,

ಅಧಿಕಾರ, ರಾಜಕಾರಣದ ಹೊತ್ತಿನಲ್ಲಿ ವಿಚಿತ್ರ ಅನಿವಾರ್ಯತೆಗೆ ಒಳಗಾದಂತೆ ಸಂಘಟಿತ ವಾಗಲೇಬೇಕಾದ ಒತ್ತಡದಲ್ಲಿವೆ. ಜಾತಿಯಾಧಾರಿತ ಲೆಕ್ಕಾಚಾರವೇ ರಾಜಕೀಯದ ಮೂಲ ನೆಲೆ ಎನ್ನಿಸುವ ಅಪಾಯವಿರುವ ಈ ಹೊತ್ತಿಗೆ ಬೇಡ ಸಮುದಾಯ ತನ್ನ ಹಲವು ಪರ್ಯಾಯ ಹೆಸರುಗಳು ಸಮಗ್ರತೆಯ ದೃಷ್ಟಿಯಲ್ಲಿ ರಾಜ್ಯದ ಸುಮಾರು ನಾಲ್ಕನೇ ಸ್ಥಾನದಲ್ಲಿದ್ದರೂ ಎಷ್ಟು ಸಾಧಿಸಬಹುದು ಅಷ್ಟು ಅಧಿಕಾರದಲ್ಲಿ ಪಾಲ್ಗೊಳ್ಳಲಿಲ್ಲ. ತನ್ಮೂಲಕ ಈ ಸಮಾಜ ಉದ್ಧಾರವಾಗಲಿಲ್ಲ ಎನ್ನುವುದನ್ನು ದುರಂತವೆನ್ನದೆ ಮತ್ತಾವ ಪರಿಭಾಷೆಯಿಂದಲೂ ಗುರುತಿಸುವಂತಿಲ್ಲ. ಸಂಘಟನೆ ಎನ್ನುವ ನಿಜದ ಅರ್ಥವೇ ಬಹುಶಃ ಈ ಸಮುದಾಯದ ಅರ್ಥಕೋಶದಿಂದ ದೂರವಿರಬಹುದೆ? ಎನ್ನುವ ಅನುಮಾನವೇ ನಿರಂತರವಾಗಿದೆ. ಈ ಹೊತ್ತಿನ ಮುಖ್ಯ ತುರ್ತು ಎಂಬುವಂತೆ ಸೃಷ್ಟಿಯಾದ ಈ ಜಾತಿಯ ಮಠವೂ ಆ ನಿಟ್ಟಿನಲ್ಲಿ ಬಹಳಷ್ಟು ದೂರ ಕ್ರಮಿಸಬೇಕಿದೆ.

ಈ ದೇಶದ ಬಹುಜನರನ್ನು ಕಾಡುವ ಬಡತನ, ಅನಕ್ಷರತೆ, ಮೌಢ್ಯತೆ ಇತ್ಯಾದಿಗಳೆಲ್ಲವೂ ತುಸು ಹೆಚ್ಚು ಎನ್ನುವಷ್ಟು ಈ ಸಮಾಜವನ್ನು ಕಾಡಿದೆ. ಸಂಘಟನೆ ಎನ್ನುವುದು ವಿಶಾಲಾರ್ಥ ದಲ್ಲಿ ಇವುಗಳನ್ನೆಲ್ಲಾ ಮೀರಿಯೇ ನಡೆಯಬೇಕಿದೆ. ಆ ದೃಷ್ಟಿಯಿಂದಲೇ ಮಠ, ರಾಜಕಾರಣ ಮತ್ತು ವಿದ್ಯಾವಂತರ ಜವಾಬ್ದಾರಿಯೂ ಹೆಚ್ಚಾಗಿದೆ. ಉದ್ದೇಶಿತ ಅರ್ಥದಲ್ಲಿ ಸಮುದಾಯದ ಜಾಗೃತಿ ನಡೆಯಬೇಕಿದೆ. ಸಂಸ್ಕೃತಿಯ ಪರಿಭಾಷೆಯನ್ನು ವಿಸ್ತೃತ ನೆಲೆಯಲ್ಲಿ ಅರ್ಥೈಸುವ ತುರ್ತು ಸಹ ಇಲ್ಲಿಯೇ ಇದೆ. ತನ್ಮೂಲಕ ಜನಾಂಗವಾಗಿ, ಸಮುದಾಯವಾದ ಭಿನ್ನ ಪ್ರದೇಶಗಳಲ್ಲಿ ಹಂಚಿಹೋಗಿರುವ ವೈವಿಧ್ಯತೆಗಳ ಕುರಿತ ಒಳನೋಟಗಳ ವಿಶಿಷ್ಟತೆಯನ್ನು ಗುರುತಿಸಿ, ದಾಖಲಿಸಿ, ಎಚ್ಚರಿಸುವುದಾಗಬೇಕಿದೆ. ಸಂಸ್ಕೃತಿ ಸಾಹಿತ್ಯದ ದಾಖಲೆಯು ಸಾಗಬೇಕಿ ರುವುದು ಹೀಗೆಯೇ. ಸಾಹಿತ್ಯ ಸಂಸ್ಕೃತಿಯನ್ನು ಕುರಿತು ಮಾತನಾಡುವಾಗ ಈ ಸಂದರ್ಭಕ್ಕೆ ಎರಡು ಮುಖ್ಯ ನೆಲೆಗಳನ್ನು ಗುರುತಿಸಬಹುದು.

೧. ಸಮಗ್ರತೆಯ ನೆಲೆ

೨. ಜಾತಿ ಆಧಾರಿತ ನೆಲೆ

ಸಾಹಿತ್ಯ ವೆನ್ನುವ ಎಲ್ಲವನ್ನು ಮೀರಿ ನೆಡೆಯುವ ಸೃಜನಶೀಲ ಪ್ರಕ್ರಿಯೆ ಸಮಗ್ರತೆಯ ಅರ್ಥವನ್ನು ಗ್ರಹಿಸಬೇಕಿರುವುದು ಈ ಹಿನ್ನೆಲೆಯಲ್ಲಿ. ಹಾಗೆಯೇ ಜಾತಿ ಅಥವಾ ಸಮುದಾಯ ತನ್ನನ್ನು ವಿಶಿಷ್ಟವೆಂದುಕೊಳ್ಳುವ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಮೂಲಕ ಸಾಹಿತ್ಯ ವಾಗುವುದು. ಅಂದರೆ ಅನುಭವವೂ ಇಲ್ಲಿ ಮೊದಲು ಸಮುದಾಯವನ್ನು ಪ್ರತಿನಿಧಿಸುವ ವೃಷ್ಟಿಯಾಗುತ್ತಲೇ ಇತರರನ್ನು ಒಳಗೊಳ್ಳುವ ಅಥವಾ ಇತರರೊಂದಿಗೆ ತನ್ನನ್ನು ಸಮೀಕರಿಸಿ ಸಹಜೀವನವನ್ನು ಪ್ರೇರೇಪಿಸುವ ಸಮಷ್ಟಿಯೂ ಆಗಿ ಬಿಡುತ್ತದೆ. ತಾನು, ತನ್ನ ಬದುಕು, ತನ್ನ ಸಮಾಜ, ಸಮುದಾಯ ಹೀಗೆಲ್ಲಾ ಪರಿಚಿತವಾದ ಸಂಸ್ಕೃತಿಯ ದಾಖಲೆ ಒಂದು ಬಗೆ ಯಾದರೆ, ತನ್ನ ಅನುಭವಗಳನ್ನು ಸೂಕ್ಷ್ಮವಾಗಿ, ಹಿನ್ನೆಲೆಯಾಗಿ ಒಳನೋಟಗಳ ರೂಪದಲ್ಲಿ, ಮುಂತಾಗಿ ಬಳಸಿಕೊಳ್ಳುವುದು ಮತ್ತೊಂದು ಬಗೆ.

ಎಂದಿಗೂ ಹೀಗೊಂದು ಜಾತಿಯ ಮಿತಿಯಲ್ಲಿ ಗುರುತಿಸಿಕೊಳ್ಳಲು ಬಯಸಿದ ಬರಗೂರು ರಾಮಚಂದ್ರಪ್ಪರನ್ನು ಇಲ್ಲಿ ಮುಖ್ಯವಾಗಿ ಉಲ್ಲೇಖಿಸಬೇಕು. ಕರ್ನಾಟಕದ ಪ್ರಗತಿಪರ ಚಳುವಳಿ ಬಂಡಾಯದ ಜೊತೆಗೆ ಗುರುತಿಸಿಕೊಂಡೆ ಸಂವೇದನಾ ಶೀಲತೆಯನ್ನು ನಿರಂತರವಾಗಿ ಕಾಯ್ದುಕೊಂಡು, ಸಾಮಾಜಿಕ ನ್ಯಾಯ ಪರಿಕಲ್ಪನೆಯ ಪ್ರತಿಪಾದಕರಾಗಿ ಈಹೊತ್ತಿಗೂ ಬದ್ಧತೆಯ ಹಾದಿಯಲ್ಲಿ ಸಾಗಬಯಸಿದ ಇವರು ಕವಿಯಾಗಿ, ಕತೆಗಾರರಾಗಿ, ಕಾದಂಬರಿಕಾರ ರಾಗಿ, ವಿಮರ್ಶಕರಾಗಿ, ಸಂಸ್ಕೃತಿ ಚಿಂತಕರಾಗಿ, ತಮ್ಮದೇ ವಿಶಿಷ್ಟ ನೆಲೆಯ ಛಾಪನ್ನು ಕನ್ನಡ ಸಾಹಿತ್ಯ, ಸಂಸ್ಕೃತಿಯ ಸಂದರ್ಭದಲ್ಲಿ ಮೂಡಿಸಿದ್ದಾರೆ. ನೊಂದವರ, ಶೋಷಿತರ, ಧ್ವನಿಯಾಗ ಬಹುದಾದ ಹತ್ತು ಹಲವು ಸಾಧ್ಯತೆಗಳ ಹುಡುಕಾಟದ ಬದ್ಧತೆಯನ್ನೇ ಸಾಹಿತ್ಯ ಚಿಂತನೆ ಯಾಗಿಸಿಕೊಂಡ ಬರಗೂರರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲಕ್ಕೆ ಉಪಸಂಸ್ಕೃತಿಯ ಚಿಂತನ ಮಾಲೆಯ ಹೊಸಬಗೆಯ ಆಲೋಚನೆಗಳೊಂದಿಗೆ ಈ ದೇಶದ ಬಹುಜನರ ವೈವಿಧ್ಯತೆಯ ಜೀವನ ಕ್ರಮಗಳ ಶೋಧನೆ ಮತ್ತು ದಾಖಲೆಯ ಮಹತ್ವದ ಕಾರ್ಯಕ್ಕೆ ಚಾಲನೆ ನೀಡಿ ಸಾಂಸ್ಕೃತಿಕ ಕ್ರಾಂತಿಗೂ ಮುನ್ನುಡಿ

ಬರೆದರು. ಈ ಹೊತ್ತಿನ, ಈ ನಾಡಿನ ಸಾಂಸ್ಕೃತಿಕ ಚರ್ಚೆಯ ಮಹತ್ವದ ಕಾಲದಲ್ಲಿ ಬರಗೂರರ ಈ ಬಗೆಯ ಪ್ರಯತ್ನ ಪ್ರಯೋಗಗಳ ಮಹತ್ವದ ಮೂಲ ಮತ್ತು ಆಕರಗಳಾಗಿವೆ. ಹೊಸ ಹೊಸ ಪರಿಕಲ್ಪನೆಗಳ ಹಿನ್ನೆಲೆಗೆ ದೀವಿಗೆಗಳಾಗಿವೆ.

ಸೂರ್ಯ, ಹುತ್ತ, ಒಂದು ಊರಿನ ಕತೆ, ಈಚಿನ ಶಬರಿ ಮೊದಲಾದ ಕಾದಂಬರಿಗಳು ಬಂಡಾಯದ ನೆಲೆಯ ಹೊಸ ಮನುಷ್ಯನ ಕನಸಿನ ಆವಿಷ್ಕಾರಗಳಾದರೆ, ಮರಕುಟಿಗ, ನೆತ್ತರಲ್ಲಿ ನೆಂದ ಹೂ, ಗುಲಾಮಗೀತೆ, ಕಾಂಟೆಸಾದಲ್ಲಿ ಕಾವ್ಯ ಮುಂತಾದ ಕವಿತಾ ಸಂಕಲನಗಳು ನೊಂದವರ ಎದೆಯ ದನಿಗಳಾಗಿ ನಾಳಿನ ಹಾದಿಗಳ ಹುಡುಕಾಟದ ಆಶಾವಾದಗಳಾಗಿ ಕಾಣುತ್ತವೆ. ಸಾಹಿತ್ಯವಷ್ಟೇ ಅಲ್ಲದೆ ಸಿನಿಮಾ ಕ್ಷೇತ್ರದಲ್ಲಿಯೂ ಬರಗೂರರ ಸಾಧನೆ ಅಪಾರ ವಾದುದು. ತಮ್ಮ ಸೃಜನಶೀಲ ಪ್ರತಿಭೆಯಿಂದ ಹಲವು ಪ್ರಯೋಗಗಳೊಂದಿಗೆ, ನಿರ್ದೇಶಕ ನಾಗಿ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಖ್ಯಾತಿ ಗಳಿಸಿದ್ದಾರೆ. ವ್ಯಕ್ತಿಯೇ ಒಂದು ಸಮುದಾಯದ ಅರ್ಥದಲ್ಲಿ, ಸಂಸ್ಕೃತಿಯ ಅರ್ಥದಲ್ಲಿ ಹೀಗೆ ಅಪಾರವಾಗಿ ಸಾಧಿಸು ವುದು ಕ್ರಿಯಾಶೀಲತೆಯ, ನಿರಂತರತೆಯ ಅರ್ಥಗಳೂ ಹೌದು.

ಈ ಸಮುದಾಯದಿಂದ ಸಾಧನೆಯೆಡೆಗೆ ಸಾಗಿದ ಮಹತ್ವದ ಮಹಿಳೆಯಾಗಿ ಕಮಲಾ ಹಂಪನಾ ಮುಖ್ಯರಾಗಿದ್ದಾರೆ. ಸುಮಾರು ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಕಮಲಾ ಅವರು, ಸ್ತ್ರೀ ಸಂವೇದನೆಯ ಮೂಲಧಾತುವಿನಂತೆ ಶೂದ್ರ ಪ್ರಜ್ಞೆಯ ಎಲ್ಲ ಸಾಧಿತ ಫಲಗಳ ಆಶಯದಂತೆಯೂ ಕಾಣಿಸುತ್ತಾರೆ.

ಕತೆ, ಪ್ರಬಂಧ, ಅನುವಾದ, ಸಂಪಾದನೆ, ಜೀವನ ಚರಿತ್ರೆ, ವಿಮರ್ಶೆ, ವೈಚಾರಿಕ ಬರಹ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿ ನಡೆಸಿದ ಕಮಲಾ ಹಂಪನಾ ಅವರ ಸಾಹಿತ್ಯ ಬದುಕಿನ ಅನುಭವ ಕೇಂದ್ರಿತ ನೆಲೆಯಿಂದಲೂ ಮಹತ್ವದ ಸಾಂಸ್ಕೃತಿಕ ದಾಖಲೆಗಳೇ ಆಗಿವೆ. ಬದುಕು, ಸಮಾಜ ಮತ್ತು ವ್ಯವಸ್ಥೆಗಳ ಮುಖಾಮುಖಿ ಇವರ ಸಾಹಿತ್ಯದ ಮುಖ್ಯ ಆಶಯ ಗಳಾಗಿ ಕಾಣಿಸುತ್ತವೆ.

ಬಂದಲಿ ಮತ್ತು ಬುಗುಡಿ ಸಂಕಲನಗಳು ಆಧುನಿಕ ವಚನಗಳಾಗಿವೆ. ಇವು ವಚನ ಪರಂಪರೆಯ ಮುಂದುವರಿಕೆಯ ಪ್ರಯತ್ನದಂತೆಯೂ ಕಾಣುತ್ತದೆನ್ನುವುದು ಉಲ್ಲೇಖಾರ್ಹ ವಾದ ವಿಚಾರ. ಜೈನ ಸಂಸ್ಕೃತಿಯ ಬಗೆಗೆ ವಿಶೇಷವಾದ ಆಸಕ್ತಿಯನ್ನು ಹೊಂದಿರುವ ಕಮಲಾ ಅವರು ತಮ್ಮ ಜೀವನ ಸಂಗಾತಿ ಹಂಪನಾ ಅವರೊಂದಿಗೆ ಸೇರಿ ಆ ನಿಟ್ಟಿನಲ್ಲಿ ಮತ್ತಷ್ಟು ಯಶಸ್ಸನ್ನು ಸಾಧಿಸಿದ್ದಾರೆ. ತನ್ಮೂಲಕ ಯಾವುದೇ ಸಮುದಾಯದ ಜನರಿಗಾದರೂ, ವಿಶೇಷ ವಾಗಿ ಮಹಿಳೆಗಾದರೂ ಮಾದರಿಯಾಗಬಹುದಾದ ದಿಟ್ಟ ಹೆಜ್ಜೆಗಳನ್ನು ಇಟ್ಟು ಸಾಗಿರುವ ಕಮಲಾ ಅವರು ಸಮಾಜದ ಸಂಸ್ಕೃತಿ ಸಂದರ್ಭದ ಮುಖ್ಯ ಮೈಲಿಗಲ್ಲೆನ್ನಬಹುದು.

ಹೀಗೆ ಅಕಾಡೆಮಿಕ ವಲಯದ ಪ್ರಭಾವಶಾಲಿ ಸಾಹಿತಿಗಳಾಗಿ ಬರಗೂರು ಮತ್ತು ಕಮಲಾ ಹಂಪನಾ ಅವರನ್ನು ಗುರಿತಿಸಿದ ನಂತರ ಜನಪ್ರಿಯ ಕಾದಂಬರಿಕಾರರಾಗಿ ನಾನ್ ಅಕಾಡೆಮಿಕ್ ಆದ ವಲಯದಲ್ಲಿ ಗುರುತಿಸಬಹುದಾದ ಲೇಖಕ, ಬಿ.ಎಲ್. ವೇಣು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕಾದಂಬರಿಯ ಪ್ರಪಂಚದ್ದೇ ಒಂದು ವಿಶಿಷ್ಟ ಪರಂಪರೆಯಿದೆ. ಅದು ತನ್ನ ಆರಂಭದ ಕಾಲದಿಂದ ಈ ಹೊತ್ತಿನವರೆಗೂ ತನ್ನ ವಿಶಿಷ್ಟತೆಯನ್ನು ಮತ್ತು ಜನಪ್ರಿಯತೆಯ ಸಂದರ್ಭದಲ್ಲಿಯೂ ವ್ಯಾಪ್ತಿಯನ್ನು ಉಳಿಸಿಕೊಂಡೇ ಬಂದಿದೆ. ಸ್ವರೂಪ, ಲಕ್ಷಣ, ಕಾಲ, ಪರಿಸರ ಇತ್ಯಾದಿಯಾದ ಭಿನ್ನ ಕಾರಣಗಳಿಗಾಗಿ ಅದು ಹಲವು ನೆಲೆಗಳಲ್ಲಿ ಗುರುತಿಸಲ್ಪಟ್ಟರೂ ಕರತಲರಂಗ ಭೂಮಿ ಎನ್ನುವ ಮಾತಿಗೆ ಅನ್ವರ್ಥವಾಗಿಯೇ ಉಳಿದು ಬೆಳೆದು ಬಂದಿದೆಯೆನ್ನ ಬಹುದು. ಕನ್ನಡದಲ್ಲಿ ಬಹಳಷ್ಟು ಕಾದಂಬರಿಕಾರರು ತಮ್ಮದೇ ಕಾರಣಗಳಿಗಾಗಿ ವಿಶಿಷ್ಟತೆ ಯನ್ನು ದಾಖಲಿಸಿಕೊಂಡಿದ್ದಾರೆ.

ಕನ್ನಡದ ಸಂದರ್ಭದಲ್ಲಿ ಓದುಗರನ್ನು ಹೆಚ್ಚು ಮಾಡಿದ ಪ್ರಕಾರವೆಂಬ ಹಿರಿಮೆಗೂ ಪಾತ್ರವಾದ ಈ ಕಾದಂಬರಿ ಕ್ಷೇತ್ರದಲ್ಲಿ ಮಹತ್ವದ ಹೆಸರಾಗಿಯೇ ಪ್ರಸ್ತುತರಾಗುವ ಬಿ.ಎಲ್. ವೇಣು ಮೂಲತಃ ಚಿತ್ರದುರ್ಗದವರು. ಬಹುಶಃ ತ.ರಾ. ಸುಬ್ಬರಾವ್ ಅವರ ನಂತರ ಪ್ರಮುಖ

ಕಾದಂಬರಿಕಾರರಾಗಿ ಜನಪ್ರಿಯತೆಯ ಮನ್ನಣೆಯನ್ನು ಗಳಿಸಿದವರಾದರು. ಮಹತ್ವದ ಐತಿಹಾಸಿಕ ವಸ್ತುವನ್ನು ಸಹ ತಮ್ಮ ಕೃಷಿಗೆ ಬಳಸಿಕೊಂಡಿದ್ದಾರೆ.

ಮನುಷ್ಯ ಕೇಂದ್ರಿತವಾದ, ಜಾತಿ, ವರ್ಗಗಳನ್ನು ಮೀರಿದ ಚಿಂತನೆಯ ನೆಲೆಯಲ್ಲಿ ಇವರ ಕಾದಂಬರಿಗಳ ವಸ್ತು ಚರ್ಚಿಸಲ್ಪಡುವಂತಹುದು. ಪ್ರೇಮಪರ್ವ, ಅಜೇಯ, ಪರಾಜಿತ, ಪ್ರೀತಿ ವಾತ್ಸಲ್ಯ, ಪ್ರೇಮಜಾಲ, ರಾಮರಾಜ್ಯದಲ್ಲಿ ರಾಕ್ಷಸರು, ಬೆತ್ತಲೆ ಸೇವೆ ಮೊದಲಾದ ಕೃತಿಗಳಲ್ಲಿ ತಮ್ಮ ಛಾಪನ್ನು ಒತ್ತಿ ಗುರುತಿಸಲ್ಪಟ್ಟ ಇದರ ಬಹಳಷ್ಟು ಕಾದಂಬರಿಗಳು ಸಿನಿಮಾಗಳಾಗಿ ಯಶಸ್ವಿಯೂ ಆಗಿವೆ ಎನ್ನುವುದಿಲ್ಲಿ ಉಲ್ಲೇಖಾರ್ಹ. ಕಾದಂಬರಿಕಾರ ರಾಗಿಯೂ ಜೊತೆಗೂ ಸುಮಾರು ಅರವತ್ತಕ್ಕೂ ಹೆಚ್ಚು ಸಿನಿಮಾಗಳಿಗೆ ಸಂಭಾಷಣೆಯನ್ನು ರಚಿಸಿರುವ ವೇಣು ತಮ್ಮ ಕೃತಿಗಳಲ್ಲಿ ಮಾನವ ಪ್ರೀತಿಯನ್ನು ಸಂಬಂಧಗಳ ಸೂಕ್ಷ್ಮತೆಯನ್ನು ರಾಜಕೀಯ ಕ್ಷುದ್ರತೆಗಳನ್ನು ಕುರಿತೇ ಮುಖ್ಯ ನೆಲೆಯಲ್ಲಿ ಅನಾವರಣ ಮಾಡುತ್ತಾರೆ. ಮೌಢ್ಯದ ವಿರುದ್ಧದ ಹೋರಾಟವೂ ಅವರ ನಿಲುವಿನ ಮುಖ್ಯ ಅಂಶಗಳಲ್ಲಿ ಒಂದು. ಗಂಡುಗಲಿ ಮದಕರಿನಾಯಕ, ರಾಜಾಬಿಚ್ಚುಗತ್ತಿ ಭರಮ್ಮಣ್ಣನಾಯಕ, ವೀರವನಿತೆ ಒನಕೆ ಓಬವ್ವ ಅವರ ಮುಖ್ಯವಾದ ಐತಿಹಾಸಿಕ ಕಾದಂಬರಿಗಳು ಅಭಿಮಾನದ ಚಿತ್ರದುರ್ಗ ಕೋಟೆಯ ಇತಿಹಾಸ ಮತ್ತು ಸಂಸ್ಕೃತಿಯ ಮುಖಾಮುಖಿಯ ನೆಲ ಪ್ರೀತಿ ಈ ಕೃತಿಗಳಲ್ಲಿ ಕಾಣಸಿಗುತ್ತದೆ. ನಾಯಕರ ಆಳ್ವಿಕೆಯ ವಿವರಣೆಯ ಮೂಲಕವೇ ಇದೊಂದು ಜನಪರ ಸಾಂಸ್ಕೃತಿಕ ದಾಖಲೆಯೂ ಆಗಿ ಸಹೃದಯವನ್ನು ಮುಟ್ಟುತ್ತದೆ. ಅಂದರೆ ಇತಿಹಾಸದ ಮುಖೇನ ವಾಸ್ತವವನ್ನು ಗ್ರಹಿಸುವ ಕೆಲಸವಿಲ್ಲಿ ನಡೆದಿದೆ.

ಹೀಗೆ ದಾಖಲಿಸಬಹುದಾದ ಕೆಲವು ಮಹತ್ವಗಳನ್ನು ಇಲ್ಲಿ ಸೂಕ್ಷ್ಮವಾಗಿ ಗಮನಿಸ ಲಾಗಿದೆ. ಮೂಲತಃ ಬಡತನ, ಅನಕ್ಷರತೆ, ಅಸಮಾನತೆ, ಶೋಷಣೆ ಎಂಬೆಲ್ಲಾ ಭಾರತೀಯ ಸಂದರ್ಭದ ಬಹಳಷ್ಟು ಲಕ್ಷಣಗಳಿಂದ ಹೊರತಾಗದ ಈ ಬೇಡ ಸಮುದಾಯ ತನ್ನ ಹಲವು ಪರ್ಯಾಯ ಹೆಸರುಗಳಲ್ಲಿ ವಾಲ್ಮೀಕಿ, ಬೇಡ, ತಳವಾರ, ಪರಿವಾರ, ನಾಯಕ ಇತ್ಯಾದಿ ಸಮುದಾಯದ ಒಗ್ಗಟ್ಟಿನ ಕೊರತೆಯಲ್ಲಿ, ನಾಯಕತ್ವದ ಗೊಂದಲಗಳ ನಡುವೆ ತನ್ನನ್ನು ಒಂದು ಸಾಂಘಿಕ ಸಂಸ್ಕೃತಿಯಾಗಿ, ಪ್ರಭಾವವಾಗಿ ದಾಖಲಿಸಿಕೊಳ್ಳುವಲ್ಲಿ ಕ್ರಮಿಸಬೇಕಾದ ದೂರ ಸಾಕಷ್ಟಿದೆ. ಆ ನಡುವೆಯೇ ವ್ಯಕ್ತಿತ್ವದ ಸೃಜನಶೀಲತೆಗಳು ಅಲ್ಲಲ್ಲಿ ಈ ಪ್ರಯತ್ನ ದಲ್ಲಿಯೂ ತೊಡಗಿಸಿಕೊಂಡಿವೆ. ಶೈಕ್ಷಣಿಕ, ಅಶೈಕ್ಷಣಿಕ ವಲಯಗಳಲ್ಲಿಯೂ ಈ ಬಗೆಯ ಪ್ರಯತ್ನಗಳು ನಿರಂತರವಾಗಿವೆ ಎನ್ನುವುದೇ ಸದ್ಯದ ಆಶಾವಾದ. ವಾಲ್ಮೀಕಿ ಬಂಧು, ವಾಲ್ಮೀಕಿ ಕರ್ನಾಟಕದಂತಹ ಪತ್ರಿಕೆಗಳು ಈ ನಿಟ್ಟಿನಲ್ಲಿ ಒಂದಷ್ಟು ಕೆಲಸ ಮಾಡುತ್ತಿವೆ. ಸಾಹಿತ್ಯ, ಸಂಶೋಧನೆ, ಸಂಸ್ಕೃತಿ ಮೊದಲಾದ ಕ್ಷೇತ್ರಗಳಲ್ಲಿ ಹತ್ತು ಹಲವಾರು ತಮ್ಮನ್ನು ಕ್ರಿಯಾಶೀಲ ವಾಗಿಯೂ ತೊಡಗಿಸಿಕೊಂಡಿದ್ದಾರೆ.

ಹರ್ತಿಕೋಟೆ ವೀರೇಂದ್ರ ಸಿಂಹ, ಡಾ. ತೇಜಸ್ವಿ ಕಟ್ಟೀಮನಿ, ಡಾ. ನೀಲಗಿರಿ ತಳವಾರ್, ಡಾ. ರಂಗರಾಜ ವನದುರ್ಗ, ಡಾ. ವಿರೂಪಾಕ್ಷ ಪೂಜಾರಹಳ್ಳಿ, ಡಾ. ಮಂಜುನಾಥ ಬೇವಿನ ಕಟ್ಟಿ, ಡಾ. ಜಿ. ಪ್ರಶಾಂತನಾಯಕ, ಡಾ. ವೈ.ಎಂ. ಸೈದಾಪುರ, ಸುಕನ್ಯಾ ಮಾರುತಿ ಮುಂತಾದ ವರನ್ನು ಇಲ್ಲಿ ಉದಾಹರಣೆಗಳಿಗಾಗಿ ಹೆಸರಿಸಬಹುದು. ಒಟ್ಟಾರೆಯಾಗಿ ಆಧುನಿಕತೆಯ ತುರ್ತು ಸವಾಲಿನದ್ದೇ ಆಗಿದೆ. ಏಕಕಾಲಕ್ಕೆ ಜಾಗತೀಕರಣ, ಆಧುನೀಕರಣ, ವಿಶ್ವಪ್ರಜ್ಞೆಗಳ ನಡುವೆ, ತನ್ನನ್ನು ಉಳಿಸಿಕೊಂಡೇ ಹೋರಾಡುವ ತುರ್ತು ಸಮುದಾಯದ ಎದುರಿಗಿದೆ. ಅಂದರೆ ಮೀರುವ ಕ್ರಿಯೆಯ ನಡುವೆಯೇ ಸೃಜನಶೀಲತೆಯ ಅಸ್ತಿತ್ವವನ್ನು ಕಂಡುಕೊಳ್ಳ ಬೇಕಾದ ಅನಿವಾರ್ಯತೆಯಿದೆ. ಕೇವಲ ಭಾವುಕತೆ ಸಾಹಿತ್ಯ, ಸಂಸ್ಕೃತಿಯಾಗುವುದಿಲ್ಲ ಎನ್ನುವ ಎಚ್ಚರದೊಂದಿಗೆ ಎಲ್ಲಾ ಒಗ್ಗೂಡಿ, ಸಮಾಜ, ರಾಜಕೀಯ, ಧಾರ್ಮಿಕ ಸಾಧನೆಗಳಿಗೆ ಮುಂದಾಗಬೇಕಿದೆ. ತನ್ಮೂಲಕ ಸಂಸ್ಕೃತಿಯ ವಿಶ್ಲೇಷಣೆ ನಡೆಸುವಂತಾಗಬೇಕು. ಅದರೊಂದಿಗೆ ಇಂದು ನಾಳಿನ ಪೀಳಿಗೆಗಳಿಗೆ ಸಂಸ್ಕೃತಿ ಪರವಾದ ಸ್ಪಷ್ಟ ಸಂದೇಶವನ್ನು ತಲುಪಿಸಬೇಕು. ಹಾಗಾಗಿಯೇ ಸಮಕಾಲೀನತೆಯ ಜವಾಬ್ದಾರಿಯೂ ಹೆಚ್ಚಿದೆ.

# ಬೇಡರ ಶೈಕ್ಷಣಿಕ ಸ್ಥಿತಿ-ಗತಿ

ವ್ಯಕ್ತಿತ್ವ ವಿಕಾಸಕ್ಕೆ ಮಾನವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಗೌರವಿಸುವುದಕ್ಕೆ ಶಿಕ್ಷಣ ಅಗತ್ಯವಾದುದು. ಶಿಕ್ಷಣ ಎನ್ನುವುದು ನಮ್ಮನ್ನು ನಾವು ಗೌರವಿಸಿಕೊಳ್ಳುವುದಕ್ಕೆ, ಹಾಗೆಯೇ ಇತರರು ನಮ್ಮನ್ನು ಗೌರವಿಸುವುದಕ್ಕೆ, ನಮ್ಮ ಸಮಾಜದ ಏಳ್ಗೆಗೆ ಇರುವ ಸಾಧನ. ಅದಕ್ಕಾಗಿಯೇ ಶಿಕ್ಷಣ ಎನ್ನುವುದು ಮೂಲಭೂತ ಹಕ್ಕು. ಈ ಹಕ್ಕು ಎಲ್ಲರಿಗೂ ಸಮಾನವಾಗಿ ಸಿಗುವಂತಾಗಬೇಕು. ಶಿಕ್ಷಣ ಉಚಿತವಾಗಿ ಸಿಗಬೇಕು. ಕೊನೆ ಪಕ್ಷ ಪ್ರಾಥಮಿಕ ಹಂತದಲ್ಲಾದರೂ ಸಿಗಲೇಬೇಕು. ತಾಂತ್ರಿಕ ಮತ್ತು ವೃತ್ತಿ ಶಿಕ್ಷಣಗಳು ಉಚಿತವಾಗಿ ದೊರಕು ವಂತಾಗಬೇಕು. ಆಗಲಾದರೂ ಶಿಕ್ಷಣದ ಅಗತ್ಯ ಮತ್ತು ಅರ್ಥ ತಿಳಿದೀತು.

ಇನ್ನು ಬೇಡರು ನಾಗರೀಕತೆಯಿಂದ ದೂರವಾಗಿ ಪ್ರತ್ಯೇಕವಾಗಿ ಬದುಕಿ ತಮ್ಮ ಸಾಂಸ್ಕೃತಿಕ ಅಪೂರ್ವತೆಯನ್ನು ಉಳಿಸಿಕೊಂಡು ಬಂದವರು. ಇಂಥ ಬೇಡ ಅಥವಾ ಬುಡಕಟ್ಟು  ಅಭಿವೃದ್ದಿಗಾಗಿ ವಿಶೇಷ ವಿವಿಧೋದ್ದೇಶ ಬುಡಕಟ್ಟು ಬ್ಲಾಕ್‌ಗಳನ್ನು ೨ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಸ್ಥಾಪಿಸಲಾಯಿತು. ಈ ಬುಡಕಟ್ಟಿನ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಅಭಿವೃದ್ದಿ ಈ ಬ್ಲಾಕ್‌ಗಳ ಉದ್ದೇಶವಾಗಿತ್ತು.

ಕರ್ನಾಟಕದ ಶೈಕ್ಷಣಿಕ ಸ್ಥಿತಿ-ಗತಿ ಹೇಳಬಹುದಾದರೆ ತೀರ ಹಿಂದುಳಿಯದೆ, ಅತಿ ಪ್ರಗತಿಯನ್ನು ಕಾಣದೆ ಮಧ್ಯಗತಿಯಲ್ಲಿ ಸಾಗುತ್ತಿದೆ. ಇಲ್ಲಿ ಗಮನಿಸಬಹುದಾದರೆ ಶೇ. ೬೭ರಷ್ಟಿರುವ ಸಾಕ್ಷರತೆಯಲ್ಲಿ ಪುರುಷರ ಸಾಕ್ಷರತೆ ಶೇ. ೭೬.೧೯, ಮಹಿಳೆಯರು ಶೇ. ೫೭.೪೫. ಇದರಲ್ಲಿ ಗ್ರಾಮೀಣ ಮಹಿಳೆಯ ಸಾಕ್ಷರತೆಯ ಪ್ರಮಾಣ ತೀರಾ ಕಡಿಮೆ.

ರಾಜ್ಯದ ೨೭ ಜಿಲ್ಲೆಗಳಲ್ಲಿಯೂ ಬೇಡ ಸಮುದಾಯ (ಪರಿಶಿಷ್ಟ ಪಂಗಡ) ಜನಸಂಖ್ಯೆ ಯಿದ್ದು, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. ೭ರಷ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆ ಯಿದೆ. ಈ ಸಮುದಾಯ ಸಾಂಪ್ರದಾಯಿಕ ಶಿಕ್ಷಣದ ವಿಚಾರವೂ ತೀರಾ ಇತ್ತೀಚಿನದೆಂದೇ ಹೇಳಬಹುದು. ಈ ಸಮುದಾಯ ಸಾಕ್ಷರತೆಯ ಪ್ರಮಾಣ ಶೇ. ೪೯ರಷ್ಟು. ಇದರಲ್ಲಿ ಶೇ. ೬೦ ಪುರುಷರ, ಶೇ. ೩೭ ಮಹಿಳೆಯರ ಸಾಕ್ಷರತೆಯಿದೆ.

ಈ ಸಮುದಾಯದ ಗ್ರಾಮೀಣ ಸಾಕ್ಷರತೆ ಶೇ. ೪೫.೩ರಷ್ಟಿದ್ದರೆ ಅದರಲ್ಲಿ ಪುರುಷರ ಸಾಕ್ಷರತೆ ಶೇ. ೫೬.೯ರಷ್ಟು ಮಹಿಳೆಯರದು ಶೇ. ೩೩.೩ರಷ್ಟು.

ಇನ್ನು ನಗರ ಪ್ರದೇಶದ ಸಾಕ್ಷರತೆ ಶೇ. ೬೪.೬ರಷ್ಟಿದೆ. ಪುರುಷರದು ಶೇ. ೭೪.೪ ಮಹಿಳೆಯರದು ಶೇ. ೫೪.೩. ಈ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಬೇಡರ ಶೈಕ್ಷಣಿಕ ಸ್ಥಿತಿ-ಗತಿ ಶೋಚನೀಯವಾಗಿದೆ. ಸರ್ಕಾರದ ಸೌಲಭ್ಯವಿದ್ದರೂ ಅದರ ಮಾಹಿತಿ ಸರಿಯಾಗಿ ಇವರಿಗೆ ಸಿಗುತ್ತಿಲ್ಲ.

ಜಿಲ್ಲಾವಾರು ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಶೈಕ್ಷಣಿಕ ಸ್ಥಿತಿ-ಗತಿಯ ಚಿತ್ರಣ ದೊರತೀತು. ಜನಸಂಖ್ಯೆಯಲ್ಲಿ ಕಡಿಮೆಯಿದ್ದರೂ ಶೇಕಡವಾರು ಸಾಕ್ಷರತೆಯ ಪ್ರಮಾಣದಲ್ಲಿ ಮುಂದಿರುವುದು ದಕ್ಷಿಣ ಕನ್ನಡ ಜಿಲ್ಲೆ. ಶೇ. ೭೩ರಷ್ಟಿರುವ ಸಾಕ್ಷರತೆಯಲ್ಲಿ.

ಪುರುಷರು – ಶೇ. ೮೦.೨

ಮಹಿಳೆಯರು – ಶೇ. ೬೫.೭

ಇದರಲ್ಲಿ ಗ್ರಾಮೀಣ ಸಾಕ್ಷರತೆ ಶೇ. ೭೧.೭

ನಗರ ಸಾಕ್ಷರತೆ ಶೇ. ೮೦.೭ರಷ್ಟಿದೆ.

ಮೂರು ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ರಾಯಚೂರು ಜಿಲ್ಲೆ ಅತಿ ಕಡಿಮೆ ಅಂದರೆ ಶೇ. ೨೯ರಷ್ಟು ಸಾಕ್ಷರತೆ ಪಡೆದಿದೆ. ಇದರಲ್ಲಿ

ಪುರುಷರು ಶೇ. ೪೧.೧

ಮಹಿಳೆಯರು ಶೇ. ೧೬.೯

ಇದರಲ್ಲಿ ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ. ೨೭.೮ರಷ್ಟು ನಗರ ಪ್ರದೇಶದ ಸಾಕ್ಷರತೆ ಶೇ. ೪೧.೮ರಷ್ಟು.

ರಾಜ್ಯದಲ್ಲೇ ಅತಿ ಹೆಚ್ಚು ಪರಿಶಿಷ್ಟ ವರ್ಗದ ಜನಸಂಖ್ಯೆಯನ್ನು ಹೊಂದಿರುವ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ಮೂರು ಲಕ್ಷದ ಎಪ್ಪತ್ತು ಸಾವಿರ ಜನಸಂಖ್ಯೆಯಿದೆ. ಶೈಕ್ಷಣಿಕತೆಯ ಸಾಕ್ಷರತೆಯ ಪ್ರಮಾಣ ಶೇ. ೪೧ ರಿಂದ ೪೨ ಮಾತ್ರ.

ಪುರುಷರ ಸಾಕ್ಷರತೆ ಶೇ. ೫೪

ಮಹಿಳೆಯರದು ಶೇ. ೨೯

ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ. ೩೭.೯

ನಗರ ಪ್ರದೇಶದಲ್ಲಿ ಶೇ. ೫೧.೭

ಇನ್ನು ಜನಸಂಖ್ಯೆಯ ದೃಷ್ಟಿಯಲ್ಲಿ ૩ನೇ ಸ್ಥಾನದಲ್ಲಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ೨ ಲಕ್ಷದ ೭೦ ಸಾವಿರ ಜನಸಂಖ್ಯೆಯಿದ್ದು ಸಾಕ್ಷರತೆಯ ಪ್ರಮಾಣ ಶೇ. ೫೩.೯.

ಮಹಿಳೆಯರ ಸಾಕ್ಷರತೆ ಶೇ. ೪೧.೫

ಪುರುಷರ ಸಾಕ್ಷರತೆ ಶೇ. ೬೫.೮

ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ. ೫೧.೬

ನಗರ ಪ್ರದೇಶದ ಸಾಕ್ಷರತೆ ಶೇ. ೭೧.೯

ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಪರಿಶಿಷ್ಟ ಪಂಗಡದ ಜನಸಂಖ್ಯೆಯನ್ನು ಹೊಂದಿರುವ ದಾವಣಗೆರೆ ಜಿಲ್ಲೆಯಲ್ಲಿನ ಸಾಕ್ಷರತೆಯ ಪ್ರಮಾಣ ಶೇ. ೫೪.೧.

ಪುರುಷರ ಸಾಕ್ಷರತೆ ಶೇ. ೬೪.೮

ಮಹಿಳೆಯರ ಸಾಕ್ಷರತೆ ಶೇ. ೪೩

ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ. ೫೨.೨

ನಗರ ಪ್ರದೇಶದ ಸಾಕ್ಷರತೆ ಶೇ. ೬೪.೨

ಮೈಸೂರು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೧೨ರಷ್ಟಿರುವ ಪರಿಶಿಷ್ಟ ಪಂಗಡದವರ ಸಾಕ್ಷರತೆ ಶೇ. ೪೬.೪.

ಪುರುಷರ ಸಾಕ್ಷರತೆ ಶೇ. ೫೫.೧

ಮಹಿಳೆಯರ ಸಾಕ್ಷರತೆ ಶೇ. ೩೭.೫

ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ. ೪೧.೯

ನಗರ ಪ್ರದೇಶದ ಸಾಕ್ಷರತೆ ಶೇ. ೬೭

ಕಳೆದ ಹತ್ತು ವರ್ಷಕ್ಕೆ ಹೋಲಿಸಿದರೆ ಶೇ. ೩೬.೧ ರಿಂದ ಶೇ. ೪೮.೩ರಷ್ಟು ಏರಿಕೆ ಯಾಗಿದ್ದರೂ ಮಹಿಳೆಯರ ಸಾಕ್ಷರತೆಯ ಪ್ರಮಾಣ ತೀರಾ ಕಡಿಮೆ ಇದೆ. ಹೀಗೆ ಕೆಲ ಜಿಲ್ಲೆಗಳ ಸಾಕ್ಷರತೆಯ ಪ್ರಮಾಣ ನೋಡಿದರೆ ಇನ್ನೂ ಶಿಕ್ಷಣದಿಂದ ವಂಚಿತ ಜನಸಂಖ್ಯೆಯೇ ಹೆಚ್ಚು. ಇದನ್ನು ಮನಗಂಡ ಸರ್ಕಾರ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಘಟಕಗಳನ್ನು ಮೈಸೂರು, ಕೊಡಗು, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಚಾಮರಾಜನಗರ ಸ್ಥಳಗಳಲ್ಲಿ ಸ್ಥಾಪಿಸಿದೆ.

ಇನ್ನೂ ಮುಖ್ಯವಾಗಿ ೨೦೦೧-೦೨ರಲ್ಲಿ ಹೊಸದಾಗಿ ಚಾಮರಾಜನಗರ, ಚಿತ್ರದುರ್ಗ, ಬೆಳಗಾಂ, ರಾಯಚೂರು ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಕಛೇರಿಗಳನ್ನು ಆರಂಭಿಸಬೇಕಿದೆ. ಅದರಲ್ಲೂ ಪರಿಶಿಷ್ಟ ಪಂಗಡದ ಜನ ಹೆಚ್ಚಿರುವ ಬಳ್ಳಾರಿ ಜಿಲ್ಲೆಯಲ್ಲಿ ಆಗಬೇಕಿದೆ.

ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದೆ. ಆದರೆ ಇತ್ತೀಚೆಗೆ ಪದವಿವರೆಗಿನ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವು ದರಿಂದ ಹಾಸ್ಟಲ್ ಸೌಲಭ್ಯವನ್ನು ಹೆಚ್ಚಿಸಬೇಕಾಗಿದೆ. ಎಲ್ಲಾ ತಾಲೂಕುಗಳಲ್ಲಿಯೂ ಈ ವರ್ಗದ ಮಹಿಳೆಯರಿಗೆ ಹಾಸ್ಟಲ್ ಸೌಲಭ್ಯ ದೊರೆಯುವಂತಾದರೆ ಮಹಿಳಾ ಸಾಕ್ಷರತೆಯ ಪ್ರಮಾಣ ಹೆಚ್ಚಬಹುದು.

ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಈ ಇಲಾಖೆಗಳಿಂದ ಆರ್ಥಿಕ ಸಹಾಯವಿದೆ. ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್., ಪಿಎಚ್.ಡಿ ಅಧ್ಯಯನ ಮಾಡುವವರಿಗೆ ವಿಶೇಷ ಆರ್ಥಿಕ ಸೌಲಭ್ಯವಿದೆ. ಸಿ.ಇ.ಟಿ ಪರೀಕ್ಷೆಗೆ ಕುಳಿತುಕೊಳ್ಳಬಯಸುವ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಮುಂಚಿತವಾಗಿ ಕೋಚಿಂಗ್ ತರಗತಿಗಳಿಗೆ ಕಳುಹಿಸುವ ವ್ಯವಸ್ಥೆಯೂ ಇದೆ. ಇದರಿಂದ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣವನ್ನು ಈ ವರ್ಗದವರು ಪಡೆಯಬಹುದಾಗಿದೆ. ಸುಮಾರು ೪೧ ವಿವಿಧ ವೃತ್ತಿಪರ ಟ್ರೇಡ್‌ಗಳಲ್ಲಿ ತರಬೇತಿಯನ್ನು ನವಚೇತನ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ನಿರುದ್ಯೋಗಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಜೊತೆಗೆ ಶಿಷ್ಯವೇತನವೂ ಸಹ ದೊರೆಯುತ್ತದೆ. ಹಾಗೆಯೇ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ ಅಂತಹ ವಿದ್ಯಾರ್ಥಿಗಳಿಗೆ ನಗದು ಬಹುಮಾನದ ಯೋಜನೆ ಯಿದೆ.

ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿರುವ, ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರು ಹಿಂದುಳಿದ ಪ್ರದೇಶಗಳಲ್ಲಿ ಶಾಲಾ-ಕಾಲೇಜುಗಳನ್ನು ಸ್ಥಾಪಿಸಬೇಕಿದೆ. ಬಳ್ಳಾರಿಯ ಅಲ್ಲೀಪುರದ ಹನುಮಂತಪ್ಪ, ಚಿತ್ರದುರ್ಗದ ಬೋರಪ್ಪ, ಮಾರಪ್ಪನವರು ಹಾಗೆಯೇ ಉತ್ತರ ಕರ್ನಾಟಕದ ಭಾಗದಲ್ಲಿ ಜಾರಕೀ ಹೊಳಿ ಕುಟುಂಬದವರು ರಾಜನಹಳ್ಳಿ ಸಂಸ್ಥಾನದ ಮಠದ ವತಿಯಿಂದ ಶಾಲಾ-ಕಾಲೇಜುಗಳು ಸ್ಥಾಪನೆಯಾಗಿವೆ. ಇನ್ನೂ ಉತ್ತಮ ಸ್ಥಿತಿಯಲ್ಲಿರುವವರು ಈ ಕ್ಷೇತ್ರದತ್ತ ಗಮನ ಹರಿಸಬೇಕಿದೆ.

ಬೇಡ ಸಮುದಾಯ ಹಿರಿತಲೆಮಾರಿನ ಶಿಕ್ಷಣ ಕ್ಷೇತ್ರದಲ್ಲಿ ಛಾಪು ಮೂಡಿಸಿರುವ ಬರಗೂರು ರಾಮಚಂದ್ರಪ್ಪ, ಕಮಲಾಹಂಪನಾ, ಬಿಸಿಲಯ್ಯನವರ ಮಾರ್ಗದರ್ಶನ ಮತ್ತು ಯುವ ಪೀಳಿಗೆಯಲ್ಲಿ ಹೆಸರುಗಳಿಸಿರುವ ಡಾ. ರಂಗರಾಜ್ ವನದುರ್ಗ, ವಿರೂಪಾಕ್ಷಿ ಪೂಜಾರಹಳ್ಳಿ, ತೇಜಸ್ವಿ ಕಟ್ಟೀಮನಿ ಅಲ್ಲದೆ ಉನ್ನತ ಶಿಕ್ಷಣದಲ್ಲಿ ಅಧ್ಯಾಪಕರಾಗಿರುವವರು ತಮ್ಮ ಸಮುದಾಯದ ಶೈಕ್ಷಣಿಕ ಸ್ಥಿತಿ-ಗತಿಯ ಕಡೆ ಗಮನ ಹರಿಸುತ್ತಿದ್ದಾರೆ. ಇನ್ನೂ ಗಮನ ಹರಿಸಬೇಕಾಗಿದೆ. ಪ್ರಾಥಮಿಕ, ಪ್ರೌಢ, ಉನ್ನತ, ತಾಂತ್ರಿಕ, ವೃತ್ತಿಪರ ಕೋರ್ಸಿಗಳ ಬಗ್ಗೆ ಇವರಿಗೆ ಮಾಹಿತಿ ನೀಡಬೇಕಿದೆ. ವಿದ್ಯಾರ್ಥಿಗಳ ಸಮಸ್ಯೆಗಳತ್ತ ಕೊಂಚ ಗಮನ ಹರಿಸಿ, ಸಾಧ್ಯವಾದಷ್ಟು ಮಾಹಿತಿ ನೀಡಬೇಕಿದೆ.

ಅಧಿಕಾರ ವರ್ಗದಲ್ಲಿರುವ, ಶಿಕ್ಷಣ, ಕಾನೂನು ಕ್ಷೇತ್ರದಲ್ಲಿ ಉನ್ನತ ಸ್ಥಿತಿಯಲ್ಲಿರುವವರು ಈ ಸಮುದಾಯದ ಶೈಕ್ಷಣಿಕ ಸ್ಥಿತಿ-ಗತಿಯ ಕಡೆ ಗಮನ ಹರಿಸದಿದ್ದರೆ ಈ ಸಮುದಾಯಕ್ಕೆ ಮೀಸಲಿರುವ ಸೌಲಭ್ಯಗಳು ಅನ್ಯರಪಾಲಾಗುವುದರಲ್ಲಿ ಸಂಶಯವಿಲ್ಲ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿರುವ ವಾಲ್ಮೀಕಿ ಅಧ್ಯಯನ ಪೀಠ ವತಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜನಾಂಗದ ಶೈಕ್ಷಣಿಕ ಸ್ಥಿತಿ-ಗತಿಯ ಬಗ್ಗೆ ವಿಚಾರಗೋಷ್ಠಿ ಮತ್ತು ಸರ್ಕಾರದಿಂದ ಸಿಗುವ ಸೌಲಭ್ಯ ಮತ್ತು ಇನ್ನೂ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸ ಬೇಕಿದೆ.

ಬೇಡ ಬುಡಕಟ್ಟಿನ ಪುರಾಣ ಪ್ರಸಿದ್ಧ ವ್ಯಕ್ತಿಗಳ, ಸಾಂಸ್ಕೃತಿಕ ನಾಯಕರ ಚರಿತ್ರೆಯನ್ನು ಪಠ್ಯಕ್ಕೆ ಅಳವಡಿಸುವಂತೆ ಆಗ್ರಹಿಸಬೇಕಿದೆ. ಸಮುದಾಯಕ್ಕೆ ಮೀಸಲಾದ ಮಾಹಿತಿಯನ್ನು ನೀಡಬಲ್ಲ ಪತ್ರಿಕೆಗಳು ಬೇಕಾಗಿದೆ. ಈಗಿರುವ ವಾಲ್ಮೀಕಿ ಬಂಧು, ವಾಲ್ಮೀಕಿ ಕರ್ನಾಟಕ ಜೊತೆಗೆ ಶೈಕ್ಷಣಿಕ ಮಾರ್ಗದರ್ಶನದ ಪತ್ರಿಕೆಗಳು ಅಗತ್ಯವಿದೆ. ಈ ನಿಟ್ಟಿನಲ್ಲಿ ಸಮಾಜದ ಉತ್ತಮ ಸ್ಥಿತಿಯಲ್ಲಿರುವವರು ಆಸಕ್ತಿ ವಹಿಸಬೇಕಿದೆ. ವಿಶ್ವವಿದ್ಯಾನಿಲಯದ ವಿವಿಧ ಅಕಾಡೆಮಿಗಳಿಗೆ ಆ ಕ್ಷೇತ್ರದಲ್ಲಿ ಹೆಸರುಗಳಿಸಿರುವ ಈ ಸಮುದಾಯದ ವಿದ್ವಾಂಸರಿಗೆ ಅವಕಾಶ ನೀಡಲು ಒಟ್ಟಾಗಿ ಆಗ್ರಹಿಸಬೇಕಾಗಿದೆ. ಹೀಗೆ ನಮಗೆ ಸಲ್ಲಬೇಕಾದದ್ದು ನಮಗೇ ಸಲ್ಲಿದರೆ ಈ ಸಮುದಾಯದ ಶೈಕ್ಷಣಿಕ ಸ್ಥಿತಿ-ಗತಿ ಸುಧಾರಣೆಯಾದೀತು.

## ಬೇಡರ ಆರ್ಥಿಕ ಸ್ಥಿತಿ-ಗತಿ

ಕನ್ನಡನಾಡಿನಲ್ಲಿ ಬೇಡ ಬುಡಕಟ್ಟು ಪೌರಾಣಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ವಾಗಿ ಭವ್ಯ ಪರಂಪರೆಯನ್ನು ಹೊಂದಿದೆ. ರಾಯಚೂರು, ಬಳ್ಳಾರಿ, ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಆಂಧ್ರ ಪ್ರದೇಶಕ್ಕೆ ಹೊಂದಿಕೊಂಡಿರುವಂತೆ ಬೇಡ ಸಮುದಾಯದ ಜನರು ಬಹುಸಂಖ್ಯೆಯಲ್ಲಿವಾಸವಾಗಿದ್ದಾರೆ. ಇವರು ಗಡಿಭಾಗದಲ್ಲಿ ಸಾಧಿಸಿರುವ ಸಾಹಸ ಸಿದ್ಧಿಗಳೆಲ್ಲವೂ ಪುರಾಣ-ಇತಿಹಾಸಕ್ಕೆ ಸಂಬಂಧಿ ಸಿದ್ದು, ಆಧುನಿಕ ಜೀವನದ ಸವಾಲುಗಳನ್ನು ಎದುರಿಸಿ ಬದುಕಲು ಬೇಕಾಗಿರುವ ಆರ್ಥಿಕ ಸ್ಥಿತಿ-ಗತಿಯಲ್ಲಿ ತುಂಬಾ ದುರ್ಬಲವೆಂದೇ ಹೇಳಬಹುದು. ಇದಕ್ಕೆ ಮುಖ್ಯಕಾರಣವೆಂದರೆ, ಶತಮಾನಗಳ ಕಾಲ ಬೇಡ ಸಮುದಾಯವು ನಾಡಿನಿಂದ ದೂರ ಉಳಿದು, ಅರಣ್ಯ ಪ್ರದೇಶ ಗಳಲ್ಲಿ ತಮ್ಮದೇ ಆದ ಆಚಾರ-ವಿಚಾರ ಸಂಪ್ರದಾಯಗಳನ್ನು ರೂಢಿಸಿಕೊಂಡು, ಜೀವನಾ ಧಾರಕ್ಕೆ ಪಶುಸಂಗೋಪನೆ-ಬೇಟೆಯನ್ನು ಅವಲಂಭಿಸಿ ವಲಸೆ ಜೀವನ ನಡೆಸಿರುವುದು. ಅರಣ್ಯ ಗಳು ನಾಶಹೊಂದಿದಂತೆಲ್ಲಾ ಬೇಡರು ನಾಡಿನೊಂದಿಗೆ ಸಂಪರ್ಕ ಬೆಳೆಯಿಸಿಕೊಂಡು ಬದುಕು ವುದು ಅನಿವಾರ್ಯವಾಯಿತು. ತಮ್ಮದೇ ಆದ ಜೀವನ ಮೌಲ್ಯಗಳ ನೆಲೆಯಲ್ಲಿ ಸ್ವಾವಲಂಭಿ ಬದುಕನ್ನು

ಬದುಕಿದ ಬೇಡರು ಶಿಕ್ಷಣ, ಬಂಡವಾಳ, ವ್ಯವಹಾರಜ್ಞಾನ ಮುಂತಾದವುಗಳಲ್ಲಿ ಹಿಂದುಳಿದುದರಿಂದ ನಾಡಿನಲ್ಲಿ ಪರಾವಲಂಭಿ ಬದುಕನ್ನು ಬದುಕಬೇಕಾಯಿತು.

ಆರ್ಥಿಕತೆಯ ಬಲಸಂವರ್ಧನೆಗೆ ಪೂರಕವಾದ ಕೃಷಿ. ಶಿಕ್ಷಣ, ವಾಣಿಜ್ಯ-ವ್ಯಾಪಾರ, ಉದ್ಯೋಗ ಮುಂತಾದವುಗಳಲ್ಲಿ ಬೇಡಸಮುದಾಯ ತುಂಬಾ ಹಿಂದುಳಿದಿದೆ. ಪರಿಣಾಮವಾಗಿ ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮುಂತಾದ ಮೂಲಭೂತ ಸೌಲಭ್ಯಗಳನ್ನು ಹೊಂದಿರದೆ ಕಡುಬಡತನವನ್ನು ಅನುಭವಿಸುತ್ತಿದೆ. ಬೇಡರ ಜೀವನ ಕ್ರಮ ಮತ್ತು ಜೀವನಾಧಾರಕ್ಕೆ ಅವಲಂಭಿಸಿರುವ ವೃತ್ತಿಗಳನ್ನೂ, ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಆದಂತಹ ಏಳು-ಬೀಳುಗಳನ್ನು ಅವಲೋಕಿಸಿದಾಗ ಆರ್ಥಿಕ ಸ್ಥಿತಿ-ಗತಿಯನ್ನು ಸ್ಪಷ್ಟವಾಗಿ ತಿಳಿಯಬಹುದು.

### ವ್ಯವಸಾಯ

ಬುಡಕಟ್ಟಿನ ಬೇಡರು ತಾವು ವಾಸಿಸುವುದಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಬಹುತೇಕ ಪ್ರದೇಶಗಳು ಅತ್ಯಂತ ಕಡಿಮೆ ಮಳೆ ಬೀಳುವಂತಹ ಗುಡ್ಡಗಾಡಿನ ಬಂಜರು ಭೂಪ್ರದೇಶ ಗಳಾಗಿವೆ. ೪-೫ ಎಕರೆ ಭೂಮಿಯನ್ನು ಹೊಂದಿರುವ ಸಣ್ಣ ರೈತರೇ ಅಧಿಕವಾಗಿದ್ದು, ನೂರಾರು ಎಕರೆ ಭೂಮಿಯನ್ನು ಹೊಂದಿರುವ ದೊಡ್ಡ ರೈತರು ತುಂಬಾ ವಿರಳ.ಇವರು ರಾಗಿ, ಜೋಳ, ಹುರುಳಿ, ಸಜ್ಜೆ, ನವಣೆ ಮುಂತಾದ ಸಾಮಾನ್ಯ ದವಸ ಧಾನ್ಯಗಳನ್ನು ಬೆಳೆಯುತ್ತಾರೆ. ಇತ್ತೀಚೆಗೆ ಶೇಂಗ, ಸೂರ್ಯಕಾಂತಿ, ಮೆಕ್ಕೆಜೋಳ, ವಾಣಿಜ್ಯ, ಬೆಳೆಗಳನ್ನು ಬೆಳೆದರೂ ಇವರು ವಾಸಿಸುವ ಹಟ್ಟಿ-ಹಳ್ಳಿಗಳಿಗೆ ಸಮೀಪವಾಗಿ ಮಾರುಕಟ್ಟೆ ಸೌಕರ್ಯವಿಲ್ಲದೆ ಸಾಲಪಡೆದ ಮುಲಾಜಿಗೆ ಸ್ಥಳೀಯ ಬಂಡವಾಳಗಾರರಿಗೆ ಇಲ್ಲವೆ ಅನಧಿಕೃತ ಸಂಚಾರಿ ದಲ್ಲಾಳಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಇವರ ಉಪಕಸಬು ಕುರಿ-ಮೇಕೆಗಳ ಸಾಕಾಣಿಕೆ ಮಾರಕ ರೋಗಗಳಿಂದ ಅವನತಿಯ ಹಾದಿಯಲ್ಲಿದೆ. ಸಕಾಲಕ್ಕೆ ಬಾರದ ಮಳೆ ಅವೈಜ್ಞಾನಿಕ ವ್ಯವಸಾಯಪದ್ಧತಿ, ಸರ್ಕಾರದ ಸೌಲತ್ತುಗಳು ತಲುಪದೆ ಇರುವುದು, ಸಾಲದ ಬಾಧೆ ಹಲವಾರು ಸಮಸ್ಯೆಗಳಿಂದ ಈ ಸಮುದಾಯದ ರೈತರ ಜೀವನ ಅತ್ಯಂತ ಶೋಚನೀಯವಾಗಿದೆ.

### ವ್ಯಾಪಾರ

ಬೇಡರಲ್ಲಿ ಶಿಕ್ಷಣ ಮತ್ತು ಬಂಡವಾಳದ ಕೊರತೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ವಹಿವಾಟು ನಡೆಸುವಂತಹ ವ್ಯಾಪಾರಗಾರರ ಸಂಖ್ಯೆ ಅತ್ಯಂತ ಕಡಿಮೆ. ಬಹಳಷ್ಟು ಜನರು ದೈನಂದಿನ ಜೀವನಾಧಾರಕ್ಕಾಗಿ ತರಕಾರಿ ಅರಣ್ಯದಲ್ಲಿ ಸಿಗುವ ಹಣ್ಣು- ಹಂಪಲು ಬೀಡಾ ಸ್ಟಾಲ್ ಮುಂತಾದ ಚಿಕ್ಕಪುಟ್ಟ ವ್ಯಾಪಾರಗಳಲ್ಲಿ ನಿರತರಾಗಿದ್ದಾರೆ. ಇತ್ತೀಚೆಗೆ ವಿದ್ಯಾವಂತ ಯುವಕರು ವ್ಯವಹಾರಜ್ಞಾನವುಳ್ಳವರಾಗಿದ್ದು, ದೊಡ್ಡ ಪ್ರಮಾಣದ ವ್ಯಾಪಾರ ಮಾಡಲು ಉತ್ಸಾಹಕರಾಗಿದ್ದರೂ ಬಂಡವಾಳದ ಕೊರತೆ ಅವರನ್ನು ಕುಗ್ಗಿಸಿ ನಿರಾಶೆಯನ್ನುಂಟುಮಾಡಿದೆ. ಆಸ್ತಿ-ಒಡವೆಗಳ ಆಧಾರ ಅಥವಾ ಬಂಡವಾಳಗಾರರ ಜಾಮೀನು ಇಲ್ಲದೆ ಬ್ಯಾಂಕ್ ಮತ್ತು ಸರ್ಕಾರಿ-ಸರ್ಕಾರೇತರ ಲೇವಾದೇವಿ ಹಣಕಾಸು ಸಂಸ್ಥೆಗಳು ಸಾಲವನ್ನು ನೀಡದಿರುವುದು ಈ ಸಮುದಾಯದ ವಿದ್ಯಾಂವತ ಯುವಕರಿಗೆ ಭ್ರಮನಿರಸನವನ್ನುಂಟುಮಾಡಿದೆ.

### ಶಿಕ್ಷಣ–ಸರ್ಕಾರಿ ಉದ್ಯೋಗ

ಬ್ರಿಟಿಷ್ ಸರ್ಕಾರ ವಿದ್ಯಾವಂತರಲ್ಲದ ನಾಯಕ ಬುಡಕಟ್ಟನ್ನು ನಿಕೃಷ್ಟವಾಗಿ ಕಂಡದ್ದಲ್ಲದೆ ಇವರ ವಾಸದ ನೆಲೆಗಳನ್ನು ಒಕ್ಕಲೆಬ್ಬಿಸಿ, ಅನೇಕ ಪಾಳೆಯಗಾರರ ಸಂಪತ್ತನ್ನು ಮುಟ್ಟು ಗೋಲು ಹಾಕಿಕೊಂಡ ಕಾರಣ ಈ ಬುಡಕಟ್ಟಿನ ಆರ್ಥಿಕ ದಿವಾಳಿತನಕ್ಕೆ ಕಾರಣವಾಯಿತು. ಉದ್ಯೋಗ ನೇಮಕಾತಿಯಲ್ಲಿ ಯಾವ ಪ್ರಾಶಸ್ತ್ಯವೂ ಇರಲಿಲ್ಲ. ನಾಯಕ ಬುಡಕಟ್ಟಿನವರು ಮಾತ್ರ ವಾಸವಾಗಿರುವ ಹಟ್ಟಿ-ಹಳ್ಳಿಗಳಲ್ಲಿ ಕಂದಾಯದ

ವಸೂಲಿಗಾಗಿ ಗೌಡ, ಶಾನಭೋಗ, ತಳವಾರ ಹುದ್ದೆಗಳು ಅನಿವಾರ್ಯವಾಗಿ ನೇಮಕವಾದವು. ಸದೃಢ ಮೈಕಟ್ಟು, ಧೈರ್ಯಸಾಹಸ ಪ್ರಮಾಣಿಕತೆಗಳ ಅರ್ಹತೆಯಿಂದ ಕೆಲವರು ಕಛೇರಿಗಳಲ್ಲಿ ಜವಾನರಾಗಿ, ವನಪಾಲಕರಾಗಿ ನೇಮಕಗೊಂಡರು.

ಸ್ವಾತಂತ್ರ್ಯ ಹೋರಾಟದಲ್ಲಿ ತನು-ಮನ-ಧನಗಳನ್ನು ಸಮರ್ಪಣೆ ಮಾಡಿದ ಈ ಬುಡಕಟ್ಟಿನ ಬಗ್ಗೆ ಸ್ವಾತಂತ್ರ್ಯ ನಂತರದ ಪ್ರಜಾಪ್ರಭುತ್ವ ಸರ್ಕಾರ ಸ್ವಲ್ಪವೂ ಗಮನ ಹರಿಸಲಿಲ್ಲ. ಇವರ ಸ್ಥಿತಿ-ಗತಿ ಕುರಿತು ಸಮೀಕ್ಷೆ ಮಾಡದಿರುವುದು ಯೋಜನೆಗಳನ್ನು ರೂಪಿಸ ದಿರುವುದು ಬೇಡ ಸಮುದಾಯದ ದೌರ್ಭಾಗ್ಯವೆಂದೇ ಹೇಳಬಹುದು. ೧೯೭೨ ರಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಮಾನ್ಯ ದೇವರಾಜ ಅರಸುರವರ ಸಾಮಾಜಿಕ ಕಳಕಳಿ ಯಿಂದಾಗಿ, ಖ್ಯಾತ ವಕೀಲರಾದ ಶ್ರೀ ಎಲ್.ಜಿ. ಹಾವನೂರ್‌ರವರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಲಾಯಿತು. ಈ ವರ್ಗಗಳ ಸಮಸ್ಯೆಗಳನ್ನು ತಿಳಿಯುವುದು, ಪರಿಹಾರವನ್ನು ಕಂಡುಕೊಳ್ಳುವುದೇ ಆಯೋಗದ ಮುಖ್ಯ ಉದ್ದೇಶವಾಗಿತ್ತು. ಆಯೋಗವು ೧೯೭೫ರಲ್ಲಿ ನಾಲ್ಕು ಸಂಪುಟಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿತು. ಆ ವರದಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬೇಡ ಬುಡಕಟ್ಟು ಒಟ್ಟು ಜನಸಂಖ್ಯೆ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ, ದರ್ಜೆವಾರು ಸರ್ಕಾರಿ ನೌಕರ ಸಂಖ್ಯೆ ಮುಂತಾದ ವಿಚಾರಗಳನ್ನು ತಿಳಿಸಿದ್ದಾರೆ. ನಾಯಕ ಸಮುದಾಯದ ಎಲ್ಲಾ ದರ್ಜೆ ನೌಕರರ ಸಂಖ್ಯೆ ಕೇವಲ ४३०೭.

ಹಾವನೂರ್ ವರದಿ ನಾಯಕ ಸಮಾಜಕ್ಕೆ ಸಂಜೀವಿನಿಯೆಂದೇ ಹೇಳಬಹುದು. ನಂತರ ಸಮಾಜ ಕಲ್ಯಾಣ ಇಲಾಖೆಯ ಸ್ಥಾಪನೆ ಜನಾಂಗದ ಶೈಕ್ಷಣಿಕ ಪ್ರಗತಿಗೆ ತುಂಬಾ ಸಹಕಾರಿ ಯಾಯಿತು. ನಾಯಕ ಸಮುದಾಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ, ಶೇಕಡ ३% ರಷ್ಟು ಮೀಸಲಾತಿ ನಿಗದಿಗೊಳಿಸಿದುದರಿಂದ ಉದ್ಯೋಗಕ್ಕೆ ಸೇರಿಕೊಂಡರು. ಇದರಿಂದ ಬೇಡ ಸಮುದಾಯದ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಿಸಿತು. ಈ ಸೌಲಭ್ಯದಿಂದ ಬಳ್ಳಾರಿ ಜಿಲ್ಲೆಯ ಜನತೆ ವಂಚಿತರಾದದ್ದು ಶೈಕ್ಷಣಿಕ-ಆರ್ಥಿಕವಾಗಿ ಹಿಂದುಳಿಯಲು ಕಾರಣವಾಯಿತು. ಹಲವು ವರ್ಷಗಳ ಹೋರಾಟದ ಫಲವಾಗಿ ೧೯೯೧ರಲ್ಲಿ ಬಳ್ಳಾರಿ ಜಿಲ್ಲೆಯ ನಾಯಕ (ಬೇಡ, ವಾಲ್ಮೀಕಿ) ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಯಿತು.

ಇತ್ತೀಚೆಗೆ ನಾಯಕ ಸಮುದಾಯವು ಶಿಕ್ಷಣದಲ್ಲಿ ಮುನ್ನಡೆಸಾಧಿಸುತ್ತಿದ್ದು, ಮರಳುಗಾಡಿನ ಓಯಾಸಿಸ್‌ನಂತೆ ಐ.ಎ.ಎಸ್ ಅಧಿಕಾರಿಗಳಾಗಿ ನೇಮಕವಾಗುತ್ತಿರುವುದು ಸಂತಸದ ಸಂಗತಿ. ಕರ್ನಾಟಕ ರಾಜ್ಯದಲ್ಲಿ ೬೫ ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ನಾಯಕ ಸಮುದಾಯ ಉದ್ಯೋಗದಲ್ಲಿ ನಿಗದಿಗೊಳಿಸಿರುವ ಶೇಕಡ ३%ರ ಮೀಸಲಾತಿ ಅತ್ಯಲ್ಪ. ಕೇಂದ್ರ ಸರ್ಕಾರದ ಮಾದರಿಯಲ್ಲಿ ಶೇಕಡ ೭%ರ ಮೀಸಲಾತಿಯನ್ನು ಅನುಸರಿಸಿದರೆ ಇವರ ಏಳಿಗೆಗೆ ಸಹಕಾರಿಯಾಗುತ್ತದೆ. ಆದ್ದರಿಂದ ಇದಕ್ಕೆ ಪಕ್ಷ ರಹಿತ ರಾಜಕೀಯ ಸಂಕಲ್ಪ, ಸಂಘ-ಸಂಸ್ಥೆಗಳ ಸಂಘಟನೆ, ಹೋರಾಟಗಳಿಂದ ಮೀಸಲಾತಿಗೆ ಪ್ರಯತ್ನಸಿ ಯಶಸ್ಸನ್ನು ಕಾಣಬೇಕಾಗಿದೆ.

**ಸಹಕಾ–ಸಾಮರಸ್ಯ ಬದುಕಿನ ಕೊರತೆ**

ಗ್ರಾಮೀಣ ಪ್ರದೇಶದ ಬೇಡ ಸಮುದಾಯದಲ್ಲಿ ಅಜ್ಞಾನ-ಬಡತನ ಬಹಳಷ್ಟಿದ್ದು ಪರಸ್ಪರ ವೈಷಮ್ಯ, ದ್ವೇಷ, ಅಸೂಯೆಗಳು ತಾಂಡವವಾಡುತ್ತಿವೆ. ಇವುಗಳ ಪರಿಣಾಮವಾಗಿ ಕಾಲಿಡಿದೆಳೆ ಯುವ ಪ್ರವೃತ್ತಿ ದಿನೇ ದಿನೇ ಹೆಚ್ಚಾಗಿದ್ದು ಸಹಕಾರ-ಸಾಮರಸ್ಯದ ಬದುಕಿಗೆ ಬರಬಂದಿದೆ. ಒಡೆದು ಆಳುವ ನೀತಿಯನ್ನು ಅನುಸರಿಸುವವರಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ರಕ್ಷಕರೇ ಭಕ್ಷಕರಾದರೆ ಉಳಿಗಾಲ ಇನ್ನೆಲ್ಲಿದೆ? ಹಾವು ತನ್ನ ಮೊಟ್ಟೆಯನ್ನು ತಾನೇ ತಿಂದು ಬದುಕುವಂತೆ ಸಮುದಾಯದ ಮುನ್ನಡೆಗೆ ವಾರಸುದಾರರಾದವರೇ ಹಣ, ಅಧಿಕಾರ, ಕೀರ್ತಿಗಾಗಿ ತಮ್ಮನ್ನು ತಾವು ಶೋಷಿಸುತ್ತಿರುವುದು ಆರ್ಥಿಕ, ಸಾಮಾಜಿಕ, ರಾಜಕೀಯ ಹಿನ್ನಡೆಗೆ ಪ್ರಮುಖ ಕಾರಣವಾಗಿದೆ.

ನಾಯಕರು ಪರಸ್ಪರ ಸಹಕಾರ-ಸಾಮರಸ್ಯದ ಬದುಕನ್ನು ರೂಪಿಸಿಕೊಂಡು ಸಂಘಟಿತ ರಾದರೆ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗೈದು ತಮ್ಮ ಅಸ್ತಿತ್ವವನ್ನು ಭದ್ರಗೊಳಿಸಿ ಕೊಳ್ಳಲು ಸಾಧ್ಯವಾಗುತ್ತದೆ.

ನಾಯಕರಲ್ಲಿ ಕೂಲಿ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದ್ದು, ಪ್ರತಿನಿತ್ಯ ಹೊಲಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ ಗಣಿಗಾರಿಕೆಯಲ್ಲಿ, ಸರ್ಕಾರಿ ಕಾಮಗಾರಿಗಳಲ್ಲಿ ಶ್ರಮಿಸುತ್ತಿದ್ದಾರೆ. ಇವರನ್ನು ಅಧಿಕಾರಿಗಳು, ಬಂಡವಾಳಗಾರರು ನಯವಾಗಿ ಶೋಷಣೆ ಮಾಡುತ್ತಿರುವುದರಿಂದ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ ಅಲ್ಲದೆ ಜೀವವಿಮೆ, ವಸತಿ, ಪೌಷ್ಟಿಕ ಆಹಾರ, ಔಷಧೋಪ ಕಾರ ಮುಂತಾದ ಸೌಲತ್ತುಗಳಿಲ್ಲದೆ ಹಗಲು-ರಾತ್ರಿ ದುಡಿದು ಅನಾರೋಗ್ಯದಿಂದ ಬಳಲಿ ಸಾಯುತ್ತಿದ್ದಾರೆ. ಇದರಿಂದ ಅನೇಕ ಕೂಲಿ-ಕಾರ್ಮಿಕ ಕುಟುಂಬಗಳು ನಿರ್ಗತಿಕವಾಗಿವೆ. ಇಂತಹ ಕುಟುಂಬಗಳಿಗೆ ಭದ್ರತೆಯನ್ನು ನೀಡಲು ಸರ್ಕಾರ ಮತ್ತು ಸಂಘ ಸಂಸ್ಥೆಗಳು ಸಹಕರಿಸಬೇಕಾಗಿದೆ.

**ದುಶ್ಚಟಗಳ ದಾಸ್ಯತೆ**

ಬೇಡ ಸಮುದಾಯವು ತಮ್ಮ ಆದರ್ಶ ಜೀವನ ಮೌಲ್ಯಗಳನ್ನು ಗಾಳಿಗೆ ತೂರಿ, ಆಧುನಿಕ ಮೋಜಿನ ಜೀವನಕ್ಕೆ ಮಾರುಹೋಗಿ, ದುಶ್ಚಟಗಳಿಗೆ ದಾಸರಾಗಿರುವುದೇ ಆರ್ಥಿಕ ದೀವಾಳಿ ತನಕ್ಕೆ ಕರಾಳ ಶಾಪವಾಗಿದೆ. ಇವರು ಶ್ರಮಜೀವಿಗಳು ಆದರೆ ದುಡಿದುದ್ದನ್ನು ಸದುಪಯೋಗ ಮಾಡಿಕೊಳ್ಳುವ ಜೀವನದ ಜಾಣ್ಮೆ ಬಹಳಷ್ಟು ಜನಕ್ಕಿಲ್ಲ. ದುಡಿತದ ಬಹುಭಾಗವನ್ನು ಮಧ್ಯಪಾನಕ್ಕೆ ವ್ಯಯಮಾಡುತ್ತಾರೆ. ಅಲ್ಲದೆ ಕೌಟುಂಬಿಕ ಸಮಸ್ಯೆಗಳಿಗಿಂತ ಕುಡಿತ, ಜೂಜು ಮುಂತಾದ ದುಶ್ಚಟಗಳಿಗಾಗಿ ಸಾಲ ಮಾಡುವುದರಿಂದ ಬಡತನ- ದಾರಿದ್ರ್ಯಗಳಿಂದ ಮೇಲೇಳಲಾಗುತ್ತಿಲ್ಲ. ಇದಕ್ಕೆ ಏಕೈಕ ಪರಿಹಾರ ಎಂದರೆ ಮಧ್ಯಪಾನ ನಿಷೇಧ ರಾಷ್ಟ್ರೀಯ ನೀತಿಯಾಗಬೇಕು. ಆಗ ಒಂದು ಸಮುದಾಯ ಮಾತ್ರವಲ್ಲ ಸಮಸ್ತ ಸಮಾಜವೇ ಏಳಿಗೆ ಹೊಂದಲು ಸಾಧ್ಯವಾಗುತ್ತದೆ. ವರ್ಷದಲ್ಲಿ ೩-೪ ತಿಂಗಳು ವ್ಯವಸಾಯದ ಕೆಲಸಗಳನ್ನು ಮುಗಿಸಿಕೊಂಡು ೮-೯ ತಿಂಗಳು ದುಡಿಮೆ ಇಲ್ಲದೆ ಕಾಲ ಕಳೆಯುತ್ತಾರೆ. ಅವರನ್ನು ದುಡಿಮೆಗೆ ತೊಡಗಿಸಿ, ಆರ್ಥಿಕ ಪ್ರಗತಿಗೆ ಅನುವಾಗುವಂತಹ ಯೋಜನೆಗಳನ್ನು ಸರ್ಕಾರ ಹಮ್ಮಿಕೊಳ್ಳ ಬೇಕಾಗಿದೆ. ಉದಾಹರಣೆಗೆ ಚಳ್ಳಕೆರೆಯ ಪ್ರಥಮ ದರ್ಜೆ ಕೃಷಿ ಮಾರುಕಟ್ಟೆ, ನೇರ್ಲಗುಂಟೆ ಕುರಿಸಂಗೋಪನೆ, ಉಳ್ಳಾರ್ತಿ ಪಶುಸಂಗೋಪನೆ, ಮಹದೇವಪುರದ ತೋಟಗಾರಿಗೆ-ಇವು ಆ ಭಾಗದ ಬೇಡ ಬುಡಕಟ್ಟಿನ ಆರ್ಥಿಕ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅದೇ ರೀತಿ ಘನ ಸರ್ಕಾರ ರಾಯಚೂರು ಬಳ್ಳಾರಿ, ಚಿತ್ರದುರ್ಗ, ಕೋಲಾರ, ತುಮಕೂರು ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ಖಂಡಿತ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ಛಾಯಾಗ್ರಹಣ, ಹೊಲಿಗೆ, ಬಡಿಗೆ, ಹೈನುಗಾರಿಕೆ, ರೇಷ್ಮೆ, ಎಲೆಕ್ಟ್ರಿಕಲ್, ಕಂಪ್ಯೂಟರ್ ಮುಂತಾದ ವೃತ್ತಿಪರ ತರಬೇತಿಗಳನ್ನು ಸರ್ಕಾರ ಈ ಸಮುದಾಯದ ವಿದ್ಯಾವಂತ ಯುವಜನರಿಗೆ ನೀಡಿ ವಿನಾಯಿತಿಯಲ್ಲಿ ಸಾಲಸೌಲಭ್ಯ ಒದಗಿಸಿದರೆ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸೂಚಿಸಿದಂತಾಗುತ್ತದೆ. ನಾಯಕ ಬುಡಕಟ್ಟು ಇತ್ತೀಚೆಗೆ ಶೈಕ್ಷಣಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಸಾಧಿಸಿರುವಂಥದ್ದು ನಿರಾಶದಾಯಕವೇನಲ್ಲ. ಬೇಗನ ಸಮಾಜದ ಮುಖ್ಯವಾಹಿನಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಅಸ್ತಿತ್ವದ ಭದ್ರತೆಯನ್ನು ನೆಲೆಗೊಳಿಸಿಕೊಳ್ಳಬೇಕೆಂದು ಕಾತರತೆಯಿಂದ ಸಮುದಾಯದ ಸಮಸ್ತ ಸಂಘ ಸಂಸ್ಥೆಗಳು ಶ್ರಮಿಸುತ್ತಿವೆ. ಆದರೆ ನಿಶ್ಚಿತ ಗುರಿಯನ್ನು ಮುಟ್ಟಬೇಕಾದರೆ ರಾಜಕೀಯ ದೃಢಸಂಕಲ್ಪದಿಂದ ಮಾತ್ರ ಸಾಧ್ಯ. ಆದ್ದರಿಂದ ಸಮುದಾಯದ ಸಾರಥ್ಯವನ್ನು ವಹಿಸಿಕೊಂಡಿರುವಂತಹ ರಾಜಕೀಯ ಧುರೀಣರು ತಮ್ಮ ಪಕ್ಷ ಭೇದಗಳನ್ನು ಮರೆತು, ಸಮಾಜ ಸುಧಾರಕರನ್ನು, ಬುದ್ದಿಜೀವಿಗಳನ್ನು ಜೊತೆಗೂಡಿಸಿಕೊಂಡು ಪ್ರಾಣಿಕವಾಗಿ ಹೋರಾಡಿದರೆ ಆರ್ಥಿಕ ಸಬಲೀಕರಣ ಖಂಡಿತ ಸಾಧ್ಯ. ಒಬ್ಬನಿಗಾಗಿ ಎಲ್ಲರೂ ಎಲ್ಲರಿಗಾಗಿ ಒಬ್ಬನು ಎಂಬ ತತ್ವ ದಿವ್ಯ ಮಂತ್ರವಾಗಿ, ಸಹಕಾರ ತತ್ವ, ಕಾಯಕತತ್ವಗಳನ್ನು ಮೈಗೂಡಿಸಿಕೊಂಡು ಸಂಘಟನೆ, ಹೋರಾಟಗಳಿಂದ ಸಮುದಾಯವು ತ್ವರಿತಗತಿಯಲ್ಲಿ ನಿಶ್ಚಿತ ಗುರಿಯನ್ನು ತಲುಪಲಿ ಎಂದು ಆಶಿಸೋಣ.

# ವಿಜಯನಗರ ಪೂರ್ವಕಾಲೀನ ಬೇಡರು

# (ಭೂಮಿಯ ಸ್ವರೂಪ ಕಸುಬು ಆಹಾರ ಜನ)

ಭಾರತದಲ್ಲಿ ಐತಿಹಾಸಿಕ ಬರವಣಿಗೆಗಳು ವಸಾಹತುಶಾಹಿ ಆಡಳಿತದೊಂದಿಗೆ ಆರಂಭಗೊಂಡವು. ಮೊದಮೊದಲು ಪಾಶ್ಚಿಮಾತ್ಯರು ತಮ್ಮ ಆಡಳಿತದ ಭದ್ರತೆಗಾಗಿ ಮತ್ತು ಅದನ್ನು ಮುಂದುವರಿಸುವ ಉದ್ದೇಶದಿಂದ ಇಲ್ಲಿಯ ಜನರ ಭಾಷೆ, ಸಂಪ್ರದಾಯ, ಜನಾಂಗ, ಕಾನೂನು ಕಟ್ಟಲೆಗಳನ್ನು ಅಭ್ಯಸಿಸತೊಡಗಿದರು. ಇದರ ನಂತರ ಅವರು ರಾಜಕೀಯ ಇತಿಹಾಸಕ್ಕೆ ಹೆಚ್ಚು ಒತ್ತುಕೊಟ್ಟರು. ಕ್ರಮೇಣವಾಗಿ ರಾಜಕೀಯ ಇತಿಹಾಸದ ಜೊತೆಗೆ ಸಾಮಾಜಿಕ, ಆರ್ಥಿಕ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಗಮನ ಹರಿಸಲಾ ರಂಭಿಸಿದರು. ಇದರೊಂದಿಗೆ ದೇಶಿಯ ಬರವಣಿಗೆಗಳು ಸಹ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟವು. ಇಪ್ಪತ್ತನೆಯ ಶತಮಾನದ ಅರ್ಧ ಭಾಗದಿಂದ ರಾಜಮನೆತನಗಳ ಕೇಂದ್ರೀಕೃತ ಇತಿಹಾಸ ಬಿಟ್ಟು ಸಮಾಜದ ಇತರ ವರ್ಗಗಳ ಅಧ್ಯಯನವು ಮಂದಗತಿಯಲ್ಲಿ ಪ್ರಾರಂಭವಾಯಿತು.

[1]ಇದರ ಫಲವಾಗಿ ನಂತರದ ದಶಕಗಳಲ್ಲಿ ಇತಿಹಾಸ ಲೇಖನದ ಸ್ವರೂಪದಲ್ಲಿ ಗಣನೀಯ ಪ್ರಮಾಣದ ಬದಲಾವಣೆಗಳು ಕಾಣಲಾರಂಭಿಸಿದವು.[2]ಇತ್ತೀಚಿನ ದಿನಗಳಲ್ಲಿ ಇತಿಹಾಸ, ಜನಾಂಗೀಯ ಮತ್ತು ಸಾಂಸ್ಕೃತಿಕ ಅಧ್ಯಯನಗಳು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿವೆ. ಈ ಲೇಖನದಲ್ಲಿ ಕರ್ನಾಟಕ ಬುಡಕಟ್ಟು ಜನಾಂಗಗಳಲ್ಲಿ ಅತ್ಯಂತ ಪ್ರಮುಖವಾದ ಮತ್ತು ಪ್ರಾಚೀನವಾದ ಬೇಡ (ನಾಯಕ)[3] ಬುಡಕಟ್ಟಿನ ಆರ್ಥಿಕ ಸ್ಥಿತಿ-ಗತಿಗಳ ಸ್ವರೂಪ ವನ್ನು ಪ್ರಮುಖವಾಗಿ ಪರಿಶೀಲಿಸಲಾಗುವುದು. ಒಂದು ಜನಾಂಗ/ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ತಿಳಿದುಕೊಳ್ಳಬೇಕಾದರೆ ಅವರ ಆರ್ಥಿಕ ಹಿನ್ನೆಲೆ ಅತ್ಯಾವಶ್ಯಕ. ಒಂದು ಜನಾಂಗದ ಆರ್ಥಿಕ ವ್ಯವಸ್ಥೆಯನ್ನು ತಿಳಿದುಕೊಳ್ಳಬೇಕಾದರೆ ಆ ಜನಾಂಗದ ನೆಲೆಗಳು (ವಾಸಿಸುವ ಸ್ಥಳ), ಮೂಲ ವೃತ್ತಿ ಹಾಗೂ ಆ ಕಸುಬನ್ನು ಮಾಡಲು ಬಳಸುತ್ತಿದ್ದ ಸಲಕರಣೆ ಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಕಾರ್ಲ್ ಮಾರ್ಕ್ಸ್‌ರ ಸಮಾಜವಾದದ ಸಿದ್ಧಾಂತದ ಪ್ರಕಾರ ಭೌತಿಕ ವಸ್ತುಗಳು ಒಬ್ಬ ವ್ಯಕ್ತಿಯ/ಸಮಾಜದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಯನ್ನು ನಿರ್ಧರಿಸುತ್ತವೆ. ಏಕೆಂದರೆ ಉತ್ಪಾದನಾ ಸಾಧನಗಳು ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಬದಲಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಯಾರಲ್ಲಿ ಹೆಚ್ಚು ಉತ್ಪಾದನಾ ಸಾಮರ್ಥ್ಯ ಅಥವಾ ಸಾಧನಗಳು ಇದ್ದವೋ ಅವರು ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಹೊಂದಲು ಸಾಧ್ಯವಾಯಿತು. ಉತ್ಪಾದನಾ ಸಾಧನಗಳನ್ನು ಹೊಂದದವರು ಅದೇ ಸಮುದಾಯಕ್ಕೆ ಸೇರಿದ್ದರೂ ಕೂಡ ಆ ಸಮುದಾಯದಲ್ಲಿಯೇ ಅತ್ಯಂತ ಕೀಳುಮಟ್ಟದ (ಕೆಳಸ್ತರದ) ಸ್ಥಾನಮಾನಗಳನ್ನು ಹೊಂದುವಂತಾಯಿತು. ಅಂತಹವರನ್ನು ಅದೇ ಸಮುದಾಯ ದವರು ಶೋಷಣೆ ಮಾಡುವುದರ ಜೊತೆಗೆ ಉನ್ನತ ವರ್ಗದ/ಜಾತಿಯ ಸಮುದಾಯದವರು ಸಹ ಶೋಷಣೆಗೈದರು. ಎಲ್ಲಿಯವರೆಗೆ ಈ ವರ್ಗ ತನ್ನ ಉತ್ಪಾದನಾ ಶಕ್ತಿಯನ್ನು ಮತ್ತು ಸಾಧನಗಳನ್ನು ತನ್ನದಾಗಿಸಿಕೊಳ್ಳಲಿಲ್ಲವೋ ಅಲ್ಲಿಯವರೆಗೂ ಅದು ಎಲ್ಲಾ ರೀತಿಯ ಸಮುದಾಯಗಳಿಂದ ಶೋಷಿಸಲ್ಪಟ್ಟಿತು. ಈ ಲೇಖನದ ಕಾಲದ ಚೌಕಟ್ಟನ್ನು ಪ್ರಾಚೀನ ಕಾಲದಿಂದ ಸುಮಾರು ಕ್ರಿ.ಶ. ೧೩-೧೪ನೇ ಶತಮಾನದವರೆಗೆ ಮಿತಿಗೊಳಿಸಿ ಅಂದಿನ ಆರ್ಥಿಕ ಸ್ಥಿತಿ-ಗತಿಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಇದನ್ನು ರಚಿಸಲು ಮುಖ್ಯವಾಗಿ ಶಾಸನ ಗಳು, ಕೈಫಿಯತ್ತುಗಳು ಮತ್ತು ಸಮಕಾಲೀನ ಸಾಹಿತ್ಯ ಕೃತಿಗಳನ್ನು ಬಳಸಿಕೊಳ್ಳಲಾಗಿದೆ.

ಬೇಡ ಬುಡಕಟ್ಟಿನವರು ಬೇರುಗಳನ್ನು ಪೌರಾಣಿಕ ಕಾಲದ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಕಾಣಬಹುದು. ಆದಿಕಾವ್ಯವಾದ ರಾಮಾಯಣ ವನ್ನು ರಚಿಸಿದ ವಾಲ್ಮೀಕಿ ಮತ್ತು ರಾಮನಿಗೆ ಹಣ್ಣುಹಂಪಲು ನೀಡಿದ ಶಬರಿ ಹಾಗೂ ಮತ್ತೊಂದು ಮಹಾಕಾವ್ಯ ರಚಿಸಿದ ವ್ಯಾಸ ಮತ್ತು ದ್ರೋಣಾಚಾರ್ಯರಲ್ಲಿ ಬಿಲ್ಲು ವಿದ್ಯೆ ಕಲಿತ ಏಕಲವ್ಯನು ಬೇಡ ಬುಡಕಟ್ಟಿಗೆ ಸೇರಿದವರೆಂದು ಪ್ರತೀತಿ ಇದೆ. ಮಹಾಭಾರತದ ಕಾಲದಲ್ಲಿ ಬೇಟೆಗಾರರನ್ನು ಪುಲಿಂದ, ನಿಷಾದ, ಕಿರಾತ, ವ್ಯಾಧ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ಬೇಡ ಬುಡಕಟ್ಟು ಇಡೀ ಮಾನವ ಸಮುದಾಯದ ಹಲವು ಭಾಗಗಳಲ್ಲಿಒಂದು ಭಾಗ ಮಾತ್ರ. ಮಾನವ ಸಂಸ್ಕೃತಿ ಪೂರ್ವೇತಿಹಾಸ ಕಾಲದಲ್ಲಿ ಆರಂಭಗೊಂಡು ಕಾಲಾಂತರದಲ್ಲಿ ಹಲವು ಮಾರ್ಪಾಟುಗಳಿಗೆ ಒಳಗಾಯಿತು. ಹಳೆ ಶಿಲಾಯುಗದಲ್ಲಿ ಇಡೀ ಮಾನವನ ಮುಖ್ಯ ಕಸುಬು ಬೇಟೆಗಾರಿಕೆಯಾಗಿತ್ತು. ಈ ಅವಧಿಯಲ್ಲಿ ಮಾನವ ಅಲೆಮಾರಿಯಾಗಿದ್ದು, ಬೆಟ್ಟಗಳ ಕಲ್ಲಾಸರೆಗಳಲ್ಲಿ ಮತ್ತು ಗುಹೆಗಳಲ್ಲಿ ವಾಸಿಸುತ್ತಿದ್ದನು. ಬೆಟ್ಟಗುಡ್ಡಗಳೇ ಅವನ ಚಟುವಟಿಕೆಯ ಕೇಂದ್ರಗಳಾಗಿದ್ದವು. ಏಕೆಂದರೆ ಅವು ಅಂದಿನ ಮಾನವನಿಗೆ ಬೇಕಾದ ವಸತಿ, ಕಲ್ಲಿನ ಆಯುಧಗಳು ಹಾಗೂ ಆಹಾರವನ್ನು (ಪ್ರಾಣಿ, ಪಕ್ಷಿಗಳು) ಒದಗಿಸುವ ನೆಲೆಗಳಾಗಿದ್ದವು. ಅದಕ್ಕಾಗಿಯೇ ನಾವು ಇಂದಿಗೂ ಸಹ ಕರ್ನಾಟಕದ ಹಲವು ಭಾಗಗಳಲ್ಲಿ ಬೆಟ್ಟಗುಡ್ಡಗಳ ಸಾಲಿನಲ್ಲಿರುವ ಕಲ್ಲಾಸರೆಗಳಲ್ಲಿ, ಗುಹೆಗಳಲ್ಲಿಅಂದಿನ ಮಾನವ ಬಿಡಿಸಿದ ಕೆಂಪು, ಬಿಳಿ ಮತ್ತು ಕಪ್ಪುವರ್ಣಚಿತ್ರಗಳನ್ನು ಕಾಣಬಹುದು.[4] ಈ ವರ್ಣಚಿತ್ರಗಳು ಹೆಚ್ಚಾಗಿ ಬೇಟೆಯ ಚಿತ್ರಣವನ್ನು ಹೊಂದಿವೆ. ಈ ವರ್ಣಚಿತ್ರಗಳಲ್ಲಿ ವಿವಿಧ ರೀತಿಯ ಪ್ರಾಣಿಗಳನ್ನು ಮತ್ತು ಬೇಟೆಯ ಆಯುಧಗಳನ್ನು ಕಾಣಬಹುದು. ಈ ಹಂತದ ಜೀವನವನ್ನು ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಿಸುವ ಹಂತ ಎಂದು ಪರಿಗಣಿಸಲಾಗಿದೆ. ಈ ಹಂತದಲ್ಲಿ ಮಾನವನ ಆರ್ಥಿಕ ಜೀವನವು ಕೇವಲ ದೈನಂದಿನ ಹಸಿವನ್ನು ನೀಗಿಸಿಕೊಳ್ಳುವುದಾಗಿತ್ತು. ಸಮುದಾಯ ಸಹ ಬೇಟೆಯು ಅಂದಿನ ಪ್ರಮುಖ ಆರ್ಥಿಕ ವ್ಯವಸ್ಥೆಯಾಗಿತ್ತು. ಕಾಡುಪ್ರಾಣಿಗಳನ್ನು ಬೇಟೆಯಾಡುವುದು ಅನಿವಾರ್ಯವಾದ್ದರಿಂದಲೂ ಹಾಗೂ ಬೇಟೆಯ ಸಾಧನಗಳು ಹೆಚ್ಚು ತಾಂತ್ರಿಕತೆಯಿಂದ ಕೂಡಿರದೆ ಇದ್ದುದರಿಂದಲೂ ಹಲವಾರು ಜನ ಒಟ್ಟಿಗೆ ಸೇರಿ ಬೇಟೆಯಾಡು ವುದು ಅನಿವಾರ್ಯವಾಗಿತ್ತು. ಈ ರೀತಿಯ ಬದುಕನ್ನು ಇಂದಿಗೂ ಬೇಡ ಬುಡಕಟ್ಟಿನಲ್ಲಿ ಕೆಲವು ವಿಶೇಷ ಸಂದರ್ಭಗಳಲ್ಲಿ ಸಾಂಕೇತಿಕವಾಗಿ ಕಾಣಬಹುದು.

ನವಶಿಲಾಯುಗದಲ್ಲಿ ಮಾನವ ಅಲೆಮಾರಿ ಜೀವನವನ್ನು ತ್ಯಜಿಸಿ ಬೆಟ್ಟಗುಡ್ಡಗಳನ್ನು ತೊರೆದು ಬೆಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಒಂದೆಡೆ ವಾಸಿಸತೊಡಗಿದನು. ಈ ಹಂತದಲ್ಲಿ ಬೇಟೆಯ ಜೊತೆಗೆ ಕೃಷಿ ಮತ್ತು ಪಶುಪಾಲನೆಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡನು. ಆದ್ದರಿಂದ ಜೀವನ ಶೈಲಿಯಲ್ಲಿ ವೈವಿಧ್ಯತೆಗಳು ಹುಟ್ಟಿಕೊಂಡವು. ಹೀಗಾಗಿ ಈ ಹಂತದಲ್ಲಿ ಯಾರು ಬೇಟೆಗಾರರು, ಯಾರು ಕೃಷಿಕರು ಮತ್ತು ಯಾರು ಪಶುಪಾಲಕರು ಎಂದು ನಿಖರವಾಗಿ ಗುರುತಿಸುವುದು ಕಷ್ಟಕರವಾದ ಕೆಲಸ. ಸಾಮಾನ್ಯವಾಗಿ ಎಲ್ಲರೂ ತಮ್ಮ ದಿನನಿತ್ಯದ ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ಕೃಷಿ ಮತ್ತು ಪಶುಪಾಲನೆಯಲ್ಲಿ ತೊಡಗಿಸಿ ಕೊಂಡಿದ್ದರೂ ಬೇಟೆಯನ್ನು ತ್ಯಜಿಸಿರಲಿಲ್ಲವೆಂದು ಕಂಡುಬರುತ್ತದೆ.

ಕ್ರಿ.ಪೂ. ೧೦೦೦ ದಿಂದ ಅಂದರೆ ಬೃಹತ್ ಶಿಲಾಯುಗದಿಂದ ಮಾನವನ ವಿವಿಧ ಕಸುಬುಗಳನ್ನು ಗುರುತಿಸಲು ಸಾಕಷ್ಟು ಆಧಾರಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ : ಬೃಹತ್ ಶಿಲಾಗೋರಿಗಳಲ್ಲಿ ದೊರಕಿರುವ ಅಸ್ಥಿಪಂಜರಗಳು, ಮಡಕೆ ಚೂರುಗಳು, ಕಬ್ಬಿಣದ ಆಯುಧಗಳು, ಕಲ್ಲು ಚಪ್ಪಡಿಗಳು, ಆಹಾರ ಧಾನ್ಯಗಳು ಮತ್ತಿತರ ವಸ್ತುಗಳು. ಇವುಗಳ ಆಧಾರದ ಮೇಲೆ ಸುಮಾರು ಕ್ರಿ.ಪೂ.೮೦೦ ರಿಂದ ಸಮಾಜದಲ್ಲಿ ಕಲ್ಲುಕುಟಿಗರು, ಕುಂಬಾರರು, ಕಮ್ಮಾರರು, ಅಕ್ಕಸಾಲಿಗರು, ಕೃಷಿಕರು, ಬೇಟೆಗಾರರು ಮತ್ತಿತರ ವರ್ಗಗಳಿದ್ದು ದನ್ನು ಗುರುತಿಸಬಹುದು. ಇದರಿಂದ ಅಂದಿನ ಸಮಾಜವು ಹಲವು ಸ್ತರಗಳಿಂದ ಕೂಡಿದ್ದಾ ಗಿತ್ತು ಎನ್ನಬಹುದು. ಬೃಹತ್ ಶಿಲಾಗೋರಿಗಳಲ್ಲಿ ದೊರಕಿರುವ ಕಬ್ಬಿಣದ ಆಯುಧಗಳಾದ ಈಟಿ, ಭರ್ಜಿ, ಖಡ್ಗ ಮುಂತಾದವುಗಳನ್ನು ಬಹುಶಃ ಕದನಕ್ಕಾಗಲಿ ಅಥವಾ ಬೇಟೆಗಾಗಲಿ ಬಳಸಿರಬಹುದು.[5] ಬೃಹತ್ ಶಿಲಾಯುಗದ ನಿರ್ಮಾಪಕರು ಪೂರ್ವ ಮೆಡಿಟರೆನಿಯನ್ ಸಮುದ್ರ ತೀರದಿಂದ ಬಂದವರಾಗಿದ್ದರಿಂದ ಅವರು ಅಲ್ಲಿಯ ಸಂಸ್ಕೃತಿಯನ್ನೇ ಇಲ್ಲಿಯೂ ಮುಂದುವರಿಸಿರುವುದು ಕಂಡುಬರುತ್ತದೆ. ಈ ಸಂಸ್ಕೃತಿಯ ಪ್ರಮುಖ ಲಕ್ಷಣವೆಂದರೆ ಸಾವಿನ ನಂತರ ಆತ್ಮದಲ್ಲಿ ನಂಬಿಕೆಯಿಡುವುದು. ಹೀಗಾಗಿ ಸತ್ತವರ ಜೊತೆಯಲ್ಲಿ ಅವರು ದಿನನಿತ್ಯ ಉಪಯೋಗಿಸುತ್ತಿದ್ದ ಪ್ರಮುಖ ಆಯುಧಗಳನ್ನು ಹೂಳುವುದು ನಂಬಿಕೆಯಾಗಿ ಬೆಳೆಯಿತು. ಅಂದರೆ ಈ ಸಮಯದಲ್ಲಿ ಕೃಷಿ, ಪಶುಪಾಲನೆ ಮತ್ತು ಕೆಲವು ವೃತ್ತಿಗಳು ಬೆಳವಣಿಗೆಯಾಗಿದ್ದರೂ ಬೇಟೆಯಾಡುವುದು ಸಂಪೂರ್ಣವಾಗಿ ತ್ಯಜಿಸಿದ್ದಂತೆ ಕಂಡು ಬರುವುದಿಲ್ಲ. ಇಂದಿನ ಬೇಡ ಜನಾಂಗದ ಮೂಲವನ್ನು ನವ ಶಿಲಾಯುಗದ ಮಾನವನೊಡನೆ ಪ್ರಾಕ್ತನ ಶಾಸ್ತ್ರಜ್ಞರು ಗುರುತಿಸಿದ್ದಾರೆ.[6] ಕರ್ನಾಟಕದಾದ್ಯಂತ ಇಂದಿಗೂ ಪ್ರತಿ ಹಳ್ಳಿಗಳಲ್ಲೂ ಒಂದಲ್ಲ ಒಂದು ರೀತಿಯ ಬೃಹತ್ ಶಿಲಾಯುಗದ ಸ್ಮಾರಕಗಳ ಕುರುಹುಗಳಿರುವುದನ್ನು ಕಾಣಬಹುದು.

ಬೃಹತ್ ಶಿಲಾಯುಗದ ಸಮಕಾಲೀನ ಅಥವಾ ಹತ್ತಿರದ ಸಂಗಮ್ ಸಾಹಿತ್ಯವು ದಕ್ಷಿಣ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿದ್ದ ವಿವಿಧ ಸಾಮಾಜಿಕ ಗುಂಪುಗಳನ್ನು ತಿಳಿಸುತ್ತದೆ. ಈ ಸಾಮಾಜಿಕ ರಚನೆಯ ಭೌಗೋಳಿಕ ಅಂಶದಿಂದ ಕೂಡಿದ್ದುದಾಗಿದೆ. ಅವುಗಳೆಂದರೆ, ಮುಲ್ಲೈ, ಕುರಿಂಜಿ, ಮರುದಮ್, ಪಾಲೈ ಮತ್ತು ನೆಯಿಂದಲ್. ಸಂಗಮ್ ಸಾಹಿತ್ಯವು ಬೇಟೆಗಾರರು, ಮೀನುಗಾರರು ಮತ್ತು ಕುರುಬರು ಮಾಡುತ್ತಿದ್ದ ಪೂಜಾ ವಿಧಾನಗಳನ್ನು ತಿಳಿಸುತ್ತದೆ. ಪೂಜಾ ವಿಧಾನವು ಜಾನಪದ ಸಂಗೀತ ಮತ್ತು ನೃತ್ಯಗಳಿಂದ ಕೂಡಿರುತಿತ್ತೆಂದು ತಿಳಿಸುತ್ತದೆ.[7] ಪತ್ತುಪಾಟ್ಟುವಿನ ನಾಲ್ಕನೆಯ ಪದ್ಯವು ಪೆರುಂಪನ್ನಾರುಪ್ಪಡೈ ಯೋಧರು, ಪಶುಪಾಲಕರು, ರೈತರು ಹಾಗೂ ಮೀನುಗಾರರ ಮನೆಗಳ ವಿವರಣೆಯನ್ನು ನೀಡುತ್ತದೆ.[8] ಎಟ್ಟುತೋಗೈನ ಮೂರನೆ ಪದ್ಯವು ಪಿಂಗುರುನೂರು ಮತ್ತು ೬ನೇ ಪದ್ಯ ಕಲಿತ್ತೊಗೈ ಐದು ಭೌಗೋಳಿಕ ಭಾಗಗಳನ್ನು ತಿಳಿಸುತ್ತದೆ.[9] ಅವುಗಳೆಂದರೆ;

**ಭೂಮಿಯ ಸ್ವರೂಪ  ಕಸುಬು  ಆಹಾರ  ಜನ**

೧. ಮುಲ್ಲೈ= ಕಾಡು: ಜೇನು ಸಂಗ್ರಹಣೆ, ಗೆಡ್ಡೆ ಗೆಣಸು ಅಗೆಯುವುದು, ಗಿಳಿ ಸಾಕಾಣಿಕೆ: ರಾಗಿ: ಕುರುಬರು.

೨. ಕುರಿಂಜಿ=ಬೆಟ್ಟಗಾಡುಗಳ ಪ್ರದೇಶ: ದನ, ಕುರಿ ಸಾಕಾಣಿಕೆ, ಕೃಷಿ: ರಾಗಿ, ಸಾಮೈ: ಬೇಟೆಗಾರರು.

೩. ಮರುದಮ್=ನೀರಾವರಿಯಿಂದ ಕೂಡಿದ ಭೂಮಿ: ಕೃಷಿ, ಗೂಳಿ ಕಾಳಗ: ಅಕ್ಕಿ: ರೈತರು.

೪. ನೆಯ್ದಲ್=ಕರಾವಳಿ ತೀರ ಪ್ರದೇಶ: ಮೀನುಗಾರಿಕೆ ಮತ್ತು ಉಪ್ಪು ತಯಾರಿಕೆ: ಮೀನು: ಪರಟವರ್.

೫. ಪಾಲೈ=ಒಣ/ಬಂಜರು ಭೂಮಿ: ದಾರಿ ಹೋಕರ ಮತ್ತು ಪ್ರಯಾಣಿಕರ ಲೂಠಿ : ಮರವನ್.

ಮೇಲಿನ ಐದು ಭೌಗೋಳಿಕ ಪ್ರದೇಶಗಳಲ್ಲಿ ಕುರಿಂಜಿ ಮತ್ತು ಪಾಲೈ ಪ್ರದೇಶಗಳ ಜನ, ಕಸುಬುಗಳು ಮತ್ತು ಆಹಾರವು ಬೇಡರ ಎಲ್ಲಾ ಲಕ್ಷಣಗಳನ್ನು ಹೋಲುತ್ತವೆ. ಕುರಿಂಜಿ ಪ್ರದೇಶದಲ್ಲಿ ಗಂಧ, ಶುಂಠಿ, ಹರಿಶಿನ ಮತ್ತು ಮೆಣಸನ್ನು ಸಂಗ್ರಹಿಸಿ ಬಂಡೆಗಳ ಮೇಲೆ ಒಣಗಿಸುವುದು, ಹಾಗೂ ಗಿಳಿ, ಹುಲಿ ಮತ್ತು ಹಂದಿಗಳನ್ನು ಖೆಡ್ಡಾ ವಿಧಾನದಿಂದ ಬೇಟೆಯಾಡುತ್ತಿದ್ದುದು ಕಂಡುಬರುತ್ತವೆ.[10] ಪಾಲೈ ಪ್ರಾಂತ್ಯದಲ್ಲಿ ಹುಲ್ಲಿನ ಚಾವಣಿ ಹೊಂದಿದ್ದ ಗುಡಿಸಲುಗಳಲ್ಲಿ ದರೋಡೆಕಾರರು ತಮ್ಮ ಬಾಣ ಬಿಲ್ಲುಗಳಿಂದ ಕೂಡಿದ್ದ ದಾರಿಹೋಕರನ್ನು ಲೂಠಿ ಮಾಡುತ್ತಿದ್ದರು. ಇವರ ಮನೆಗಳಲ್ಲಿ ಅಳಿಲು, ಇಲಿಗಳು ಸುಳಿದು ನೋಡುತ್ತಿರಲಿಲ್ಲ. ಏಕೆಂದರೆ ಇವರ ಮನೆಯ ತುಂಬೆಲ್ಲಾ ಬಿಲ್ಲು ಬಾಣಗಳು ಇರುತ್ತಿದ್ದವು. ರಾಶಿಗಟ್ಟಲೆ ಬಾಣಗಳು ಇವರ ಮನೆಯಲ್ಲಿ ಬಿದ್ದಿರುತ್ತಿದ್ದವು. ನಾಯಿಗಳ ಕೊರಳಿಗೆ ಸರಪಳಿಯನ್ನು ಹಾಕಲಾಗುತ್ತಿತ್ತು. ಇಲ್ಲಿಯ ಜನರು ಕಪ್ಪು ವರ್ಣದವರಾಗಿದ್ದು, ಧೃಡಕಾಯ ಶರೀರವನ್ನು ಹೊಂದಿದ್ದರು. ತಮ್ಮ ಮೀಸೆಗಳನ್ನು ಉದ್ದವಾಗಿ ಬೆಳೆಸಿ ಜಿಂಕೆಯ ಕೋಡಿನಂತೆ ಹುರಿ ಮಾಡಿಕೊಳ್ಳುತ್ತಿದ್ದರು. ಇವರು ಚರ್ಮದ ಚಪ್ಪಲಿಗಳನ್ನು ಹಾಕುತ್ತಿದ್ದರು. ದರೋಡೆ ಜೊತೆಗೆ ಕಾಡು ಹಂದಿಗಳನ್ನು ಮತ್ತು ಮೊಲಗಳನ್ನು ಬಲೆಗಳನ್ನು ಬಳಸಿ ನಾಯಿಗಳ ಸಹಾಯದಿಂದ ಅವುಗಳನ್ನು ಹಿಡಿಯುತ್ತಿದ್ದರು. ಇದಲ್ಲದೇ ದನಕರುಗಳನ್ನು ಒಯ್ಯುವಲ್ಲಿ / ಕದಿಯುವಲ್ಲಿ ನಿಸ್ಸೀಮರಾಗಿದ್ದರು. ಇವರ ಹೆಣ್ಣು ಮಕ್ಕಳು ಹುತ್ತಗಳಲ್ಲಿ ಇರುವೆಗಳು ತಂದಿಟ್ಟ ಕಾಳು ಕಡ್ಡಿಗಳನ್ನು ಸಂಗ್ರಹಿಸುತ್ತಿದ್ದರು. ಇವರ ಹೆಂಗಸರು ಬಾಣಂತಿತನದಲ್ಲಿ ಜಿಂಕೆಯ ಚರ್ಮದ ಮೇಲೆ ಮಲಗುತ್ತಿದ್ದರು. ಇವರು ನಾಯಿಗಳು ಬೇಟೆಯಾಡಿ ತಂದ ಉಡಗಳನ್ನು ತಿನ್ನುತ್ತಿದ್ದರು. ಇವರು ತಮ್ಮ ಪೂರ್ವಜರನ್ನು ಹೂತಿದ್ದ ಸಮಾಧಿಗಳಿಗೆ, ನಿಲುಗಲ್ಲುಗಳಿಗೆ ಹೂವಿನ ಹಾರ ಹಾಕಿ ಪೂಜಿಸುತ್ತಿದ್ದರು.[11] ಕುರಿಂಜಿ ಜನರು ತಮ್ಮ ನಾಯಿಗಳೊಡನೆ ಬೇಟೆಗೆ ಹೋಗುವುದು, ಬಿದಿರು ಕೊಳವೆಗಳಲ್ಲಿ ಹೆಂಡವನ್ನು ತುಂಬಿಸಿ ಕೊಂಡು ಕುಡಿಯುವುದು ರೂಢಿಯಲ್ಲಿತ್ತು. ಗುಡ್ಡಗಾಡಿನ ಜನರ ಮಕ್ಕಳು ತಮ್ಮಷ್ಟಕ್ಕೆ ತಾವೇ ಚಿಕ್ಕ ಚಿಕ್ಕ ಬಿಲ್ಲುಗಳಿಗೆ ಬಾಣದ ತುದಿಗೆ ಮುಳ್ಳನ್ನು ಕಟ್ಟಿ ಇಲಿಗಳ ಮೇಲೆ ಬಿಟ್ಟು ಬಿಲ್ಲು

ವಿದ್ಯೆಯನ್ನು ಕಲಿಯುತ್ತಿದ್ದರು.[12] ಈ ವಿವರಗಳು ಇತಿಹಾಸ ಆರಂಭ ಕಾಲದ ಬೇಡ ಜನಾಂಗದ ಆರ್ಥಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಅತ್ಯುಪಯುಕ್ತವಾಗಿವೆ.

ಬೇಡ ಬುಡಕಟ್ಟನ್ನು ವಿದ್ವಾಂಸರು ವೃತ್ತಿಗಳ ಆಧಾರದ ಮೇಲೆ ಊರು ಬೇಡರು ಮತ್ತು ಮ್ಯಾಸ ಬೇಡರು ಎಂದು ಎರಡು ಪಂಗಡಗಳಾಗಿ ವಿಂಗಡಿಸಿದ್ದಾರೆ.[13] ಊರು ಬೇಡರಲ್ಲಿ ಮತ್ತು ಮ್ಯಾಸ ಬೇಡರಲ್ಲಿ ಕೆಲವು ಉಪಪಂಗಡಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ವಾಲ್ಮೀಕಿ, ತಳವಾರ, ಪರಿವಾರ, ನಾಯಕ, ಬೇರಾದ್, ವೇದಾನ್, ಭೋಯಾ, ರಾಮೋಶಿ. ಈ ಉಪ ಪಂಗಡಗಳನ್ನು ಕುರಿತು ವಿದ್ವಾಂಸರಾದ ಎಡ್ಗರ್ ಥರ್ಸ್ಟ್‌ನ್[14] ಈ ರೀತಿ ಹೇಳಿದ್ದಾರೆ: 'ಬೇಡರನ್ನು ಮುಖ್ಯವಾಗಿ ಊರು ಅಥವಾ ಹಳ್ಳಿಯ ಬೇಡರು ಮತ್ತು ಮ್ಯಾಸ ಬೇಡರು ಅಥವಾ ಹುಲ್ಲುಗಾವಲಿನ ಬೇಡರು ಎಂದು ವಿಂಗಡಿಸಬಹುದು. ಈ ಪಂಗಡಗಳು ಮತ್ತೆ ಹಲವು ಬೆಡಗುಗಳಾಗಿ ವಿಂಗಡಣೆಯಾಗಿವೆ. ಅವುಗಳಲ್ಲಿ ನಾಲ್ಕು ಪ್ರಮುಖವಾದವು. ಅವುಗಳೆಂದರೆ ಯಮ್ಮಲವರು ಅಥವಾ ಎಮ್ಮೆಯವರು, ಮಂದಲದವರು ಅಥವಾ ಮಂದೆಯವರು, ಪುಲವರು ಅಥವಾ ಹೂವಿನವರು ಮತ್ತು ಮಿನಲವರು ಅಥವಾ ಮೀನುಗಾರರು'. ಇದರಿಂದ ತಿಳಿದು ಬರುವುದೇನೆಂದರೆ ಬೇಡರು ಪ್ರಾಣಿ, ಪಕ್ಷಿ ಮತ್ತು ಮೀನಿನ ಬೇಟೆಯ ಜೊತೆಗೆ ದನಕರುಗಳನ್ನು ಹೊಂದಿದ್ದು, ಅವರವರ ಉಪವೃತ್ತಿಗಳ ಆಧಾರದ ಮೇಲೆ ಜೀವನ ಸಾಗಿಸುತ್ತಿದ್ದರು. ಇವರೆಲ್ಲರ ಕುಲಕಸುಬು ಬೇಟೆಗಾರಿಕೆಯಾಗಿದ್ದು ಬೆಟ್ಟಗುಡ್ಡಗಳ ತಪ್ಪಲಲ್ಲಿ, ನದಿ, ಹಳ್ಳ ಕೊಳ್ಳಗಳ ಅಕ್ಕಪಕ್ಕದಲ್ಲಿ ಇವರ ನೆಲೆಗಳನ್ನು ಗುರುತಿಸಬಹುದು. ಪ್ರಾಚೀನ ಕಾಲದಲ್ಲಿ ಇವರ ಕಸುಬು ಬೇಟೆಗಾರಿಕೆ ಆದ್ದರಿಂದ ಬೇಟೆ ಯಾಡುವ ಉಪಕರಣಗಳೇ ಅಂದರೆ ಬಿಲ್ಲು, ಬಾಣ, ಬಲೆ, ಈಟಿ, ಭರ್ಜಿ, ಖಡ್ಗ, ಚೂರಿ ಮತ್ತು ನಾಯಿ ಇವರ ಪ್ರಮುಖ ಆಸ್ತಿಗಳಾಗಿದ್ದವು. ಮೊದಮೊದಲು ಈ ಸಲಕರಣೆಗಳನ್ನು ಒಟ್ಟಾಗಿ ಹೊಂದಿದ್ದು, ಕಾಲಕ್ರಮೇಣ ಅವುಗಳನ್ನು ವೈಯಕ್ತಿಕವಾಗಿ ಹೊಂದಲಾರಂಭಿಸಿದರು. ಈಗಲೂ ಬಲೆಯ ಮಾಲೀಕರಿಗೆ ಸಮುದಾಯದ ಬೇಟೆಯಾದ ಮೇಲೆ ಮಾಂಸವನ್ನು ಹಂಚುವಾಗ ಬಲೆಗೆ ಪ್ರತ್ಯೇಕವಾದ ಪಾಲನ್ನು ಕೊಡುವ ಪದ್ಧತಿಯಿದೆ. ಯಾರು ಹೆಚ್ಚಾಗಿ ಎಲ್ಲಾ ಆಯುಧಗಳನ್ನು ಹೊಂದಿದ್ದರೋ ಅಂತಹವರನ್ನು ನಾಯಕ ಅಥವಾ ಮುಖಂಡ ಎಂದು ಗುರುತಿಸಲಾಗಿತ್ತು. ಇದರಿಂದಾಗಿಯೋ ಏನೋ ಈ ಜನಾಂಗದವರನ್ನು ನಾಯಕ ರೆಂದು ಕರೆದಿರಲೂಬಹುದು.

ಈ ಜನಾಂಗವು ಬೇಟೆಯಿಂದ ತನ್ನ ದಿನನಿತ್ಯದ ಆಹಾರವನ್ನು ಪೂರೈಸಿಕೊಳ್ಳುತ್ತಿದ್ದು ದಲ್ಲದೇ ಬೇಟೆಯಿಂದ ಹೆಚ್ಚಾಗಿ ಸಿಕ್ಕಿದ ಪ್ರಾಣಿ, ಪಕ್ಷಿ, ಮೀನನ್ನು ಮಾರಿ ಅದಕ್ಕೆ ಪ್ರತಿಯಾಗಿ ದವಸ ಧಾನ್ಯಗಳನ್ನು ಪಡೆದುಕೊಳ್ಳುತ್ತಿದ್ದರು. ಏಕೆಂದರೆ ಪ್ರತಿ ದಿನ ಕೇವಲ ಮೀನು ಮಾಂಸವನ್ನು ತಿಂದು ಬದುಕುವುದು ದುಸ್ತರವಾಗಿತ್ತು. ದವಸ ಧಾನ್ಯದ ಅವಶ್ಯಕತೆಯಿದ್ದು ದರಿಂದ ಅವರು ಬೇಟೆಗಾರಿಕೆಯಿಂದ ಸಿಕ್ಕಿದ ಪ್ರಾಣಿ, ಪಕ್ಷಿ ಮತ್ತು ಮೀನುಗಳನ್ನು ಸಾಟಿ ಪದ್ಧತಿ ಮೂಲಕ ಪಡೆದುಕೊಳ್ಳುತ್ತಿದ್ದರು. ಈ ರೀತಿಯ ವಿನಿಮಯ ಪದ್ಧತಿಯನ್ನು ಇಂದಿಗೂ ಹಳ್ಳಿಗಳಲ್ಲಿ ಕಾಣಬಹುದು. ಉದಾ. ಕುಂಬಾರರು, ಗಾಣಿಗರು, ಚರ್ಮಕಾರರು, ಇತ್ಯಾದಿ.

ಅಂದಿನ ಬೇಡ ಬುಡಕಟ್ಟಿನ ಪ್ರಮುಖ ವೃತ್ತಿ ಬೇಟೆಗಾರಿಕೆ. ಬೇಟೆಗಾರಿಕೆಯ ಮುಂದು ವರಿದ ರೂಪವೇ ಮೀನುಗಾರಿಕೆ. ಈ ಜನಾಂಗದ ಪ್ರಮುಖ ಉತ್ಪಾದನಾ ಸಾಧನಗಳು ಪ್ರಾಚೀನ ಕಾಲದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಂತೆ ಕಂಡುಬರುತ್ತದೆ. ಬೇಟೆ ಮತ್ತು ಆಹಾರ ಸಂಗ್ರಹದ ಹಂತದಲ್ಲಿ (Hunting and gathering stage) ಅವನ ಕಲ್ಲಿನ ಆಯುಧಗಳು ದಿನನಿತ್ಯದ ಬೇಡಿಕೆಗಳನ್ನು ಪೂರೈಸುತ್ತಿದ್ದವು. ಪಶುಸಂಗೋಪನೆ ಹಂತದಲ್ಲಿ (pastoralism) ತನ್ನ ಪ್ರಮುಖ ಸಂಪತ್ತಾದ ದನಕರುಗಳನ್ನು ಕಾಡು ಪ್ರಾಣಿ ಗಳಿಂದ ಸಂರಕ್ಷಿಸಲು ಈ ಆಯುಧಗಳನ್ನು ಹೆಚ್ಚಾಗಿ ಬಳಸಿಕೊಂಡಂತೆ ಕಂಡುಬರುತ್ತದೆ. ಇದಲ್ಲದೆ ತಮ್ಮ ನೆಲ, ಜಲ, ದನಕರುಗಳನ್ನು ಶತ್ರುಗಳಿಂದ ಮತ್ತು ಕಾಡು ಪ್ರಾಣಿಗಳಿಂದ ಕಾಪಾಡಲು ಬೇಟೆಯಲ್ಲಿ ಪಳಗಿದವರನ್ನು ಹೆಚ್ಚಾಗಿ ನಿಯೋಗಿಸಿಕೊಂಡಿರುವುದು ಕಂಡು ಬರುತ್ತದೆ. ಮುಂದಿನ ಉತ್ಪಾದನಾ ಹಂತದಲ್ಲಿ (pastoral cum agrarian stage) ಬೇಟೆಯನ್ನು ಸಂಪೂರ್ಣವಾಗಿ ತ್ಯಜಿಸದೇ ಅದನ್ನು ಉಪಕಸುಬನ್ನಾಗಿ ಮುಂದುವರಿಸಿದ. ಹೀಗಾಗಿ ಈ ಬುಡುಕಟ್ಟಿನ ಜನರು ಕಾಲಕ್ರಮೇಣ ಕಾಡು, ಬೆಟ್ಟ ಗುಡ್ಡ ಹಳ್ಳ-ಕೊಳ್ಳದ ಪ್ರದೇಶಗಳನ್ನು ಬಿಟ್ಟು ಕ್ರಮೇಣವಾಗಿ ಬಯಲು ಪ್ರದೇಶಕ್ಕೆ ಸ್ಥಳಾಂತರಗೊಳ್ಳತೊಡಗಿದರು. ನಾಗರೀಕ ಸಮಾಜದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ನಾಗರೀಕತೆಯ

ಲಕ್ಷಣ ಗಳನ್ನು/ ಅಂಶಗಳನ್ನು ಮೈಗೂಡಿಸಿಕೊಳ್ಳತೊಡಗಿದರು. ಈ ಬದಲಾವಣೆಗಳಿಂದಾಗಿ ಇವರು ಇಂದು, ಕಡಲ ತೀರದಲ್ಲಿರುವ ಮೀನುಗಾರರನ್ನು ಬಿಟ್ಟರೆ, ತನ್ನ ಮೂಲವೃತ್ತಿಯಾದ ಬೇಟೆಯನ್ನು ಬಿಟ್ಟು ಕೃಷಿ, ಪಶುಪಾಲನೆ ಮತ್ತಿತರ ಕಸುಬುಗಳನ್ನು ಆಧರಿಸಿ ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ.

ಬೇಡರು ಮತ್ತು ಅವರ ಕಸುಬಿನ ಬಗ್ಗೆ ಅಂದಿನ ಸಮಾಜದಲ್ಲಿದ್ದ ದೃಷ್ಟಿಕೋನದ ಬಗ್ಗೆ ಅಂದಿನ ಚಿಂತಕರು ಬೆಳಕು ಚೆಲ್ಲಿದ್ದಾರೆ. ಪಿಸೂನನ ಪ್ರಕಾರ ಮನುಷ್ಯ ಅತಿ ಆಸೆಯಿಂದ ನಾಲ್ಕು ದುರ್ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ. ಅವುಗಳೆಂದರೆ ಬೇಟೆಗಾರಿಕೆ, ಜೂಜು, ಹೆಣ್ಣಿನ ಸಹವಾಸ ಮತ್ತು ಕುಡಿತ. ಇವುಗಳಲ್ಲಿ ಜೂಜಾಟ ಮತ್ತು ಬೇಟೆಯು ಅತ್ಯಂತ ಪಾಪಕರವಾದದ್ದು. ಏಕೆಂದರೆ ಬೇಟೆಯಿಂದಾಗಿ ಇಡೀ ಸಮಾಜಕ್ಕೆ ಶತ್ರುಗಳಿಂದ, ಕಳ್ಳಕಾಕ ರಿಂದ, ಕಾಡಾನೆಗಳಿಂದ, ಕಾಳ್ಗಿಚ್ಚಿನಿಂದ, ಭಯ, ಹಸಿವು, ಬಾಯಾರಿಕೆ ಮತ್ತು ಜೀವಹಾನಿ ಆಗುವ ಸಂಭವವಿದೆ.[15] ಆದರೆ ಕೌಟಿಲ್ಯನ ಪ್ರಕಾರ ಬೇಟೆಯಾಡುವುದರಿಂದ ಮನುಷ್ಯನ ಹೊಟ್ಟೆ, ಕೊಬ್ಬು, ಬೆವರು ಹೋಗಿ ಮನಸ್ಸನ್ನು ಕೇಂದ್ರೀಕರಿಸುವ ಶಕ್ತಿಯನ್ನು ಮತ್ತು ಕಣ್ಣಿನ ದೃಷ್ಟಿಯನ್ನು ಹೆಚ್ಚಿಸುತ್ತದೆ. ಇದು ಆರೋಗ್ಯಕ್ಕೆ ಉತ್ತಮವಾದದ್ದು. ಆದರೆ ಜೂಜಾಟದಿಂದ ವ್ಯಕ್ತಿಯ ಆರೋಗ್ಯ ಹಾಳಾಗುತ್ತದೆ.[16] ಇದಲ್ಲದೆ ಅರ್ಥಶಾಸ್ತ್ರವು ಮುಂದು ವರಿದು ಶತ್ರುವಿನ ಸೈನ್ಯವು ಗುಡ್ಡಗಾಡು ಪ್ರದೇಶದಲ್ಲಿ ಚಲಿಸುವಾಗ ಮತ್ತು ಶತ್ರುವಿನ ಸೈನ್ಯವು ಬಳಸಬೇಕೆಂದು ತಿಳಿಸುತ್ತದೆ. ಏಕೆಂದರೆ ಕಾಡುಜನರ ಸೈನ್ಯವು ಲೂಠಿ ಮಾಡುವುದರಲ್ಲಿ ಬಹಳ ನಿಪುಣತೆಯನ್ನು ಹೊಂದಿರುತ್ತದೆ.[17] ಬಿಲ್ಲರು[18] ಮೂಲತಃ ಆದಿ-ಆರ್ಯ ಬುಡಕಟ್ಟು ಆಗಿದ್ದು, ಅರೆ ಬುಡಕಟ್ಟು ರೈತರಾಗಿ ಒಣ ಬಂಜರು ಭೂಮಿಯನ್ನು ಉಳುಮೆ ಮಾಡುತ್ತಿದ್ದರು. ಆದರೂ ಅವರು ಒಳ್ಳೆಯ ಬಿಲ್ಲುಗಾರರು, ಬೇಟೆಗಾರರು, ಮೀನುಗಾರರು ಮತ್ತು ಆಹಾರ ಸಂಗ್ರಹಕರಾಗಿದ್ದರು. ಇವರ ವಿಶೇಷವೆಂದರೆ ಸಮಯ ಬಂದಾಗ ಹೋರಾಡುತ್ತಿದ್ದರು. ಆದರೆ ಅವರು ಸಂಘಟಿತ ಯೋಧರಾಗಿರಲಿಲ್ಲ. ಇವರಲ್ಲಿ ಕೆಲವರು ಕ್ರಿ.ಪೂ. ಒಂದನೆ ಶತಮಾನದಲ್ಲಿ ಮಾಳವದ ಸಮೀಪ ದೊರೆಗಳಾಗಿದ್ದರು. ಆದರೆ ಇವರ ಆಡಳಿತ ಸ್ವಲ್ಪ ಕಾಲದಲ್ಲಿಯೇ ಕಣ್ಮರೆ ಯಾಯಿತು. ಅದೇರೀತಿ ಗೋಂಡ್ ಬುಡಕಟ್ಟಿನವರು ಸಹ ಊಳಿಗಮಾನ್ಯ ಪದ್ಧತಿಯ ಕಾಲದಲ್ಲಿ ರಾಜರಾದರು.[19] ಇದರಿಂದ ತಿಳಿದು ಬರುವುದೇನೆಂದರೆ, ಪ್ರಾಚೀನ ಸಮುದಾಯ/ ಬುಡಕಟ್ಟು ಪ್ರಬಲವಾದ ಸಮಾಜಗಳ ಸಂಪರ್ಕದಿಂದಾಗಿ ಪರಿಣಾಮಕಾರಿಯಾದ ಮಾರ್ಪಾಟನ್ನು ಹೊಂದಿದವು.

ಪ್ರಾಚೀನ ಬುಡಕಟ್ಟುಗಳ ಸಮಾಜದಲ್ಲಿ ಹೆಂಗಸರು ಕೃಷಿಯನ್ನು ಮಾಡಿದರೆ ಗಂಡಸರು ಬೇಟೆಯಾಡುತ್ತಿದ್ದರು. ಈ ಸಮಯದಲ್ಲಿ ಮೀನುಗಾರರು ವಿಶೇಷ ಜಾತಿಯಾಗಿ ಹೊರ ಹೊಮ್ಮಿದರು. ಹಲವು ಬುಡಕಟ್ಟುಗಳು ಮತ್ತು ರೈತರು ಮೀನನ್ನು ಬಲೆಯಿಲ್ಲದೇ ಬರೀ ಕೈಯಲ್ಲಿ ಹಿಡಿಯುತ್ತಿದ್ದರು.[20] ಬೇಟೆಯಿಂದ ಹೆಚ್ಚು ಜನರಿಗೆ ಆಹಾರ ಒದಗಿಸಲಾಗು ತ್ತಿರಲಿಲ್ಲವಾದ್ದರಿಂದ ಕೃಷಿಗೆ ಹೆಚ್ಚು ಒತ್ತುಕೊಡಲಾಯಿತು. ಸಿಂಧೂ ನದಿ ಕೊಳ್ಳದಲ್ಲಿ ಪ್ರಪ್ರಥಮ ಬಾರಿಗೆ ಹೆಚ್ಚಿನ ಪ್ರಮಾಣದ ಆಹಾರ ಧಾನ್ಯಗಳನ್ನು ಬೆಳೆಯಲಾಯಿತು. ಇದರ ನಂತರ ಗಂಗಾ ನದಿಯ ಬಯಲಿನಲ್ಲಿ ಹೆಚ್ಚು ಪ್ರಮಾಣದ ಆಹಾರ ಪದಾರ್ಥಗಳನ್ನು ಬೆಳೆಯಲಾಯಿತು. ಇದರಿಂದಾಗಿ ಇಲ್ಲಿ ಹೊಸ ಸಾಮಾಜಿಕ ಗುಂಪುಗಳು ಅಸ್ತಿತ್ವಕ್ಕೆ ಬಂದವು. ಇಂತಹ ಬುಡಕಟ್ಟುಗಳಿಗೆ ಬ್ರಾಹ್ಮಣರು ಪುರಾಣಗಳ ಮುಖಾಂತರ ಕೆಲವು ಸಾಮಾಜಿಕ ಸ್ಥಾನಮಾನಗಳನ್ನು ನೀಡಲಾರಂಭಿಸಿದರು. ಇದರಿಂದಾಗಿ ಬುಡಕಟ್ಟಿನ ಮುಖ್ಯಸ್ಥರು ರಾಜ ರಾಗಿ, ಅಧಿಕಾರಿಗಳಾಗಿ ಬುಡಕಟ್ಟು ಜನಾಂಗವನ್ನು ಆಳಲಾರಂಭಿಸಿದರು.[21]ಪ್ರಾಚೀನ ಭಾರತದ ಸಮಾಜವು ಚತುರ್ವಣಗಳಿಂದ ಕೂಡಿದ್ದು, ಅದರಲ್ಲಿ ಕೊನೆಯ ದಾದ ಶೂದ್ರ ವರ್ಗವು ಹಲವು ವೃತ್ತಿ ಆಧಾರಿತ ಹಾಗೂ ಬುಡಕಟ್ಟು ಜನಾಂಗಗಳನ್ನು ಹೊಂದಿತ್ತು. ಅವುಗಳೆಂದರೆ ರಥಕಾರ, ಬಡಗಿ, ಕುಂಬಾರ, ಕಮ್ಮಾರ, ಅಕ್ಕಸಾಲಿಗ, ಗೊಲ್ಲ, ಕುರುಬರು, ರೈತರು, ಮೀನುಗಾರರು ಮತ್ತು ಬೇಟೆಗಾರರು. ಇದಲ್ಲದೆ ನಿಶಾದ, ಕಿರಾತ, ಪರ್ಣಿಕ ಮತ್ತಿತರರು ಇದ್ದರು.[22] ಗುಪ್ತರ ಕಾಲದಲ್ಲಿ ಗುಡ್ಡಗಾಡು ಬುಡಕಟ್ಟುಗಳಾದ ಕಿರಾತರು, ಶಬರರು ಮತ್ತು ಪುಲಿಂದರು ಮ್ಲೇಚ್ಚರೊಡನೆ ಶೂದ್ರರಲ್ಲಿ ಸೇರಿಕೊಂಡರು. ಮಾರ್ಕಾಂಡೇಯ ಪುರಾಣದ ಪ್ರಕಾರ ಈ ಕಾಲದಲ್ಲಿ ಚಾಂಡಾಲರನ್ನು ಮಾತ್ರ ಅಸ್ಪೃಶ್ಯರೆಂದು ಪರಿಗಣಿಸಲಾಗಿತ್ತು. ಆದರೆ ಚರ್ಮ ಹದ ಮಾಡುವವರನ್ನು ಅಸ್ಪೃಶ್ಯರೆಂದು ಪರಿಗಣಿಸಿರಲಿಲ್ಲ. ಚಾಂಡಾಲರನ್ನು ಬೀದಿ ಗುಡಿಸುವುದಕ್ಕೆ, ಸ್ಮಶಾನದಲ್ಲಿ ಕೆಲಸ ಮಾಡುವುದಕ್ಕೆ, ಕೈದಿಗಳನ್ನು ಹತ್ಯೆ ಮಾಡುವುದಕ್ಕೆ ರಾತ್ರಿಯಲ್ಲಿ ಕಳ್ಳಕಾಕರನ್ನು ಕಾಯುವುದಕ್ಕೆ ನಿಯೋಜಿಸಲಾಗುತ್ತಿತ್ತು.[23] ಕೆಳವರ್ಗದ

ಶೂದ್ರರ ಮುಖ್ಯ ಕಸುಬು ಬೇಟೆಗಾರಿಕೆಯಾಗಿತ್ತು. ಅಮರಕೋಶವು ಕೇವಲ ಬೇಟೆಗಾರರನ್ನು ಶೂದ್ರರಾಗಿ ಪರಿಗಣಿಸದೇ ಅವರು ಬಳಸುವ ಆಯುಧಗಳಾದ ಬಲೆ, ಹಗ್ಗ, ಹಕ್ಕಿಯ ಗೂಡು ಇತ್ಯಾದಿಗಳನ್ನು ಅಪವಿತ್ರವೆಂದು ತಿಳಿಸಿದೆ.[24]

ಫಾಹಿಯಾನನ ಪ್ರಕಾರ ಚಾಂಡಾಲರೆಂದರೆ ಮೀನುಗಾರರು ಮತ್ತು ಬೇಟೆಗಾರರು. ಇವರು ಮೀನು ಮತ್ತು ಮಾಂಸವನ್ನು ಮಾರುತ್ತಿದ್ದರು ಹಾಗೂ ಮತ್ತುಬರುವ ಪಾನೀಯ ಗಳನ್ನು ಕುಡಿಯುತ್ತಿದ್ದರು. ಮೂಲತಃ ಬೇಟೆಗಾರರಾದ್ದರಿಂದ ಇವರು ಸ್ವಾಭಾವಿಕವಾಗಿಯೇ ಮಾಂಸಹಾರಿಗಳಾಗಿದ್ದರು.[25] ಆದರೆ ಕಾಳಿದಾಸನ ಪ್ರಕಾರ ಚಾಂಡಾಲರು, ಬೇಟೆಗಾರರು ಮತ್ತು ಮೀನುಗಾರರಿಗಿಂತ ಭಿನ್ನವಾದವರು. ಆದರೆ ಅವರೆಲ್ಲಾ ಒಂದೇ ವಂಶಕ್ಕೆ ಸೇರಿದವರು. ಆದ್ದರಿಂದ ಈ ಕಾಲದಲ್ಲಿ ಚಾಂಡಾಲರು ಪ್ರಮುಖವಾಗಿ ಬೇಟೆಗಾರರಾಗಿದ್ದಂತೆ ಕಂಡು ಬರುವುದಿಲ್ಲ. ಆದರೆ ಅವರ ಉಪಕಸುಬು ಬೇಟೆಗಾರಿಕೆಯಾಗಿತ್ತು.[26] ಬೃಹತ್ ಕಲ್ಪ ಭಾಷ್ಯದ (ಜೈನ ಕೃತಿ) ಪ್ರಕಾರ ಮೇಡರು ಪ್ರಾಣಿಗಳನ್ನು ಹಗಲು-ರಾತ್ರಿ ಬಾಣ ಮತ್ತು ಬಿಲ್ಲುಗಳಿಂದ ಬೇಟೆಯಾಡುತ್ತಿದ್ದರು.[27] ಮನುವಿನ ಪ್ರಕಾರ ೧೨ ಕ್ಷತ್ರಿಯ ಜಾತಿಗಳು ಬ್ರಾಹ್ಮಣರ ಪದ್ಧತಿಗಳನ್ನು ಬಿಟ್ಟ ಪರಿಣಾಮವಾಗಿ ಶೂದ್ರರಾಗಿ ಮಾರ್ಪಾಟಾದವು. ಅವು ಗಳಲ್ಲಿ ಒಂದು ಕಿರಾತ. ಹಳೆಯ ಬುಡಕಟ್ಟು ಜನಾಂಗಗಳು ತಮ್ಮ ವೃತ್ತಿಯಲ್ಲಿ ಸುಧಾರಣೆ ಮತ್ತು ಪ್ರಾವೀಣ್ಯತೆ ಪಡೆದುಕೊಂಡಂತೆ ಜಾತಿಯ ರೂಪಪಡೆಯಲಾರಂಭಿಸಿದವು. ಮನುವಿನ ೧೮ ಮಿಶ್ರ ಜಾತಿಗಳಲ್ಲಿ ಚಾಂಡಾಲರು, ಮೇಡರು, ನಿಶಾದರು ಸೇರಿಕೊಂಡಿದ್ದಾರೆ.[28] ಪ್ರಾಚೀನ ಭಾರತದ ಬುಡಕಟ್ಟು ಜನಾಂಗಗಳಲ್ಲಿ ಕಿರಾತರು ಪ್ರಮುಖರು. ಇವರನ್ನು ವೇದಗಳಲ್ಲಿ, ಮಹಾಕಾವ್ಯಗಳಲ್ಲಿ ಮತ್ತು ನಂತರದ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಕಿರಾತರು ನೇಪಾಲವನ್ನು ಗೆದ್ದು ಆಕ್ರಮಿಸಿಕೊಂಡಿದ್ದರು. ಅವರ ಪೈಕಿ ಸುಮಾರು ೨೯ ದೊರೆಗಳು ನೇಪಾಳವನ್ನು ಆಳಿದರು.[29]

ಬೇಟೆಯ ದೃಶ್ಯವನ್ನು ವೀರಗಲ್ಲುಗಳು ಸಹ ಸುಂದರವಾಗಿ ಚಿತ್ರಿಸಿವೆ. ಇಲ್ಲಿಯೂ ಸಹ ವಿವಿಧ ರೀತಿಯ ಆಯುಧಗಳಿಂದ ಕಾಡು ಪ್ರಾಣಿಗಳಾದ ಹುಲಿ, ಹಂದಿಗಳನ್ನು ಬೇಟೆ ಯಾಡುವ ದೃಶ್ಯವನ್ನು ಕಾಣಬಹುದು. ನಾಯಿಯು ಸಹ ಅತ್ಯಂತ ಪ್ರಮುಖ ಪಾತ್ರವನ್ನು ಬೇಟೆಯಲ್ಲಿ ಮಾಡಿತ್ತು. ಶಾಸನಗಳು ಬೇಟೆಯ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತವೆ. ಅವುಗಳಲ್ಲಿ ಪ್ರಮುಖವಾದವು ಆತಕೂರು ಮತ್ತು ಮುಳಬಾಗಿಲಿನ ಶಾಸನ. ಮುಳಬಾಗಿಲಿನ ಶಾಸನದ ಪ್ರಕಾರ ಎರಡು ನಾಯಿಗಳಾದ ಲೋಗ ಮತ್ತು ದಳಗ ತಮ್ಮ ಯಜಮಾನನೊಡನೆ ಹಂದಿ ಬೇಟೆಗೆ ಹೋದಾಗ ಬೇಟೆಯನಂತರ ಆ ಎರಡು ನಾಯಿಗಳು ಸತ್ತು ಹೋದವು. ಈ ಶಾಸನದ ಪ್ರಕಾರ ಲೋಗ ೭೫ ಹಂದಿಗಳನ್ನು ಮತ್ತು ದಳಗ ೨೬ ಹಂದಿಗಳನ್ನು ಬೇಟೆಯಾಡಿ ದ್ದವು.[30] ಇಲ್ಲಿಯ ಮತ್ತೊಂದು ಶಾಸನದ ಪ್ರಕಾರ ಕಂಬಲದಗ ಎಂಬುವವನು ಹುಲಿಯ ಬೇಟೆಗೆ ತನ್ನ ನಾಯಿಯೊಡನೆ ಹೋದಾಗ ಇಬ್ಬರು ಸತ್ತು ಹೋದದ್ದನ್ನು ತಿಳಿಸುತ್ತದೆ.[31] ಬೇಟೆಯ ಮುಖ್ಯ ಆಯುಧಗಳು ಖಡ್ಗ, ಕತ್ತಿ, ಈಟಿ, ಭರ್ಜಿ, ಗುರಾಣಿ ಇತ್ಯಾದಿ. ಇಲ್ಲಿ ಸತ್ತವರು ಬೇಡರೆ ಅಥವಾ ಬೇರೆಯವರೆ ಎಂಬುದು ತಿಳಿದುಬರುವುದಿಲ್ಲ.

ಕ್ರಿ.ಶ. ೧೦೧೨-ಳಳರ ವೀರಗಲ್ಲಿನ ಶಾಸನವು ಕನ್ನಾಲ ಗ್ರಾಮದ ಪಲ್ಲವಗಾವುಂಡ ಎಂಬ ಬೇಟೆಗಾರನ ಮಾದಕೇಸರಿ ಎಂಬ ಹೆಸರಿನ ನಾಯಿ ಹಂದಿಯೊಡನೆ ಹೋರಾಡಿ ಸತ್ತ ವಿಷಯವನ್ನು ತಿಳಿಸುತ್ತದೆ.[32] ಮರಸಣಿಗೆಯ ವೀರಗಲ್ಲಿನಲ್ಲಿ ಮೊದಲನೆಯ ಹಂತದಲ್ಲಿ ಬಲಭಾಗಕ್ಕೆ ಇಬ್ಬರು ಪುರುಷರು ಬಿಲ್ಲುಗಳನ್ನು ಹಿಡಿದು ಜಿಂಕೆ ಮತ್ತು ಹಂದಿಯ ಬೇಟೆ ಯಾಡುತ್ತಿದ್ದಾರೆ. ಬೇಟೆಗಾರರ ಎರಡು ನಾಯಿಗಳು ಹಂದಿಯ ಮುಂದೆ ಮತ್ತು ಹಿಂದಿನಿಂದ ಆಕ್ರಮಣ ಮಾಡಿವೆ. ಎರಡನೆಯ ಹಂತದಲ್ಲಿ ಇಬ್ಬರು ವ್ಯಕ್ತಿಗಳು ಕುದುರೆಯ ಮೇಲೆ ಕುಳಿತಿದ್ದಾರೆ. ಬಲಭಾಗದಲ್ಲಿರುವ ಯೋಧ ಬಿಲ್ಲನ್ನು ಮಾತ್ರ ಹಿಡಿದಿದ್ದು ಬಾಣವನ್ನು ಕೈಯಲ್ಲಿ ಹಿಡಿದಿದ್ದಾನೆ. ಎಡ ಭಾಗದಲ್ಲಿರುವ ಯೋಧನ ಬಳಿ ಬಿಲ್ಲು ಬಾಣದ ಜೊತೆಗೆ ಕಠಾರಿಯೂ ಇದೆ.[33] ಕೈದಾಳದ ಹುಲಿಬೇಟೆಯ ೧೧೫೧ರ ವೀರಗಲ್ಲು ಶಾಸನವು ಗೂಳಿ ಬಾಚನ ಬಂಟ ಚಂದನು ಊರಿನ ಜನ ಜಾನುವಾರುಗಳಿಗೆ ತೊಂದರೆ ಕೊಡುತ್ತಿದ್ದ ಹುಲಿ ಯನ್ನು ಇರಿದು ಸಾಯಿಸಿದ್ದನ್ನು ಇಳಿಸುತ್ತದೆ.[34] ಶಿಲ್ಪಗಳಲ್ಲಿ ಸಾಮಾನ್ಯವಾಗಿ ಬೇಟೆಯ ದೃಶ್ಯಗಳಾದ ಕಿರಾತಾರ್ಜುನೀಯ, ಬೇಡರ ಕಣ್ಣಪ್ಪ, ಹಂದಿ ಬೇಟೆ, ಚಿಗರೆ ಬೇಟೆ, ಬೇಟೆಯ ಆಯುಧಗಳು, ಬೇಟೆಗಾರನ ಹೆಂಡತಿ (ಬೇಡತಿ) ಎಡಗೈಯಲ್ಲಿ ಉದ್ದವಾದ ಕೋಲು ಅಥವಾ ಭರ್ಜಿಯಂತಹ ಆಯುಧವನ್ನು ಹಿಡಿದಿರುವ ದೃಶ್ಯಗಳಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ.[35]

ದನಕರುಗಳ ಮತ್ತು ಹೆಂಗಸರ ಲೂಠಿಗಾರರಾಗಿ ಬೇಡರ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕ್ರಿ.ಶ. ೭ನೇ ಶತಮಾನದಿಂದ ಶಾಸನಗಳಲ್ಲಿ ಕಾಣಬಹುದು. ಕ್ರಿ.ಶ. ೭೦೦ ರ ಗದ್ದೆಮನೆ ಶಾಸನವು[36] ಬೇಡರ ವೀರವೃತ್ತಿಯನ್ನು ಮತ್ತು ಅವರ ಕಾಡಿನಿಂದ ನಾಡಿಗೆ ಬಂದಿದ್ದನ್ನು ಕೆಳಗಿನಂತೆ ತಿಳಿಸುತ್ತದೆ. 'ಸ್ವಸ್ತಿ ಶ್ರೀ ಶೀಲ ಆದೀತ್ಯನ್ ದಿಶಾಮನ್ ಭಾಗವಾನ್ ಅಗ್ಗಳಕಣ್ಣನ್ ಪೇರಾಳ್ಪೆವರೆ ಪೆಟ್ಟಣಿಸತ್ಯಂಕರ್ ಅಟ್ಟಳ್ವಭಟರ್ ಬೆದರೆ ಮಹೇಂದ್ರನ್ ಬೇಡರಾಯರ ಮಲಪರ್ ಕಾಳೆಗದುಲೆ ವಿರಿದು ಸ್ವರ್ಗಾಲಕ್ಕೇರಿದನ್'. ಈ ಶಾಸನದಿಂದ ತಿಳಿದುಬರುವುದೇನೆಂದರೆ, ಏಳನೆ ಶತಮಾನದಲ್ಲಿ ಬೇಡರನ್ನು ಮಲಪರು ಎಂದು ಕರೆಯಲಾಗಿದ್ದು, ಇವರು ಆ ಕಾಲಕ್ಕೆ ಅಳರಸರ ಸೇವೆಯಲ್ಲಿ, ಕಾಳಗ/ಯುದ್ಧಗಳಲ್ಲಿ ಪಾಲ್ಗೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದರು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೋಕಿನ ಕಂಬದಹಳ್ಳಿಯ ಕ್ರಿ.ಶ. ೯೭೭ರ ಶಾಸನವು[37] ಬೇಡರ ಪಡೆಯು ಬಿಂಡಿಗನವಿಲೆ ಯನ್ನು ದಾಳಿ ಮಾಡಿ ಅಲ್ಲಿಯ ಹೆಂಗಸರನ್ನು ಎತ್ತಿಕೊಂಡು ಹೋಗುವಾಗ ಗವರೆಸೆಟ್ಟಿಯೆಂಬು ವವನು ಇವರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೯೮೫ರ ಹಾಸನ ಜಿಲ್ಲೆಯ ಆಲೂರು ತಾಲ್ಲೋಕಿನ ನಲ್ಲೂರು ಗ್ರಾಮದ ಶಾಸನವು[38] ಬೇಡರ ಬೀರಮ್ಮನು ತನ್ನ ಕುದುರೆ ಪಡೆಯೊಂದಿಗೆ ನಲ್ಲೂರನ್ನು ದಾಳಿ ಮಾಡಿದಾಗ ಗುಂಡಯ್ಯನು ಸತ್ತಿದ್ದನ್ನು ತಿಳಿಸು ತ್ತದೆ. ಕ್ರಿ.ಶ. ೧೧೪೦ರ ಹಾಸನ ಜಿಲ್ಲೆ ಬೇಲೂರು ತಾಲ್ಲೋಕಿನ ಹಳೇಬೀಡು ಶಾಸನವು[39] ಬೇಟೆಯ ತಿಪ್ಪೆಯನಾಯಕನನ್ನು ಉಲ್ಲೇಖಿಸುತ್ತದೆ. ಇದೇ ತಾಲ್ಲೋಕಿನ ಮತ್ತೊಂದು ಹೊಯ್ಸಳ ದೊರೆ ಬಿಟ್ಟಿದೇವನ (ವಿಷ್ಣುವರ್ಧನ) ಕಾಲದ ಕೊನೇರಿಲು ಶಾಸನವು[40] ಕೊನೇರಿಲದ ಮಸಣಗೌಡನ ಅಳಿಯ ಬೇಡಗೌಡನು ತುರುಗಾಳಗದಲ್ಲಿ ಹೋರಾಡಿ ತುರುಗಳನ್ನು ಮರುಪಡೆದು ಸತ್ತಿದ್ದನ್ನು ತಿಳಿಸುತ್ತದೆ. ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೋಕಿನ ಮುದಿಗೆರೆ ಗ್ರಾಮದ ಕ್ರಿ.ಶ. ೧೨೦೯ರ ಶಾಸನವು[41] ಬೇಡರು ಕಲ್ಲಿಕೆರೆಯ ತುರುಗಳನ್ನು ಮತ್ತು ಹೆಂಗಸರನ್ನು ಲೂಟಿ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೨೬-೨೭ರ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೋಕಿನ ಬ್ಯಾಡರಹಳ್ಳಿ ಶಾಸನವು[42] ಅಲ್ಲಿಯ ಬಮ್ಮಾರನು ಬೋಕಿಮಯ್ಯ ಎಂಬ ಶತ್ರುವನ್ನು ಇರಿದು ತುರುಗಳನ್ನು ಗೆದ್ದು ಕೊಂಡು ಹೋದದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೨೮೭ರ ಚಿಕ್ಕಮಗಳೂರು ಜಿಲ್ಲೆ ಮತ್ತು ಅದೇ ತಾಲೋಕಿನ ಅರಿಶಿನಗುಪ್ಪೆ ಶಾಸನವು[43] ಬೇಡರು ಬೋಕಿಯಣ್ಣನ ತುರುಗಳನ್ನು ಒಯ್ಯುವಾಗ ಅವನು ಬೇಡರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ.

ಈ ಮೇಲಿನ ಶಾಸನಗಳಿಂದ ಮುಖ್ಯವಾಗಿ ತಿಳಿದುಬರುವುದೇನೆಂದರೆ, ಕ್ರಿ.ಶ. ೭ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದವರೆಗೆ (ಬಾದಾಮಿ ಚಾಲುಕ್ಯರ ಕಾಲದಿಂದ ಹೊಯ್ಸಳರ ಕಾಲದವರೆಗೆ) ಈಗಿನ ಕರ್ನಾಟಕದುದ್ದಕ್ಕೂ ಬೇಡರ ವೃತ್ತಿ ಬೇಟೆಯಾಗಿತ್ತು. ಇವರು ತಮ್ಮ ಬೇಟೆ ವೃತ್ತಿಯಲ್ಲಿ ಆಯುಧಗಳನ್ನು ಉಪಯೋಗಿಸುವುದರಲ್ಲಿ ಪರಿಣತರಾಗಿ ದ್ದರಿಂದ ಮತ್ತು ದೈಹಿಕ ಸಾಮರ್ಥ್ಯವನ್ನು ಹೊಂದಿದ್ದರಿಂದ ಆಳರಸರು ಇವರನ್ನು ತಮ್ಮ ರಾಜ್ಯವನ್ನು ಶತ್ರುಗಳಿಂದ ಕಾಪಾಡಲು ಹಾಗೂ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಶತ್ರುವಿನ ನೆಲ, ಜಲ, ಹೆಣ್ಣು ಮತ್ತು ದನಕರುಗಳನ್ನು ವಶಪಡಿಸಿಕೊಳ್ಳಲು ನಿಯೋಜಿಸಿ ಕೊಂಡಿದ್ದರು. ನಂತರ ಅವರ ಧೈರ್ಯ ಮತ್ತು ಸಾಹಸ ಪ್ರವೃತ್ತಿಯನ್ನು ಗಮನಿಸಿ ಇವರನ್ನು ಕೂಲಿಯ ಸಿಪಾಯಿಗಳಾಗಿ (Mercenaries) ನಿಯೋಜಿಸಿಕೊಂಡು ಅವರಿಗೆ ರಾಯ, ವೀರ (ಬೀರ), ಗಾವುಂಡ (ಗೌಡ), ಮತ್ತು ನಾಯಕ ಎಂಬ ಬಿರುದುಗಳನ್ನು ನೀಡಿ ಉತ್ತೇಜನ ನೀಡಿದರು.

---

[1] ಏ. ಅಪ್ಪಾದೊರೈಯವರು ದಕ್ಷಿಣ ಭಾರತದ ಆರ್ಥಿಕ ವ್ಯವಸ್ಥೆಯ ಬಗ್ಗೆ ೧೯೩೬ರಲ್ಲಿ ಮೊತ್ತಮೊದಲ ಬಾರಿಗೆ ಸಮಗ್ರ ಅಧ್ಯಯನ ನಡೆಸಿದ್ದಾರೆ. ಇವರು ತಮ್ಮ ಕೃತಿಯಲ್ಲಿ ವಿವಿಧ ಉತ್ಪಾದಕ ವರ್ಗಗಳು ಹಾಗೂ ಅವರ ಸಂಘಟನೆಗಳ ಚಟುವಟಿಕೆಗಳನ್ನು ಚರ್ಚಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೊ. ಎಕಾನಮಿಕ್ ಕಂಡೀಷನ್ಸ್ ಇನ್ ಸದರನ್ ಇಂಡಿಯಾ, ೨ ಸಂಪುಟಗಳು, ಮರುಮುದ್ರಣ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್, ೧೯೯೦.

[2] ಇಪ್ಪತ್ತನೇ ಶತಮಾನದ ಆದಿ ಭಾಗದಲ್ಲಿ ಅಂದರೆ ೧೯೧೧ರಲ್ಲಿ ಸಿ. ಹಯವದನ ರಾವ್‌ರ ಅರ್ಲಿ ಸೌಥ್ ಇಂಡಿಯನ್ ಫೈನಾನ್ಸ್ ಅಂಡರ್ ವಿಜಯನಗರ್ ಕಿಂಗ್ಸ್, ಇನ್ ಇಂಡಿಯನ್ ಆಂಟಿಕ್ವೇರಿ, ಬಾಂಬೆ, ಪುಟಗಳು ೨೬೨-೭೨, ಲೇಖನದೊಂದಿಗೆ ಕರ್ನಾಟಕದ ಆರ್ಥಿಕ

ವ್ಯವಸ್ಥೆಯನ್ನು ಅಧ್ಯಯನ ಮಾಡಲು ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಮುಖ್ಯವಾದು ವುಗಳೆಂದರೆ;ಚಂದ್ರಶೇಖರ ಶಾಸ್ತ್ರಿ ಎಸ್. 'ಎಕನಾಮಿಕ್ ಕಂಡೀಷನ್ಸ್ ಅಂಡರ್ ದಿ ಹೊಯ್ಸಳಾಸ್', ಇನ್ ಹಾಫ್ ಯಿಯರ್ಲಿ ಜರ್ನಲ್ ಆಫ್ ಮೈಸೂರು ಯೂನಿವರ್ಸಿಟಿ (ಆರ್ಟ್ಸ್), ೨ (೨), ಮೈಸೂರು, ೧೯೨೮, ಪುಟಗಳು. ೧೯೬-೨೨೩, ಜೆ.ಎನ್. ಚೌಧರಿ, 'ಸೋಷಿಯಲ್ ಅಂಡ್ ಎಕನಾಮಿಕ್ ಕಂಡಿಷನ್ಸ್ ಆಫ್ ದಿ ಪೀಪಲ್ ಅಂಡರ್ ದಿ ಬಹಮನಿ ಸುಲ್ತನೇಟ್, ಇನ್ ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ, ೪, ಕಲ್ಕತ್ತಾ, ೧೯೨೮, ಪುಟಗಳು. ೭೨೦-೨೪, ಸಾಲೆತೂರ್ ಆರ್.ಎನ್., 'ದಿ ಕೆಳದಿ ರೆವಿನ್ಯೂ ಸಿಸ್ಟಮ್', ಇನ್ ಜರ್ನಲ್ ಆಫ್ ಇಂಡಿಯನ್ ಹಿಸ್ಟ್ರಿ, ೧೮ (೧), ಟ್ರಿವೇಂಡ್ರಮ್, ೧೯೩೯, ಪುಟಗಳು. ೭೦-೮೮, ಮತ್ತು ಕುರ್ಮಾರ್ಕರ್ ಎ.ಪಿ., 'ಎಕನಾಮಿಕ ಕಂಡೀಷನ್ಸ್ ಇನ್ ಮೆಡಿವಲ್ ಕರ್ನಾಟಕ', ಇನ್ ಕ್ವಾರ್ಟಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಸಂ. ೩೯ (೩), ಬೆಂಗಳೂರು, ೧೯೪೯, ಪುಟಗಳು. ೧೫೮-೧೭೧.

[3] ಅ. ಈ ಲೇಖನವು ಪ್ರಾಚೀನ ಕಾಲದ ಬೇಡ ಬುಡಕಟ್ಟಿನ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿ ರುವುದರಿಂದ ಎಲ್ಲಾ ರೀತಿಯ ಬೇಟೆಗಾರರನ್ನು ಅಂದರೆ ಕಾಡಿನಲ್ಲಿ, ಬೆಟ್ಟಗುಡ್ಡಗಳಲ್ಲಿ ಕಾಡುಪ್ರಾಣಿಗಳನ್ನು ಮತ್ತು ನೀರಿನಲ್ಲಿ ಮೀನನ್ನು ಬೇಟೆಯಾಡುವವರನ್ನು ಬೇಡರೆಂದು ತಿಳಿಯಲಾಗಿದೆ. ಕಾಲಾಂತರದಲ್ಲಿ ಬೇಟೆಯ ವಿಧಾನ ಮತ್ತು ಉಪಕರಣಗಳು ಬದಲಾದಂತೆ ಬೇಟೆಗಾರರಲ್ಲಿ ಸಣ್ಣ ಪ್ರಮಾಣದ ವ್ಯತ್ಯಾಸಗಳುಂಟಾದವು. ಈ ಜನಾಂಗ ಇಂದು ಮೀಸಲಾತಿ ವಿಷಯದಲ್ಲಿ ಬೇರೆ ಬೇರೆಯಾಗಿ ಕಂಡುಬಂದರೂ, ಪ್ರಾಚೀನ ಕಾಲದಲ್ಲಿ ಇವರೆಲ್ಲಾ (ಬೇಟೆ ಗಾರರು)ಸಾಂಸ್ಕೃತಿಕವಾಗಿ ಮತ್ತು ಜನಾಂಗೀಯವಾಗಿ ಒಂದೇ ವರ್ಗಕ್ಕೆ ಸೇರಿದವರಾಗಿದ್ದರು. ಆದ್ದರಿಂದ ಈ ಲೇಖನದಲ್ಲಿ ಬೇಡ, ಬೇಟೆ ಮತ್ತು ಬೇಟೆಗಾರರು ಎಂಬ ಪದಗಳನ್ನು ಬೇಡರಿಗೆ ಸಮಾನವಾದದ್ದೆಂದು ಅರ್ಥೈಸಿಕೊಳ್ಳಬೇಕು.

[4] ಅ. ಸುಂದರ, ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಬೆಂಗಳೂರು, ೧೯೯೪, ಪುಟಗಳು. ೧೦-೧೫.

[5] ಈಗಿನ ಹಾವೇರಿ ಜಿಲ್ಲೆಯಲ್ಲಿ (ಅಂದು ಧಾರವಾಡ ಜಿಲ್ಲೆ)ರುವ ಹಳ್ಳೂರಿನಲ್ಲಿ ಉತ್ಖನನ ನಡೆಸಿದಾಗ ಉದ್ಭವಾದ ಕಬ್ಬಿಣದ ಖಡ್ಗಗಳು ದೊರೆತಿವೆ. ಹೆಚ್ಚಿನ ಮಾಹಿತಿಗಾಗಿ ನೋಡಿ. ಗುರುರಾಜ ರಾವ್ ಬಿ.ಕೆ., ಮೆಗಾಲಿಥಿಕ್ ಕಲ್ಚರ್ ಇನ್ ಸೌಥ್ ಇಂಡಿಯಾ, ಯೂನಿವರ್ಸಿಟಿ ಆಫ್ ಮೈಸೂರು, ೧೯೭೨, ಪುಟಗಳು ೧೭೩-೧೮೦, ಮತ್ತು ಸುಂದರ ಅ., ದಿ. ಅರ್ಲಿ ಛೇಂಬರ್ ಟೂಂಬ್ಸ್ ಆಫ್ ಸೌಥ್ ಇಂಡಿಯಾ, ದೆಹಲಿ, ೧೯೭೫, ಪುಟ. ೧೯೨.

[6] ನಾಗರಾಜ ರಾವ್ ಎಂ.ಎಸ್., ಮತ್ತು ಮಲ್ಹೋತ್ರ ಕೆ.ಸಿ., ಯವರು ತೆಕ್ಕಲಕೋಟದ ಹೊಸ ಶಿಲಾಯುಗದ ನೆಲೆಗಳನ್ನು ಉತ್ಖನನ ಮಾಡಿದ ಸಮಯದಲ್ಲಿ ದೊರೆತ ಮಾನವ ಆಸ್ತಿ ಪಂಜರಗಳು ಇಂದಿನ ಬೋಯಾ ಜನಾಂಗದ ಶರೀರದ ಎಲ್ಲಾ ಆಕರಗಳನ್ನು ಹೋಲುತ್ತವೆಂದು ಅಭಿಪ್ರಾಯಪಟ್ಟಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೋಡಿ ಅವರ ಪುಸ್ತಕ 'ದಿ ಸ್ಟೋನ್ ಏಜ್ ಹಿಲ್ಲ್ ಡ್ವೆಲ್ಲರ್ಸ್ ಆಫ್ ತೆಕ್ಕಲಕೋಟಾ', ಪುನಾ, ೧೯೬೫ ಎ, ಪುಟ. ೧೫೯. ಸೈಟೆಡ್ ಇನ್ ಸುಂದರ ಅ., ದಿ ಅರ್ಲಿ ಛೇಂಬರ್ ಟೂಂಬ್ಸ್ ಆಫ್ ಸೌಥ್ ಇಂಡಿಯಾ, ದೆಹಲಿ, ೧೯೭೫, ಪು. ೧೯೫.

[7] ನೀಲಕಂಠ ಶಾಸ್ತ್ರಿ ಕೆ.ಎ., ಸಂಗಮ್ ಲಿಟರೇಚರ್ :ಇಟ್ಸ್ ಕಲ್ಟ್ಸ್ ಅಂಡ್ ಕಲ್ಚರ್ಸ್, ಮದ್ರಾಸ್, ೧೯೭೨, ಪು. ೭

[8] ಅದೇ., ಪು. ೨೧.

[9] ಅದೇ., ಪು. ೩೧.

[10] ಅದೇ., ಪು. ೩೨.

[11] ಅದೇ., ಪು. ૩೮.

[12] ಅದೇ., ಪು. ૩૩.

[13] ಎಡ್ಗರ್ ಥರ್ಸ್ಟನ್, ಕಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಸಂ. ೧, ಮರುಮುದ್ರಣ, (ದೆಹಲಿ, ೧೯೭೫), ಪು. ೧೮೪.

[14] ಅದೇ

[15] ಶಾಮಶಾಸ್ತ್ರಿ ಆರ್., ಅನುವಾದಿಸಿರುವ ಕೌಟಿಲ್ಯನ ಅರ್ಥಶಾಸ್ತ್ರ, ೯ನೇ ಆವೃತ್ತಿ, ಮೈಸೂರು, ೧೯೮೮, ಪು. ૩೬೦.

[16] ಅದೇ., ಪು. ૩೬೦.

[17] ಅದೇ., ಪುಟಗಳು. ૩೭೬-೭೭.

[18] ರಾಜರಾಮ ಹೆಗ್ಡೆಯವರು ಬಿಲ್ಲರು ಮೂಲತಃ ಬೇಡರು ಎಂದು ತಮ್ಮ ಲೇಖನದಲ್ಲಿ ಇತ್ತೀಚೆಗೆ ಪ್ರತಿಪಾದಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೋಡಿ. 'ಬಿಲ್ಲಮೂನೂರ್ವರು :ಕನ್ನಡ ಶಾಸನಗಳಲ್ಲಿ ಸಮುದಾಯಗಳ ಇತಿಹಾಸ'ಇನ್ ಪ್ರೊ. ಲಕ್ಷ್ಮಣ್ ತೆಲಗಾವಿ ಸಂಪಾದಿಸಿ ರುವ ಚರಿತ್ರೆ ಅಧ್ಯಯನ, ಸಂ. ೧, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪುಟಗಳು. ೯೧-೧೦೧.

[19] ಕೊಸಾಂಬಿ ಡಿ.ಡಿ., ಏನ್ಸಿಯಂಟ್ ಇಂಡಿಯಾ, ಮರುಮುದ್ರಣ, ನವದೆಹಲಿ, ೧೯೯೦, ಪು. ४૩.

[20] ಅದೇ., ಪು. ४೫.

[21] ಅದೇ., ಪು. ೫೧.

[22] ಶರ್ಮಾ ಆರ್.ಎಸ್., ಶೂದ್ರಾಸ್ ಇನ್ ಏನ್ಸಿಯಂಟ ಇಂಡಿಯಾ, ಮರುಮುದ್ರಣ, ನವದೆಹಲಿ, ೧೯೯೦, ಪು. ೫೦.

[23] ಅದೇ., ಪು. ೨೯೧.

[24] ಅದೇ

[25] ಅದೇ

[26] ಅದೇ

[27] ಅದೇ., ಪುಟಗಳು. ೨೯೧-೯೨.

[28] ಅದೇ., ಪುಟಗಳು. ૩૩೫-૩೭.

[29] ಮಜುಮ್‌ದಾರ್ ಆರ್.ಸಿ., ಏನ್ಸಿಯಂಟ್ ಇಂಡಿಯಾ, ದೆಹಲಿ, ೧೯೭೭, ಪು. ೩೫೧.

[30] ಎಪಿಗ್ರಾಫಿಯಾ ಕರ್ನಾಟಿಕಾ, ಸಂ. ೧೦., ಮುಳಬಾಗಿಲು. ೮೫ (ಹಳೆಯ ಆವೃತ್ತಿ).

[31] ಅದೇ., ಪು. ೧೬೨.

[32] ಚಿದಾನಂದಮೂರ್ತಿ ಎಂ., 'ಬೇಟೆಯ ವೀರಗಲ್ಲುಗಳು', ಉದಯವಾಣಿ, ದೀಪಾವಳಿ ಸಂಚಿಕೆ, ೧೯೭೩, ಪುಟ. ೬೫.

[33] ಭಾರತಿ ಬಿ.ಆರ್. ಮತ್ತು ಗುರು ಎ.ಆರ್., 'ಮರಸಣಿಗೆಯ ಅಪರೂಪದ ಬೇಟೆ ವೀರಗಲ್ಲು', ಇತಿಹಾಸ ದರ್ಶನ, ಸಂ. ೧೬, ಬೆಂಗಳೂರು, ೨೦೦೧, ಪುಟಗಳು. ४೮-೫೧.

[34] ಗೋಪಾಲರಾವ್ ಹೆಚ್.ಎಸ್., 'ಕೈದಾಳದ ಹುಲಿ ಬೇಟೆಯ ವೀರಗಲ್ಲು ಶಾಸನ', ಇತಿಹಾಸ ದರ್ಶನ, ಸಂ. ೪, ಬೆಂಗಳೂರು, ೧೯೮೯, ಪು. ೧೭.

[35] ವಿರೂಪಾಕ್ಷಿ ಪೂಜಾರಹಳ್ಳಿ, 'ವಿಜಯನಗರ ಕಾಲದ ವಾಸ್ತು ಶಿಲ್ಪದಲ್ಲಿ ಬೇಟೆ ಚಿತ್ರಣ', ಇತಿಹಾಸ ದರ್ಶನ, ಸಂ. ೧೪, ಬೆಂಗಳೂರು, ೧೯೯೯, ಪುಟಗಳು. ೧೬೬-೧೭೩.

[36] ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್, ೧೯೨೩, ಪು. ೮೩.

[37] ಎ.ಕ. ಸಂ.೭, ನಾಗಮಂಗಲ, ಪುಟ. ೩೪.

[38] ಅದೇ., ಸಂ.೮, ಆಲೂರು, ಪುಟ. ೩೫.

[39] ಅದೇ., ಸಂ. ೯, ಬೇಲೂರು, ಪುಟ. ೩೪೦.

[40] ಅದೇ., ಸಂಖ್ಯೆ. ೫೫೦.

[41] ಅದೇ., ಸಂ. ೬, (ಹ), ತರೀಕೆರೆ, ಪುಟ. ೮೪.

[42] ಅದೇ., ಸಂ. ೫, ಕೃಷ್ಣರಾಜನಗರ, ಪುಟ. ೮.

[43] ಅದೇ., ಸಂ. ೧೧, ಚಿಕ್ಕಮಗಳೂರು, ಪುಟ. ೫೩.

# ವಿಜಯನಗರ ಪೂರ್ವಕಾಲೀನ ಬೇಡರು(ತಳವಾರರು)

ಬೇಡ ಬುಡಕಟ್ಟಿನ ಉಪಪಂಗಡವಾದ ತಳವಾರರನ್ನು ಶಾಸನಗಳು ತಳಾರ, ತಳವಾರ, ತಳವಾರಿಕೆಯವರು ಮತ್ತು ಕಾವಲುಗಾರ ಎಂದು ಉಲ್ಲೇಖಿಸಿವೆ. ತಳವಾರ ಎಂದರೆ ಒಂದು ಸ್ಥಳದ ವಾರಸುದಾರ. ತಳವಾರಿಕೆ ಎಂಬುದು ಅಧಿಕಾರದ ಸಂಕೇತ. ಕ್ರಿ.ಪೂ. ೧೦೦ರ ಆಂಧ್ರದ ಭಟ್ಟಿಪ್ರೊಳು ಶಾಸನವು

[1]ತಳವಾರರ ಬಗ್ಗೆ ಮೊದಲು ಬೆಳಕು ನೀಡಿದೆ. ಇದರ ಪ್ರಕಾರ ತಳವಾರ ಎಂಬುವವನು ಒಬ್ಬ ಅಧಿಕಾರಿಯಾಗಿದ್ದನು. ಕ್ರಿ.ಶ. ೧೦೧೮ರ ಕೊಪ್ಪಳ ಜಿಲ್ಲೆ ಮತ್ತು ಅದೇ ತಾಲ್ಲೋಕಿನ ಹಲಗೇರಿ ಶಾಸನವು[2]ತಳಾರ ನಾಯಕ ಎರೆಯಮ್ಮನು ಬೆಣ್ಣೆಕಲ್ಲು ಸೀಮೆ ಯುದ್ಧದಲ್ಲಿ ಸತ್ತಾಗ ಅವನ ಸ್ಮರಣೆಗೋಸ್ಕರ ಸ್ಮಾರಕವನ್ನು (ವೀರಗಲ್ಲು) ನಿಲ್ಲಿಸಿದುದನ್ನು ತಿಳಿಸುತ್ತದೆ.ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೋಕಿನ ಚಿಕ್ಕಹನ ಸೋಗೆಯ ಕ್ರಿ.ಶ. ೧೨ನೇ ಶತಮಾನದ ಶಾಸನವು[3]ಹನಸೋಗೆಯಲ್ಲಿ ಹುಟ್ಟಿದ ಬಣ್ಣಜ್ಜನ ಮಗ ತಳಾ(ವಾ)ರ ಉತ್ತಜನು, ಗಾಳವನವಾಡಿ ಹನಿಬ್ಬನಾಯಕರು ಕೋಳಿಯೂರ ಕೋಟೆ ಯನ್ನು ಮುತ್ತಿದಾಗ ಅವರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ. ಅದೇ ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ಮಲೆಯೂರು ಗ್ರಾಮದ ಕ್ರಿ.ಶ. ೧೪೨೨ರ ಶಾಸನವು[4]ತಳವಾರಿಕೆಯಿಂದ ಬರುತ್ತಿದ್ದ ಸುಂಕವನ್ನು ತಿಳಿಸುತ್ತದೆ. ಕ್ರಿ.ಶ. ೧೪೬೫-೬೬ರ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೋಕಿನ ಬೆಳ್ಳಾಲೆ ಶಾಸನವು[5]ಹಳೆಯ ತಳವಾರಿಕೆಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೬೪೪ರ ಹಾಸನ ಜಿಲ್ಲೆ ಮತ್ತು ಅದೇ ತಾಲ್ಲೋಕಿನ ಗೊರೂರು ಶಾಸನವು[6]ತಳವಾರ ನರಸಿಂಗಣ್ಣನಿಗೆ ಅಲ್ಲಿಯ ಆಶೇಷ (ಎಲ್ಲಾ) ಮಹಾಜನಗಳು ಆ ಗ್ರಾಮವನ್ನು ಜೀರ್ಣೋದ್ಧಾರ ಮಾಡುವಂತೆ ಅರಿಕೆ ಮಾಡಿಕೊಂಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೪೬೭ರ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೋಕಿನ ಮುಳ್ಳೂರು ಶಾಸನವು[7]ತಳವಾರಿಕೆಯಿಂದ ಬರುತ್ತಿದ್ದ ಸುಂಕವನ್ನು ತಿಳಿಸುತ್ತದೆ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೋಕಿನ ಕ್ರಿ.ಶ. ೧೫೨೮ ಮತ್ತು ೧೫೫೦-೫೧ರ ಮೇಲುಕೋಟೆಯ ಎರಡು ಶಾಸನಗಳು[8]ಸಿಂಧು ಘಟ್ಟದವರನ್ನು ತಳವಾರರನ್ನಾಗಿ ಇಟ್ಟುಕೊಂಡಿದ್ದು ಹಾಗೂ ಅದರಿಂದ ಬರುತ್ತಿದ್ದ ಆದಾಯ ೨೬ ಗದ್ಯಾಣಗಳೆಂದು ತಿಳಿಸುತ್ತದೆ. ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ದಾಸನಪುರದ ಕ್ರಿ.ಶ. ೧೫೩೬ರ ಶಾಸನವು[9]ತಳವಾರಿಕೆಯಿಂದ ಬರುತ್ತಿದ್ದ ಸುಂಕವನ್ನು ತಿಳಿಸುತ್ತದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರಾ ತಾಲ್ಲೋಕಿನ ಅಮರಾಪುರಂನ ವೀರಗಲ್ಲು ಶಾಸನವು[10]ಕುರುಳೆಯ ನಾಯಕ ಎಂಬುವವನು ತುರುಗಳನ್ನು ಸೆರೆಹಿಡಿದಾಗ ತೈಲಂಗೆರೆಯ ತಳವಾರ ಬೊಮ್ಮಯ್ಯನಾಯಕನ ಮಗ ಮುಂಡಿನ ಬೊಮ್ಮಯ್ಯನು ಹೋರಾಟ ಮಾಡಿ ಸತ್ತಿದ್ದನ್ನು ತಿಳಿಸುತ್ತದೆ.

ಈ ಮೇಲಿನ ಶಾಸನಗಳಿಂದ ತಿಳಿದುಬರುವುದೇನೆಂದರೆ, ಸಾಮಾನ್ಯವಾಗಿ ಈ ಜವಾಬ್ದಾರಿಯನ್ನು ಅಂದರೆ ಒಂದು ಸ್ಥಳದ ರಕ್ಷಣೆಯ ಹೊಣೆಯನ್ನು ಆಡಳಿತಾಧಿಕಾರಿಗಳು ಬೇಟೆಯ ವೃತ್ತಿಯಲ್ಲಿ ಪರಿಣತಿಯನ್ನು ಮತ್ತು ಆಯುಧಗಳನ್ನು ಬೇಟೆಗಾರರು ಹೊಂದಿದ್ದ ರಿಂದ ಬೇಡರಿಗೆ ವಹಿಸಿ ಅವರಿಂದ ಕಂದಾಯವನ್ನು ಸಂಗ್ರಹಿಸುತ್ತಿದ್ದರು. ಈ ರೀತಿ ಒಂದು ಸ್ಥಳದ ರಕ್ಷಣೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರಿಂದ ಅಲ್ಲಿಯ ಉತ್ಪತ್ತಿಯ ಮೇಲೆ ಇವರ ಹತೋಟಿಯಿತ್ತು. ಇದು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಾಕಷ್ಟು ಪ್ರಮಾಣದಲ್ಲಿ ನೆರವಾಗಿರಬಹುದು.

**ಯೋಧರು**

ಬೇಡ ಜನಾಂಗದ ಮತ್ತೊಂದು ಉಪ ಪಂಗಡವಾದ ಪರಿವಾರದವರ ಬಗ್ಗೆ ತಮಿಳು ಶಾಸನಗಳು ಬೆಳಕು ಬೀರುತ್ತವೆ. ಕನ್ನಡ ನಿಘಂಟಿನ ಪ್ರಕಾರ ಪರಿವಾರ ಎಂದರೆ ಸುತ್ತಲಿನ ಜನ. ಪರಿಚಾರಕ ಎಂದರೆ ಸೇವಕ. ಅಂದರೆ ಯಾರು ಆಳರಸರ ಸೇವೆಯಲ್ಲಿದ್ದರೋ ಅಂತಹವರನ್ನು ಪರಿವಾರ ಅಥವಾ ರಾಜಪರಿವಾರದವರೆಂದು ಕರೆಯಲಾಗಿದೆ. ಎಡ್ಗರ್ ಥರ್ಸ್ಟನ್‌ರವರು ಕ್ರಿ.ಶ. ೧೮೯೧ರ ಮದ್ರಾಸ್ ಜನಗಣತಿ ಆಧಾರದ ಮೇಲೆ ಇವರು ಮೂಲತಃ ತೆಲುಗಿನವರಾಗಿದ್ದು, ಬೇಟೆಯ ವಂಶಪರಂಪರೆಯಾದ ಕುಲಕಸುಬೆಂದು ಅಭಿಪ್ರಾಯಪಟ್ಟಿದ್ದಾರೆ. ಇವರು

ಮುಂದುವರಿದು ಕ್ರಿ.ಶ. ೧೯೦೧ರ ಜನಗಣತಿಯ ಆಧಾರದ ಮೇಲೆ ಇವರು ಸಹ ಪಲ್ಲಕ್ಕಿ ಅಥವಾ ಮೇಣೆಯನ್ನು ಹೊರುವ ಕೆಲಸದಲ್ಲಿ ನಿಯೋಜಿತ ರಾಗಿದ್ದು, ಬೋಯಿ ಅಥವಾ ಪರಿವಾರದವರೆಂದು ಕರೆದಿದ್ದಾರೆ.[11] ದಕ್ಷಿಣ ಭಾರತದ ಪ್ರಸಿದ್ಧ ಇತಿಹಾಸಕಾರ ಕೆ.ಎ. ನೀಲಕಂಠಶಾಸ್ತ್ರಿಯವರುಇವರ ಬಗ್ಗೆಹೆಚ್ಚು ಬೆಳಕು ಚೆಲ್ಲಿದ್ದಾರೆ. ಇವರು ತಮ್ಮ ಪುಸ್ತಕ 'ದಿ ಚೋಳಾಸ್'ದಲ್ಲಿ ಚೋಳ ರಾಜರಾಜನ ಮನೆಯ ಸಿಬ್ಬಂದಿಯು (Royal household) ಹಲವಾರು ರೀತಿಯ ಸೇವಕರನ್ನು ಒಳಗೊಂಡಿದ್ದು, ಅದರಲ್ಲಿ ರಾಜನ ಪ್ರಮುಖ ಅಂಗರಕ್ಷಕರಾಗಿದ್ದವರನ್ನು ಪರಿವಾರದವರೆಂದು ತಂಜಾವೂರಿನ ಶಾಸನವನ್ನಾಧರಿಸಿ ಹೇಳಿದ್ದಾರೆ.[12] ಈ ಶಾಸನವು ಒಂದನೇ ರಾಜರಾಜನ (ಕ್ರಿ.ಶ. ೯೮೫-೧೦೧೪) ಕಾಲಕ್ಕೆ ಸೇರಿ ದ್ದಾಗಿದೆ. ಇವರ ನಂತರ ದಕ್ಷಿಣ ಭಾರತದ ಇತಿಹಾಸದ ಬಗ್ಗೆಹೆಚ್ಚು ಬೆಳಕು ಬೀರಿದವರೆಂದರೆ ಟಿ.ವಿ. ಮಹಾಲಿಂಗಮ್ ಅವರು. ಇವರು ತಮ್ಮ 'ಸೌಥ್ ಇಂಡಿಯನ್ ಪಾಲಿಟಿ'ಯಲ್ಲಿ ಚೋಳರ ಕಾಲದ ಸೈನಿಕ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸುವಾಗ ಚೋಳರ ಕಾಲ್ದಳವು (Infantry) ಹಲವಾರು ತುಕಡಿಗಳನ್ನು (Regiments) ಹೊಂದಿತ್ತು ಎಂದಿದ್ದಾರೆ.[13] ಒಂದನೇ ರಾಜರಾಜನ ತಂಜಾವೂರು ಶಾಸನದ ಪ್ರಕಾರ ಅವನ ಸೈನ್ಯದಲ್ಲಿ ೩೧ ತುಕಡಿಗಳಿ ದ್ದವು. ಅವುಗಳೆಂದರೆ, ಮುಮ್ಮಡಿ ಸೋಳ ತೇರಿಂದ ಪರಿವಾರಟ್ಟರ್, ಕೇರಳಾಂತಕ ತೇರಿಂದ ಪರಿವಾರಟ್ಟಾರ್, ಮೂಲ ಪರಿವಾರ ವಿಟ್ಟೇರು ಅಥವಾ ಜನನಾಥ ತೇರಿಂದ ಪರಿವಾರಟ್ಟಾರ್, ಸಿಂಗಳಾಂಕ ತೇರಿಂದ ಪರಿವಾರಟ್ಟಾರ್ ಮತ್ತು ಪರಿವಾರ ಮೆಯಕಪ್ಪಾರಗಲ್ ಇತ್ಯಾದಿ. ಈ ತುಕಡಿಗಳಿಗೆ ರಾಜನ ಬಿರುದು ಅಥವಾ ಹೆಸರನ್ನು ಇಡಲಾಗಿತ್ತು. ಇಲ್ಲಿಯೂ ಸಹ ಗಮನಿಸ ಬೇಕಾದ ಅಂಶವೆಂದರೆ, ಬೇಟೆಗಾರರು ಆಯುಧಗಳನ್ನು ಉಪಯೋಗಿಸುವುದರಲ್ಲಿ ಪರಿಣತ ರಾಗಿದ್ದರಿಂದ ಅವರನ್ನು ಆಳರಸರು ತಮ್ಮ ಸೇವೆಯಲ್ಲಿ ನಿಯೋಜಿಸಿಕೊಂಡು ಅವರ ತಂಡಕ್ಕೆ ಪರಿವಾರ ಎಂಬ ಹೆಸರನ್ನು ಇಟ್ಟಿರುವುದು. ಚೋಳರ ಕ್ರಿ.ಶ. ೯೪೯-೫೦ರಲ್ಲಿ ತಕ್ಕೋಳಂ ಯುದ್ಧದಲ್ಲಿ ರಾಷ್ಟ್ರಕೂಟರೊಡನೆ ಹೋರಾಡಾಲು ಇಂತಹ ತುಕಡಿ (ಪರಿವಾರ ದವರನ್ನು)ಗಳನ್ನು ಬಳಸಿರುವುದು ಗಮನಾರ್ಹವಾದದ್ದು. ಇಲ್ಲಿಯೂ ಸಹ ಬೇಡರು ಆಳರಸರ ಸೇವೆಯಲ್ಲಿ ಸೇರಿಕೊಂಡು ಜೀವನ ಸಾಗಿಸುತ್ತಿದ್ದುದು ಕಂಡುಬರುತ್ತದೆ.

**ಆಳರಸರ ಸೇವೆ**

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೋಕಿನ ಕಣಕಟ್ಟೆಯ ಶಾಸನಗಳು ಬೇಡರಿಗೆ ಬೋಯಾ ಮತ್ತು ಬೋವ ಎಂಬ ಹೆಸರಿದ್ದುದನ್ನು ತಿಳಿಸುತ್ತವೆ.[14] ಕನ್ನಡ ನಿಘಂಟಿನ ಪ್ರಕಾರ ಬೋಯಾ ಅಥವಾ ಬೋವಾ ಎಂದರೆ ಪಲ್ಲಕ್ಕಿ/ಮೇಣೆಯನ್ನು ಹೊರುವವರು ಎಂದರ್ಥ. ಇವರು ಆಳರಸರ ಪಲ್ಲಕ್ಕಿಯನ್ನು ಹೊರುವ ಸೇವೆಯಲ್ಲಿದುದರಿಂದ ಇವರಿಗೂ ಸಹ ಕೆಲಕಾಲ ನಂತರ ಕೆಲವು ಸ್ಥಾನಮಾನಗಳನ್ನು ನೀಡಿ ಗೌರವಿಸಿದಂತೆ ಕಾಣುತ್ತದೆ.

**ಸ್ಥಳೀಯ ಅಧಿಕಾರಿಗಳು**

ಕ್ರಿ.ಶ. ೧೪ನೇ ಶತಮಾನದಿಂದ ಬೇಡರ ಸ್ಥಳೀಯ ಅಧಿಕಾರಿಗಳಾಗಿ ಆಡಳಿತ ನಡೆಸಿದ್ದನ್ನು ಶಾಸನಗಳು ತಿಳಿಸುತ್ತವೆ. ಉದಾ. ಮೈಸೂರು ಜಿಲ್ಲೆ ಚಾಮರಾಜನಗರ ತಾಲೋಕಿನ ಹರದನ ಹಳ್ಳಿಯ ಕ್ರಿ.ಶ. ೧೩೨೪ರ ಶಾಸನವು[15] ಬೇಡಗಂಪಣ ರಾಯಣ್ಣ ನಾಯಕನು ಕುನ್ನಪನಾಗರ ಸೀಮೆಯಿಂದ ಹೊಯ್ಸಳ ದೊರೆ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಆಳುತ್ತಿದ್ದುದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೦೧೩ರ ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೋಕಿನ ಶಾಸನವು[16] ಕುರುವತ್ತಿಯ ಬೇಡಗಾವುಂಡನು ಭೂಮಿಯನ್ನು ದಾನಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೫೭ರ ಬೇಲೂರು ತಾಲ್ಲೋಕಿನ ಕಟ್ಟೆಸೋಮನಹಳ್ಳಿಯ ಶಾಸನವು[17] ಹೊಯ್ಸಳ ದೊರೆ ಒಂದನೇ ನರಸಿಂಹನ ಸಾಮಂತ ಬೇಟೆಯ ಉದಯಾದಿತ್ಯ ನಾಯಕನು ಉತ್ತರಾಯಣ ಸಂಕ್ರಮಣದಂದು ಬಿಲ್ಲೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಟ್ಟಿದ್ದನ್ನು ತಿಳಿಸುತ್ತದೆ. ಹಂಪಿ ಪರಿಸರದ ರಘುನಾಥ ದೇವಾಲಯ ಪರಿಸರದ ಕ್ರಿ.ಶ. ೧೩೮೦ರ[18] ಶ್ರೀ ವೀರಪ್ರತಾಪ ಹರಿಹರ ಮಹಾರಾಯರ ಮನೆಯ ಎಡವಂಕದ ಬೇಟೆಗಾರ ಮಲಗೆಯನಾಯ್ಕನ ಮಗ ಬದ್ದೆಯನಾಯ್ಕನು ಬೇಟೆಗಾರರ ಹೆಬ್ಬಾಗಿಲು ಮೂಡಣ ದಿಕ್ಕಿನ ಬರತೆಯ ಮೈಲಾರ ದೇವರ ಪ್ರತಿಷ್ಟೆ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೪೧೩ರ ಮೈಸೂರು ಜಿಲ್ಲೆ ಚಾಮರಾಜ ನಗರ ತಾಲ್ಲೋಕಿನ ಮೂಡಲ

ಅಗ್ರಹಾರದ ಶಾಸನವು[19] ಬಿಲ್ಲಗಾವುಂಡನು ಉಮ್ಮತ್ತೂರಿನ ಬಳಿ ಅಗ್ರಹಾರವೊಂದನ್ನು ಸ್ಥಾಪಿಸಿದುದನ್ನು ತಿಳಿಸುತ್ತದೆ. ಅದೇ ಜಿಲ್ಲೆಯ ಕೆ.ಆರ್.ನಗರ ತಾಲ್ಲೋಕಿನ ಕ್ರಿ.ಶ. ೧೫೫೭ರ ಗಳಿಗೆಕೆರೆ ಶಾಸನವು[20] ಹೊಳೆನರಸೀಪುರದ ದೊರೆ ವೆಂಕಟಪ್ಪ ನಾಯಕನು ಹಂಪಾಪುರವನ್ನು ಅವನ ತಾಯಿಯ ಪುಣ್ಯಕ್ಕೋಸ್ಕರ ರಾಮಪುರ ಎಂಬ ಅಗ್ರಹಾರವಾಗಿ ಮಾಡಿ ಗಳಿಗೆಕೆರೆಯನ್ನು ವಿಟ್ಟಲಭಟ್ಟರಿಗೆ ಅಲ್ಲಿಯ ಬೇಟೆ ಮತ್ತು ಬೇಟೆಗಾರರ ಸುಂಕದಿಂದ ಬಂದ ಆದಾಯವನ್ನು ಸರ್ವಮಾನ್ಯವಾಗಿ ಬಿಟ್ಟಿದ್ದನ್ನು ತಿಳಿಸುತ್ತದೆ. ಹಾಸನ ಜಿಲ್ಲೆ ಹೊಳೇನರಸೀಪುರ ತಾಲ್ಲೋಕಿನ ಕ್ರಿ.ಶ. ೧೬೫೮ರ ಕಲ್ಲುಬ್ಯಾಡರಹಳ್ಳಿ ಶಾಸನವು[21] ರಂಗಪ್ಪನಾಯಕನ ಮಗ ನರಸಿಂಹನಾಯಕನು ನರಸಿಂಹಪುರಕ್ಕೆ ಸೇರಿದ (ನರಸಿಂಹ ಸಮುದ್ರ) ಬೇಡರಹಳ್ಳಿಯನ್ನು ಹರಿಪಂಡಿತನಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.

ಮೇಲಿನ ವಿವರಣೆಗಳಿಂದ ತಿಳಿದುಬರುವುದೇನೆಂದರೆ ಬೇಡರು ಸ್ಥಳೀಯ ಅಧಿಕಾರಿಗಳಾಗಿ ಕಾರ್ಯವಹಿಸಿಕೊಂಡಿದ್ದರಿಂದ ಸಹಜವಾಗಿ ಉತ್ಪಾದನಾ ವಸ್ತುಗಳಾದ ಭೂಮಿ, ಮತ್ತಿತರ ವಸ್ತುಗಳು ಇವರ ಹಿಡಿತಕ್ಕೊಳಪಟ್ಟವು. ಇದರಿಂದಾಗಿ ಇವರು ಸಹ ಕಾಲಕ್ರಮೇಣ ಭೂಮಾಲೀಕರಾದರು. ಇದರಿಂದಾಗಿ ಆಡಳಿತದ ಜೊತೆಗೆ ಕೃಷಿ ಚಟುವಟಿಕೆಗಳನ್ನು ತೀವ್ರ ಗೊಳಿಸಿ ಆರ್ಥಿಕವಾಗಿ ಸಬಲರಾದರು. ಸಮಾಜದಲ್ಲಿ ತಮ್ಮ ಸ್ಥಾನ ಮಾನಗಳನ್ನು ಪಡೆದು ಕೊಳ್ಳಲು ಮತ್ತು ಇದ್ದ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು ಹಾಗೂ ಹೆಚ್ಚಿಸಿಕೊಳ್ಳಲು ಇವರು ಸಹ ಸಮಾಜದ ಉನ್ನತ ವರ್ಗದವರಂತೆ ಬ್ರಾಹ್ಮಣರಿಗೆ, ದೇವಾಲಯಗಳಿಗೆ ಭೂಮಿಯನ್ನು ದಾನ ಮಾಡುವುದನ್ನು ಪ್ರಾರಂಭಿಸಿದರು.

ಶಾಸನಗಳ ಜೊತೆಗೆ ಕರ್ನಲ್ ಕೊಲಿನ್ ಮೆಕೆಂಜಿಯವರು ಕ್ರಿ.ಶ. ೧೯ನೇ ಶತಮಾನದ ಪ್ರಾರಂಭದಲ್ಲಿ ಸಂಗ್ರಹಿಸಿದಂತಹ ಕೈಫಿಯತ್ತುಗಳು (ಸ್ಥಳಪುರಾಣಗಳು) ಸಹ ಬೇಡ ಸಮುದಾಯದ ಆರ್ಥಿಕ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತವೆ. ಉದಾ. ಹತ್ತಿಬೆಳೆಗಲ್ಲು ಕೈಫಿಯತ್ತು[22] ಬೇಡರು ಮಾಡುತ್ತಿದ್ದ ಕೆಲಸ ಮತ್ತು ಅವರು ಅಧಿಕಾರಕ್ಕೆ ಬರಲು ನೆರವಾದ ಅಂಶಗಳನ್ನು ತಿಳಿಸುತ್ತದೆ. ಇದರ ಪ್ರಕಾರ ಬೆಳಕಲ್ಲುಗುಡ್ಡದಲ್ಲಿ 'ಬೇಡರು ಪ್ರಾಬಲ್ಯ ಆಗಲಿಕ್ಕೆ ಕಾರಣ ವಿಜಯನಗರವು ತುರುಕರಿಂದ ಹಾಳಾದ ಮೇಲೆ ಈ ಬ್ಯಾಡರು (ಕೋಟೆ) ಕಟ್ಟಿಸಿಕೊಂಡರು. ಈ ಬ್ಯಾಡರು ೧೫ ಗ್ರಾಮಕ್ಕೆ ಕಾವಲಿ ತಳವಾರಿಕೆ ಮಾಡಿಕೊಂಡು ಅಧಿಕಾರ ಯಿವರೆ ಮಾಡಿಕೊಂಡು, ದಿವಾಣಕ್ಕೆ ಹಣ ಕೊಡುತಾಯಿದ್ದರು…. ಯೀ ದಿನದಲ್ಲು ಕಾವಲ ಸೋಮೆಳನಾಯಕನು ಕಾವಲ ಮಾಡಿಕೊಂಡು ಯಿದ್ದನು…. ಕಾವಲಿ ಬುಚ್ಚಪ್ಪ ನಾಯಕ ಮಗ ಚಿಕ್ಕ ಸೋಮೆಳನಾಯಕ ಕಾವಲಿ ಮಾಡಿಕೊಂಡು ಯಿದ್ದನು….'. ಇದರ ಪ್ರಕಾರ ಬೇಡರು ತಮ್ಮ ಜೀವನ ಸಾಗಿಸಲು ಕಾವಲುಗಾರಿಕೆ ಮತ್ತು ತಳವಾರಿಕೆ ಕೆಲಸ ಮಾಡುತ್ತಿದ್ದರು. ಬಳ್ಳಾರಿ ತಾಲ್ಲೋಕಿನ ಭಟ್ಟರಹಳ್ಳಿ ಕೈಫಿಯತ್ತು[23] ಬೇಡರ ಕಸುಬು ಮತ್ತು ಸಾಮಾಗ್ರಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಇದರ ಪ್ರಕಾರ 'ಕೆಲಮಂದಿ ಬ್ಯಾಡರ ನಾಯಕರು ನಾಯಿ, ಬಡಿಕೋಲು, ತಲೆಮೇಲೆ ಗಂಟು, ಕೈಯಲ್ಲಿ ಡ್ಯಾಗಿ ತೆಗೆದುಕೊಂಡು ಹೋದರು. ಕೈಯಲ್ಲಿ ಹಕ್ಕಿಪಂಜರ ಸಹಾ ತೆಗೆದುಕೊಂಡು ಹೋದರು. ಬಲೆಗಳು ಸಹ ಅವರವರ ಬೇಟೆಗಾರ್‍ರು ಅವರ ಸಾಮಾನು ತೆಗೆದುಕೊಂಡು ಹೋದರು…'. ಅರಿಕುಟಾರದ (ಉಮ್ಮತ್ತೂರು) ಕೈಫಿಯತ್ತು[24] ವೀರಭದ್ರನಾಯಕನು ಬೇಟೆ ಮಾರ್ಗವಾಗಿ ನಾಯಿ ಕಟ್ಟಿಕೊಂಡು ಬಂದು ಬೇಡರಪುರ ಗ್ರಾಮದಲ್ಲಿ ನೆಲೆಸಿದ್ದನ್ನು ತಿಳಿಸುತ್ತದೆ. ತಲಕಾಡಿನ ಎರಡು ಕೈಫಿಯತ್ತುಗಳು[25] ಗಂಗರ ರಾಜಧಾನಿಯಾದ ತಲಕಾಡನ್ನು ಹೇಗೆ ಇಬ್ಬರು ಬೇಡರಾದ ತಲ ಮತ್ತು ಕಾಡ ಎಂಬುವರು ಕಟ್ಟಿದರೆಂಬುದನ್ನು ತಿಳಿಸುತ್ತದೆ. ಇದರ ಪ್ರಕಾರ '…. ಯೀಶ್ವರಗೆ ಪೂಜೆಯನ್ನು ಮಾಡಿಕೊಂಡು ಇರಲಾಗಿ, ತಲ ಕಾಡ ಯೆಂಬ ಯಿಬ್ಬರು ಕಿರಾತರು ಬೇಟೆಗೋಸ್ಕರ ಬಂದಂತವರಾಗಿ ಯೀ ಗಜಗಳು ವೃಕ್ಷಪೂಜೆಯನ್ನು ಮಾಡುತ್ತಾಯಿದ್ದುದನ್ನು ನೋಡಿ ಆಶ್ಚರ್ಯಪಟ್ಟು ಗಜಗಳು ಹೊರಟುಹೋದ ಬಳಿಕ ಕೊಡಲಿಯಿಂದ ಆ ಮರವನ್ನು ಭೇದಿಸಿದಲ್ಲಿ ಸ್ವಾಮಿ ಶಿರಸ್ಸಿನ ಮೇಲೆ ಪೆಟ್ಟು ಬೀಳಲಾಗಿ ರಕ್ತಪ್ರಹಾರವಾಗಲು ಆ ಕಿರಾತಕರು ಮೂರ್ಚಿತರಾಗಲು….. ತಲಕಾಡ ಎಂಬ ಯಿಬ್ಬರು ಬೇಡರಿಗೆ ಸಾಯುಜ್ಯ ಪದವಿಯನ್ನು ಕೊಟ್ಟು ಈ ಕ್ಷೇತ್ರವು ನಿಮ್ಮ ಹೆಸರಿನಿಂದ ತಲಕಾಡು ಎಂಬ ನಾಮಧೇಯವುಳ್ಳದ್ದಾಗಲಿ ಎಂದು ಅಪ್ಪಣೆಕೊಟ್ಟರು…'. ಇದರಿಂದ ದಕ್ಷಿಣ ಕರ್ನಾಟಕದಲ್ಲಿಯೂ ಸಹ ಬೇಡರಿಗೆ ಕಿರಾತಕ ಎಂದು ಕರೆಯುತ್ತಿದ್ದುದು ಕಂಡುಬರುತ್ತದೆ.

ಈ ಕೈಫಿಯತ್ತುಗಳಿಂದ ತಿಳಿದುಬರುವುದೇನೆಂದರೆ, ಬೇಡರ ಕಸುಬು ಬೇಟೆಯಾಗಿದ್ದು, ಬೇಟೆಗಾಗಿ ನಾಯಿ, ಬಲೆ, ಪಂಜರ, ಕೊಡಲಿ ಮುಂತಾದ ಆಯುಧಗಳನ್ನು ಹೊಂದಿದ್ದರು. ಬೇಡರು/ಬೇಟೆಗಾರರು ವಿಜಯನಗರದ ಕಾಲದಲ್ಲಿ ಮತ್ತು ಅದಕ್ಕೆ ಮುಂಚೆ ಆಳರಸರ ಸೇವೆಯಲ್ಲಿದ್ದು ಕೆಲವು ಸೈನಿಕ ಮತ್ತು ಆಡಳಿತ ಸ್ಥಾನಮಾನಗಳನ್ನು ಹೊಂದಿದ್ದರು. ಆದರೆ ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯವು ಹಾಳಾಗಲು, ಇವರು ತಮ್ಮ ಸ್ಥಳಗಳಲ್ಲಿ ಅಥವಾ ಪ್ರಾಂತ್ಯಗಳಲ್ಲಿ ಸ್ವತಂತ್ರ ರಾಜರಾಗಿ (ತುಂಡರಸರು) ಕರ್ನಾಟಕದ ಹಲವು ಭಾಗಗಳಲ್ಲಿ ಅಧಿಕಾರಕ್ಕೆ ಬಂದರು.

ಈ ಮೇಲಿನ ದಾಖಲೆಗಳಿಂದ ತಿಳಿದುಬರುವುದೇನೆಂದರೆ, ಬೇಡ (ನಾಯಕ) ಜನಾಂಗವು ಇತರ ಜನಾಂಗಗಳಂತೆ ತನ್ನದೇ ಆದ ಇತಿಹಾಸ ಹೊಂದಿದೆ. ಇವರ ಮುಖ್ಯ ಕಸುಬು ಬೇಟೆಗಾರಿಕೆ. ಆದ್ದರಿಂದ ಇವರು ಹೆಚ್ಚಾಗಿ ಗುಡ್ಡಗಾಡು ಮತ್ತು ನದಿ, ಹಳ್ಳ ಕೊಳ್ಳಗಳ ಪ್ರದೇಶಗಳಲ್ಲಿ ವಾಸವಾಗಿದ್ದರು. ಅದಕ್ಕಾಗಿಯೇ ಇವರನ್ನು ಮಲೆಪರ್ ಎಂದು ಕ್ರಿ.ಶ. ೭ನೇ ಶತಮಾನದಲ್ಲಿ ಕರೆಯಲಾಗಿದೆ. ತಮ್ಮ ಆಹಾರವನ್ನು ಪಡೆಯಲು ಬೇಟೆಯನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡು, ಬೇಟೆಗಾಗಿ ನಾಯಿ, ಬಲೆ, ಪಂಜರ, ಬಿಲ್ಲು ಮುಂತಾದ ಆಯುಧಗಳನ್ನು ಕಾಲಕ್ರಮೇಣ ಹೊಂದಿಸಿಕೊಂಡರು. ಬೇಟೆ ಸಿಗದಿದ್ದ ಸಮಯ ದಲ್ಲಿ ಇವರು ದಾರಿಹೋಕರನ್ನು ಲೂಟಿ ಮಾಡಿ ತಮ್ಮ ಹಸಿವನ್ನು ನಿವಾರಿಸಿಕೊಳ್ಳುತ್ತಿದ್ದರು. ಹೀಗಾಗಿ ಇವರು ನಾಗರೀಕ ಸಮಾಜಕ್ಕೆ ಒಂದು ರೀತಿಯ ಪಿಡುಗಾಗಿ ಬೇಡವಾದರು. ಆದರೆ ಆಳರಸರಿಗೆ ಇವರ ಅವಶ್ಯಕತೆ ಹೆಚ್ಚಾಗಿದ್ದಂತೆ ಕಂಡುಬರುತ್ತದೆ. ಏಕೆಂದರೆ ಇವರು ಪ್ರಾಣಿಗಳನ್ನು ಕೊಲ್ಲುವುದರಲ್ಲಿ ಮತ್ತು ದಾರಿಹೋಕರನ್ನು ತಡೆದು ಹೆದರಿಸಿ ಲೂಟಿ ಮಾಡುವುದರಲ್ಲಿ ನಿಸ್ಸೀಮರಾಗಿದ್ದರಿಂದ ಆಳರಸರು ಮೊದಮೊದಲು ತಮ್ಮ ಪ್ರಾಣವನ್ನು ಕಾಪಾಡಿಕೊಳ್ಳಲು ಇವರನ್ನು ತಮ್ಮ ಅಂಗರಕ್ಷಕರನ್ನಾಗಿ ಸೇರಿಸಿಕೊಂಡರು. ನಂತರ ತಮ್ಮ ನಾಡನ್ನು ಶತ್ರುವಿನಿಂದ ಕಾಪಾಡಲು ಹಾಗೂ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಶತ್ರು ನೆಲ, ಜಲ, ಹೆಣ್ಣು ಮತ್ತು ದನಕರುಗಳನ್ನು ಅಪಹರಿಸಲು ಇವರನ್ನು ಹೆಚ್ಚುಹೆಚ್ಚಾಗಿ ತವ್ಮು ಸೇವೆಯಲ್ಲಿ ನಿಯೋಜಿಸಿಕೊಂಡು, ಇವರ ಸ್ವಾಮಿನಿಷ್ಠೆ ಮತ್ತು ಕರ್ತವ್ಯಗಳನ್ನು ಗಮನಿಸಿ ಇವರಿಗೆ ರಾಯ, ವೀರ, ಗಾವುಂಡ, ನಾಯಕ, ದಣ್ಣಾಯಕ ಇತ್ಯಾದಿ ಬಿರುದುಗಳನ್ನು ನೀಡಿ ಗೌರವಿಸಲಾರಂಭಿಸಿದರು. ಕ್ರಿ.ಶ. ೭ನೇ ಶತಮಾನದಲ್ಲಿ ಇವರನ್ನು ಮೊತ್ತಮೊದಲ ಬಾರಿಗೆ ನಾವು ಶಾಸನಗಳಲ್ಲಿ ನೋಡುವುದು ತುರುಗಳನ್ನು ಅಪಹರಿಸುವುದಕ್ಕೋಸ್ಕರ ತುರುಗಾಳಗ ಗಳಲ್ಲಿ ಬಳಸಿಕೊಂಡಿರುವುದು. ನಂತರದ ಕಾಲದಲ್ಲಿ ಇವರು ತಮ್ಮ ದೈಹಿಕ ಸಾಮರ್ಥ್ಯ ಮತ್ತು ಆಯುಧಗಳಲ್ಲಿ ನಿಪುಣತೆ ಸಾಧಿಸಿದ್ದರಿಂದ ಇವರನ್ನು ತಳವಾರರನ್ನಾಗಿ, ಸೈನಿಕರಾಗಿ (ಪರಿವಾರ) ಮತ್ತು ಆಡಳಿತಾಧಿಕಾರಿಗಳಾಗಿ ಹಲವಾರು ರಾಜಮನೆತನಗಳು ನೇಮಿಸಿ ಕೊಂಡವು. ಅಂದಿನಿಂದ ಅವರು ಕ್ರಮೇಣವಾಗಿ ಭೂಮಾಲೀಕರಾದರು. ಕ್ರಿ.ಶ. ೧೬ನೇ ಶತಮಾನದಲ್ಲಿ ವಿಜಯನಗರದ ಪತನದ ನಂತರ ಈ ಅಧಿಕಾರಿಗಳು ತಮ್ಮ ತಮ್ಮ ಪ್ರಾಂತ್ಯದ ಮೇಲೆ ಸಾರ್ವಭೌಮತ್ವವನ್ನು ಸ್ಥಾಪಿಸಿ ಸ್ವತಂತ್ರ ರಾಜರಾಗಿ ಹೊರಹೊಮ್ಮಿ ೧೮ನೇ ಶತಮಾನದಲ್ಲಿ ಪ್ರಬಲ ರಾಜಸಂಸ್ಥಾನಗಳಾಗಿ ಬೆಳೆದವು.

* * *

[1] ಸುದರ್ಶನ ಶೆನಿವರತ್ನೆ, ಕಳಿಂಗ ಅಂಡ್ ಆಂಧ್ರ :ದಿ ಪ್ರೊಸೆಸ್ ಆಫ್ ಸೆಕೆಂಡರಿ ಸ್ಟೇಟ್ ಫಾರ್ಮೇಶನ್ ಇನ್ ಆರ್ಲಿ ಇಂಡಿಯಾ, ಇನ್ ಇಂಡಿಯನ್ ಹಿಸ್ಟಾರಿಕಲ್ ರೆವಿವ್ಯೆ, ಸಂ. ೭, (ದೆಹಲಿ, ೧೯೮೧), ಪುಟಗಳು. ೫೪-೬೯.

[2] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೨, ಕೊಪ್ಪಳ. ಪುಟ. ೨೧.

[3] ಎ.ಕ. ಸಂಪುಟ. ೫, ಕೃಷ್ಣರಾಜನಗರ, ಪು. ೪೩.

[4] ಎ.ಕ. ಸಂಪುಟ ೪, ಚಾಮರಾಜನಗರ, ಪುಟ. ೩೫೫.

[5] ಎ.ಕ. ಸಂಪುಟ. ೬, ಪಾಂಡವಪುರ, ಪುಟ. ೧೨೩.

[6] ಅದೇ., ಸಂಪುಟ ೮, ಹಾಸನ, ಪುಟ. ೨೦೧.

[7] ಅದೇ., ಸಂಪುಟ ೩, ನಂಜನಗೂಡು, ಪುಟ. ೧೮೧.

[8] ಅದೇ., ಸಂಪುಟ ೬, ಪಾಂಡವಪುರ, ಪುಟಗಳು. ೧೩೩-೧೩೪.

[9] ಅದೇ., ಸಂಪುಟ ೪, ಚಾಮರಾಜನಗರ, ಪುಟ. ೩೦೨.

[10] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೫, ಭಾಗ. ೧, ಅಮರಾಪುರಂ, ಪುಟ. ೬೩.

[11] ಎಡ್ಗರ್ ಥರ್ಸ್ಟನ್, ಪೂರ್ವೋಕ್ತ, ಪುಟ. ೨೧೮.

[12] ನೀಲಕಂಠಶಾಸ್ತ್ರಿ ಕೆ.ಎ., ದಿ ಚೋಳಾಸ್, ಮರುಮುದ್ರಣ, (ಮದ್ರಾಸ್, ೧೯೮೪), ಪುಟ. ೪೫೦.

[13] ಮಹಾಲಿಂಗಮ್ ಟಿ.ವಿ., ಸೌಥ್ ಇಂಡಿಯನ್ ಪಾಲಿಟಿ, (ಮದ್ರಾಸ್, ೧೯೬೭), ಪುಟಗಳು. ೨೬೪-೬೮.

[14] ಎ.ಕ. ಸಂಪುಟ ೧೦, ಅರಸೀಕೆರೆ, ಪುಟ. ೮೬, ೮೭, ೮೮ ಮತ್ತು ೯೦.

[15] ಅದೇ., ಸಂಪುಟ ೪, ಚಾಮರಾಜನಗರ, ಪುಟ. ೨೯೨.

[16] ಅದೇ., ಸಂಪುಟ ೩, ಗುಂಡ್ಲುಪೇಟೆ, ಪುಟ. ೪೮.

[17] ಅದೇ., ಸಂಪುಟ ೯, ಬೇಲೂರು, ಪುಟ. ೪೨೩.

[18] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೩, ಹಂಪಿ ಶಾಸನಗಳು, ಸಂಖ್ಯೆ. ೨೬೫.

[19] ಎ.ಕ., ಸಂಪುಟ. ೪, ಚಾಮರಾಜನಗರ, ಪುಟ. ೧೦೪.

[20] ಅದೇ., ಸಂಪುಟ ೫. ಕೃಷ್ಣರಾಜನಗರ, ಪುಟ. ೧೦೪.

[21] ಅದೇ., ಸಂಪುಟ ೮, ಹೊಳೆನರಸೀಪುರ, ಪುಟ. ೫೫.

[22] ಕಲ್ಬುರ್ಗಿ ಎಂ.ಎಂ., ಸಂಪಾದಿಸಿದ ಕರ್ನಾಟಕ ಕೈಫಿಯತ್ತುಗಳು, ಬಳ್ಳಾರಿ ಪ್ರಾಂತ್ಯದ ಕೈಫಿಯತ್ತುಗಳು, ಸಂಖ್ಯೆ. ೨೫೧, ಪುಟಗಳು. ೫೫೬-೫೮.

[23] ಅದೇ., ಸಂಖ್ಯೆ. ೧೦೬, ಪುಟ. ೪೭೭.

[24] ಅದೇ., ಸಂಖ್ಯೆ. ೩೫೧, ಪುಟಗಳು. ೪೧೦-೧೧.

[25] ಅದೇ., ಸಂಖ್ಯೆ. ೧೭ ಮತ್ತು ೧೮, ಪುಟಗಳು. ೫೯-೬೫.

# ವಿಜಯನಗರ ಕಾಲದ ಬೇಡರು

## (ವಾಸದ ನೆಲೆ)

ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ ವಿಜಯನಗರ ಕಾಲದ ಬೇಡ ನಾಯಕರ ಚರಿತ್ರೆ ಮತ್ತು ಸಂಸ್ಕೃತಿಯ ಸಂಗತಿಗಳನ್ನು ಕುರಿತು ಚರ್ಚಿಸಲಾಗುವುದು. ಮುಖ್ಯವಾಗಿ ಬೇಡ-ನಾಯಕರು ವಿಜಯನಗರವನ್ನು ಕಟ್ಟುವಲ್ಲಿ ನಾಯಕ, ಅಮರನಾಯಕ, ನಾಯಕತನ ಮೀಸಲು ನಾಯಕ ಹೀಗೆ ಅನೇಕ ಜವಾಬ್ದಾರಿಗಳನ್ನು ವಹಿಸಿದ ಪಾತ್ರ, ಸಾಮ್ರಾಜ್ಯದ ಔನ್ನತಿಗೆ ಶ್ರಮಿಸಿದವರನ್ನು ಇಲ್ಲಿ ಸ್ಮರಿಸುವುದು ಉಚಿತ. ಮರೆಯಾದ ಐತಿಹಾಸಿಕ ಸಂಗತಿ ಗಳನ್ನು ಇಲ್ಲಿ ವಿಶ್ಲೇಷಿಸಲಾಗುವುದು.

ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ವಂಶಗಳ ಆಳ್ವಿಕೆಯಲ್ಲಿ (೧೩೩೬-೧೫೬೫) ಬೇಡ-ನಾಯಕರು ರಾಜಪ್ರಭುತ್ವದ ಆಯಕಟ್ಟಿನ ಸ್ಥಾನದಲ್ಲಿದ್ದರು. ಇನ್ನು ಕೆಲವರು ಅಧಿಕಾರೇತರ ಜವಾಬ್ದಾರಿಗಳನ್ನು ಹೊಂದಿದ್ದರು. ಹೀಗಾಗಿ ಈ ಕಾಲಘಟ್ಟದಲ್ಲಿ ಅಧಿಕಾರ ರೂಢ ಮತ್ತು ಅಧಿಕಾರ ರಹಿತ ವರ್ಗವನ್ನು ಗುರುತಿಸುವ ಪ್ರಯತ್ನ ಮಾಡಲಾಗುವುದು. ಮತ್ತೊಂದು ವರ್ಗ ಇವೆರಡು ಸ್ಥಿತಿಗಳಿಂದ ದೂರವಾಗಿದ್ದಿತು. ಅಧಿಕಾರಶಾಹಿಯಲ್ಲಿದ್ದ ಬೇಡರು ತಳಮಟ್ಟದಿಂದ ರಾಜನವರೆಗೆ ವಿವಿಧ ಬಗೆಯ ಅನನ್ಯ ಸೇವಾಕಾರ್ಯಗಳನ್ನು ಮಾಡುವುದರ ಮೂಲಕ ರಾಜನಿಗೆ ಋಣಿಯಾಗಿದ್ದರು. ಅಧಿಕಾರ ರಹಿತ ವರ್ಗದವರು ಕುಲಕಸುಬುನೊಂದಿಗೆ ಗುರುತಿಸಿಕೊಂಡಿದ್ದರು. ಮೂರನೆಯ ವರ್ಗವು ವಾಣಿಜ್ಯ ವೃತ್ತಿಗಳಿಂದ ವ್ಯಾಪಾರ ವಹಿವಾಟು ನಡೆಸುತ್ತಿದ್ದವು.

| ಕುಲಕಸುಬು | ರಕ್ಷಣೆ | ಅಧಿಕಾರ | ಇತರೆ |
|---|---|---|---|
| ಬೇಟೆಗಾರಿಕೆ(ಬೇಟೆ ತಿಪ್ಪನಾಯಕ) | ಯೋಧ | ನಾಯಕತನ | ಪೂಜಾರಿ |
| ಮೀನುಗಾರಿಕೆ | ಕ್ಷತ್ರಿಯ | ಅಮರನಾಯಕ | ಕಿಲಾರಿ |
| ಪಶುಪಾಲನೆ | ಸೈನಿಕ | ನಾಯಂಕಾರ ವ್ಯವಸ್ಥೆ | |
| ಕೃಷಿ | ಸೇನಾಪತಿ | ಪಾಳೆಯಗಾರ | ಪಲ್ಲಕ್ಕಿ ಹೋರುವುದು |
| ದಳವಾಯಿ | ದಂಡನಾಯಕ<br>ಮಹಾದಂಡನಾಯಕ | | |
| ಒಲೆಕಾರಿಕೆ | ಖಾಸಪಡೆ<br>ಬೇಡ ಪಡೆ-ದೇವರ ಪಡೆ | | |
| ನೀರಗಂಟಿ | ಮೀಸಲುಪಡೆ | | |

| | | | |
|---|---|---|---|
| | ಕಾವಲುಗಾರ | | |
| | ತಳವಾರ | | |
| | ನಾಡ ತಳವಾರ | | |
| | ಮಹಾನಾಡ ತಳವಾರ | | |
| | ಮೀಸಲು ತಳವಾರ | | |
| | ದೊರೆ-ದಳವಾಯಿ | | |
| | ಸೇನಾಪತಿ | | |
| | ರಾಜ, ಮಂತ್ರಿ, ಪಾಳೆಯಗಾರ | | |

**ಬಿ. ವಾಸದ ನೆಲೆ**

ಬೇಟೆಕಾರರ ಹೆಬ್ಬಾಗಿಲು

ತಳವಾರಘಟ್ಟ

ಮ್ಯಾಸರಹಟ್ಟಿ

ನಾಯಕಹಟ್ಟಿ (ಹಳ್ಳಿ)

ಬೇಡರಹಟ್ಟಿ (ಹಟ್ಟಿ)

ಹಂಪೆ-ಆನೆಗೊಂದಿ ಇತ್ಯಾದಿ.

**ಬೇಟೆಗಾರಿಕೆ**

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೆ ಬೇಟೆ ಸನ್ನಿವೇಶ ಒಂದು ಕಾರಣ. ಯುದ್ಧಕ್ಕೆ ಹೊರಡುವ ಸಂಭ್ರಮದಂತೆ ಬೇಟೆಗೂ ಹೋಗುವ ಪರಿಪಾಟ ಇಟ್ಟುಕೊಂಡಿದ್ದರು. ಬೇಡಪಡೆ, ಮೀಸಲುಪಡೆ ಹಾಗೂ ಗುರಿಕಾರನ ನೆರವಿನೊಂದಿಗೆ ಅರಸ ಬೇಟೆಗೆ ಹೊರಡುತ್ತಿದ್ದ. ಉದಾ. ಹರಿಹರ, ೨ನೇ ದೇವರಾಯ. ವಿಜಯನಗರ ಕಾಲದ ದೇವಾಲಯಗಳಲ್ಲಿ ಬೇಟೆ ಉಲ್ಲೇಖವಿದೆ. ಶೃಂಗೇರಿ, ಭಾಗಮಂಡಲ, ಲೇಪಾಕ್ಷಿ, ಮೇಲುಕೋಟೆ, ನಂದಿಬೆಟ್ಟ, ಎಡೆಯೂರು, ಕಲ್ಲೂರು, ಹಿರಿಯೂರು, ಶ್ರೀಶೈಲಂ, ಯಗಂಟಿ, ಪುಷ್ಪಗಿರಿ, ಶಂಕರಗಿರಿಗಳ ದೇವಾಲಯಗಳಲ್ಲಿ ಕಿರಾತಾರ್ಜುನೀಯ ಪ್ರಸಂಗವಿದೆ. ಎಂದಾಗ ಬೇಟೆ ಲೌಕಿಕ ಮತ್ತು ಅಲೌಕಿಕವಾಗಿ ಪ್ರಚಲಿತದಲ್ಲಿತ್ತು ಎಂಬುದು ಸ್ಪಷ್ಟ. ಈ ಕಾಲದ ಬೇಟೆ ಆಹಾರ ಸಂಪಾದನೆ, ಸ್ವಯಂ ರಕ್ಷಣೆ, ಮನೋರಂಜನೆ, ಪ್ರಕೃತಿ ಸಮತೋಲನಕ್ಕಾಗಿ ಜನಸಾಮಾನ್ಯರಿಂದ ರಾಜ ಪ್ರಭುತ್ವದವರೆಗೆ ಕ್ರೀಡೆಯಾಗಿ, ಆಹಾರ ಮಾಧ್ಯಮವಾಗಿ ಪ್ರಸ್ತುತತೆಯನ್ನು ಪಡೆದಿತ್ತು. ವಿದೇಶಿ ಯಾತ್ರಿಕರಾದ ವೇರ್ಥಮ, ಅಬ್ದುಲ್ ರಜಾಕ್, ಬಾರ್ಬೊಸ, ಪೆರ್ನಾಂವ್, ನೂನಿಜ್ ಮೊದಲಾದವರು ವಿಜಯನಗರ ಕಾಲದ ಬೇಟೆ ಬಗ್ಗೆ ತಿಳಿಸಿದ್ದಾರೆ.

[1]

ವಿಜಯನಗರ ಕಾಲದಲ್ಲಿ ಪ್ರಾಣಿ ಬೇಟೆ ಮಾತ್ರವಲ್ಲದೆ, ಮೀನುಗಾರಿಕೆ ಸಹಾ ರೂಢಿ ಯಲ್ಲಿತ್ತು. ಕೃಷ್ಣಾ, ತುಂಗಭದ್ರಾ, ಕಾವೇರಿ, ಮಲಪ್ರಭಾ ಮೊದಲಾದ ನದಿ ಹಾಗೂ ಅರಬ್ಬಿ ಸಮುದ್ರ, ಬಂಗಾಳ ಕೊಲ್ಲಿಗಳಲ್ಲಿ ಹಿಂದಿನಿಂದಲೂ ಮೀನುಗಾರಿಕೆ ಇತ್ತು. ಭಟ್ಕಳ, ಹೊನ್ನಾವರ, ಬಾರಕೂರು, ಮಂಗಳೂರು ಬಂದರುಗಳಲ್ಲಿ ಮೀನುಗಾರಿಕೆ ಅವ್ಯಹತವಾಗಿ ನಡೆದಿತ್ತು. ಮೀನುಬೇಟೆ ವಿಜಯನಗರ ಕಾಲದಲ್ಲಿ ಯುದ್ಧದಷ್ಟೇ ಸಂಭ್ರಮವನ್ನು ಬಯಸಿತ್ತು. ಇದು ಉಪವೃತ್ತಿಯಾಗಿದ್ದರೂ ಕೆಲವೊಂದು ವರ್ಗಗಳಿಗೆ ಜೀವನಾವಶ್ಯಕ ವೃತ್ತಿಯಾಗಿ, ರಾಜ್ಯಕ್ಕೆ ಆದಾಯ ತರುವ ಕಸುಬಾಗಿತ್ತು. ಇದೊಂದು ಲಾಭದಾಯಕ ಉದ್ಯಮವಾಗಿತ್ತು. ಹರಿಹರನ ಗಿರಿಜಾಕಲ್ಯಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ ಮೀನಿನ ಬೇಟೆ ಪ್ರಸಂಗಗಳಿವೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಮೀನಿನ ಗೊಂಚಲು ಮತ್ತು ೧೪ ವಿವಿಧ ಬಲೆಗಳನ್ನು ರಾಘವಾಂಕ ತಿಳಿಸಿದ್ದಾನೆ. ಕನಕದಾಸರು ಮೋಹನ ತರಂಗಿಣಿಯಲ್ಲಿ ಜಲಗಾರ, ಮೀನುಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ವಿಜಯನಗರ ಕಾಲದಲ್ಲಿ ಬಹುತೇಕ ಜನರಿಗೆ ಮೀನು ಇಷ್ಟ. ಬ್ರಾಹ್ಮಣರು ಮೀನನ್ನು ತಿನ್ನುತ್ತಿರಲಿಲ್ಲ. ಬಲೆ, ಕೂಳೆ, ಗಾಣ, ಬಾಣ-ಬಿಲ್ಲುಗಳ ಪ್ರಸ್ತಾಪವಿದೆ. ಮೀನುಗಾರಿಕೆ ನಡೆಸುವ ಬೆಸ್ತ ಸಮುದಾಯ ಇಂದು ಅಂಬಿಗತನವನ್ನು ರೂಢಿಸಿಕೊಂಡಿದ್ದಾರೆ. ಕಬ್ಬೇರ, ಗಂಗಮತಸ್ಥ,ಬಾರಿಕೇರ ಎಂದು ಇವರನ್ನು ಕರೆಯುತ್ತಾರೆ.[2]

**ರಾಜಮನ್ನಣೆಯಾದ ಬೇಟೆ**

ಸಂಗಮ ವಂಶದ ಅರಸ ಹರಿಹರ ಬೇಟೆಗೆ ಮತ್ತು ಬೇಟೆಗಾರರಿಗೆ ಮಾನ್ಯತೆ ನೀಡಿ ಪ್ರೋವಿಜಯನಗರದ ಅರಸರು ಬೇಟೆಯಲ್ಲಿ ನಿಪುಣರಾಗಿದ್ದರು. ಎರಡನೇ ದೇವರಾಯ ಬೇಟೆಯಾಡಿದ್ದು ಆತನಿಗೆ ಗಜ ಬೇಟೆಗಾರ ಎಂಬ ಬಿರುದಿತ್ತು. ಬೇಟೆಗಾರರು ರಾಜನ ಪ್ರತಿನಿಧಿಗಳಾಗಿ ಬೇಟೆಯಾಡಿ ಜೀವಿಸುತ್ತಿದ್ದರು. ಕ್ರೂರ ಮೃಗಗಳ ಹಾವಳಿ ಹೆಚ್ಚಿದಾಗ ರಾಜ ಬೇಟೆಗೆ ತಪ್ಪದೆ ಹೋಗಬೇಕಾಗಿತ್ತು. ವರಾಹ ಚಿಹ್ನೆ ಕಾರಣ ಹಂದಿಗೆ ಇಲ್ಲಿ ವಿಶೇಷ ಸ್ಥಾನವಿದೆ.

ವಿಜಯನಗರ ಕಾಲದ ಬೇಡರು ಬೇಟೆಯಲ್ಲಿ ನಿಪುಣರು. ಹಂಪಿ ವಿರೂಪಾಕ್ಷ ದೇವಸ್ಥಾನ ದಲ್ಲಿ ಬೇಡರ ಕಣ್ಣಪ್ಪನ ಶಿಲ್ಪಗಳಿವೆ. ರಾಜ ಬೇಟೆಗೆ ಹೊರಡುವಾಗ ೧೦,೦೦೦ ಅಶ್ವಾಳು, ೫,೦೦,೦೦೦ ಕಾಲಾಳು ಮತ್ತು ೨೦೦ ಗಜಗಳ ಪರಿವಾರವನ್ನು ಒಯ್ಯುತ್ತಿದ್ದರು. ಹುಲಿ ಬೇಟೆ (ವಿಠಲ), ಜಿಂಕೆ ಬೇಟೆ (ಮಹಾನವಮಿ), ಹಂದಿ ಬೇಟೆ ಇತರೆ ಬೇಟೆ ಪ್ರಕಾರಗಳಿದ್ದವು. ಹಂಪೆಯಲ್ಲಿ ಮಹಾನವಮಿ ಹಬ್ಬ ಆಚರಿಸುವ ಮೊದಲು ಬೇಟೆ ಹಬ್ಬವನ್ನು ಆಚರಿಸು ತ್ತಿದ್ದರು. ಬೇಟೆ ಹಬ್ಬ ತಿರುಪತಿಯಲ್ಲಿ ನಡೆಯುತ್ತಿತ್ತು.

**ಪಶುಪಾಲನೆ**

ವಿಜಯನಗರದಲ್ಲಿ ಗೋವುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದರು. ೨.೩.೧೪೮೨ರಂದು ಹರಿಹರ ಮಹರಾಯ ಎತ್ತು, ಎಮ್ಮೆ, ಕರಕುಶಲ ಕರ್ಮಿಗಳಿಗೆ ತೆರಿಗೆ ವಸೂಲಿ ಮಾಡುವ ಹೊಸ ವಿಧಾನವನ್ನು ಜಾರಿಗೆ ತಂದಿದ್ದರು. ಗೋವುಗಳಿಗೆ ತೆರಿಗೆ ವಿಧಿಸುವುದು ಅದನ್ನು ದಾನ ಮಾಡುವುದು ಪ್ರಚಲಿತವಿತ್ತು. ಗೋದಾನದ ಉಲ್ಲೇಖಗಳಿವೆ. ಹೊಳಲ್ಕೆರೆ ತಾಲೂಕು ಲೋಕದೊಳಲು ಗ್ರಾಮದಲ್ಲಿ ೨ ವಿಶಿಷ್ಟವಾದ ಪಶುಪಾಲನಾ ವೀರಗಲ್ಲುಗಳಿವೆ (ಕನ್ನಡ ವಿಶ್ವವಿದ್ಯಾಲಯ, ಹಂಪಿ ವಸ್ತುಸಂಗ್ರಹಾಲಯದವರು ತಂದಿದ್ದಾರೆ). ಅಲ್ಲದೆ, ಇದೇ ತಾಲೂಕು ಗಂಜಿಗಟ್ಟೆ ಪಶುಪಾಲಕ ಗಾದರಿಪಾಲನಾಯಕ ಇತರರನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಚಿನ್ನಹಗರಿ ನದಿ ಹತ್ತಿರ ಮುತ್ತಿಗಾರ ಎತ್ತುಗಳಿಗೆ (ದೇವರ ಎತ್ತುಗಳು), ಮುತ್ತಿಗಾರ ಹಳ್ಳಿ ಅರಣ್ಯದಲ್ಲಿ ೩೦೦ ಎಕರೆ ಭೂಮಿ ಉಂಬಳಿ ಕೊಟ್ಟ ಪ್ರಸ್ತಾಪವಿದೆ. ಪಶುಪಾಲಕ ವೀರರು ದಡ್ಡಿಸೂರನಾಯಕ, ಯರಗಾಟನಾಯಕ, ಪಾಪನಾಯಕ, ಕೊಡಗಲು ಬೊಮ್ಮಯ್ಯ, ಗಾಜನಾಯಕ ಇತರರು ಕಂಡುಬರುತ್ತಾರೆ. ಡೋಮಿಂಗೊ ಪಯಸ್ ವಿಜಯನಗರ ಕಾಲದ ಪಶುಪಾಲನೆ ಬಗ್ಗೆ ತಿಳಿಸಿದ್ದಾನೆ. ಆಕಳು, ಎಮ್ಮೆ ಮತ್ತು ಕುರಿ ಇತರ ಪ್ರಾಣಿಗಳ ಬಗ್ಗೆ ತಿಳಿಸಿದ್ದಾನೆ. ಇಲ್ಲಿ ದೇವರೆತ್ತುಗಳನ್ನು ಕಾಯುವವನಿಗೆ ಕಿಲಾರಿ ಎನ್ನುತ್ತಾರೆ.

**ಬೇಡರು, ನಾಯಕರು, ವಾಲ್ಮೀಕಿ ಸಮುದಾಯ: ಸಂಕ್ಷಿಪ್ತ ಪರಿಚಯ**

ಪ್ರಾಚೀನ ಭಾರತದ ಚರಿತ್ರೆಯಲ್ಲಿ ಕಿರಾತ, ಶಬರ, ಪುಳಿಂದ, ನಿಷಾಧ, ವಾಲ್ಮೀಕಿ ಎಂದು ಖ್ಯಾತಿಪಡೆದ ಯೋಧ ಬುಡಕಟ್ಟು ಇದಾಗಿದೆ. ಕ್ಷತ್ರಿಯರಾದ ಬೇಡರು ಆರ್ಯರನ್ನು ಹೊರದೂಡಲು ಪ್ರಯತ್ನಿಸಿದ್ದರು. ವೀರ, ಶೌರ್ಯ, ಪರಾಕ್ರಮ ಲಕ್ಷಣಗಳಿಂದ ಇವರು ಪ್ರಸಿದ್ದಿಯಾಗಿದ್ದಾರೆ. ಸಾವಿರಾರು ವರ್ಷಗಳ ಹಿಂದೆ ಉತ್ತರ ಭಾರತದಿಂದ ದಕ್ಷಿಣ ಭಾರತದ ಒರಿಸ್ಸಾ, ಆಂಧ್ರ ಪ್ರದೇಶಗಳಿಂದ ಕರ್ನಾಟಕಕ್ಕೆ

ಬಂದು ನೆಲಸಿದ್ದಾರೆ. ಸಂಗಮ, ಸಾಳುವ, ತುಳುವ ಮತ್ತು ಅರವೀಡು ಂಶಗಳ ಕಾಲದಲ್ಲಿ ಬೇಡರು ಬೇಟೆ-ಪಶುಪಾಲನೆ, ತಳವಾರರು, ಸೈನಿಕರು ಮತ್ತು ನಾಯಕರಾಗಿದ್ದು ಸ್ಪಷ್ಟ.

ವಿಜಯನಗರ ಸಾಮ್ರಾಜ್ಯ ಅಂದರೂ ಹಂಪಿ ಪರಿಸರ ಇಲ್ಲಿನ ವ್ಯಾಪ್ತಿ. ಇಂದಿನ ರಾಯಲ ಸೀಮಾದ ಜೊತೆಗೆ ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳನ್ನು ಅನುಲಕ್ಷಿಸಲಾಗಿದೆ.

ಕೃಷ್ಣದೇವರಾಯನ ಆಮುಕ್ತಮಾಲ್ಯದ ಕೃತಿಯಲ್ಲಿ (ಆಮುಕ್ತ-ಅಲಂಕರಿಸಿಕೊಂಡು ಮಾಲ್ಯ-ಹೂಮಾಲೆಯನ್ನು ದ-ತಾನು ಕೊಟ್ಟಳು) ವಿಷ್ಣು ಚಿತ್ತೀಯ ಕಥೆ (೫೦) ಕನಸಿನಲ್ಲಿ ಆಂಧ್ರ ವಿಷ್ಣುವಿನ ಪ್ರಸ್ತಾಪವಿದೆ. ಇದರಲ್ಲಿ ಬೋಯಿಗಳು (೮೦), ಜಿಂಕೆ ಮಾಂಸ ಕಾಡು ಪ್ರಾಣಿಗಳ (೧೨೪), ಬೇಟೆಗಾರರ ಕಷ್ಟದ (೧೩೪), ಭಿಲ್ಲರು (೧೩೭), ಮೀನುಗಾರರು (೧೪೩), ದಾಸಯ್ಯ ಬೇಟೆಗಾರ (೧೭೧) ಮೋಸ, ಉಪಾಯದ ಬೇಟೆ (೧೭೬), ಬೇಡರು (೪೪), ತಳವಾರರು (೪೨), ಬೇಟೆಯಾಡುವರೊಂದಿಗೆ (೪೬) ಮೊದಲಾದ ಸಂಗತಿಗಳಿವೆ.

**ತಳವಾರಘಟ್ಟ**

ಹಂಪಿಯಿಂದ ಪೂರ್ವಕ್ಕೆ ಹೋಗಿ ನಂತರ ಉತ್ತರಕ್ಕೆ ಆನೆಗೊಂದಿಗೆ ಹೋಗುವ ಮಾರ್ಗ ದಲ್ಲಿ ತಳವಾರಘಟ್ಟವಿದೆ. ತಳವಾರರು ಕಾರ್ಯನಿರ್ವಹಿಸುತ್ತಿದ್ದ ಸ್ಥಳ. ಹಂಪಿ, ಕಮಲಾಪುರ ಗ್ರಾಮಗಳಲ್ಲಿ ತಳವಾರರು ಇದ್ದು, ಅವರು ವಿಜಯನಗರದ ಮೂಲಕ ತಮ್ಮನ್ನು ಗುರುತಿಸಿ ಕೊಳ್ಳುತ್ತಾರೆ. ತಳಾರಿಘಟ್ಟ, ತಳವಾರನ ಕಟ್ಟೆ ಎಂದೆಲ್ಲಾ ಇದಕ್ಕೆ ಕರೆಯಲಾಗಿದೆ. ಇದರ ಸುತ್ತಮುತ್ತ ಬೇಡ-ನಾಯಕರು ನೆಲಸಿದ್ದು, ಕಾವಲು ರಕ್ಷಣೆಯ ಕೆಲಸ ಮಾಡುತ್ತಿದ್ದರು. ಇಲ್ಲಿ ತಳವಾರ ಕುಳಿತುಕೊಳ್ಳುವ ಕಟ್ಟೆ, ಚಾವಡಿ, ಮಂಟಪಗಳಿವೆ. ವೀರಗಲ್ಲು-ಶಾಸನ, ಆಂಜನೇಯ ಗುಡಿಗಳಿರುವುದು ಗಮನಾರ್ಹ.

**ಬೇಟೆಕಾರರ ಹೆಬ್ಬಾಗಿಲು**

ಇದು ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯಕ್ಕಿದೆ. ಇಲ್ಲಿ ಬೇಟೆಕಾರರು ವಾಸವಾಗಿದ್ದರು. ವಿಜಯನಗರ ರಾಜಧಾನಿಯಾದ ಹಂಪಿಯಲ್ಲಿ ಇದು ೨ನೇ ದೊಡ್ಡ ಬಾಗಿಲು. ೨ನೇ ಹರಿಹರನ ಕಾಲದಲ್ಲಿ ಇದು ನಿರ್ಮಾಣವಾಗಿದೆ. ಚಿಕ್ಕ ಚಿಕ್ಕ ವರ್ತಿಗಳು, ಕೊಂಡಗಳು, ಬಾವಿಗಳು ಇಲ್ಲಿವೆ. ಇದರ ಪೂರ್ವಕ್ಕೆ ಮೈಲಾರ ದೇವಾಲಯವಿದೆ. ಲಿಂಗ ಬಾವಿ ಮತ್ತು ರಂಗನಾಥ ಬಾವಿಗಳನ್ನು ಚೆನ್ನಪನಾಯುಂಡು ನಿರ್ಮಿಸಿದ್ದನು.

**ಹಂಪಿ ಪರಿಸರ**

ಕಮಲಾಪುರದ ನಾಯಕರ ಏಳು ಕೇರಿಗಳು, ಹೊಸಪೇಟೆಯ ನಾಯಕರ ಏಳು ಕೇರಿಗಳು ಮತ್ತು ಹಂಪಿಯಲ್ಲಿ ನೆಲಸಿರುವ ಬೇಡ-ನಾಯಕ ಕುಟುಂಬಗಳು ಹಾಗೂ ತಳವಾರರನ್ನು ಈ ಕುರಿತು ಸಂದರ್ಶಿಸಲಾಗಿದ್ದು, ಇವರಲ್ಲಿ ವಿಜಯನಗರ ಕಾಲದ ಕುರುಹುಗಳನ್ನು ಗುರುತಿಸಬಹುದಾಗಿದೆ.

**ಕಂಪ್ಲಿ :** ಇದು ಹೊಸಪೇಟೆ ತಾಲೂಕಿನ ಒಂದು ಪಟ್ಟಣ. ತುಂಗಭದ್ರಾ ನದಿ ದಂಡೆಯ ಮೇಲಿದ್ದು, ವಿಜಯನಗರದ ಸ್ಮಾರಕಗಳನ್ನು ಇಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಬೇಡ-ನಾಯಕರ ಪಾತ್ರವನ್ನು ಕಡೆಗಣಿಸುವಂತಿಲ್ಲ. ಕುಮ್ಮಟನಾಯಕರ ಪ್ರಭಾವದಿಂದ ಖ್ಯಾತಿ ಪಡೆದ ಕಂಪ್ಲಿ ಪಟ್ಟಣ ವಿಜಯನಗರ ಅರಸರ ಕಾಲದಲ್ಲಿ ಉತ್ತಮ ವ್ಯಾಪಾರ ಕೇಂದ್ರವಾಗಿತ್ತು. ಬೇಡ-ನಾಯಕರು ಇಲ್ಲಿ ನೆಲಸಿದ್ದು ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ್ದಾರೆ.

**ಕಮಲಾಪುರ :** ಹೊಸಪೇಟೆ-ಕಂಪ್ಲಿ ಮಾರ್ಗ ಮಧ್ಯದಲ್ಲಿ ಕಮಲಾಪುರವಿದೆ. ಇಲ್ಲಿ ಪ್ರೌಢದೇವರಾಯ ತನ್ನ ಹೆಂಡತಿ ಕಾಮಲಾದೇವಿ ನೆನಪಿಗಾಗಿ ಒಂದು ಕೆರೆಯನ್ನು ಕಟ್ಟಿಸಿದ್ದಾನೆ. ಈ ಸ್ಥಳದಲ್ಲಿ ಬೇಡ-ನಾಯಕರ ಏಳು ಕೇರಿಗಳಿದ್ದು, ಸುಮಾರು ೧೦ ಸಾವಿರ ಜನಸಂಖ್ಯೆಯನ್ನು ಹೊಂದಿದ್ದಾರೆ.

**ಹಂಪಿ :** ವಿಜಯನಗರ ಸಾಮ್ರಾಜ್ಯದ ರಾಜಧಾನಿ. ಬೇಟೆ, ಪಶುಪಾಲನೆಯಲ್ಲಿದ್ದ ಬೇಡ- ನಾಯಕರು ಇಲ್ಲಿದ್ದರು. ನಾಡರಕ್ಷಣೆ ಮಾಡುವ ತಳವಾರ, ಮೀಸಲು ತಳವಾರರು ಕಾರ್ಯ ನಿರ್ವಹಿಸುತ್ತಿದ್ದರು. ಈ ಸಂತತಿಯವರು ಇಂದಿಗೂ ಇದ್ದಾರೆ.

**ಆನೆಗೊಂದಿ :** ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ. ಬೇಡ-ನಾಯಕರಿಗೆ ಇದು ಅರಮನೆ-ಗುರುಮನೆಯಾಗಿದ್ದಿತು. ವಿಜಯನಗರ ಸಾಮ್ರಾಜ್ಯಕ್ಕೆ ಮೊದಲು ಮತ್ತು ಆನಂತರ ಇಲ್ಲಿ ನಾಯಕರು ನಡೆಸಿದ ಪ್ರಭುತ್ವವನ್ನು ಕಾಣಬಹುದು.

**ಹೊಸಪೇಟೆ :** ಕೃಷ್ಣದೇವರಾಯನ ತಾಯಿ ನಾಗಲಾದೇವಿ ಸ್ಮಾರಣಾರ್ಥ ಇದನ್ನು ನಿರ್ಮಿಸಿ ದರು. ಇಲ್ಲಿ ನಾಯಕರು, ತಳವಾರರು ಬಂದು ನೆಲಸಿದ್ದರು.

**ಬೇಡರ ಪಡೆ**

ವಿಜಯನಗರ ಕಾಲದಲ್ಲಿ ಬೇಡ ಪಡೆ (ಸಮೃದ್ಧವಾಗಿದ್ದು) ಹೆಚ್ಚಿನ ಸಂಖ್ಯೆಯಲ್ಲಿದ್ದು ಸಾಮ್ರಾಜ್ಯದ ಆಗುಹೋಗುಗಳ ಬಗ್ಗೆ ಸಾಕಷ್ಟು ಶ್ರಮಿಸಿದ್ದರು. ಬೇಡ ಪಡೆ ಹಂಪಿಯಲ್ಲೂ ನೆಲಸಿದ್ದ ಬಗ್ಗೆ ಕುರುಹುಗಳಿವೆ. ರಾಜನು ಬೇಟೆಗೆ ಹೋಗುವಾಗ ಬೇಡ ಪಡೆಯನ್ನು ಸಿದ್ಧ ಗೊಳಿಸಿ ಬೇಟೆಗೆ ಹೊರಡುತ್ತಿದ್ದರು. ಸುಮಾರು ೪೦,೦೦೦ ಬೇಡರ ಪಡೆ ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ಪಾಲ್ಗೊಂಡು ಹತವಾಯಿತೆಂದು, ಸ್ಥಳೀಯರಲ್ಲದೆ, ವಿದೇಶಿ ಪ್ರವಾಸಿ ಪೆರಿಸ್ತಾ ತಿಳಿಸುತ್ತಾನೆ. ಈ ಪಡೆಯ ಸೈನಿಕರ ಮಡದಿಯರು, ಮಕ್ಕಳು ದಿಕ್ಕಪಾಲಾಗಿ ಛಿದ್ರಗೊಂಡು ತೀರಾ ಹೀನಾಯವಾದ ಬದುಕನ್ನು ಹರಪನಹಳ್ಳಿ, ಮರಿಯಮ್ಮನಹಳ್ಳಿ, ಹಡಗಲಿ, ಕೂಡ್ಲಿಗಿ, ಹೊಸಪೇಟೆ ಇತರೆಡೆಗಳಲ್ಲಿ ನಡೆಸಿದ್ದರು. ಕೃಷ್ಣದೇವರಾಯನ ಪ್ರಧಾನ ಅಶ್ವಪತಿಯಾಗಿ ದ್ದವನು ಮಲಪ್ಪನಾಯಕ. ಕೋಲಾರ ಜಿಲ್ಲೆ ಮೊರಸು ಒಕ್ಕಲು ಪ್ರದೇಶದ ದೊರೆಯಾಗಿ ದ್ದನು. ಕೃಷ್ಣದೇವರಾಯನ ಕಾಲದಲ್ಲಿ ಪ್ರಧಾನ ದಂಡನಾಯಕ ಪೆರಿಯ ಓಬಳನಾಯಕರ್ ಇದ್ದನು. ಮೀಸಲು ಪಡೆಯಂತೆ 'ಬೇಡರ ಪಡೆ' ಮಹಾಭಾರತದ ಕಾಲದಿಂದಲೂ ಇತ್ತೆಂಬುದು ಗಮನಾರ್ಹ. ಕನ್ನಡ ಕಾವ್ಯಗಳಲ್ಲಿಯೂ ಈ ಸಂಗತಿಯಿದೆ. ಪಂಪಭಾರತ, ಹರಿಶ್ಚಂದ್ರ ಕಾವ್ಯ, ಗಿರಿಜಾಕಲ್ಯಾಣ ಕೃತಿಗಳಲ್ಲಿ ಬೇಡರ ದಂಡು, ಶಬರ ಬಲ, ಬೇಡರ ಪಡೆ (ಖಾಸಬೇಡ ಪಡೆ), ಕಿರಾತಪಡೆಗಳ ಉಲ್ಲೇಖವಿದೆ. ಷಡಕ್ಷರದೇವನ ಶಬರಶಂಕರ ವಿಳಾಸದಲ್ಲಿ ಬೇಡಪಡೆ, ದೇವಪಡೆಗಳ ಪ್ರಸ್ತಾಪವಿದೆ. ಕನಕದಾಸರ ಮೋಹನ ತರಂಗಣಿ ಯಲ್ಲಿ ಬೇಡ, ಪುಳಿಂದ, ಶಬರ ಪಡೆಗಳ ವರ್ಣನೆ, ಪ್ರಸಂಗ ದಟ್ಟವಾಗಿದೆ.

**ಮ್ಯಾಸ ಬ್ಯಾಡ್ಕಿನಾಯಕತನ**

ಕಮಲಾಪುರದ ಗುರಿಕಾರ ಕಾಟಯ್ಯನ ಬಳಿ ಇರುವ ತಾಮ್ರ ಶಾಸನದಲ್ಲಿ 'ಶ್ರೀ ರಾಮಾರಣ ಮಂಡ್ಲದ ಮಂದಯ್ಯ ಚಿತ್ತಯ್ಯಗೆ ಮ್ಯಾಸಬ್ಯಾಡ್ಕಿ ನಾಯಕತಾನ ಕೊಟ್ಟ ಶಾಸನಾ ಶಕ ೧೬೧೪ ಮಾಘ ಶು.೧ ನಳಸ' ಎಂದಿದೆ. ವಿಜಯನಗರ ಮತ್ತು ಆನೆಗೊಂದಿ ಅರಸರಿಗೆ ಮಂದಯ್ಯ-ಚಿತ್ತಯ್ಯನವರು ಯುದ್ಧ, ಬೇಟೆ ಇತರ ಕಾರ್ಯಗಳಲ್ಲಿ ಸಹಕರಿಸಿದ್ದಾಗಿ ಅವರಿಗೆ 'ಮ್ಯಾಸ ಬ್ಯಾಡ್ಕಿನಾಯಕ ತನಾ'ವನ್ನು ಕೊಡಲಾಗಿದೆ. ಇದು ಆನೆಗೊಂದಿ ಅರಸರು ಕೊಟ್ಟ ಪದವಿ. ಮ್ಯಾಸಪಡೆ ಮತ್ತು ಖಾಸಬೇಡರ ಪಡೆಗಳಲ್ಲಿ ವೀರಯೋಧರು, ರಾಜ್ಯ ರಕ್ಷಣೆಯಲ್ಲಿ ವಹಿಸಿದ ಪಾತ್ರ ದೊಡ್ಡದು. ಇವರು ಗೆರಿಲ್ಲಾ ಯುದ್ಧ ಮಾದರಿಯನ್ನು ಅನುಸರಿಸಿದ್ದರು. ಬಳ್ಳಾರಿ ಜಿಲ್ಲೆಯ ಕಮಲಾಪುರ, ಸೊಂಡೂರು ಮತ್ತು ಕೂಡ್ಲಿಗಿ ಭಾಗಗಳಲ್ಲಿ ಇವರು ದಟ್ಟವಾಗಿ ನೆಲಸಿದ್ದಾರೆ.

**ಮೀಸಲು ಪಡೆ**

ಬೇಡರು ವಿಜಯನಗರ ಸಾಮ್ರಾಜ್ಯದಲ್ಲಿ ಮೀಸಲು ಪಡೆಯಲ್ಲಿದ್ದರು. ಸೈನಿಕ, ದಂಡನಾಯಕ, ತಳವಾರರಂತೆ 'ಮೀಸಲು ಪಡೆ'ಯು ವಿಜಯನಗರದಲ್ಲಿತ್ತು. ಒಂದು ರೀತಿಯಲ್ಲಿ ರಿಸರ್ವ್ ಪೊಲೀಸ್ ಪಡೆಯಂತೆ ಇದ್ದಿರಬೇಕು. ಮ್ಯಾಸಪಡೆ ಮತ್ತು ಖಾಸ ಬೇಡರ ಪಡೆಗಳು ಗೆರಿಲ್ಲಾ ಮಾದರಿಯ ಯುದ್ಧವನ್ನು ಮಾಡುತ್ತಿದ್ದವು. ಖಾಸಬೇಡರ ಪಡೆ ಕೈಯಲ್ಲಿ ಚಂದ್ರಾಯುಧವಿದ್ದು ಹೆಗಲ ಮೇಲೆ ಕಂಬಳಿ, ಚಲ್ಯಾಣ ತೊಟ್ಟು ಬರಿಮೈ ಯಲ್ಲಿರುತ್ತಾರೆ. ಚಳ್ಳಕೆರೆ ತಾಲೂಕಿನ ಸೊಂಡೆಕೆರೆಯಲ್ಲಿ ಇವರು ನೆಲಸಿದ್ದಾರೆ. ಮ್ಯಾಸಪಡೆ ಮೂಲಕ ಯುದ್ಧದಲ್ಲಿ ಭಾಗವಹಿಸುವುದು, ರಾಜನಿಗೆ ಪ್ರಿಯನಾಗಿ ಶಾಂತಿ-ಸುವ್ಯವಸ್ಥೆ ಕಾಪಾಡಿಕೊಂಡು ರಾಜ್ಯದ ಸಂಪತ್ತನ್ನು ವೃದ್ಧಿಸುವುದಾಗಿತ್ತು. ಯುದ್ಧಕ್ಕಾಗಿಯೇ ಮೀಸಲಾಗಿದ್ದ ಒಂದು ಪಂಗಡಕ್ಕೆ 'ಮೀಸಲು ಪಡೆ' ಎಂದು ಕರೆಯಲಾಯಿತು.[3] ಈ ಮೀಸಲು ಪಡೆಯ ಒಡೆಯ ಅಥವಾ ನಾಯಕನಿಗೆ ಮ್ಯಾಸ ಬ್ಯಾಡ್ಕಿನಾಯಕ ಎಂದು ಅಧಿಕಾರ ಕೊಟ್ಟ ಉದಾ ಹರಣೆಯಿದೆ.

**ರಾಜನ ಪಡೆ**

ಬೇಡ ಸೈನಿಕರು ರಾಜನ ಪಡೆಯಲ್ಲಿದ್ದರು. ಪೆರಿಯ ಓಬಳ್ಳ ನಾಯಕರು ಉನ್ನತ ಮಟ್ಟದ ಸೈನಿಕ-ರಕ್ಷಣ ಹುದ್ದೆ ಅಲಂಕರಿಸಿದ್ದ. ರಾಜ, ರಾಣಿಯರ ಆಂತರಿಕ ರಕ್ಷಣೆಗಾಗಿ ಶಿಖಂಡಿಗಳನ್ನು,ಧೈರ್ಯಶಾಲಿ ಬೇಡರನ್ನು ನೇಮಿಸಿದ್ದರು.

---

[1] ಇತಿಹಾಸ ದರ್ಶನ ೧೪, ೧೯೯೯, ಪು. ೧೬೭.

[2] ವಿಜಯನಗರ ಅಧ್ಯಯನ, ಸಂಪುಟ. ೬, ೨೦೦೧, ಪುಟಗಳು. ೭೫-೭೬.

[3] ವಿಜಯನಗರ ಅಧ್ಯಯನ, ಸಂಪುಟ ೫, ೨೦೦೦, ಪುಟ. ೯೩.

# ವಿಜಯನಗರ ಕಾಲದ ಬೇಡರು
# (ನಾಯಕ, ನಾಯಕತನ)

ವಿಜಯನಗರ ಕಾಲದ ಶಾಸನಗಳಲ್ಲಿ ನಾಯಕ, ನಾಯಕತನ, ಅಮರನಾಯಕ, ಮಹಾನಾಯಕಾಚಾರ್ಯಗಳ ಉಲ್ಲೇಖಗಳಿವೆ. ಈವರೆಗೆ ಅಧ್ಯಯನಕ್ಕೊಳಪಡದ ಸಾಮಾನ್ಯ ನಾಯಕರನ್ನು ಇಲ್ಲಿನ ವ್ಯಾಪ್ತಿಗೊಳಪಡಿಸಲಾಗಿದೆ. ಕ್ರಿ.ಶ. ೭ನೇ ಶತಮಾನದ (ಬೇಡರಾಜರ ಉಲ್ಲೇಖ) ಗದ್ದೆಮನೆ ಶಾಸನವನ್ನು ಹೊರತುಪಡಿಸಿದರೆ, ಕ್ರಿ.ಶ. ೯ನೇ ಶತಮಾನದಲ್ಲಿ 'ನಾಯಕ' ಪದ ಬಳಕೆಯಾಗಿರುವುದು ಗಮನಾರ್ಹ. ನಂತರ ಕುಮ್ಮಟದುರ್ಗವೇ ನಾಯಕರು ಪ್ರಭುತ್ವ ನಡೆಸಿದ ಮೊದಲ ಸಂಸ್ಥಾನ. ಮಹಾನಾಯಕಚಾರ್ಯ ಮುಮ್ಮಡಿ ಸಿಂಗೆಯ ನಾಯಕ, ಕಂಪಿಲರಾಯ (ಖಂಡೇರಾಯ) ಮತ್ತು ಕುಮಾರರಾಮನ ಆಳ್ವಿಕೆಯ ಪ್ರಭಾವವೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಅಡಿಗಲ್ಲಾಯಿತು. ಕುಮಾರರಾಮನ ಸಹೋದರಿ ಮಾರಾಂಬಿಕೆಯನ್ನು ಸಂಗಮ ಮದುವೆಯಾಗಿದ್ದ. ಈ ಸಂಗಮನ ಮಕ್ಕಳೇ ಹರಿಹರ, ಬುಕ್ಕರಾಯ, ಮಾದಪ್ಪ, ಮಾರಣ್ಣ ಮತ್ತು ಕಂಪಣ್ಣ. ವಿಜಯನಗರ ಪೂರ್ವದಲ್ಲಿದ್ದ ಇಂಥ ಸಣ್ಣ-ಪುಟ್ಟ ನಾಯಕ ಮನೆತನಗಳ ಚರಿತ್ರೆ, ಸಾಧನೆ ಪರಿಗಣನಾರ್ಹ. ಚದುರಿಹೋದ ನಾಯಕ ಪಾಳೆಯ ಪಟ್ಟುಗಳಿಗೆ ವೇದಿಕೆ ಸಿದ್ಧಪಡಿಸುವ ಕಾರ್ಯ ನಡೆಯಿತು. ವಾರಂಗಲ್ಲಿನ ಕಾಕತೀಯ

ಗಣಪತಿದೇವ ನಾಯಕರ ಒಕ್ಕೂಟವನ್ನು ಮೊಟ್ಟಮೊದಲು ಮಾರ್ಪಡಿಸಿದನು. ಪದ್ಮನಾಯಕ ಸೇರಿದಂತೆ ೭೨ ಗೋತ್ರ, ೧೨ ಮನೆಗಳಿಗೆ ಪ್ರೋಕೊಟ್ಟನು. ಅದೇ ರೀತಿ ಪ್ರತಾಪರುದ್ರ ೭೭ ನಾಯಕರನ್ನು ಕರೆಯಿಸಿ ತನ್ನ ಸಾಮ್ರಾಜ್ಯವನ್ನು ಅವರಿಗೆ ವಿಭಾಗಿಸಿ ಕೊಟ್ಟು ಆಡಳಿತ ಸುಧಾರಣೆಗೆ ಶ್ರಮಿಸಿದನು.

[1]ಪ್ರತಾಪರುದ್ರ ಈ ೭೭ ಜನ ನಾಯಕರ ಹೆಸರಿನ ಮೂಲಕ ರಾಜ್ಯಾಳ್ವಿಕೆ ನಡೆಸಿದ್ದು ಸ್ಪಷ್ಟ. ಕಾಕತೀಯ ಅರಸರು ಸ್ಥಾಪಿಸಿದ ಈ ನಾಯಂಕಾರ ವ್ಯವಸ್ಥೆಯನ್ನು ವಿಜಯನಗರದವರು ಅಳವಡಿಸಿಕೊಂಡಿದ್ದರು.[2]ಸಾಮಾನ್ಯ ನಾಯಕರು ಸೇವೆಸಲ್ಲಿಸಿದ ಉಲ್ಲೇಖಗಳನ್ನು ಈ ಕೆಳಗಿನಂತೆ ಅವಲೋಕಿಸ ಲಾಗಿದೆ. ಆಂಧ್ರಪ್ರದೇಶ, ಅನಂತಪುರ ಜಿಲ್ಲೆಯ ಮಡಕಶಿರಾ ತಾಲೂಕಿನ ಕೊಟ್ಟಶಿವರಂ ಗ್ರಾಮದ ಶಿವ ದೇವಾಲಯದ ಶಾಸನವು ೨೪.೧೦.೧೩೬೫ನೇ ಶುಕ್ರವಾರ ಬುಕ್ಕಣ್ಣ ಒಡೆಯ ರಾಜನದು. ‘ಬೆನಕೆಯ ನಾಯಕರ ಕುಮಾರ ಬೂಚೆಯ ನಾಯಕರು ನಿಡಗಲ್ಲು ರಾಜ್ಯಕ್ಕೆ ಗೋಪಸಮುದ್ರವನ್ನು ದಾನ ಮಾಡಿದ, ಮುಖ್ಯವಹಸಿವರದ ಪಟ್ಟಣದಲು ಸುಖಸಂ’ ಎಂಬ ಉಲ್ಲೇಖವಿದೆ.[3] ಇದೇ ಜಿಲ್ಲೆ, ಇದೇ ತಾಲ್ಲೂಕು ಹರೇಸಮುದ್ರಂನ ರೇವಣ್ಣ ದೇವಾಲಯದ ೨.೧೧.೧೩೯೭ (ಶುಕ್ರವಾರ) ವೀರ ಹರಿಹರನ ಆಳ್ವಿಕೆಗೆ ಸಂಬಂಧಿಸಿದ್ದಾಗಿದೆ. ಚೆಉಂಡಪ್ಪನ ಮಗ ಧೂಳೆಯನಾಯಂಕನು ಮತ್ತು ಬಸವೆನಾಯಕನ ಸ್ಥಾನಮಾನ ಕುರಿತ ವಿವರವಿದೆ.[4] ವಿಜಯನಗರ ಕಾಲದಲ್ಲಿ ಒಬ್ಬ ಸಾಮಾನ್ಯ ಅಧಿಕಾರಿಯಾಗಿದ್ದ ನಾಯಕನ ಸಮಾಜ ಸೇವೆ ಅಮೋಘವಾದುದು. ಹಂಪಿಪರಿಸರದ ಮಲಪನಗುಡಿಯ ದೇವಾಲಯದ ೩.೨.೧೪೧೨ (ಬುಧವಾರ)ರ ದೇವರಾಯ ಮಹಾರಾಯಕಾಲದ ಶಾಸನವು ‘ಹೆಗ್ಗಡೆ ಸೋವಣ್ಣ ಅಣ್ಣ ಮಗ ಬುಲ್ಲನಾಯಕ ಬಿಸಿಲಹಳ್ಳಿ ಕಣಿವೆ ಮತ್ತು ಬಡವಿಲಿಯ ಕಣಿವೆ ಹತ್ತಿರ ನೀರಿನ ಉಪ್ಪರಿಗೆ ನಿರ್ಮಿಸುತ್ತಾನೆ’. ಇದು ಇಂದಿನ ಹಂಪಿಯಿಂದ ಹೊಸಪೇಟೆಗೆ ಬರುವಾಗ ಮಲಪನಗುಡಿ ಅನಂತಶಯನಗುಡಿ ಮಧ್ಯೆ ಬಲಭಾಗಕ್ಕಿದೆ.[5] ಮಲಪನಗುಡಿ ಗ್ರಾಮದ ಪಕ್ಕದಲ್ಲಿದ್ದು ಗ್ರಾಮದ ಪಶ್ಚಿಮಕ್ಕಿದೆ.

ನಾಯಕ ಮತ್ತು ಆತನ ಪತ್ನಿ ನಾಯಕಿತಿಯರ ಸೇವೆ ವಿಜಯನಗರ ಕಾಲದಲ್ಲಿದ್ದದ್ದು ವಿಶೇಷ. ೨೪.೪.೧೪೫೦ರ ಶಾಸನದಲ್ಲಿ (ಶುಕ್ರವಾರ) ವೀರ ಪ್ರತಾಪ ಮಲ್ಲಿಕಾರ್ಜುನ ಮಹಾರಾಯರು ಆಳ್ವಿಕೆಯಲ್ಲಿ ‘ಬಾರಕೂರು ರಾಜ್ಯವನ್ನು ಲಿಂಗಪ ಒಡೆಯ ಆಳುತ್ತಿದ್ದನು. ಕೋಟೆಯನಾಯಕ ಆತನ ಹೆಂಡತಿ ಕೋಟೆಯ ನಾಯಕಿತ್ತಿ ಮಗ ಭೂದಾನ ಮಾಡಿದ ವಿವರಗಳಿವೆ.[6] ಭುಜಬಲ ನರಸಿಂಹ ಮಹಾರಾಯನ ಆಳ್ವಿಕೆಯಲ್ಲಿ ೧೯.೪.೧೪೮೨ರ ಶಾಸನ ದಲ್ಲಿ ಮಲ್ಲಪ್ಪನಾಯಕ ಇವನ ಮಗ ಸೋಮಣ್ಣನಾಯಕನ ಉಲ್ಲೇಖವಿದೆ.

ಮಡಕಶಿರಾ ತಾ. ಅಗಳಿ ಗ್ರಾಮದ ೧೮.೩.೧೪೯೭ (ಶನಿವಾರ)ರ ಶಾಸನದಲ್ಲಿ ‘ನರಸಣ್ಣ ನಾಯಕನಿಗೆ ರಾಯದುರ್ಗ ಚಾವಡಿಯ ನಾಯಕತನ ಕೊಡಲಾಗಿತ್ತು. ಆದವಾನಿಯ ಇಮ್ಮಡಿ ಕಚ್ಚಪನಾಯಕ ಇತರರ ಹೆಸರುಗಳಿವೆ.[7] ಇದೇ ತಾಲೂಕಿನ ಗೂಳ್ಯಾಂನ ೨೬.೭.೧೫೦೯ರ (ಗುರುವಾರ)ಲ್ಲಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ‘ಗಂಡಿಕೋಟೆ ಸೀಮೆ ಮಂತ್ರಿ ವೀರಣ್ಣನಾಯಕ, ಸೇನಾಧಿಪತಿ ಸೋಮಣ್ಣನಾಯಕ ವಿರೂಪಾಕ್ಷ ದೇವಾಲಯ ನಿರ್ಮಾಣಕ್ಕೆ ಭೂದಾನ ಮಾಡಿದ್ದರು.[8] ಕಲ್ಯಾಣದುರ್ಗ ತಾಲೂಕಿನ (ಆಂಧ್ರ ಪ್ರದೇಶ) ಬೆಳಗುಪ್ಪ ಗ್ರಾಮದ ಆಂಜನೇಯ ದೇವಾಲಯದಲ್ಲಿನ ಶಾಸನವು ‘ನರಸಿಂಗ ದೇವ ಮಹಾರಾಯ ಹಡಪದ ಗೌರುನಾಯಕ’ನ ಬಗ್ಗೆ ಬೆಳಕು ಚೆಲ್ಲುತ್ತದೆ. ಮತ್ತೊಂದು ಶಾಸನದಲ್ಲಿ ಕಾಮಣ ನಾಯಕರೂ ಮಹಾರಾಯರು ಗ್ರಾಮದಾನ ಮಾಡಿದ ಉಲ್ಲೇಖವಿದೆ.

ಕೃಷ್ಣದೇವರಾಯನ ಕಾಲದ ೧೧.೧.೧೫೧೧ರ (ಗುರುವಾರ) ಶಾಸನದಲ್ಲಿ ನಿರುವಿಡಿ ಜಕ್ಕೆಯನಾಯಕನ ಬಗ್ಗೆ ತಿಳಿಸಲಾಗಿದೆ. ಹಾಗೆಯೇ ಈತನ ತಂದೆ (ಕೃಷ್ಣದೇವರಾಯ) ನರಸಣ್ಣನಾಯಕ ಒಡೆಯ ತಾಯಿ ನಾಗಾಜಿದೇವಿ ಅಮ್ಮನವರ ಉಲ್ಲೇಖಗಳು ವ್ಯಾಪಕ ವಾಗಿವೆ.[9]

ಅನಂತಪುರ ಜಿಲ್ಲೆ ಆದೋನಿ ತಾಲೂಕಿನ ೧೬.೧.೧೫೧೮ರ ಒಂದು ಶಾಸನದಲ್ಲಿ (ಶನಿವಾರ) ‘ಕಟಾರಿ ತಿಪ್ಪಣನಾಯಕರ ಮಕ್ಕಳು ರಾಮಣನಾಯಕರು ಆದವಾನಿಯ ಮೇಗೋಟೆಯಲು ಪ್ರಸನ್ನ ರಾಮದೇವರ ಗುಡಿ ಕಟ್ಟಿಸಿ ಪ್ರತಿಷ್ಠೆ ಮಾಡಿಸಿದ್ದರು. ಪ್ರೌಢದೇವ ರಾಯನಿಗೆ

ಇವನು ಅಧಿಕಾರಿಯಾಗಿದ್ದನು.[10] ಅನಂತಪುರ ಜಿಲ್ಲೆ ಆಲೂರು ತಾಲೂಕಿನ ಬೆಳಗೊತಿ ಗ್ರಾಮದ ಬಸವೇಶ್ವರ ದೇವಾಲಯದ ಶಾಸನವು 'ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಆದವಾನಿಯ ದುರ್ಗವನೂ ಕಟ್ಟಿಗೆಯ ಕಾಮಣ ನಾಯಕರಿಗೆ ಕೊಟ್ಟಿದ್ದರ ವಿಷಯವನ್ನು ಹೊಂದಿದೆ.

ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ೭.೧೧.೧೫೧೪ (ಸೋಮವಾರ)ರ ಶಾಸನವು 'ಉಚ್ಚಂಗಿ ವೇಂಟೆಯ ಕವಿಲಿ ಚೆರವಿನಾ ಚಟನಹಳ್ಳಿಯನ್ನು ನಾಯಕತನಕ್ಕೆ ದೇವರು ಭಟ್ಟರ ಮಗ ನಾರಾಯಣ ಭಟ್ಟರಿಗೆ ಕೊಟ್ಟ ಸಂಗತಿಯಿದೆ. ಶ್ರೀ ಕೃಷ್ಣದೇವರಾಯ' ನಮಗೆ ನಾಯಕತನಕೆ ಪಾಲಿಸಿದ……. ಎಂಬ ಉಲ್ಲೇಖ ಗಮನಾರ್ಹ. ೬.೬.೧೫೨೭ (ಗುರುವಾರ) ಕೃಷ್ಣದೇವರಾಯ 'ದಾಡಿನಾಯಕನ ಮಗ ಸುಂಕಣ್ಣನಾಯಕನು ಆದವಾನಿ ದುರ್ಗ ಕೆಳಗಿನ ಕೆರೆಬೆಳಗಲ್ಲುನ್ನು ಅಮರವಾಗಿ ಸೇವೆಗೆಂದು ಪಡೆದ ಉಲ್ಲೇಖವಿದೆ. ಅಚ್ಯುತ ರಾಯನ ಕಾಲದಲ್ಲಿ ವರದಪ್ಪನಾಯಕ ತಿರುವೆಂಗಳನಾಯಕರ ಬಗ್ಗೆ ತಿಳಿಸಲಾಗಿದೆ.

ಅನಂತಪುರ ಜಿಲ್ಲೆ ಗೂಟಿಯ ಕಸಾವಪುರಂ ಗ್ರಾಮದ ಸದಾಶಿವರಾಯನ ಶಾಸನದಲ್ಲಿ (೧೫೪೭) 'ದಳವಾಯಿ ಯಲ್ಲಪ್ಪನಾಯಕರಿಗೆ ಉಂಬಳಿಯಾಗಿ ಕೊಟ್ಟ ಕಸವಾಪುರದಲ್ಲಿ ಬೆಸ್ತ, ಬೋವುಗಳಿಗೆ ಪುಲಿಅ… ಕೊಟ್ಟ ಎಂಬ ವಿಷಯ ಪ್ರಸ್ತಾಪವಿದೆ. ಬಳ್ಳಾರಿ ಜಿಲ್ಲೆ ಹರಪನಹಳ್ಳಿ (ದಾವಣಗೆರೆ) ತಾಲೂಕಿನ ಹಗರನೂರು ಶಾಸನದಲ್ಲಿ 'ಮುದುಗಂಡಲ (ಬೆಡಗು) ತಿಮ್ಮರಸನಾಯಕನ ಮಗ ಬೊಮ್ಮನಾಯಕ ಅಮರಗೆರೆ ಕೊಟ್ಟೂರು ಸೀಮೆ(ರಂಗಾಪುರ ಸ್ಥಳದ)ಗೆ ಗ್ರಾಮವನ್ನು (ಕೊಟ್ಟೂರು ಸೀಮೆಗೆ) ದಾನ ಮಾಡಿದ್ದು ಗಮನಾರ್ಹ.

ಹಡಗಲಿ ತಾಲೂಕಿನ ನಕ್ಕರಹಾಳು ಶಾಸನ ೨೯.೪.೧೫೪೮ರ (ಅಥವಾ ಮೇ ೬ ಭಾನುವಾರ) ಶ್ರೀ ಸದಾಶಿವ ಮಹಾರಾಯರು ಆಳ್ವಿಕೆಯಲ್ಲಿ ಕೃಷ್ಣಪ ನಾಯಕರು ತಮ್ಮ ಕೋಗಳೆವಳಿಥದ (ಕುಂಟೆ) ನೂರ ಸೀಮೆ ವಳಗನ ನಗರೆಹಳಿಗೆ ಪ್ರತಿನಾಮವಾದ ನಗರು ರನು ಬೊಂಮ(ಪು)ರ ದಕ ಗ್ರಾಮವನ್ನು ತಿಮಪ್ಪಗೆ ಕೊಡುತ್ತಾರೆ.[11] ಗೂಟಿ ತಾಲೂಕು ವೆಲ್ಪು ಮಡುಗು (ಅನಂತಪುರ ಜಿಲ್ಲೆ)ವಿನ ೭.೧೦.೧೫೪೮ರ ಸದಾಶಿವ ಮಹಾರಾಯರು ಮಹಾಮಂಡಲೇಶ್ವರ ಅಯ್ಯಪ್ಪದೇವನಿಗೆ ಉರವಕೊಂಡ ಸೀಮೆಯ ಅಪಲಾಪುರ ಗ್ರಾಮವನ್ನು ಅಮರನಾಯಕಕ್ಕೆ ದಾನ ಕೊಡಲಾಗಿದೆ.[12] ಹಿಂದೂಪುರ ತಾಲೂಕಿನ ಕೊಟ್ನೂರು ಚೌಡೇಶ್ವರಿ ದೇವಾಲಯ ಶಾಸನವು ೬.೧೨.೧೫೫೦ (ಶನಿವಾರ) ಸದಾಶಿವ ಮಹಾರಾಯರು ಕೊಟ್ನೂರು ಗುಂಡಮರಸಯ್ಯನ ನಿಯೋಗಿ(Agent)ಸಿರಿಯಪನಾಯಕ ದಳವಾಯಿ ಕ್ರಿಷ್ಣಪ್ಪ ನಾಯಕ ದೇವಾಲಯದ ಸೇವಕರಿಗೆ ಬಿಟ್ಟು ಬಿರಾಡ ತೆರಿಗೆ ವಿನಾಯ್ತಿ ನೀಡಿದ ವಿವರವಿದೆ.

ಹರಪನಹಳ್ಳಿ ತಾಲೂಕು ಬಾಗಳಿ ಕಲ್ಲೇಶ್ವರ ದೇವಾಲಯದ ಶಾಸನವು ೨೩.೧೨.೧೫೫೦ (ಮಂಗಳವಾರ) ಸದಾಶಿವ ಮಹಾರಾಯ ವಿಜಯನಗರಿ ಹಡಪದ ಬಯ್ಯಪನಾಯಕರ ಮಕ್ಕಳು ಕೃಷ್ಣಪನಾಯಕರಿಗೆ ಅಮರ ಮಾಗಣಿಯಾಗಿ ಪಾಲಿಸಿದ ಕೋಗಳಿ ಸಲುವ ಕೊಟ್ಟೂರು ಸೀಮೆ ಎಂದಿದೆ. ಬಾಗುಳಿ ಆಳುತ್ತಿದ್ದ ಹಾಳವಿ ನಾಯಕ ಕೊಟ್ಟೂರು ವಲಿಟಲಕ್ಕಿ ಶೆಟ್ಟಿ ಲಿಂಗಮ್ಮ ಆತನ ಹೆಂಡತಿ, ಬಾಗಳಿಯ ಪಟ್ಟಣಸ್ವಾಮಿ ಭತ್ತ, ಬಂಗಾರವನ್ನು ಕಲಿದೇವರಿಗೆ ಕೊಟ್ಟ ಸಂಗತಿಯಿದೆ. ಸದಾಶಿವರಾಯ ಮಹಾರಾಯರ ೧೧.೨.೧೫೫೧ (ಬುಧವಾರ) ಹಡಪದ ಕೃಷ್ಣಪ್ಪನಾಯಕರಿಗೆ ಕೊಟ್ಟ ಕೊಟ್ಟೂರ ಸೀಮೆಗೆ ಸಲುವ ಬಾಗುಳಿಯ ಚಾಮಿನಾಯಕರ ಮಗ ಹೆಳವಿ ನಾಯಕರೂ ಬಾಗುಳಿಯ ಕುಮಕರ ಬಸವಿಗೌಂಡನ ಮಗ ಲಿಂಗಗೊಂಡ….. ಇತರ ವಿವರಗಳಿವೆ.[13]

ಕೂಡ್ಲಿಗಿ ತಾಲೂಕಿನ ಗಜಾಪುರದ ಹತ್ತಿರ ಬೇಚರಾಕು ಗ್ರಾಮವಾದ ದೇವಲಾಪುರ ವಸಂತ ಮಲ್ಲಿಕಾರ್ಜುನ ದೇವಾಲಯದ ಶಾಸನ ೨೫.೧.೧೫೫೨ (ಸೋಮವಾರ) ಸದಾಶಿವ ಮಹಾರಾಯರು ಬೈಯಪನಾಯಕರ ಕೃಷ್ಣನಾಯಕ ಅಯ್ಯನವರ ಕಾರ್ಯಕ್ಕೆ ಕರ್ತರಾದ ವೇಲೂರು ತಿಂಮಪ್ಪನಾಯಕನ ಕುಮಾರ ರಾಮಪ್ಪ ನಾಯಕರು ನ(ಂ)ಮ್ಮ ಕೃಷ್ಣಪನಾಯಕರ ಅಮರ ಮಾಗಣಿಗೆ(ಳಿ) ಸಲ್ಲುವ ಮೊರಬದ ಸೀಮೆಯೊಳಗಣ ಪಂನುಲ ನುಂಕನಹಳ್ಳಿಯನು ದೇವಲಾಪುರದ ವಸಂತ ಮಲ್ಲಿಕಾರ್ಜುನ ದೇವರಿಗೆ ೨ ಡೊಳ್ಳು, ೨ ನಾಗಸ್ವರವನ್ನು ನಡೆಸು ಎಂದು ಬಿಳಿಚೇಡ ಗ್ರಾಮ ಬಿಟ್ಟ ಸಂಗತಿಯಿದೆ. ಈ ಬಿಳಿಚೋಡು ಈಗ ಜಗಳೂರು ತಾಲ್ಲೂಕಿನಲ್ಲಿದೆ (ದಾವಣಗೆರೆ ಜಿಲ್ಲೆ).

ಕಲ್ಯಾಣದುರ್ಗ ತಾಲೂಕಿನ ಕಂಬದೂರು ಶಾಸನದಲ್ಲಿ ವಿರುಪಣ್ಣನಾಯಕ ೫೦ ವರಹ ಕೊಟ್ಟು ಮಾನ್ಯಗ್ರಸ ತನ್ನ ತಂದೆ ತಿಮ್ಮಪ್ಪ ನಾಯಕರ ಹೆಸರಲ್ಲಿ ಮಲ್ಲಿಕಾರ್ಜುನ ದೇವರಿಗೆ ೫೦ ವರಹ ದಾನ ಮಾಡಿದ ವಿವರವಿದೆ. ಈ ಕಾಲಘಟ್ಟದ ಶಾಸನಗಳಲ್ಲಿ ಮಹಾನಾಯಕ ಚಾರ್ಯ, ಮಲ್ಲಪ್ಪನಾಯಕ, ಬೇಡರ ಮರಿಯಪ್ಪ, ನಾಯಂಕಾರಚಾರ್ಯ ಎಂಬ ಉಲ್ಲೇಖ ಗಳಿವೆ.

### ನಾಯಕತನ

ಹರಪನಹಳ್ಳಿ ತಾಲೂಕಿನ ಚಟ್ನಹಳ್ಳಿಯ ಆಂಜನೇಯ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕಲ್ಲಿನ ಶಾಸನವು ವಿಜಯನಗರದ ಕೃಷ್ಣರಾಯ ಮಹಾರಾಯರಿಗೆ ಸೇರಿದೆ. ೭.೧೧.೧೫೨೪ ಸೋಮವಾರ ಮುರಾರಿ-ರಾವುತ್ತನ ಮಗ ವಿಸಣ ರಾವುತ್ತನು ಅರಸನಿಗೆ ಪುಣ್ಯವಾಗಲೆಂದು ತನ್ನ ನಾಯಕತನದಲ್ಲಿ ಉಚ್ಚಂಗಿ-ವೇಂಠೆಯ ಉಪವಿಭಾಗದವಾದ ಕವಿಳಿ ಚೆರ್ವಿನ ಸೀಮೆ ಯಲ್ಲಿನ ಚಟ್ನಹಳ್ಳಿಯನ್ನು ತೆರಿಗೆ ರಹಿತವಾಗಿ ದೇವರು ಭಟ್ಟನ ಮಗ ನಾರಾಯಣ ಭಟ್ಟನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ (ಬಳ್ಳಾರಿ ಜಿಲ್ಲೆಯ ಶಾಸನಗಳು, ಚನ್ನಬಸಪ್ಪ ಪಾಟೀಲ, ೧೯೯೭, ಪು. ೧೦೬, ನಂ. ೩೨೯). ಈ ಬಗ್ಗೆ ನೂರಾರು ಉಲ್ಲೇಖಗಳು ಲಭ್ಯ ಇವೆ.

### ಮಹಾನಾಯಕಚಾರ್ಯ

ಕನ್ನಡ ಶಾಸನಗಳಲ್ಲಿ ಕ್ರಿ.ಶ. ೯-೧೦ನೇ ಶತಮಾನದಲ್ಲಿ ಮಹಾನಾಯಕಚಾರ್ಯ ಎಂದು ಉಲ್ಲೇಖವಿದೆ. ಕುಮ್ಮಟದುರ್ಗದ ಮುಮ್ಮಡಿ ಸಿಂಗೆಯನಾಯಕರಿಗೆ ಈ ಬಿರುದಿತ್ತು. ಇದನ್ನು ಹೊರತುಪಡಿಸಿದರೆ ವಿಜಯನಗರದ ಉತ್ತರಾರ್ಧದಲ್ಲಿ ಪುನಃ ಇದು ಪ್ರಯೋಗ ವಾಗಿದೆ. ಸದಾಶಿವರಾಯ ಮಹಾರಾಯರ ಕ್ರಿ.ಶ. ೧೦.೧೨.೧೫೫೬ರ ಪೈಲಬಂಡ (ಮಡಕಶಿರಾ ತಾ.) ಶಾಸನವು ಮಹಾನಾಯಕಚಾರ್ಯ ನಿಡಗಲ್ಲು ತಿಮ್ಮಣ್ಣನಾಯಕನು ಸೇನಬೋವ ಇತರರಿಗೆ ಗುತ್ತಿ ತಿರುಮರಾಜಯ್ಯದೇವ ಮತ್ತು ಕೆಂಚಪ್ಪ ನಾಯಕರು ದಾನ ಮಾಡಿದ ಸಂಗತಿಗಳಿವೆ.

ಹರಪನಹಳ್ಳಿ ತಾಲೂಕಿನ ಮುತ್ತಗೆ ಗ್ರಾಮದ ಆಂಜನೇಯ ದೇವಾಲಯದ ೨.೧೧. ೧೫೫೭ (ಬುಧವಾರ) ಸದಾಶಿವಮಹಾರಾಯರು ಮಹಾನಾಯಕಚಾರ್ಯ ಕೃಷ್ಣಪ್ಪನಾಯಕ ಮುತ್ತಿಗ್ರಾಮದ ಬೇಸಾಯ(ಕೃಷಿ)ಗಾರರಿಗೆ, ತಳವಾರರಿಗೆ, ಸೇನಾ ಭೋಗರಿಗೆ, ಕುರಿಗಳಿಗೆ ತೆರಿಗೆ ವಿಧಿಸಿದ ವಿವರಗಳಿವೆ.[14]

ಮಡಕಶಿರಾ ತಾಲೂಕು ರತ್ನಗಿರಿಯ ಶಾಸನದಲ್ಲಿ ಶ್ರೀ ರಂಗದೇವಮಹಾರಾಯ ಪೆನುಗೊಂಡೆಯಲ್ಲಿ ಆಳುತ್ತಿರುವಾಗ ಮಹಾನಾಯಕಚಾರ್ಯ ರಂಗಪ್ಪನಾಯಕ ಮಗ ಲಕ್ಷ್ಮಿಪತಿನಾಯಕ ಹರತಿ ದುಂಡಪ್ಪನಾಯಕ ಇವರದು ವಾಲ್ಮೀಕಿ ಗೋತ್ರ ಯನುಮಲ ಬೆಡಗು (ಕುಟುಂಬ) ಆಗಿದ್ದು, ರಂಗಾಪುರ ಗ್ರಾಮವನ್ನು ದಾನಬಿಟ್ಟ ವಿಷಯವಿದೆ.[15] ಈ ಹರತಿ ಪಾಳೆಯಪಟ್ಟು ಇಂದಿನ ಹಿರಿಯೂರು ತಾಲೂಕು ಹರತಿಕೋಟೆಯಾಗಿದ್ದು, ಇಲ್ಲಿ ನಾಯಕ ಪಾಳೆಯಗಾರರು ಆಳ್ವಿಕೆ ನಡೆಸಿದ ಬಗ್ಗೆ ಸ್ಮಾರಕಗಳು ಸಾಕ್ಷಿಯಾಗಿವೆ. ಹರತಿ ನಾಯಕರಿಗೂ ಮಹಾನಾಯಕಚಾರ್ಯ ಬಿರುದು ಇತ್ತು ಎಂಬುದು ಇಲ್ಲಿ ಗಮನಾರ್ಹ.

ವೆಂಕಟಪತಿದೇವ ಮಹಾರಾಯರು ಪೆನುಗೊಂಡೆಯಲ್ಲಿರುವಾಗ ಚಳ್ಳಕೆರೆ ತಾಲೂಕು ದೊಡ್ಡೇರಿ ಗ್ರಾಮದಲ್ಲಿ ಶಾಸನ ಹಾಕಿಸಿದ್ದು : ಮಹಾನಾಯಕಚಾರ್ಯ ರಂಗಪ್ಪನಾಯಕ ಹರತಿ ಲಕ್ಷ್ಮೀಪತಿನಾಯಕರ ಉಲ್ಲೇಖವಿದೆ. ವಾಲ್ಮೀಕಿ ಗೋತ್ರ ಲಕ್ಷ್ಮೀಪತಿನಾಯಕರ ಕುಮಾರ ರಂಗಪ್ಪನಾಯಕರು ಶ್ರೀ ಮದ್ದೆವದೇವೋಮಾನುರಾದ ಶ್ರೀ ವೆಂಕಟೇಶ್ವರ ದೇವಾಲಯಕ್ಕೆ ರಾಯದುರ್ಗ ಸೀಮೆ (ವೇಂಠೆ) ಅಮರನಾಯಂಕ ತನಕೆ ಸಲುವ ಅಗಳಿ ಸೀಮೆಯೊಳಗೆ ಅರ್ಕೆಯ ಕೋಟೆ ಸೀಮೆ ಎಂದು ತಿಳಿದುಬರುತ್ತದೆ.[16]

ಆರಂಭದಲ್ಲಿ ನಾಯಕ, ನಾಯಕತನ ಇದ್ದು ಸೇವೆ ದೀರ್ಘಾವಧಿಯಲ್ಲಿ ಆ ಮನೆತನ ದವರಿಗೆ ಅಮರನಾಯಕರಾಗಿ ನೇಮಿಸಿದ್ದು ಶಾಸನಗಳಲ್ಲಿ ಉಲ್ಲೇಖವಾಗಿದ್ದು ಗಮನಾರ್ಹ.

ವೆಂಕಟಪತಿದೇವ ಮಹಾರಾಯರು ಪೆನುಗೊಂಡೆಯಲ್ಲಿ ಆಳುತ್ತಿರುವಾಗ ಅನೇಕ ಬಗೆಯ ಶ್ಲಾಘನೀಯ ಸೇವೆ ಮಾಡಿರುವುದು ಸ್ಮರಣೀಯ. ಮಡಕಶಿರಾ ತಾಲೂಕಿನ ರವುಡಿ ಗ್ರಾಮದ ಆಂಜನೇಯ ದೇವಾಲಯದ ಶಾಸನವು (೨೮.೧೨.೧೬೦೪ ಶುಕ್ರವಾರ) ಹರತಿಯ ಲಕ್ಷ್ಮೀಪತಿನಾಯಕ, ರಂಗಪ್ಪನಾಯಕರ ಮಗ ಇಮ್ಮಡಿ ರಂಗಪ್ಪನಾಯಕರು ರಾವಿಡಿ ಗ್ರಾಮವನ್ನು ಅಗಳಿ ಸೇವೆಗೆ ಕೊಟ್ಟ ವಿಚಾರವಿದೆ. ಇಲ್ಲಿ ಅರಸ ಕೊಡದೇ ಒಬ್ಬ ನಾಯಕನೇ ಅಧಿಕಾರ ಚಲಾಯಿಸುವ ಸನ್ನಿವೇಶ ನೋಡಿದರೆ ಅಂದು ನಾಯಕರಿಗೆ ಸ್ವಾತಂತ್ರ್ಯವನ್ನು ನೀಡಲಾಗಿತ್ತು ಎಂದು ತಿಳಿಯಬಹುದಾಗಿದೆ. ರಾಜನ ಹತ್ತಿರ ಸರ್ವಾಧಿಕಾರ ಇರಲಿಲ್ಲ.

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕು ಕೇಂದ್ರದ ಬೆಟ್ಟದ ಮೇಲೆ ಕೆರೆಯ ಬಳಿ ಇರುವ ಶಾಸನವು 'ಸಿಧಾರ್ತಿ ಸಂವತ್ಸರದ ಮಾಗ ಬ.೧೦ ಶ್ರೀ ಮನ್ಮಹಾನಾಯಕ ಚಾರ್ಯದ ಹಟ್ಟಿ ಕಸ್ತೂರಿ ಮಲ್ಲಪ್ಪನಾಯಕನವರ ತಾಯಿ ಲಕ್ಷ್ಮಮ್ಮ ನಾಗತಿ ಹೆಸರಕೆರೆ.....' ಎಂಬ ಉಲ್ಲೇಖವು ನಾಯಕನಹಟ್ಟಿ ಪಾಳೆಯಗಾರರ ಚರಿತ್ರೆಯನ್ನು ತೋರಿಸುತ್ತದೆ.

ವಿಜಯನಗರ ಕಾಲದ ಕೊಡಗು ಎಂಬ ಲೇಖನದಲ್ಲಿಡಾ. ಎಂ.ಜಿ. ನಾಗರಾಜ ಅವರು ವಿಜಯನಗರ ಕಾಲದಲ್ಲಿ ಅಮರನಾಯಕ ವ್ಯವಸ್ಥೆ ಆಂಧ್ರದ ನಾಯಕರ ವ್ಯವಸ್ಥೆಯ (ನಾಯಕರ-ಪಾಳೆಯಗಾರರ ಒಕ್ಕೂಟ), ಕೇವಲ ಅನುಕರಣೆ ಅಲ್ಲ. ಪ್ರಭಾವಿತವಾಗಿದ್ದಿರ ಬಹುದು ಅಷ್ಟೆ. ಕಾರಣ ವಿಜಯನಗರ ಪೂರ್ವದಲ್ಲಿಯೇ ಗುಮ್ಮನಾಯಕನ ಪಾಳ್ಯ (ಕೋಲಾರ ಜಿಲ್ಲೆ) ಪಾಳೆಯಪಟ್ಟು ನಮ್ಮಲ್ಲಿತ್ತು. ಇದು ಹೊಯ್ಸಳರ ಕಾಲದಲ್ಲಿ ಕ್ರಿ.ಶ. ೧೨೪೨ರಲ್ಲಿ ಉಗಮಗೊಂಡ ಪಾಳೆಯ ಸಂಸ್ಥಾನವಾಗಿತ್ತು. ಒಟ್ಟಾರೆ ಅಮರನಾಯಕರು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನ ಪಾಳೆಯಪಟ್ಟಿನ ನಾಯಕರಾಗಿದ್ದರು. ಕೇವಲ ಸೈನ್ಯಾಧಿಕಾರಿಗಳು ಎನ್ನುವಂತಿಲ್ಲ. ಸಾಮಾನ್ಯವಾಗಿ ವಾರ್ಷಿಕ ಪೊಗದಿ ಸಲ್ಲಿಕೆ ಹಾಗೂ ಸಾಮ್ರಾಜ್ಯಕ್ಕೆ ಅಗತ್ಯ ಬಿದ್ದಾಗ ಸೈನಿಕ ಸೇವೆ ಒದಗಿಸುವುದು ಎಂದು ಆ ಶಬ್ದಕ್ಕೆ (ಅಮರನಾಯಕತನ) ಅರ್ಥೈಸಲಾಗಿದೆ. ಎಂ.ಎಸ್. ಪುಟ್ಟಣ್ಣನವರು 'ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದು ಕೊಂಡು ಕದನಕ್ಕೆ ಸಿದ್ಧವಾಗಿರುವವನು' ಎಂದು ಹೇಳಲಾಗಿದೆ.

ಅಮರನಾಯಕರಲ್ಲಿ ಮೂರು ವರ್ಗಗಳಿವೆ. ೧ನೇ ವರ್ಗ ಅಮರನಾಯಕರಿಗೆ ಪಂಚ ವಾದ್ಯಗಳ ಹಕ್ಕು, ಸಾಮಂತ ಸಿಂಹಾಸನ, ಚಕ್ರವರ್ತಿಗಳಿಗೆ ತಿಳಿಸದೆಯೇ ಶಾಸನೋಕ್ತವಾದ ದಾನ ನೀಡುವ ಸ್ವಾತಂತ್ರ್ಯ, ಸ್ವಂತ ನಾಣ್ಯ ಚಲಾವಣೆಯ ಸ್ವಾತಂತ್ರ್ಯ ಮತ್ತು ಡೋಲಿ, ಪಲ್ಲಕ್ಕಿ, ರಾತ್ರಿ ಪಂಜು ನಿಂತರವಾಗಿ ಉರಿಸುವ ಅವಕಾಶ. ಸೈನ್ಯದ ವರಮಾನ ರಾಜನಿಗೆ ಸಲ್ಲಿಸುವ ಹಣ, ಹೊರಬೇಕಾದ ಹೊಣೆ ಇತ್ತು. ಪಂಚವಾದ್ಯಗಳ ಬಳಕೆ, ಅರ್ಹತೆ, ಸಾಮಂತ ಸಿಂಹಾಸನ, ಚಾಮರ ಪಲ್ಲಕ್ಕಿ, ಅಶ್ವಾರೋಹಿಪಡೆ ಆನೆಗಳನ್ನಿಟ್ಟು ಕೊಳ್ಳಬಹುದು. ಕೋಟೆ, ಸೇನಾ ನಿರ್ವಹಣೆ, ನಾಣ್ಯ ಚಲಾವಣೆ ಇವರ ಅಧಿಕಾರಗಳಿದ್ದವು. ೨ ಮತ್ತು ೩ನೇ ವರ್ಗದ ಅಮರನಾಯಕರು ಚಕ್ರವರ್ತಿಯ ಹೆಸರನ್ನು ನಮೂದಿಸಿಯೇ ಶಾಸನಗಳನ್ನು ದಾನ, ಪಾರಭಾರೆ ಇತ್ಯಾದಿ ಸಂದರ್ಭಗಳಲ್ಲಿ ಹಾಕಿಸಬೇಕಿತ್ತು. ಅಮರನಾಯಕ ರಲ್ಲಿ ದಂಡನಾಯಕರೂ ಸೇರಿದ್ದರು. ಅನೇಕ ಅಮರನಾಯಕರು ಮಹಾಮಂಡಲೇಶ್ವರರ ಅಧೀನದಲ್ಲಿದ್ದರು ಎಂದು ತಿಳಿಸಿದ್ದಾರೆ.[17]

ಎಂ.ಜಿ. ನಾಗರಾಜ ಅವರು ಕಾಕತೀಯರ ನಾಯಂಕಾರ ವ್ಯವಸ್ಥೆ (ಓಬಣ್ಣನಾಯಕನಿಗೆ ದುರ್ಗದ ನಾಯಕತನವನ್ನು ನೀಡಲಾಯಿತು) ವಿಜಯನಗರದಲ್ಲಿ ಕಂಡುಬಂದಿತ್ತು. ಕಾಕತೀಯ ಗಣಪತಿ ದೇವನ (೧೧೯೯-೧೨೬೨) ಮರಿಮೊಮ್ಮಗ (೧೨೮೯-೧೩೨೩) ಇಮ್ಮಡಿ ಪ್ರತಾಪರುದ್ರ ತನ್ನ ಕಾಲದ ಪ್ರಬಲ ಪದ್ಮನಾಯಕ ಕುಲಕ್ಕೆ ಸೇರಿದ ೭೭ ನಾಯಕ ಸಮೂಹದ ನೆರವಿನಿಂದ ಆಡಳಿತ ನಡೆಸಿದ ಬಗ್ಗೆ ಮೆಕೆಂಜಿ ತಿಳಿಸುತ್ತಾನೆ. ಹಾಗೆಯೇ ಹಕ್ಕ-ಬುಕ್ಕರು ಕಾಕತೀಯರಲ್ಲಿ ಭಂಡಾರಿಗಳಾಗಿದ್ದರು.

೨ನೇ ವರ್ಗದ ಅಮರನಾಯಕರಿಗೆ ರಾಜನ ಹೆಸರನ್ನು ಬಿಟ್ಟು ಭೂಮಿಯನ್ನು ದಾನ ಮಾಡುವ ಅಧಿಕಾರ ಇರಲಿಲ್ಲ. ೩ನೇ ವರ್ಗದ ಅಮರನಾಯಕರು ಚಕ್ರವರ್ತಿಯ ನೇರ ನಿಯಂತ್ರಣ ಅಥವಾ ಅಧೀನದಲ್ಲಿದ್ದರು. ಭೂದಾನ ಮಾಡಲು ರಾಜನ ಅಪ್ಪಣೆಬೇಕು. ಯುದ್ಧಕ್ಕೆ ಸೈನ್ಯ ಕಳುಹಿಸುತ್ತಿದ್ದರು. ಅನೇಕ ದಂಡನಾಯಕರಿದ್ದರು. ಯುದ್ಧ, ದಂಡಯಾತ್ರೆ, ಸಾಮ್ರಾಜ್ಯ ಸಂಘಟನೆಯಲ್ಲಿದ್ದರು.

ಕ್ರಿ.ಶ. ೧೬೦೩ ಜನವರಿ ೨೧ರ ಶಾಸನ ವಿಜಯನಗರದ ದೊರೆ ವೆಂಕಟಪತಿರಾಯನು ಮುತಿನಗಧಿಗೆಯಿಂದ ರಾಜ್ಯಭಾರ ಮಾಡುತ್ತಿದ್ದನೆಂಬುದಾಗಿ ಹೇಳಿದೆ. ಮುದಿಯಣನಾಯಕರ ಸೀಮೆಯೊಳಗಿನ ನಾಗೇನಹಳ್ಳಿಯಲ್ಲಿ ವಾಸಿಸುತ್ತಿದ್ದ ಹೆಂಜೇರಿನ ಬಡಗಿ ದೊಡ್ಡ ಹಲಗಯ್ಯನ ಮಗ ಚೆಗಚಿಕ್ಕಯ್ಯನು ಮುದಿಯಪನಾಯಕರಿಗೆ ಸ್ಥಿರ ರಾಜ್ಯವಾಗಲಿಯೆಂದು ಶ್ರೀಶೈಲದ ಮಲ್ಲಿಕಾರ್ಜುನ ದೇವರಿಗೆ ಕಬ್ಬಿಣದ ದೀಪಮಾಲೆಯನ್ನು ಮಾಡಿಸುತ್ತಾನೆ.[18]

**ಅರಮನಾಯಕರು (೩ ವರ್ಗಗಳು)**

| | | |
|---|---|---|
| ಪ್ರದೇಶ ವಿಸ್ತಾರ ಸಂಪನ್ಮೂಲ ಬಲ ಸಾಮಂತರಿಂದ ಯುದ್ಧಕ್ಕೆ ಸೇನೆ | ದಂಡನಾಯಕರು | ಸಣ್ಣ ಅಮರನಾಯಕರಿದ್ದರು. ಯುದ್ಧ ದಂಡೆಯಾತ್ರೆಯಲ್ಲಿ ಸಾಮ್ರಾಜ್ಯದ ಸಂಘಟನೆಯಲ್ಲಿ ಚಕ್ರವರ್ತಿಯ ಸೈನ್ಯವನ್ನು ಸೇರಿಕೊಳ್ಳುತ್ತಿದ್ದರು. |

ಚಿತ್ರದುರ್ಗ ನಾಯಕ ಯಲಹಂಕದ ರಾಜ ಇವರನ್ನು ಅಮರನಾಯಕ ವ್ಯವಸ್ಥೆ ಯುರೋಪಿನ ಫ್ಯೂಡಲಸಂಗೆ ವಿದ್ವಾಂಸರು ಹೋಲಿಸುತ್ತಾರೆ.

**ದಂಡನಾಯಕ, ಮಹಾಪ್ರಧಾನ ಇತರ ಅಧಿಕಾರಿಗಳು**

ವಿಜಯನಗರ ಸಾಮ್ರಾಜ್ಯ ಆಳ್ವಿಕೆಯಲ್ಲಿ ದಂಡನಾಯಕ, ಪ್ರಧಾನರ ಪಾತ್ರ ಮುಖ್ಯ. ರಾಯದುರ್ಗ ತಾಲೂಕು ಕಚೇರಿ ಬಳಿ (ಅನಂತಪುರ ಜಿಲ್ಲೆ) ಶಾಸನದಲ್ಲಿ 'ಅಮರ ಕೀರ್ತಿ' ಬಗ್ಗೆ ಉಲ್ಲೇಖಿಸಿದ್ದಾರೆ. ಬಹುಶಃ ಇದು ಅಮರನಾಯಕರಿಗೆ ಸಲ್ಲುವ ಗೌರವ ಇರಬೇಕು.

ಕುಂದಾಪುರ ತಾಲೂಕಿನ ಕೋಟೇಶ್ವರ ದೇವಾಲಯದ ಶಾಸನದಲ್ಲಿ ೭.೭.೧೩೫೭ (ಶುಕ್ರವಾರ) ಮಲೆಯ ದಣ್ಣಾಯಕ ಎಂಬುವನು ರಾವಲದೇವನ ಮಂತ್ರಿ ಇವನ ಮಗ ಸಬುತಿಯನಾಯಕನ ವಿವರಗಳಿವೆ. ಇಲ್ಲಿನ ಮತ್ತೊಂದು ಶಾಸನದಲ್ಲಿ ೨.೧೦.೧೩೬೫ರಲ್ಲಿ (ಗುರುವಾರ) ವೀರ ಬುಕ್ಕಣ್ಣರಾಯನ ಕಾಲಕ್ಕೆ ಇಲ್ಲಿ ಮಲ್ಲೆಯ ದಣ್ಣಾಯಕ ಕಾರ್ಯನಿರ್ವ ಹಿಸುತ್ತಿದ್ದ.[19]

ಕೊಯಮತ್ತೂರು ಜಿಲ್ಲೆ ಸಿಂಗನಲ್ಲೂರು ಬಸವೇಶ್ವರ ದೇವಾಲಯದ ಶಾಸನ ४.೮. ೧೪೦೮ರಂದು ವೀರ ದೇವರಾಯ ಮಹಾರಾಯರ ಮಹಾಪ್ರಧಾನ ನಾಗಣ್ಣನಾಯಕ ಒಡೆಯನ ವಿವರವಿದೆ.[20] ೨೭.೩.೧೪೨೫ರಂದು ಹರಿಯಪ್ಪ ದಣ್ಣಾಯಕ ಆಳ್ವಿಕೆ ನಡೆಸಿದ್ದು ಗಮನಾರ್ಹ. ಇವನಂತೆ ಮಹಾಪ್ರಧಾನ ಸಿಂಗಾಣ್ಣ ದಣ್ಣಾಯಕನು ೩.೨.೧೪೮೨ರಲ್ಲಿ ವಿರೂಪಾಕ್ಷರಾಯ ಮಹಾರಾಯರ ಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದನು.[21]

ಕೃಷ್ಣದೇವರಾಯನ ಕಾಲದ ೩೦.೧೦.೧೫೧೬ (ಗುರುವಾರ)ರ ಶಾಸನದಲ್ಲಿ ಪಾರ್ವತಿ ಅಮ್ಮ-ಇಮ್ಮಡಿ ಬಸಪ್ಪನಾಯಕ ಒಡೆಯರ ಪುತ್ರ ಅರುಹ ತಿಮ್ಮಣ್ಣನಾಯಕ ಅಧಿಕಾರಿ (ಪ್ರಧಾನ)ಯಾಗಿದ್ದನು. ಸೋಗೆ ಮತ್ತು ದಣ್ಣಾನಾಯಕ ಪುರವನ್ನು ಕೊಟ್ಟೂರು ಸೀಮೆಗೆ ಕೊಡುತ್ತಾನೆ.[22] ಇದೇ ಕಾಲಕ್ಕೆ (೧೬.೧.೧೫೧೮) ಕಠಾರಿ ತಿಪ್ಪಣ್ಣನಾಯಕನ ಮಗ ರಾಮಣ್ಣ ನಾಯಕ ಅಧಿಕಾರಿಯಾಗಿದ್ದನು.

ಅನಂತಪುರ ಜಿಲ್ಲೆ ಗೂಟಿ ತಾಲೂಕಿನ ಚೈಬಲದ ಚನ್ನಕೇಶವ ದೇವಾಲಯ ಶಾಸನವು ದಳವಾಯಿ ಅಪ್ಪಲನಾಯಕರಿಗೆ ಸದಾಶಿವರಾಯರು ಅಮರ ಮಾಗಾಣಿ ನೀಡಿದ ಬಗ್ಗೆ ಉಲ್ಲೇಖವಿದೆ.[23] ರಕ್ಷಣೆಯಲ್ಲಿ ಸೇವೆಗೈದ ರಾಹುತ ಲಿಂಗಪನಾಯಕರು ಆದವಾನಿಯ ಬೆಲದೋಣಿ ಗ್ರಾಮವನ್ನು ಸೇವೆಗೆಂದು ಪಡೆದುಕೊಳ್ಳುತ್ತಾರೆ.

ಕೃಷ್ಣದೇವರಾಯನ ಕಾಲದಲ್ಲಿ ಪೆರಿಯ ಓಬಳ್ಳನಾಯಕರ್ ಎಂಬ ಪ್ರಧಾನ ದಂಡನಾಯಕ ನಿದ್ದನು. ಹೀಗೆ ಬೇಡ-ನಾಯಕರ ಸೇವೆ ವಿಜಯನಗರದಲ್ಲಿ ಹಗಲಿಗೆ ಹೆಗಲು ಕೊಟ್ಟು ಶ್ರಮಿಸಿರುವುದನ್ನು ತಿಳಿಯಬಹುದಾಗಿದೆ.

**ಅಧಿಕಾರೇತರ ಸೇವೆ**

ಅಧಿಕಾರ ಚಲಾಯಿಸುವ ಹುದ್ದೆಗಳಲ್ಲಿರದೆ, ಕೇವಲ ಅಧಿಕಾರಿಗಳು ಹೇಳಿದ ಸೇವೆಯನ್ನು ಮಾಡಿದ ಬೇಡ-ನಾಯಕರ ಚಿತ್ರಣವಿದೆ. ಕೊಳ್ಳೆಗಾಲ ಪಟ್ಟಣದ ಲಕ್ಷ್ಮೀನಾರಾಯಣ ದೇವಾಲಯದ ೧೮.೧೨.೧೫೪೯ರ ಶಾಸನವು ಸದಾಶಿವರಾಯ ಮಹಾರಾಯರಿಗೆ ಸೇರಿದೆ. ಪಲ್ಲಕ್ಕಿ ಹೋರುವ ಸೇವೆಗೆ ರಾಮರಾಜನಾಯಕರಿಗೆ ಹದಿನಾಡು ಸೀಮೆಯನ್ನು ಉಂಬಳಿ ಯಾಗಿ ಕೊಟ್ಟ ವಿಷಯವಿದೆ.

**ನಾಯಕ ಪ್ರಭುತ್ವ ಮತ್ತು ಊಳಿಗಮಾನ್ಯ ಪದ್ಧತಿ : ಅವಲೋಕನ**

ಜಪಾನಿನ ವಿದ್ವಾಂಸ ನೊಬುರು ಕರಾಶಿಮ ವಿಜಯನಗರ ಸಾಮ್ರಾಜ್ಯದಲ್ಲಿ 'ನಾಯಕ' ರನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಕರಾಶಿಮ ಆಡಂಬರವಿಲ್ಲದೆ, ಸರಳವಾಗಿ ಬರೆಯು ತ್ತಾರೆ. ಅನೇಕ ವ್ಯಾಖ್ಯಾನಗಳಲ್ಲಿ ಅವರು ಬರ್ಟನ್ ಸ್ಟೀನನ ನಿಲುವನ್ನು ಒಪ್ಪುವುದಿಲ್ಲ. ಉದಾಹರಣೆಗೆ ಬರ್ಟನ್ ಸ್ಟೀನನಂತಲ್ಲದೆ ಅವರು ವಿಜಯನಗರದ ಕೇಂದ್ರಾಡಳಿತವು 'ಧಾರ್ಮಿಕ'ವಾಗಿರಲಿಲ್ಲ. ಸಂಪ್ರದಾಯ ಪಾಲನೆಯದಾಗಿರಲಿಲ್ಲ. ನಿಜವಾದ ಅಧಿಕಾರ ಅಲ್ಲಿರಲಿಲ್ಲ ಎಂದು ನಂಬುತ್ತಾನೆ. ಅಮರನಾಯಕರು ಮತ್ತು ಇತರ ವಿಕೇಂದ್ರೀಕೃತ ಅಂಗ ಗಳಿದ್ದರೂ ಕೇಂದ್ರ ಪ್ರಭುತ್ವವು ಅಧೀನ ಘಟಕಗಳ ಮೇಲೆ ಸ್ವಲ್ಪಮಟ್ಟಿಗೆ ನಿಜವಾದ ಹತೋಟಿಯನ್ನು ಹೊಂದಿದ್ದಿತು.[24] ಬರ್ಟನ್ ಸ್ಟೀನ್ (ಅಮೇರಿಕಾದ ವಿದ್ವಾಂಸ) ತಮ್ಮ ವಿಜಯನಗರ (ಕೇಂಬ್ರಿಡ್ಜ್ ಹಿಸ್ಟರಿ) ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ನಾಯಕರು ವಹಿಸಿದ ಪಾತ್ರವನ್ನು ಕುರಿತು ಚರ್ಚಿಸಿದ್ದಾರೆ. ವಿಜಯನಗರ ಸಾಮ್ರಾಜ್ಯ ಏಕಕಾಲದಲ್ಲಿ ಸಾಮಂತ, ಒಕ್ಕೂಟ ಹಾಗೂ ವಿಕೇಂದ್ರಿಕೃತ ಅಂಶಗಳನ್ನು ಒಳಗೊಂಡಿದ್ದಿತು. ಊಳಿಗಮಾನ್ಯ ಪದ್ಧತಿ ಕುರಿತು ಚರ್ಚಿಸಿದ್ದಾರೆ. ದೊಡ್ಡ, ಚಿಕ್ಕರಾಜ್ಯ ಭಾಗಗಳನ್ನು ಅನೇಕ ಸಂದರ್ಭಗಳಲ್ಲಿ ಒಂದೇ ಒಂದು ಹಳ್ಳಿಯನ್ನು ಗಣ್ಯ ಜನರಿಗೆ ವಹಿಸಲಾಗುತ್ತಿತ್ತು. ಅಗತ್ಯ ಬಂದಾಗ ನಿರ್ದಿಷ್ಟ ಪಡಿಸಿರುವ ಸಂಖ್ಯೆಯ ಸೇನೆಯನ್ನು ಅವರು ಒದಗಿಸತಕ್ಕದ್ದು ಎಂಬುದೊಂದೇ ಷರತ್ತು. ಈ ಭೂಹಿಡುವಳಿಗಳನ್ನು ಅಮರಂ ಎಂದು ಕರೆಯುತ್ತಿದ್ದರು. ಅದನ್ನು ಪಡೆದಿದ್ದವರನ್ನು ಅಮರನಾಯಕರೆಂದು ಕರೆಯಲಾಗುತ್ತಿತ್ತು. ಒಂದು ರೀತಿಯಲ್ಲಿ ಇವರು ವಿಜಯನಗರ ರಾಜ್ಯಾಡಳಿತದ ಆಧಾರ ಸ್ಥಂಭಗಳಾಗಿ ವರ್ತಿಸುತ್ತಿದ್ದರು ಎಂಬ ಮಾತು ನಿಜ.[25]

ವಿಜಯನಗರ ಸಾಮ್ರಾಜ್ಯದಲ್ಲಿ ಅಮರನಾಯಕರಾಗಿದ್ದು, ಆನಂತರ ಸ್ವತಂತ್ರ ಪಾಳೆಯ ಗಾರರಾದರು. ಕೆಳದಿ ನಾಯಕರು, ಚಿತ್ರದುರ್ಗ, ಹಾಗಲವಾಡಿ, ತರೀಕೆರೆ, ಯಲಹಂಕ, ಮಾಗಡಿ ಇತರರು ವಿಜಯನಗರ ಕಾಲದ ಅಮರನಾಯಕರಾಗಿದ್ದರು. ಅಮರನಾಯಕ 'ಅಮರಂ'ಗೆ ಒಡೆಯನಾಗಿರಲಿಲ್ಲ. ರೈತ ಅವನ ಊಳಿಗದವನೂ ಆಗಿರಲಿಲ್ಲ. ಅಮರ ನಾಯಕನಿಗೆ ಕೃಷಿಯ ಹೆಚ್ಚುವರಿ ಫಸಲಿನ ಮೇಲೆ ಆಸಕ್ತಿಯಿತ್ತೇ ಹೊರತು ನೇರವಾಗಿ ಕೃಷಿಯನ್ನು ಕುರಿತಲ್ಲ, ಅಮರಂ ಹಿಡುವಳಿಗಳಲ್ಲಿ ಅಮರನಾಯಕನಿಗೂ ರೈತನಿಗೂ ನಡುವೆ ಘರ್ಷಣೆಯಿರಲಿಲ್ಲ.

ಈ ಚೆ್ಲಾರನಾಯಕರು ಬಹಮನಿಗಳಿಗೆ ಪ್ರೋಕೊಟ್ಟಾಗ, ವಿಜಯನಗರದ ಹರಿಹರ ಆಳ್ವಿಕೆಯಲ್ಲಿ ರಾಮದೇವ ಹಾಗೂ ನಾಯಂಕರಾಚಾರ್ಯ ಕಂಪಣರನ್ನು ೨ನೇ ಬುಕ್ಕನ ನಾಯಕತ್ವ ದಲ್ಲಿ ಕಳಿಸಿಕೊಟ್ಟನು. ವಿಜಯನಗರ ಕಾಲದ ನಾಯಕರು ನಿಷ್ಠೆ, ಪ್ರಾಮಾಣಿಕತೆಯನ್ನು ಬಿಟ್ಟು ಅವಕಾಶ ಬಂದಂತೆ ವರ್ತಿಸುತ್ತಿರಲಿಲ್ಲ. ಇಲ್ಲಿ ನಾಯಕರನ್ನು ಬೇಡ ಬುಡಕಟ್ಟಿ ನವರೆಂದು ಪರಿಗಣಿಸಲಾಗಿದೆ.

ತುಳು ವಂಶದ ಈಶ್ವರನಾಯಕ ಸಮರ್ಥ ಅರಸ, ಅವನು ವಿಜಯಗಿರಿ, ನೆಲ್ಲೂರು, ಚೆಂಗಲ್ ಪೇಟೆ, ಶ್ರೀರಂಗಂ, ಭುವನಗಿರಿ ಮತ್ತು ಜಿಂಜಿಗಳನ್ನು ವಶಪಡಿಸಿಕೊಳ್ಳುತ್ತಾನೆ. ಇವನ ಮಗ ನರಸನಾಯಕ ರಾಜಪ್ರತಿನಿಧಿ. ದಳಪತಿ ಮತ್ತು ಮಹಾಪ್ರಧಾನನೂ ಆಗಿದ್ದನು. ಈ ಕಾಲಘಟ್ಟದಲ್ಲಿ ನಾಯಕತನಕ್ಕೆ ಒಂದು ಹೊಸ ಆಯಾಮ ಸಿಕ್ಕಿತು.

* * *

---

[1] ಇತಿಹಾಸ ದರ್ಶನ, ಸಂ. ೨, ೧೯೮೮.

[2] ಲಕ್ಷ್ಮಣ್ ತೆಲಗಾವಿ, ಎಪ್ಪತ್ತೇಳು ಪಾಳೆಯಗಾರರು, ಪು. ೨೨೭.

[3] SII part II, ನಂ. ೪೧೦, ಪು. ೪೧೬.

[4] ಅದೇ, ೪೨೯.

[5] SII, IX, part II, p. ೪೪೫.

[6] ಅದೇ, ೪೬೧ (ನಂ. ೪೫೨).

[7] ಅದೇ, ೪೮೯ (ನಂ. ೪೭೪).

[8] ಅದೇ, (ನಂ. ೪೭೭), ಪು. ೪೯೧-೯೨.

[9] ಅದೇ, (ನಂ. ೪೯೦, ೪೯೧, ೪೯೩, ೪೯೯), ಪು. ೫೦೪.

[10] SII, IX, part II, (No. ೫೦೮), p. ೫೨೧.

[11] ಅದೇ, ಪು. ೬೩೨, (ನಂ. ೬೩೦).

[12] ಅದೇ, ಪು. ೬೩೪, (ನಂ. ೬೩೩).

[13] SII, IX, part II, p. ೬೩೭. (No. ೬೩೯).

[14] SII, Vol. IX, p. ೬೫೯. (No. ೬೬೬).

[15] ಅದೇ, ಪು. ೬೮೦, (ನಂ. ೬೮೯).

[16] ಅದೇ, ಪು. ೬೮೧, (ನಂ. ೬೯೦).

[17] ವಿಜಯನಗರ ಅಧ್ಯಯನ ೭, ಪು. ೧೮ (ವಿಜಯನಗರ ಕಾಲದ ಕೊಡಗು).

[18] ವಿಜಯನಗರ ಅಧ್ಯಯನ ಸಂ.೧೦, ಪು. ೨೮೪.

[19] SII, Vol. IX, Part II, p. ೪೧೬. (No. ೪೦೯).

[20] ಅದೇ, ಪು. ೪೪೧ (ನಂ. ೪೩೩).

[21] ಅದೇ, ಪು. ೪೮೩ (ನಂ. ೪೭೦).

[22] ಅದೇ, ಪು. ೫೧೬ (ನಂ. ೫೦೩).

[23] ಅದೇ, ಪು. ೬೭೩ (ನಂ. ೬೮೧).

[24] ಕರ್ನಾಟಕ ಚರಿತ್ರೆ ಸಂಪುಟ ೩, ಪ್ರೊ. ಕೆ.ಎಸ್. ಶಿವಣ್ಣ (ಸಂ), ಪು. ೩.

[25] ಅದೇ, ಪು. ೬.

# ವಿಜಯನಗರ ಪೂರ್ವಕಾಲೀನ ಬೇಡರು

# (ಭೂಮಿಯ ಸ್ವರೂಪ ಕಸುಬು ಆಹಾರ ಜನ)

ಭಾರತದಲ್ಲಿ ಐತಿಹಾಸಿಕ ಬರವಣಿಗೆಗಳು ವಸಾಹತುಶಾಹಿ ಆಡಳಿತದೊಂದಿಗೆ ಆರಂಭಗೊಂಡವು. ಮೊದಮೊದಲು ಪಾಶ್ಚೀಮಾತ್ಯರು ತಮ್ಮ ಆಡಳಿತದ ಭದ್ರತೆಗಾಗಿ ಮತ್ತು ಅದನ್ನು ಮುಂದುವರಿಸುವ ಉದ್ದೇಶದಿಂದ ಇಲ್ಲಿಯ ಜನರ ಭಾಷೆ, ಸಂಪ್ರದಾಯ, ಜನಾಂಗ, ಕಾನೂನು ಕಟ್ಟಲೆಗಳನ್ನು ಅಭ್ಯಸಿಸತೊಡಗಿದರು. ಇದರ ನಂತರ ಅವರು ರಾಜಕೀಯ ಇತಿಹಾಸಕ್ಕೆ ಹೆಚ್ಚು ಒತ್ತುಕೊಟ್ಟರು. ಕ್ರಮೇಣವಾಗಿ ರಾಜಕೀಯ ಇತಿಹಾಸದ ಜೊತೆಗೆ ಸಾಮಾಜಿಕ, ಆರ್ಥಿಕ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಗಮನ ಹರಿಸಲಾ ರಂಭಿಸಿದರು. ಇದರೊಂದಿಗೆ ದೇಶಿಯ ಬರವಣಿಗೆಗಳು ಸಹ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟವು. ಇಪ್ಪತ್ತನೆಯ ಶತಮಾನದ ಅರ್ಧ ಭಾಗದಿಂದ ರಾಜಮನೆತನಗಳ ಕೇಂದ್ರೀಕೃತ ಇತಿಹಾಸ ಬಿಟ್ಟು ಸಮಾಜದ ಇತರ ವರ್ಗಗಳ ಅಧ್ಯಯನವು ಮಂದಗತಿಯಲ್ಲಿ ಪ್ರಾರಂಭವಾಯಿತು.

[1]ಇದರ ಫಲವಾಗಿ ನಂತರದ ದಶಕಗಳಲ್ಲಿ ಇತಿಹಾಸ ಲೇಖನದ ಸ್ವರೂಪದಲ್ಲಿ ಗಣನೀಯ ಪ್ರಮಾಣದ ಬದಲಾವಣೆಗಳು ಕಾಣಲಾರಂಭಿಸಿದವು.[2]ಇತ್ತೀಚಿನ ದಿನಗಳಲ್ಲಿ ಇತಿಹಾಸ, ಜನಾಂಗೀಯ ಮತ್ತು ಸಾಂಸ್ಕೃತಿಕ ಅಧ್ಯಯನಗಳು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿವೆ.

ಈ ಲೇಖನದಲ್ಲಿ ಕರ್ನಾಟಕ ಬುಡಕಟ್ಟು ಜನಾಂಗಗಳಲ್ಲಿ ಅತ್ಯಂತ ಪ್ರಮುಖವಾದ ಮತ್ತು ಪ್ರಾಚೀನವಾದ ಬೇಡ (ನಾಯಕ)[3] ಬುಡಕಟ್ಟಿನ ಆರ್ಥಿಕ ಸ್ಥಿತಿ-ಗತಿಗಳ ಸ್ವರೂಪ ವನ್ನು ಪ್ರಮುಖವಾಗಿ ಪರಿಶೀಲಿಸಲಾಗುವುದು. ಒಂದು ಜನಾಂಗ/ಸಮುದಾಯದ ಸಾಮಾಜಿಕ ಸ್ಥಾನಮಾನಗಳನ್ನು ತಿಳಿದುಕೊಳ್ಳಬೇಕಾದರೆ ಅವರ ಆರ್ಥಿಕ ಹಿನ್ನೆಲೆ ಅತ್ಯಾವಶ್ಯಕ. ಒಂದು ಜನಾಂಗದ ಆರ್ಥಿಕ ವ್ಯವಸ್ಥೆಯನ್ನು ತಿಳಿದುಕೊಳ್ಳಬೇಕಾದರೆ ಆ ಜನಾಂಗದ ನೆಲೆಗಳು (ವಾಸಿಸುವ ಸ್ಥಳ), ಮೂಲ ವೃತ್ತಿ ಹಾಗೂ ಆ ಕಸುಬನ್ನು ಮಾಡಲು ಬಳಸುತ್ತಿದ್ದ ಸಲಕರಣೆ ಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಕಾರ್ಲ್ ಮಾರ್ಕ್ಸ್‌ರ ಸಮಾಜವಾದದ ಸಿದ್ಧಾಂತದ ಪ್ರಕಾರ ಭೌತಿಕ ವಸ್ತುಗಳು ಒಬ್ಬ ವ್ಯಕ್ತಿಯ/ಸಮಾಜದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಯನ್ನು ನಿರ್ಧರಿಸುತ್ತವೆ. ಏಕೆಂದರೆ ಉತ್ಪಾದನಾ ಸಾಧನಗಳು ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಬದಲಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಯಾರಲ್ಲಿ ಹೆಚ್ಚು ಉತ್ಪಾದನಾ ಸಾಮರ್ಥ್ಯ ಅಥವಾ ಸಾಧನಗಳು ಇದ್ದವೋ ಅವರು ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಹೊಂದಲು ಸಾಧ್ಯವಾಯಿತು. ಉತ್ಪಾದನಾ ಸಾಧನಗಳನ್ನು ಹೊಂದದವರು ಅದೇ ಸಮುದಾಯಕ್ಕೆ ಸೇರಿದ್ದರೂ ಕೂಡ ಆ ಸಮುದಾಯದಲ್ಲಿಯೇ ಅತ್ಯಂತ ಕೀಳುಮಟ್ಟದ (ಕೆಳಸ್ತರದ) ಸ್ಥಾನಮಾನಗಳನ್ನು ಹೊಂದುವಂತಾಯಿತು. ಅಂತಹವರನ್ನು ಅದೇ ಸಮುದಾಯ ದವರು ಶೋಷಣೆ ಮಾಡುವುದರ ಜೊತೆಗೆ ಉನ್ನತ ವರ್ಗದ/ಜಾತಿಯ ಸಮುದಾಯದವರು ಸಹ ಶೋಷಣೆಗೈದರು. ಎಲ್ಲಿಯವರೆಗೆ ಈ ವರ್ಗ ತನ್ನ ಉತ್ಪಾದನಾ ಶಕ್ತಿಯನ್ನು ಮತ್ತು ಸಾಧನಗಳನ್ನು ತನ್ನದಾಗಿಸಿಕೊಳ್ಳಲಿಲ್ಲವೋ ಅಲ್ಲಿಯವರೆಗೂ ಅದು ಎಲ್ಲಾ ರೀತಿಯ ಸಮುದಾಯಗಳಿಂದ ಶೋಷಿಸಲ್ಪಟ್ಟಿತು. ಈ ಲೇಖನದ ಕಾಲದ ಚೌಕಟ್ಟನ್ನು ಪ್ರಾಚೀನ ಕಾಲದಿಂದ ಸುಮಾರು ಕ್ರಿ.ಶ. ೧೩-೧೪ನೇ ಶತಮಾನದವರೆಗೆ ಮಿತಿಗೊಳಿಸಿ ಅಂದಿನ ಆರ್ಥಿಕ ಸ್ಥಿತಿ-ಗತಿಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಇದನ್ನು ರಚಿಸಲು ಮುಖ್ಯವಾಗಿ ಶಾಸನ ಗಳು, ಕೈಫಿಯತ್ತುಗಳು ಮತ್ತು ಸಮಕಾಲೀನ ಸಾಹಿತ್ಯ ಕೃತಿಗಳನ್ನು ಬಳಸಿಕೊಳ್ಳಲಾಗಿದೆ.

ಬೇಡ ಬುಡಕಟ್ಟಿನವರು ಬೇರುಗಳನ್ನು ಪೌರಾಣಿಕ ಕಾಲದ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಕಾಣಬಹುದು. ಆದಿಕಾವ್ಯವಾದ ರಾಮಾಯಣ ವನ್ನು ರಚಿಸಿದ ವಾಲ್ಮೀಕಿ ಮತ್ತು ರಾಮನಿಗೆ ಹಣ್ಣುಹಂಪಲು ನೀಡಿದ ಶಬರಿ ಹಾಗೂ ಮತ್ತೊಂದು ಮಹಾಕಾವ್ಯ ರಚಿಸಿದ ವ್ಯಾಸ ಮತ್ತು ದ್ರೋಣಾಚಾರ್ಯರಲ್ಲಿ ಬಿಲ್ಲು ವಿದ್ಯೆ ಕಲಿತ ಏಕಲವ್ಯನು ಬೇಡ ಬುಡಕಟ್ಟಿಗೆ ಸೇರಿದವರೆಂದು ಪ್ರತೀತಿ ಇದೆ. ಮಹಾಭಾರತದ ಕಾಲದಲ್ಲಿ ಬೇಟೆಗಾರರನ್ನು ಪುಲಿಂದ, ನಿಷಾದ, ಕಿರಾತ, ವ್ಯಾಧ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ಬೇಡ ಬುಡಕಟ್ಟು ಇಡೀ ಮಾನವ ಸಮುದಾಯದ ಹಲವು ಭಾಗಗಳಲ್ಲಿಒಂದು ಭಾಗ ಮಾತ್ರ. ಮಾನವ ಸಂಸ್ಕೃತಿ ಪೂರ್ವೇತಿಹಾಸ ಕಾಲದಲ್ಲಿ ಆರಂಭಗೊಂಡು ಕಾಲಾಂತರದಲ್ಲಿ ಹಲವು ಮಾರ್ಪಾಟುಗಳಿಗೆ ಒಳಗಾಯಿತು. ಹಳೆ ಶಿಲಾಯುಗದಲ್ಲಿ ಇಡೀ ಮಾನವನ ಮುಖ್ಯ ಕಸುಬು ಬೇಟೆಗಾರಿಕೆಯಾಗಿತ್ತು. ಈ ಅವಧಿಯಲ್ಲಿ ಮಾನವ ಅಲೆಮಾರಿಯಾಗಿದ್ದು, ಬೆಟ್ಟಗಳ ಕಲ್ಲಾಸರೆಗಳಲ್ಲಿ ಮತ್ತು ಗುಹೆಗಳಲ್ಲಿ ವಾಸಿಸುತ್ತಿದ್ದನು. ಬೆಟ್ಟಗುಡ್ಡಗಳೇ ಅವನ ಚಟುವಟಿಕೆಯ ಕೇಂದ್ರಗಳಾಗಿದ್ದವು. ಏಕೆಂದರೆ ಅವು ಅಂದಿನ ಮಾನವನಿಗೆ ಬೇಕಾದ ವಸತಿ, ಕಲ್ಲಿನ ಆಯುಧಗಳು ಹಾಗೂ ಆಹಾರವನ್ನು (ಪ್ರಾಣಿ, ಪಕ್ಷಿಗಳು) ಒದಗಿಸುವ ನೆಲೆಗಳಾಗಿದ್ದವು. ಅದಕ್ಕಾಗಿಯೇ ನಾವು ಇಂದಿಗೂ ಸಹ ಕರ್ನಾಟಕದ ಹಲವು ಭಾಗಗಳಲ್ಲಿ ಬೆಟ್ಟಗುಡ್ಡಗಳ ಸಾಲಿನಲ್ಲಿರುವ ಕಲ್ಲಾಸರೆಗಳಲ್ಲಿ, ಗುಹೆಗಳಲ್ಲಿಅಂದಿನ ಮಾನವ ಬಿಡಿಸಿದ ಕೆಂಪು, ಬಿಳಿ ಮತ್ತು ಕಪ್ಪುವರ್ಣಚಿತ್ರಗಳನ್ನು ಕಾಣಬಹುದು.[4] ಈ ವರ್ಣಚಿತ್ರಗಳು ಹೆಚ್ಚಾಗಿ ಬೇಟೆಯ ಚಿತ್ರಣವನ್ನು ಹೊಂದಿವೆ. ಈ ವರ್ಣಚಿತ್ರಗಳಲ್ಲಿ ವಿವಿಧ ರೀತಿಯ ಪ್ರಾಣಿಗಳನ್ನು ಮತ್ತು ಬೇಟೆಯ ಆಯುಧಗಳನ್ನು ಕಾಣಬಹುದು. ಈ ಹಂತದ ಜೀವನವನ್ನು ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಿಸುವ ಹಂತ ಎಂದು ಪರಿಗಣಿಸಲಾಗಿದೆ. ಈ ಹಂತದಲ್ಲಿ ಮಾನವನ ಆರ್ಥಿಕ ಜೀವನವು ಕೇವಲ ದೈನಂದಿನ ಹಸಿವನ್ನು ನೀಗಿಸಿಕೊಳ್ಳುವುದಾಗಿತ್ತು. ಸಮುದಾಯ ಸಹ ಬೇಟೆಯು ಅಂದಿನ ಪ್ರಮುಖ ಆರ್ಥಿಕ ವ್ಯವಸ್ಥೆಯಾಗಿತ್ತು. ಕಾಡುಪ್ರಾಣಿಗಳನ್ನು

ಬೇಟೆಯಾಡುವುದು ಅನಿವಾರ್ಯವಾದ್ದರಿಂದಲೂ ಹಾಗೂ ಬೇಟೆಯ ಸಾಧನಗಳು ಹೆಚ್ಚು ತಾಂತ್ರಿಕತೆಯಿಂದ ಕೂಡಿರದೆ ಇದ್ದುದರಿಂದಲೂ ಹಲವಾರು ಜನ ಒಟ್ಟಿಗೆ ಸೇರಿ ಬೇಟೆಯಾಡು ವುದು ಅನಿವಾರ್ಯವಾಗಿತ್ತು. ಈ ರೀತಿಯ ಬದುಕನ್ನು ಇಂದಿಗೂ ಬೇಡ ಬುಡಕಟ್ಟಿನಲ್ಲಿ ಕೆಲವು ವಿಶೇಷ ಸಂದರ್ಭಗಳಲ್ಲಿ ಸಾಂಕೇತಿಕವಾಗಿ ಕಾಣಬಹುದು.

ನವಶಿಲಾಯುಗದಲ್ಲಿ ಮಾನವ ಅಲೆಮಾರಿ ಜೀವನವನ್ನು ತ್ಯಜಿಸಿ ಬೆಟ್ಟಗುಡ್ಡಗಳನ್ನು ತೊರೆದು ಬೆಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಒಂದೆಡೆ ವಾಸಿಸತೊಡಗಿದನು. ಈ ಹಂತದಲ್ಲಿ ಬೇಟೆಯ ಜೊತೆಗೆ ಕೃಷಿ ಮತ್ತು ಪಶುಪಾಲನೆಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡನು. ಆದ್ದರಿಂದ ಜೀವನ ಶೈಲಿಯಲ್ಲಿ ವೈವಿಧ್ಯತೆಗಳು ಹುಟ್ಟಿಕೊಂಡವು. ಹೀಗಾಗಿ ಈ ಹಂತದಲ್ಲಿ ಯಾರು ಬೇಟೆಗಾರರು, ಯಾರು ಕೃಷಿಕರು ಮತ್ತು ಯಾರು ಪಶುಪಾಲಕರು ಎಂದು ನಿಖರವಾಗಿ ಗುರುತಿಸುವುದು ಕಷ್ಟಕರವಾದ ಕೆಲಸ. ಸಾಮಾನ್ಯವಾಗಿ ಎಲ್ಲರೂ ತಮ್ಮ ದಿನನಿತ್ಯದ ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ಕೃಷಿ ಮತ್ತು ಪಶುಪಾಲನೆಯಲ್ಲಿ ತೊಡಗಿಸಿ ಕೊಂಡಿದ್ದರೂ ಬೇಟೆಯನ್ನು ತ್ಯಜಿಸಿರಲಿಲ್ಲವೆಂದು ಕಂಡುಬರುತ್ತದೆ.

ಕ್ರಿ.ಪೂ. ೧೦೦೦ ದಿಂದ ಅಂದರೆ ಬೃಹತ್ ಶಿಲಾಯುಗದಿಂದ ಮಾನವನ ವಿವಿಧ ಕಸುಬುಗಳನ್ನು ಗುರುತಿಸಲು ಸಾಕಷ್ಟು ಆಧಾರಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ: ಬೃಹತ್ ಶಿಲಾಗೋರಿಗಳಲ್ಲಿ ದೊರಕಿರುವ ಅಸ್ತಿಪಂಜರಗಳು, ಮಡಕೆ ಚೂರುಗಳು, ಕಬ್ಬಿಣದ ಆಯುಧಗಳು, ಕಲ್ಲು ಚಪ್ಪಡಿಗಳು, ಆಹಾರ ಧಾನ್ಯಗಳು ಮತ್ತಿತರ ವಸ್ತುಗಳು. ಇವುಗಳ ಆಧಾರದ ಮೇಲೆ ಸುಮಾರು ಕ್ರಿ.ಪೂ.೮೦೦ ರಿಂದ ಸಮಾಜದಲ್ಲಿ ಕಲ್ಲುಕುಟಿಗರು, ಕುಂಬಾರರು, ಕಮ್ಮಾರರು, ಅಕ್ಕಸಾಲಿಗರು, ಕೃಷಿಕರು, ಬೇಟೆಗಾರರು ಮತ್ತಿತರ ವರ್ಗಗಳಿದ್ದು ದನ್ನು ಗುರುತಿಸಬಹುದು. ಇದರಿಂದ ಅಂದಿನ ಸಮಾಜವು ಹಲವು ಸ್ತರಗಳಿಂದ ಕೂಡಿದ್ದಾ ಗಿತ್ತು ಎನ್ನಬಹುದು. ಬೃಹತ್ ಶಿಲಾಗೋರಿಗಳಲ್ಲಿ ದೊರಕಿರುವ ಕಬ್ಬಿಣದ ಆಯುಧಗಳಾದ ಈಟಿ, ಭರ್ಜಿ, ಖಡ್ಗ ಮುಂತಾದವುಗಳನ್ನು ಬಹುಶಃ ಕದನಕ್ಕಾಗಲಿ ಅಥವಾ ಬೇಟೆಗಾಗಲಿ ಬಳಸಿರಬಹುದು.[5] ಬೃಹತ್ ಶಿಲಾಯುಗದ ನಿರ್ಮಾಪಕರು ಪೂರ್ವ ಮೆಡಿಟರೆನಿಯನ್ ಸಮುದ್ರ ತೀರದಿಂದ ಬಂದವರಾಗಿದ್ದರಿಂದ ಅವರು ಅಲ್ಲಿಯ ಸಂಸ್ಕೃತಿಯನ್ನೇ ಇಲ್ಲಿಯೂ ಮುಂದುವರಿಸಿರುವುದು ಕಂಡುಬರುತ್ತದೆ. ಈ ಸಂಸ್ಕೃತಿಯ ಪ್ರಮುಖ ಲಕ್ಷಣವೆಂದರೆ ಸಾವಿನ ನಂತರ ಆತ್ಮದಲ್ಲಿ ನಂಬಿಕೆಯಿಡುವುದು. ಹೀಗಾಗಿ ಸತ್ತವರ ಜೊತೆಯಲ್ಲಿ ಅವರು ದಿನನಿತ್ಯ ಉಪಯೋಗಿಸುತ್ತಿದ್ದ ಪ್ರಮುಖ ಆಯುಧಗಳನ್ನು ಹೂಳುವುದು ನಂಬಿಕೆಯಾಗಿ ಬೆಳೆಯಿತು. ಅಂದರೆ ಈ ಸಮಯದಲ್ಲಿ ಕೃಷಿ, ಪಶುಪಾಲನೆ ಮತ್ತು ಕೆಲವು ವೃತ್ತಿಗಳು ಬೆಳವಣಿಗೆಯಾಗಿದ್ದರೂ ಬೇಟೆಯಾಡುವುದು ಸಂಪೂರ್ಣವಾಗಿ ತ್ಯಜಿಸಿದ್ದಂತೆ ಕಂಡು ಬರುವುದಿಲ್ಲ. ಇಂದಿನ ಬೇಡ ಜನಾಂಗದ ಮೂಲವನ್ನು ನವ ಶಿಲಾಯುಗದ ಮಾನವನೊಡನೆ ಪ್ರಾಕ್ತನ ಶಾಸ್ತ್ರಜ್ಞರು ಗುರುತಿಸಿದ್ದಾರೆ.[6] ಕರ್ನಾಟಕದಾದ್ಯಂತ ಇಂದಿಗೂ ಪ್ರತಿ ಹಳ್ಳಿಗಳಲ್ಲೂ ಒಂದಲ್ಲ ಒಂದು ರೀತಿಯ ಬೃಹತ್ ಶಿಲಾಯುಗದ ಸ್ಮಾರಕಗಳ ಕುರುಹುಗಳಿರುವುದನ್ನು ಕಾಣಬಹುದು.

ಬೃಹತ್ ಶಿಲಾಯುಗದ ಸಮಕಾಲೀನ ಅಥವಾ ಹತ್ತಿರದ ಸಂಗಮ್ ಸಾಹಿತ್ಯವು ದಕ್ಷಿಣ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿದ್ದ ವಿವಿಧ ಸಾಮಾಜಿಕ ಗುಂಪುಗಳನ್ನು ತಿಳಿಸುತ್ತದೆ. ಈ ಸಾಮಾಜಿಕ ರಚನೆಯ ಭೌಗೋಳಿಕ ಅಂಶದಿಂದ ಕೂಡಿದ್ದುದಾಗಿದೆ. ಅವುಗಳೆಂದರೆ, ಮುಲ್ಲೈ, ಕುರಿಂಜಿ, ಮರುದಮ್, ಪಾಲೈ ಮತ್ತು ನೆಯಿಂದಲ್. ಸಂಗಮ್ ಸಾಹಿತ್ಯವು ಬೇಟೆಗಾರರು, ಮೀನುಗಾರರು ಮತ್ತು ಕುರುಬರು ಮಾಡುತ್ತಿದ್ದ ಪೂಜಾ ವಿಧಾನಗಳನ್ನು ತಿಳಿಸುತ್ತದೆ. ಪೂಜಾ ವಿಧಾನವು ಜಾನಪದ ಸಂಗೀತ ಮತ್ತು ನೃತ್ಯಗಳಿಂದ ಕೂಡಿರುತಿತ್ತೆಂದು ತಿಳಿಸುತ್ತದೆ.[7] ಪತ್ತುಪಾಟ್ಟುವಿನ ನಾಲ್ಕನೆಯ ಪದ್ಯವು ಪೆರುಂಪನ್ನಾರುಪ್ಪಡೈ ಯೋಧರು, ಪಶುಪಾಲಕರು, ರೈತರು ಹಾಗೂ ಮೀನುಗಾರರ ಮನೆಗಳ ವಿವರಣೆಯನ್ನು ನೀಡುತ್ತದೆ.[8] ಎಟ್ಟುತೋಗೈನ ಮೂರನೆ ಪದ್ಯವು ಪಿಂಗುರುನೂರು ಮತ್ತು ೬ನೇ ಪದ್ಯ ಕಲಿತ್ತೊಗೈ ಐದು ಭೌಗೋಳಿಕ ಭಾಗಗಳನ್ನು ತಿಳಿಸುತ್ತದೆ.[9] ಅವುಗಳೆಂದರೆ;

**ಭೂಮಿಯ ಸ್ವರೂಪ ಕಸುಬು ಆಹಾರ ಜನ**

೧. ಮುಲ್ಲೈ= ಕಾಡು: ಜೇನು ಸಂಗ್ರಹಣೆ, ಗೆಡ್ಡೆ ಗೆಣಸು ಅಗೆಯುವುದು, ಗಿಳಿ ಸಾಕಾಣಿಕೆ: ರಾಗಿ: ಕುರುಬರು.

೨. ಕುರಿಂಜಿ=ಬೆಟ್ಟಗಾಡುಗಳ ಪ್ರದೇಶ: ದನ, ಕುರಿ ಸಾಕಾಣಿಕೆ, ಕೃಷಿ: ರಾಗಿ, ಸಾಮೈ: ಬೇಟೆಗಾರರು.

೩. ಮರುದಮ್=ನೀರಾವರಿಯಿಂದ ಕೂಡಿದ ಭೂಮಿ: ಕೃಷಿ, ಗೂಳಿ ಕಾಳಗ: ಅಕ್ಕಿ: ರೈತರು.

೪. ನೆಯ್ದಲ್=ಕರಾವಳಿ ತೀರ ಪ್ರದೇಶ: ಮೀನುಗಾರಿಕೆ ಮತ್ತು ಉಪ್ಪು ತಯಾರಿಕೆ: ಮೀನು: ಪರಟವರ್.

೫. ಪಾಲೈ=ಒಣ/ಬಂಜರು ಭೂಮಿ: ದಾರಿ ಹೋಕರ ಮತ್ತು ಪ್ರಯಾಣಿಕರ ಲೂಠಿ : ಮರವನ್.

ಮೇಲಿನ ಐದು ಭೌಗೋಳಿಕ ಪ್ರದೇಶಗಳಲ್ಲಿ ಕುರಿಂಜಿ ಮತ್ತು ಪಾಲೈ ಪ್ರದೇಶಗಳ ಜನ, ಕಸುಬುಗಳು ಮತ್ತು ಆಹಾರವು ಬೇಡರ ಎಲ್ಲಾ ಲಕ್ಷಣಗಳನ್ನು ಹೋಲುತ್ತವೆ. ಕುರಿಂಜಿ ಪ್ರದೇಶದಲ್ಲಿ ಗಂಧ, ಶುಂಠಿ, ಹರಿಶಿನ ಮತ್ತು ಮೆಣಸನ್ನು ಸಂಗ್ರಹಿಸಿ ಬಂಡೆಗಳ ಮೇಲೆ ಒಣಗಿಸುವುದು,ಹಾಗೂ ಗಿಳಿ, ಹುಲಿ ಮತ್ತು ಹಂದಿಗಳನ್ನು ಖೆಡ್ಡಾ ವಿಧಾನದಿಂದ ಬೇಟೆಯಾಡುತ್ತಿದ್ದುದು ಕಂಡುಬರುತ್ತವೆ.[10] ಪಾಲೈ ಪ್ರಾಂತ್ಯದಲ್ಲಿ ಹುಲ್ಲಿನ ಚಾವಣಿ ಹೊಂದಿದ್ದ ಗುಡಿಸಲುಗಳಲ್ಲಿ ದರೋಡೆಕಾರರು ತಮ್ಮ ಬಾಣ ಬಿಲ್ಲುಗಳಿಂದ ಕೂಡಿದ್ದ ದಾರಿಹೋಕರನ್ನು ಲೂಠಿ ಮಾಡುತ್ತಿದ್ದರು. ಇವರ ಮನೆಗಳಲ್ಲಿ ಅಳಿಲು, ಇಲಿಗಳು ಸುಳಿದು ನೋಡುತ್ತಿರಲಿಲ್ಲ. ಏಕೆಂದರೆ ಇವರ ಮನೆಯ ತುಂಬೆಲ್ಲಾ ಬಿಲ್ಲು ಬಾಣಗಳು ಇರುತ್ತಿದ್ದವು. ರಾಶಿಗಟ್ಟಲೆ ಬಾಣಗಳು ಇವರ ಮನೆಯಲ್ಲಿ ಬಿದ್ದಿರುತ್ತಿದ್ದವು. ನಾಯಿಗಳ ಕೊರಳಿಗೆ ಸರಪಳಿಯನ್ನು ಹಾಕಲಾಗುತ್ತಿತ್ತು. ಇಲ್ಲಿಯ ಜನರು ಕಪ್ಪು ವರ್ಣದವರಾಗಿದ್ದು, ಧೃಡಕಾಯ ಶರೀರವನ್ನು ಹೊಂದಿದ್ದರು. ತಮ್ಮ ಮೀಸೆಗಳನ್ನು ಉದ್ದವಾಗಿ ಬೆಳೆಸಿ ಜಿಂಕೆಯ ಕೋಡಿನಂತೆ ಹುರಿ ಮಾಡಿಕೊಳ್ಳುತ್ತಿದ್ದರು. ಇವರು ಚರ್ಮದ ಚಪ್ಪಲಿಗಳನ್ನು ಹಾಕುತ್ತಿದ್ದರು. ದರೋಡೆ ಜೊತೆಗೆ ಕಾಡು ಹಂದಿಗಳನ್ನು ಮತ್ತು ಮೊಲಗಳನ್ನು ಬಲೆಗಳನ್ನು ಬಳಸಿ ನಾಯಿಗಳ ಸಹಾಯದಿಂದ ಅವುಗಳನ್ನು ಹಿಡಿಯುತ್ತಿದ್ದರು. ಇದಲ್ಲದೇ ದನಕರುಗಳನ್ನು ಒಯ್ಯುವಲ್ಲಿ / ಕದಿಯುವಲ್ಲಿ ನಿಸ್ಸೀಮರಾಗಿದ್ದರು. ಇವರ ಹೆಣ್ಣು ಮಕ್ಕಳು ಹುತ್ತಗಳಲ್ಲಿ ಇರುವೆಗಳು ತಂದಿಟ್ಟ ಕಾಳು ಕಡ್ಡಿಗಳನ್ನು ಸಂಗ್ರಹಿಸುತ್ತಿದ್ದರು. ಇವರ ಹೆಂಗಸರು ಬಾಣಂತಿತನದಲ್ಲಿ ಜಿಂಕೆಯ ಚರ್ಮದ ಮೇಲೆ ಮಲಗುತ್ತಿದ್ದರು. ಇವರು ನಾಯಿಗಳು ಬೇಟೆಯಾಡಿ ತಂದ ಉಡಗಳನ್ನು ತಿನ್ನುತ್ತಿದ್ದರು. ಇವರು ತಮ್ಮ ಪೂರ್ವಜರನ್ನು ಹೂತಿದ್ದ ಸಮಾಧಿಗಳಿಗೆ, ನಿಲುಗಲ್ಲುಗಳಿಗೆ ಹೂವಿನ ಹಾರ ಹಾಕಿ ಪೂಜಿಸುತ್ತಿದ್ದರು.[11] ಕುರಿಂಜಿ ಜನರು ತಮ್ಮ ನಾಯಿಗಳೊಡನೆ ಬೇಟೆಗೆ ಹೋಗುವುದು, ಬಿದಿರು ಕೊಳವೆಗಳಲ್ಲಿ ಹೆಂಡವನ್ನು ತುಂಬಿಸಿ ಕೊಂಡು ಕುಡಿಯುವುದು ರೂಢಿಯಲ್ಲಿತ್ತು. ಗುಡ್ಡಗಾಡಿನ ಜನರ ಮಕ್ಕಳು ತಮ್ಮಷ್ಟಕ್ಕೆ ತಾವೇ ಚಿಕ್ಕ ಚಿಕ್ಕ ಬಿಲ್ಲುಗಳಿಗೆ ಬಾಣದ ತುದಿಗೆ ಮುಳ್ಳನ್ನು ಕಟ್ಟಿ ಇಲಿಗಳ ಮೇಲೆ ಬಿಟ್ಟು ಬಿಲ್ಲು ವಿದ್ಯೆಯನ್ನು ಕಲಿಯುತ್ತಿದ್ದರು.[12] ಈ ವಿವರಗಳು ಇತಿಹಾಸ ಆರಂಭ ಕಾಲದ ಬೇಡ ಜನಾಂಗದ ಆರ್ಥಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಅತ್ಯುಪಯುಕ್ತವಾಗಿವೆ.

ಬೇಡ ಬುಡಕಟ್ಟನ್ನು ವಿದ್ವಾಂಸರು ವೃತ್ತಿಗಳ ಆಧಾರದ ಮೇಲೆ ಊರು ಬೇಡರು ಮತ್ತು ಮ್ಯಾಸ ಬೇಡರು ಎಂದು ಎರಡು ಪಂಗಡಗಳಾಗಿ ವಿಂಗಡಿಸಿದ್ದಾರೆ.[13] ಊರು ಬೇಡರಲ್ಲಿ ಮತ್ತು ಮ್ಯಾಸ ಬೇಡರಲ್ಲಿ ಕೆಲವು ಉಪಪಂಗಡಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ ವಾಲ್ಮೀಕಿ, ತಳವಾರ, ಪರಿವಾರ, ನಾಯಕ, ಬೇರಾದ್, ವೇದಾನ್, ಭೋಯಾ, ರಾಮೋಶಿ. ಈ ಉಪ ಪಂಗಡಗಳನ್ನು ಕುರಿತು ವಿದ್ವಾಂಸರಾದ ಎಡ್ಗರ್ ಥರ್ಸ್ಟ್ನ[14] ಈ ರೀತಿ ಹೇಳಿದ್ದಾರೆ : 'ಬೇಡರನ್ನು ಮುಖ್ಯವಾಗಿ ಊರು ಅಥವಾ ಹಳ್ಳಿಯ ಬೇಡರು ಮತ್ತು ಮ್ಯಾಸ ಬೇಡರು ಅಥವಾ ಹುಲ್ಲುಗಾವಲಿನ ಬೇಡರು ಎಂದು ವಿಂಗಡಿಸಬಹುದು. ಈ ಪಂಗಡಗಳು ಮತ್ತೆ ಹಲವು ಬೆಡಗುಗಳಾಗಿ ವಿಂಗಡಣೆಯಾಗಿವೆ. ಅವುಗಳಲ್ಲಿ ನಾಲ್ಕು ಪ್ರಮುಖವಾದವು. ಅವುಗಳೆಂದರೆ ಯಮ್ಮಲವರು ಅಥವಾ ಎಮ್ಮೆಯವರು, ಮಂದಲದವರು ಅಥವಾ ಮಂದೆಯವರು, ಪುಲವರು ಅಥವಾ ಹೂವಿನವರು ಮತ್ತು ಮಿನಲವರು ಅಥವಾ ಮೀನುಗಾರರು'. ಇದರಿಂದ ತಿಳಿದು ಬರುವುದೇನೆಂದರೆ ಬೇಡರು ಪ್ರಾಣಿ, ಪಕ್ಷಿ ಮತ್ತು ಮೀನಿನ ಬೇಟೆಯ ಜೊತೆಗೆ ದನಕರುಗಳನ್ನು ಹೊಂದಿದ್ದು, ಅವರವರ ಉಪವೃತ್ತಿಗಳ ಆಧಾರದ ಮೇಲೆ ಜೀವನ ಸಾಗಿಸುತ್ತಿದ್ದರು. ಇವರೆಲ್ಲರ

ಕುಲಕಸುಬು ಬೇಟೆಗಾರಿಕೆಯಾಗಿದ್ದು ಬೆಟ್ಟಗುಡ್ಡಗಳ ತಪ್ಪಲಲ್ಲಿ, ನದಿ, ಹಳ್ಳ ಕೊಳ್ಳಗಳ ಅಕ್ಕಪಕ್ಕದಲ್ಲಿ ಇವರ ನೆಲೆಗಳನ್ನು ಗುರುತಿಸಬಹುದು. ಪ್ರಾಚೀನ ಕಾಲದಲ್ಲಿ ಇವರ ಕಸುಬು ಬೇಟೆಗಾರಿಕೆ ಆದ್ದರಿಂದ ಬೇಟೆ ಯಾಡುವ ಉಪಕರಣಗಳೇ ಅಂದರೆ ಬಿಲ್ಲು, ಬಾಣ, ಬಲೆ, ಈಟಿ, ಭರ್ಜಿ, ಖಡ್ಗ, ಚೂರಿ ಮತ್ತು ನಾಯಿ ಇವರ ಪ್ರಮುಖ ಆಸ್ತಿಗಳಾಗಿದ್ದವು. ಮೊದಮೊದಲು ಈ ಸಲಕರಣೆಗಳನ್ನು ಒಟ್ಟಾಗಿ ಹೊಂದಿದ್ದು, ಕಾಲಕ್ರಮೇಣ ಅವುಗಳನ್ನು ವೈಯಕ್ತಿಕವಾಗಿ ಹೊಂದಲಾರಂಭಿಸಿದರು. ಈಗಲೂ ಬಲೆಯ ಮಾಲೀಕರಿಗೆ ಸಮುದಾಯದ ಬೇಟೆಯಾದ ಮೇಲೆ ಮಾಂಸವನ್ನು ಹಂಚುವಾಗ ಬಲೆಗೆ ಪ್ರತ್ಯೇಕವಾದ ಪಾಲನ್ನು ಕೊಡುವ ಪದ್ಧತಿಯಿದೆ. ಯಾರು ಹೆಚ್ಚಾಗಿ ಎಲ್ಲಾ ಆಯುಧಗಳನ್ನು ಹೊಂದಿದ್ದರೋ ಅಂತಹವರನ್ನು ನಾಯಕ ಅಥವಾ ಮುಖಂಡ ಎಂದು ಗುರುತಿಸಲಾಗಿತ್ತು. ಇದರಿಂದಾಗಿಯೋ ಏನೋ ಈ ಜನಾಂಗದವರನ್ನು ನಾಯಕ ರೆಂದು ಕರೆದಿರಲೂಬಹುದು.

ಈ ಜನಾಂಗವು ಬೇಟೆಯಿಂದ ತನ್ನ ದಿನನಿತ್ಯದ ಆಹಾರವನ್ನು ಪೂರೈಸಿಕೊಳ್ಳುತ್ತಿದ್ದು ದಲ್ಲದೇ ಬೇಟೆಯಿಂದ ಹೆಚ್ಚಾಗಿ ಸಿಕ್ಕಿದ ಪ್ರಾಣಿ, ಪಕ್ಷಿ, ಮೀನನ್ನು ಮಾರಿ ಅದಕ್ಕೆ ಪ್ರತಿಯಾಗಿ ದವಸ ಧಾನ್ಯಗಳನ್ನು ಪಡೆದುಕೊಳ್ಳುತ್ತಿದ್ದರು. ಏಕೆಂದರೆ ಪ್ರತಿ ದಿನ ಕೇವಲ ಮೀನು ಮಾಂಸವನ್ನು ತಿಂದು ಬದುಕುವುದು ದುಸ್ತರವಾಗಿತ್ತು. ದವಸ ಧಾನ್ಯದ ಅವಶ್ಯಕತೆಯಿದ್ದು ದರಿಂದ ಅವರು ಬೇಟೆಗಾರಿಕೆಯಿಂದ ಸಿಕ್ಕಿದ ಪ್ರಾಣಿ, ಪಕ್ಷಿ ಮತ್ತು ಮೀನುಗಳನ್ನು ಸಾಟಿ ಪದ್ಧತಿ ಮೂಲಕ ಪಡೆದುಕೊಳ್ಳುತ್ತಿದ್ದರು. ಈ ರೀತಿಯ ವಿನಿಮಯ ಪದ್ಧತಿಯನ್ನು ಇಂದಿಗೂ ಹಳ್ಳಿಗಳಲ್ಲಿ ಕಾಣಬಹುದು. ಉದಾ. ಕುಂಬಾರರು, ಗಾಣಿಗರು, ಚರ್ಮಕಾರರು, ಇತ್ಯಾದಿ.

ಅಂದಿನ ಬೇಡ ಬುಡಕಟ್ಟಿನ ಪ್ರಮುಖ ವೃತ್ತಿ ಬೇಟೆಗಾರಿಕೆ. ಬೇಟೆಗಾರಿಕೆಯ ಮುಂದು ವರಿದ ರೂಪವೇ ಮೀನುಗಾರಿಕೆ. ಈ ಜನಾಂಗದ ಪ್ರಮುಖ ಉತ್ಪಾದನಾ ಸಾಧನಗಳು ಪ್ರಾಚೀನ ಕಾಲದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಂತೆ ಕಂಡುಬರುತ್ತದೆ. ಬೇಟೆ ಮತ್ತು ಆಹಾರ ಸಂಗ್ರಹದ ಹಂತದಲ್ಲಿ (Hunting and gathering stage) ಅವನ ಕಲ್ಲಿನ ಆಯುಧಗಳು ದಿನನಿತ್ಯದ ಬೇಡಿಕೆಗಳನ್ನು ಪೂರೈಸುತ್ತಿದ್ದವು. ಪಶುಸಂಗೋಪನೆ ಹಂತದಲ್ಲಿ (pastoralism) ತನ್ನ ಪ್ರಮುಖ ಸಂಪತ್ತಾದ ದನಕರುಗಳನ್ನು ಕಾಡು ಪ್ರಾಣಿ ಗಳಿಂದ ಸಂರಕ್ಷಿಸಲು ಈ ಆಯುಧಗಳನ್ನು ಹೆಚ್ಚಾಗಿ ಬಳಸಿಕೊಂಡಂತೆ ಕಂಡುಬರುತ್ತದೆ. ಇದಲ್ಲದೆ ತಮ್ಮ ನೆಲ, ಜಲ, ದನಕರುಗಳನ್ನು ಶತ್ರುಗಳಿಂದ ಮತ್ತು ಕಾಡು ಪ್ರಾಣಿಗಳಿಂದ ಕಾಪಾಡಲು ಬೇಟೆಯಲ್ಲಿ ಪಳಗಿದವರನ್ನು ಹೆಚ್ಚಾಗಿ ನಿಯೋಗಿಸಿಕೊಂಡಿರುವುದು ಕಂಡು ಬರುತ್ತದೆ. ಮುಂದಿನ ಉತ್ಪಾದನಾ ಹಂತದಲ್ಲಿ (pastoral cum agrarian stage) ಬೇಟೆಯನ್ನು ಸಂಪೂರ್ಣವಾಗಿ ತ್ಯಜಿಸದೇ ಅದನ್ನು ಉಪಕಸುಬನ್ನಾಗಿ ಮುಂದುವರಿಸಿದ. ಹೀಗಾಗಿ ಈ ಬುಡುಕಟ್ಟಿನ ಜನರು ಕಾಲಕ್ರಮೇಣ ಕಾಡು, ಬೆಟ್ಟ ಗುಡ್ಡ ಹಳ್ಳ-ಕೊಳ್ಳದ ಪ್ರದೇಶಗಳನ್ನು ಬಿಟ್ಟು ಕ್ರಮೇಣವಾಗಿ ಬಯಲು ಪ್ರದೇಶಕ್ಕೆ ಸ್ಥಳಾಂತರಗೊಳ್ಳತೊಡಗಿದರು. ನಾಗರೀಕ ಸಮಾಜದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ನಾಗರೀಕತೆಯ ಲಕ್ಷಣ ಗಳನ್ನು/ ಅಂಶಗಳನ್ನು ಮೈಗೂಡಿಸಿಕೊಳ್ಳತೊಡಗಿದರು. ಈ ಬದಲಾವಣೆಗಳಿಂದಾಗಿ ಇವರು ಇಂದು, ಕಡಲ ತೀರದಲ್ಲಿರುವ ಮೀನುಗಾರರನ್ನು ಬಿಟ್ಟರೆ, ತನ್ನ ಮೂಲವೃತ್ತಿಯಾದ ಬೇಟೆಯನ್ನು ಬಿಟ್ಟು ಕೃಷಿ, ಪಶುಪಾಲನೆ ಮತ್ತಿತರ ಕಸುಬುಗಳನ್ನು ಆಧರಿಸಿ ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ.

ಬೇಡರು ಮತ್ತು ಅವರ ಕಸುಬಿನ ಬಗ್ಗೆ ಅಂದಿನ ಸಮಾಜದಲ್ಲಿದ್ದ ದೃಷ್ಟಿಕೋನದ ಬಗ್ಗೆ ಅಂದಿನ ಚಿಂತಕರು ಬೆಳಕು ಚೆಲ್ಲಿದ್ದಾರೆ. ಪಿಸೂನನ ಪ್ರಕಾರ ಮನುಷ್ಯ ಅತಿ ಆಸೆಯಿಂದ ನಾಲ್ಕು ದುರ್ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ. ಅವುಗಳೆಂದರೆ ಬೇಟೆಗಾರಿಕೆ, ಜೂಜು, ಹೆಣ್ಣಿನ ಸಹವಾಸ ಮತ್ತು ಕುಡಿತ. ಇವುಗಳಲ್ಲಿ ಜೂಜಾಟ ಮತ್ತು ಬೇಟೆಯು ಅತ್ಯಂತ ಪಾಪಕರವಾದದ್ದು. ಏಕೆಂದರೆ ಬೇಟೆಯಿಂದಾಗಿ ಇಡೀ ಸಮಾಜಕ್ಕೆ ಶತ್ರುಗಳಿಂದ, ಕಳ್ಳಕಾಕ ರಿಂದ, ಕಾಡಾನೆಗಳಿಂದ, ಕಾಳ್ಗಿಚ್ಚಿನಿಂದ, ಭಯ, ಹಸಿವು, ಬಾಯಾರಿಕೆ ಮತ್ತು ಜೀವಹಾನಿ ಆಗುವ ಸಂಭವವಿದೆ.[15] ಆದರೆ ಕೌಟಿಲ್ಯನ ಪ್ರಕಾರ ಬೇಟೆಯಾಡುವುದರಿಂದ ಮನುಷ್ಯನ ಹೊಟ್ಟೆ, ಕೊಬ್ಬು, ಬೆವರು ಹೋಗಿ ಮನಸ್ಸನ್ನು ಕೇಂದ್ರೀಕರಿಸುವ ಶಕ್ತಿಯನ್ನು ಮತ್ತು ಕಣ್ಣಿನ ದೃಷ್ಟಿಯನ್ನು ಹೆಚ್ಚಿಸುತ್ತದೆ. ಇದು ಆರೋಗ್ಯಕ್ಕೆ ಉತ್ತಮವಾದದ್ದು. ಆದರೆ ಜೂಜಾಟದಿಂದ ವ್ಯಕ್ತಿಯ ಆರೋಗ್ಯ ಹಾಳಾಗುತ್ತದೆ.[16] ಇದಲ್ಲದೆ ಅರ್ಥಶಾಸ್ತ್ರವು ಮುಂದು ವರಿದು ಶತ್ರುವಿನ ಸೈನ್ಯವು ಗುಡ್ಡಗಾಡು ಪ್ರದೇಶದಲ್ಲಿ

ಚಲಿಸುವಾಗ ಮತ್ತು ಶತ್ರುವಿನ ಸೈನ್ಯವು ಬಳಸಬೇಕೆಂದು ತಿಳಿಸುತ್ತದೆ. ಏಕೆಂದರೆ ಕಾಡುಜನರ ಸೈನ್ಯವು ಲೂಠಿ ಮಾಡುವುದರಲ್ಲಿ ಬಹಳ ನಿಪುಣತೆಯನ್ನು ಹೊಂದಿರುತ್ತದೆ.[17]

ಬಿಲ್ಲರು[18] ಮೂಲತಃ ಆದಿ-ಆರ್ಯ ಬುಡಕಟ್ಟು ಆಗಿದ್ದು, ಅರೆ ಬುಡಕಟ್ಟು ರೈತರಾಗಿ ಒಣ ಬಂಜರು ಭೂಮಿಯನ್ನು ಉಳುಮೆ ಮಾಡುತ್ತಿದ್ದರು. ಆದರೂ ಅವರು ಒಳ್ಳೆಯ ಬಿಲ್ಲುಗಾರರು, ಬೇಟೆಗಾರರು, ಮೀನುಗಾರರು ಮತ್ತು ಆಹಾರ ಸಂಗ್ರಹಕರಾಗಿದ್ದರು. ಇವರ ವಿಶೇಷವೆಂದರೆ ಸಮಯ ಬಂದಾಗ ಹೋರಾಡುತ್ತಿದ್ದರು. ಆದರೆ ಅವರು ಸಂಘಟಿತ ಯೋಧರಾಗಿರಲಿಲ್ಲ. ಇವರಲ್ಲಿ ಕೆಲವರು ಕ್ರಿ.ಪೂ. ಒಂದನೆ ಶತಮಾನದಲ್ಲಿ ಮಾಳವದ ಸಮೀಪ ದೊರೆಗಳಾಗಿದ್ದರು. ಆದರೆ ಇವರ ಆಡಳಿತ ಸ್ವಲ್ಪ ಕಾಲದಲ್ಲಿಯೇ ಕಣ್ಮರೆ ಯಾಯಿತು. ಅದೇರೀತಿ ಗೋಂಡ್ ಬುಡಕಟ್ಟಿನವರು ಸಹ ಊಳಿಗಮಾನ್ಯ ಪದ್ಧತಿಯ ಕಾಲದಲ್ಲಿ ರಾಜರಾದರು.[19] ಇದರಿಂದ ತಿಳಿದು ಬರುವುದೇನೆಂದರೆ, ಪ್ರಾಚೀನ ಸಮುದಾಯ/ ಬುಡಕಟ್ಟು ಪ್ರಬಲವಾದ ಸಮಾಜಗಳ ಸಂಪರ್ಕದಿಂದಾಗಿ ಪರಿಣಾಮಕಾರಿಯಾದ ಮಾರ್ಪಾಟನ್ನು ಹೊಂದಿದವು.

ಪ್ರಾಚೀನ ಬುಡಕಟ್ಟುಗಳ ಸಮಾಜದಲ್ಲಿ ಹೆಂಗಸರು ಕೃಷಿಯನ್ನು ಮಾಡಿದರೆ ಗಂಡಸರು ಬೇಟೆಯಾಡುತ್ತಿದ್ದರು. ಈ ಸಮಯದಲ್ಲಿ ಮೀನುಗಾರರು ವಿಶೇಷ ಜಾತಿಯಾಗಿ ಹೊರ ಹೊಮ್ಮಿದರು. ಹಲವು ಬುಡಕಟ್ಟುಗಳು ಮತ್ತು ರೈತರು ಮೀನನ್ನು ಬಲೆಯಿಲ್ಲದೇ ಬರೀ ಕೈಯಲ್ಲಿ ಹಿಡಿಯುತ್ತಿದ್ದರು.[20] ಬೇಟೆಯಿಂದ ಹೆಚ್ಚು ಜನರಿಗೆ ಆಹಾರ ಒದಗಿಸಲಾಗು ತ್ತಿರಲಿಲ್ಲವಾದ್ದರಿಂದ ಕೃಷಿಗೆ ಹೆಚ್ಚು ಒತ್ತುಕೊಡಲಾಯಿತು. ಸಿಂಧೂ ನದಿ ಕೊಳ್ಳದಲ್ಲಿ ಪ್ರಪ್ರಥಮ ಬಾರಿಗೆ ಹೆಚ್ಚಿನ ಪ್ರಮಾಣದ ಆಹಾರ ಧಾನ್ಯಗಳನ್ನು ಬೆಳೆಯಲಾಯಿತು. ಇದರ ನಂತರ ಗಂಗಾ ನದಿಯ ಬಯಲಿನಲ್ಲಿ ಹೆಚ್ಚು ಪ್ರಮಾಣದ ಆಹಾರ ಪದಾರ್ಥಗಳನ್ನು ಬೆಳೆಯಲಾಯಿತು. ಇದರಿಂದಾಗಿ ಇಲ್ಲಿ ಹೊಸ ಸಾಮಾಜಿಕ ಗುಂಪುಗಳು ಅಸ್ತಿತ್ವಕ್ಕೆ ಬಂದವು. ಇಂತಹ ಬುಡಕಟ್ಟುಗಳಿಗೆ ಬ್ರಾಹ್ಮಣರು ಪುರಾಣಗಳ ಮುಖಾಂತರ ಕೆಲವು ಸಾಮಾಜಿಕ ಸ್ಥಾನಮಾನಗಳನ್ನು ನೀಡಲಾರಂಭಿಸಿದರು. ಇದರಿಂದಾಗಿ ಬುಡಕಟ್ಟಿನ ಮುಖ್ಯಸ್ಥರು ರಾಜ ರಾಗಿ, ಅಧಿಕಾರಿಗಳಾಗಿ ಬುಡಕಟ್ಟು ಜನಾಂಗವನ್ನು ಆಳಲಾರಂಭಿಸಿದರು.[21]

ಪ್ರಾಚೀನ ಭಾರತದ ಸಮಾಜವು ಚತುರ್ವಣಗಳಿಂದ ಕೂಡಿದ್ದು, ಅದರಲ್ಲಿ ಕೊನೆಯ ದಾದ ಶೂದ್ರ ವರ್ಗವು ಹಲವು ವೃತ್ತಿ ಆಧಾರಿತ ಹಾಗೂ ಬುಡಕಟ್ಟು ಜನಾಂಗಗಳನ್ನು ಹೊಂದಿತ್ತು. ಅವುಗಳೆಂದರೆ ರಥಕಾರ, ಬಡಗಿ, ಕುಂಬಾರ, ಕಮ್ಮಾರ, ಅಕ್ಕಸಾಲಿಗ, ಗೊಲ್ಲ, ಕುರುಬರು, ರೈತರು, ಮೀನುಗಾರರು ಮತ್ತು ಬೇಟೆಗಾರರು. ಇದಲ್ಲದೆ ನಿಶಾದ, ಕಿರಾತ, ಪರ್ಣಿಕ ಮತ್ತಿತರರು ಇದ್ದರು.[22] ಗುಪ್ತರ ಕಾಲದಲ್ಲಿ ಗುಡ್ಡಗಾಡು ಬುಡಕಟ್ಟುಗಳಾದ ಕಿರಾತರು, ಶಬರರು ಮತ್ತು ಪುಲಿಂದರು ಮ್ಲೇಚ್ಚರೊಡನೆ ಶೂದ್ರರಲ್ಲಿ ಸೇರಿಕೊಂಡರು. ಮಾರ್ಕಾಂಡೇಯ ಪುರಾಣದ ಪ್ರಕಾರ ಈ ಕಾಲದಲ್ಲಿ ಚಾಂಡಾಲರನ್ನು ಮಾತ್ರ ಅಸ್ಪೃಶ್ಯರೆಂದು ಪರಿಗಣಿಸಲಾಗಿತ್ತು. ಆದರೆ ಚರ್ಮ ಹದ ಮಾಡುವವರನ್ನು ಅಸ್ಪೃಶ್ಯರೆಂದು ಪರಿಗಣಿಸಿರಲಿಲ್ಲ. ಚಾಂಡಾಲರನ್ನು ಬೀದಿ ಗುಡಿಸುವುದಕ್ಕೆ, ಸ್ಮಶಾನದಲ್ಲಿ ಕೆಲಸ ಮಾಡುವುದಕ್ಕೆ, ಕೈದಿಗಳನ್ನು ಹತ್ಯೆ ಮಾಡುವುದಕ್ಕೆ ರಾತ್ರಿಯಲ್ಲಿ ಕಳ್ಳಕಾಕರನ್ನು ಕಾಯುವುದಕ್ಕೆ ನಿಯೋಜಿಸಲಾಗುತ್ತಿತ್ತು.[23] ಕೆಳವರ್ಗದ ಶೂದ್ರರ ಮುಖ್ಯ ಕಸುಬು ಬೇಟೆಗಾರಿಕೆಯಾಗಿತ್ತು. ಅಮರಕೋಶವು ಕೇವಲ ಬೇಟೆಗಾರರನ್ನು ಶೂದ್ರರಾಗಿ ಪರಿಗಣಿಸದೇ ಅವರು ಬಳಸುವ ಆಯುಧಗಳಾದ ಬಲೆ, ಹಗ್ಗ, ಹಕ್ಕಿಯ ಗೂಡು ಇತ್ಯಾದಿಗಳನ್ನು ಅಪವಿತ್ರವೆಂದು ತಿಳಿಸಿದೆ.[24]

ಫಾಹಿಯಾನನ ಪ್ರಕಾರ ಚಾಂಡಾಲರೆಂದರೆ ಮೀನುಗಾರರು ಮತ್ತು ಬೇಟೆಗಾರರು. ಇವರು ಮೀನು ಮತ್ತು ಮಾಂಸವನ್ನು ಮಾರುತ್ತಿದ್ದರು ಹಾಗೂ ಮತ್ತುಬರುವ ಪಾನೀಯ ಗಳನ್ನು ಕುಡಿಯುತ್ತಿದ್ದರು. ಮೂಲತಃ ಬೇಟೆಗಾರರಾದ್ದರಿಂದ ಇವರು ಸ್ವಾಭಾವಿಕವಾಗಿಯೇ ಮಾಂಸಹಾರಿಗಳಾಗಿದ್ದರು.[25] ಆದರೆ ಕಾಳಿದಾಸನ ಪ್ರಕಾರ ಚಾಂಡಾಲರು, ಬೇಟೆಗಾರರು ಮತ್ತು ಮೀನುಗಾರರಿಗಿಂತ ಭಿನ್ನವಾದವರು. ಆದರೆ ಅವರೆಲ್ಲಾ ಒಂದೇ ವಂಶಕ್ಕೆ ಸೇರಿದವರು. ಆದ್ದರಿಂದ ಈ ಕಾಲದಲ್ಲಿ ಚಾಂಡಾಲರು ಪ್ರಮುಖವಾಗಿ ಬೇಟೆಗಾರರಾಗಿದ್ದಂತೆ ಕಂಡು ಬರುವುದಿಲ್ಲ. ಆದರೆ ಅವರ ಉಪಕಸುಬು ಬೇಟೆಗಾರಿಕೆಯಾಗಿತ್ತು.[26] ಬೃಹತ್ ಕಲ್ಪ ಭಾಷ್ಯದ (ಜೈನ ಕೃತಿ) ಪ್ರಕಾರ ಮೇಡರು

ಪ್ರಾಣಿಗಳನ್ನು ಹಗಲು-ರಾತ್ರಿ ಬಾಣ ಮತ್ತು ಬಿಲ್ಲುಗಳಿಂದ ಬೇಟೆಯಾಡುತ್ತಿದ್ದರು.[27] ಮನುವಿನ ಪ್ರಕಾರ ೧೨ ಕ್ಷತ್ರಿಯ ಜಾತಿಗಳು ಬ್ರಾಹ್ಮಣರ ಪದ್ಧತಿಗಳನ್ನು ಬಿಟ್ಟ ಪರಿಣಾಮವಾಗಿ ಶೂದ್ರರಾಗಿ ಮಾರ್ಪಾಟಾದವು. ಅವು ಗಳಲ್ಲಿ ಒಂದು ಕಿರಾತ. ಹಳೆಯ ಬುಡಕಟ್ಟು ಜನಾಂಗಗಳು ತಮ್ಮ ವೃತ್ತಿಯಲ್ಲಿ ಸುಧಾರಣೆ ಮತ್ತು ಪ್ರಾವೀಣ್ಯತೆ ಪಡೆದುಕೊಂಡಂತೆ ಜಾತಿಯ ರೂಪಪಡೆಯಲಾರಂಭಿಸಿದವು. ಮನುವಿನ ೧೮ ಮಿಶ್ರ ಜಾತಿಗಳಲ್ಲಿ ಚಾಂಡಾಲರು, ಮೇಡರು, ನಿಶಾದರು ಸೇರಿಕೊಂಡಿದ್ದಾರೆ.[28] ಪ್ರಾಚೀನ ಭಾರತದ ಬುಡಕಟ್ಟು ಜನಾಂಗಗಳಲ್ಲಿ ಕಿರಾತರು ಪ್ರಮುಖರು. ಇವರನ್ನು ವೇದಗಳಲ್ಲಿ, ಮಹಾಕಾವ್ಯಗಳಲ್ಲಿ ಮತ್ತು ನಂತರದ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಕಿರಾತರು ನೇಪಾಲವನ್ನು ಗೆದ್ದು ಆಕ್ರಮಿಸಿಕೊಂಡಿದ್ದರು. ಅವರ ಪೈಕಿ ಸುಮಾರು ೨೯ ದೊರೆಗಳು ನೇಪಾಳವನ್ನು ಆಳಿದರು.[29]

ಬೇಟೆಯ ದೃಶ್ಯವನ್ನು ವೀರಗಲ್ಲುಗಳು ಸಹ ಸುಂದರವಾಗಿ ಚಿತ್ರಿಸಿವೆ. ಇಲ್ಲಿಯೂ ಸಹ ವಿವಿಧ ರೀತಿಯ ಆಯುಧಗಳಿಂದ ಕಾಡು ಪ್ರಾಣಿಗಳಾದ ಹುಲಿ, ಹಂದಿಗಳನ್ನು ಬೇಟೆ ಯಾಡುವ ದೃಶ್ಯವನ್ನು ಕಾಣಬಹುದು. ನಾಯಿಯು ಸಹ ಅತ್ಯಂತ ಪ್ರಮುಖ ಪಾತ್ರವನ್ನು ಬೇಟೆಯಲ್ಲಿ ಮಾಡಿತ್ತು. ಶಾಸನಗಳು ಬೇಟೆಯ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತವೆ. ಅವುಗಳಲ್ಲಿ ಪ್ರಮುಖವಾದವು ಆತಕೂರು ಮತ್ತು ಮುಳಬಾಗಿಲಿನ ಶಾಸನ. ಮುಳಬಾಗಿಲಿನ ಶಾಸನದ ಪ್ರಕಾರ ಎರಡು ನಾಯಿಗಳಾದ ಲೋಗ ಮತ್ತು ದಳಗ ತಮ್ಮ ಯಜಮಾನನೊಡನೆ ಹಂದಿ ಬೇಟೆಗೆ ಹೋದಾಗ ಬೇಟೆಯನಂತರ ಆ ಎರಡು ನಾಯಿಗಳು ಸತ್ತು ಹೋದವು. ಈ ಶಾಸನದ ಪ್ರಕಾರ ಲೋಗ ೭೫ ಹಂದಿಗಳನ್ನು ಮತ್ತು ದಳಗ ೨೬ ಹಂದಿಗಳನ್ನು ಬೇಟೆಯಾಡಿ ದ್ದವು.[30] ಇಲ್ಲಿಯ ಮತ್ತೊಂದು ಶಾಸನದ ಪ್ರಕಾರ ಕಂಬಲದಗ ಎಂಬುವವನು ಹುಲಿಯ ಬೇಟೆಗೆ ತನ್ನ ನಾಯಿಯೊಡನೆ ಹೋದಾಗ ಇಬ್ಬರು ಸತ್ತು ಹೋದದ್ದನ್ನು ತಿಳಿಸುತ್ತದೆ.[31] ಬೇಟೆಯ ಮುಖ್ಯ ಆಯುಧಗಳು ಖಡ್ಗ, ಕತ್ತಿ, ಈಟಿ, ಭರ್ಜಿ, ಗುರಾಣಿ ಇತ್ಯಾದಿ. ಇಲ್ಲಿ ಸತ್ತವರು ಬೇಡರೆ ಅಥವಾ ಬೇರೆಯವರೆ ಎಂಬುದು ತಿಳಿದುಬರುವುದಿಲ್ಲ.

ಕ್ರಿ.ಶ. ೧೦೧೨-ಳಳರ ವೀರಗಲ್ಲಿನ ಶಾಸನವು ಕನ್ನಾಲ ಗ್ರಾಮದ ಪಲ್ಲವಗಾವುಂಡ ಎಂಬ ಬೇಟೆಗಾರನ ಮಾದಕೇಸರಿ ಎಂಬ ಹೆಸರಿನ ನಾಯಿ ಹಂದಿಯೊಡನೆ ಹೋರಾಡಿ ಸತ್ತ ವಿಷಯವನ್ನು ತಿಳಿಸುತ್ತದೆ.[32] ಮರಸಣಿಗೆಯ ವೀರಗಲ್ಲಿನಲ್ಲಿ ಮೊದಲನೆಯ ಹಂತದಲ್ಲಿ ಬಲಭಾಗಕ್ಕೆ ಇಬ್ಬರು ಪುರುಷರು ಬಿಲ್ಲುಗಳನ್ನು ಹಿಡಿದು ಜಿಂಕೆ ಮತ್ತು ಹಂದಿಯ ಬೇಟೆ ಯಾಡುತ್ತಿದ್ದಾರೆ. ಬೇಟೆಗಾರರ ಎರಡು ನಾಯಿಗಳು ಹಂದಿಯ ಮುಂದೆ ಮತ್ತು ಹಿಂದಿನಿಂದ ಆಕ್ರಮಣ ಮಾಡಿವೆ. ಎರಡನೆಯ ಹಂತದಲ್ಲಿ ಇಬ್ಬರು ವ್ಯಕ್ತಿಗಳು ಕುದುರೆಯ ಮೇಲೆ ಕುಳಿತಿದ್ದಾರೆ. ಬಲಭಾಗದಲ್ಲಿರುವ ಯೋಧ ಬಿಲ್ಲನ್ನು ಮಾತ್ರ ಹಿಡಿದಿದ್ದು ಬಾಣವನ್ನು ಕೈಯಲ್ಲಿ ಹಿಡಿದಿದ್ದಾನೆ. ಎಡ ಭಾಗದಲ್ಲಿರುವ ಯೋಧನ ಬಳಿ ಬಿಲ್ಲು ಬಾಣದ ಜೊತೆಗೆ ಕಠಾರಿಯೂ ಇದೆ.[33] ಕೈದಾಳದ ಹುಲಿಬೇಟೆಯ ೧೧೫೧ರ ವೀರಗಲ್ಲು ಶಾಸನವು ಗೂಳಿ ಬಾಚನ ಬಂಟ ಚಂದನು ಊರಿನ ಜನ ಜಾನುವಾರುಗಳಿಗೆ ತೊಂದರೆ ಕೊಡುತ್ತಿದ್ದ ಹುಲಿ ಯನ್ನು ಇರಿದು ಸಾಯಿಸಿದ್ದನ್ನು ಇಳಿಸುತ್ತದೆ.[34] ಶಿಲ್ಪಗಳಲ್ಲಿ ಸಾಮಾನ್ಯವಾಗಿ ಬೇಟೆಯ ದೃಶ್ಯಗಳಾದ ಕಿರಾತಾರ್ಜುನೀಯ, ಬೇಡರ ಕಣ್ಣಪ್ಪ, ಹಂದಿ ಬೇಟೆ, ಚಿಗರೆ ಬೇಟೆ, ಬೇಟೆಯ ಆಯುಧಗಳು, ಬೇಟೆಗಾರನ ಹೆಂಡತಿ (ಬೇಡತಿ) ಎಡಗೈಯಲ್ಲಿ ಉದ್ದವಾದ ಕೋಲು ಅಥವಾ ಭರ್ಜಿಯಂತಹ ಆಯುಧವನ್ನು ಹಿಡಿದಿರುವ ದೃಶ್ಯಗಳಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ.[35]

ದನಕರುಗಳ ಮತ್ತು ಹೆಂಗಸರ ಲೂಠಿಗಾರರಾಗಿ ಬೇಡರ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕ್ರಿ.ಶ. ೭ನೇ ಶತಮಾನದಿಂದ ಶಾಸನಗಳಲ್ಲಿ ಕಾಣಬಹುದು. ಕ್ರಿ.ಶ. ೭೦೦ ರ ಗದ್ದೆಮನೆ ಶಾಸನವು[36] ಬೇಡರ ವೀರವೃತ್ತಿಯನ್ನು ಮತ್ತು ಅವರ ಕಾಡಿನಿಂದ ನಾಡಿಗೆ ಬಂದಿದ್ದನ್ನು ಕೆಳಗಿನಂತೆ ತಿಳಿಸುತ್ತದೆ. 'ಸ್ವಸ್ತಿ ಶ್ರೀ ಶೀಲ ಆದೀತ್ಯನ್ ದಿಶಾಮನ್ ಭಾಗವಾನ್ ಅಗ್ಗಳಕಣ್ಣನ್ ಪೇರಾಳ್ಪೆವರೆ ಪೆಟ್ಟಣಿಸತ್ಯಂಕರ್ ಅಟ್ಟಳ್ವಭಟರ್ ಬೆದರೆ ಮಹೇಂದ್ರನ್ ಬೇಡರಾಯರ ಮಲಪರ್ ಕಾಳೆಗದುಲೆ ವಿರಿದು ಸ್ವರ್ಗಾಲಕ್ಕೇರಿದನ್'. ಈ ಶಾಸನದಿಂದ ತಿಳಿದುಬರುವುದೇನೆಂದರೆ, ಏಳನೆ ಶತಮಾನದಲ್ಲಿ ಬೇಡರನ್ನು ಮಲಪರು ಎಂದು ಕರೆಯಲಾಗಿದ್ದು, ಇವರು ಆ ಕಾಲಕ್ಕೆ ಅಳರಸರ ಸೇವೆಯಲ್ಲಿ, ಕಾಳಗ/ಯುದ್ಧಗಳಲ್ಲಿ ಪಾಲ್ಗೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದರು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೋಕಿನ ಕಂಬದಹಳ್ಳಿಯ ಕ್ರಿ.ಶ. ೯೭೭ರ ಶಾಸನವು[37] ಬೇಡರ ಪಡೆಯು ಬಿಂಡಿಗನವಿಲೆ ಯನ್ನು ದಾಳಿ ಮಾಡಿ ಅಲ್ಲಿಯ ಹೆಂಗಸರನ್ನು

ಎತ್ತಿಕೊಂಡು ಹೋಗುವಾಗ ಗವರೆಸೆಟ್ಟಿಯೆಂಬು ವವನು ಇವರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೯೮೫ರ ಹಾಸನ ಜಿಲ್ಲೆಯ ಆಲೂರು ತಾಲ್ಲೋಕಿನ ನಲ್ಲೂರು ಗ್ರಾಮದ ಶಾಸನವು[38] ಬೇಡರ ಬೀರಮ್ಮನು ತನ್ನ ಕುದುರೆ ಪಡೆಯೊಂದಿಗೆ ನಲ್ಲೂರನ್ನು ದಾಳಿ ಮಾಡಿದಾಗ ಗುಂಡಯ್ಯನು ಸತ್ತಿದ್ದನ್ನು ತಿಳಿಸು ತ್ತದೆ. ಕ್ರಿ.ಶ. ೧೧೪೦ರ ಹಾಸನ ಜಿಲ್ಲೆ ಬೇಲೊರು ತಾಲ್ಲೋಕಿನ ಹಳೇಬೀಡು ಶಾಸನವು[39] ಬೇಟೆಯ ತಿಪ್ಪೆಯನಾಯಕನನ್ನು ಉಲ್ಲೇಖಿಸುತ್ತದೆ. ಇದೇ ತಾಲ್ಲೋಕಿನ ಮತ್ತೊಂದು ಹೊಯ್ಸಳ ದೊರೆ ಬಿಟ್ಟಿದೇವನ (ವಿಷ್ಣುವರ್ಧನ) ಕಾಲದ ಕೊನೇರಿಲು ಶಾಸನವು[40] ಕೊನೇರಿಲದ ಮಸಣಗೌಡನ ಅಳಿಯ ಬೇಡಗೌಡನು ತುರುಗಾಳಗದಲ್ಲಿ ಹೋರಾಡಿ ತುರುಗಳನ್ನು ಮರುಪಡೆದು ಸತ್ತಿದ್ದನ್ನು ತಿಳಿಸುತ್ತದೆ. ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೋಕಿನ ಮುದಿಗೆರೆ ಗ್ರಾಮದ ಕ್ರಿ.ಶ. ೧೨೦೯ರ ಶಾಸನವು[41] ಬೇಡರು ಕಲ್ಲಿಕೆರೆಯ ತುರುಗಳನ್ನು ಮತ್ತು ಹೆಂಗಸರನ್ನು ಲೂಟಿ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೨೬-೨೭ರ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೋಕಿನ ಬ್ಯಾಡರಹಳ್ಳಿ ಶಾಸನವು[42] ಅಲ್ಲಿಯ ಬಮ್ಮಾರನು ಬೋಕಿಮಯ್ಯ ಎಂಬ ಶತ್ರುವನ್ನು ಇರಿದು ತುರುಗಳನ್ನು ಗೆದ್ದು ಕೊಂಡು ಹೋದದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೨೮೭ರ ಚಿಕ್ಕಮಗಳೂರು ಜಿಲ್ಲೆ ಮತ್ತು ಅದೇ ತಾಲೋಕಿನ ಅರಿಶಿನಗುಪ್ಪೆ ಶಾಸನವು[43] ಬೇಡರು ಬೋಕಿಯಣ್ಣನ ತುರುಗಳನ್ನು ಒಯ್ಯುವಾಗ ಅವನು ಬೇಡರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ.

ಈ ಮೇಲಿನ ಶಾಸನಗಳಿಂದ ಮುಖ್ಯವಾಗಿ ತಿಳಿದುಬರುವುದೇನೆಂದರೆ, ಕ್ರಿ.ಶ. ೮ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದವರೆಗೆ (ಬಾದಾಮಿ ಚಾಲುಕ್ಯರ ಕಾಲದಿಂದ ಹೊಯ್ಸಳರ ಕಾಲದವರೆಗೆ) ಈಗಿನ ಕರ್ನಾಟಕದುದ್ದಕ್ಕೂ ಬೇಡರ ವೃತ್ತಿ ಬೇಟೆಯಾಗಿತ್ತು. ಇವರು ತಮ್ಮ ಬೇಟೆ ವೃತ್ತಿಯಲ್ಲಿ ಆಯುಧಗಳನ್ನು ಉಪಯೋಗಿಸುವುದರಲ್ಲಿ ಪರಿಣತರಾಗಿ ದ್ದರಿಂದ ಮತ್ತು ದೈಹಿಕ ಸಾಮರ್ಥ್ಯವನ್ನು ಹೊಂದಿದ್ದರಿಂದ ಆಳರಸರು ಇವರನ್ನು ತಮ್ಮ ರಾಜ್ಯವನ್ನು ಶತ್ರುಗಳಿಂದ ಕಾಪಾಡಲು ಹಾಗೂ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಶತ್ರುವಿನ ನೆಲ, ಜಲ, ಹೆಣ್ಣು ಮತ್ತು ದನಕರುಗಳನ್ನು ವಶಪಡಿಸಿಕೊಳ್ಳಲು ನಿಯೋಜಿಸಿ ಕೊಂಡಿದ್ದರು. ನಂತರ ಅವರ ಧೈರ್ಯ ಮತ್ತು ಸಾಹಸ ಪ್ರವೃತ್ತಿಯನ್ನು ಗಮನಿಸಿ ಇವರನ್ನು ಕೂಲಿಯ ಸಿಪಾಯಿಗಳಾಗಿ (Mercenaries) ನಿಯೋಜಿಸಿಕೊಂಡು ಅವರಿಗೆ ರಾಯ, ವೀರ (ಬೀರ), ಗಾವುಂಡ (ಗೌಡ), ಮತ್ತು ನಾಯಕ ಎಂಬ ಬಿರುದುಗಳನ್ನು ನೀಡಿ ಉತ್ತೇಜನ ನೀಡಿದರು.

---

[1] ಎ. ಅಪ್ಪಾದೊರೈಯವರು ದಕ್ಷಿಣ ಭಾರತದ ಆರ್ಥಿಕ ವ್ಯವಸ್ಥೆಯ ಬಗ್ಗೆ ೧೯೩೬ರಲ್ಲಿ ಮೊತ್ತಮೊದಲ ಬಾರಿಗೆ ಸಮಗ್ರ ಅಧ್ಯಯನ ನಡೆಸಿದ್ದಾರೆ. ಇವರು ತಮ್ಮ ಕೃತಿಯಲ್ಲಿ ವಿವಿಧ ಉತ್ಪಾದಕ ವರ್ಗಗಳು ಹಾಗೂ ಅವರ ಸಂಘಟನೆಗಳ ಚಟುವಟಿಕೆಗಳನ್ನು ಚರ್ಚಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೊ. ಎಕಾನಮಿಕ್ ಕಂಡೀಷನ್ಸ್ ಇನ್ ಸದರನ್ ಇಂಡಿಯಾ, ೨ ಸಂಪುಟಗಳು, ಮರುಮುದ್ರಣ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್, ೧೯೯೦.

[2] ಇಪ್ಪತ್ತನೇ ಶತಮಾನದ ಆದಿ ಭಾಗದಲ್ಲಿ ಅಂದರೆ ೧೯೧೧ರಲ್ಲಿ ಸಿ. ಹಯವದನ ರಾವ್‌ರ ಅರ್ಲಿ ಸೌಥ್ ಇಂಡಿಯನ್ ಫೈನಾನ್ಸ್ ಅಂಡರ್ ವಿಜಯನಗರ್ ಕಿಂಗ್ಸ್, ಇನ್ ಇಂಡಿಯನ್ ಆಂಟಿಕ್ವೇರಿ, ಬಾಂಬೆ, ಪುಟಗಳು ೨೬೨-೭೨, ಲೇಖನದೊಂದಿಗೆ ಕರ್ನಾಟಕದ ಆರ್ಥಿಕ ವ್ಯವಸ್ಥೆಯನ್ನು ಅಧ್ಯಯನ ಮಾಡಲು ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ: ಚಂದ್ರಶೇಖರ ಶಾಸ್ತ್ರಿ ಎಸ್. 'ಎಕನಾಮಿಕ್ ಕಂಡೀಷನ್ಸ್ ಅಂಡರ್ ದಿ ಹೊಯ್ಸಳಾಸ್', ಇನ್ ಹಾಫ್ ಯಿಯರ್ಲಿ ಜರ್ನಲ್ ಆಫ್ ಮೈಸೂರು ಯೂನಿವರ್ಸಿಟಿ (ಆರ್ಟ್ಸ್), ೨ (೨), ಮೈಸೂರು, ೧೯೨೮, ಪುಟಗಳು. ೧೯೬-೨೨೩, ಜೆ.ಎನ್. ಚೌಧರಿ, 'ಸೋಷಿಯಲ್ ಅಂಡ್ ಎಕನಾಮಿಕ್ ಕಂಡಿಷನ್ಸ್ ಆಫ್ ದಿ ಪೀಪಲ್ ಅಂಡರ್ ದಿ ಬಹಮನಿ ಸುಲ್ತನೇಟ್, ಇನ್ ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ, ೪, ಕಲ್ಕತ್ತಾ, ೧೯೨೮, ಪುಟಗಳು. ೭೨೦-೨೪, ಸಾಲೆತೂರ್ ಆರ್.ಎನ್., 'ದಿ ಕೆಳದಿ ರೆವಿನ್ಯೂ ಸಿಸ್ಟಮ್', ಇನ್ ಜರ್ನಲ್ ಆಫ್ ಇಂಡಿಯನ್ ಹಿಸ್ಟ್ರಿ, ೧೮ (೧), ಟ್ರವೇಂಡ್ರಮ್, ೧೯೩೯, ಪುಟಗಳು. ೭೦-೮೮, ಮತ್ತು ಕುರ್ಮಾರ್ಕರ್ ಎ.ಪಿ., 'ಎಕನಾಮಿಕ ಕಂಡೀಷನ್ಸ್ ಇನ್ ಮೆಡಿವಲ್ ಕರ್ನಾಟಕ', ಇನ್ ಕ್ವಾರ್ಟಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಸಂ. ೩೯ (೩), ಬೆಂಗಳೂರು, ೧೯೪೯, ಪುಟಗಳು. ೧೫೮-೧೭೧.

[3] ಅ. ಈ ಲೇಖನವು ಪ್ರಾಚೀನ ಕಾಲದ ಬೇಡ ಬುಡಕಟ್ಟಿನ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿ ರುವುದರಿಂದ ಎಲ್ಲಾ ರೀತಿಯ ಬೇಟೆಗಾರರನ್ನು ಅಂದರೆ ಕಾಡಿನಲ್ಲಿ, ಬೆಟ್ಟಗುಡ್ಡಗಳಲ್ಲಿ ಕಾಡುಪ್ರಾಣಿಗಳನ್ನು ಮತ್ತು ನೀರಿನಲ್ಲಿ ಮೀನನ್ನು ಬೇಟೆಯಾಡುವವರನ್ನು ಬೇಡರೆಂದು ತಿಳಿಯಲಾಗಿದೆ. ಕಾಲಾಂತರದಲ್ಲಿ ಬೇಟೆಯ ವಿಧಾನ ಮತ್ತು ಉಪಕರಣಗಳು ಬದಲಾದಂತೆ ಬೇಟೆಗಾರರಲ್ಲಿ ಸಣ್ಣ ಪ್ರಮಾಣದ ವ್ಯತ್ಯಾಸಗಳುಂಟಾದವು. ಈ ಜನಾಂಗ ಇಂದು ಮೀಸಲಾತಿ ವಿಷಯದಲ್ಲಿ ಬೇರೆ ಬೇರೆಯಾಗಿ ಕಂಡುಬಂದರೂ, ಪ್ರಾಚೀನ ಕಾಲದಲ್ಲಿ ಇವರೆಲ್ಲಾ (ಬೇಟೆ ಗಾರರು)ಸಾಂಸ್ಕೃತಿಕವಾಗಿ ಮತ್ತು ಜನಾಂಗೀಯವಾಗಿ ಒಂದೇ ವರ್ಗಕ್ಕೆ ಸೇರಿದವರಾಗಿದ್ದರು. ಆದ್ದರಿಂದ ಈ ಲೇಖನದಲ್ಲಿ ಬೇಡ, ಬೇಟೆ ಮತ್ತು ಬೇಟೆಗಾರರು ಎಂಬ ಪದಗಳನ್ನು ಬೇಡರಿಗೆ ಸಮಾನವಾದದ್ದೆಂದು ಅರ್ಥೈಸಿಕೊಳ್ಳಬೇಕು.

[4] ಅ. ಸುಂದರ, ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಬೆಂಗಳೂರು, ೧೯೯೪, ಪುಟಗಳು. ೧೦-೧೫.

[5] ಈಗಿನ ಹಾವೇರಿ ಜಿಲ್ಲೆಯಲ್ಲಿ (ಅಂದು ಧಾರವಾಡ ಜಿಲ್ಲೆ)ರುವ ಹಳ್ಳೂರಿನಲ್ಲಿ ಉತ್ಖನನ ನಡೆಸಿದಾಗ ಉದ್ದವಾದ ಕಬ್ಬಿಣದ ಖಡ್ಗಗಳು ದೊರೆತಿವೆ. ಹೆಚ್ಚಿನ ಮಾಹಿತಿಗಾಗಿ ನೋಡಿ. ಗುರುರಾಜ ರಾವ್ ಬಿ.ಕೆ., ಮೆಗಾಲಿಥಿಕ್ ಕಲ್ಚರ್ ಇನ್ ಸೌಥ್ ಇಂಡಿಯಾ, ಯೂನಿವರ್ಸಿಟಿ ಆಫ್ ಮೈಸೂರು, ೧೯೭೨, ಪುಟಗಳು ೧೭೩-೧೮೦, ಮತ್ತು ಸುಂದರ ಅ., ದಿ. ಅರ್ಲಿ ಛೇಂಬರ್ ಟೂಂಬ್ಸ್ ಆಫ್ ಸೌಥ್ ಇಂಡಿಯಾ, ದೆಹಲಿ, ೧೯೭೫, ಪುಟ. ೧೯೨.

[6] ನಾಗರಾಜ ರಾವ್ ಎಂ.ಎಸ್., ಮತ್ತು ಮಲ್ಹೋತ್ರ ಕೆ.ಸಿ., ಯವರು ತೆಕ್ಕಲಕೋಟದ ಹೊಸ ಶಿಲಾಯುಗದ ನೆಲೆಗಳನ್ನು ಉತ್ಖನನ ಮಾಡಿದ ಸಮಯದಲ್ಲಿ ದೊರೆತ ಮಾನವ ಆಸ್ತಿ ಪಂಜರಗಳು ಇಂದಿನ ಬೋಯಾ ಜನಾಂಗದ ಶರೀರದ ಎಲ್ಲಾ ಆಕರಗಳನ್ನು ಹೋಲುತ್ತವೆಂದು ಅಭಿಪ್ರಾಯಪಟ್ಟಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೋಡಿ ಅವರ ಪುಸ್ತಕ ‘ದಿ ಸ್ಟೋನ್ ಏಜ್ ಹಿಲ್ಲ್ ಡ್ವೆಲ್ಲರ್ಸ್ ಆಫ್ ತೆಕ್ಕಲಕೋಟಾ’, ಪುನಾ, ೧೯೬೫ ಎ, ಪುಟ. ೧೫೯. ಸೈಟೆಡ್ ಇನ್ ಸುಂದರ ಅ., ದಿ ಅರ್ಲಿ ಛೇಂಬರ್ ಟೂಂಬ್ಸ್ ಆಫ್ ಸೌಥ್ ಇಂಡಿಯಾ, ದೆಹಲಿ, ೧೯೭೫, ಪು. ೧೯೫.

[7] ನೀಲಕಂಠ ಶಾಸ್ತ್ರಿ ಕೆ.ಎ., ಸಂಗಮ್ ಲಿಟರೇಚರ್ :ಇಟ್ಸ್ ಕಲ್ಟ್ಸ್ ಅಂಡ್ ಕಲ್ಚರ್ಸ್, ಮದ್ರಾಸ್, ೧೯೭೨, ಪು. ೭

[8] ಅದೇ., ಪು. ೨೧.

[9] ಅದೇ., ಪು. ೩೧.

[10] ಅದೇ., ಪು. ೩೨.

[11] ಅದೇ., ಪು. ೩೮.

[12] ಅದೇ., ಪು. ೩೩.

[13] ಎಡ್ಗರ್ ಥರ್ಸ್ಟನ್, ಕಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಸಂ. ೧, ಮರುಮುದ್ರಣ, (ದೆಹಲಿ, ೧೯೭೫), ಪು. ೧೮೪.

[14] ಅದೇ

[15] ಶಾಮಶಾಸ್ತ್ರಿ ಆರ್., ಅನುವಾದಿಸಿರುವ ಕೌಟಿಲ್ಯನ ಅರ್ಥಶಾಸ್ತ್ರ, ೯ನೇ ಆವೃತ್ತಿ, ಮೈಸೂರು, ೧೯೮೮, ಪು. ೩೬೦.

[16] ಅದೇ., ಪು. ೩೬೦.

[17] ಅದೇ., ಪುಟಗಳು. ೩೭೬-೭೭.

[18] ರಾಜರಾಮ ಹೆಗ್ಡೆಯವರು ಬಿಲ್ಲರು ಮೂಲತಃ ಬೇಡರು ಎಂದು ತಮ್ಮ ಲೇಖನದಲ್ಲಿ ಇತ್ತೀಚೆಗೆ ಪ್ರತಿಪಾದಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೋಡಿ. 'ಬಿಲ್ಲಮೂನೂರ್ವರು :ಕನ್ನಡ ಶಾಸನಗಳಲ್ಲಿ ಸಮುದಾಯಗಳ ಇತಿಹಾಸ'ಇನ್ ಪ್ರೊ. ಲಕ್ಷ್ಮಣ್ ತೆಲಗಾವಿ ಸಂಪಾದಿಸಿ ರುವ ಚರಿತ್ರೆ ಅಧ್ಯಯನ, ಸಂ. ೧, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪುಟಗಳು. ೯೧-೧೦೧.

[19] ಕೊಸಾಂಬಿ ಡಿ.ಡಿ., ಏನ್ಸಿಯಂಟ್ ಇಂಡಿಯಾ, ಮರುಮುದ್ರಣ, ನವದೆಹಲಿ, ೧೯೯೦, ಪು. ೪೩.

[20] ಅದೇ., ಪು. ೪೫.

[21] ಅದೇ., ಪು. ೫೧.

[22] ಶರ್ಮಾ ಆರ್.ಎಸ್., ಶೂದ್ರಾಸ್ ಇನ್ ಏನ್ಸಿಯಂಟ ಇಂಡಿಯಾ, ಮರುಮುದ್ರಣ, ನವದೆಹಲಿ, ೧೯೯೦, ಪು. ೫೦.

[23] ಅದೇ., ಪು. ೨೯೧.

[24] ಅದೇ

[25] ಅದೇ

[26] ಅದೇ

[27] ಅದೇ., ಪುಟಗಳು. ೨೯೧-೯೨.

[28] ಅದೇ., ಪುಟಗಳು. ೩೩೫-೩೭.

[29] ಮಜುಮ್‌ದಾರ್ ಆರ್.ಸಿ., ಏನ್ಸಿಯಂಟ್ ಇಂಡಿಯಾ, ದೆಹಲಿ, ೧೯೭೭, ಪು. ೩೫೧.

[30] ಎಪಿಗ್ರಾಫಿಯಾ ಕರ್ನಾಟಿಕಾ, ಸಂ. ೧೦., ಮುಳಬಾಗಿಲು. ೮೫ (ಹಳೆಯ ಆವೃತ್ತಿ).

[31] ಅದೇ., ಪು. ೧೬೨.

[32] ಚಿದಾನಂದಮೂರ್ತಿ ಎಂ., 'ಬೇಟೆಯ ವೀರಗಲ್ಲುಗಳು', ಉದಯವಾಣಿ, ದೀಪಾವಳಿ ಸಂಚಿಕೆ, ೧೯೭೩, ಪುಟ. ೬೫.

[33] ಭಾರತಿ ಬಿ.ಆರ್. ಮತ್ತು ಗುರು ಎ.ಆರ್., ‘ಮರಸಣಿಗೆಯ ಅಪರೂಪದ ಬೇಟೆ ವೀರಗಲ್ಲು’, ಇತಿಹಾಸ ದರ್ಶನ, ಸಂ. ೧೬, ಬೆಂಗಳೂರು, ೨೦೦೧, ಪುಟಗಳು. ೪೮-೫೧.

[34] ಗೋಪಾಲರಾವ್ ಹೆಚ್.ಎಸ್., ‘ಕೈದಾಳದ ಹುಲಿ ಬೇಟೆಯ ವೀರಗಲ್ಲು ಶಾಸನ’, ಇತಿಹಾಸ ದರ್ಶನ, ಸಂ. ೪, ಬೆಂಗಳೂರು, ೧೯೮೯, ಪು. ೧೭.

[35] ವಿರೂಪಾಕ್ಷಿ ಪೂಜಾರಹಳ್ಳಿ, ‘ವಿಜಯನಗರ ಕಾಲದ ವಾಸ್ತು ಶಿಲ್ಪದಲ್ಲಿ ಬೇಟೆ ಚಿತ್ರಣ’, ಇತಿಹಾಸ ದರ್ಶನ, ಸಂ. ೧೪, ಬೆಂಗಳೂರು, ೧೯೯೯, ಪುಟಗಳು. ೧೬೬-೧೭೩.

[36] ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್, ೧೯೨೩, ಪು. ೮೩.

[37] ಎ.ಕ. ಸಂ.೭, ನಾಗಮಂಗಲ, ಪುಟ. ೩೪.

[38] ಅದೇ., ಸಂ.೮, ಆಲೂರು, ಪುಟ. ೩೫.

[39] ಅದೇ., ಸಂ. ೯, ಬೇಲೂರು, ಪುಟ. ೩೪೦.

[40] ಅದೇ., ಸಂಖ್ಯೆ. ೫೫೦.

[41] ಅದೇ., ಸಂ. ೬, (ಹ), ತರೀಕೆರೆ, ಪುಟ. ೮೪.

[42] ಅದೇ., ಸಂ. ೫, ಕೃಷ್ಣರಾಜನಗರ, ಪುಟ. ೮.

[43] ಅದೇ., ಸಂ. ೧೧, ಚಿಕ್ಕಮಗಳೂರು, ಪುಟ

# ವಿಜಯನಗರೋತ್ತರ ಕಾಲದ ಬೇಡರು

ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಯಾದ ‘ವಿಜಯನಗರ ಸಾಮ್ರಾಜ್ಯ’ ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದಿದೆ. ವಿಜಯನಗರ ಪೂರ್ವ, ವಿಜಯನಗರ ಕಾಲ ಮತ್ತು ವಿಜಯನಗರೋತ್ತರ ಕಾಲದ ಬೇಡರ ಇತಿಹಾಸ ಕರ್ನಾಟಕ ಇತಿಹಾಸದಲ್ಲಿ ಅಷ್ಟೇ ಅಲ್ಲ, ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧಿಯಾಗಿದೆ. ಬೇಡರು ಬೇಟೆ ಯಿಂದ ಗುರುತಿಸಲ್ಪಟ್ಟವರಾದರೂ ರಾಜ್ಯಗಳ ಸ್ಥಾಪನೆಯಲ್ಲಿ ಅವರ ಪಾತ್ರ ಮುಖ್ಯವಾಗಿತ್ತು. ಬೇಡರ ಸಹಾಯದಿಂದ ಅನೇಕ ರಾಜ್ಯಗಳು ಹುಟ್ಟಿ ಬೆಳೆದವು. ಧೈರ್ಯ, ಸಾಹಸ, ನಂಬಿಕೆಗೆ ಬೇಡರು ಹೆಸರುವಾಸಿಯಾಗಿದ್ದರು. ಪ್ರಾಣವನ್ನು ಕೊಟ್ಟಾದರೂ ತಮ್ಮ ನಾಯಕರನ್ನು ರಕ್ಷಿಸುವ ಕೆಲಸ ಬೇಡರು ಮಾಡುತ್ತಿದ್ದರು. ಬೇಟೆಯಿಂದ ‘ಸೇನಾ’ ವೃತ್ತಿಯೆಡೆಗೆ ಬಂದ ಬೇಡರು ತಮ್ಮದೇ ಆದ ‘ಬೇಡ ಪಡೆ’ಗಳನ್ನು ಕಟ್ಟಿಕೊಂಡು ಪ್ರಸಿದ್ಧಿಗೆ ಬಂದರು. ಮುಂದೆ ಆಳುವ ಅರಸರ ಬಂಟರಾಗಿ, ಅಮರನಾಯಕರಾಗಿ, ಗುರುತಿಸಲ್ಪಟ್ಟರು. ಕಾಲಕ್ರಮೇಣ ತಮ್ಮ ತಮ್ಮ ಪ್ರದೇಶಗಳಲ್ಲಿ ತಾವೇ ದೊರೆಗಳೆಂದು, ಪಾಳೆಯಗಾರರೆಂದೂ, ನಾಯಕ ರೆಂದೂ, ಘೋಷಿಸಿಕೊಂಡರು.

ವಿಜಯನಗರ ಪೂರ್ವ ಕನ್ನಡದ ಮೊದಲ ರಾಜ ಮಯೂರವರ್ಮನು ಬೇಡರ ಜಾತಿಗೆ ಸೇರಿದವನು ಎಂದು ಬುಕಾನಾನ್‌ನು ವರದಿ ಮಾಡಿರುವನು. ಅಷ್ಟೊತ್ತಿಗೆ ಶ್ರೀಶೈಲ ಪರ್ವತ ಪ್ರದೇಶದಲ್ಲಿ ಬೇಡರು ಸೈನಿಕ ಚಟುವಟಿಕೆಗಳಲ್ಲಿ ತೊಡಗಿದ್ದರು. ಗಂಗರ ರಾಜಧಾನಿ ತಲಕಾಡು, ತಲ ಮತ್ತು ಕಾಡು ಎಂಬ ಬೇಡ ನಾಯಕರ ಹೆಸರಿನಿಂದ ಬಂದಿದೆ ಎಂದು ಕೈಫಿಯತ್ತು ತಿಳಿಸುತ್ತದೆ. ಬಿಲ್ಲುಗಾರಿಕೆಯಲ್ಲಿ ಬೇಡರು ಪ್ರಾವಿಣ್ಯತೆಯನ್ನು ಗಳಿಸಿದ್ದರು. ಗಂಗ ದೊರೆಗಳು ಬೇಡರಿಗೆ ಸೈನ್ಯದಲ್ಲಿ ಉನ್ನತ ಸ್ಥಾನಮಾನಗಳನ್ನು ಕೊಟ್ಟಿದ್ದರು. ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಬೇಡ ಪಡೆಗಳಿದ್ದವು. ಪುಲಕೇಶಿಯ 'ಕರ್ನಾಟಕ ಸೈನ್ಯ'ದಲ್ಲಿ ಬೇಡರೇ ಅಧಿಕ ಸಂಖ್ಯೆಯಲ್ಲಿದ್ದರು. ರಾಷ್ಟ್ರಕೂಟರ ಕಾಲಕ್ಕೆ ನಾಡಗೌಡರಾಗಿ ಬೇಡರು ನೇಮಕವಾದುದು ಗೊತ್ತಾಗುತ್ತಿದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕಾಲ್ದಳದಲ್ಲಿ 'ಬೇಡರ ಪಡೆ'ಯು ಪ್ರಸಿದ್ಧಿಯನ್ನು ಪಡೆದಿತ್ತು. ಹೊಯ್ಸಳ ದೊರೆಗಳೂ ಬೇಡ ಪಡೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ದೆಹಲಿ ಸುಲ್ತಾನರ ದಕ್ಷಿಣದ ದಾಳಿಗಳನ್ನು ಹಿಮ್ಮೆಟ್ಟಿದ ಕೀರ್ತಿ ಬೇಡರಿಗೆ ಸೇರುತ್ತದೆ. ಮುಮ್ಮಡಿಸಿಂಗ, ಕಂಪಿಲರಾಯ, ಗಂಡುಗಲಿ ಕುಮಾರರಾಮರು ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಮಹಾಪುರುಷರು. ಕಂಪಿಲರಾಯನ ಬಾವ ಸಂಗಮನ ಮಕ್ಕಳೇ ಮುಂದೆ ವಿಜಯನಗರವನ್ನು ಸ್ಥಾಪಿಸಿದರು. ಈ ಕಾಲದಲ್ಲಿ ತೆಲುಗು ಸೀಮೆಯಲ್ಲಿ ಅನೇಕ ಬೇಡ ಸಂಸ್ಥಾನಗಳಿದ್ದವು. ವಿಜಯನಗರ ಕಾಲದಲ್ಲಿ ಬೇಡರು ಪ್ರಮುಖ ಸ್ಥಾನಮಾನಗಳನ್ನು ಗಳಿಸಿದ್ದರು. ವಿಜಯನಗರ ಅರಸರು ಅಲ್ಲಲ್ಲಿ ಸ್ಥಾಪನೆಗೊಂಡಿದ್ದ ಬೇಡ ರಾಜ್ಯಗಳನ್ನು ತಮ್ಮ ಕಡೆಗೆ ಸೆಳೆದುಕೊಂಡು ಅವರ ಸೈನ್ಯ ಸಹಾಯ, ಸಹಕಾರದಿಂದ ವಿಜಯನಗರವನ್ನು ಆಳಿದರು. ವಿಜಯನಗರವು ಅನೇಕ ಪಾಳೆಯಪಟ್ಟುಗಳನ್ನೊಳಗೊಂಡ ಒಕ್ಕೂಟ ವ್ಯವಸ್ಥೆ ಆಗಿತ್ತು. ವಿಜಯನಗರ ಅರಸರ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ 'ಖಾಸ ಬೇಡರ ಪಡೆ', 'ಮೀಸಲು ಪಡೆ'ಗಳು ಬೇಡರಿಗೆ ಸಂಬಂಧಿಸಿದ್ದವು. ಪೆರಿಯ ಓಬಳನಾಯಕನು ಉನ್ನತ ಹುದ್ದೆಯಲ್ಲಿದ್ದನು. ನಿಡಗಲ್ಲು, ಚಿತ್ರದುರ್ಗ, ರತ್ನಗಿರಿ, ಹರ್ತಿಕೋಟೆ, ನಾಯಕನಹಟ್ಟಿ, ಗುಡೇಕೋಟೆ, ಜರಿಮಲೆ, ಬಸವಾಪಟ್ಟಣ, ಗುಮ್ಮನಾಯಕನಹಳ್ಳಿ (ಪಾಳ್ಯ), ಹರಪನಹಳ್ಳಿ, ಕನಕಗಿರಿ, ಮತ್ತೋಡು ಮುಂತಾದ ಅನೇಕ ಪಾಳೆಯಪಟ್ಟುಗಳು ಬೇಡರಿಗೆ ಸೇರಿದ್ದವು. ಬಹಮನಿ ಅರಸರ ವಿರುದ್ಧವಾಗಿ ಹೋರಾಡಲು ಬೇಡರನ್ನು ನೇಮಿಸಿದ್ದರು. ಕನಕಗಿರಿ ನಾಯಕರು ವಿಜಯನಗರ ಮೇಲಿನ ಮುಸ್ಲಿಂ ದಾಳಿಯನ್ನು ತಡೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಹಾಗಾಗಿ ಅವರಿಗೆ ವಿಜಯನಗರದ ಆಸ್ಥಾನದಲ್ಲಿ ಬಲಗೈ ಪಾರ್ಶ್ವ ರಾಜಮರ್ಯಾದೆಯನ್ನು ಕೊಟ್ಟಿದ್ದರು. ಕ್ರಿ.ಶ. ೧೫೬೫ರಲ್ಲಿ ನಡೆದ ತಾಳಿಕೋಟೆ ಕದನದಲ್ಲಿ ಅನೇಕ ಬೇಡ ಸಂಸ್ಥಾನಿಕರು ಭಾಗವಹಿಸಿದ್ದರು. ೭೨ ವಂಶದ ನಾಯಕರು ಆ ಯುದ್ಧದಲ್ಲಿ ವಿಜಯನಗರ ಪರವಾಗಿ ಭಾಗವಹಿಸಿದ್ದರು. ಮತ್ತು ಅನೇಕ ಕಷ್ಟ-ನಷ್ಟಗಳನ್ನು ಅನುಭವಿ ಸಿದರು. ಈ ಯುದ್ಧದಲ್ಲಿ ಸೋಲುಂಡ ವಿಜಯನಗರ ಸೈನ್ಯವು ದಿಕ್ಕುಪಾಲಾಯಿತು. ವಿಜಯ ನಗರ ಅರಸರ ಅಧೀನದಲ್ಲಿದ್ದ ಅನೇಕ ಪಾಳೆಯಗಾರರು ಈ ಸಂದರ್ಭದಲ್ಲಿ ಸ್ವತಂತ್ರರಾದರು. ಆದರೆ ಅವರಲ್ಲಿ ವಿಜಯನಗರ ಅರಸರಿಗೆ ತೋರಿದ ಒಗ್ಗಟ್ಟನ್ನು ತೊರದೇ ತಮ್ಮ ತಮ್ಮಲ್ಲಿಯೇ ಜಗಳಕ್ಕಿಳಿದರು. ಸ್ವತಂತ್ರಗೊಂಡ ಅನೇಕ ಬೇಡ ಸಂಸ್ಥಾನಿಕರು ನಂತರ ವಿಜಾಪುರ, ಆದಿಲ್‌ಷಾಹಿಗಳ, ಮೊಗಲರ, ಮರಾಠರ, ಹೈದರಾಲಿ-ಟಿಪ್ಪುಸುಲ್ತಾನರ, ನಿಜಾಮನ ಮತ್ತು ಬ್ರಿಟಿಷರ ರಾಜಕೀಯ ಪೈಪೋಟಿಯ ಒಳಜಗಳದಲ್ಲಿ ಬಳಲುವಂತಾದರು. ಹೋರಾಡುವುದು ಅವರಿಗೆ ಅನಿವಾರ್ಯವಾಯಿತು. ಮತ್ತೆ ವಿಜಯನಗರದ ವೈಭವದ ಸ್ಥಾಪನೆಯ ಕನಸಿನೊಂದಿಗೆ ವಿಜಯನಗರ ಅರಸರ ಪರವಾಗಿ ಹೋರಾಟಕ್ಕಿಳಿದ ಎಚ್ಚಮ ನಾಯಕನ ಪ್ರಯತ್ನವೂ ವಿಫಲವಾಯಿತು.

**ಬಿಜಾಪುರ ಆದಿಲ್‌ಷಾಹಿಗಳು ಮತ್ತು ಬೇಡರು**

ವಿಜಾಪುರದ ಆದಿಲ್‌ಷಾಹಿಗಳ ಕಾಲಕ್ಕೆ ಬೇಡರು ಅನೇಕ ಸಂಕಷ್ಟಗಳಿಗೆ ಒಳಗಾದರು. ಮಹಮ್ಮದ್ ಆದಿಲ್‌ಷಾಹಿಯ ಸೇನಾಪತಿಗಳ ದಾಳಿಯಿಂದ ಜನರು ತತ್ತರಿಸಿಹೋದರು. ಹರಪನಹಳ್ಳಿ, ಸಂಡೂರು, ಕನಕಗಿರಿ, ಉಜ್ಜನಿ ಪ್ರದೇಶಗಳ ನಾಯಕರು ಸೋಲುಂಡು ಸೇನಾಪತಿ ರಣದುಲ್ಲಾಖಾನನ ಸಹಾಯಕರಾಗಿ ನಂತರದ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದರು ಮತ್ತು ಸಾಕಷ್ಟು ಕಪ್ಪಕಾಣಿಕೆಯನ್ನು ಕೊಟ್ಟರು. ಆದಿಲ್‌ಷಾಹಿಯು ಸಂಪತ್ತಿನ ಆಸೆಗಾಗಿ ಎಂಟು ಬಾರಿ ದಕ್ಷಿಣದ ಕಡೆ ದಾಳಿಮಾಡಿದನು. ಇವನು ಇಕ್ಕೇರಿ ನಾಯಕರ ಮೇಲೆ ದಾಳಿ ಮಾಡುವಾಗ ಬಸವಾಪಟ್ಟಣದ ನಾಯಕರ ಸಹಾಯವನ್ನು ಪಡೆದನು. ಹಾಗೆಯೇ ಬಸವಾಪಟ್ಟಣದ ಮೇಲೆ ದಾಳಿ ಮಾಡಿದಾಗ ಇಕ್ಕೇರಿ ನಾಯಕರ ಸಹಾಯವನ್ನು ಪಡೆದನು. ಬಸವಾಪಟ್ಟಣದ ಚಿಕ್ಕಕೆಂಗ ಹನುಮಪ್ಪನಾಯಕನು ಸೋತು ಅದಿಲ್‌ಷಾಹಿಯ ಜೊತೆ ಚಿತ್ರದುರ್ಗ,

ಶಿರಾ, ಹಾಗಲವಾಡಿ, ಬೆಂಗಳೂರು, ಮೈಸೂರು ಮುಂತಾದ ಹಲವು ಯುದ್ಧಗಳಲ್ಲಿ ಭಾಗವಹಿಸಿದ್ದನು. ಈ ಸಹಾಯಕ್ಕಾಗಿ ೧೬೩೭ರಲ್ಲಿ ಅದಿಲ್‌ಷಾಹಿಯು ಬಸವಾಪಟ್ಟಣವನ್ನು ಹನುಮಪ್ಪನಾಯಕನಿಗೆ ನೀಡಿದನು ಮತ್ತು ಇವನ ಸಹಾಯದಿಂದ ಹರಪನಹಳ್ಳಿ, ಸಂಡೂರು, ರಾಯದುರ್ಗ, ದೊಡ್ಡೇರಿ, ಕುಂದರ್ಪೆ, ಹಿರಿಯೂರು, ಚಿಕ್ಕನಾಯಕನಹಳ್ಳಿ, ಬೇಲೂರು, ಸಿರಾ, ಬೆಂಗಳೂರು, ದೊಡ್ಡಬಳ್ಳಾಪುರ, ಕೋಲಾರ, ಚಿಕ್ಕಬಳ್ಳಾಪುರ, ಹೊಸಕೋಟೆ, ಯಲಹಂಕ ಮುಂತಾದ ಸ್ಥಳಗಳನ್ನು ಅದಿಲ್‌ಷಾಹಿಯು ಗೆದ್ದನು. ಚಿಕ್ಕಣ್ಣನಾಯಕನು (ಚಿತ್ರದುರ್ಗ ಅರಸ) ಒಮ್ಮೆ ಆದಿಲ್‌ಷಾಹಿಯ ಸೈನ್ಯವನ್ನು ಅತ್ಯಂತ ಚಾಣಕ್ಷತೆಯಿಂದ ಸೋಲಿಸಿದ್ದಷ್ಟೇ ತೃಪ್ತಿ. ಇವನ ನಂತರ ದಳವಾಯಿಗಳ ಪ್ರಾಬಲ್ಯ ಹೆಚ್ಚಾಗಿ ಮತ್ತಿ ಸಂತತಿ ಕೊನೆಯಾಯಿತು. ನಂತರ ಅಧಿಕಾರಕ್ಕೆ ಬಂದ ಬಿಳಿಚೋಡು ಮನೆತನದ ಬಿಚ್ಚುಗತ್ತಿ ಭರಮಪ್ಪ ನಾಯಕನು ಆದಿಲ್‌ಷಾಹಿಗಳ ಮೇಲೆ ದಾಳಿ ಮಾಡಬೇಕು ಎಂದನಾದರೂ ಅಷ್ಟೊತ್ತಿಗೆ ಬಿಜಾಪುರ ಮೊಗಲರ ವಶಕ್ಕೆ ಹೋಗಿತ್ತು ಮತ್ತು ಶಿರಾ ಅದರ ದಕ್ಷಿಣದ ಕೇಂದ್ರವಾಗಿತ್ತು. ಬೂದಿಹಾಳು, ಚಿತ್ರದುರ್ಗದ ಕೆಲವು ಭಾಗ ಬಸವಾಪಟ್ಟಣ ಇನ್ನು ಕೆಲವು ಪಾಳೆಯಗಾರರ ಸಂಸ್ಥಾನಗಳು ಮೊಗಲರ ವಶಕ್ಕೆ ಹೋಗಿದ್ದವು. ಔರಂಗ ಜೇಬನು ಅದಿಲ್‌ಷಾಹಿಗಳ ಮೇಲೆ ದಾಳಿ ಮಾಡುವಾಗ ಸುರಪುರದ ನಾಯಕರ ಸೈನ್ಯ ಸಹಾಯವನ್ನು ಕೇಳಿದನು. ಈ ಸಂದರ್ಭದಲ್ಲಿ ಬಿದನೂರಿನ ನಾಯಕರಿಗೂ ಮತ್ತು ಚಿತ್ರದುರ್ಗ ನಾಯಕರಿಗೂ ಅನೇಕ ಯುದ್ಧಗಳು ನಡೆದವು. ಹಿರೇಮದಕರಿನಾಯಕನ ಕಾಲದಲ್ಲಿ ನಡೆದ (ಕ್ರಿ.ಶ. ೧೭೪೮) ಮಾಯಕೊಂಡ ಕದನದಲ್ಲಿ ಹರಪನಹಳ್ಳಿ ನಾಯಕ ಸೋಮಶೇಖರ ನಾಯಕನು ಹಿರೇಮದಕರಿನಾಯಕನನ್ನು ಕೊಂದನು. ಚಂದಸಾಹೇಬನ ಮಗ ಈ ಯುದ್ಧದಲ್ಲಿ ಭಾಗವಹಿಸಿದ್ದುದು ಒಂದು ವಿಶೇಷ. ಕೊನೆಯ ವೀರಮದಕರಿ ನಾಯಕನು ಅಧಿಕಾರಕ್ಕೆ ಬರುವ ಮುನ್ನ ಗಂಡಿಲ ಓಬವ್ವ ನಾಗತಿಯು ಆಡಳಿತವನ್ನು ನಡೆಸಿರುವುದು ಕಂಡುಬರುತ್ತದೆ. ‘ನಾಗತಿ’ ಎಂಬ ವಿಶೇಷ ಪದ ಬೇಡನಾಯಕರ ಇತಿಹಾಸ ದಲ್ಲಿ ಮಾತ್ರ ಕಾಣುತ್ತೇವೆ (ನಾಗತಿ-ಪಾಳೆಯಗಾರನಾಯಕನ ರಾಣಿ ಎಂದರ್ಥ). ೧೬೩೭ರಲ್ಲಿ ಶಿರಾ ಅದಿಲ್‌ಷಾಹಿಯ ವಶವಾಯಿತು. ೧೬೩೮ರಲ್ಲಿ ಪುನಃ ರಣದುಲ್ಲಾಖಾನ್ ಮತ್ತು ಅಫಜಲ್‌ಖಾನ್‌ರು ಶಿರಾದ ಮೇಲೆ ದಾಳಿ ಮಾಡಿ ಸರ್ಜಾರಂಗಪ್ಪನಾಯಕನನ್ನು ಯುದ್ಧದಲ್ಲಿ ಕೊಂದರು. ನಂತರ ಶಿರಾ ಪಾಳೆಯಗಾರರ ವಂಶವು ಎರಡು ಶಾಖೆಗಳಾಗಿ ಮಿಡಿಗೇಶಿಯಲ್ಲಿ, ರತ್ನಗಿರಿಯಲ್ಲಿ ನೆಲೆಸಿದವು.

**ಹೈದರಾಲಿ, ಟಿಪ್ಪೂಸುಲ್ತಾನ ಮತ್ತು ಬೇಡರು**

ಮೈಸೂರು ಇತಿಹಾಸದಲ್ಲಿ ಏಳ್ಗೆಗೆ ಬಂದ ಹೈದರಾಲಿಯು ಬೇಡರ ಶೌರ್ಯ ಸಾಹಸಗಳನ್ನು ಅರಿತಿದ್ದನು. ಅವನು ಹೈದ್ರಾಬಾದ್‌ನಿಂದ ಸಂಪತ್ತನ್ನು ಲೂಟಿ ಮಾಡಿಕೊಂಡು ಬಂದಿದ್ದು ೩೦೦ ‘ಬೇಡರ ಪಡೆ’ಯ ಸಹಾಯದಿಂದಲೇ. ಚಿತ್ರದುರ್ಗದ ೫ನೇ ಮದಕರಿ ನಾಯಕನ ಸೈನ್ಯ ಸಹಾಯದಿಂದ ತನ್ನಿಂದ ಗೆಲ್ಲಲಾಗದ ಬಂಕಾಪುರ, ನಿಡಗಲ್ಲು ಕೋಟೆಗಳನ್ನು ಗೆದ್ದುಕೊಂಡನು. ಕ್ರಿ.ಶ. ೧೭೬೩ರಲ್ಲಿ ಬಿದನೂರನ್ನು ಗೆಲ್ಲುವಲ್ಲಿಯೂ ಹೈದರಾಲಿ ಮದಕರಿನಾಯಕನ ಸಹಾಯವನ್ನು ಪಡೆದಿದ್ದನು. ತೀರಾ ಹತ್ತಿರದಿಂದ ಮದಕರಿನಾಯಕನ ಶೌರ್ಯ, ಸಾಮರ್ಥ್ಯವನ್ನು ನೋಡಿದ್ದ ಹೈದರಾಲಿ ತನ್ನ ‘ಸ್ನೇಹ ನೀತಿ’ಗೆ ಬದಲಾಗಿ ‘ವೈರಿ ನೀತಿ’ಯನ್ನು ಅನುಸರಿಸಿದನು. ಇದೇ ವೇಳೆಗೆ ಮರಾಠರು ಮದಕರಿನಾಯಕನ ಸ್ನೇಹ ಕೋರಿ ಬಂದರು. ಕ್ರಿ.ಶ. ೧೭೬೪ರಲ್ಲಿ ಹೈದರಾಲಿ ಮತ್ತು ಪೇಶ್ವೆ ಮಾಧವರಾಯನಿಗೂ ಯುದ್ಧ ನಡೆಯಿತು. ಆಗ ಮದಕರಿನಾಯಕನು ಮರಾಠರಿಗೆ ಸಹಾಯ ಮಾಡಿದನು. ಇದರಿಂದ ಕೋಪಿತನಾದ ಹೈದರಾಲಿ ಇದೇ ನೆಪ ಮಾಡಿಕೊಂಡು ಈ ಹಿಂದೆ ಮದಕರಿನಾಯಕನು ಮಾಡಿದ ಸಹಾಯವನ್ನೆಲ್ಲಾ ಮರೆತು ಕ್ರಿ.ಶ. ೧೭೬೨ರಲ್ಲಿ ಚಿತ್ರದುರ್ಗದ ಮೇಲೆ ದಾಳಿ ಮಾಡಿದನು. ನಂತರ ೧೭೭೪, ೧೭೭೭ ಮತ್ತು ಕ್ರಿ.ಶ. ೧೭೭೯ರಲ್ಲಿ ನಾಲ್ಕನೇ ಬಾರಿಗೆ ಚಿತ್ರದುರ್ಗದ ಮೇಲೆ ದಾಳಿ ಮಾಡಿ ಕುತಂತ್ರದಿಂದ ಚಿತ್ರದುರ್ಗವನ್ನು ಗೆದ್ದುಕೊಂಡನು. ನಂತರ ಚಿತ್ರದುರ್ಗದ ವೈಭವ ಕಣ್ಮರೆಯಾಯಿತು. ಚಿತ್ರದುರ್ಗಕ್ಕೆ ಹೈದರಾಲಿ ‘ಫ್‌ರಾರಕಾ ಬಾದ್’ ಎಂಬ ಹೊಸ ಹೆಸರಿಟ್ಟು ಒಂದು ವರ್ಷ ಕಾಲ ಇಲ್ಲಿಯೇ ಉಳಿದನು. ಚಿತ್ರದುರ್ಗದ ಅಧಿಕಾರವನ್ನು ಪುನಃ ಪಡೆಯಲು ಮದಕರಿನಾಯಕನ ವಂಶಸ್ಥರು ಮಾಡಿದ ಪ್ರಯತ್ನ ಫಲ ಕೊಡಲಿಲ್ಲ. ಇದರಿಂದ ಸಿಟ್ಟಿಗೆದ್ದು ಹೈದರಾಲಿಯ ವಿರುದ್ಧ ಧ್ವನಿ ಎತ್ತಿದ ದೊಡ್ಡ ಮದಕರಿ ನಾಯಕನ ಪ್ರಯತ್ನವೂ ವಿಫಲವಾಯಿತು. ಕೊನೆಗೆ ಅವನು ಸಾವಿರ ಸೈನ್ಯದ ನಾಯಕನಾಗಿ ೩೦೦ ರೂ.ಗಳ ಸಂಬಳಕ್ಕೆ ನೇಮಕವಾದನು. ಚಿತ್ರದುರ್ಗದಂತೆಯೇ ತರೀಕೆರೆ ಪಾಳೆಯ ಗಾರರಿಗೂ ಆಯಿತು. ಸರ್ಜಾಹನುಮಪ್ಪನಾಯಕನು ಹೈದರಾಲಿಯನ್ನು ಸೋಲಿಸಲಾಗಲಿಲ್ಲ. ನಂತರದ

ಮಾತುಕತೆಯಂತೆ ೧೮ ಸಾವಿರ ವಾರ್ಷಿಕ ಪೊಗದಿ ಕೊಡುವಂತೆ ಹೇಳಿ ತರೀಕೆರೆ ಸಂಸ್ಥಾನವನ್ನು ಸರ್ಜಾಹನುಮಪ್ಪನಾಯಕನಿಗೆ ಬಿಟ್ಟುಕೊಟ್ಟನಾದರೂ, ಈ ಹಣವನ್ನು ನಾಯಕನು ಕೊಡಲಾಗದೇ ಇದ್ದುದರಿಂದ ನಂತರ ೧೦೦ ಹೈದರಿ ವರಹಗಳಿಗೆ ಗೊತ್ತು ಮಾಡಿ ಮಂಜರಾಬಾದ ಅನ್ನು ಆಳಲು ನಾಯಕನನ್ನು ಕಳುಹಿಸಿದನು. ಹೈದರಾಲಿಯ ಕೊಯಮತ್ತೂರು ದಾಳಿಯಲ್ಲಿ ಈ ನಾಯಕನು ಹೈದರಾಲಿಯ ಪರ ಭಾಗವಹಿಸಿದ್ದನಲ್ಲದೆ ಹೋರಾಡುತ್ತಲೇ ಮರಣ ಹೊಂದಿದನು. ಹರಪನಹಳ್ಳಿ ಪಾಳೆಯಗಾರರೂ ಸಹ ಹೈದರಾಲಿಯನ್ನು ಎದುರು ಹಾಕಿಕೊಳ್ಳಲಿಲ್ಲ. ನಿಡಗಲ್ಲು ಅರಸರೂ ಸಹ ಹೈದರಾಲಿಯ ಅಧೀನಕ್ಕೊಳಪಟ್ಟರು. ವೀರತಿಮ್ಮಣ್ಣನಾಯಕನು ಹೈದರಾಲಿಗೆ ವಾರ್ಷಿಕ ೭,೦೦೦ ಪಗೋಡ ಗಳನ್ನು ಕೊಡಲು ಒಪ್ಪಿದನಲ್ಲದೇ ೩೦೦ ಜನ ಸೈನಿಕರ ಸಹಾಯವನ್ನು ಮಾಡಿದನು. ಮಿಡಗೇಶಿ ನಾಯಕನು ೧೭೬೯ರಲ್ಲಿ ಹೈದರಾಲಿಯಿಂದ ಜಾಗೀರು ಪಡೆದು ಅವನ ಅಧೀನದಲ್ಲಿ ಉಳಿದನು. ಹೈದರಾಲಿಯ ಪರವಾಗಿ ಚಿತ್ರದುರ್ಗದ ವಿರುದ್ಧ ಮತ್ತೋಡಿನ ಹಾಲಪ್ಪನಾಯಕನು ಸೈನ್ಯ ಸಹಾಯ ಮಾಡಿದನು. ೩ನೇ ಚನ್ನಬಸಪ್ಪನು ಹಾಗಲವಾಡಿಯ ದೊರೆಯಾಗಿದ್ದಾಗ ಹೈದರಾಲಿ ಈ ನಾಯಕನನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡು ಐವತ್ತೂ ಸಾವಿರ ರೂ.ಗಳನ್ನು ಕಾಣಿಕೆಯಾಗಿ ನೀಡುವಂತೆ ಒತ್ತಾಯಿಸಿದನು. ಆದರೆ ಅವನು ಹದಿನೆಂಟು ಸಾವಿರ ಕೊಡಲು ಒಪ್ಪಿದನು. ಆದರೆ ಈ ಹಣವನ್ನು ಕೊಡಲಾಗದ ಪರಿಸ್ಥಿತಿ ಎದುರಾದಾಗ ಹೈದರಾಲಿ ಚನ್ನಬಸಪ್ಪ ನಾಯಕನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟನು. ನಂತರ ಹಾಗಲವಾಡಿ ಸೀಮೆಯ ಅರ್ಧಭಾಗವನ್ನು ತನ್ನಲ್ಲಿಟ್ಟುಕೊಂಡು ಇನ್ನರ್ಧವನ್ನು ಹಾಗಲವಾಡಿ ಉತ್ತರಾಧಿ ಕಾರಿ ಬಾಲಕ ೨ನೇ ಮುದ್ದೀರಪ್ಪನಾಯಕನಿಗೆ ಕೊಡಲು ಒಪ್ಪಿದನಾದರೂ ನಾಯಕ ಅಪ್ರಾಪ್ತ ನೆಂಬ ಒಂದೇ ಕಾರಣದಿಂದ ಹಾಗಲವಾಡಿಯನ್ನು ವಶಪಡಿಸಿಕೊಂಡನು. ರತ್ನಗಿರಿಯ ನಾಯಕ ರಂಗಪ್ಪರಾಜನ ಕಾಲದಲ್ಲಿ ಹೈದರಾಲಿ ರತ್ನಗಿರಿಯ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿ ಕೊಂಡು ಅವನ ನಾಲ್ಕು ಮಕ್ಕಳನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕರೆದೊಯ್ದನು. ನಂತರ ಅವರಿಗೆ ಶ್ರೀರಂಗಪಟ್ಟಣದ ಬಳಿ ಬೆಳಗುಂದಿ ಗ್ರಾಮವನ್ನು ರಂಗಪ್ಪ ರಾಜನಿಗೆ ಕೊಟ್ಟು ಅಲ್ಲಿಯೇ ನೆಲೆಸುವಂತೆ ಮಾಡಿ ರತ್ನಗಿರಿಯನ್ನು ತನ್ನ ಅಧೀನದಲ್ಲಿಯೇ ಉಳಿಸಿ ಕೊಂಡನು. ಗುಮ್ಮನಾಯಕನಹಳ್ಳಿಯೂ ೧೭೬೦ರಲ್ಲಿ ಹೈದರಾಲಿಯ ದಾಳಿಗೆ ತುತ್ತಾಗಿತ್ತು. ಅಲ್ಲಿಯ ಅರಸ ನರಸಿಂಹನಾಯಕನು ಕೋಟೆಯನ್ನು ಬಿಟ್ಟು ಓಡಿಹೋದನು. ದಿವಾನ್ ಪೂರ್ಣಯ್ಯನ ಸಲಹೆ ಮೇರೆಗೆ ಹೈದರಾಲಿ ಚಿತ್ರದುರ್ಗ ಅರಸರನ್ನು ಎದುರಿಸಲು ಜರಿಮಲೆ ಪಾಳೆಯಗಾರರ ಸಹಾಯವನ್ನು ಪಡೆದನು. ತಮ್ಮ ರಕ್ಷಣೆಗಾಗಿ ತಮ್ಮ ವಿರೋಧಿಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಜರಿಮಲೆ ಪಾಳೆಯಗಾರರು ಹೈದರಾಲಿಗೆ ಸಹಾಯ ಮಾಡಿದರು. ಗುಡೇಕೋಟೆ ನಾಯಕರೂ ಹೈದರಾಲಿಯ ಪರನಿಂತರು. ೩,೦೦೦ ವಾರ್ಷಿಕ ಪಗೋಡಗಳನ್ನು ಕೊಡಲು ಒಪ್ಪಿ ಜರಿಮಲೆ ನಾಯಕರು ಹೈದರಾಲಿಯಿಂದ ಜರಿಮಲೆಯನ್ನು ಆಳಲು ಅನುಮತಿ ಪಡೆದರು. ಪಾಲ್ಘಾಟಿನ ಮೇಲೆ ಹೈದರಾಲಿ ದಾಳಿ ಮಾಡಿದಾಗ ಜರಿಮಲೆ ನಾಯಕನು ಹೈದರ್‌ನ ಸಹಾಯಕ್ಕೆ ಹೋಗಿದ್ದನು. ಅಲ್ಲಿ ನಾಯಕನ ಸಾಹಸ ನೋಡಿದ ಹೈದರಾಲಿ ಜರಿಮಲೆ ಪಾಳೆಯಗಾರರನ್ನು ಮುಗಿಸಲು ಅವರನ್ನು ಬಂಧನದಲ್ಲಿಟ್ಟನು. ಗುಡೇಕೋಟೆಯ ಮೇಲೆಯೂ ಹೈದರಾಲಿ ಎರಡು ಬಾರಿ ದಾಳಿ ಮಾಡಿದ್ದನು. ಹೈದರಾಲಿಯ ದಾಳಿಗೆ ತತ್ತರಿಸಿದ ಅನೇಕ ಪಾಳೆಯಗಾರರು ತಮ್ಮ ತಮ್ಮ ರಕ್ತ ಸಂಬಂಧ ಮರೆತು ಹೋರಾಡುವಂತಾಯಿತು. ಅದನ್ನು ಉಳಿವಿಗೆ ಅದು ಅನಿವಾರ್ಯವೂ ಆಗಿತ್ತು.

ಟಿಪ್ಪೂ ಸುಲ್ತಾನನು ಪಾಳೆಯಗಾರರ ಕಡುವಿರೋಧಿಯಾಗಿದ್ದನು. ಹರಪನಹಳ್ಳಿ, ರಾಯದುರ್ಗ, ಕನಕಗಿರಿ, ಚಿತ್ರದುರ್ಗ, ಜರಿಮಲೆ, ಗುಡೇಕೋಟೆ, ಸಂತೇಬೆನ್ನೂರು ಪ್ರಾಂತ್ಯಗಳನ್ನು ಟಿಪ್ಪೂಪಸುಲ್ತಾನ ಕೊಳ್ಳೆ ಹೊಡೆದನು. ಚಿತ್ರದುರ್ಗದ ದೊಡ್ಡ ಮದಕರಿ ನಾಯಕನು ಟಿಪ್ಪೂಪ ವೈರಿಗಳ ತಲೆಗಳನ್ನು ಚಂಡಾಡಿದನು. ಇದರಿಂದ ಟಿಪ್ಪೂ ಚಿತ್ರದುರ್ಗದ ಅಧಿಕಾರವನ್ನು ಬಿಟ್ಟು ಕೊಡುವ ಮತೊಂದನ್ನು ಆಡಿದನು. ಆದರೆ ಆ ಮಾತು ಮಾತೇ ಆಗಿ ಉಳಿಯಿತು. ಅಷ್ಟೇ ಅಲ್ಲದೆ ಮದಕರಿನಾಯಕನನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಚಿತ್ರದುರ್ಗದಲ್ಲಿ ಮಹಮ್ಮದ್ ಭಕ್ಷಿ ಎಂಬ ಅಧಿಕಾರಿಯನ್ನು ನೇಮಕ ಮಾಡಿದನು. ಈ ಸಂದರ್ಭದಲ್ಲಿ ಹಿರೇಮದಕರಿನಾಯಕನು ತಲೆ ತಪ್ಪಿಸಿಕೊಂಡು ಅಲೆಮಾರಿಯಾಗ ಬೇಕಾಯಿತು. ಮತ್ತೋಡು ನಾಯಕರು ಟಿಪ್ಪೂವಿನ ಪರವಿದ್ದರೂ ಅವರಿಗೆ ಏನೂ ಲಾಭವಾಗಲಿಲ್ಲ. ಸಿರಾ ಪಾಳೆಯಗಾರ ರಂಗಪ್ಪನಾಯಕನು ಕಂಠೀರವ ನರಸರಾಜರಿಂದ ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಹೈದರಾಲಿಯಿಂದ ಜಾಗೀರು ಪಡೆದುಕೊಂಡಿದ್ದ ಇವರು ಟಿಪ್ಪೂವಿನ ಕಾಲಕ್ಕೆ ಅವನ ಅಧೀನದಲ್ಲಿ ಉಳಿಯಬೇಕಾಯಿತು. ರತ್ನಗಿರಿಯ ತಿಮ್ಮಣ್ಣ ನಾಯಕನನ್ನು ಸೋಲಿಸಿ ಅವನ ಮಗ ಹೊಟ್ಟೆಣ್ಣಿ ನಾಯಕ, ಅವನ ಸಹೋದರರನ್ನು ಶ್ರೀ ರಂಗಪಟ್ಟಣಕ್ಕೆ ಕರೆದೊಯ್ದು ಕೊಂದನೆಂದು ತಿಳಿಯುವುದು. ಜರಿಮಲೆ, ಗುಡೇಕೋಟೆ ಪ್ರದೇಶಗಳೂ

ಟಿಪ್ಪೂವಿನ ದಾಳಿಗೆ ತುತ್ತಾದವು. ಕನಕಗಿರಿಯ ಪ್ರದೇಶದಲ್ಲಿ ಟಿಪ್ಪೂ ಸಂಚರಿಸಿ ಭೀತಿಯನ್ನುಂಟು ಮಾಡಿದನು ಮತ್ತು ಸಂಪತ್ತನ್ನು ದೋಚಿದನು. ಮಂಗಳೂರಿನ ಮೇಲೆ ದಾಳಿ ಮಾಡಿದಾಗ ನಿಡಗಲ್ಲು ಅರಸನಿಗೆ ಸೈನ್ಯ, ಹಣ ಸಮೇತ ಬರುವಂತೆ ಟಿಪ್ಪೂ ಆಜ್ಞೆ ಮಾಡಿದನು. ಮತ್ತು ಆ ನಾಯಕ ಸಾಮರ್ಥ್ಯಕ್ಕಿಂತಲೂ ಹೆಚ್ಚು ಹಣ ಕೊಡುವಂತೆ ಒತ್ತಾಯಿಸಿದನು. ಇದರಿಂದ ವೀರತಿಮ್ಮಣ್ಣನಾಯಕನು ಹಣವನ್ನು ಕೊಡಲಾಗದೇ ತನ್ನ ನಿಡಗಲ್ಲು ಕೋಟೆಯನ್ನಾಗಿ ಒಪ್ಪಿಸಿದನು. ನಿಡಗಲ್ಲು ದೊರೆಗಳನ್ನು, ಇತರ ಅನೇಕ ಪಾಳೆಯ ಗಾರರನ್ನು ಸೆರೆಹಿಡಿದು ತಂದು ಶ್ರೀರಂಗಪಟ್ಟಣದಲ್ಲಿ ಕೊಲ್ಲುತ್ತಿದ್ದಾನೆಂಬ ಸುದ್ದಿಯಿಂದ ಸಿಟ್ಟಿಗೆದ್ದ ನಿಡಗಲ್ಲು ಜನರು ದಂಗೆ ಎದ್ದರು. ಅವರಲ್ಲಿ ಕೆಲವರನ್ನು ಸೆರೆಹಿಡಿದು ತಂದು ಶಿಕ್ಷಿಸಿದನು. ಕೆಲವರು ತಪ್ಪಿಸಿಕೊಂಡು ದಿಕ್ಕು ಪಾಲಾದರು. ಬಲಿಷ್ಠ ರತ್ನಗಿರಿ ಕೋಟೆಯು ಟಿಪ್ಪೂವಿನ ವಶವಾಗಲಿಲ್ಲ. ಆಗ ಸೈಯದ್ ಕಾಫರ್ ಮತ್ತು ಮೀರ್ ಕಫರ್ದಿಖಾನ್‌ಎಂಬ ಸರದಾರರನ್ನು ರತ್ನಗಿರಿ ಕೋಟೆಯನ್ನು ವಶಪಡಿಸಿಕೊಳ್ಳಲು ಕಳುಹಿಸಿದನು. ಒಂಬತ್ತು ತಿಂಗಳಾದರೂ ಕೋಟೆ ಟಿಪ್ಪೂವಿನ ವಶವಾಗಲಿಲ್ಲ ನಂತರ ಮೈಸೂರಿನಿಂದ ಸಾಕಷ್ಟು ಸೈನ್ಯವನ್ನು ತರಿಸಿಕೊಂಡು ದಳವಾಯಿ ರಂಗಪ್ಪನಾಯಕನನ್ನು ಸೆರೆಹಿಡಿದು ಗಲ್ಲಿಗೇರಿಸ ಲಾಯಿತು. ತಪ್ಪಿಸಿಕೊಂಡ ಕೆಲವರು ಸುರಪುರದ ಅರಸರ ಆಶ್ರಯ ಕೋರಿ ಹೋದರು. ಗುಮ್ಮನಾಯಕನಹಳ್ಳಿ ಪಾಳೆಯಗಾರ ನರಸಿಂಹನಾಯಕ ಜನರಲ್ ಹ್ಯಾರಿಸ್‌ನೊಡನೆ ಒಪ್ಪಂದ ಮಾಡಿಕೊಂಡು ಟಿಪ್ಪೂವಿನ ವಿರುದ್ಧ ಹೋರಾಡಿದ. ಹರಪನಹಳ್ಳಿಯ ಬಸಪ್ಪ ನಾಯಕನನ್ನು ಟಿಪ್ಪೂ ಸೆರೆ ಹಿಡಿದನು. ಇದರಿಂದ ಹೆದರಿದ ರಾಣಿ ಬಸಮ್ಮಾಜಿ ಮರಾಠರ ಪರುಶುರಾಂಬಾವೆ ಪೆಶ್ವೆಯಲ್ಲಿಗೆ ಆಶ್ರಯ ಕೋರಿ ಹೋದಳು. ಟಿಪ್ಪೂವಿನ ಮರಣದ ನಂತರ ಆಕೆ ಹರಪನಹಳ್ಳಿಗೆ ಬಂದಳು. ತರೀಕೆರೆಯ ಕೃಷ್ಣಪ್ಪನಾಯಕನು ಟಿಪ್ಪೂವಿನ ವಿರೋಧಿ ಎಂಬ ಒಂದೇ ಕಾರಣಕ್ಕೆ ದಿವಾನ್ ಪೂರ್ಣಯ್ಯನವರು ಇವರಿಗೆ ವಿಷ ಕುಡಿಸಿ ಕೊಲ್ಲಿಸಿದರೆಂದು ಹೇಳಲಾಗಿದೆ.

### ಮರಾಠರು ಮತ್ತು ಬೇಡರು

ಶಿವಾಜಿಯ ಕಾಲದಲ್ಲಿ ಬಳ್ಳಾರಿಯ ಕೆಲವು ಪ್ರದೇಶಗಳು ಮರಾಠರ ವಶಕ್ಕೆ ಹೋಗಿದ್ದವು. ಶಿವಾಜಿಯ ನಂತರದ ಪೆಶ್ವೆಗಳ ಕಾಲದಲ್ಲಿ ಕರ್ನಾಟಕವು ಮರಾಠರ ದಾಳಿಗಳಿಗೆ ತುತ್ತಾಗಿತ್ತು. ಈ ಸಂದರ್ಭದಲ್ಲಿ ಹೈದರಾಲಿ ಮತ್ತುಟಿಪ್ಪೂಪ ವಿರೋಧಿಗಳು ಮರಾಠರಿಗೆ ಸಹಾಯ ಮಾಡಿ ದರು. ಸ್ಥಳೀಯ ನಾಯಕರು ಕೆಲವೊಮ್ಮೆ ಪೇಶ್ವೆಗಳ ಸಹಾಯ ಪಡೆದು ತಮ್ಮ ವಿರೋಧಿ ಗಳನ್ನು ಹೆದರಿಸಿದರು. ಮರಾಠರ ದಂಡನಾಯಕ ಸಿದ್ದೋಜಿ ಘೋರ್ಪಡೆಯು ಕ್ರಿ.ಶ. ೧೭೨೮ರಲ್ಲಿ ಗುತ್ತಿಯಿಂದ ಬಂದು ಸಂಡೂರು, ಕುಡುತಿನಿ ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡು ಎಂಟು ವರ್ಷಗಳ ಚೌತ್ ಕೊಡುವಂತೆ ಒತ್ತಾಯಿಸಿದನು. ಕ್ರಿ.ಶ. ೧೭೪೮ರಲ್ಲಿ ಮರಾಠ ಪೆಶ್ವೆಯಾದ ಬಾಲಾಜಿ ಬಾಜೀರಾವ್ ತನ್ನ ದಳಪತಿಯಾದ ಮುರಾರಿರಾವ್‌ವನ್ನು ಮೈಸೂರು ಮತ್ತು ಹೈದ್ರಾಬಾದ್ ಪ್ರಾಂತ್ಯಗಳ ಮೇಲೆ ದಾಳಿ ಮಾಡಲು ಕಳುಹಿಸಿದನು. ಇದೇ ಸಮಯದಲ್ಲಿ ಗುಮ್ಮನಾಯಕನಹಳ್ಳಿ ನರಸಿಂಹನಾಯಕನ ಪತ್ನಿ ರಾಣಿ ರಾಮಕ್ಕ ಮುರಾರಿರಾವ್‌ನೊಂದಿಗೆ ಒಪ್ಪಂದ ಮಾಡಿಕೊಂಡು ದಳವಾಯಿಗಳ ಸಂಚುಗಳನ್ನು ವಿಫಲ ಗೊಳಿಸಲು ಪ್ರಯತ್ನಿಸಿದಳಾದರೂ ವಿಫಲಳಾದಳು. ಮರಾಠರು ದಳವಾಯಿಗಳ ಹಣದ ಆಮೀಶಕ್ಕೆ ಒಳಗಾಗಿ, ಗೋರೆಂಟ್ಲ, ಕೊಂಡಿಕೊಂಡು ಪ್ರದೇಶಗಳನ್ನು ಹಣಕ್ಕೆ ಮಾರಿಕೊಂಡು ಸನ್ನದು ಬರೆದುಕೊಟ್ಟರು. ಆದರೆ ಇದರಿಂದ ಸಿಟ್ಟಿಗೆದ್ದ ರಾಣಿ ರಾಮಕ್ಕ ತನ್ನ ಸಾಮಂತರನ್ನು ಸೇರಿಸಿ ದಳವಾಯಿ ಸಾನಿನರಸಿಂಹಯ್ಯನನ್ನು ಸೋಲಿಸಿ ಗಡಿಪಾರು ಶಿಕ್ಷೆಗೆ ಒಳಪಡಿಸಿದಳು. ಕ್ರಿ.ಶ. ೧೭೫೨ರಲ್ಲಿ ಪೇಶ್ವೆ ನಾನಾಸಾಹೇಬ್ ಬಾಲಾಜಿರಾವ್ ರತ್ನಗಿರಿಯ ಸುತ್ತಮುತ್ತಲ ಪ್ರದೇಶವನ್ನು ವಶಪಡಿಸಿಕೊಂಡನು. ಕ್ರಿ.ಶ. ೧೭೭೯ರ ನಂತರ ಜರಿಮಲೆಯು ಕೆಲವು ಕಾಲ ಮರಾಠರ ಅಧೀನಕ್ಕೆ ಒಳಪಟ್ಟಿತ್ತು. ಜರಿಮಲೆ ನಾಯಕರು ಇಪ್ಪತ್ತು ಸಾವಿರ ಖಂಡಣಿ ಹಣವನ್ನು ಅವರಿಗೆ ಕೊಟ್ಟು ಜರಿಮಲೆಯನ್ನು ವಾಪಸ್ಸು ಪಡೆದರು.

### ಬ್ರಿಟೀಷರು ಮತ್ತು ಬೇಡರು

ದಕ್ಷಿಣ ಭಾರತದಲ್ಲಿ ಬ್ರಿಟೀಷರು ಅನೇಕ ಪ್ರತಿಭಟನೆ, ಹೋರಾಟಗಳನ್ನು ಎದುರಿಸಿ ಅಧಿಕಾರವನ್ನು ಹಿಡುದುಕೊಳ್ಳಬೇಕಾಯಿತು. ಹೈದಾರಾಬಾದಿನ ನಿಜಾಮ, ಮರಾಠರು ಮತ್ತು ಬ್ರಿಟೀಷರ ದೊಸ್ತಿಯಿಂದ ಸು. ೨೨೫ ವರ್ಷಗಳ ಕಾಲ ಅಧಿಕಾರದ ಗದ್ದುಗೆಯಲ್ಲಿ ರಾಜ

ಮರ್ಯಾದೆಯನ್ನು ಅನುಭವಿಸಿದ್ದ ಬೇಡರು ಬ್ರಿಟೀಷರ ಪ್ರವೇಶದಿಂದಾಗಿ ಅವರ ಬದುಕು ಚಿಂತಾಜನಕವಾಯಿತು. ಅವರು ಪಾಳೆಯಗಾರರನ್ನು ಸಂಬಳ ಪಡೆಯುವ ಅಧಿಕಾರಿಗಳ ಸ್ಥಾನಕ್ಕೆ ತಂದು ನಿಲ್ಲಿಸಿದರು. ಈ ಸಂದರ್ಭದಲ್ಲಿ ಕೆಲವು ಪಾಳೆಯಗಾರರು ನಮ್ಮ ಸಂಸ್ಥಾನ ಗಳು ಮರಳಿ ಸಿಗಬಹುದೆಂಬ ಆಸೆಯಿಂದ ಬ್ರಿಟೀಷರ ಪರ ನಿಂತರು. ಆದರೆ ಅವರಿಗೆ ಯಾವ ಲಾಭವೂ ಆಗಲಿಲ್ಲ. ಅನೇಕ ಬೇಡರು ಬ್ರಿಟೀಷರ ವಿರುದ್ಧ ಹೋರಾಟಕ್ಕಿಳಿದರು. ೧೮೨೪ರ ನಂತರ ಸಂಗೊಳ್ಳಿ ರಾಯಣ್ಣನು ಸುರಪುರದ ೩೦೦ ಬೇಡರ ಸಹಾಯ ಪಡೆದು ಕಿತ್ತೂರಿನಲ್ಲಿ ಬಂಡಾಯ ಮಾಡಿದನು. ಕ್ರಿ.ಶ. ೧೮೩೧ರಲ್ಲಿ ತರೀಕೆರೆ ಸರ್ಜಾ ರಂಗಪ್ಪನಾಯಕ, ಸರ್ಜಾ ಹನುಮಪ್ಪನಾಯಕರು ಬ್ರಿಟೀಷರ ವಿರುದ್ಧ ಹೋರಾಡಿದರು. ಅವರ ಹೋರಾಟದ ಯಶೋಗಾಥೆಗಳು ಜನರ ಮನದಾಳದಲ್ಲಿ ಇಂದಿಗೂ ಉಳಿದಿವೆ. ರಂಗಪ್ಪನಾಯಕನನ್ನು ಹಿಡಿದುಕೊಟ್ಟವರಿಗೆ ೧,೦೦೦ ಪಗೋಡಗಳ ಬಹುಮಾನ ಕೊಡುವುದಾಗಿ ರೆಸಿಡೆಂಟ್‌ನು ೧೮೩೧ ಏಪ್ರಿಲ್ ೧ ರಂದು ಪ್ರಕಟಿಸಿದನು. ಸರ್ಜಾರಂಗಪ್ಪ ನಾಯಕನು ಆಂಗ್ಲರನ್ನು ಭಾರತದಿಂದಲೇ ಓಡಿಸಬೇಕೆಂಬ ಮಹಾದಾಸೆಯಿಂದ ಬೇಡರ ಸೈನ್ಯವನ್ನು ಕಟ್ಟಿ ಬ್ರಿಟೀಷರ ವಿರುದ್ಧ ಹೋರಾಡುತ್ತಲೇ ವೀರಮರಣ ಹೊಂದಿದನು. ಸರ್ಜಾಹನುಮಪ್ಪನಾಯಕನೂ ಸಹಾ ತಂದೆಯಷ್ಟೇ ಶೂರ-ಸ್ವಾಭಿಮಾನಿ. ಅವನು ಸಹಾ ಬ್ರಿಟೀಷರನ್ನು ಕಂಡರೆ ಉರಿದೇಳು ತ್ತಿದ್ದನು. ಬ್ರಿಟೀಷರಿಂದ ಅವನನ್ನು ಹಿಡಯಲಾಗಲಿಲ್ಲ. ಕೊನೆಗೆ ಕುತಂತ್ರದಿಂದ ಅವನ ಸೂಳೆಯ ಸಹಾಯದಿಂದ ಸೆರೆಹಿಡಿದು ಕ್ರಿ.ಶ. ೧೮೩೨ರಲ್ಲಿ ಗಲ್ಲಿಗೇರಿಸಲಾಯಿತು. ಇವರ ಬಂಡಾಯದ ಪ್ರಭಾವದಿಂದ ಕ್ರಿ.ಶ. ೧೮೩೧ರಲ್ಲಿ ಮೈಸೂರು ಭಾಗದಲ್ಲಿ 'ನಗರ ದಂಗೆ' ಆಯಿತು. ಇದರ ಪರಿಣಾಮ, ಮೈಸೂರು ಅರಸರಿಂದ ಬ್ರಿಟೀಷರು ಅಧಿಕಾರವನ್ನು ಕಿತ್ತು ಕೊಂಡರು. ಬೇಡರ ಅನೇಕ ಕೂಟ ಸೈನ್ಯಗಳು ಮೈಸೂರು ಭಾಗದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದವು. ಆದರೆ, ಅವರಾರು ಗೆಲುವನ್ನು ಸಾಧಿಸಲಿಲ್ಲ.

೧೮೫೭ರಲ್ಲಿ ನಡೆದ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೇಡರ ಪಾತ್ರ ಅವಿಸ್ಮರಣೀಯವಾದುದು. ಬ್ರಿಟೀಷರ ನಿಶ್ಯಸ್ತ್ರೀಕರಣ ಶಾಸನ ನಮ್ಮ ಬದುಕಿಗೆ ಮಾರಕ ಎಂದು, ನಮ್ಮ ಮೂಲವೃತ್ತಿ ಬೇಟೆ, ಬೇಟೆಯಾಡಲು ಯುದ್ಧದಲ್ಲಿ ಹೋರಾಡಲು ಬೇಕಾಗುವ ಅಸ್ತ್ರಗಳು ನಮ್ಮ ಜನ್ಮಸಿದ್ಧ ಆಸ್ತಿ. ಅವುಗಳನ್ನು ನಿಮಗೆ ಒಪ್ಪಿಸಲು ಸಾಧ್ಯವೇ ಇಲ್ಲ ಎಂಬುದು ಬೇಡರು ಕೂಗಾಗಿತ್ತು. ಬೇಡರ ಶೌರ್ಯ, ಬೇಡರಿಂದ ಅಸ್ತ್ರಗಳನ್ನು ಕಿತ್ತುಕೊಂಡರೆ ಅವರನ್ನು ಹೆದರಿಸುವುದು ಸುಲಭ, ಅವರು ನಮ್ಮ ಅಧೀನರಾಗುವರು ಎಂಬುದು ಬ್ರಿಟೀಷರ ತಂತ್ರವಾಗಿತ್ತು. ಈ ಶಾಸನವನ್ನು ವಿರೋಧಿಸಿ ಹಲಗಲಿ ಬೇಡರು ತೋರಿದ ಸಾಹಸ ಮೈನವಿರೇಳಿಸುತ್ತದೆ. "ನಮ್ಮ ಜೀವ ಕೊಟ್ಟೇವು, ಹೊರತು ನಮ್ಮ ಅಸ್ತ್ರಗಳನ್ನು ನಿಮಗೆ ಒಪ್ಪಿಸಲಾರೆವು" ಎಂಬುದು ಬೇಡರ ಸ್ಪಷ್ಟ ಮಾತಾಗಿತ್ತು. ನೇರವಾಗಿ ಹಲಗಲಿ ಬೇಡರನ್ನು ಸೋಲಿಸಲಾಗದೇ ಬ್ರಿಟೀಷರು ಬೇಡರ ಗುಡಿಸಲುಗಳಿಗೆ ಬೆಂಕಿ ಇಟ್ಟರು. 'ಶಸಸ್ತ್ರಗಳನ್ನು ಒಪ್ಪಿಸುವುದಕ್ಕಿಂತ ಸಾವೇ ಮೇಲು' ಎಂದು ಬೇಡರು ತಮ್ಮ ಗುಡಿಸಲು ಒಳಗಿನಿಂದಲೇ ಬಿಲ್ಲುಗಳಿಂದ ಹೋರಾಡಿದರು. ಅನೇಕರು ಜೀವಂತವಾಗಿ ಬೆಂದು ಹೋದರು. ಅನೇಕರನ್ನು ಸೆರೆಹಿಡಿದು ಗಲ್ಲಿಗೇರಿಸಿದರು.

ಸುರಪುರದ ವೀರ ವೆಂಕಟಪ್ಪನಾಯಕನು ಬ್ರಿಟೀಷರ ವಿರುದ್ಧ ಹೋರಾಡಿದ ಕಲಿ. ಸುರಪುರದಲ್ಲಿ ಬ್ರಿಟೀಷ್ ರಾಜಕೀಯ ಸಲಹೆಗಾರರನ್ನು ನೇಮಿಸಿಕೊಳ್ಳಬೇಕು ಹಾಗೂ ಅವನ ಖರ್ಚು ವೆಚ್ಚಗಳನ್ನು ಭರಿಸಬೇಕೆಂಬ ಡಾಲ್ ಹೌಸಿಯ ಸಲಹೆಯನ್ನು ತಿರಸ್ಕರಿಸಿ ಬ್ರಿಟೀಷರ ವಿರುದ್ಧ ಹೋರಾಡಲು ಸಿದ್ಧನಾದನು. ಕುತಂತ್ರದಿಂದ ಬ್ರಿಟೀಷರು ಯಾವುದೇ ಸಮಯದಲ್ಲಿ ದಾಳಿ ಮಾಡಬಹುದೆಂದು ಅರಿತಿದ್ದ ವೆಂಕಟಪ್ಪನಾಯಕನು ಸಾಕಷ್ಟು ಸೈನ್ಯವನ್ನು ಸಂಘಟಿಸಿದನು. ನೇರವಾಗಿ ನಾಯಕನನ್ನು ಗೆಲ್ಲುವುದು ಅಸಾಧ್ಯವೆಂದು ಭಾವಿಸಿದ ಬ್ರಿಟೀಷರು ನಿಜಾಮನನ್ನು ತಮ್ಮ ಕಡೆ ಸೇರಿಸಿಕೊಂಡರು ಮತ್ತು ವಾಗಿನಗೇರಿ ಭೀಮರಾಯ ಎಂಬ ಮಂತ್ರಿಯನ್ನು ತಂತ್ರಗಾರಿಕೆಯಿಂದ ತಮ್ಮ ಕಡೆ ಮಾಡಿಕೊಂಡು ಸುರಪುರ ಕೋಟೆಯನ್ನು ಬೇಧಿಸಿ ವೆಂಕಟಪ್ಪನಾಯಕನನ್ನು ಸೆರೆಹಿಡಿದರು. ವೈರಿಗಳ ಸೆರೆಯಾಳಾಗಿರುವುದಕ್ಕಿಂತ ಸಾವೇ ಮೇಲೆಂದು ನಾಯಕ ಗುಂಡಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡನು. ಸಿಂಧೂರ ಲಕ್ಷ್ಮಣನೂ ಸಹ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿ ಶ್ರೀಮಂತರು ಬ್ರಿಟೀಷರ ಕಡುವೈರಿಯಾಗಿ ಬಡವರ, ದೀನದಲಿತರ ಪ್ರಿಯ ಮಗನಾಗಿ ಹೋರಾಡಿರುವ ಇತಿಹಾಸ ಇಂದಿಗೂ ಜನಪದರ ನಾಲಿಗೆಯ ಮೇಲಿದೆ. ಎಷ್ಟೋ ಜನ ಬೇಡ ಶೂರರು ಬ್ರಿಟೀಷರ ವಿರುದ್ಧ ಹೋರಾಡಿ ವೀರಮರಣ

ಹೊಂದಿರುವುದು ಚರಿತ್ರೆಯಿಂದ ಹೊರಗುಳಿದಿದೆ. ಅಂತಹ ಬೇಡ ನಾಯಕರ, ಶೂರರ ಇಫಿಉಟಈಜ್ಞ ಸಂಗ್ರಹ ಕೆಲಸ ಅತ್ಯಗತ್ಯವಾಗಿ ಆಗಬೇಕಾಗಿದೆ.

ಬೇಡರು ನಾಯಕರಾಗಿ, ಅಮರನಾಯಕರಾಗಿ, ದೊರೆಗಳಾಗಿ, ಪಾಳೆಯಗಾರರಾಗಿ ಆಳಿದ್ದು ಒಂದು ಇತಿಹಾಸ. ಇಂತಹ ನಾಯಕರ ವಂಶಸ್ಥರು ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ತೀರ ಹಿಂದುಳಿದಿರುವುದು ಕಂಡುಬರುತ್ತದೆ. ಒಂದು ಕಾಲಕ್ಕೆ ರಾಜ್ಯದ ಜನತೆಯ ಹಿತಕ್ಕೆ, ಜನಾಂಗದ ಹಿತಕ್ಕೆ ಹೋರಾಡಿದಂತಹ ಅನೇಕ ದೊರೆಗಳ ಬದುಕು ಶೋಚನೀಯವಾಗಿ ಕೊನೆಗೊಂಡಿದ್ದು ದುರಂತವೇ ಸರಿ. ನಾವು ದೊರೆಗಳು, ಪಾಳೆಯಗಾರರು ಎಂದು ಬೇಡರಿಂದ ಒಂದುಹಂತ ಮೇಲೇರಿದ ಇವರು ಮತ್ತೆ ಬೇಡರಾಗಿ ಗುರುತಿಸಿಕೊಳ್ಳ ದಿರುವುದು ಒಂದು ಕಾರಣವಾದರೂ ಅವರಾರು ಮತ್ತೆ ಬದಲಾದ ರಾಜಕೀಯಕ್ಕೆ ಹೊಂದಿ ಕೊಳ್ಳುವ ಮನಸ್ಸೇ ಮಾಡಲಿಲ್ಲ. ಅವರು ಈಗಲೂ ಕೂಲಿ, ಕೃಷಿಯಿಂದ ಜೀವನ ಮಾಡುತ್ತಿ ದ್ದರೂ ದೊರೆಗಳಾದ ನಾವು ಶ್ರೇಷ್ಠರು, ನಮ್ಮ ಮನೆಯ ಹತ್ತಿರವೇ ಎಲ್ಲವೂ ನಿರ್ಣಯ ವಾಗಬೇಕು. ನಾವು ಬೇಡರೊಡನೆ ವೈವಾಹಿಕ ಸಂಬಂಧ ಮಾಡುವುದಿಲ್ಲ. ನಮ್ಮದು ಕ್ಷತ್ರಿಯ ಸ್ಥಾನಮಾನದ ಮನೆತನ ಬೇಡ ಅರಸು ಮನೆತನದೊಡನೆ ಮಾತ್ರ ಸಂಬಂಧ ಎಂದು ಅರಮನೆಗೇ ಸೀಮಿತವಾಗಿ, ತಮ್ಮ ಮುಂದೆ ಭಗ್ನಗೊಂಡು ನಿಂತ ಕೋಟೆ-ಕೊತ್ತಲ, ಅರಮನೆ, ದೇವಾಲಯ ಇತರ ಸ್ಮಾರಕಗಳನ್ನು ನೋಡುತ್ತಾ ತಮ್ಮ ಪೂರ್ವಜರು ಆಳಿದ ದಿನಗಳನ್ನು ಮೆಲುಕು ಹಾಕುತ್ತಾ ಬದುಕು ಸವೆಸುತ್ತಿದ್ದಾರೆ. ಇಂತಹ ಅನೇಕ ಸ್ಮಾರಕಗಳ ಕಡೆ ಸರಕಾರ ಗಮನಕೊಟ್ಟಷ್ಟು ಅಂತಹ ಸ್ಮಾರಕಗಳನ್ನು ನಿರ್ಮಿಸಿದವರ ಬಗ್ಗೆಯೂ ಯೋಚಿಸಬೇಕು. ಆ ಸ್ಮಾರಕಗಳನ್ನು ನಿರ್ಮಿಸಿದವರಂತೂ ನಮ್ಮ ಮುಂದೆ ಇಲ್ಲ ಅವರ ವಂಶಸ್ಥರಾದರೂ ಇದ್ದರಲ್ಲ ಅವರನ್ನು ಗುರುತಿಸಿದರೆ, ಗೌರವಿಸಿದರೆ ಇತಿಹಾಸವನ್ನೇ ಗೌರವಿಸಿದಂತೆ.

ಗ್ರಂಥಋಣ


೧. ಕೃಷ್ಣಶರ್ಮ ಬೆಟಗೇರಿ, ೧೯೩೯, ಕರ್ನಾಟಕ ಜನಜೀವನ, ಸಮಾಜ ಪುಸ್ತಕಾಲಯ, ಧಾರವಾಡ.

೨. ತಿರುಮಲತಾತಾಚಾರ್ಯ ಶರ್ಮ, ೧೯೫೭, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಮೈಸೂರು ಸರಕಾರ, ಬೆಂಗಳೂರು.

೩. ಕೇಶವರಾವ್ ಎಂ.ವಿ., ಕೇಶವಭಟ್ಟ ಎಂ. (ಸಂ), ೧೯೭೦, ಕರ್ನಾಟಕದ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಕೇಶವಭಟ್ಟ ಮಂದಿರ, ಬೆಂಗಳೂರು.

೪. ವೆಂಕಟರತ್ನ ಎ.ವಿ., ೧೯೭೪, ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೫. ಜಯತೀರ್ಥರಾಜ ಪುರೋಹಿತ, ೧೯೭೫, ಕನಕಗಿರಿ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೬. ಮುದ್ದಾಚಾರಿ ಬಿ., ೧೯೭೫, ಮೈಸೂರು ಮರಾಠ ಬಾಂಧವ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೭. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ. (ಸಂ.), ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಚಿತ್ರದುರ್ಗ.

೮. ಕಪಟರಾಳ ಕೃಷ್ಣರಾವ್, ೧೯೭೭, ಸುರಪುರ ಸಂಸ್ಥಾನ ಇತಿಹಾಸ, ಮಂಜುನಾಥ ಪ್ರಕಾಶನ, ಬೆಂಗಳೂರು.

೯. ಈಶ್ವರಪ್ಪ ಎಂ.ಜಿ., ೧೯೮೨, ಮ್ಯಾಸಬೇಡರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೧೦. ರಾಜಣ್ಣ ಜಿ., ೧೯೮೨, ನಾಯಕ ಜನಾಂಗದ  ಇತಿಹಾಸ, ಚಳ್ಳಕೆರೆ.

೧೧. ಬಾಗೂರು ಆರ್. ನಾಗರಾಜಪ್ಪ, ೧೯೮೪, ಹೊಸದುರ್ಗದ ಸುತ್ತಮುತ್ತ, ಅಭಿವ್ಯಕ್ತಿ ವೇದಿಕೆ, ಹೊಸದುರ್ಗ.

೧೨. ಸಮೇತನಹಳ್ಳಿ ರಾಮರಾಯ, ೧೯೮೮, ಟಿಪ್ಪೂಸುಲ್ತಾನನ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೩. ಶರಣಬಸಪ್ಪ ಕೋಲ್ಕಾರ, ೧೯೯೪, ಕನಕಗಿರಿ ಪ್ರದೇಶದ ಸ್ಮಾರಕಗಳು, ಮೂರ್ತಿಶಿಲ್ಪಗಳು (ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ).

೧೪. ಸದಾಶಿವಪ್ಪ ಕುಂ.ಬಾ., ೧೯೯೬, ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫. ಯೋಗೀಶ್ವರಪ್ಪ ಡಿ.ಎನ್., ೧೯೯೯, ಹಾಗಲವಾಡಿ ನಾಯಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩ ೨೭೬.

೧೬. ರಾಜಶೇಖರಪ್ಪ ಬಿ., ೨೦೦೧, ಇತಿಹಾಸ ಕಥನ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೧೭. ವಸು ಎಂ.ವಿ. (ಸಂ.), ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩ ೨೭೬.

೧೮. ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್ (ಸಂ.), ೨೦೦೧, ಮಲೆ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩ ೨೭೬.

೧೯. ಹರ್ತಿಕೋಟೆ ವೀರೇಂದ್ರಸಿಂಹ, ತೇಜಸ್ವಿ ಕಟ್ಟಿಮನಿ (ಸಂ.), ೨೦೦೨, ಘಟ್ಟಿ ಹೊಸಹಳ್ಳಿ ಗಡ್ಡಿಗ, ಹರ್ತಿಕೋಟೆ, ಚಿತ್ರದುರ್ಗ.

೨೦. ಫ್ರಾನ್ಸಿಸ್ ಬುಕಾನನ್, ೧೯೮೮ (ಮರು ಮುದ್ರಣ), ಎ ಜ್‌ನಿರ ಥರ್ಮ್ ಥ್ರೋ ದ ಕಂಟ್ರಿಸ್ ಆಫ್ ದಿ ಮೈಸೂರು, ಕೆನರಾ, ಮಲ್ಬಾರ್, ವ್ಯಾಲ್ಯೂಮ್. ೧, ಏಶಿಯನ್ ಪಬ್ಲಿಕೇಷನ್ಸ್, ನ್ಯೂದೆಹಲಿ.

# ವಿಜಯನಗರ ಪೂರ್ವಕಾಲೀನ ಬೇಡರು
# (ತಳವಾರರು)

ಬೇಡ ಬುಡಕಟ್ಟಿನ ಉಪಪಂಗಡವಾದ ತಳವಾರರನ್ನು ಶಾಸನಗಳು ತಳಾರ, ತಳವಾರ, ತಳವಾರಿಕೆಯವರು ಮತ್ತು ಕಾವಲುಗಾರ ಎಂದು ಉಲ್ಲೇಖಿಸಿವೆ. ತಳವಾರ ಎಂದರೆ ಒಂದು ಸ್ಥಳದ ವಾರಸುದಾರ. ತಳವಾರಿಕೆ ಎಂಬುದು ಅಧಿಕಾರದ ಸಂಕೇತ. ಕ್ರಿ.ಪೂ. ೧೦೦ರ ಆಂಧ್ರದ ಭಟ್ಟಿಪ್ರೊಳು ಶಾಸನವು

[1]ತಳವಾರರ ಬಗ್ಗೆ ಮೊದಲು ಬೆಳಕು ನೀಡಿದೆ. ಇದರ ಪ್ರಕಾರ ತಳವಾರ ಎಂಬುವವನು ಒಬ್ಬ ಅಧಿಕಾರಿಯಾಗಿದ್ದನು. ಕ್ರಿ.ಶ. ೧೦೧೮ರ ಕೊಪ್ಪಳ ಜಿಲ್ಲೆ ಮತ್ತು ಅದೇ ತಾಲ್ಲೋಕಿನ ಹಲಗೇರಿ ಶಾಸನವು[2]ತಳಾರ ನಾಯಕ ಎರೆಯಮ್ಮನು ಬೆಣ್ಣೆಕಲ್ಲು ಸೀಮೆ ಯುದ್ಧದಲ್ಲಿ ಸತ್ತಾಗ ಅವನ ಸ್ಮರಣೆಗೋಸ್ಕರ ಸ್ಮಾರಕವನ್ನು (ವೀರಗಲ್ಲು) ನಿಲ್ಲಿಸಿದುದನ್ನು ತಿಳಿಸುತ್ತದೆ.ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೋಕಿನ ಚಿಕ್ಕಹನ ಸೋಗೆಯ ಕ್ರಿ.ಶ. ೧೨ನೇ ಶತಮಾನದ ಶಾಸನವು[3]ಹನಸೋಗೆಯಲ್ಲಿ ಹುಟ್ಟಿದ ಬಣ್ಣಜ್ಜನ ಮಗ ತಳಾ(ವಾ)ರ ಉತ್ತಜನು, ಗಾಳವನವಾಡಿ ಹನಿಬ್ಬನಾಯಕರು ಕೋಳಿಯೂರ ಕೋಟೆ ಯನ್ನು ಮುತ್ತಿದಾಗ ಅವರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ. ಅದೇ ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ಮಲೆಯೂರು ಗ್ರಾಮದ ಕ್ರಿ.ಶ. ೧೪೨೨ರ ಶಾಸನವು[4]ತಳವಾರಿಕೆಯಿಂದ ಬರುತ್ತಿದ್ದ ಸುಂಕವನ್ನು ತಿಳಿಸುತ್ತದೆ. ಕ್ರಿ.ಶ. ೧೪೬೫-೬೬ರ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೋಕಿನ ಬೆಳ್ಳಾಲೆ ಶಾಸನವು[5]ಹಳೆಯ ತಳವಾರಿಕೆಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೬೪೪ರ ಹಾಸನ ಜಿಲ್ಲೆ ಮತ್ತು ಅದೇ ತಾಲ್ಲೋಕಿನ ಗೊರೂರು ಶಾಸನವು[6]ತಳವಾರ ನರಸಿಂಗಣ್ಣನಿಗೆ ಅಲ್ಲಿಯ ಆಶೇಷ (ಎಲ್ಲಾ) ಮಹಾಜನಗಳು ಆ ಗ್ರಾಮವನ್ನು ಜೀರ್ಣೋದ್ಧಾರ ಮಾಡುವಂತೆ ಅರಿಕೆ ಮಾಡಿಕೊಂಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೪೬೭ರ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೋಕಿನ ಮುಳ್ಳೂರು ಶಾಸನವು[7]ತಳವಾರಿಕೆಯಿಂದ ಬರುತ್ತಿದ್ದ ಸುಂಕವನ್ನು ತಿಳಿಸುತ್ತದೆ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೋಕಿನ ಕ್ರಿ.ಶ. ೧೫೨೮ ಮತ್ತು ೧೫೫೦-೫೧ರ ಮೇಲುಕೋಟೆಯ ಎರಡು ಶಾಸನಗಳು[8]ಸಿಂಧು ಘಟ್ಟದವರನ್ನು ತಳವಾರರನ್ನಾಗಿ ಇಟ್ಟುಕೊಂಡಿದ್ದು ಹಾಗೂ ಅದರಿಂದ ಬರುತ್ತಿದ್ದ ಆದಾಯ ೨೬ ಗದ್ಯಾಣಗಳೆಂದು ತಿಳಿಸುತ್ತದೆ. ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ದಾಸನಪುರದ ಕ್ರಿ.ಶ. ೧೫೩೬ರ ಶಾಸನವು[9]ತಳವಾರಿಕೆಯಿಂದ ಬರುತ್ತಿದ್ದ ಸುಂಕವನ್ನು ತಿಳಿಸುತ್ತದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರಾ ತಾಲ್ಲೋಕಿನ ಅಮರಾಪುರಂನ ವೀರಗಲ್ಲು ಶಾಸನವು[10]ಕುರುಳೆಯ ನಾಯಕ ಎಂಬುವವನು ತುರುಗಳನ್ನು ಸೆರೆಹಿಡಿದಾಗ ತೈಲಂಗೆರೆಯ ತಳವಾರ ಬೊಮ್ಮಯ್ಯನಾಯಕನ ಮಗ ಮುಂಡಿನ ಬೊಮ್ಮಯ್ಯನು ಹೋರಾಟ ಮಾಡಿ ಸತ್ತಿದ್ದನ್ನು ತಿಳಿಸುತ್ತದೆ.

ಈ ಮೇಲಿನ ಶಾಸನಗಳಿಂದ ತಿಳಿದುಬರುವುದೇನೆಂದರೆ, ಸಾಮಾನ್ಯವಾಗಿ ಈ ಜವಾಬ್ದಾರಿಯನ್ನು ಅಂದರೆ ಒಂದು ಸ್ಥಳದ ರಕ್ಷಣೆಯ ಹೊಣೆಯನ್ನು ಆಡಳಿತಾಧಿಕಾರಿಗಳು ಬೇಟೆಯ ವೃತ್ತಿಯಲ್ಲಿ ಪರಿಣತಿಯನ್ನು ಮತ್ತು ಆಯುಧಗಳನ್ನು ಬೇಟೆಗಾರರು ಹೊಂದಿದ್ದ ರಿಂದ ಬೇಡರಿಗೆ ವಹಿಸಿ ಅವರಿಂದ ಕಂದಾಯವನ್ನು ಸಂಗ್ರಹಿಸುತ್ತಿದ್ದರು. ಈ ರೀತಿ ಒಂದು ಸ್ಥಳದ ರಕ್ಷಣೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರಿಂದ ಅಲ್ಲಿಯ ಉತ್ಪತ್ತಿಯ ಮೇಲೆ ಇವರ ಹತೋಟಿಯಿತ್ತು. ಇದು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಾಕಷ್ಟು ಪ್ರಮಾಣದಲ್ಲಿ ನೆರವಾಗಿರಬಹುದು.

**ಯೋಧರು**

ಬೇಡ ಜನಾಂಗದ ಮತ್ತೊಂದು ಉಪ ಪಂಗಡವಾದ ಪರಿವಾರದವರ ಬಗ್ಗೆ ತಮಿಳು ಶಾಸನಗಳು ಬೆಳಕು ಬೀರುತ್ತವೆ. ಕನ್ನಡ ನಿಘಂಟಿನ ಪ್ರಕಾರ ಪರಿವಾರ ಎಂದರೆ ಸುತ್ತಲಿನ ಜನ. ಪರಿಚಾರಕ ಎಂದರೆ ಸೇವಕ. ಅಂದರೆ ಯಾರು ಆಳರಸರ ಸೇವೆಯಲ್ಲಿದ್ದರೋ ಅಂತಹವರನ್ನು ಪರಿವಾರ ಅಥವಾ ರಾಜಪರಿವಾರದವರೆಂದು ಕರೆಯಲಾಗಿದೆ. ಎಡ್ಗರ್ ಥರ್ಸ್ಟನ್‌ರವರು ಕ್ರಿ.ಶ. ೧೮೯೧ರ ಮದ್ರಾಸ್ ಜನಗಣತಿ ಆಧಾರದ ಮೇಲೆ ಇವರು ಮೂಲತಃ ತೆಲುಗಿನವರಾಗಿದ್ದು, ಬೇಟೆಯ ವಂಶಪರಂಪರೆಯಾದ ಕುಲಕಸುಬೆಂದು ಅಭಿಪ್ರಾಯಪಟ್ಟಿದ್ದಾರೆ. ಇವರು ಮುಂದುವರಿದು ಕ್ರಿ.ಶ. ೧೯೦೧ರ ಜನಗಣತಿಯ ಆಧಾರದ ಮೇಲೆ ಇವರು ಸಹ ಪಲ್ಲಕ್ಕಿ ಅಥವಾ ಮೇಣೆಯನ್ನು ಹೊರುವ ಕೆಲಸದಲ್ಲಿ ನಿಯೋಜಿತ ರಾಗಿದ್ದು, ಬೋಯಿ ಅಥವಾ ಪರಿವಾರದವರೆಂದು ಕರೆದಿದ್ದಾರೆ.[11] ದಕ್ಷಿಣ ಭಾರತದ ಪ್ರಸಿದ್ಧ ಇತಿಹಾಸಕಾರ ಕೆ.ಎ. ನೀಲಕಂಠಶಾಸ್ತ್ರಿಯವರುಇವರ ಬಗ್ಗೆಹೆಚ್ಚು ಬೆಳಕು ಚೆಲ್ಲಿದ್ದಾರೆ. ಇವರು ತಮ್ಮ ಪುಸ್ತಕ 'ದಿ ಚೋಳಾಸ್'ದಲ್ಲಿ ಚೋಳ ರಾಜರಾಜನ ಮನೆಯ ಸಿಬ್ಬಂದಿಯು (Royal household) ಹಲವಾರು ರೀತಿಯ ಸೇವಕರನ್ನು ಒಳಗೊಂಡಿದ್ದು, ಅದರಲ್ಲಿ ರಾಜನ ಪ್ರಮುಖ ಅಂಗರಕ್ಷಕರಾಗಿದ್ದವರನ್ನು ಪರಿವಾರದವರೆಂದು ತಂಜಾವೂರಿನ ಶಾಸನವನ್ನಾಧರಿಸಿ ಹೇಳಿದ್ದಾರೆ.[12] ಈ ಶಾಸನವು ಒಂದನೇ ರಾಜರಾಜನ (ಕ್ರಿ.ಶ. ೯೮೫-೧೦೧೪) ಕಾಲಕ್ಕೆ ಸೇರಿ ದ್ದಾಗಿದೆ. ಇವರ ನಂತರ ದಕ್ಷಿಣ ಭಾರತದ ಇತಿಹಾಸದ ಬಗ್ಗೆಹೆಚ್ಚು ಬೆಳಕು

ಬೀರಿದವರೆಂದರೆ ಟಿ.ವಿ. ಮಹಾಲಿಂಗಮ್ ಅವರು. ಇವರು ತಮ್ಮ 'ಸೌಥ್ ಇಂಡಿಯನ್ ಪಾಲಿಟಿ'ಯಲ್ಲಿ ಚೋಳರ ಕಾಲದ ಸೈನಿಕ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸುವಾಗ ಚೋಳರ ಕಾಲ್ದಳವು (Infantry) ಹಲವಾರು ತುಕಡಿಗಳನ್ನು (Regiments) ಹೊಂದಿತ್ತು ಎಂದಿದ್ದಾರೆ.[13] ಒಂದನೇ ರಾಜರಾಜನ ತಂಜಾವೂರು ಶಾಸನದ ಪ್ರಕಾರ ಅವನ ಸೈನ್ಯದಲ್ಲಿ ೩೧ ತುಕಡಿಗಳಿ ದ್ದವು. ಅವುಗಳೆಂದರೆ, ಮುಮ್ಮಡಿ ಸೋಳ ತೇರಿಂದ ಪರಿವಾರಟ್ಟರ್, ಕೇರಳಾಂತಕ ತೇರಿಂದ ಪರಿವಾರಟ್ಟಾರ್, ಮೂಲ ಪರಿವಾರ ವಿಟ್ಟೇರು ಅಥವಾ ಜನನಾಥ ತೇರಿಂದ ಪರಿವಾರಟ್ಟಾರ್, ಸಿಂಗಳಾಂಕ ತೇರಿಂದ ಪರಿವಾರಟ್ಟಾರ್ ಮತ್ತು ಪರಿವಾರ ಮೆಯಕಪ್ಪಾರಗಲ್ ಇತ್ಯಾದಿ. ಈ ತುಕಡಿಗಳಿಗೆ ರಾಜನ ಬಿರುದು ಅಥವಾ ಹೆಸರನ್ನು ಇಡಲಾಗಿತ್ತು. ಇಲ್ಲಿಯೂ ಸಹ ಗಮನಿಸ ಬೇಕಾದ ಅಂಶವೆಂದರೆ, ಬೇಟೆಗಾರರು ಆಯುಧಗಳನ್ನು ಉಪಯೋಗಿಸುವುದರಲ್ಲಿ ಪರಿಣತ ರಾಗಿದ್ದರಿಂದ ಅವರನ್ನು ಆಳರಸರು ತಮ್ಮ ಸೇವೆಯಲ್ಲಿ ನಿಯೋಜಿಸಿಕೊಂಡು ಅವರ ತಂಡಕ್ಕೆ ಪರಿವಾರ ಎಂಬ ಹೆಸರನ್ನು ಇಟ್ಟಿರುವುದು. ಚೋಳರ ಕ್ರಿ.ಶ. ೯೪೯-೫೦ರಲ್ಲಿ ತಕ್ಕೋಳಂ ಯುದ್ಧದಲ್ಲಿ ರಾಷ್ಟ್ರಕೂಟರೊಡನೆ ಹೋರಾಡಾಲು ಇಂತಹ ತುಕಡಿ (ಪರಿವಾರ ದವರನ್ನು)ಗಳನ್ನು ಬಳಸಿರುವುದು ಗಮನಾರ್ಹವಾದದ್ದು. ಇಲ್ಲಿಯೂ ಸಹ ಬೇಡರು ಆಳರಸರ ಸೇವೆಯಲ್ಲಿ ಸೇರಿಕೊಂಡು ಜೀವನ ಸಾಗಿಸುತ್ತಿದ್ದುದು ಕಂಡುಬರುತ್ತದೆ.

**ಆಳರಸರ ಸೇವೆ**

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೋಕಿನ ಕಣಕಟ್ಟೆಯ ಶಾಸನಗಳು ಬೇಡರಿಗೆ ಬೋಯಾ ಮತ್ತು ಬೋವ ಎಂಬ ಹೆಸರಿದ್ದುದನ್ನು ತಿಳಿಸುತ್ತವೆ.[14] ಕನ್ನಡ ನಿಘಂಟಿನ ಪ್ರಕಾರ ಬೋಯಾ ಅಥವಾ ಬೋವಾ ಎಂದರೆ ಪಲ್ಲಕ್ಕಿ/ಮೇಣೆಯನ್ನು ಹೊರುವವರು ಎಂದರ್ಥ. ಇವರು ಆಳರಸರ ಪಲ್ಲಕ್ಕಿಯನ್ನು ಹೊರುವ ಸೇವೆಯಲ್ಲಿದುದರಿಂದ ಇವರಿಗೂ ಸಹ ಕೆಲಕಾಲ ನಂತರ ಕೆಲವು ಸ್ಥಾನಮಾನಗಳನ್ನು ನೀಡಿ ಗೌರವಿಸಿದಂತೆ ಕಾಣುತ್ತದೆ.

**ಸ್ಥಳೀಯ ಅಧಿಕಾರಿಗಳು**

ಕ್ರಿ.ಶ. ೧೪ನೇ ಶತಮಾನದಿಂದ ಬೇಡರ ಸ್ಥಳೀಯ ಅಧಿಕಾರಿಗಳಾಗಿ ಆಡಳಿತ ನಡೆಸಿದ್ದನ್ನು ಶಾಸನಗಳು ತಿಳಿಸುತ್ತವೆ. ಉದಾ. ಮೈಸೂರು ಜಿಲ್ಲೆ ಚಾಮರಾಜನಗರ ತಾಲೋಕಿನ ಹರದನ ಹಳ್ಳಿಯ ಕ್ರಿ.ಶ. ೧೩೨೪ರ ಶಾಸನವು[15] ಬೇಡಗಂಪಣ ರಾಯಣ್ಣ ನಾಯಕನು ಕುನ್ನಪನಾಗರ ಸೀಮೆಯಿಂದ ಹೊಯ್ಸಳ ದೊರೆ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಆಳುತ್ತಿದ್ದುದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೧೩ರ ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೋಕಿನ ಶಾಸನವು[16] ಕುರುವತ್ತಿಯ ಬೇಡಗಾವುಂಡನು ಭೂಮಿಯನ್ನು ದಾನಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೫೭ರ ಬೇಲೂರು ತಾಲ್ಲೋಕಿನ ಕಟ್ಟೆಸೋಮನಹಳ್ಳಿಯ ಶಾಸನವು[17] ಹೊಯ್ಸಳ ದೊರೆ ಒಂದನೇ ನರಸಿಂಹನ ಸಾಮಂತ ಬೇಟೆಯ ಉದಯಾದಿತ್ಯ ನಾಯಕನು ಉತ್ತರಾಯಣ ಸಂಕ್ರಮಣದಂದು ಬಿಲ್ಲೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಟ್ಟಿದ್ದನ್ನು ತಿಳಿಸುತ್ತದೆ. ಹಂಪಿ ಪರಿಸರದ ರಘುನಾಥ ದೇವಾಲಯ ಪರಿಸರದ ಕ್ರಿ.ಶ. ೧೩೮೦ರ[18] ಶ್ರೀ ವೀರಪ್ರತಾಪ ಹರಿಹರ ಮಹಾರಾಯರ ಮನೆಯ ಎಡವಂಕದ ಬೇಟೆಗಾರ ಮಲಗೆಯನಾಯ್ಕನ ಮಗ ಬದ್ದೆಯನಾಯ್ಕನು ಬೇಟೆಗಾರರ ಹೆಬ್ಬಾಗಿಲು ಮೂಡಣ ದಿಕ್ಕಿನ ಬರತೆಯ ಮೈಲಾರ ದೇವರ ಪ್ರತಿಷ್ಠೆ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೪೧೩ರ ಮೈಸೂರು ಜಿಲ್ಲೆ ಚಾಮರಾಜ ನಗರ ತಾಲ್ಲೋಕಿನ ಮೂಡಲ ಅಗ್ರಹಾರದ ಶಾಸನವು[19] ಬಿಲ್ಲಗಾವುಂಡನು ಉಮ್ಮತ್ತೂರಿನ ಬಳಿ ಅಗ್ರಹಾರವೊಂದನ್ನು ಸ್ಥಾಪಿಸಿದುದನ್ನು ತಿಳಿಸುತ್ತದೆ. ಅದೇ ಜಿಲ್ಲೆಯ ಕೆ.ಆರ್.ನಗರ ತಾಲ್ಲೋಕಿನ ಕ್ರಿ.ಶ. ೧೫೫೭ರ ಗಳಿಗೆಕೆರೆ ಶಾಸನವು[20] ಹೊಳೆನರಸೀಪುರದ ದೊರೆ ವೆಂಕಟಪ್ಪ ನಾಯಕನು ಹಂಪಾಪುರವನ್ನು ಅವನ ತಾಯಿಯ ಪುಣ್ಯಕ್ಕೋಸ್ಕರ ರಾಮಪುರ ಎಂಬ ಅಗ್ರಹಾರವಾಗಿ ಮಾಡಿ ಗಳಿಗೆಕೆರೆಯನ್ನು ವಿಟ್ಟಲಭಟ್ಟರಿಗೆ ಅಲ್ಲಿಯ ಬೇಟೆ ಮತ್ತು ಬೇಟೆಗಾರರ ಸುಂಕದಿಂದ ಬಂದ ಆದಾಯವನ್ನು ಸರ್ವಮಾನ್ಯವಾಗಿ ಬಿಟ್ಟಿದ್ದನ್ನು ತಿಳಿಸುತ್ತದೆ. ಹಾಸನ ಜಿಲ್ಲೆ ಹೊಳೇನರಸೀಪುರ ತಾಲ್ಲೋಕಿನ ಕ್ರಿ.ಶ. ೧೬೫೮ರ ಕಲ್ಲುಬ್ಯಾಡರಹಳ್ಳಿ ಶಾಸನವು[21] ರಂಗಪ್ಪನಾಯಕನ ಮಗ ನರಸಿಂಹನಾಯಕನು ನರಸಿಂಹಪುರಕ್ಕೆ ಸೇರಿದ (ನರಸಿಂಹ ಸಮುದ್ರ) ಬೇಡರಹಳ್ಳಿಯನ್ನು ಹರಿಪಂಡಿತನಿಗೆ ದಾನ ಮಾಡಿದ್ದನ್ನು ತಿಳಿಸುತ್ತದೆ.

ಮೇಲಿನ ವಿವರಣೆಗಳಿಂದ ತಿಳಿದುಬರುವುದೇನೆಂದರೆ ಬೇಡರು ಸ್ಥಳೀಯ ಅಧಿಕಾರಿಗಳಾಗಿ ಕಾರ್ಯವಹಿಸಿಕೊಂಡಿದ್ದರಿಂದ ಸಹಜವಾಗಿ ಉತ್ಪಾದನಾ ವಸ್ತುಗಳಾದ ಭೂಮಿ, ಮತ್ತಿತರ ವಸ್ತುಗಳು ಇವರ ಹಿಡಿತಕ್ಕೊಳಪಟ್ಟವು. ಇದರಿಂದಾಗಿ ಇವರು ಸಹ ಕಾಲಕ್ರಮೇಣ ಭೂಮಾಲೀಕರಾದರು. ಇದರಿಂದಾಗಿ ಆಡಳಿತದ ಜೊತೆಗೆ ಕೃಷಿ ಚಟುವಟಿಕೆಗಳನ್ನು ತೀವ್ರ ಗೊಳಿಸಿ ಆರ್ಥಿಕವಾಗಿ ಸಬಲರಾದರು. ಸಮಾಜದಲ್ಲಿ ತಮ್ಮ ಸ್ಥಾನ ಮಾನಗಳನ್ನು ಪಡೆದು ಕೊಳ್ಳಲು ಮತ್ತು ಇದ್ದ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು ಹಾಗೂ ಹೆಚ್ಚಿಸಿಕೊಳ್ಳಲು ಇವರು ಸಹ ಸಮಾಜದ ಉನ್ನತ ವರ್ಗದವರಂತೆ ಬ್ರಾಹ್ಮಣರಿಗೆ, ದೇವಾಲಯಗಳಿಗೆ ಭೂಮಿಯನ್ನು ದಾನ ಮಾಡುವುದನ್ನು ಪ್ರಾರಂಭಿಸಿದರು.

ಶಾಸನಗಳ ಜೊತೆಗೆ ಕರ್ನಲ್ ಕೊಲಿನ್ ಮೆಕೆಂಜಿಯವರು ಕ್ರಿ.ಶ. ೧೯ನೇ ಶತಮಾನದ ಪ್ರಾರಂಭದಲ್ಲಿ ಸಂಗ್ರಹಿಸಿದಂತಹ ಕೈಫಿಯತ್ತುಗಳು (ಸ್ಥಳಪುರಾಣಗಳು) ಸಹ ಬೇಡ ಸಮುದಾಯದ ಆರ್ಥಿಕ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತವೆ. ಉದಾ. ಹತ್ತಿಬೆಳೆಗಲ್ಲು ಕೈಫಿಯತ್ತು[22] ಬೇಡರು ಮಾಡುತ್ತಿದ್ದ ಕೆಲಸ ಮತ್ತು ಅವರು ಅಧಿಕಾರಕ್ಕೆ ಬರಲು ನೆರವಾದ ಅಂಶಗಳನ್ನು ತಿಳಿಸುತ್ತದೆ. ಇದರ ಪ್ರಕಾರ ಬೆಳಕಲ್ಲುಗುಡ್ಡದಲ್ಲಿ 'ಬೇಡರು ಪ್ರಾಬಲ್ಯ ಆಗಲಿಕ್ಕೆ ಕಾರಣ ವಿಜಯನಗರವು ತುರುಕರಿಂದ ಹಾಳಾದ ಮೇಲೆ ಈ ಬ್ಯಾಡರು (ಕೋಟೆ) ಕಟ್ಟಿಸಿಕೊಂಡರು. ಈ ಬ್ಯಾಡರು ೧೫ ಗ್ರಾಮಕ್ಕೆ ಕಾವಲಿ ತಳವಾರಿಕೆ ಮಾಡಿಕೊಂಡು ಅಧಿಕಾರ ಯಿವರೆ ಮಾಡಿಕೊಂಡು, ದಿವಾಣಕ್ಕೆ ಹಣ ಕೊಡುತಾಯಿದ್ದರು…. ಯೀ ದಿನದಲ್ಲು ಕಾವಲ ಸೋಮೆಳನಾಯಕನು ಕಾವಲ ಮಾಡಿಕೊಂಡು ಯಿದ್ದನು…. ಕಾವಲಿ ಬುಚ್ಚಪ್ಪ ನಾಯಕ ಮಗ ಚಿಕ್ಕ ಸೋಮೆಳನಾಯಕ ಕಾವಲಿ ಮಾಡಿಕೊಂಡು ಯಿದ್ದನು….'. ಇದರ ಪ್ರಕಾರ ಬೇಡರು ತಮ್ಮ ಜೀವನ ಸಾಗಿಸಲು ಕಾವಲುಗಾರಿಕೆ ಮತ್ತು ತಳವಾರಿಕೆ ಕೆಲಸ ಮಾಡುತ್ತಿದ್ದರು. ಬಳ್ಳಾರಿ ತಾಲ್ಲೋಕಿನ ಭಟ್ಟರಹಳ್ಳಿ ಕೈಫಿಯತ್ತು[23] ಬೇಡರ ಕಸುಬು ಮತ್ತು ಸಾಮಾಗ್ರಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಇದರ ಪ್ರಕಾರ 'ಕೆಲಮಂದಿ ಬ್ಯಾಡರ ನಾಯಕರು ನಾಯಿ, ಬಡಿಕೋಲು, ತಲೆಮೇಲೆ ಗಂಟು, ಕೈಯಲ್ಲಿ ಡ್ಯಾಗಿ ತೆಗೆದುಕೊಂಡು ಹೋದರು. ಕೈಯಲ್ಲಿ ಹಕ್ಕಿಪಂಜರ ಸಹಾ ತೆಗೆದುಕೊಂಡು ಹೋದರು. ಬಲೆಗಳು ಸಹ ಅವರವರ ಬೇಟೆಗಾರ್‍ರು ಅವರ ಸಾಮಾನು ತೆಗೆದುಕೊಂಡು ಹೋದರು…'. ಅರಿಕುಟಾರದ (ಉಮ್ಮತ್ತೂರು) ಕೈಫಿಯತ್ತು[24] ವೀರಭದ್ರನಾಯಕನು ಬೇಟೆ ಮಾರ್ಗವಾಗಿ ನಾಯಿ ಕಟ್ಟಿಕೊಂಡು ಬಂದು ಬೇಡರಪುರ ಗ್ರಾಮದಲ್ಲಿ ನೆಲೆಸಿದ್ದನ್ನು ತಿಳಿಸುತ್ತದೆ. ತಲಕಾಡಿನ ಎರಡು ಕೈಫಿಯತ್ತುಗಳು[25] ಗಂಗರ ರಾಜಧಾನಿಯಾದ ತಲಕಾಡನ್ನು ಹೇಗೆ ಇಬ್ಬರು ಬೇಡರಾದ ತಲ ಮತ್ತು ಕಾಡ ಎಂಬುವರು ಕಟ್ಟಿದರೆಂಬುದನ್ನು ತಿಳಿಸುತ್ತದೆ. ಇದರ ಪ್ರಕಾರ '…. ಯೀಶ್ವರಗೆ ಪೂಜೆಯನ್ನು ಮಾಡಿಕೊಂಡು ಇರಲಾಗಿ, ತಲ ಕಾಡ ಯೆಂಬ ಯಿಬ್ಬರು ಕಿರಾತರು ಬೇಟೆಗೋಸ್ಕರ ಬಂದಂತವರಾಗಿ ಯೀ ಗಜಗಳು ವೃಕ್ಷಪೂಜೆಯನ್ನು ಮಾಡುತ್ತಾಯಿದ್ದುದನ್ನು ನೋಡಿ ಆಶ್ಚರ್ಯಪಟ್ಟು ಗಜಗಳು ಹೊರಟುಹೋದ ಬಳಿಕ ಕೊಡಲಿಯಿಂದ ಆ ಮರವನ್ನು ಭೇದಿಸಿದಲ್ಲಿ ಸ್ವಾಮಿ ಶಿರಸ್ಸಿನ ಮೇಲೆ ಪೆಟ್ಟು ಬೀಳಲಾಗಿ ರಕ್ತಪ್ರಹಾರವಾಗಲು ಆ ಕಿರಾತಕರು ಮೂರ್ಚಿತರಾಗಲು….. ತಲಕಾಡ ಎಂಬ ಯಿಬ್ಬರು ಬೇಡರಿಗೆ ಸಾಯುಜ್ಯ ಪದವಿಯನ್ನು ಕೊಟ್ಟು ಈ ಕ್ಷೇತ್ರವು ನಿಮ್ಮ ಹೆಸರಿನಿಂದ ತಲಕಾಡು ಎಂಬ ನಾಮಧೇಯವುಳ್ಳದ್ದಾಗಲಿ ಎಂದು ಅಪ್ಪಣೆಕೊಟ್ಟರು…'. ಇದರಿಂದ ದಕ್ಷಿಣ ಕರ್ನಾಟಕದಲ್ಲಿಯೂ ಸಹ ಬೇಡರಿಗೆ ಕಿರಾತಕ ಎಂದು ಕರೆಯುತ್ತಿದ್ದುದು ಕಂಡುಬರುತ್ತದೆ.

ಈ ಕೈಫಿಯತ್ತುಗಳಿಂದ ತಿಳಿದುಬರುವುದೇನೆಂದರೆ, ಬೇಡರ ಕಸುಬು ಬೇಟೆಯಾಗಿದ್ದು, ಬೇಟೆಗಾಗಿ ನಾಯಿ, ಬಲೆ, ಪಂಜರ, ಕೊಡಲಿ ಮುಂತಾದ ಆಯುಧಗಳನ್ನು ಹೊಂದಿದ್ದರು. ಬೇಡರು/ಬೇಟೆಗಾರರು ವಿಜಯನಗರದ ಕಾಲದಲ್ಲಿ ಮತ್ತು ಅದಕ್ಕೆ ಮುಂಚೆ ಆಳರಸರ ಸೇವೆಯಲ್ಲಿದ್ದು ಕೆಲವು ಸೈನಿಕ ಮತ್ತು ಆಡಳಿತ ಸ್ಥಾನಮಾನಗಳನ್ನು ಹೊಂದಿದ್ದರು. ಆದರೆ ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯವು ಹಾಳಾಗಲು, ಇವರು ತಮ್ಮ ಸ್ಥಳಗಳಲ್ಲಿ ಅಥವಾ ಪ್ರಾಂತ್ಯಗಳಲ್ಲಿ ಸ್ವತಂತ್ರ ರಾಜರಾಗಿ (ತುಂಡರಸರು) ಕರ್ನಾಟಕದ ಹಲವು ಭಾಗಗಳಲ್ಲಿ ಅಧಿಕಾರಕ್ಕೆ ಬಂದರು.

ಈ ಮೇಲಿನ ದಾಖಲೆಗಳಿಂದ ತಿಳಿದುಬರುವುದೇನೆಂದರೆ, ಬೇಡ (ನಾಯಕ) ಜನಾಂಗವು ಇತರ ಜನಾಂಗಗಳಂತೆ ತನ್ನದೇ ಆದ ಇತಿಹಾಸ ಹೊಂದಿದೆ. ಇವರ ಮುಖ್ಯ ಕಸುಬು ಬೇಟೆಗಾರಿಕೆ. ಆದ್ದರಿಂದ ಇವರು ಹೆಚ್ಚಾಗಿ ಗುಡ್ಡಗಾಡು ಮತ್ತು ನದಿ, ಹಳ್ಳ ಕೊಳ್ಳಗಳ ಪ್ರದೇಶಗಳಲ್ಲಿ

ವಾಸವಾಗಿದ್ದರು. ಅದಕ್ಕಾಗಿಯೇ ಇವರನ್ನು ಮಲೆಪರ್ ಎಂದು ಕ್ರಿ.ಶ. ೭ನೇ ಶತಮಾನದಲ್ಲಿ ಕರೆಯಲಾಗಿದೆ. ತಮ್ಮ ಆಹಾರವನ್ನು ಪಡೆಯಲು ಬೇಟೆಯನ್ನು ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡು, ಬೇಟೆಗಾಗಿ ನಾಯಿ, ಬಲೆ, ಪಂಜರ, ಬಿಲ್ಲು ಮುಂತಾದ ಆಯುಧಗಳನ್ನು ಕಾಲಕ್ರಮೇಣ ಹೊಂದಿಸಿಕೊಂಡರು. ಬೇಟೆ ಸಿಗದಿದ್ದ ಸಮಯ ದಲ್ಲಿ ಇವರು ದಾರಿಹೋಕರನ್ನು ಲೂಟಿ ಮಾಡಿ ತಮ್ಮ ಹಸಿವನ್ನು ನಿವಾರಿಸಿಕೊಳ್ಳುತ್ತಿದ್ದರು. ಹೀಗಾಗಿ ಇವರು ನಾಗರೀಕ ಸಮಾಜಕ್ಕೆ ಒಂದು ರೀತಿಯ ಪಿಡುಗಾಗಿ ಬೇಡವಾದರು. ಆದರೆ ಆಳರಸರಿಗೆ ಇವರ ಅವಶ್ಯಕತೆ ಹೆಚ್ಚಾಗಿದ್ದಂತೆ ಕಂಡುಬರುತ್ತದೆ. ಏಕೆಂದರೆ ಇವರು ಪ್ರಾಣಿಗಳನ್ನು ಕೊಲ್ಲುವುದರಲ್ಲಿ ಮತ್ತು ದಾರಿಹೋಕರನ್ನು ತಡೆದು ಹೆದರಿಸಿ ಲೂಟಿ ಮಾಡುವುದರಲ್ಲಿ ನಿಸ್ಸೀಮರಾಗಿದ್ದರಿಂದ ಆಳರಸರು ಮೊದಮೊದಲು ತಮ್ಮ ಪ್ರಾಣವನ್ನು ಕಾಪಾಡಿಕೊಳ್ಳಲು ಇವರನ್ನು ತಮ್ಮ ಅಂಗರಕ್ಷಕರನ್ನಾಗಿ ಸೇರಿಸಿಕೊಂಡರು. ನಂತರ ತಮ್ಮ ನಾಡನ್ನು ಶತ್ರುವಿನಿಂದ ಕಾಪಾಡಲು ಹಾಗೂ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಶತ್ರು ನೆಲ, ಜಲ, ಹೆಣ್ಣು ಮತ್ತು ದನಕರುಗಳನ್ನು ಅಪಹರಿಸಲು ಇವರನ್ನು ಹೆಚ್ಚುಹೆಚ್ಚಾಗಿ ತವ್ಮ ಸೇವೆಯಲ್ಲಿ ನಿಯೋಜಿಸಿಕೊಂಡು, ಇವರ ಸ್ವಾಮಿನಿಷ್ಠೆ ಮತ್ತು ಕರ್ತವ್ಯಗಳನ್ನು ಗಮನಿಸಿ ಇವರಿಗೆ ರಾಯ, ವೀರ, ಗಾವುಂಡ, ನಾಯಕ, ದಣ್ಣಾಯಕ ಇತ್ಯಾದಿ ಬಿರುದುಗಳನ್ನು ನೀಡಿ ಗೌರವಿಸಲಾರಂಭಿಸಿದರು. ಕ್ರಿ.ಶ. ೭ನೇ ಶತಮಾನದಲ್ಲಿ ಇವರನ್ನು ಮೊತ್ತಮೊದಲ ಬಾರಿಗೆ ನಾವು ಶಾಸನಗಳಲ್ಲಿ ನೋಡುವುದು ತುರುಗಳನ್ನು ಅಪಹರಿಸುವುದಕ್ಕೋಸ್ಕರ ತುರುಗಾಳಗ ಗಳಲ್ಲಿ ಬಳಸಿಕೊಂಡಿರುವುದು. ನಂತರದ ಕಾಲದಲ್ಲಿ ಇವರು ತಮ್ಮ ದೈಹಿಕ ಸಾಮರ್ಥ್ಯ ಮತ್ತು ಆಯುಧಗಳಲ್ಲಿ ನಿಪುಣತೆ ಸಾಧಿಸಿದ್ದರಿಂದ ಇವರನ್ನು ತಳವಾರರನ್ನಾಗಿ, ಸೈನಿಕರಾಗಿ (ಪರಿವಾರ) ಮತ್ತು ಆಡಳಿತಾಧಿಕಾರಿಗಳಾಗಿ ಹಲವಾರು ರಾಜಮನೆತನಗಳು ನೇಮಿಸಿ ಕೊಂಡವು. ಅಂದಿನಿಂದ ಅವರು ಕ್ರಮೇಣವಾಗಿ ಭೂಮಾಲೀಕರಾದರು. ಕ್ರಿ.ಶ. ೧೬ನೇ ಶತಮಾನದಲ್ಲಿ ವಿಜಯನಗರದ ಪತನದ ನಂತರ ಈ ಅಧಿಕಾರಿಗಳು ತಮ್ಮ ತಮ್ಮ ಪ್ರಾಂತ್ಯದ ಮೇಲೆ ಸಾರ್ವಭೌಮತ್ವವನ್ನು ಸ್ಥಾಪಿಸಿ ಸ್ವತಂತ್ರ ರಾಜರಾಗಿ ಹೊರಹೊಮ್ಮಿ ೧೮ನೇ ಶತಮಾನದಲ್ಲಿ ಪ್ರಬಲ ರಾಜಸಂಸ್ಥಾನಗಳಾಗಿ ಬೆಳೆದವು.

* * *

---

[1] ಸುದರ್ಶನ ಶೆನಿವರತ್ನೆ, ಕಳಿಂಗ ಅಂಡ್ ಆಂಧ್ರ :ದಿ ಪ್ರೊಸೆಸ್ ಆಫ್ ಸೆಕೆಂಡರಿ ಸ್ಟೇಟ್ ಫಾರ್ಮೇಶನ್ ಇನ್ ಆರ್ಲಿ ಇಂಡಿಯಾ, ಇನ್ ಇಂಡಿಯನ್ ಹಿಸ್ಟಾರಿಕಲ್ ರೆವಿವ್ಯೆ, ಸಂ. ೭, (ದೆಹಲಿ, ೧೯೮೧), ಪುಟಗಳು. ೫೪-೬೯.

[2] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೨, ಕೊಪ್ಪಳ. ಪುಟ. ೨೧.

[3] ಎ.ಕ. ಸಂಪುಟ. ೫, ಕೃಷ್ಣರಾಜನಗರ, ಪು. ೪೩.

[4] ಎ.ಕ. ಸಂಪುಟ ೪, ಚಾಮರಾಜನಗರ, ಪುಟ. ೩೫೫.

[5] ಎ.ಕ. ಸಂಪುಟ. ೬, ಪಾಂಡವಪುರ, ಪುಟ. ೧೨೩.

[6] ಅದೇ., ಸಂಪುಟ ೮, ಹಾಸನ, ಪುಟ. ೨೦೧.

[7] ಅದೇ., ಸಂಪುಟ ೩, ನಂಜನಗೂಡು, ಪುಟ. ೧೮೧.

[8] ಅದೇ., ಸಂಪುಟ ೬, ಪಾಂಡವಪುರ, ಪುಟಗಳು. ೧೨೩-೧೨೪.

[9] ಅದೇ., ಸಂಪುಟ ೪, ಚಾಮರಾಜನಗರ, ಪುಟ. ೩೦೨.

[10] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೫, ಭಾಗ. ೧, ಅಮರಾಪುರಂ, ಪುಟ. ೬೩.

[11] ಎಡ್ಗರ್ ಥರ್ಸ್ಟನ್, ಪೂರ್ವೋಕ್ತ, ಪುಟ. ೨೧೮.

[12] ನೀಲಕಂಠಶಾಸ್ತ್ರಿ ಕೆ.ಎ., ದಿ ಚೋಳಾಸ್, ಮರುಮುದ್ರಣ, (ಮದ್ರಾಸ್, ೧೯೮೪), ಪುಟ. ೪೫೦.

[13] ಮಹಾಲಿಂಗಮ್ ಟಿ.ವಿ., ಸೌಥ್ ಇಂಡಿಯನ್ ಪಾಲಿಟಿ, (ಮದ್ರಾಸ್, ೧೯೬೭), ಪುಟಗಳು. ೨೬೪-೬೮.

[14] ಎ.ಕ. ಸಂಪುಟ ೧೦, ಅರಸೀಕೆರೆ, ಪುಟ. ೮೬, ೮೭, ೮೮ ಮತ್ತು ೯೦.

[15] ಅದೇ., ಸಂಪುಟ ೪, ಚಾಮರಾಜನಗರ, ಪುಟ. ೨೯೨.

[16] ಅದೇ., ಸಂಪುಟ ೩, ಗುಂಡ್ಲುಪೇಟೆ, ಪುಟ. ೪೮.

[17] ಅದೇ., ಸಂಪುಟ ೯, ಬೇಲೂರು, ಪುಟ. ೪೨೩.

[18] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೩, ಹಂಪಿ ಶಾಸನಗಳು, ಸಂಖ್ಯೆ. ೨೬೫.

[19] ಎ.ಕ., ಸಂಪುಟ. ೪, ಚಾಮರಾಜನಗರ, ಪುಟ. ೧೦೪.

[20] ಅದೇ., ಸಂಪುಟ ೫. ಕೃಷ್ಣರಾಜನಗರ, ಪುಟ. ೧೦೪.

[21] ಅದೇ., ಸಂಪುಟ ೮, ಹೊಳೆನರಸೀಪುರ, ಪುಟ. ೫೫.

[22] ಕಲ್ಬುರ್ಗಿ ಎಂ.ಎಂ., ಸಂಪಾದಿಸಿದ ಕರ್ನಾಟಕ ಕೈಫಿಯತ್ತುಗಳು, ಬಳ್ಳಾರಿ ಪ್ರಾಂತ್ಯದ ಕೈಫಿಯತ್ತುಗಳು, ಸಂಖ್ಯೆ. ೨೫೧, ಪುಟಗಳು. ೫೫೬-೫೮.

[23] ಅದೇ., ಸಂಖ್ಯೆ. ೧೦೬, ಪುಟ. ೪೭೭.

[24] ಅದೇ., ಸಂಖ್ಯೆ. ೩೫೧, ಪುಟಗಳು. ೪೧೦-೧೧.

[25] ಅದೇ., ಸಂಖ್ಯೆ. ೧೭ ಮತ್ತು ೧೮, ಪುಟಗಳು. ೫೯-೬೫.

# ಈಶಾನ್ಯ ಕರ್ನಾಟಕದ ಬೇಡ ಪಾಳೆಯಗಾರರು

# (ಸುರಪುರದ ಬೇಡ ಪಾಳೆಯಗಾರರು)

ಒಂದು ಪ್ರದೇಶದ ನಿಜವಾದ ಇತಿಹಾಸವೆಂದರೆ ಸಣ್ಣಪುಟ್ಟ ಸಂಸ್ಥಾನಿಕರ ಇತಿಹಾಸವೇ ಆಗಿದೆ. ಅವರು ಬದುಕಿನ ರೀತಿ, ನೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅಳವಡಿಸಿಕೊಂಡ ಜೀವನದ ಮೌಲ್ಯಗಳೂ ಪ್ರಮುಖವಾದವುಗಳು. ಇಂತಹ ಸಣ್ಣಪುಟ್ಟ ಅರಸರಲ್ಲಿ ಬೇಡ ಪಾಳೆಯಗಾರರು ಪ್ರಮುಖರಾಗಿದ್ದಾರೆ. ಅದರಲ್ಲೂ ಈಶಾನ್ಯ ಕರ್ನಾಟಕದ ಭಾಗವಾದ, ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಬೇಡ ಪಾಳೆಯಗಾರರು ಆಳ್ವಿಕೆಯನ್ನು ಮಾಡಿದ್ದಾರೆ. ಒಂದು ಕಾಲಕ್ಕೆ ಕರ್ನಾಟಕದ ಚರಿತ್ರೆಯೆಂದರೆ ಬೇಡರ ಚರಿತ್ರೆ ಎನ್ನುವಷ್ಟರಮಟ್ಟಿಗೆ ಇವರ ಪಾತ್ರ ಮಹತ್ವದ್ದಾಗಿದೆ. ಕಂಪಲಿ, ಆನೆಗೊಂದಿ ಪಾಳೆಯಗಾರರು ವಿಜಯನಗರ ಪೂರ್ವದಲ್ಲಿದ್ದರೆ, ಕನಕಗಿರಿ ಪಾಳೆಯಗಾರರು ವಿಜಯನಗರ ಸಂದರ್ಭದಲ್ಲಿ, ಸುರಪುರ, ಗುಡಗುಂಟಿ, ಗುಂತಗೋಳ, ದೇವದುರ್ಗದ ಪಾಳೆಯಗಾರರು ವಿಜಯನಗರೋತ್ತರದಲ್ಲಿದ್ದರು.

ವಿಜಯನಗರಕ್ಕಿಂತ ಪೂರ್ವದಲ್ಲಿ ತುಂಗಭದ್ರ ನದಿ ತೀರದ ಪ್ರದೇಶದಲ್ಲಿ ಕಮ್ಮಟ ದುರ್ಗದ ಅರಸರ ಕಾಲದಲ್ಲಿ ಬೇಡರು ಒಂದು ನಿಶ್ಚಿತ ನೆಲೆಯನ್ನು ಕಂಡುಕೊಳ್ಳು ವಂತಾಯಿತು. ಮುಮ್ಮಡಿಸಿಂಗನು ಕುಮ್ಮಟದುರ್ಗದ ಮೊದಲ ಪಾಳೆಯಗಾರ ಎಂಬುದನ್ನು ಕ್ರಿ.ಶ. ೧೨೮೦–೧೨೮೭ ಶಾಸನಗಳು ಸಮರ್ಥಿಸುತ್ತವೆ. ಈತನ ಮಗ ಕಂಪಿಲರಾಯ ಮುಮ್ಮಡಿಸಿಂಗನ ತರುವಾಯ ಉತ್ತರಾಧಿಕಾರಿಯಾಗಿ, ಮಲ್ಲಿಕಾಫರನ ದಾಳಿಯನ್ನು ಎದುರಿಸಿದನು. ನಂತರ ಈತನ ಮಗ ಕುಮಾರರಾಮನು ಕುಮ್ಮಟದುರ್ಗವನ್ನು ಒಂದು ಹೊಸ ರಾಜಧಾನಿಯನ್ನಾಗಿ ಮಾರ್ಪಡಿಸಿದನು. ಓರಂಗಲ್ಲಿನ ಪ್ರತಾಪರುದ್ರನನ್ನು, ಹೊಸ್ಯಸಳ ದೊರೆ ವೀರಬಲ್ಲಾಳ ಅಲ್ಲದೆ ಕೊಂಗು, ಮಲೆಯಾಳ, ಮಧುರ, ಕೊಡಗು, ಕೋಲಾರ, ಪೆನುಗೊಂಡ, ನಿಡುಗಲ್ಲು, ಮಿಡಗೇಸಿ, ಮಾಗಡಿ, ಮಧುಗಿರಿ, ಕಡಪ, ಕರ್ನೂಲು, ರಾಮದುರ್ಗ, ಕೆಳದಿನಾಡು, ಹಾವನೂರು, ಹುಬ್ಬಳ್ಳಿ, ಜರಿಮಲೆ, ಕನಕಾದ್ರಿ, ರಾಮಪೀಠ, ಆನೆಗೊಂದಿ ಮುಂತಾದ ರಾಜರುಗಳನ್ನು ಹತ್ತಿಕ್ಕಿದನು. ಕೊನೆಗೆ ಮೂರನೇ ಬಾರಿಗೆ ಮಹ್ಮದ್ ಬಿನ್ ತುಘಲಕ್‌ನು ಕಂಪಲಿ ರಾಜ್ಯದ ಮೇಲೆ ದಾಳಿ ಮಾಡಿದನು. ಕಂಪಿಲರಾಯ ತೀರಾ ಇಕ್ಕಟ್ಟಿನ ಸ್ಥಿತಿಯಲ್ಲಿದ್ದಾಗ, ಕುಮಾರರಾಮನು ತಂದೆಯ ಜೊತೆಯಲ್ಲಿ ರಣರಂಗದಲ್ಲಿ ಹೋರಾಡುತ್ತಾ ವೀರಮರಣ ಹೊಂದಿದನು.

ಕುಮ್ಮಟದುರ್ಗ ಹಾಳಾದ ಮೇಲೆ ಚದುರಿ ಹೋಗಿದ್ದ ನಾಯಕ ಜನಾಂಗವು ಮತ್ತೆ ವಿಜಯನಗರದ ಆಶ್ರಯ ಪಡೆಯಿತು. ವಿಜಯನಗರದ ಅರಸರು ಇವರನ್ನು ಸೈನ್ಯದಲ್ಲಿ ಸೇರಿಸಿಕೊಂಡರು. ಸೈನ್ಯದ ಅನೇಕ ಹುದ್ದೆಗಳಲ್ಲಿ ಇವರು ಮುಖಂಡರಾಗಿ, ಅಧಿಕಾರಿಗಳಾಗಿ ಮೆರೆದರು. ಆಗ ಕೆಲವು ಉಪಜಾತಿಗಳ ಗಣ್ಯರನ್ನು ಮುಖ್ಯವಾಗಿ ಅಮರನಾಯಕರನ್ನಾಗಿ ಗೇಣಿರೈತರನ್ನಾಗಿ, ಕಾವಲುಗಾರರನ್ನಾಗಿ ನೇಮಕ ಮಾಡಲಾಗಿತ್ತು. ವಿಜಯನಗರದ ಅರಸರ ವಿಸ್ತಾರವಾದ ಸಾಮ್ರಾಜ್ಯಕ್ಕೆ ಸೇರಿದ ನಾನಾ ಭಾಗಗಳ ಆಳ್ವಿಕೆಯನ್ನು ತಾವೇ ನಿರ್ವಹಿಸುವುದು ಕಷ್ಟವಾದಾಗ ಆಯಾ ಪ್ರದೇಶಗಳ ಆಡಳಿತ ಉಸ್ತುವಾರಿ, ಕಂದಾಯ ವಸಲಿ, ಶಾಂತಿ ಸುವ್ಯವಸ್ಥೆ ಕಾಪಾಡಲು ಹಾಗೂ ಯುದ್ಧದ ಸಮಯದಲ್ಲಿ ಸಹಾಯ ಮಾಡಲು ಬಲಿಷ್ಠ ಹಾಗೂ ಪ್ರಭಾವವುಳ್ಳ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಈ ಅಧಿಕಾರಿಗಳೇ ಕ್ರಮೇಣ ಪಾಳೆಯಗಾರರೆನಿಸಿಕೊಂಡರು.

ವಿಜಯನಗರದ ಅರಸರು ದುರ್ಬಲರಾದಂತೆ ಈ ಪಾಳೆಯಗಾರರು ದಿನದಿಂದ ದಿನಕ್ಕೆ ಸ್ಥಳೀಯವಾಗಿ ಪ್ರಬಲಗೊಳ್ಳುತ್ತಲೇ ಬಂದರು. ಕ್ರಿ.ಶ. ೧೫೬೫ರ ನಂತರ ವಿಜಯನಗರ ಪತನದ ನಂತರ ಪಾಳೆಯಗಾರರು ಸ್ವತಂತ್ರರಾದರು. ಅವರಲ್ಲಿ ಬೇಡ ಸಂಸ್ಥಾನಗಳೇ ಅಧಿಕವಾಗಿವೆ. ಹೀಗಾಗಿ ವಿಜಯನಗರೋತ್ತರಕಾಲೀನ ಕರ್ನಾಟಕದ ಇತಿಹಾಸವನ್ನು ಬೇಡರ ಇತಿಹಾಸವೆಂದು ಕರೆಯಬಹುದಾಗಿದೆ. ತಾಳಿಕೋಟೆ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಂಡ ಹಲವು, ತರುವಾಯ ಸ್ವತಂತ್ರ ಸ್ಥಾಪಿಸಿಕೊಂಡ ಕೆಲವು ಒಟ್ಟು ೭೨–೭೩ ಪಾಳೆಯಪಟ್ಟುಗಳನ್ನು ಗುರುತಿಸಲಾಗಿದೆ. ಇತಿಹಾಸ ತಜ್ಞರಾದ ಪ್ರೊ. ಲಕ್ಷ್ಮಣ್ ತೆಲಗಾವಿಯವರು ೭೭ ಪಾಳೆಯ ಪಟ್ಟುಗಳನ್ನು ಮೊಟ್ಟಮೊದಲಬಾರಿಗೆ ಗುರುತಿಸಿದ್ದಾರೆ.

ಈ ಪಾಳೆಯಪಟ್ಟುಗಳು ಮೂಲತಃ ಕೆಳವರ್ಗದ ಅದರಲ್ಲೂ ಬೇಡ ಜನಾಂಗದ ವ್ಯಕ್ತಿಗಳಿಂದ ಸ್ಥಾಪನೆಗೊಂಡು, ಅವರ ಅಧಿಪತ್ಯದಲ್ಲೇ ಸಾಗಿದವು. ಕೆಲದಿನಗಳ ತರುವಾಯ ಮೇಲ್ವರ್ಗದ ಮಡಿಲನ್ನು ಬಯಸಿಹೋದವು. ಬಹುಶಃ ಪ್ರಭುಸತ್ತೆಯಿಂದ ಮಾತ್ರ ಪ್ರಬಲರಾಗಿ ಗೌರವ,

ಸಂಪತ್ತುಗಳಿಗೆ ಒಡೆಯರಾಗಿದ್ದ ಇವರು ಕೆಳಜಾತಿಯ ವಿಷಯ ಬಂದಾಗ ತಲೆತಗ್ಗಿಸುವ ವಾತಾವರಣ ಅಂದು ಉಂಟಾಗಿರಬಹುದು. ಅನಿವಾರ್ಯವಾಗಿ ತಮ್ಮ ಕೆಳಜಾತಿ ಯನ್ನು ತ್ಯಜಿಸಿ, ಮುಕ್ತಧೋರಣೆಯ ವೀರಶೈವ ಧರ್ಮವನ್ನು ಸ್ವೀಕರಿಸಿದರು. ಬೇಡನಾಂಗದ ಚಿತ್ರದುರ್ಗದ ಅರಸರು ಕ್ರಿ.ಶ. ೧೫೬೯ರಲ್ಲಿ ವೀರಶೈವ ಧರ್ಮವನ್ನು ಸ್ವೀಕರಿಸಿದರು, ಕೆಲವೇ ದಿನಗಳಲ್ಲಿ ತಮ್ಮ ಮೂಲ ಮತವನ್ನು ಅಪ್ಪಿಕೊಂಡರು. ಇದರಿಂದ ಇನ್ನೂ ಉಳಿದ ಅನೇಕ ಸಮಕಾಲೀನ ಬೇಡರ ಮನೆತನಗಳಿಗೆ ಮರುಜೀವಬಂದಿತು.

ನಾನು ಈ ಲೇಖನದಲ್ಲಿ ಕೇವಲ ಇಂದಿಗೂ ಜೀವಂತವಾಗಿರುವ ಈಶಾನ್ಯ ಕರ್ನಾಟಕದ ಬೇಡ ಪಾಳೆಯಗಾರರ ಕುರಿತಾದ ಚರಿತ್ರೆಯನ್ನು ಸಂಕ್ಷಿಪ್ತವಾಗಿ ನೀಡಲು ಪ್ರಯತ್ನಿಸಿದ್ದೇನೆ.

**೧. ಸುರಪುರದ ಬೇಡ ಪಾಳೆಯಗಾರರು**

ಗುಲಬರ್ಗಾ ಜಿಲ್ಲೆಯಿಂದ ದಕ್ಷಿಣಕ್ಕೆ ೧೦೬ ಕಿ.ಮೀ ದೂರದಲ್ಲಿರುವ ಸುರಪುರ ಕೃಷ್ಣಾ ಹಾಗೂ ಭೀಮಾನದಿಯ ಮಧ್ಯದಲ್ಲಿದೆ. ಕ್ರಿ.ಶ. ೧೬೩೬ ರಿಂದ ೧೮೫೮ರವರೆಗೆ ೧೨ ಜನ ಬೇಡ ಪಾಳೆಯಗಾರರು ಸುರಪುರ ಸಂಸ್ಥಾನದಲ್ಲಿ ಆಳ್ವಿಕೆ ಮಾಡಿದ್ದಾರೆ. ಈ ಪಾಳೆಯಗಾರರಿಗೆ ಗೋಸಲ ವಂಶದವರೆಂದು ಕರೆಯುವ ರೂಢಿಯಿದೆ. ಜಕ್ಕಪ್ಪದೇಸಾಯಿಯು ಕಕ್ಕೇರಿ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆಯನ್ನು ಪ್ರಾರಂಭಿಸುತ್ತಾನೆ. ಈತನಿಗೆ ಇಬ್ಬರು ಮಕ್ಕಳಿದ್ದರು. ಅವರೇ ಗಡ್ಡಿಲಿಂಗನಾಯಕ ಮತ್ತು ಗಿಡ್ಡಿಪಿಡ್ಡನಾಯಕ. ಗಡ್ಡಿಲಿಂಗನಾಯಕ ಗುಡಗುಂಟಿಯ ಮೂಲಪುರುಷನಾದರೆ, ಗಡ್ಡಿಪಿಡ್ಡನಾಯಕ ಸುರಪುರದ ಮೂಲಪುರುಷ ನಾಗುತ್ತಾನೆ. ಈತ ಬಿಜಾಪುರದ ಮಹ್ಮದ್ ಆದಿಲ್‌ಶಾಹನಿಂದ ಸರದೇಶಗತಿಗಳನ್ನು ಸಂಪಾದಿಸಿದನು. ವಾಗಿನಗೇರಿ ಕೋಟೆಯನ್ನು ನಿರ್ಮಿಸಿ, ೫೦೦ ಕುದುರೆ, ೪,೦೦೦ ಕಾಲಾಳು ಗಳೊಡನೆ ಸಗರನಾಡಿನ ಕೇಂದ್ರಕೋಟೆಯಾದ ಶಹಪುರ ಕಿಲ್ಲೆಯನ್ನು ಬಿಜಾಪುರ ಆದಿಲ್‌ಶಾಹಿ ಕಿಲ್ಲೆದಾರನಿಂದ ಕಸಿದುಕೊಂಡನು. ನಂತರ ಈತ ಆನೆಯ ಸೊಕ್ಕನ್ನು ಅಡಗಿಸಿ 'ಮದಗಜ ಮಲ್ಲ'ನೆಂಬ ಬಿರುದನ್ನು ಧರಿಸುತ್ತಾನೆ. ನಂತರ ವಿಜಾಪುರದ ಆದಿಲ್‌ಶಾಹನಿಂದ 'ಗಜದಂಡ ಬಹರಿ ಪಿಡ್ಡನಾಯಕ' ಎಂಬ ಬಿರುದೂ ಪ್ರಾಪ್ತವಾಗುತ್ತದೆ. ಮೊಘಲ್ ದೊರೆ ಔರಂಗಜೇಬನು ದಕ್ಷಿಣಕ್ಕೆ ದಾಳಿಯಿಟ್ಟಾಗ, ಪಿಡ್ಡನಾಯಕ ಬಿಜಾಪುರದ ಆದಿಲ್‌ಶಾಹಿಗಳ ಪರವಾಗಿ, ಮೊಘಲ್‌ರ ವಿರುದ್ಧ ಹೋರಾಡಿದನು. ಈತನ ಶೌರ್ಯವನ್ನು ಮೆಚ್ಚಿ ಔರಂಗ ಜೇಬನು ಒಂದು ಪತ್ರವನ್ನು ಬರೆದಿದ್ದಾನೆ. ಅದು ಸುರಪುರದ ಅರಮನೆಯಲ್ಲಿ ಇಂದಿಗೂ ಇದೆ.

ಈತನ ತರುವಾಯ ಈತನ ದತ್ತುಪುತ್ರ ಹಸರಂಗಿ ಪಾಮನಾಯಕ (ಕ್ರಿ.ಶ. ೧೬೬೬-೧೬೮೭)ನು ಅಧಿಕಾರಕ್ಕೆ ಬಂದನು. ಈತ ಆದಿಲ್‌ಶಾಹಿಗಳಿಂದ ಅನೇಕ ಸನದುಗಳನ್ನು ಸಂಪಾದಿಸಿದನು. ಶಹಪುರ ಕಿಲ್ಲೆಯು ಪಾಪನಾಯಕನ ಅಧೀನದಲ್ಲಿತ್ತು. ಕ್ರಿ.ಶ. ೧೬೮೦ರ ಫೆಬ್ರವರಿ ೨೦, ೨೧ರಂದು ಈ ಕಿಲ್ಲೆಯ ಮೇಲೆ ಔರಂಗಜೇಬನ ಸರದಾರ ದಿಲೇರಖಾನ್ ಭೀಕರವಾಗಿ ಆಕ್ರಮಣ ಮಾಡಿದನು. ಪ್ರಯೋಜನವಾಗಲಿಲ್ಲ. ಮರುದಿನ ಕಿಲ್ಲೆಯನ್ನು ಮುತ್ತಿದಾಗ, ಪಾಮನಾಯಕನ ೧೨,೦೦೦ ನುರಿತ ಬೇಡಪಡೆ ಗುಂಡಿನ ಸುರಿಮಳೆಗೈದನು. ಈ ಆಕ್ರಮಣದಿಂದ ಮೊಘಲ್ ಸೈನ್ಯ ತತ್ತರಿಸಿ ಹೋಯಿತು. ಆಗ ದಿಲೇರ್‌ಖಾನ್ ಪಾಮನಾಯಕನಿಂದ ಜೀವಭಕ್ಷೆ ಪಡೆದು ಪಾರಾಗುತ್ತಾನೆ. ಮೊಘಲರು ಪುನಃ ಬಿಜಾಪುರದ ಮೇಲೆ ದಾಳಿಗೈದರು. ಶರಣಾಗತನಾದ ಸಿಕಂದರ ಕ್ರಿ.ಶ. ೧೩೪೭ರಲ್ಲಿ ಬಿಜಾಪುರವನ್ನು ಮೊಘಲರಿಗೆ ಬಿಟ್ಟುಕೊಟ್ಟನು. ಇದರಿಂದ ಆದಿಲ್‌ಶಾಹಿಗಳ ಸಾಮ್ರಾಜ್ಯವೆಲ್ಲ ಮೊಘಲ್‌ರ ಒಡೆತನಕ್ಕೆ ಒಳಪಟ್ಟಿತು. ಅವರ ಆಡಳಿತದ ಸುಬೆಯಾಗಿ ಪರಿಣಮಿಸಿತು. ಆಗ ಅನೇಕರು ಮೊಘಲರ ಸಾಮಂತಿಕೆಯನ್ನು ಒಪ್ಪಿಕೊಂಡರು. ಅದರಲ್ಲಿ ಪಾಮನಾಯಕನೂ ಒಬ್ಬ. ಆದರೆ ಸಾಮಂತಿಕೆ ಒಪ್ಪಿಕೊಂಡ ೫ನೇ ದಿನದಲ್ಲಿ ಅನಿರೀಕ್ಷಿತ ಸಾವಿಗೆ ಗುರಿಯಾದನು.

ನಂತರ ಗುಡಗುಂಟಿಯ ಅನ್ನದಾನಿ ಸೋಮಪ್ಪನಾಯಕನ ಮಗ ಪೀತಾಂಬರಿ ಬಹರಿ ಪಿಡ್ಡನಾಯಕ (ಕ್ರಿ.ಶ. ೧೯೮೭-೧೭೨೬)ನು ಅಧಿಕಾರಕ್ಕೆ ಬಂದನು. ಈತ ಔರಂಗಜೇಬನ ಅಧಿಪತ್ಯವನ್ನು ಧಿಕ್ಕರಿಸಿ, ತಂದೆ ಪಾಮನಾಯಕ ಸಂಪಾದಿಸಿದ್ದ ರಾಜ್ಯದ ಮೇಲೆ ಸ್ವಾತಂತ್ರ್ಯ ಸಾರಿದ. ಆಗ ಔರಂಗಜೇಬನು ತನ್ನ ಮಗ 'ಕಾಮಭಕ್ಷ'ನನ್ನು ಯುದ್ಧಕ್ಕೆ ಕಳುಹಿಸುತ್ತಾನೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ.

೨ನೇ ಬಾರಿಗೂ ಆತ ಸೋಲನ್ನು ಅನುಭವಿಸಿದ. ಸೋಲುಗಳನ್ನು ಸಹಿಸದ ಔರಂಗಜೇಬನು ತನ್ನ ಇನ್ನೋರ್ವ ಮಗನಾದ 'ಅಜಮ'ನನ್ನು ಕಳುಹಿಸಿದನು. ಈತನಿಂದ ಒಂದು ವರ್ಷದವರೆಗೆ ವಾಗಿನಗೇರಿ ಸುತ್ತ ಮುತ್ತಲಿನ ಪ್ರದೇಶ ಧ್ವಂಸಗೊಂಡಿತು. ಆಗ ಪಿಡ್ಡನಾಯಕ ಸಂಧಾನ ಬಯಸಿದನು. ಎರಡು ಲಕ್ಷ ನಾಣ್ಯ ಕಾಣಿಕೆ ಕೊಡಲು ಮುಂದೆ ಬಂದನು.

[1]
ಈ ಪೂರ್ವದಲ್ಲಿ ಆದಿಲ್‌ಶಾಹಿಗಳಿಗೆ ಸಲ್ಲಿಸಿದಂತೆ ಕಂದಾಯದ ಎಲ್ಲಾ ಬಾಬತ್ತುಗಳನ್ನು ತಮಗೂ ನೀಡಬೇಕೆಂದು ಔರಂಗಜೇಬನು ಫರ್ಮಾನು ಹೊರಡಿಸಿದಾಗ ಪಿಡ್ಡನಾಯಕನು ಇದನ್ನು ಒಪ್ಪಲಿಲ್ಲ. ಕ್ರಿ.ಶ. ೧೬೯೬ರಲ್ಲಿ ಮೊಘಲ್‌ರ ವಿರುದ್ಧ ಸ್ವಾತಂತ್ರ್ಯ ಘೋಷಿಸಿದ. ಇದನ್ನರಿತ ಔರಂಗಜೇಬನು, ಸಗರನಾಡನ್ನು ಪ್ರವೇಶಿಸಿ, ಪಿಡ್ಡನಾಯಕ ವಾಗಿನಗೇರಿ ಕೋಟೆಯನ್ನು ವಶಪಡಿಸಿಕೊಂಡನು. ಆಗ ಪಿಡ್ಡನಾಯಕ ಕನಕಗಿರಿಯ ಎಮ್ಮಿಗುಡ್ಡಕ್ಕೆ ತೆರಳಿದನು. ಅಲ್ಲಿ ಸೈನ್ಯವನ್ನು ಸಂಘಟಿಸಿ, ಮರಳಿ ಕ್ರಿ.ಶ. ೧೭೦೭ರಲ್ಲಿ ಸುರಪುರವನ್ನು ನಿರ್ಮಿಸುತ್ತಾನೆ. ಇದಕ್ಕೆ ರಾಜಧಾನಿಯ ಪಟ್ಟಸಿಕ್ಕಿತು. ಈತ ಕ್ರಿ.ಶ. ೧೭೨೬ರಲ್ಲಿ ಮೃತನಾದ. ತರುವಾಯ ಹಿರಿಯ ಮಗ ಇಮ್ಮಡಿ ಪಾಮನಾಯಕ (ಕ್ರಿ.ಶ. ೧೭೨೭)ನು ಪಟ್ಟವೇರಿದನು. ಆಗ ದಕ್ಷಿಣದ ಚಿಕ್ಕಪುಟ್ಟ ಸಂಸ್ಥಾನಗಳು ಹೈದ್ರಾಬಾದ್ ನಿಜಾಮನ ಅಧೀನಕ್ಕೊಳಪಟ್ಟವು. ಅದರಲ್ಲಿ ಸುರಪುರವೂ ಒಂದಾಗಿತ್ತು. ಹೀಗಾಗಿ ತನ್ನ ಸಂಸ್ಥಾನದ ಸುಭದ್ರತೆ ಮತ್ತು ಅಭಿವೃದ್ಧಿಗಾಗಿ ನಿಜಾಮನಿಗೆ ಪಾಮನಾಯಕ ಮರಾಠರೊಂದಿಗೆ ನಡೆದ ಯುದ್ಧದಲ್ಲಿ ಬೆಂಬಲಿಸಿ ೪,೦೦೦ ಸೈನ್ಯದೊಂದಿಗೆ ತೆರಳಿ ಜಯ ತಂದುಕೊಟ್ಟನು.

ನಂತರ ಈತನ ಮಗ ಮುಮ್ಮಡಿ ಪಿಡ್ಡನಾಯಕ ಕ್ರಿ.ಶ. ೧೭೪೨ರಲ್ಲಿ ಅಧಿಕಾರಕ್ಕೆ ಬಂದನು. ಈತ ಅಸಮರ್ಥ ಅರಸನಾದುದರಿಂದ, ಈತನ ತಮ್ಮನಾದ ಮೊಂಡಗ್ಯೆ ವೆಂಕಟಪ್ಪ ನಾಯಕನು ಸಿಂಹಾಸನವನ್ನೇರಿದನು. ಫ್ರೆಂಚ್ ಗೌರ್ವನರ್ ಡೂಪ್ಲೆಯ ಹೈದ್ರಾಬಾದ್ ನಿಜಾಮನ ವಿರುದ್ಧ ಚಂದಾಸಾಹೇಬನನ್ನು ಎತ್ತಿಕಟ್ಟಿ ಪಾಂಡಿಚೇರಿ ಕಾಳಗಕ್ಕೆ ಕಾರಣವಾದಾಗ ವೆಂಕಟಪ್ಪನಾಯಕನು ನಾಸರಜಂಗನಿಗೆ ಬೆಂಬಲಿಸಿದನು.[2] ಪಾಂಡಿಚೇರಿ ಕಿಲ್ಲೆಯನ್ನು ವಶಪಡಿಸಿಕೊಳ್ಳಲು ಕಾರಣನಾದನು. ಈತನ ತರುವಾಯ ಮಗ ಮುಮ್ಮಡಿ ಪಾಮನಾಯಕನು ಕ್ರಿ.ಶ. ೧೭೫೦ರಲ್ಲಿ ಪಟ್ಟವೇರಿದನು. ಈತನ ಕಾಲದಲ್ಲಿ ಪೇಶ್ವೆ ಹಾಗೂ ಹೈದ್ರಾಬಾದ್ ನಿಜಾಮರ ಸೈನ್ಯ ಸುರಪುರದ ಮೇಲೆ ಬಿತ್ತು. ಅನೇಕ ಗ್ರಾಮಗಳನ್ನು ಸುಲಿತು. ಕೊನೆಗೆ ಒಪ್ಪಂದದ ಪ್ರಕಾರ ನಿಜಾಮ ಸರಕಾರಕ್ಕೆ ೭೯,೧೬೬ ರೂ ಮತ್ತು ಪೇಶ್ವೆಗಳಿಗೆ ೯೪,೦೦೦ ರೂ.ಗಳನ್ನು ಸುರಪುರ ಕೊಡಬೇಕೆಂದು ತೀರ್ಮಾನಿಸಲಾಯಿತು. ಅಂದಿನಿಂದ ಸುರಪುರ ಸಾಲಗಾರ ಸಂಸ್ಥಾನವಾಯಿತು. ಈತನ ತರುವಾಯ ಹಿರಿಯ ಮಗ ಇಮ್ಮಡಿ ವೆಂಕಟಪ್ಪ ನಾಯಕ (ಕ್ರಿ.ಶ. ೧೭೭೩-೧೮೦೨)ನು ಅಧಿಕಾರ ರೂಢನಾದ. ಆಗ ಹೈದ್ರಾಬಾದ್ ನಿಜಾಮ, ಇನ್ನೊದೆಡೆ ಪೇಶ್ವೆ ಮತ್ತು ಇಂಗ್ಲೀಷ್‌ರ ಅಧಿಕಾರವನ್ನು ಒಪ್ಪಿಕೊಳ್ಳಬೇಕಾದ ಸಂದರ್ಭವೂ ಇತ್ತು. ಆಗ ಪೇಶ್ವೆಗಳು ರುಸುಮಿನ ನೆಪಮಾಡಿಕೊಂಡು ಕ್ರಿ.ಶ. ೧೭೭೯ರಲ್ಲಿ ಸಗರನಾಡನ್ನು ಪ್ರವೇಶಿಸಿದರು. ಆಗ ಇಮ್ಮಡಿ ವೆಂಕಟಪ್ಪನಾಯಕ ಇವರನ್ನು ಹಿಮ್ಮೆಟ್ಟಿಸಿದನು. ನಂತರ ಹೈದ್ರಾಬಾದ್ ನಿಜಾಮನಿಗೆ ಮರಾಠರನ್ನು ಸೋಲಿಸಲು ಸಹಾಯ ಮಾಡಿದ. ಕ್ರಿ.ಶ. ೧೮೦೨ರಲ್ಲಿ ತೀರಿಕೊಂಡನು. ಆಗ ಇಮ್ಮಡಿ ಪಿಡ್ಡನಾಯಕ (ಕ್ರಿ.ಶ. ೧೮೨-೧೮೧೮)ನನ್ನು ಸುರಪುರದ ಅರಸನನ್ನಾಗಿ ಪಟ್ಟಗಟ್ಟಲಾಯಿತು. ಆಗ ಬ್ರಿಟಿಷರು ಸುರಪುರ ಸಂಸ್ಥಾನದಲ್ಲಿ ಕಾರ್ಯಭಾರಕ್ಕಾಗಿ ತಮ್ಮ ಪ್ರತಿನಿಧಿಯೆಂದು ಮಹಿಪತಿರಾಯನೆಂಬುವನನ್ನು ಕಳುಹಿಸಿದರು. ಆಗ ಈ ಸಂಸ್ಥಾನ ನಿಜಾಮರಿಗೂ ಹಾಗೂ ಪೇಶ್ವೆಗಳಿಗೂ ಕಾಣಿಕೆಯನ್ನು ಸಲ್ಲಿಸಬೇಕಾಗಿತ್ತು. ಇವೆಲ್ಲವುಗಳ ಮಧ್ಯೆ ಕ್ರಿ.ಶ. ೧೮೧೩ರಲ್ಲಿ ಸುರಪುರ ಸಂಸ್ಥಾನದಲ್ಲಿ ಭೀಕರ ಬರಗಾಲ ಕಾಣಿಸಿಕೊಂಡಿತು.[3] ನಿಜಾಮನಿಗೆ ಸಲ್ಲಿಸಬೇಕಾಗಿದ್ದು ೮ ಲಕ್ಷ ರೂ. ಬಾಕಿ ಈಗ ೧೩ ಲಕ್ಷ ರೂ. ಆಗಿತ್ತು. ಆದರೂ ಮುಮ್ಮಡಿ ಪಿಡ್ಡಪ್ಪನಾಯಕ ರೈತರ ಅಭಿವೃದ್ಧಿಗಾಗಿ ಶ್ರಮಿಸಿ ಅವರ ಹಿತಾಸಕ್ತಿಯನ್ನು ಕಾಪಾಡಿದ.

ನಂತರ ಈತನ ಹರಿಯ ಮಗ ಮುಮ್ಮಡಿ ವೆಂಕಪ್ಪಟನಾಯಕ (ಕ್ರಿ.ಶ. ೧೮೧೮-೧೮೨೭)ನು ಸುರಪುರದ ಅಧಿಕಾರ ಸ್ವೀಕರಿಸಿದ. ರಾಜ್ಯದಲ್ಲಿ ಬರಗಾಲ ಬಿದ್ದಿದ್ದರಿಂದ ರೈತರ ಕಂದಾಯ ವಸೂಲಿ ಆಗಲಿಲ್ಲ. ಹೀಗಾಗಿ ಹೈದ್ರಾಬಾದ್ ನಿಜಾಮನಿಗೆ ಸಲ್ಲಿಸಬೇಕಾದ ೧೫ ಲಕ್ಷ ಸಾಲ ಹಾಗೆಯೇ ಉಳಿಯಿತು. ಆಗ ಪೇಶ್ವೆಯವರ ರುಸುಮು ಮುಟ್ಟಿದ್ದಕ್ಕಾಗಿ ಅವರ ರುಸುಮಿನ ಪ್ರಾಂತ್ಯಗಳನ್ನು ಮುಮ್ಮಡಿ ವೆಂಕಟಪ್ಪನಾಯಕನಿಂದ ಬ್ರಿಟಿಷರು ವಶಪಡಿಸಿಕೊಂಡರು. ಹೀಗೆ ಸುರಪುರದ ಹಣಕಾಸು ವ್ಯವಹಾರಗಳನ್ನು ಮೊಟಕುಗೊಳಿಸುತ್ತಾ ತಮ್ಮ

ಅಧಿಕಾರವನ್ನು ವೃದ್ದಿಸಲು ಪ್ರಯತ್ನಿಸುತ್ತಿದ್ದರು. ಪೂರ್ವದ ಷರತ್ತಿನಂತೆ ೧,೪೫,೦೦೦ ರೂ. ಜೊತೆಗೆ ಈಗ ಅಪ್ಪಾದೇಸಾಯಿಯ ಚೌಥ ೩೦ ಸಾವಿರ ರೂ. ಸೇರಿಸಿ, ಒಟ್ಟು ೧ ಲಕ್ಷ ೭೫ ಸಾವಿರ ರೂ.ಗಳನ್ನು ಪ್ರತಿವರ್ಷ ಕಂದಾಯದ ಜೊತೆ ಹೈದ್ರಾಬಾದ್ ನಿಜಾಮನಿಗೆ ನೀಡಬೇಕೆಂದು ಸುರಪುರಕ್ಕೆ ಒತ್ತಡ ತರಲಾಯಿತು.

ಈ ರೀತಿ ಕ್ರಿ.ಶ. ೧೮೨೩ ರಿಂದ ಕಂಪನಿ ಸರಕಾರವು ಹೈದ್ರಾಬಾದ್ ನಿಜಾಮನ ಚೌಥನ್ನು ಒಂದು ವರ್ಷಕ್ಕೆ ೧೫ ಸಾವಿರ ರೂ.ಗಳನ್ನು ಏರಿಸುವದರೊಂದಿಗೆ ಸಂಸ್ಥಾನದ ವಿರುದ್ಧ ಹೈದ್ರಾಬಾದ್ ಹೈದ್ರಬಾದ್ ನಿಜಾಮನ ಕೈ ಬಲಪಡಿಸಿದರು. ಬ್ರಿಟಿಷ್ ಸರಕಾರವು ತನ್ನ ಕೈವಾಡದಿಂದ ಹೈದ್ರಾಬಾದ್ ನಿಜಾಮನಿಗೆ ಹೆಚ್ಚುವರಿ ಆದಾಯ ಸಿಗುವಂತೆ ಇದ್ದ ಅವಕಾಶ ಗಳನ್ನು ಉಪಯೋಗಿಸಿಕೊಂಡಿತ್ತು. [4] ಹೈದ್ರಾಬಾದ್ ನಿಜಾಮ ಮತ್ತು ಬ್ರಿಟಿಷರ ಕಿರುಕುಳದ ಈ ದ್ವಂದ್ವನೀತಿ ಸಂಸ್ಥಾನವನ್ನು ಸಂಕಷ್ಟಕ್ಕೆ ಸಿಲುಕಿಸಿತು. ಆ ಸಂದರ್ಭದಲ್ಲಿ ಹೈದ್ರಾಬಾದ್ ರೆಸಿಡೆಂಟನು ಮೌನ ತಾಳಿದ್ದುದು ವಿಶೇಷವಾಗಿತ್ತು. ಅನೇಕ ಅಡೆತಡೆಗಳ ನಡುವೆಯೂ ಈತನ ಆಡಳಿತ ಉತ್ತಮ ರೀತಿಯಲ್ಲಿ ನಡೆದಿತ್ತು. ಕ್ರಿ.ಶ. ೧೮೨೭ರಲ್ಲಿ ಮುಮ್ಮಡಿ ವೆಂಕಟಪ್ಪ ನಾಯಕನು ನಿಧನನಾದನು.

ನಂತರ ಹೈದ್ರಾಬಾದ್ ನಿಜಾಮ ಕೇಳಿದ ೧೫೦ ಲಕ್ಷ ರೂ. ನಜರಾಣಿಯನ್ನು ಮತ್ತು ೨,೩೦,೬೦೦ರೂ. ವಾರ್ಷಿಕ ಕಂದಾಯವನ್ನು ಕೊಡಲು ಒಪ್ಪದ ಕೃಷ್ಣನಾಯಕ, ಸುರಪುರದ ಅಧಿಕಾರ ವಹಿಸಿಕೊಂಡ, ಆದರೆ, ಸಂಸ್ಥಾನಕ್ಕೆ ಸಾಲದ ಹೊರೆ ಹೆಚ್ಚಾಯಿತು. ಆಗ ಹೈದ್ರಾ ಬಾದ್ ನಿಜಾಮರು ಮತ್ತು ಬ್ರಿಟಿಷರು ಹೈದ್ರಾಬಾದ್ ಲೇವಾದೇವಿ ವ್ಯವಹಾರಸ್ಥ ಸಾಲದ ಸುಳಿಯಲ್ಲಿ ಸಿಲುಕಿಸಿದರು. ಬ್ರಿಟಿಷ್ ಸರಕಾರಕ್ಕೆ ಸುರಪುರದ ಸ್ಥಿತಿಗತಿಯ ಕುರಿತು, ಕ್ಯಾಪ್ಟನ್ ಫ್ರಾನ್ಸಿಸ್‌ಗ್ರಿಸ್ಲೆ ವರದಿ ಸಲ್ಲಿಸಿದ. ಈ ವರದಿಯ ಮೂಲಕ ಗ್ರಿಸ್ಲೆ ರೆಸಿಡೆಂಟನಿಗೆ ಸಂಸ್ಥಾನದ ಆಡಳಿತವನ್ನು ಬ್ರಿಟಿಷ್ ಸರಕಾರ ನಿಯಂತ್ರಿಸಲು ಅನುವು ಮಾಡಿಕೊಟ್ಟಿತ್ತು. ಅನೇಕ ಅಪರಾಧಗಳ ಸುಳುವಿನಲ್ಲಿ ಕೃಷ್ಣನಾಯಕನನ್ನು ಕೆಡುಹಿದರು. ಆತನ ವ್ಯಕ್ತಿತ್ವಕ್ಕೆ ಅಪಮಾನ ಮಾಡಿದರು. ಇಂಥ ವಾತಾವರಣದಲ್ಲಿಯೆ ಕ್ರಿ.ಶ. ೧೮೪೨ರ ಆಗಸ್ಟ್‌ನಲ್ಲಿ ಕೃಷ್ಣನಾಯಕನು ತೀರಿಕೊಂಡನು. ನಂತರ ಜೂನ್ ೧೨,ರಂದು ಈತನ ಮಗ ನಾಲ್ವಡಿ ವೆಂಕಟಪ್ಪನಾಯಕನಿಗೆ ಪಟ್ಟಗಟ್ಟಲಾಯಿತು. ರಾಜನ ಪ್ರತಿಯಾಗಿ ಆತನ ಪ್ರತಿನಿಧಿಯಾಗಿ ಆತನ ತಾಯಿ ರಾಣಿ ಈಶ್ವರಮ್ಮ ಅಧಿಕಾರ ಚಲಾಯಿಸುತ್ತಿದ್ದಳು. ಈಗಾಗಲೇ ಮೆಡೋಸ್ ಟೇಲರ್‌ನಿಗೂ ವೈಮಸ್ಸುಂಟಾಯಿತು. ರಾಣಿ ಈಶ್ವರಮ್ಮ ಬ್ರಿಟಿಷರ ಆಡಳಿತದ ವಿರುದ್ಧ ಪಡೆಯನ್ನು ಸಜ್ಜುಗೊಳಿಸುತ್ತಿದ್ದಳೆಂದು ಮೆಡೋಸ್ ಟೇಲರ್ ಬ್ರಿಟಿಷ್ ಸರಕಾರಕ್ಕೆ ಪತ್ರ ಬರೆದ. ತನಿಖೆಯಾಯಿತು. ಕೊನೆಗೆ ಅಧಿಕಾರ ನಾಲ್ವಡಿ ವೆಂಕಟಪ್ಪನಾಯಕನಿಗೆ ಹಸ್ತಾಂತರವಾಯಿತು.

ನಾಲ್ವಡಿ ವೆಂಕಟಪ್ಪನಾಯಕ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯದ ಕಿಡಿಕಾರಿದ. ಇದೇ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ದೇಶದ ನಾನಾ ಭಾಗಗಳಲ್ಲಿ ಬಂಡಾಯಗಳು ನಡೆದವು. ಈ ಎಲ್ಲಾ ಘಟನೆಗಳಿಂದ ಪ್ರೇರಿತನಾದ ನಾಲ್ವಡಿ ವೆಂಕಟಪ್ಪನಾಯಕ ಇಂಗ್ಲೀಷರ ವಿರುದ್ಧ ಹೋರಾಡಲು ಭೂಗತ ಕಾರ್ಯಗಳನ್ನು ನಡೆಸತೊಡಗಿದ. ಇದನ್ನು ತಿಳಿದ ಬ್ರಿಟಿಷ್ ಅಧಿಕಾರಿ ಥಾರ್ನ್‌ಹಿಲ್‌ನು ಡಿಸೆಂಬರ್ ೧೮೫೭ರಂದು ಕ್ಯಾಪ್ಟನ್ ಕ್ಯಾಂಬೆಲ್‌ಗೆ ಪತ್ರ ಬರೆದು ಕ್ಷಿಪ್ರ ಕಾರ್ಯಾಚರಣೆ ಕೈಗೊಳ್ಳಲು ಆದೇಶಿಸಿದ. ೧೮೫೮ರ ಜನವರಿ ೩೧ರ ವರೆಗೆ ಶಾಂತವಾಗಿದ್ದ ಸುರಪುರದ ಮೇಲೆ ನುಗ್ಗಿತು. ಎರಡೂ ಬಣಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ರೊಚ್ಚಿಗೆದ್ದ ಸುರಪುರದ ರೋಹಿಲರು ಸ್ಟೂವರ್ಟ್‌ನ ಮೂಳೆ ಮುರಿದರು. ನ್ಯೂಬೆರಿ ನೆಲಕ್ಕುರುಳಿದ. ಆತನ ರುಂಡವನ್ನು ನೋಡಿ ನಾಲ್ವಡಿ ವೆಂಕಟಪ್ಪನಾಯಕ ಭಯಭೀತನಾದ. ತನ್ನ ಪರಿವಾರವನ್ನು ರಾತ್ರೋರಾತ್ರಿ ಬೇರಡೆಗೆ ಕಳುಹಿಸಿ, ಆದ ಹೈದ್ರಾಬಾದ್‌ಗೆ ತೆರಳಿದ. ಫೆಬ್ರವರಿ ೯, ೧೮೫೮ರಂದು ಬೆಳಗಿನ ಜಾವ ಗಡಿಯಲ್ಲಿದ್ದ ಬ್ರಿಟಿಷ್ ಪಡೆ ಸುರಪುರದೊಳಗೆ ನುಗ್ಗಿತು, ಸುರಪುರ ಸಂಸ್ಥಾನ ಪತನವಾಯಿತು. ಹೈದ್ರಾಬಾದ್‌ನಲ್ಲಿ ಸುತ್ತಾಡುತ್ತಿದ್ದ ನಾಲ್ವಡಿ ವೆಂಕಟಪ್ಪನಾಯಕನ ಕುರಿತಾಗಿ ವನಪರ್ತಿ ರಾಜನಿಂದ ಸುದ್ದಿ ತಿಳಿದ ಹೈದ್ರಾಬಾದ್ ನಿಜಾಮ ಸಾಲರ್‌ಜಂಗ್, ನಾಲ್ವಡಿ ವೆಂಕಟಪ್ಪನಾಯಕನನ್ನು ಬಂಧಿಸಿ ಫೆಬ್ರವರಿ ಗಡಿಪಾರು ಶಿಕ್ಷೆ ವಿಧಿಸಿ ಅರಸರನನ್ನು ಮದ್ರಾಸ್ ಸಮೀಪದ ಚಂಗಲ್‌ಪೇಟೆ ದುರ್ಗದಲ್ಲಿಡಲು ಹೋಗುತ್ತಿದ್ದಾಗ ಹಾದಿಯಲ್ಲಿ ವಿಶ್ರಾಂತಿಗೆಂದು ತಂಗಿದ್ದಾಗ, ಮೋಸದಿಂದ ನಾಲ್ವಡಿ ವೆಂಕಟಪ್ಪ ನಾಯಕನನ್ನು ಗುಂಡುಹಾಕಿ ಕೊಲೆಮಾಡಲಾಯಿತು. ಇದು ಬ್ರಿಟಿಷ್ ಸರಕಾರ ಮತ್ತು ಹೈದ್ರಾಬಾದ್ ನಿಜಾಮ ಸರಕಾರದ ಕುಟಿಲ ತಂತ್ರವಾಗಿತ್ತು.

ಹೀಗೆ ಭಾರತದ ಪ್ರಥಮ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ದಕ್ಷಿಣಭಾರತದ ರಾಜರನ್ನೆಲ್ಲಾ ಒಂದುಗೂಡಿಸಿ, ಬ್ರಿಟಿಷರನ್ನು ಎದುರಿಸಲು, ಅವರನ್ನು ದೇಶದಿಂದ ಹೊಡೆದೋಡಿಸಬೇಕೆಂಬ ಸಂಕಲ್ಪದಿಂದ ೨೩ ವರ್ಷದ ತರುಣ ರಾಜಾ ನಾಲ್ವಡಿ ವೆಂಕಟಪ್ಪನಾಯಕ ತನ್ನೆಲ್ಲಾ ಸರ್ವಸ್ವ ವನ್ನು ಕೇವಲ ಸ್ವರಾಷ್ಟ್ರ ಹಾಗೂ ಸ್ವಧರ್ಮಕ್ಕಾಗಿ ಬಲಿದಾನಗೈದು ಹುತಾತ್ಮನಾದ. ದೇಶದ ಭವ್ಯ ಇತಿಹಾಸದ ರಾಷ್ಟ್ರಭಕ್ತರ ಸಾಲಿನಲ್ಲಿ ಸೇರಿ ಸುರಪುರಕ್ಕೆ ರಾಷ್ಟ್ರೀಯ ಮಹತ್ವ ತಂದು ಕೊಟ್ಟ. ಈತನ ಸಾವಿನೊಂದಿಗೆ ಸುರಪುರ ಸಂಸ್ಥಾನ ಬ್ರಿಟಿಷರ ಅಧೀನಕ್ಕೊಳಪಟ್ಟಿತು. ಇವರು ಕ್ರಿ.ಶ. ೧೮೬೧ರಲ್ಲಿ ಸುರಪುರದ ಆಡಳಿತವನ್ನು ನೋಡಿಕೊಳ್ಳಲು ''**ಹೈದ್ರಾಬಾದ್ ನಿಜಾಮನಿಗೆ ಒಪ್ಪಿಸಿದರು**'' **ನಾಲ್ವಡಿ ವೆಂಕಟಪ್ಪನಾಯಕನಿಗೆ ೮ ಜನ ರಾಣಿಯರಿದ್ದರು.** ಅವನಿಗೆ ನಿಜಾಮ ಸರ್ಕಾರ ಸುಖವೇತನವನ್ನು ಜೀವಿತದ ಕಾಲದವರೆಗೂ ನೀಡಿತು. ಈತನ ಪಟ್ಟದರಾಣಿ ರಂಗಮ್ಮ ಮುಜುಮದಾರ ವೆಂಕಟಪ್ಪನೊಂದಿಗೆ ಕ್ರಿ.ಶ. ೧೮೯೦ರಲ್ಲಿ ಲಂಡನ್ನಿನಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಸಂಸ್ಥಾನವನ್ನು ಮರಳಿ ಪಡೆಯಲು, ಪ್ರಶ್ನೆ ಕೇಳುವಂತೆ ಕಳುಹಿಸಿದ್ದಳು. ಇವಳ ಬೇಡಿಕೆ ತಿರಸ್ಕೃತಗೊಂಡಿತು. ತನಗೆ ಗಂಡು ಮಕ್ಕಳಿಲ್ಲದ ಕಾರಣ, ನಾಲ್ವಡಿ ವೆಂಕಟಪ್ಪನಾಯಕನ ಚಿಕ್ಕಪ್ಪ ರಾಜಾಪಿಡ್ಡನಾಯಕನ ಮಗ, ವೆಂಕಟಪ್ಪ ನಾಯಕನ ಪುತ್ರ ಕೃಷ್ಣಪ್ಪನಾಯಕನನ್ನು ದತ್ತಕ ತೆಗೆದುಕೊಂಡು, ಪೂರ್ವಜರ ಜಹಗೀರು ಗ್ರಾಮಗಳನ್ನು ಈತನಿಗೆ ನೀಡಿದಳು. ಕ್ರಿ.ಶ. ೧೯೦೬ರಲ್ಲಿ ಮರಣ ಹೊಂದಿದಳು. ಕೃಷ್ಣಪ್ಪ ನಾಯಕನು ಹೈದ್ರಾಬಾದ್ ವಿಮೋಚನೆಯಲ್ಲಿ ಪಾಲ್ಗೊಂಡಿದ್ದನು. ಈ ಸಂಸ್ಥಾನ ಕ್ರಿ.ಶ. ೧೯೪೮ ಸೆಪ್ಟಂಬರ್ ೧೮ರಂದು ಭಾರತದ ಭಾರತದ ಒಕ್ಕೂಟವನ್ನು ಸೇರಿತು. ಹೀಗೆ ಸುರಪುರದ ಪಾಳೆಗಾರರು ಚಿತ್ರದುರ್ಗದ ಪಾಳೆಗಾರರಂತೆ ತಮ್ಮದೇ ಆದ ವರ್ಚಸ್ಸನ್ನು ಹೊಂದಿದ್ದರು. ಇವರು ಅನೇಕ ಜನಪರ ಕಾರ್ಯಗಳನ್ನು ಕೈಗೊಂಡವರು. ಕೆರೆ, ಬಾವಿ, ದೇವಾಲಯ, ಕೋಟೆ ಕೊತ್ತಲುಗಳನ್ನು ಕಟ್ಟಿಸಿದ್ದಾರೆ. ಅನೇಕರಿಗೆ ಜಹಗೀರಗಳನ್ನು ನೀಡಿ ದ್ದಾರೆ. ಅಲ್ಲದೆ ಇವರ ಉತ್ಸವಗಳಿಗೆಗಾ ಜಾಗೀರು, ಇನಾಮು ಭೂಮಿಯನ್ನು ನೀಡಿದ್ದಾರೆ. ಇವರ ಆಸ್ಥಾನದಲ್ಲಿ ಅನೇಕ ಕಲಾವಂತರು, ಗಾಯಕರು, ಚಿತ್ರಗಾರರು, **ಶಿಲ್ಪಿಗಳು ಆಶ್ರಯ ದಾತರಾಗಿದ್ದರು.**

**ಚಿತ್ರಕಲೆಯಲ್ಲಿ ಸುರಪುರ ಪಾಳೆಗಾರರ ಮನೆತನಕ್ಕೆ ಅಗ್ರಸ್ಥಾನವಿತ್ತು. ಅಲ್ಲಿಯ ಚಿತ್ರಗಳ ತಂತ್ರ** ಮತ್ತು ವಿನ್ಯಾಸ ಉನ್ನತ ಸ್ಥಾನ ಪಡೆದಿದೆ. ಮೈಸೂರಿನ ಸಾಂಪ್ರದಾಯಕ ಕಲಾಕೃತಿಗಳು, ವಿಜಯನಗರ ಶೈಲಿಯ ಚಿತ್ರಗಳು, ಬಿಜಾಪುರದ ಆದಿಲ್‌ಶಾಹಿ ಮನೆತನದವರಿಂದ ಬಂದ ಕಲಾಕೃತಿಗಳಿಗಿಂತ ಸುರಪುರ ಪಾಳೆಗಾರರ ಕಲಾಕೃತಿಗಳು ತಮ್ಮದೇ ಆದ ವಿಶಿಷ್ಟತೆಯನ್ನು ಪಡೆದಿದೆ. ಲಂಡನ್‌ನಿನ ಕಲಾ ಸಂಗ್ರಹಾಲಯ, ಇಂಗ್ಲಿಂಡಿನ ವಿವಿಧ ನಗರಗಳಲ್ಲಿ, ದೆಹಲಿ, ಮುಂಬೈ, ಹೈದ್ರಾಬಾದ್‌ನ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಸಾಲಾರಜಂಗ ವಸ್ತುಸಂಗ್ರ ಹಾಲಯದಲ್ಲಿ ಇಂತಹ ಕಲಾಕೃತಿಗಳನ್ನು ನೋಡಬಹುದು. ಇಂದು ಇವರ ಪುತ್ರರಾದ ರಾಜಾ ವೆಂಕಟಪ್ಪನಾಯಕ (ತಾತಾ) ಸುರಪುರದ ಅರಮನೆಯಲ್ಲಿ ವಾಸಿಸುತ್ತಿದ್ದಾರೆ.

**೨. ಆನೆಗೊಂದಿ ಬೇಡ ಪಾಳೆಗಾರರು**

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಿಂದ ನೈರುತ್ಯಕ್ಕೆ ೧೨ ಕಿ.ಮೀ. ಅಂತರದಲ್ಲಿರುವ ಆನೆಗೊಂದಿ ಒಂದು ಪ್ರಸಿದ್ಧ ಐತಿಹಾಸಿಕ ತಾಣ. ಬೇಡ ಜನಾಂಗದ ಪಾಳೆಗಾರಿಕೆಯ ಮೂಲ ಸ್ಥಳವಾಗಿರುವ ಆನೆಗೊಂದಿಯನ್ನು ಅನೇಕ ಪಾಳೆಗಾರ ವಂಶಸ್ಥರು ತಮ್ಮ ಮೂಲ ಸ್ಥಳವೆಂದು ಹೇಳಿಕೊಳ್ಳುವುದುಂಟು. ಈ ಆನೆಗೊಂದಿಯ ಬೇಡ ಪಾಳೆಯಗಾರರ ಇತಿಹಾಸವನ್ನು 'ವಿಜಯನಗರ ಪೂರ್ವದ ಆನೆಗೊಂದಿ ಬೇಡ ಪಾಳೆಯಗಾರರು', ವಿಜಯನಗರ ಅವಧಿಯ ಆನೆಗೊಂದಿಯ ಬೇಡ ಪಾಳೆಗಾರರು', ಮತ್ತು 'ವಿಜಯನಗರೋತ್ತರ ಆನೆಗೊಂದಿ ಬೇಡ ಪಾಳೆಯಗಾರರು ಎಂದು ಮೂರು ಭಾಗಗಳಾಗಿ ವಿಭಾಗಿಸಬಹುದಾಗಿದೆ. ವಿಜಯನಗರ ಸಾಮ್ರಾಜ್ಯಕ್ಕಿಂತ ಮೊದಲು, ತುಂಗಭದ್ರ ನದಿ ದಂಡೆಯ ಮೇಲಿನ ಕುಮ್ಮಟದುರ್ಗದ ಅರಸರ ಕಾಲದಲ್ಲಿ ಬೇಡರು ಒಂದು ನಿಶ್ಚಿತವಾದ ನಿರ್ದಿಷ್ಟ ನೆಲೆಯನ್ನು ಕಂಡುಕೊಂಡರು. ಈ ಸಂದರ್ಭದಲ್ಲಿ ಬೇಡರು ಕುಮ್ಮಟದುರ್ಗದ ಸುತ್ತಮುತ್ತ ನೆಲೆಯೂರಿದರು. ಆನೆಗೊಂದಿ ಮೂಲತಃ ಬೇಡರದ್ದೇ ಆಗಿದೆ. ಆನೆಗೊಂದಿಯಲ್ಲಿ ಮೊದಲು ಸಂಸ್ಥಾನ ಸ್ಥಾಪಿಸಿದ ಮುಮ್ಮಡಿ ಸಿಂಗೇಯನಾಗಲಿ ಅವನ ಮಗನಾದ ಕಂಪಿಲರಾಯ ಮತ್ತು ಮೊಮ್ಮಗನಾದ ಕುಮಾರರಾಮನು ಬೇಡರೇ ಆಗಿದ್ದರು.[5] ಇದು ಅವರ ರಾಜ್ಯದ ಆಯಕಟ್ಟಿನ ಸ್ಥಳವಾಗಿತ್ತು.

ಆನೆಗೊಂದಿಯ ಬೇಡ ಪಾಳೆಯಗಾರರು ಕ್ರಿ.ಶ. ೧೩೫೦ಕ್ಕೂ ಮುಂಚೆ ಆಳ್ವಿಕೆ ನಡೆಸಿದ್ದರು ಎಂದು ಫೆರಿಸ್ತಾನ ಹೇಳಿಕೆಯಿಂದ ತಿಳಿದುಬರುತ್ತದೆ.[6] ಪೋರ್ಚುಗೀಸ್ ಪ್ರವಾಸಿ 'ಪೆರ್‌ನೋವ್ ನ್ಯೂನಿಜ್' ಪ್ರತಿನಿಧಿಯಾಗಿದ್ದ ಮಹ್ಮದ್ ಬಿನ್ ತೊಘಲಕ್ ಆನೆಗೊಂದಿಯ ಅರಸರ ಮೇಲೆ ದಾಳಿ ಮಾಡಿದನು. ಅಪಾರ ಸೈನ್ಯದೊಂದಿಗೆ ಆನೆಗೊಂದಿ ಅರಸರು ಅವರ ವಿರುದ್ಧ ಹೋರಾಡಿ ಗೆಲ್ಲುವುದು ಅಸಾಧ್ಯವಾದಾಗ, ಹತ್ತಿರದ ಚೆನ್ನಮಗೋಟದ ಪರಿಸರಕ್ಕೆ ತೆರಳುತ್ತಾನೆ. ನಂತರ ತನ್ನ ೫೦,೦೦೦ ಸೈನಿಕರಲ್ಲಿ ೫೦೦೦ ಸೈನಿಕರನ್ನು ಆಯ್ದುಕೊಂಡು ೧೨ ವರ್ಷ ಸತತವಾಗಿ ದೆಹಲಿಯ ಸುಲ್ತಾನರೊಂದಿಗೆ ಯುದ್ಧ ಮಾಡಿದ. ಈತನಿಗೆ ಅಪಾರ ನಷ್ಟವಾಯಿತು. ಕೊನೆಯಲ್ಲಿ ಆರು ಜನವೃದ್ಧರು ಉಳಿದುಕೊಂಡರು. ಆಗ ಸಾಮ್ರಾಜ್ಯದ ಬಹುಭಾಗ ದೆಹಲಿ ಸುಲ್ತಾನರ ದಂಗೆಗೆ ತುತ್ತಾಯಿತು. ದೆಹಲಿ ಸುಲ್ತಾನರು ವಾಪಸ್ಸು ಹೋಗಲು ತಯಾರಾದಾಗ ಸಮೃದ್ಧವಾದ ಈ ಪ್ರದೇಶವನ್ನು ಕಳೆದುಕೊಳ್ಳಲು ಇಷ್ಟಪಡದೆ ಸ್ಥಳೀಯರ ಮಾಹಿತಿ ಮೇರೆಗೆ ಈತನ ಸಲಹೆಗಾರರ ಸೂಚನೆಯಂತೆ ಉಳಿದಿದ್ದ ಆರು ಮಂದಿಯಲ್ಲಿ ಒಬ್ಬನಾದ ದೇವರಾಯನಿಗೆ ಪಟ್ಟಕಟ್ಟಲಾಯಿತು.[7]

ಇತ್ತ ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸ್ಥಾಪನೆಯಾಯಿತು. ಈ ವಿಜಯನಗರದ ತೊಟ್ಟಿಲಾಗಿ, ಮತ್ತು ಅದರ ಅವಿಭಾಜ್ಯ ಅಂಗವಾಗಿ, ಮೊದಲ ರಾಜಧಾನಿಯಾಗಿ ಆನೆಗೊಂದಿ ಪರಿಣಮಿಸಿತು. ಆಗ ಆನೆಗೊಂದಿಯಲ್ಲಿದ್ದ ನಾಯಕ ಅರಸರು ವಿಜಯನಗರದವರ ಅಧೀನ ರಾಗಿದ್ದರು. ಇಲ್ಲಿ ಆಳ್ವಿಕೆ ಮಾಡಿದವರು, ನಾಯಕ ಜನಾಂಗಕ್ಕೆ ಸೇರಿದವರೇ ವಿನಃ ಬೇರೆ ಜನಾಂಗದವರಲ್ಲವೆಂದು ನಿರ್ಧಾರವಾಗಿದೆ. ಇದಕ್ಕೆ ಪೂರಕವಾಗಿ ಆನೆಗೊಂದಿ ಸಂಸ್ಥಾನದ ಜಯರೇಖೆಯ ನಕಲು ಈ ರೀತಿ ಇದೆ: "ಶ್ರೀಗುರು ಪಂಪಾವಿರೂಪಕ್ಷನೇ ನಮಃ ಶಾಲಿವಾಹನ ಶಕ ವರ್ಷಂಗಳು ೧೫೩ಕ್ಕೆ ಸರಿಯಾದ ವಿರೋಧಿನಾಮ ಸಂವತ್ಸರದ ಚೈತ್ರ ಶುದ್ಧ ೫ ಭಾನುವಾರ ಚಂದನಾವತಿಯೆಂಬ ಆನೆಗೊಂದಿ ನರಪತಿ ದೊರೆಗಳ ಜಯರೇಖೆ ನಕಲು. ಶ್ರೀಮಾನ್ ರಾಜಾಧಿರಾಜ, ರಾಜತೇಜೋನಿಧಿ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ, ಕಸ್ತೂರಿ ತಿಲಕ, ಕಾಮಕೇತನ, ಚಂಡಪ್ರಚಂಡ, ಕುಲ ಭೇರುಂಡ, ನರಪತಿ ಮಂಡಲಾಧರ ಶ್ರೀಮಾನ್ 'ನಾಯಕವಂಶ' ನಿತ್ಯಾಚಾರ ಸತ್ಯಾಚಾರ, ಲಿಂಗಾಚಾರ, ಪ್ರವರ್ತನ ಸದ್ಧರ್ಮವುಳ್ಳ ಚಂದ್ರವಂಶ, ಮಹೀಪತಿಗೋತ್ರ, ಮನುಮುನಿಸೂತ್ರ ಸಂಜನಿತರಾದ ಮಂಜಪ್ಪನಾಯ್ಕ ಭೂಮೀಪತಿಯು ಶ್ರೀ ಲಕ್ಷ್ಮಿದೇವಿ ಹಿರೇರಾಜರ ಪೆಟ್ಟಿಗೆಯನ್ನು ಪೂಜಿಸುತ್ತಾ ಪಂಪಾಕ್ಷೇತ್ರ ನಿವಾಸಿಗಳಾದ ಹರಿಹರಸ್ವಾಮಿಗಳವರ ವರವಂ ಪಡೆದು ಸುಖದಿಂದ ರಾಜ್ಯಪಾಲನೆ ಮಾಡುತ್ತಿ ದ್ದರು''[8]. ಎಂಬ ವಿವರಣೆ ನೀಡುತ್ತದೆ.

ಅಲ್ಲದೆ ಆನೆಗೊಂದಿ ಕೆಲವು ಪಾಳೆಯಗಾರರ ಪೂರ್ವಜರ ತಾಣವಾಗಿತ್ತು. ರತ್ನಗಿರಿಯ ನಾಯಕನಾದ ಇರಸಪ್ಪನಾಯಕನ ಮಗ ಹಿರೇಗೌಡ ಕ್ರಿ.ಶ. ೧೩೯೯-೧೪೧೮ರಲ್ಲಿ ಆನೆಗೊಂದಿ ಯಲ್ಲಿ ಕಂಡು ಬಂದ ವಿಲ್ಲಂಚ್ಚರ ಹಾವಳಿಯನ್ನು ಎದುರಿಸುವಲ್ಲಿ ಸಹಾಯ ಮಾಡಿದನು. ಇದರಿಂದ ಸಂತೋಷಗೊಂಡ ಆನೆಗೊಂದಿ ಅರಸ ಈತನಿಗೆ ಅನೇಕ ಬಿರುದು ಬಾವಲಿಗಳನ್ನಿತ್ತು ಸನ್ಮಾನಿಸಿದ.[9] ಹರತಿಯ ದೊರೆ ತಿಪ್ಪರಾಜನ ತಂದೆ, ಇಲ್ಲವೆ ತಾತ ಆನೆಗೊಂದಿಯ ಕಡೆಯಿಂದ ವಲಸೆ ಬಂದವರು. ಹಾಗೆಯೇ ನಾಯಕನಹಟ್ಟಿ ಮನೆತನದ ಸ್ಥಾಪಕ ಕಾಟೇಮಲ್ಲ ನಾಯಕನು ಆನೆಗೊಂದಿಯ ಕಡೆಯಿಂದ ವಲಸೆ ಬಂದವನು.[10] ತರೀಕೆರೆಯ ಪಾಳೆಯಗಾರರ ವಂಶವೃತ್ತಾಂತದ ಪ್ರಕಾರ ಧೂಮರಾಜ ಎಂಬುವನು ವಿಜಯನಗರದಿಂದ ಬಂದವನು.[11] ಚಿತ್ರದುರ್ಗದ ಮೂಲಪುರಷ ಚಿತ್ರನಾಯಕ ಆನೆಗೊಂದಿಯ ಕಡೆಯಿಂದ ಬಂದು ಉಚ್ಚಂಗಿ ದುರ್ಗ, ಬಿಳಿಚೋಡು, ಕೋಗುಂಟೆ, ಹೆಬ್ಬಾಳು ಮಾರ್ಗವಾಗಿ ನೀರ್ಥಡಿಗೆ ಬಂದನು.[12] ವಿಜಯನಗರ ಅಸ್ತಿತ್ವದಲ್ಲಿದ್ದರೂ ಅವರ ಅಧೀನದಲ್ಲಿ ಆನೆಗೊಂದಿ ಬೇಡ ಪಾಳೆಯಗಾರರು ಅಧಿಕಾರದಲ್ಲಿದ್ದರು. ಆಗ ಆನೆಗೊಂದಿ ವಿಜಯನಗರದ ಕೊನೆಯ ಠಾಣೆಯಾಗಿತ್ತು. ಕ್ರಿ.ಶ. ೧೫೬೫ರಲ್ಲಿ ವಿಜಯನಗರ ಪತನವಾದ ಮೇಲೆ ಅರವೀಡುವಂಶ, ಪೆನುಗೊಂಡೆ, ಚಂದ್ರಗಿರಿ ಮತ್ತು ವೆಲ್ಲೂರಿನಲ್ಲಿ ನೆಲೆಯೂರಿದರು. ಆಗ ವಿಜಯನಗರದವರ ಅಧೀನದಲ್ಲಿದ್ದ ಆನೆಗೊಂದಿ ಸ್ವತಂತ್ರವಾದ ಸಣ್ಣರಾಜ್ಯವಾಗಿ ರೂಪುಗೊಂಡಿತು. ಆಗ ಇದು ೧೨೧ ಹಳ್ಳಿಗಳನ್ನು ಒಳಗೊಂಡಿದ್ದು, ವಾರ್ಷಿಕ ವರಮಾನ ೧,೭೮,೭೨೫ ಬಂಗಾರದ ಪಗೋಡಗಳಾಗಿತ್ತು. ಕೆಲವೇ ದಿನಗಳಲ್ಲಿ ಆನೆಗೊಂದಿಯು ಬಿಜಾಪುರ ಮತ್ತು ಗೋಲ್ಕೊಂಡ ಅರಸರ ಅಧಿಕಾರ ವ್ಯಾಪ್ತಿಗೆ ಬಂದಿತು.[13] ಕ್ರಿ.ಶ. ೧೬೮೯ರಲ್ಲಿ ಆನೆಗೊಂದಿಯು ಔರಂಗಜೇಬನ ವಶವಾಗುತ್ತದೆ. ಆಗ ಅವರ ಸಾಮಂತಿಕೆಯನ್ನು ಒಪ್ಪಿಕೊಂಡ ಆನೆಗೊಂದಿಯೂ ಔರಂಗಜೇಬನ ವಶವಾಗುತ್ತದೆ. ಆಗ ಅವರ ಸಾಮಂತಿಕೆಯನ್ನು ಒಪ್ಪಿಕೊಂಡ ಆನೆಗೊಂದಿ ಸಂಸ್ಥಾನಕ್ಕೆ ೯ ವಿಭಾಗಗಳನ್ನು ಕ್ರಿ.ಶ. ೧೭೦೭ರಲ್ಲಿ ಅಸಫ್‌ಜಾ ಎಂಬ ಹೈದ್ರಾಬಾದಿನ ವೈಸರಾಯ್ ಆನೆಗೊಂದಿ

ಎಲ್ಲಾ ಭೂಮಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಆದರೂ ಆನೆಗೊಂದಿ ಅರಸರು ತಮ್ಮ ಸಂಬಂಧಿನಾಯಕ ಅರಸು ಮನೆತನಗಳ ಕೆಲವು ಸಣ್ಣಪುಟ್ಟ ದಾಳಿಗಳಲ್ಲಿ ಅವನಿಗೆ ಬೆಂಬಲವನ್ನು ನೀಡುತ್ತಿದ್ದುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ವಡ್ಡು, ದರೋಜಿ, ಬಾಣಾರಾವಿ, ಪಾಳೆಯಗಾರರಿಗೆ ಆನೆಗೊಂದಿ ಅರಸರು ಪ್ರೋನೀಡಿದ್ದುದು ಕಂಡುಬರುತ್ತದೆ.

ಆನೆಗೊಂದಿ ಬೇಡ ಪಾಳೆಗಾರರು ಚಿತ್ರದುರ್ಗದ ಹಿರೇಮದಕರಿನಾಯಕ (ಕ್ರಿ.ಶ. ೧೭೨೧-೧೭೪೯) ನಿಗೆ ತನ್ನ ಮಗಳಾದ ಗಂಡೋಬವ್ವ, ಅಥವಾ ಗಂಡಿಲ ಓಬವ್ವ, ನಾಗತಿಯನ್ನು ಕೊಟ್ಟು ವೈವಾಹಿಕ ಸಂಬಂಧ ಬೆಳೆಸಿದ್ದರು.[14] ಈಕೆ ಪಟ್ಟದರಾಣಿಯಾಗಿದ್ದು, ಮಗ ಕಸ್ತೂರಿ ರಂಗಪ್ಪನಾಯಕನ ತರುವಾಯ ಎರಡು ವರ್ಷಗಳವೆರಗೆ ಚಿತ್ರದುರ್ಗದ ಅಧಿಕಾರ ವಹಿಸಿ ಕೊಂಡಿದ್ದಳು. ಕ್ರಿ.ಶ. ೧೭೪೯ರಲ್ಲಿ ಆನೆಗೊಂದಿಯ ಭೂಪ್ರದೇಶಗಳು ಮರಾಠರ ದಾಳಿಗೊಳ ಪಟ್ಟವು. ಸೋತ ಆನೆಗೊಂದಿ ಅರಸರಿಗೆ ವಾರ್ಷಿಕವಾಗಿ ೭೦೦೦ ಪಗೋಡ ತೆರಿಗೆಯನ್ನು ಹೇರಿದರು.[15] ಕ್ರಿ.ಶ. ೧೭೯೯ರ ತರುವಾಯ ಹೈದ್ರಾಬಾದ್ ನಿಜಾಮ ಮತ್ತು ಬ್ರಿಟಿಷರ ಒಪ್ಪಂದದ ಮೇರೆಗೆ ಆನೆಗೊಂದಿಯು ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ವರ್ಗಾವಣೆ ಯಾಯಿತು. ಆಗ ಇವರಿಗೆ ನಿಜಾಮರು ನೀಡುತ್ತಿದ್ದ ಮಾಸಾಶನವನ್ನು ತೆಗೆದು ಹಾಕಿ ಮೊತ್ತಕ್ಕೆ ಸಮನಾದ ಆದಾಯುವುಳ್ಳ ೫ ಗ್ರಾಮಗಳನ್ನು ಜಹಗೀರಾಗಿ ನೀಡಿದರು. ಆಗ ಆನೆಗೊಂದಿಯ ಅರಸರು ಇನ್ನೂ ೧೪ ಗ್ರಾಮಗಳನ್ನು ಹೊಸದಾಗಿ ನಿರ್ಮಿಸಿಕೊಂಡರು.

ಕ್ರಿ.ಶ. ೧೮೨೪ರಲ್ಲಿ ತುಂಗಭದ್ರ ನದಿಯ ದಕ್ಷಿಣ ದಂಡೆಯ ಮೇಲಿನ ಭೂಮಿಯ ಬದಲಾಗಿ, ಬ್ರಿಟಿಷರಿಂದ ಮೊದಲ ವಿಶ್ರಾಂತಿ ವೇತನ ಪಡಿದವನು ಆನೆಗೊಂದಿಯ ಅರಸ ತಿರುಮಲರಾಯ. ಈತನ ನಂತರ ಮಗ ವೀರವೆಂಕಟಪತಿ ನಂತರ ಈತನ ಮಗ ವೆಂಕಟ ರಾಯಲು, ನಂತರ ಆತನ ಸಹೋದರ ಕೃಷ್ಣದೇವರಾಯ (ಕ್ರಿ.ಶ. ೧೮೭೧-೧೮೭೨) ಈತನು ತರುವಾಯ ಈತನ ಚಿಕ್ಕಮ್ಮಳ ಮಗ ಪೆದ್ದ ನರಸಿಂಹರಾಜು ಆನೆಗೊಂದಿಯ ಅರಸನಾದ. ಈತನ ಮಗ ಮರಣದ ನಂತರ ರಾಣಿನರಸಿಂಗಮ್ಮ, ಈಕೆಯ ನಂತರ ಈಕೆಯ ಸಹೋದರಿ ಕುಪ್ಪಮ್ಮ ಪ್ರಾಭಾರಿ ರಾಣಿಯಾಗುತ್ತಾಳೆ. ತನ್ನ ಕಿರಿಯ ಸಹೋದರ ಪಂಪಾಪತಿ ರಾಜನನ್ನು ದತ್ತಕ ತೆಗೆದುಕೊಳ್ಳುತ್ತಾಳೆ. ನಂತರ ಶ್ರೀರಂಗರಾಯ (ಕ್ರಿ.ಶ. ೧೮೮೯-೧೯೧೮) ದುರ್ಬಾರ್ ಕೃಷ್ಣರಾಯ, ಶ್ರೀರಂಗದೇವರಾಯ ಕ್ರಮವಾಗಿ ಅಧಿಕಾರ ಸ್ವೀಕರಿಸುತ್ತಾರೆ. ಆಗ ನಿಜಾಮ ರಾಜ್ಯದ ಭಾಗವಾಗಿದ್ದ ಆನೆಗೊಂದಿಯು ಭಾರತದ ಸ್ವಾತಂತ್ರ್ಯದ ನಂತರ ೧೯೪೮ ಸೆಪ್ಟಂಬರ್ ೧೮ರಲ್ಲಿ ಭಾರತದ ಒಕ್ಕೂಟ ಸೇರಿತು. ಆನೆಗೊಂದಿ ಪಾಲೆಗಾರರ ಮನೆದೇವರು ಶ್ರೀರಂಗನಾಥ ಪ್ರತಿವರ್ಷ ಚಿತ್ರಭಾನು ನಾಮ ಸಂವತ್ಸರ ಚೈತ್ರ ಕೃಷ್ಣ ಪಂಚಮಿ ದಿನದಂದು ಜಾತ್ರೆ ನಡೆಯುತ್ತದೆ. ಅಂದು ಅರಸರ ಸಮ್ಮುಖದಲ್ಲಿ ಅನೇಕ ಕುಸ್ತಿ, ಕಲ್ಲು ಎತ್ತುವುದು, ಉಸುಕಿನ ಚೀಲ ಎತ್ತವುದು ಮುಂತಾದ ಶಕ್ತಿ ಪ್ರದರ್ಶನ, ಆಟೋಟಗಳು ಜರುಗುತ್ತಿದ್ದವು. ಗೆದ್ದವರಿಗೆ ಅರಸರು ಬೆಳ್ಳಿಯ ಕಡಗಗಳನ್ನು ನೀಡಿ ಸನ್ಮಾನಿಸುತ್ತಿದ್ದರು. ಇವರ ಆರಾಧ್ಯ ದೈವಗಳು ತಿರುಪತಿ ತಿಮ್ಮಪ್ಪ, ವರಮಹಾಲಕ್ಷ್ಮಿ, ಮೇಗೋಟಾದ ದುರ್ಗಾದೇವಿ, ಗಣೇಶ ಮುಂತಾದವು ಗಳು, ಇಂದು ಆನೆಗೊಂದಿಯ ಅರಸು ಮನೆತನದ ವಂಶಸ್ಥರು, ಆನೆಗೊಂದಿ, ಗಂಗಾವತಿ ಮತ್ತು ಹೊಸಪೇಟೆಯಲ್ಲಿ ವಾಸವಾಗಿದ್ದಾರೆ. ರಾಜಕೀಯವಾಗಿ ಆರ್ಥಿಕವಾಗಿಯೂ ಪ್ರಬಲ ರಾಗಿದ್ದಾರೆ.

**೩. ಗುಡಗುಂಟಿ ಬೇಡ ಪಾಳೆಗಾರರು**

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಿಂದ ೧೯ ಕಿ.ಮೀ ದೂರದಲ್ಲಿರುವ ಗುಡಗುಂಟಿಯಲ್ಲಿ ಒಂದು ಬೇಡ ಪಾಳೆಯಗಾರರು ಮನೆತವಿತ್ತು. ಸುರಪುರ ಹಾಗೂ ಗುಡಗುಂಟಿ ನಾಯಕ ಅರಸರು ಒಂದೇ ಮೂಲಕ್ಕೆ ಸೇರಿದವರು. ಇವರು 'ಗೋಸಲ' ವಂಶದವರು. ಜಕ್ಕಪ್ಪದೇಸಾಯಿಯ ಹಿರಿಯ ಮಗನಾದ ಗಡ್ಡಿಲಿಂಗನಾಯಕನೇ ಗುಡಗುಂಟಿ ಮನೆತನದ ಸ್ಥಾಪಕ. ಈ ಮೊದಲು ಕಕ್ಕೇರಿ ಭಾಗವು ಬಿಜಾಪುರ ಆದಿಲ್‌ಷಾಹಿಗಳ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟಿದ್ದರಿಂದ ಲಿಂಗನಾಯಕ ಗುಡಗುಂಟಿಯ ಪರಗಣಿಯ ಸರದೇಸಾಯಯಾಗಿ ಬಡ್ತಿ ಹೊಂದಿ ಇಲ್ಲಿ ಆಳ್ವಿಕೆ ಪ್ರಾರಂಭಿಸಿದ. ಈತ ತನ್ನ ರಾಜ್ಯವನ್ನು ವಿಸ್ತರಿಸುವುದಕ್ಕಾಗಿ ಬಿಜಾಪುರದ ಆದಿಲ್‌ಷಾಹಿಗಳೆಡೆಗೆ ಹೋದಾಗ ಷೇಖಮಿನಹಾಜ ಸರದಾರನಿಂದ ಕೊಲ್ಲಲ್ಪಟ್ಟನು. ಈತನ ಮರಣದ ತರುವಾಯ ಆತನ ಮಗ ಜಡಿಸೋಮಪ್ಪ ನಾಯಕ ಬಿಜಾಪುರದ

ಸುಲ್ತಾನರಲ್ಲಿ ತನ್ನ ಶೌರ್ಯ, ಸಾಹಸಗಳನ್ನು ತೋರಿಸಿದ್ದಕ್ಕಾಗಿ 'ಸರ್ಜಾಬಹುದ್ದೂರ' ಎಂಬ ಬಿರುದನ್ನು ಪಡೆದನು. ಜೊತೆಗೆ ಕ್ರಿ.ಶ. ೧೬೬೯ರಲ್ಲಿ ಇಮ್ಮಡಿ ಅಲಿ ಆದಿಲ್‌ಶಾಹನಿಂದ ಒಂದು ಫಾರಸಿ ಸನದು ದೊರಕಿದೆ. ಈ ಸನದಿನಲ್ಲಿ ಸಮತ ಹೈಚಬಾಳು ಮತ್ತು ಕಕ್ಕೇರಿಯ, ಗುಡಗುಂಟಿ ಕೆಲವು ಹಳ್ಳಿಗಳನ್ನು ಜಡಿಸೋಮನಾಯಕನಿಗೆ ಇನಾಮು ಕೊಡಲಾಗಿದ್ದು ಇದನ್ನು ಗುಡಗುಂಟಿ ಅಥವಾ ಮಾದರಾಯನ ಕೋಟೆಯ ದೇಸಾಯಿ ಮತ್ತು ನಾಡಗೋಡರಿಗೆ ಸಂಬೋಧಿಸಲಾಗಿದೆ.[16] ಹೀಗಾಗಿ ಗುಡಗುಂಟಿ ಸಂಸ್ಥಾನವು ಕ್ರಿ.ಶ. ೧೬೬೯ರಲ್ಲಿ ಸ್ಥಾಪನೆಯಾಗಿದೆ.

ಈತನ ತರುವಾಯ ಇಮ್ಮಡಿಲಿಂಗನಾಯಕ, ಸೋಮಪ್ಪನಾಯಕರು ಅನುಕ್ರಮವಾಗಿ ಅಧಿಕಾರಕ್ಕೆ ಬರುತ್ತಾರೆ. ವಾಗಿನಗೇರಿಯು ಔರಂಜೇಬನ ವಶವಾದಾಗ ಸುರಪುರದ ಪೀತಾಂಬರಿ ಪಿಡ್ಡನಾಯಕನು ತಪ್ಪಿಸಿಕೊಂಡು ಕೃಷ್ಣಾನದಿಯನ್ನು ದಾಟಿ ಗುಡಗಂಟಿಗೆ ತಲುಪಿದನು. ಗುಡಗುಂಟಿ ಸೋಪಮಪ್ಪನಾಯಕನು ಈತನನ್ನು ರಕ್ಷಿಸಿದನು. ಅಲ್ಲದೇ ಪೀತಾಂಬರಿ ಪಿಡ್ಡ ನಾಯಕನೊಂದಿಗೆ ಸೋಮಪ್ಪನಯಕ ಕನಕಗಿರಿಯ ಉಡಚನಾಯಕನ ರಕ್ಷಣೆಗೆ ತೆರಳಿ ದನು. ಅಷ್ಟೊತ್ತಿಗೆ, ಬಿಜಾಪುರವು ಮೊಘಲ್‌ರ ರಾಜ್ಯದ ಒಂದು ಸುಬೆ (Division) ಯನ್ನಾಗಿ ಮಾಡಲಾಗಿತ್ತು. ಚೇನಕುಲಿಚಖಾನನು ಸುಬೇದಾರನಾಗಿದ್ದನು. ಅವನ ನಂತರ ಈ ಸುಬೆಯು ಅಸಫಜಾಹನ ವಶದಲ್ಲಿತ್ತು. ಅವನು ಗುಡಗುಂಟಿಯಲ್ಲಿ ಹಿಮ್ಮತ್‌ಯಾರ್ ಖಾನ್ ಎಂಬುವವನನ್ನು ಅಧಿಕಾರಿಯನ್ನಾಗಿ ನೇಮಿಸಿದ್ದನು. ಆಗ ಪೀತಾಂಬರಿಪಿಡ್ಡನಾಯಕ, ಹಿಮ್ಮತ್‌ಯಾರ್‌ಖಾನ್‌ನನ್ನು ಹೊಡೆದೋಡಿಸಿ, ಪುನಃ ಸೋಮಸರ್ಜನಾಯಕನಿಗೆ ಗುಡಗುಂಟಿ ಸಂಸ್ಥಾನವನ್ನು ಮರಳಿಸಿದನು.

ಗುಡಗುಂಟಿಯ ಮೇಲೆ ಗಜೇಂದ್ರಗಡದವರು ಆಕ್ರಮಣ ಮಾಡಿದ್ದರಿಂದ ಅಪಾರ ಹಾನಿಯಾಯಿತ್ತು. ಆಗ ಗುಡಗುಂಟಿಯ ಅರಸ, ಸುರಪುರದ ಇಮ್ಮಡಿ ವೆಂಕಟಪ್ಪನಾಯಕನಲ್ಲಿ ಆರ್ಥಿಕ ಸಹಾಯವನ್ನು ಬೇಡಿದನು. ವೆಂಕಟಪ್ಪನಾಯಕ ಸೂರಕ್ಕೆ ಒಂದು ರೂಪಾಯಿಯ ಬಡ್ಡಿಯಂತೆ ೩೦ ಸಾವಿರ ರೂಪಾಯಿಗಳನ್ನು ನೀಡಿದನು. ಗುಡಗುಂಟಿ ಅರಸ ಹಣದ ಸಲುವಾಗಿ ತಮ್ಮ ಭಾಗದ ಹುಣಸಗಿ ಮತ್ತು ೩೭ ಗ್ರಾಮಗಳನ್ನು ಒತ್ತೆ ಹಾಕಿದರು. ಈ ಹಳ್ಳಿಗಳನ್ನು ಬಿಟ್ಟು ಕೊಡಲು ಗುಡಗುಂಟಿ ಅರಸ ವೆಂಕಟಪ್ಪನಾಯಕನನ್ನು ಕೇಳಿಕೊಂಡನು. ವೆಂಕಟಪ್ಪನಾಯಕನು ತಾನು ನೀಡಿದ ಹಣವನ್ನು ಬಡ್ಡಿಸಮೇತ ಮರಳಿಸಿದರೆ ಗ್ರಾಮಗಳನ್ನು ಬಿಡುವುದಾಗಿ ಉತ್ತರಕೊಟ್ಟನು. ಗುಡಗುಂಟಿಯ ಅರಸ, ವೆಂಕಟಪ್ಪನಾಯಕನ ಉತ್ತರಕ್ಕೆ ಸಿಟ್ಟಿಗೆದ್ದನು. ಅರಕೇರಿಯ ೫ ಗ್ರಾಮಗಳು, ಕಕ್ಕೇರಿ, ರಾಜನ ಕೋಳೂರು, ಹುಣಸಗಿ, ಕಲ್ದೇವನಹಳ್ಳಿಗಳನ್ನು ಲೂಟಿಮಾಡಿದರು. ಇದನ್ನು ಕೇಳಿದ ವೆಂಕಟಪ್ಪನಾಯಕ ಸೈನ್ಯದೊಂದಿಗೆ ಗುಡಗುಂಟಿಗೆ ದಾಳಿಮಾಡಿದನು. ಇದನ್ನು ಅರಿತ ಗುಡಗುಂಟಿ ಅರಸ ಗೆಜ್ಜಲಗಟ್ಟಿ, ನೀರಲಕೇರಿ, ರೌಡಲಬಂಡಿಯ ನಾಡಗೌಡರ ಸಹಾಯವನ್ನು ಪಡೆದು ಸುರಪುರದ ಸೈನ್ಯವನ್ನು ಎದುರಿಸಿದರು. ಆದರೆ ಸುರಪುರದವರಿಗೆ ಜಯ ಲಭಿಸಿತು. ಗುಡಗುಂಟಿ ಅರಸ ಕನಕಗಿರಿಗೆ ಓಡಿ ಹೋದನು. ನಂತರ ಕನಕಗಿರಿಯ ಅರಸರ ಮಧ್ಯಸ್ಥಿಕೆಯಿಂದ ಗುಡಗುಂಟಿಯನ್ನು ಸುಪುರದರಸರು ಗುಡಗುಂಟಿಯ ಅರಸರಿಗೆ ಬಿಟ್ಟುಕೊಟ್ಟರು.

ರಾಜಾಸೋಮಲಿಂಗನಾಯಕರಿಗೆ ಮಕ್ಕಳಿರಲಿಲ್ಲ. ಅಷ್ಟೊತ್ತಿಗೆ ನಿಜಾಮು ಸರ್ಕಾರ ಗುಡಗುಂಟಿಯನ್ನು ಆಕ್ರಮಿಸಿಕೊಂಡಿತು. ಆಗ ಅವರ ಆಜ್ಞೆಯಂತೆ ರಾಜಾವೆಂಕಟಪ್ಪನಾಯಕನ ಪತ್ನಿ ರಾಣಿ ಕಾಟಮ್ಮ ಅಧಿಕಾರವನ್ನು ವಹಿಸಿಕೊಂಡಳು. ನಂತರ ಅವರ ಆಜ್ಞೆಯ ಮೇರೆಗೆ ರಾಣಿ ಕಾಟಮ್ಮ ತನ್ನ ಮೈದುನನ ಮಗನಾದ ರಾಜಾ ಜಡಿಸೋಮಪ್ಪನಾಯಕನನ್ನು ದತ್ತಕ ತೆಗೆದುಕೊಂಡಳು. ಆಗ ನಿಜಾಮು **ಸರ್ಕಾರ ಸಂಸ್ಥಾನದ ಆಡಳಿತದ ನಿರ್ವಹಣೆಗಾಗಿ 'ನಾಜಿಮ್' ಎಂಬ ಅಧಿಕಾರಿಯನ್ನು ನೇಮಿಸಿತು.** ರಾಜಾಜಡಿಸೋಮಪ್ಪನಾಯಕ ತೀರಿದ ಬಳಿಕ ಈ ಸಂಸ್ಥಾನವನ್ನು ನಿಜಾಮ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ೮ ತಿಂಗಳಿನ ನಂತರ ಈ ಮನೆತನದ ರಾಣಿ ಗೌರಮ್ಮನಿಗೆ ಸಂಸ್ಥಾನದ ಆಡಳಿತವನ್ನು ವಹಿಸಿಕೊಟ್ಟರು. ರಾಣಿ ಗೌರಮ್ಮ ನಿಜಾಮ ಸರ್ಕಾರದ ಅನುಮತಿಯ ಮೇರೆ ತನ್ನ ಮೊಮ್ಮಗನಾದ ರಾಜಾತಿಪ್ಪ ರಾಜ ಜಡಿಸೋಮನಾಯಕ (ಕ್ರಿ.ಶ. ೧೯೦೧-೧೯೫೭ )ನನ್ನು ದತ್ತಕ ತೆಗೆದು ಕೊಂಡಳು. ಈತನೇ ಈ ಸಂಸ್ಥಾನದ ಕೊನೆಯ ಅರಸ. ಈ ಸಂಸ್ಥಾನದ ಅಧೀನದಲ್ಲಿ ೪೪ ಹಳ್ಳಿಗಳಿದ್ದವು. ಈ ಸಂಸ್ಥಾನದ ಕಂದಾಯ ೫೦,೦೦೦ರೂ ಆಗಿತ್ತು. ಅದರಲ್ಲಿ ೭೦೦೦ರೂ. ಗಳನ್ನು ನಿಜಾಂ

ಸರ್ಕಾರಕ್ಕೆ ಕೊಡಬೇಕಾಗಿತ್ತು. ಈ ಸಂಸ್ಥಾನದಲ್ಲಿ ಆಡಳಿತದ ಅನುಕೂಲಕ್ಕಾಗಿ ೪ ವಿಭಾಗ ಗಳಿದ್ದವು. ಮೌಲ್, ಫೌಜದಾರಿ, ದಿವಾನಿ ಮತ್ತು ಪೋಲೀಸ್. ಈ ವಿಭಾಗಗಳಿಗೆ ಪ್ರತ್ಯೇಕ ಕಾರ್ಯಗಳಿದ್ದವು. ಈ ಅರಸರು ತಮ್ಮ ಅಧಿಕಾರಾವಧಿಯಲ್ಲಿ ವಿನೋಬಾಭಾವೆಯರ ಭೂದಾನ ಚಳುವಳಿಗೆ ಸ್ಪಂದಿಸಿ ೨೦೦ ಎಕರೆ ಭೂಮಿಯನ್ನು ಭೂದಾನ ಮಾಡಿದ್ದಾರೆ. ದೇಶ ಸ್ವಾತಂತ್ರ್ಯ ಗಳಿಸಿದ ನಂತರ ದೇಶದ ಎಲ್ಲಾ ಅರೊಸತ್ತಿಗೆಗಳು ಭಾರತದ ಒಕ್ಕೂಟದಲ್ಲಿ ಲೀನವಾದರೂ ಹೈದ್ರಾಬಾದ್ ಸಂಸ್ಥಾನದ ಸಮಕಾಲೀನ ಗುಡಗುಂಟಿ ಸಂಸ್ಥಾನವು ೧೯೪೮ ಸೆಪ್ಟಂಬರ್ ೧೮ರವರೆಗೆ ಅಧಿಕಾರವನ್ನು ಬಿಟ್ಟುಕೊಟ್ಟಿರಲಿಲ್ಲ.

ಈ ಮನೆತನದ ಅರಸರು ಪ್ರಜೆಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದವ ರಾಗಿದ್ದು, ಸರ್ವಧರ್ಮ ಸಹಿಷ್ಣುತ ಗುಣವನ್ನು ಹೊಂದಿದವರಾಗಿದ್ದರು. ಎಲ್ಲ ಧರ್ಮೀಯ ಹಬ್ಬ ಹರಿದಿನಗಳಲ್ಲಿ ಮುಕ್ತವಾಗಿ ಭಾಗವಹಿಸುತ್ತಿದ್ದ ಇವರು ಮೊಹರಂ, ಉರುಸು, ದೀಪಾವಳಿ, ಮಹಾನವಮಿ ಹಾಗೂ ಯುಗಾದಿಗಳನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಅಂದು ಬಡಬಗ್ಗರಿಗೆ ದಾನ ನೀಡುತ್ತಿದ್ದರು. ತಮ್ಮ ರಾಜಾಶ್ರಯದಲ್ಲಿದ್ದವರಿಗೆ ಜಮೀನನ್ನು ಇನಾಮವಾಗಿ ನೀಡಿದ್ದಾರೆ. ಅವರಲ್ಲಿ ಮುಜುಂದಾರರು, ಜೋಪಾದಾರರು, ಹವಾಲ್ದಾರರು, ಸುಬೇದಾರರು, ಆನೆಮಾವುತರು, ಕಮತರರು, ನೀರು ಹೊರುವವರು, ತಲೆಮಂಡಿ ತೆಗೆಯುವವರು, ಮುರ್ಷದ್ ಖಾಜಿಗಳು ಮುಂತಾದವರು.

ಇವರು ಮನೆದೇವರು ಕಕ್ಕೇರಿಯ ಶ್ರೀ ಸೋಮನಾಥ, ಆರಾಧ್ಯದೇವರು ಗುಡಗುಂಟಿಯ ಶ್ರೀ ಅಮರೇಶ್ವರ ಪ್ರತಿ ಸಂವತ್ಸರದ ಫಾಲ್ಗುಣ ಮಾಸರದ ಶುಕ್ಲ ಪೌರ್ಣಿಮೆಯೆಂದು ಶ್ರೀ ಅಮರೇಶ್ವರನ ರಥೋತ್ಸವ ನಡೆಯುತ್ತದೆ. ಈ ರಥೋತ್ಸವಕ್ಕೆ ಗುಡುಗುಂಟಿ ಸಂಸ್ಥಾನದ ಪಾಳೆಯಗಾರರು ಫಲಪುಷ್ಪಗಳನ್ನು ಅರ್ಪಿಸಿದ ಬಳಿಕವೇ ರಥ ಸಾಗುತ್ತದೆ.

ಇವರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅನೇಕ ದೇವಾಲಯಗಳನ್ನು ಮಸೀದಿಗಳನ್ನು ಕೋಟೆ ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ವೆಂಕಟೇಶ್ವರ **ಸೋಮನಾಥ ರಾಜಗುರುಮಠ, ಈಶ್ವರ, ರಾಮಲಿಂಗೇಶ್ವರ, ಹನುಮ, ಉಗ್ರಣಪ್ಪ, ಕಳಸ** ದೇವಾಲಯಗಳು, ಹುಸೇನ ಬಾಷಾದರ್ಗಾ, ಈದಗಾ ಮಸೀದಿ, ಜಾಮಾಮಸೀದಿಗಳನ್ನು ನಿರ್ಮಿಸಿದ್ದಾರೆ. ಇವರ ಆಸ್ಥಾನದಲ್ಲಿ ಜ್ಯೋತಿಷಿ, ಪುರಾಣಿಕ, ವಿದ್ವಾಂಸರಿಗೆ, ಕಲಾವಿದರಿಗೆ ರಾಜಾಶ್ರಯ ನೀಡಿದ್ದರು. ಅಂದು ಬರಹಗಾರರೂ ಸಾಹಿತಿಗಳೂ ಆಗಿದ್ದ ಶ್ರೀರಾಮಾಚಾರ್ಯ ಜೋಶಿ ಎಂಬುವರು ಇವರ ಆಸ್ಥಾನದಲ್ಲಿದ್ದರು.

ಕಲಾಪ್ರಿಯರಾಗಿದ್ದ ಈ ಪಾಳೆಯಗಾರರು ತಮ್ಮ ಸಂಸ್ಥನಾದಲ್ಲಿ ಅನೇಕ ನಾಟಕಗಳನ್ನು ಆಡಿಸಿದ್ದರಲ್ಲದೇ ಸ್ವತಃ ತಾವೇ ಬೆಳಗಿನವರೆಗೆ ನಾಟಕಗಳನ್ನು ಕುಳಿತು ನೋಡುತ್ತಿದ್ದರು. ಕಲಾವಿದರಿಗೆ ಅನೇಕ ಗೌರವ ಸನ್ಮಾನಗಳನ್ನು ಮಾಡುತ್ತಿದ್ದರು.

ಇಂದು ಈ ಮನೆತನದ ವಂಶಸ್ಥರಾದ ರಾಜಾ ಅಮರಪ್ಪನಾಯಕರು ಗುಡಗುಂಟಿಯ ಅರಮನೆಯಲ್ಲಿ ವಾಸವಾಗಿದ್ದಾರೆ. ಇವರು ಎರಡು ಸಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆ ಯಾಗಿದ್ದರು, ಹಾಗೂ ಲಿಂಗಸುಗೂರು ಭಾಗದ ಪ್ರಜೆಗಳು ಇವರನ್ನು 'ರಾಜಕೀಯ ಗುರು' ಎಂದೇ ಕರೆಯುತ್ತಾರೆ. ಸದ್ಯ ಇವರ ಪುತ್ರ ರಾಜಾ ಸೋಮನಾಥನಾಯಕರು ಗುಡಗುಂಟಿ ಗ್ರಾಮಪಂಚಾಯತಿಯ ಅಧ್ಯಕ್ಷರಾಗಿದ್ದಾರೆ.

---

[1] ರಂಗರಾಜ ದೇವೇಂದ್ರಪ್ಪ, **ಸುರಪುರ ಸಂಸ್ಥಾನ: ಒಂದು ಅಧ್ಯಯನ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಾದರಪಡಿಸಿದ ಪಿಹೆಚ್.ಡಿ ಮಹಾಪ್ರಬಂಧ, ೧೯೯೨ ಪು. ೪೦

[2] ದೇಸಾಯಿ ಪಿ.ಬಿ. **ಮದಗಜಮಲ್ಲ,** ೧೯೫೧ ಪು. ೭೪

[3] Nawab Framurz Jung, **Shorapur An Ancient Beyder Raj,** ೧೯೦೭ PP.೮

[4] ರಂಗರಾಜ ದೇವೇಂದ್ರಪ್ಪ, **ಪೂರ್ವೋಕ್ತ,** ೧೯೯೫ ಪು. ೭೨

[5] ಪುರಷೋತ್ತಮ ಬಿಳಿಮಲೆ, ಚಲುವರಾಜು, ಹಂಪಿ ಜಾನಪದ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬, ಪು. ೧೦೫

[6] ಸೂರ್ಯನಾರಾಯಣರಾವ್.ಬಿ. (ಮೂಲ) ಬಾಲಸುಬ್ರಹ್ಮಣ್ಯ (ಕನ್ನಡಕ್ಕೆ): **ಮರೆಯ ಲಾಗದ ಮಹಾಸಾಮ್ರಾಜ್ಯ,** ೨೦೦೦, ಪು. ೬

[7] ರಾಜಾ ಅಚ್ಯುತದೇವರಾಯ, ಜೆ.ಆರ್. ರಾಮಮೂರ್ತಿ, ಟಿ.ಪರಮೇಶ್ವರಪ್ಪ: **ಆನೆಗೊಂದಿ,** ಹಂಪಿ ಉತ್ಸವ ಸಮಿತಿ ೧೯೯೮, ಪು. ೯

[8] ವೀರನಾಯಕ ಹೆಚ್.ವಿ., **ಕ್ಷಾತ್ರಾಂಶ ಪ್ರಬೋಧ,** ೧೯೮೭ ಪು. ೯

[9] ಪದ್ಮಪ್ರಸಾದ್ ಎಸ್.ಪಿ., ರತ್ನಗಿರಿ ನಾಯಕರು, **ದಕ್ಷಿಣ ಕರ್ನಾಟಕದ ಅರಸು ಮನೆತನಗಳು,** ೨೦೦೧, ಪು. ೨೬೪

[10] ಮೀರಾಸಾಬಿಹಳ್ಳಿ ಶಿವಣ್ಣ, ನಾಯಕನಹಟ್ಟಿ ಪಾಳೆಗಾರರು, **ದಕ್ಷಿಣ ಕರ್ನಾಟಕದ ಅರಸು ಮನೆದನಗಳು** ೨೦೦೧ ಪು. ೭೯

[11] ಅಬ್ದುಲ್ ಸತ್ತಾರ್.ಪಿ. **ತರೀಕೆರೆ ಪಾಳೆಗಾರರು,** ೧೯೯೭ ಪು. ೩

[12] ಲಕ್ಷ್ಮಣ್ ತೆಲಗಾವಿ, ಕಾಮಗೇತಿ ಅರಸರು ಕೆಲವು ವಿಚಾರಗಳು: ಪ್ರತಿಕ್ರಿಯೆ, **ಮಾನವಿಕ ಕರ್ಣಾಟಕ,** ೧೯೮೭ ಪು. ೬

[13] Natalie Tobert (Ed) **Anegondi,** ೨೦೦೦ Pp. ೧೯೫

[14] ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು: ರಾಜಕೀಯ ಚಿತ್ರ, **ದವನಸಿರಿ–ಸ್ಮರಮಸಂಚಿಕೆ,** ೧೯೯೨, ಪು. ೮೩

[15] Sewell Robert, **A Forgotten Empire,** ೧೯೮೮, Pp. ೨೩೪

[16] ಹರ್ತಿಕೋಟೆ ವೀರೇಂದ್ರಸಿಂಹ, ತೇಜಸ್ವಿ ಕಟ್ಟಿಮನಿ (ಸಂ): **ಘಟ್ಟಿಹೊಸಹಳ್ಳಿ ಗಟ್ಟಿಗ,** ೨೦೦೨ ಪು. ೨೫

# ಈಶಾನ್ಯ ಕರ್ನಾಟಕದ ಬೇಡ ಪಾಳೆಯಗಾರರು
# (ಗುಂತಗೋಳ ಬೇಡ ಪಾಳೆಯಗಾರರು)

**೪. ಗುಂತಗೋಳ ಬೇಡ ಪಾಳೆಯಗಾರರು**

**ರಾಯಚೂರು ಜಿಲ್ಲೆಯ ಲಿಂಗಸುಗೂರ ತಾಲ್ಲೂಕಿನಿಂದ ಸುಮಾರು ೩೦ ಕಿ.ಮೀ. ಅಂತರದಲ್ಲಿರುವುದೇ** ಗುಂತಗೋಳ. ಇಲ್ಲಿ ಒಂದು ಬೇಡ ಪಾಳೆಯಗಾರರ ಮನೆತನವಿತ್ತು. ಈ ಮನೆತನದವರು ಮೂಲತಃ ಕಂಚಿಯಿಂದ ಬಂದವರು. ನಂತರ ಇವರು ಬಿಜಾಪುರದ

ಆದಿಲ್‌ಶಾಹಿಗಳ ಆಡಳಿತಾವಧಿ (ಕ್ರಿ. ಶ. ೧೪೪೯-೧೬೮೬) ಯಲ್ಲಿ ನಿರ್ಲಕ್ಷಿಸಲ್ಪಟ್ಟ ಪ್ರದೇಶದಲ್ಲಿ ಒಂದು ಸಂಸ್ಥಾನವನ್ನು ಸ್ಥಾಪಿಸಿದರು. ಇವರು ಬ್ರಿಟಿಷ್ ಮತ್ತು ಹೈದ್ರಾಬಾದ್ ನಿಜಾಮ (ಕ್ರಿ.ಶ. ೧೭೨೪-೧೯೪೮)ರ ದಬ್ಬಾಳಿಕೆಯ ಮಧ್ಯೆ ಸಮರ್ಥವಾಗಿ ಆಳ್ವಿಕೆ ನಡೆಸಿದುದು ವಿಶೇಷವಾಗಿದೆ.

ಗುಂತಗೋಳ ಬೇಡ ಪಾಳೆಯಗಾರರು ಮೊದಲಿಗೆ ಬಿಜಾಪುರದ ಆದಿಲ್‌ಶಾಹಿಗಳ ಅಧೀನರಾಗಿದ್ದರು. ಆದಿಲ್‌ಶಾಹಿಗಳು ತಮ್ಮ ಸಾಮಂತರಿಗೆ ಜಹಗೀರು ಹಾಕಿಕೊಡುತ್ತಿದ್ದರು. ಹೀಗಾಗಿ ಇವರಿಗೆ ಮೊದಲು ಜಹಗೀರುಗಳನ್ನು ಹಾಕಿದ್ದರು. ನಂತರ ಔರಂಗಜೇಬನನು ಬಿಜಾಪುರವನ್ನು ಮುತ್ತಿ ಸಿಕಂದರವನನ್ನು ಸೆರೆಹಿಡಿದು ಆದಿಲ್‌ಶಾಹಿಗಳ ಆಳ್ವಿಕೆಯನ್ನು ಸಮಾಪ್ತಿಗೊಳಿಸಿದ ಮೇಲೆ ಇವರು ಸ್ವತಂತ್ರವಾಗಿ ಆಳ್ವಿಕೆ ಮಾಡಿದರು. ಇವರು ಮೊದಲ ರಾಜಧಾನಿ ಜಲದುರ್ಗ, ನಂತರ ಗುಂತಗೋಳಕ್ಕೆ ಬಂದು ಅದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಗುಂತಗೋಳ ಸಂಸ್ಥಾನದ ಮೂಲಪುರುಷ ಕಾಳಭೈರವನಾಯಕ. ಈತನ ಸಮಾಧಿ ಗುಂತಗೋಳದಲ್ಲಿದೆ. ಗುಂತಗೋಳದ ನಾಯಕ ಅರಸರಲ್ಲಿ ರಾಜಾಅಮರಪ್ಪ ನಾಯಕ, ರಾಜಾರಾಮಪ್ಪನಾಯಕ, ರಾಜಾಇಮ್ಮಡಿ ಅಮರಪ್ಪನಾಯಕ, ರಾಜಾಶ್ರೀನೀವಾಸ ನಾಯಕ, ರಾಜಾಇಮ್ಮಡಿ ಬಸಪ್ಪವಾಯಕ, ರಾಜಾರಾಮಪ್ಪನಾಯಕ, ರಾಜಾ ಮುಮ್ಮಡಿ ಅಮರಪ್ಪನಾಯಕ, ರಾಜಾಇಮ್ಮಡಿ ರಾಯಪ್ಪನಾಯಕ, ರಾಜಾ ನರಸಿಂಹನಾಯಕ ಇವರುಗಳು ಪ್ರಮುಖರಾಗಿದ್ರದಾರೆ.

ಈ ಸಂಸ್ಥಾನದ ಪಾಳೆಯಗಾರರಿಗೆ 'ಬಹರಿ ಬಹದ್ದೂರ್', 'ನಾಯಕಾಚಾರ್ಯ', 'ಮಹಾನಾಯಕ', 'ದೊರೆ' ಎಂಬ ಬಿರುದಗಳಿವೆ. ಇವರಿಗೆ ಆದಿಲ್‌ಶಾಹಿಗಳು 'ಬಹರಿಬಹ ದ್ದೂರ್' ಎಂಬ ಬಿರುದು ನೀಡಿ ಗೌರವಿಸಿದ್ದಾರೆ. ಈ ಸಂಸ್ಥಾನಿಕರ ರಾಜಲಾಂಛನ ಆನೆ, ಹಸಿರು ಬಣ್ಣದ ಧ್ವಜವಿದೆ. ಶೈವಪಂಥದವರಾದ ಇವರು ಭಾರದ್ವಜಗೋತ್ರದವರು. ಇವರ ಆಡಳಿತಕ್ಕೆ ಸುಮಾರು ೧೩೦ ಹಳ್ಳಿಗಳು ಸೇರಿದ್ದು ಇವರ ಗಡಿಯನ್ನು ಸೂಚಿಸುವ ಜನಪದ ನುಡಿಯೊಂದು ಇಂತಿದೆ:

ಮಾಮಲೆ ಮುದಗಲ್ಲ, ಕಿಲ್ಲೆ ಜಲದುರ್ಗ
ಸಮತ್‌ಗೋನವಾಟ್ಲ, ಸಂಸ್ಥಾನ | ಗುಂತಗೋಳ
ನಮ್ಮರಾಜರದು.

[1]
ಇವರ ಆಡಳಿತ ವ್ಯವಸ್ಥೆಯಲ್ಲಿ ಪಾಟೀಲ, ಕುಲಕರ್ಣಿ, ನಾಡಗೌಡ, ದೇಸಾಯಿ, ಪೋಲೀಸ್ ಪಾಟೀಲ್ ಎಂಬ ಅಧಿಕಾರಿಗಳಿದ್ದರು. ಇವರಲ್ಲಿ ಕಾಳಾಪುರದ ದಣಿಗಳು, ನೀರಲಕೇರಿಯ **ನಾಡಗೌಡರು, ಬೆಲ್ಲದಮರಡಿಯ ದೇಸಾಯಿಗಳು ಪ್ರಮುಖರಾದವರು.** ಇವರು ತಮ್ಮ ಭಾಗದ ಕಂದಾಯವನ್ನು ವಸೂಲಿ ಮಾಡಿ ಗುಂತಗೋಳದ ಅರಸರಿಗೆ ಸಲ್ಲಿಸುತ್ತಿದ್ದರು. ಗುಂತಗೋಳದ ಅರಸರು ಹೈದ್ರಾಬಾದ್ ನಿಜಾಮನಿಗೆ ವಾರ್ಷಿಕ ಕಪ್ಪಕಾಣಿಕೆ ಯನ್ನು ಸಲ್ಲಿಸುತ್ತಿದ್ದರು.

ಈ ಸಂಸ್ಥಾನದ ಕಾವಲುಗಾರನ ಹೆಂಡತಿ ಮಾಳಗುಂಡಮ್ಮಳೆಂಬ ಮಹಿಳೆ ಸಂಸ್ಥಾನದ ರಕ್ಷಣೆಗಾಗಿ ಒಲವಿನ ಪುರುಷನಾಗಿದ್ದನು. ದುರ್ಬಾರಿನಲ್ಲಿ ಪ್ರತಿವರ್ಷ ನವರಾತ್ರಿ ಸಮಯದಲ್ಲಿ ನಡೆಯುವ ದೇವಿಪುರಾಣವನ್ನು ಸ್ವತಃ ತಾವೇ ಪಾರಾಯಣ ಮಾಡುತ್ತಿದ್ದರು. ಈ ಸಂಸ್ಥಾನಿಕರು ಸುರಪುರ, ದೇವದುರ್ಗ, ಗುಡಗುಂಟಿ, ಕನಕಗಿರಿ ಗುಡೇಕೋಟೆ, ರತ್ನಗಿರಿ, ಮನೆತನಗಳೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದ್ದಾರೆ.

ಇವರು ಕುಲದೇವರು ಕಂಚಿಯ ಏಕ ಅಮರೇಶ್ವರ. ಈ ಕುಲದೇವರ ಹೆಸರಿನಲ್ಲಿ ಗುಂತಗೋಳದಲ್ಲಿ ಅಮರೇಶ್ವರ ದೇವಾಲಯವನ್ನು ಕಟ್ಟಿಸಿದ್ದಾರೆ. ನಂತರ ದೇವರ ಭೂಪೂರದ ಶ್ರೀ ಅಮರೇಶ್ವರ ಇವರ ಮನೆದೇವರಾಯಿತು. ಇಲ್ಲಿ ಪ್ರತಿವರ್ಷ ಫಾಲ್ಗುಣ ಶುದ್ಧ ತ್ರಯೋದಶಿಯಂದು ಈ ದೇವರ ಜಾತ್ರೆ ನಡೆಯುತ್ತದೆ. ಈ ತೇರಿಗೆ ಕಳಸವು ಗುಂತಗೋಳ ಸಂಸ್ಥಾನಿಕರಿಂದಲೇ ಬರುತ್ತದೆ.

ಈ ಪಾಳೆಯಗಾರರ ಆರಾಧ್ಯ ದೇವರುಗಳ ಗೋನವಾಟ್ಲದ ವೇಣುಗೋಪಾಲಸ್ವಾಮಿ, ಭುವನೇಶ್ವರಿ, ಕಕ್ಕೇರಿಯ ಸೋಮನಾಥ, ಹನುಮಾನ ಪ್ರಮುಖರಾದವರು. ಗುಂತಗೋಳ ಸಂಸ್ಥಾನದ ರಾಜಗುರುಗಳು ದೇವರ ಭೂಪೂರದ ಶ್ರೀಗಜದಂಡ ಮಹಾಸ್ವಾಮಿಗಳು, ಅಲ್ಲದೇ ಶ್ರೀ ಚಿತ್ತರಗಿ ಇಲಕಲ್ ಮಹಾಂತಸ್ವಾಮಿಗಳ ಮಠ, ಶ್ರೀಕಿದ್‌ಮತಿ ಮಠ, ಶ್ರೀ ಪಂಚಾಕ್ಷರಿ ಮಠಗಳಿಗೆ ಭಕ್ತರಾಗಿದ್ದರು. ಈ ಮಠಗಳೆಲ್ಲ ಒಂದೊಂದು ಜನಪರಕಾರ್ಯಗಳನ್ನು ಮಾಡುತ್ತಿದ್ದವು. ಇವುಗಳಿಗೆಲ್ಲ ಈ ಪಾಳೆಯಗಾರರು ಇನಾಮು ಭೂಮಿಗಳನ್ನು ನೀಡಿದ್ದಾರೆ. ಇಂದಿಗೂ ಈ ಸಂಸ್ಥಾನದ ಮಹಾನವಮಿ, ದೀಪಾವಳಿ, ಯುಗಾದಿ ಮೊಹರಂ, ಶಿವರಾತ್ರಿ ಮುಂತಾದ ಹಬ್ಬಹರಿದಿಗಳನ್ನು ಆಚರಿಸುತ್ತಾರೆ. ಅಂದು ಅನೇಕ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನಗಳನ್ನು ವಿತರಿಸುವ ಸತ್ಸಂಪ್ರದಾಯ ಇಂದಿಗೂ ಇದೆ. ಇವರು ಅಮರೇಶ್ವರ ಗೋನನಾಟ್ಲದ ಗೋಪೋಲಸ್ವಾಮಿ, ಮಾಳಗುಂಡಮ್ಮ, ವೀರಯೋಧ, ಕಾಳಭೈರವನಾಯಕತ, ಗಂಗಪ್ಪಯ್ಯ ಮುಂತಾದ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಲಿಂಗಸೂಗೂರು ತಾಲೂಕಿನಲ್ಲೆಯೇ ಗುಂತಗೋಳ ಭಾಗದಲ್ಲಿ ನಮಗೆ ಅತಿ ಹೆಚ್ಚು ವೀರಗಲ್ಲುಗಳು ಸಿಗುತ್ತವೆ.

ಈ ಮನೆತನದ ವಂಶಸ್ಥರು ರಾಜಕೀಯದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿ ದ್ದಾರೆ. ರಾಜಾಅಮರೇಶ್ವರನಾಯಕನು ೧೯೮೯ರಲ್ಲಿ ಲಿಂಗಸುಗೂರು ವಿಧಾನ ಸಭಾಕ್ಷೇತ್ರ ದಿಂದ, ನಂತರ ಇದೇ ಕ್ಷೇತ್ರದಿಂದ ೧೯೯೪ರಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ಧಾರ್ಮಿಕ ಮತ್ತು ದತ್ತಿ ಖಾತೆಯ ಸಚಿವರಾಗಿದ್ದರು. ೧೯೯೯ರಲ್ಲಿ ಕಲ್ಮಲಾ ಕ್ಷೇತ್ರದಿಂದ ಆಯ್ಕೆಯಾಗಿ, ರಾಜ್ಯ ತೋಟಗಾರಿಕೆ ಸಚಿವರಾಗಿ, ನಂತರ ಬಂದಿಖಾನೆ, ಗೃಹರಕ್ಷಕ ದಳ ಮತ್ತು ಕಾನೂನು ಮಾಪನ ಸಚಿವರಾಗಿ ಸೇವೆಯಯನ್ನು ಸಲ್ಲಿಸಿದ್ದಾರೆ. ಇವರ ಹಿರಿಯಸಹೋದರ ರಾಜಾ ರಾಯಪ್ಪನಾಯಕರು, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದು, ಇಂದು ರಾಜಕೀಯದಲ್ಲಿ ಗುರುತಿಸಿಕೊಂಡಿದ್ದಾರೆ. ಇವರ ಕಿರಿಯ ಸಹೋದರರಾದ ರಾಜಾ ಶ್ರೀನಿವಾಸನಾಯಕರು ಸದ್ಯ ರಾಯಚೂರು ಜಿಲ್ಲಾ ಪಂಚಾಯತಿಯ ಸದಸ್ಯರಾಗಿದ್ದಾರೆ. ಅನೇಕ ಜನೋಪಯೋಗಿ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

**೫. ದೇವದುರ್ಗದ ಬೇಡ ಪಾಳೆಯಗಾರರು**

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಬೇಡ ಪಾಳೆಯಗಾರರ ಸಂಸ್ಥಾನ ವಾಗಿತ್ತು. ಈ ಮನೆತನದ ಮೂಲಪುರಷ ಸೋಮಜಂಪಲ ಭೂಮಿಪತಿ ರಂಗಪ್ಪನಾಯಕ. ಆದರೆ ಈ ಮನೆತನದ ಸಂಸ್ಥಾಪಕ ವಾಸುದೇವನಾಯಕ. ಈತ ಚಂದನಕೇರಿ ಮತ್ತು ದೇವದುರ್ಗದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದನು. ಚಂದನಕೇರಿ ಈತನ ಮೊದಲ ರಾಜಧಾನಿ ಯಾಯಿತು. ನಂತರ ತನ್ನ ರಾಜಧಾನಿಯನ್ನು ದೇವದುರ್ಗಕ್ಕೆ ವರ್ಗಾಯಿಸಿದನು. ಆಗ ದೇವದುರ್ಗದ ಅಧೀನದಲ್ಲಿದ್ದ ಏಳು ಪ್ರಮುಖ ಗ್ರಾಮಗಳಿಗೆ ತನ್ನ ಐದು ಜನ ಮಕ್ಕಳನ್ನು ನೇಮಿಸುತ್ತಾನೆ. ದೇವದುರ್ಗವನ್ನು ತನ್ನ ಅಧೀನದಲ್ಲಿಯೇ ಇಟ್ಟಕೊಳ್ಳತ್ತಾನೆ. ಹಾಗೂ ತನ್ನೊಂದಿಗೆ ತನ್ನ ಹಿರಿಯ ಮಗ ಕಿಲಚನಾಯಕನನ್ನು ಉಳಿಸಿಕೊಳ್ಳುತ್ತಾನೆ. ಸಣ್ಣಕಿಲಚ ನಾಯಕನನ್ನು ಅರಕೇರಿಗೆ, ವೆಂಕಟಪ್ಪನಾಯಕನನ್ನು ಮುಂಡರಗಿಗೆ, ವಾಸುದೇವನಾಯಕನನ್ನು ಜಾಲಹಳ್ಳಿಗೆ, ಕೃಷ್ಣಪ್ಪನಾಯಕನನ್ನು ರಾಮದುರ್ಗಕ್ಕೆ, ರಂಗಪ್ಪನಾಯಕನನ್ನು ಕ್ಯಾದಿಗ್ಗೇರಿಗೆ, ತಿಮ್ಮಪ್ಪನಾಯಕನನ್ನು ಗಲಗಿಗೆ ಕಳುಹಿಸುತ್ತಾನೆ.[2]

ಔರಂಗಜೇಬನು ಕ್ರಿ.ಶ. ೧೭೦೫ರಲ್ಲಿ ಸುರಪುರದ ವಾಗಿನಗೇರಿಯನ್ನು ಮುತ್ತಿಗೆ ಹಾಕಿದಾಗ ಔರಂಗಜೇಬನ ಜೊತೆಗೆ ದೇವದುರ್ಗದ ವಾಸುದೇವನಾಯಕನಿದ್ದನು. ಸುರಪುರದ ಪಿಡ್ಡನಾಯಕನನ್ನು ಜಯಿಸುವಲ್ಲಿ ಮೊಘಲ್‌ರಿಗೆ ಸಹಾಯ ಮಾಡಿದ್ದಕ್ಕಾಗಿ, ಈತನಿಗೆ ‘ಶಾಹ

ಆಲಮ'ನು ವಾಸುದೇವನಾಯಕನಿಗೆ ರಾಯಚೂರು ಪ್ರಾಂತ್ಯದ ಜಮೀನ್ದಾರಿಕೆಯನ್ನು ತಾನು ಪಟ್ಟವೇರಿದ ಮೂರನೇ ವರ್ಷದಲ್ಲಿ ನೀಡುತ್ತಾನೆ. ವಾಸುದೇವನಾಯಕನ ತರುವಾಯ ಈತನ ಹಿರಿಯ ಮಗ ಕಿಲಚನಾಯಕನು ಅಧಿಕಾರ ಸ್ವೀಕರಿಸುತ್ತಾನೆ. ಆಗ ಸುರಪುರ ಹಾಗೂ ಗುಡಗುಂಟಿ ಅರಸರಿಗೆ ಮನಸ್ತಾಪವಾಗುತ್ತದೆ. ಜೊತೆಗೆ ಸುರಪುರದ ಬಂಡಡುಕೋರರು ತಮ್ಮ ಅರಸ ಮೊಂಡಗೈ ವೆಂಕಟಪ್ಪನಾಯಕನನ್ನು ಸೆರೆಯಲ್ಲಿಡುತ್ತಾರೆ. ದೇವದುರ್ಗದ ಕಿಲಚನಾಯಕನು ಸುರಪುರದ ಮೂರುಕೇರಿಯ ಬೇಡರನ್ನು ಒಟ್ಟುಕೂಡಿಸಿ, ಅರಸನನ್ನು ಬಿಡುಗಡೆ ಮಾಡಿಸುತ್ತಾನೆ.

ಕೆಲವು ದಿನಗಳ ನಂತರ ದೇವದುರ್ಗದ ಅರಸ ಕಿಲಚನಾಯಕನು ಕ್ಯಾದಿಗೇರಿಯ ಮೇಲೆ ದಾಳಿ ಮಾಡುತ್ತಾನೆ. ಈತನ ನಂತರ ಚಿಕ್ಕಕೇಶವನಾಯಕ ದೇವದುರ್ಗದ ಅರಸನಾದ. ಈತನ ಅಧಿಕಾರವಧಿಯಲ್ಲಿ ಈ ಸಂಸ್ಥಾನದ ವಾರ್ಷಿಕ ಆದಾಯ ಮೂರುಲಕ್ಷ ರೂಪಾಯಿಗಳಾಗಿದ್ದಿತು. ಈತನು ವಾರಕ್ಕೊಮ್ಮೆ ದೇವದುರ್ಗದಲ್ಲಿ ಸಂತೆ ನಡೆಯುವಂತೆ ಮಾಡಿದನಲ್ಲದೆ, ಆಗ ನಿಜಾಂಪೇಟೆ, ಸತ್ಯಂಪೇಟೆ, ಕೋಟೆ ಪ್ರದೇಶಗಳನ್ನು ಕಟ್ಟಿಸುತ್ತಾನೆ. ಈತನ ಅವಧಿಯಲ್ಲಿ ಕ್ರಿ.ಶ. ೧೭೯೯ರಲ್ಲಿ ಹೈದ್ರಾಬಾದ್ ಮೇಲೆ ದಂಡಯಾತ್ರೆ ಹೊರಟ ಪೇಶ್ವೆ ಮತ್ತು ನಿಜಾಮನ ಉಭಯ ಪಡೆಗಳು ದೇವದುರ್ಗದಲ್ಲಿ ಬೀಡುಬಿಟ್ಟವು. ಈತನ ತರುವಾಯ ಕೊಳ್ಳಿರಂಗಪ್ಪನಾಯಕ ಅಧಿಕಾರ ಸ್ವೀಕರಿಸಿರದ. ಈತ ದೇವದುರ್ಗದ ಪ್ರಸಿದ್ಧ ಅರಸನಾಗಿದ್ದು, ಅನೇಕ ಜನೋಪಯೋಗಿ ಕೆಲಸಗಳನ್ನು ಮಾಡಿದ್ದಾನೆ. ಸುರಪುರರದ ಇಮ್ಮಡಿ ವೆಂಕಟಪ್ಪನಾಯಕ ದಂಡಿನ ಮುಖ್ಯಸ್ಥರನ್ನು ನೇಮಕಮಾಡಿ ದೇವದುರ್ಗದ ರಂಗಪ್ಪನಾಯಯಕನನ್ನು ಸೆರೆಹಿಡಿದು ತರಬೇಕೆಂದು ಆಜ್ಞೆ ಮಾಡುತ್ತಾನೆ. ರಂಗಪ್ಪನಾಯಕ ತಲೆಮರೆಸಿಕೊಂಡನು. ದೇವದುರ್ಗದ ಬೆಟ್ಟದ ಪೂರ್ವಕ್ಕಿದ್ದ ಮದ್ದಿನ ಮನೆಯಲ್ಲಿ ಅಡಗಿಕುಳಿತು, ತನ್ನ ಕೈಯಲ್ಲಿದ್ದ ಕೊಳ್ಳಿಯಿಂದ ಸಿಡಿಮದ್ದಿಗೆ ಬೆಂಕಿಹಚ್ಚಿಕೊಂಡನು. ತಾನೂ ತನ್ನ ಪರಿವಾರವು ಹಾಗೂ ಈತನನ್ನು ಬೆನ್ನಟ್ಟಿದ ಸುರಪುರದ ಸೈನ್ಯವೂ ಸಿಡಿಮದ್ದಿಗೆ ಆಹುತಿಯಾಯಿತು. ಈ ಘಟನೆಯಿಂದ ಈತನಿಗೆ 'ಕೊಳ್ಳಿರಂಗಪ್ಪನಾಯಕ'ನೆಂಬ ಹೆಸರು ಪ್ರಾಪ್ತವಾಯಿತು. ನಂತರ ಈತನ ಮಗ ಕೃಷ್ಣಪ್ಪನಾಯಕನೆಂಬುವನು ದೇವದುರ್ಗದ ಪಾಳೆಯಗಾರನಾದ. ಅಷ್ಟೊತ್ತಿಗೆ ಬ್ರಿಟಿಷರು ಈ ಸಂಸ್ಥಾನವನ್ನೆಲ್ಲಾ ಆಕ್ರಮಿಸಿಕೊಂಡರು.

ಈ ಪಾಳೆಯಗಾರರ ಮನೆದೇವರು ಮಾನಸಗಲ್ಲ ರಂಗನಾಥ. ರಂಗನಾಥ ಪ್ರತಿವರ್ಷ ಅಗಿ ಹುಣ್ಣಿಮೆಗೆ ಈ ಜಾತ್ರೆ ಜರುಗುತ್ತದೆ. ಅರಸರ ಸಮ್ಮುಖದಲ್ಲಿ ಸರ್ವಜನಾಂಗದವರು ಭಾಗವಹಿಸಿ, ತೇರನ್ನು ಎಳೆಯುವುದು ವಿಶೇಷ. ಈ ಮನೆತನದವರು ಅನೇಕ ಮಠಗಳಿಗೂ ದಾನದತ್ತಿಯನ್ನು ನೀಡಿದ್ದಾರೆ. ಅಲ್ಲದೇ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಮಾನಸಗಲ್ಲಿನ ರಂಗನಾಥ, ಚಂದನಕೇರಿಯ ಹನುಮಪ್ಪ, ಗೂಗಲ್ಲಿನ ಅಲ್ಲಮಪ್ರಭು ದೇವದುರ್ಗದ ಗೋಪಾಲಸ್ವಾಮಿ, ಕ್ಯಾದಿಗೇರಿಯ ವೀರಭದ್ರ, ಜಾಲಹಳ್ಳಿಯ ರಂಗನಾಥ ಪ್ರಮುಖವಾದವುಗಳು.

ಇವರ ಹಳೆಯ ಅರಮನೆ ಚಂದನಕೇರಿಗೆ ಸಾಗುವ ಮಾರ್ಗಮಧ್ಯದಲ್ಲಿತ್ತು. ಈಗ ಅದು ಹಾಳಗಿದೆ. ಆದರೆ ಅದರ ಅವಶೇಷಗಳನ್ನು ಇಂದಿಗೂ ಗುರುತಿಸಬಹುದಾಗಿದೆ. ರಾಜಧಾನಿ ಚಂದನಕೇರಿಯಿಂದ ದೇವದುರ್ಗಕ್ಕೆ ವರ್ಗವಾದ ಮೇಲೆ ಊರ ಮಧ್ಯದಲ್ಲಿ ವಿಶಾಲವಾದ ಅರಮನೆಯನ್ನು ರಂಗಪ್ಪನಾಯಕನು ಕಟ್ಟಿಸಿದನು. ಈಗ ಈ ಅರಮನೆಯ ಕೆಲಭಾಗಗಳು ಸಂಪೂರ್ಣ ಶಿಥಿಲಗೊಂಡಿದ್ದು, ಒಂದು ಭಾಗ ಮಾತ್ರ ಉಳಿದಿದೆ. ಈ ಅರಮನೆಯ ಪ್ರವೇಶದ್ವಾರ ಮತ್ತು ಗೋಡೆಗಳು ಬಹಳ ಸುಂದರವಾಗಿವೆ. ಇದರ ಅರ್ಧ ಭಾಗದಲ್ಲಿ ಅಂದು ಕಚೇರಿ ಕೆಲಸಗಳು ನಡೆಯುತ್ತಿದ್ದವು.

ಇಂದು ಈ ಮನೆತನದ ವಂಶಸ್ಥರು ದೇವದುರ್ಗದಲ್ಲಿ ವಾಸವಾಗಿದ್ದಾರೆ. ಅವರಲ್ಲಿ ರಾಜವೆಂಕಟಪ್ಪ ನಾಯಕರು, ರಾಜಾ ಚಂದ್ರಹಾಸನಾಯಕರು, ರಾಜ್ಯದ ರಾಜಕಾರಣಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಆ ಭಾಗದ ಎಲ್ಲಾ ಜನಾಂಗದ ಪ್ರಜೆಗಳ ಮನದಲ್ಲಿದ್ದಾರೆ.

## ೬. ಕನಕಗಿರಿಯ ಬೇಡ ಪಾಳೆಯಗಾರರು

ಕನಕಗಿರಿಯು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಿಂದ ವಾಯುವ್ಯಕ್ಕೆ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಕನಕಗಿರಿಯನ್ನು ಗುಜ್ಜಲ ವಂಶದ ಬೇಡ ಪಾಳೆಯಗಾರರು ಆಳ್ವಿಕೆ ಮಾಡಿದ್ದಾರೆ. ಕ್ರಿ.ಶ. ೧೪೩೯ರಲ್ಲಿ ಪರಸಪ್ಪ ಉಡಿಚನಾಯಕನು ಕನಕಗಿರಿಯನ್ನು ಸ್ಥಾಪಿಸುತ್ತಾನೆ. ವಿಜಯನಗರದ ಪ್ರೌಢದೇವರಾಯ ಈತನಿಗೆ ೧೨ ಗ್ರಾಮಗಳನ್ನು ಉಂಬಳಿಯಾಗಿ ನೀಡಿದನು. ಕ್ರಿ.ಶ. ೧೪೮೫ರಲ್ಲಿ ಸಾಳ್ವ ನರಸಿಂಹ ದೇವರಾಯ ಕನಕಗಿರಿ ನಾಡದೇವರ ಅಮೃತಪಡಿಗೆಂದು ೨ ಗ್ರಾಮಗಳನ್ನು ಉಂಬಳಿಯಾಗಿ ನೀಡಿದನು. ವಿಜಯ ನಗರದ ಅರಸರು ಇವರಿಗೆ ಮೊದಲ ಪ್ರಾಶಸ್ತ್ಯವನ್ನು ನೀಡುತ್ತಿದ್ದರು.

ಪರಸಪ್ಪನಾಯಕನ ತರುವಾಯ ಈತನ ಮಗನಾದ ನವಾಬ ಉಡಿಚನಾಯಕನಿಗೆ ಕ್ರಿ.ಶ. ೧೫೧೦ರಲ್ಲಿ ಪಟ್ಟಾಭಿಷೇಕವಾಯಿತು. ಕ್ರಿ.ಶ. ೧೫೧೦ರಲ್ಲಿ ಕನಕಗಿರಿಯ ಪೇಟೆಯ ಸುಂಕ, ತಳವರಿಕೆ ಸುಂಕ, ಚಿನ್ನಾಪುರ ತೊರೆಗಲ್ಲು ಬಯಲುಸೀಮೆ ಯಡಿಗಲ್ಲ, ಕಳಸಗ್ರಾಮ, ನವಲಿಸೀಮೆಯ ಜಾರಾಪುರ ಹೀಗೆ ಒಟ್ಟು ಮೂರು ಗ್ರಾಮಗಳನ್ನು ನೀಡಿದನು.[3] ತರುವಾಯ ಕೆಲವಡಿ ಉಡಿಚನಾಯಕ (ಕ್ರಿ.ಶ. ೧೫೩೩-೧೫೭೮) ನು ಅಧಿಕಾರಕ್ಕೆ ಬಂದನು. ಈತ ವಿಜಯನಗರದೊಂದಿಗೆ ತಾಳಿಕೋಟೆ ಕದನಕ್ಕೆ ತೆರಳಿದ್ದ. ಈತನ ನಂತರ ಕನಕಪ್ಪ ಉಡಿಚನಾಯಕನ (ಕ್ರಿ.ಶ. ೧೫೭೮-೧೬೧೮) ನು ಅಧಿಕಾರಕ್ಕೆ ಬಂದನು. ಈತನ ತಮ್ಮ ವೆಂಕಟಪ್ಪ ನಾಯಕನು ಲಕ್ಷವರಹಗಳ ವೆಚ್ಚದಿಂದ ಊರ ಹೊರಗೆ ಸುಂದರವಾದ ಬಾವಿ ನಿರ್ಮಿಸಿದ್ದಾನೆ. ಇದನ್ನು ‘ವೆಂಕಟಪತಿ ಬಾವಿ’ ಎಂದು ಕರೆಯುತ್ತಾರೆ. ತದ ನಂತರ ಇಮ್ಮಡಿ ಉಡಿಚನಾಯಕ (ಕ್ರಿ.ಶ. ೧೬೧೮-೧೭೦೮) ನು ಅಧಿಕಾರರೂಢನಾದನು. ಈತನನ್ನು ಶಾಸನಗಳಲ್ಲಿ ‘ಗುಜ್ಜಲವಂಶೋದ್ಭವ’, ‘ಶ್ರೀಮಾನ್ ಮಹಾನಾಯ ಕಾಚಾರ್ಯ’, ‘ನಾಯಕ ಶಿರೋಮಣಿ’, ‘ಲಕ್ಷ್ಮಿನಾಗತಿ’, ‘ಇಮ್ಮಡಿ ವುಡಸಿನಾಯಕ’ ಎಂದು ಕರೆಯಲಾಗಿದೆ.

ಕ್ರಿ.ಶ. ೧೬೫೩ರಲ್ಲಿ ಬಿಜಾಪುರದ ಆದಿಲ್‌ಶಾಹನ ದಂಡನಾಯಕ ಅಫಜಲ್‌ಖಾನನು ಕನಕಗಿರಿಯ ಮೇಲೆ ದಾಳಿ ಮಾಡಿದನು. ಆತನನ್ನು ಕನಕಗಿರಿಯ ಅರಸ ಇಮ್ಮಡಿ ಉಡಿಚ ನಾಯಕ ಸೋಲಿಸುತ್ತಾನೆ. ಔರಂಜೇಬನ ಸೈನಿಕರು ವಾಗಿನಗೇರಿಯನ್ನು ಮುತ್ತಿಗೆ ಹಾಕಿದಾಗ ಸುರಪುರದ ಅರಸ ಬಹರಿ ಪಡ್ಡನಾಯಕನು ಅಲ್ಲಿಂದ ಪರಾರಿಯಾಗಿ ಗುಡಗುಂಟಿಯ ಮೂಲಕ ಕನಕಗಿರಿಗೆ ಬಂದನು. ಕನಕಗಿರಿಯ ಇಮ್ಮಡಿ ಉಡಿಚನಾಯಕ ಒಂದು ವರ್ಷದವರೆಗೆ ಆತನನ್ನು ರಕ್ಷಣೆ ಮಾಡಿದನು. ಈತನ ಕಾಲದಲ್ಲಿ ಕನಕಗಿರಿ ೩೨ ಲಕ್ಷ ಆದಾಯವನ್ನು ಹೊಂದಿತ್ತು.[4] ಈತನ ತರುವಾಯ ಇಮ್ಮಡಿ ಕನಕಪ್ಪ ಉಡಿಚನಾಯಕ (ಕ್ರಿ.ಶ. ೧೭೦೮-೧೭೫೨) ನು ಅಧಿಕಾರಕ್ಕೆ ಬಂದನು. ಈತ ಕೂಡಲಿ ಶೃಂಗೇರಿ ಮಠಕ್ಕೆ ತೊಂಡೆಹಾಳ ಗ್ರಾಮವನ್ನು ತಮ್ಮ ತಂದೆ ತಾಯಿಗಳ ಹೆಸರಿನಲ್ಲಿ ನೀಡುತ್ತಾನೆ. ಈತನ ನಂತರ, ಹಿರೇರಂಗಪ್ಪ ನಾಯಕ(ಕ್ರಿ.ಶ. ೧೭೫೨-೧೭೮೧)ನು ಅಧಿಕಾರರೂಢನಾದನು. ಈತ ಚಿತ್ರದುರ್ಗದ ವೀರಮದಕರಿನಾಯಕನ ಸಹಾಯಕ್ಕೆ ಸೈನ್ಯವನ್ನು ಕಳುಹಿಸಿದನು.[5] ತರುವಾಯ ಇಮ್ಮಡಿ ಕನಕಪ್ಪನಾಯಕ (ಕ್ರಿ.ಶ. ೧೭೮೧-೧೭೮೮), ಈತನ ನಂತರ ಹಿರೇನಾಯಕ (ಕ್ರಿ.ಶ. ೧೭೮೮-೧೮೩೩)ನು ಅಧಿಕಾರರೂಢನಾದನು. **ಈತನ ಕಾಲದಲ್ಲಿ ಕುಷ್ಟಗಿ, ಗಂಗಾವತಿ, ಹರಿಹರ ಮತ್ತು ದಾವಣಗೇರಿ ಪ್ರದೇಶಗಳು ಅಧೀನದಲ್ಲಿದ್ದವು.** ಈ ಎಲ್ಲಾ ಪ್ರದೇಶಗಳಿಂದ ಈತನ ರಾಜ್ಯಕ್ಕೆ ೯ ಲಕ್ಷ ಆದಾಯ ಬರುತ್ತಿತ್ತು. ಈತ ಮುಂಡರಗಿಯ ದೇಸಾಯಿಯ ಮಗಳನ್ನು, ಬಾದರಬಂಡಿಯ ದೇಸಾಯಿಯ ಹೆಂಡತಿಯನ್ನು ಅಪಹರಿಸಿದ್ದನು. ಅವರು ಹೈದ್ರಾಬಾದ್ ನಿಜಾಮನಿಗೆ ಮೊರೆಹೋದರು. ಆಗ ಹೈದ್ರಾಬಾದ್ ನಿಜಾಮ, ಸುರಪುರದ ಪಾಮನಾಯಕನಿಗೆ, ಕನಕಗಿರಿಯ ಹಿರೇನಾಯಕನನ್ನು ಬಂಧಿಸಿ ತರುವಂತೆ ಆದೇಶಿಸುತ್ತಾನೆ. ಆಗ ಸುರಪುರದ ಪಾಮನಾಯಕನಿಗೆ ಕನಕಗಿರಿಯ ಅರಸನನ್ನು ತೋಪಿನ ಬಾಯಿಗೆ ಕಟ್ಟಿ ಹಾರಿಸಲಾಯಿತು. ಇಲ್ಲಿಗೆ ಕನಕಗಿರಿಯಲ್ಲಿ ಗುಜ್ಜಲ ವಂಶದವರ ಆಳ್ವಿಕೆ ಕೊನೆಯಾಗುತ್ತದೆ.

ನಂತರ ಇವರ ವಂಶಸ್ಥರು ಕ್ರಿ.ಶ. ೧೮೩೩ರಿಂದ ೧೯೪೮ರವರೆಗೆ ಹುಲಿಹೈದರನಿಂದ ಆಳ್ವಿಕೆ ಮಾಡುತ್ತಾರೆ. ಹಿರೇನಾಯಕನ ಎರಡನೆಯ ಮಗ ರಂಗಪ್ಪನಾಯಕ ನಿಜಾಮನ ವಿರುದ್ಧ ಬಂಡೆದ್ದಾಗ ನಿಜಾಮನು ಕನಕಗಿರಿಯ ಅಧೀನದ ಹುಲಿಹೈದರ್, ಹಿರೇಮನ್ನಾಪುರ, ಹೊಸಗುಡ್ಡ, ಗೋವಿನಾಳ, ಹನುಮನಾಳ, ಶಿರವಾರ, ಕನಕಾಪುರ, ಸೋಮಸಾಗರ, ಓಬಳಬಂಡಿ, ಗಾಣದಾಳು, ತಾಳಿಕೇರಿ ಗುಂತಮಡು, ಗುಳೇವು,

ಶಿಡ್ಲಬಾವಿ ಮಂತಾದ ಹದಿನಾರು ಹಳ್ಳಿಗಳನ್ನು ಜಾಗೀರು ನೀಡಿದನು. ಈತನ ನಂತರ ಆತನ ಹಿರಿಯ ಮಗ ರಂಗಪ್ಪನಾಯಕ ಅಧಿಕಾರಕ್ಕೆ ಬಂದನು. ಈತ ತಮ್ಮ ತಂದೆಯ ಆಡಳಿತದ ಕೆಲಸ ಕಾರ್ಯಗಳನ್ನು ಮುಂದುವರೆಸಿದನು. ಈತನಿಗೆ ೩ ಜನ ಹೆಣ್ಣುಮಕ್ಕಳಿದ್ದುದರಿಂದ ತಮ್ಮ ಸೋಮಸಾಗರದ ಕನಕಪ್ಪನಾಯಕನ ಮಗ ವುಡಿಸಿನಾಯಕನನ್ನು ದತ್ತಕ ತೆಗೆದುಕೊಳ್ಳಲಾಯಿತು. ಈತ ಕಾಲವಾದ ಮೇಲೆ ಈತನ ಮಗ ರಾಜಾರಂಗಪ್ಪನಾಯಕ ಚಿಕ್ಕವನಿದ್ದ ಕಾರಣ ಆತನ ರಾಣಿ ಗೌರಮ್ಮ ಸಂಸ್ಥಾನದ ಅಧಿಕಾರ ವಹಿಸಿಕೊಂಡಳು. ಚಿಕ್ಕವಸ್ಸಿನಲ್ಲಿಯೇ ಮಗ ರಂಗನಾಥಪ್ಪನ ಮಗ ತೀರಿಕೊಂಡನು. ಹಿರಿಯರ ಸಲಹೆಯಂತೆ ತನ್ನ ಮೈದುನನ ಸೋಮಸಾಗರದ ರಂಗನಾಥಪ್ಪನ ಮಗ ರಂಗಪ್ಪನಾಯಕನನ್ನು ದತ್ತಕ ತೆಗೆದುಕೊಂಡಳು. ಸ್ಥಳೀಯರ ಕುತಂತ್ರದಿಂದ ಆಡಳಿತ ಕುಸಿಯಿತು. ಆಗ ಹೈದ್ರಾಬಾದ್ ನಿಜಾಮ ಹುಲಿಹೈದರ್ ಆಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡನು. ನಂತರ ಈ ಸಂಸ್ಥಾನದ ಕ್ರಿ.ಶ. ೧೯೪೮ ಸೆಪ್ಟಂಬರ್, ೧೮ ರಂದು ಭಾರತದ ಒಕ್ಕೂಟದೊಂದಿಗೆ ವಿಲೀನವಾಯಿತು.

ಇವರ ಮನೆದೇವರು ತಿರುಪತಿ ತಿಮ್ಮಪ್ಪ, ಈತನ ಪ್ರತಿರೂಪವೇ ಕನಕಗಿರಿಯ ಕನಕಾಚಲ ವೆಂದು ನಂಬಿದ್ದರು. ಕನಕಗಿರಿಯ ಕನಕಾಚಲಪತಿಯ ಜಾತ್ರೆಯು ಪ್ರತಿವರ್ಷ ಮಾಘ ಮಾಸ ಚತುಉದಶಿಯಂದು ಪ್ರಾರಂಭವಾಗಿ ೯ ದಿನಗಳ ಕಾಲ ಪ್ರತಿದಿನ ಒಂದೊಂದು ಉತ್ಸವಗಳು ಜರುಗುತ್ತವೆ. ಕನಕಗಿರಿ ನಾಯಕ ಪರಸಪ್ಪನಾಯಕನ ಕಾಲದಿಂದ ಈ ಜಾತ್ರೆಯು ಮುಂದುವರಿದಿದೆ. ಇವರು ಶೃಂಗೇರಿ ಮಠದ ಶ್ರೀ ಶಂಕರ ಭಾರತೀ ಸ್ವಾಮಿಗಳಿಗೆ ಅನೇಕ ಗ್ರಾಮಗಳನ್ನು ದಾನವಾಗಿ ನೀಡಿದ್ದರು.

ಇವರ ಆಸ್ಥಾನದಲ್ಲಿ ಅನೇಕ ಸಾಹಿತಿಗಳು ಆಶ್ರಯದಾತರಾಗಿದ್ದರು. ಹಿರೇರಂಗಪ್ಪನಾಯಕ ಆಸ್ಥಾನದಲ್ಲಿ ಚಿಂದಾನಂದಾವಧೂತರೆಂಬ ವಿದ್ವಾಂಸರಿದ್ದರು. ಚಿದಾನಂದ ವಚನ, ಚಿದಾನಂದ ಕೀರ್ತನೆ, ಕಾಮವಿಡಂಬನೆ ಕೃತಿಗಳನ್ನು ರಚಿಸಿದ್ದಾರೆ. ವಿಜಯವೆಂಕಟಾಚಾರ್ಯರೆಂಬ ಕನ್ನಡ ಮತ್ತು ಸಂಸ್ಕೃತ ಪಂಡಿತರಿದ್ದರು. ಕವಿ ಶಿರುಗುಪ್ಪ ಸದಾಶಿವಯ್ಯನು ಅರ್ಧಕ್ಕೆ ನಿಂತಿದ್ದ ಅಪರಾಳ ತಮ್ಮಣ್ಣನ ಶ್ರೀಕೃಷ್ಣಪಾರಿಜಾತ ನಾಟಕವನ್ನು ಹಿರೇರಂಗಪ್ಪನಾಯಕ ಇಚ್ಛೆಯ ಮರೆಗೆ ಪೂರ್ತಿಗೊಳಿಸಿದನು. ಇವರು ಕುರಿತಾಗಿ ಯಥೇಚ್ಛವಾದ ಜನಪದ ಸಾಹಿತ್ಯ ಹೊರ ಬಂದಿದೆ.

ಈ ಮನೆತನದ ೪ ಕುಟುಂಬಗಳು ಹುಲಿಹೈದರ್‌ನಲ್ಲಿ ವಾಸವಾಗಿವೆ. ಈ ಮನೆತನ ದವರನ್ನು ಆ ಭಾಗದ ಜನರು ವಾಲ್ಮೀಕಿ ಗುರುಗಳೆಂಎದು ಗುರುತಿಸುತ್ತಾರೆ.

**೭. ಗುಡೇಕೋಟೆ ಬೇಡ ಪಾಳೆಗಾರರು**

ಗುಡೇಕೋಟೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೫ ಕಿ.ಮೀ. ಅಂತರದಲ್ಲಿದೆ. ಇದೊಂದು ಬೇಡ ಪಾಳೆಯಗಾರರ ಮನೆತನವಾಗಿತ್ತು. ಗುಡೇಕೋಟೆ ಅರಸುಮನೆತನದ ಸ್ಥಾಪಕನ ಕುರಿತಾಗಿ ಭಿನ್ನಪ್ರಾಯಗಳಿವೆ. ಹಿರೇ ಬೊಮ್ಮಣ್ಣನಾಯಕ, ಗಂಡಳನಾಯಕ ಎಂದು ಕೆಲವು ವಂಶಾವಳಿಗಳು ಹೇಳಿದರೆ, ಕುಮಾರರಾಮನ ಕೈಫಿಯತ್ತಿನ ಪ್ರಕಾರ ಇವರ ಮೂಲವನ್ನು ಕಂಪಲಿಯ ಕುಮಾರರಾಮನ ವಂಶಜರೆಂದು, ಗಡಿಯಾಂಕ ಭೀಮನು ಕುಮಾರರಾಮನ ಜೊತೆ ಮುತ್ತಿನ ಚೆಂಡಾಟದಲ್ಲಿ ಭಾಗವಹಿಸಿದ್ದ ಆಪ್ತ ಸ್ನೇಹಿತ ನಾಗಿದ್ದರಿಂದ ಈತನೇ ಗುಡೇಕೋಟೆಯ ಸ್ಥಾಪಕ ಇಲ್ಲವೆ ಆ ಪ್ರದೇಶಕ್ಕೆ ನಾಯಕನಾಗಿರಬೇಕು. ವಂಶಾವಳಿಯ ಪ್ರಕಾರ ಗಂಡಳನಾಯಕ (ಕ್ರಿ.ಶ. ೧೫೫೮-೧೫೭೧)ನು **ಗುಡೇಕೋಟೆಯನ್ನು ಆಳಿದ ಪ್ರಥಮ ಅರಸ. ನಂತರದಲ್ಲಿ ಪೆನ್ನಪ್ಪನಾಯಕ (ಕ್ರಿ.ಶ. ೧೫೭೧–೧೫೪೧)** ಪಾಪನಾಯಕ (ಕ್ರಿ.ಶ. ೧೫೧೪-೧೫೫೮) ಕೆಮ್ಮಯ್ಯರಾಜ (ಕ್ರಿ.ಶ. ೧೫೫೮-೧೬೦೨) ರಾಮಪ್ಪನಾಯಕ (ಕ್ರಿ.ಶ. ೧೬೦೨-೧೬೩೭) ಇವರೆಲ್ಲರೂ ಕ್ರಮವಾಗಿ ಆಳ್ವಿಕೆ ಮಾಡಿದವರಾದರೂ ಇವರ ಸಾಧನೆಯ ಕುರಿತಾಗಿ ಯಾವುದೇ ಆಧಾರಗಳು ಲಭ್ಯವಿಲ್ಲ.

ನಂತರ ರಾಮಪ್ಪನಾಯಕನ ಮಗ ಬೊಮ್ಮಂತರಾಜ (ಕ್ರಿ.ಶ. ೧೬೩೭-೧೬೭೬)ನು ಅಧಿಕಾರಕ್ಕೆ ಬರುತ್ತಾನೆ. ಕೃಷ್ಣದೇವರಾಯ ಈತನಿಗೆ ೭ ಸೀಮೆಗಳನ್ನು ದಯಪಾಲಿಸಿದನು. ನಂತರ ಈತನ ಮಗ ಚಿನ್ನಯರಾಜ (ಕ್ರಿ.ಶ. ೧೬೭೬-೧೬೬೮)ನು ಸಿಂಹಾಸನಕ್ಕೆ ಬಂದನು. ಈತನು ಗುಡೇಕೋಟೆ, ಸಂಡೂರು, ಬಾಣಾರವಿ ಸೀಮೆಗಳನ್ನು ಆಳುತ್ತಾ ಆದೋನಿ ನವಾಬನಿಗೆ ಪೊಗದಿಯನ್ನು ಸಲ್ಲಿಸುತ್ತಿದ್ದನು. ಈತನ ನಂತರ ಕ್ರಿ.ಶ. ೧೬೮೮ರಲ್ಲಿ ಜಟ್ಟಿಂಗರಾಜನು ಅಧಿಕಾರಕ್ಕೆ ಬರುತ್ತಾನೆ. ಈತ ಗುಡೇಕೋಟೆಯ ಪ್ರಸಿದ್ಧ ಅರಸ. ಆದರೆ ಆದೋನಿ ನವಾಬ ಈತನ ಪ್ರದೇಶಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುತ್ತಾನೆ. ಈತನ ನಂತರ ರಾಮಪ್ಪನಾಯಕ (ಕ್ರಿ.ಶ. ೧೭೩೭-೧೭೪೨)ನು ಅಧಿಕಾರಕ್ಕೆ ಬರುತ್ತಾನೆ. ಆಮೇಲೆ ಶಿವಪ್ಪನಾಯಕ (ಕ್ರಿ.ಶ. ೧೭೪೨-೧೭೫೦), ಚಿನ್ನಯರಾಜ ಕ್ರಿ.ಶ. ೧೭೫೨ರಲ್ಲಿ ಅಧಿಕಾರಕ್ಕೆ ಬಂದನು. ಈತನೇ ಗುಡೇಕೋಟೆಯ ಈತನೇ ಗುಡೇಕೋಟೆಯ ಕೊನೆಯ ಚೆಲುವಾದಿ ಚಿನ್ನಪ್ಪನ ಮಗಳೂ, ಮದಲೆ ಹನುಮಯ್ಯನ ಪತ್ನಿಯೂ ಆದ ಓಬವ್ವ ನೆಲಸಿದ್ದಳು.

**ನಂತರ ಗಡೇಕೋಟೆ, ಹೈದರಾಲಿಯ ತರುವಾಯ ಟಿಪ್ಪುಸುಲ್ತಾನನ ದಾಳಿಗೆ ತುತ್ತಾಗಿ, ಕೆಲವು** ದಿನಗಳ ಕಾಲ ಇವರ ಅಧೀನದಲ್ಲಿತ್ತು. ಕ್ರಿ.ಶ. ೧೭೯೯ರಲ್ಲಿ ಟಿಪ್ಪುಸುಲ್ತಾನ ಮರಣ ಹೊಂದಿದ ತರುವಾಯ ನಿಜಾಮನ ಅಧೀನಕ್ಕೆ ಒಳಪಟ್ಟಿತು. ಕ್ರಿ.ಶ. ೧೮೦೩ರ ಮೈಸೂರು ಸಪ್ಲಿಮೆಂಟರಿ ಒಪ್ಪಂದದ ಪ್ರಕಾರ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಆಗ ಗುಡೇಕೋಟೆ ಅರಸರ ಆಳ್ವಿಕೆ ಕೊನೆಗೊಂಡಿತು. ಬ್ರಿಟಿಷರು ಈ ಮನೆತನದವರಿಗೆ ವಿಶ್ರಾಂತಿ ವೇತನ ನೀಡಿದರು. ೧೯೨೯ರವೆರಗೆ ಇವರು ವಿಶ್ರಾಂತಿ ವೇತನ ಪಡೆದ ಕುರಿತಾಗಿ ಕೆಲ ದಾಖಲೆಗಳು ಮಾಹಿತಿಯನ್ನು ಒದಗಿಸುತ್ತವೆ. ಅಲ್ಲದೆ ಕೆಲವು ಪ್ರದೇಶಗಳ ಕಂದಾಯವನ್ನು ವಸೂಲಿ ಮಾಡಲು ಗಡೇಕೋಟೆ ಅರಸರಿಗೆ ಅನುಮತಿ ನೀಡಿದ್ದರು.

ಇವರು ಕೃಷಿ ನೀರಾವರಿಗಾಗಿ ಆದ್ಯತೆ ನೀಡಿದ್ದರು. ಇವರು ನಿರ್ಮಿಸಿದ ಬೊಮ್ಮಲಿಂಗಕೆರೆ, ಏಣಿ ಈರಪ್ಪನ ಬಾವಿ ಪ್ರಮುಖವಾದವುಗಳು. ಇವರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಅವುಗಳಲ್ಲಿ ರಾಮಲಿಂಗೇಶ್ವರ, ಆಂಜನೆಯ, ಬಸವಣ್ಣ, ಈಶ್ವರ, ಲಕ್ಷ್ಮೀ, ಪಂಚಲಿಂಗೇಶ್ವರ, ಶಿವಪಾರ್ವತಿ, ಕಾಳಮ್ಮ, ಚೌಡಮ್ಮ, ಮಲಿಯಮ್ಮ ದೇವಾಲಯ ಗಳು ಪ್ರಮುಖವಾದವುಗಳು.

ಈ ಅರಸರ ವಂಶಸ್ಥರು ಗಡೇಕೋಟೆಯಲ್ಲಿ ನೆಲೆಸಿದ್ದಾರೆ. ಇವರು ತಮ್ಮ ಪೂರ್ವಜರ ಆಸ್ತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಇವರ ಆರ್ಥಿಕ ಸ್ಥಿತಿ ತಕ್ಕಮಟ್ಟಿಗೆ ಉತ್ತಮವಾಗಿದೆ.

**೮. ಜರಿಮಲೆ ಬೇಡ ಪಾಳೆಯಗಾರರು**

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಿಂದ ಆಗ್ನೇಯಕ್ಕೆ ೧೫ ಕಿ.ಮೀ. ದೂರದಲ್ಲಿರುವ ಜರಿಮಲೆ ಬೇಡ ಪಾಳೆಯಗಾರರು ಆಂಧ್ರದ ಕದ್ರಿಮೂಲದವರೆಂದು ಕರೆದು ಕೊಂಡವರು.[6] ಕಾರಣಾಂತರಗಳಿಂದ ವಿಜಯನಗರಕ್ಕೆ ಬಂದು ನೆಲೆಸಿದರು. ವಿಜಯನಗರದ ಅರಸರ ಸೇವೆಯನ್ನು ಮಾಡಿಕೊಂಡಿದ್ದವರಲ್ಲಿ ಮೊದಲಿಗ ಪಾಪಣ್ಣನಾಯಕ ಈತನು ವೀರನರಸಿಂಹ ಕ್ರಿ.ಶ. ೧೪೮೧ ೧೫೦೫ನ ಸೇವಕರಲ್ಲಿ ಒಬ್ಬನಾಗಿ ಸೇವೆಸಲ್ಲಿಸುತ್ತಿದ್ದನು. ಆದನ ಪ್ರೀತಿಗೆ ಪಾತ್ರನಾಗಿದ್ದರಿಂದ ವಡ್ಡವ, ದರೋಜಿ ಗ್ರಾಮಗಳು ಬಳುವಳಿಯಾಗಿ ಬಂದವು. ಈತನ ತರುವಾಯ ಮಗ ಪೆನ್ನಪ್ಪನಾಯಕ ಅಧಿಕಾರಕ್ಕೆ ಬಂದನು. ವೀರನರಂಸಿಹ ಹಾಗೂ **ಅಚ್ಯುತ ದೇವರಾಯ ಈತನಿಗೆ ಜಹಗೀರು ನೀಡಿ, ೫೦೦ ಅಶ್ವದಳ, ೩೦೦೦ ಕಾಲ್ದಳ ಪಡೆ ಹೊಂದಲು** ಅನುಮತಿ ನೀಡಿದ್ದನು. ಆಗ ಈ ಭಾಗದಲ್ಲಿ ಮಹಮದೀಯರ ದಾಳಿಗಳು ಹೆಚ್ಚಾಗಿದ್ದರಿಂದ ಪೆನ್ನಪ್ಪನಾಯಕ ಕಣಕುಪ್ಪೆ, ಕೂಡಲಗಿ, ನಾರಾಯಣದೇವರಕೆರೆ, ಡಣಾಯಕನಕೆರೆ, ಸೊಂಡೂರು ಪ್ರದೇಶವನ್ನು ತನ್ನ ವಶದಲ್ಲಿಟ್ಟುಕೊಳ್ಳುತ್ತಾನೆ. ಪೆನ್ನಪ್ಪನಾಯಕ ಉಜ್ಜಿಯಿನಿ ಯಲ್ಲಿ ಕೋಟೆ ಕಟ್ಟಿಸಿದನೆಂದು ಮೆಕೆಂಜಿ ಬರಹಗಳು ಹೇಳುತ್ತವೆ.

ಪೆನ್ನಪ್ಪನಾಯಕನ ೨ನೇ ಮಗ ಭೂಮಿರಾಜ ತಮ್ಮ ತಂದೆಯ ನಂತರ ಆಳ್ವಿಕೆಮಾಡಿದನು. ಸಾಹಸಿಯಾದ ಈತ ಬಿಜಾಪುರದ ಬಾದಷಹನ ಕುದುರೆಯನ್ನು ಪಳಗಿಸಿದ್ದಕ್ಕಾಗಿ 'ಜಮೇದಾರ್ ಗುಡ್ಡಯ್ಯ ಜರಿಮಲ್ಲ' ಬಿರುದನ್ನು ಪಡೆದನು. ಆತನಿಂದ ನಾಲ್ಕು ಮಾಗಣಿಗಳನ್ನು,

೧೦೦೦ರೂ. ಕಾಣಿಕೆ, ೧೦೦೦ ಕಾಲಾಳು, ೩೦೦ ಅಶ್ವಗಳನ್ನು ಇಟ್ಟುಕೊಳ್ಳಲು ಅನುಮತಿ ಯನ್ನು ಪಡೆಯುತ್ತಾನೆ. ಈತನ ನಂತರ ಅಧಿಕಾರಕ್ಕೆ ಬಂದವನು ಇಮ್ಮಡಿನಾಯಕ. ಈತನ ಕಾಲದಲ್ಲಿ ಬಿಜಾಪುರದ ಆದಿಲ್‌ಶಾಹಿಯು ಜರಿಮಲೆಯ ಕೆಲವು ಪ್ರದೇಶಗಳನ್ನು ಗೆದ್ದು ಕೊಂಡನು. ಸಾಕಷ್ಟು ಸಂಪತ್ತನ್ನು ಕೊಳ್ಳೆಹೊಡೆದನು. ಜರಿಮಲೆನಾಯಕನು ಮಹ್ಮದ್ ಆದಿಲ್‌ಶಾಹನಿಗೆ ವಾರ್ಷಿಕ ೯೩,೭೫೦ ರೂ.ಗಳನ್ನು ಕಾಣಿಕೆಯೆಂದು ಕೊಡುತ್ತಿದ್ದನು.[7] ಬಿಜಾಪುರ ಸುಲ್ತಾನನು ಇಮ್ಮಡಿನಾಯಕನು ತನಗೆ ಅವಿಧೇಯತೆಯನ್ನು ತೋರಿಸುತ್ತಾನೆಂಬ ಕಾರಣಕ್ಕಾಗಿ ಉಜ್ಜಯಿನಿಯ ಮೇಲೆ ದಾಳಿಮಾಡಿ ಅದನ್ನು ವಶಪಡಿಸಿಕೊಳ್ಳುತ್ತಾನೆ. ನಂತರ ಬೊಮ್ಮಣ್ಣನಾಯಕನು ಅಧಿಕಾರಕ್ಕೆ ಬರುತ್ತಾನೆ. ಈತನ ಕಾಲಾವಧಿಯಲ್ಲಿ ಹರಪನಹಳ್ಳಿ ಮತ್ತು **ಚಿತ್ರದುರ್ಗದ ಚಿಕ್ಕಣ್ಣನಾಯಕ (ಕ್ರಿ.ಶ. ೧೬೭೫–೧೬೮೬)ನು ಉಜ್ಜಯಿನಿಯ ಮೇಲೆ ಆಕ್ರಮಣ ಮಾಡಿ** ನಂತರ ಒಪ್ಪಂದದಂತೆ ಮತ್ತೆ ಜರಿಮಲೆಯವರಿಗೆ ಬಿಟ್ಟುಕೊಡುತ್ತಾನೆ. ನಂತರದಲ್ಲಿ ಬೊಮ್ಮಣ್ಣನಾಯಕ ರಾಜಕೀಯವಾಗಿ ಹೀನಾಯ ಸೋಲು ಕಂಡನು. ಇದನ್ನು ಅರಿತ ಮರಾಠ ದಂಡನಾಯಕ ಸಿದ್ದಾಜಿ ಘೋರ್ಪಡೆಯು ಕ್ರಿ.ಶ. ೧೭೨೧ಲರಲ್ಲಿ ಸೊಂಡೂರು, ಕುಡುತಿನಿಗಳನನು ಪಡೆಯಲು ಮುಂದಾದನು. ಅಲ್ಲದೆ ೮ ವರ್ಷಗಳವರೆಗೆ ಚೌಥ್ ನೀಡು ವಂತೆ ಒತ್ತಾಯಪಡಿಸಿದನು. ಕ್ರಿ.ಶ. ೧೭೪೨ರಲ್ಲಿ ಹರಪನಹಳ್ಳಿಯವರು ಜರಿಮಲೆಯವರ ನಾರಾಯಣದೇವರಕೆರೆ, ಡಣಾಯಕನಕೆರೆ ಪ್ರದೇಶಗಳನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ಚಿತ್ರದುರ್ಗದಲ್ಲಿ ಚಿತ್ರದುರ್ಗದವರು ಬೊಮ್ಮಣ್ಣನಾಯಕನಿಗೆ ಸಹಾಯ ಮಾಡಲಿಲ್ಲ.

ನಂತರ ಬೊಮ್ಮಣ್ಣನಾಯಕನ ಮಗ ಇಮ್ಮಡಿನಾಯಕ ಜರಿಮಲೆಯ ದೊರೆಯಾದ, ಈತ ಚಿತ್ರದುರ್ಗದ ಗಡಿ ಪ್ರದೇಶಗಳಲ್ಲಿ ಉಪಟಳ ಆರಂಭಿಸಿದ ಸಿಟ್ಟಿಗೆದ್ದ ಚಿತ್ರದುರ್ಗದ ಅರಸ ರಾಜಾವೀರಮದಕರಿನಾಯಕ (ಕ್ರಿ.ಶ. ೧೭೫೪-೧೭೭೯)ನು ಜರಿಮಲೆಯ ಮೆಲೆ ದಂಡೆತ್ತಿ ಬರುತ್ತಾನೆ. ಜರಿಮಲೆಯ ರಾಜಪರಿವಾರವನ್ನು ಚಿತ್ರದುರ್ಗದ ಕೋಟೆಗೆ ಕರೆತಂದು ಸೆರೆಯಲ್ಲಿ ಇಡುತ್ತಾರೆ. ಇದನನು ಅರಿತ ಹೈದರಾಲಿ ಚಿತ್ರದುರ್ಗವನ್ನು ಗೆಲ್ಲಬೇಕೆಂದು, ಚಿತ್ರದುರ್ಗಿದವರಿಂದ ಅತೃಪ್ತಗೊಂಡವರನ್ನುಭೇಟಿಮಾಡುತ್ತಾನೆ. ಅದರಲ್ಲಿ ಜರಿಮಲೆ ಯವರು ಹೈದರಾಲಿಗೆ ಸಹಾಯ ಮಾಡಲು ಒಪ್ಪುತ್ತಾರೆ. ಕ್ರಿ.ಶ. ೧೭೭೯ರಲ್ಲಿ ಹೈದರಾಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡಾಗ ಜರಿಮಲೆ ನಾಯಕರಿಗೆ ಮದಕರಿನಾಯಕನ ಸೋಲು ಖುಷಿ ನೀಡುತ್ತದೆ. ಆಗ ಹೈದರಾಲಿ ಜರಿಮಲೆ ನಾಯಕ ಅಧಿಕಾರವನ್ನು ನೀಡುತ್ತಾನೆ. ಬೊಮ್ಮಣ್ಣನಾಯಕ ಪುನಃ ಜರಿಮಲೆಯಿಂದ ಅಧಿಕಾರ ಪ್ರಾರಂಭಿಸುತ್ತಾನೆ. ಆದರೆ ಬರುಬರುತ್ತಾ ಜರಿಮಲೆಯ ಅರಸನ ಸಾಹಸವನ್ನು ಕಂಡು ಹೈದರಾಲಿಗೆ ಹೊಟ್ಟೆಕಿಚ್ಚಾಯಿತು. ಆಗ ಜರಿಮಲೆಯನ್ನು ವಶಪಡಿಸಿಕೊಳ್ಳುತ್ತಾನೆ. ಆಗ ಜರಿಮಲೆ ಅರಸ ಸುರಪುರಕ್ಕೆ ಓಡಿಹೋಗಿ ಅಲ್ಲಿಯೇ ಅರಸರ ಆಶ್ರಯ ಪಡೆಯುತ್ತಾನೆ. ಕ್ರಿ.ಶ. ೧೭೯೯ರಲ್ಲಿ ಒಪ್ಪಂದದ ಪ್ರಕಾರ ಜರಿಮಲೆಯು ಹೈದ್ರಾಬಾದ್ **ನಿಜಾಮನ ವಶವಾಯಿತು. ಆಗ ಜರಿಮಲೆ ಅರಸ ಹೈದ್ರಾಬಾದ್ ನಿಜಾಮನಿಗೆ ಕಪ್ಪವನ್ನು ಕೊಡುವುದಾಗಿಯೂ** ತಮಗೆ ತಮ್ಮ ರಾಜ್ಯವನ್ನು ಪುನಃ ನೀಡುವಂತೆ ಕೇಳಿಕೊಂಡನು. ಆಗ ಕ್ರಿ.ಶ. ೧೮೦೦ರಲ್ಲಿ ಒಂದು ವರ್ಷಕ್ಕೆ ೭೦೦೦ ರೂಗಳನ್ನು, ೧೮೦೧ಕ್ಕೆ ೨೦೦೦ರೂಗಳನ್ನು ಮುಂದಿನ ವರ್ಷಗಳಲ್ಲಿ ಅದೇ ರೀತಿ ಕಪ್ಪವನ್ನು ಕೊಡಬೇಕೆಂಬ ಒಪ್ಪಂದ ವನ್ನು ಮಾಡಿಕೊಳ್ಳಲಾಯಿತು. ಆಗ ಜರಿಮಲೆಯನ್ನು ನಾಯಕರಿಗೆ ಬಿಡಲಾಯಿತು. ಕ್ರಿ.ಶ. ೧೮೦೦ರಲ್ಲಿ ಜರಿಮಲೆ ಈಸ್ಟ್‌ಇಂಜಿಯಾ ಕಂಪನಿಗೆ ಸೇರಿತಲ್ಲದೆ, ಕ್ರಿ.ಶ. ೧೮೦೧ರಲ್ಲಿ ಜರಿಮಲೆ ಮನೆತನದವರಿಗೆ ಮಾಸಾಶನ ಮಂಜೂರು ಮಾಡಲಾಯಿತು. ಇದು ಈಗಿನ ವಂಶಸ್ಥರಾದ ಪಂಪಾಪತಿ ನಾಯಕರ ತಂದೆಯವರ ಕಾಲದವರೆಗೆ ೪೨ ರೂ. ೧೨ ಆಣೆ ಬರುತ್ತಿತ್ತು. ನಂತರ ೨೫೦ ರೂ. ಬರುತ್ತಿತ್ತು. ಅನಂತರ ರದ್ದಾಗಿದೆ.

ಇವರು ಅನೇಕ ದೇವಾಲಯಗಳನ್ನು ಕೋಟೆ ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಪ್ರತಿ ವರ್ಷ ಉಜ್ಜಿನಿ ಮಠಕ್ಕೆ ತೈಲಾಭಿಷೇಕ ಮಾಡುವ ಸಂಪ್ರದಾಯವಿದೆ. ಇಂದು ಜರಿಮಲೆಯಲ್ಲಿ ಇವರ ಹಳೆಯ ಅರಮನೆಯ ಅವಶೇಷಗಳನ್ನು ಗುರುತಿಸಬಹುದಾಗಿದೆ.

ಈ ಮನೆತನದ ವಂಶಸ್ಥರು ಜರಿಮಲೆಯಲ್ಲಿ ವಾಸವಾಗಿದ್ದಾರೆ. ಕರ್ನಾಟಕದ ಉಳಿದ ನಾಯಕ ಅರಸು ಮನೆತನಗಲ್ಲಿಯ ಅರ್ಥಿಕ ಸ್ಥಿತಿಗಿಂತ ಅತೀ ಕೆಳಮಟ್ಟದ ಸ್ಥಿತಿಯನ್ನು ತಲುಪಿದ ಮನೆತನ ಇದಾಗಿದೆ. ಆದರೆ ಸಾಮಾಜಿಕವಾಗಿ, ರಾಜಕೀಯವಾಗಿ ಇವರಿಗೆ ಅಪಾರ ವಾದ ಗೌರವವಿದೆ.

ಈ ಮೇಲಿನ ಈ ಶಾನ್ಯ ಕರ್ನಾಟಕದ ಬೇಡ ಪಾಳೆಯಗಾರರು ಸ್ವತಂತ್ರ ಆಡಳಿತ ಆರಂಭಿಸಿದಂದಿನಿಂದಲೇ ಒಂದು ಸ್ವರೂಪವನ್ನು ಪಡೆದುಕೊಂಡು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು, ಉತ್ತಮ ಆಡಳಿತವನ್ನು ಒದಗಿಸುವ ಮೂಲಕ ತಮ್ಮ ಸ್ವಂತಿಕೆಯನ್ನು ಮೆರೆದರು. ಅನ್ಯಶಕ್ತಿಗಳ ಅಡಚಣೆ ಹಾಗೂ ಆಕ್ರಮಣಗಳ ಮಧ್ಯೆ ಅನೇಕ ಸಾರ್ವಜನಿಕ ಕಲ್ಯಾಣ ಕಾರ್ಯಗಳನ್ನು ಮಾಡಿದರು. ತಮ್ಮ ತಮ್ಮ ರಾಜ್ಯವನ್ನು ಅಭಿವೃದ್ಧಿಯೆಡೆಗೆ ಕೊಂಡೊಯ್ಯಲು ಪ್ರಯತ್ನಿಸಿದರು. ಉಜ್ವಲ ಐತಿಹಾಸಿಕ ಪರಂಪರೆಯನ್ನು ಹೊಂದಿದ್ದ ಇವರಿಗೆ ಅವನತಿ ಪ್ರಾಪ್ತವಾದುದು ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ. ಆಗ ಕೆಲವು ಬೇಡ ಪಾಳೆಯಪಟ್ಟುಗಳು ಕ್ಷೀಣಿಸತೊಡಗಿದವು. ಇದಕ್ಕೆ ಕಾರಣ ಆ ಪಾಳೆಯ ಪಟ್ಟುಗಳಲ್ಲಿ ಮನೆಮಾಡಿದ್ದ ಪರಸ್ಪರ ಆಂತರಿಕ ಕಲಹ, ದ್ವೇಷ, ಈರ್ಷ್ಯೆ, ವೈಷಮ್ಯ, ಅಧಿಕಾರ ವಿಸ್ತರಣಾಕಾಂಕ್ಷೆಗಳೆಲ್ಲ ಒಂದೆಡೆಯಾದರೆ, ಇವುಗಳನ್ನೇ ಸದುಪಯೋಗ ಪಡಿಸಿಕೊಂಡ ಹೈದರ್‌ಅಲಿ, ಟಿಪ್ಪುಸುಲ್ತಾನ್, ಮರಾಠರು, ಇಂಗ್ಲಿಷರು ಮತ್ತು ಹೈದ್ರಾಬಾದ್ ನಿಜಾಮರು ಆಡಲಿತದಲ್ಲಿ ನಾಯಕ ಅರಸರ ಕ್ಷಾತ್ರತೇಜಸ್ಸಿನ ಸಾಮರ್ಥ್ಯವನ್ನು ಅರಿತರು. ಇವರು ಈ ಬೇಡ ಪಾಳೆಯಗಾರರನ್ನು ಕುತಂತ್ರದಿಂದ ಮೂಲೆಗೊತ್ತಿ ಅವರ ಅಧಿಕಾರವನ್ನು ಕಬಳಿಸುವಲ್ಲಿ ಪ್ರಯತ್ನಿಸಿ ಯಶಸ್ವಿಯಾದರು. ಅಲ್ಲದೆ, ಅವರ ಸಂಪತ್ತನ್ನು ದೋಚಿದರು. ಅಧಿಕಾರ ಕಳೆದುಕೊಂಡ ಬೇಡ ಪಾಳೆಯಗಾರರು ಅಧಿಕಾರ ಗಿಟ್ಟಿಸಿಕೊಳ್ಳಲು ಮರುಪ್ರಯತ್ನ ಮಾಡಿದರೂ ಯಶಸ್ಸು ಸಿಗದ ಸಂದರ್ಭಗಳು ಸೃಷ್ಟಿಯಾದವು. ಇವರ ಅವನತಿಯ ಕಾಲ ಬಂದಿತು. ಆದರೆ ಇರುವಷ್ಟು ಕಾಲ ಇವರು ವೈಭವದ ಅಧಿಕಾರ ನಡೆಸಿದರೆಂಬುದು ದಿಟ.

ಈ ಬೇಡ ಪಾಳೆಯಗಾರರ ರಾಜಕೀಯ ಚರಿತ್ರೆಯಷ್ಟೇ ಅವರ ಸಾಂಸ್ಕೃತಿಕ ಜೀವನವೂ ವೈಭವಯುತವಾದುದು. ಇವರು ಹತ್ತನೇ ಶತಮಾನದಿಂದ ಹತ್ತೊಂಭತ್ತನೇ ಶತಮಾನದವರೆಗೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಾಡಿದ ಸಾಧನೆ ಅಪಾರ. ದಕ್ಷಿಣಭಾರತದ ಜನತೆ ಅರಾಜಕತೆಯ ಭೀತಿಯಿಂದ ತತ್ತರಿಸುತ್ತಿದ್ದ ಸಮಯದಲ್ಲಿ ಅವರಿಗೆ ರಾಜಕೀಯ ಭದ್ರತೆಯನ್ನು ಒದಗಿಸು ವಲ್ಲಿ ಇವರು ಯಶಸ್ವಿಯಾದರು. ತಾವಿ ನೆಲೆಸಿದ್ದ ಪ್ರದೇಶಗಳಲ್ಲಿ ಕೋಟೆ-ಕೊತ್ತಲುಗಳನ್ನು ಕಟ್ಟಿಸಿದರಲ್ಲದೆ, ಜನಸಾಮಾನ್ಯರ ಬದುಕಿಗೆ ರಕ್ಷಣೆ ನೀಡಿದರು. ಹಾಗೂ ಇವರ ರಾಜಧಾನಿ ಗಳೆಲ್ಲವೂ ಸುರಕ್ಷಿತ ಸ್ಥಳಗಳಲ್ಲಿರುವುದು ವಿಶೇಷ. ಹೀಗಾಗಿ ಇವರಿಗೆ ಯಾವುದೇ ರೀತಿಯ ಆಂತರಿಕ ಹಾಗೂ ಬಾಹ್ಯವಾದ ಹೆದರಿಕೆಗಳು ಇರಲಿಲ್ಲ. ನೆಮ್ಮದಿಯ ಬದುಕನ್ನು ಸಾಗಿಸುವಲ್ಲಿ ಅನುಕೂಲಕರ ಪರಿಸ್ಥಿತಿ ಇದ್ದಿತು. ಅಲ್ಲದೆ, ಇವರು ಶಿಸ್ತಿಗೂ, ಸ್ವಾಮಿನಿಷ್ಠೆಗೂ, ಆದರ್ಶ ಪ್ರಾಯತನಕ್ಕೂ ಹೆಸರಾದವರು; ಸುವ್ಯವಸ್ಥಿತಿ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದರು. ಈ ಅಂಶಗಳ ಹಿನ್ನೆಲೆಯಲ್ಲಿ ಈಶಾನ್ಯ ಕರ್ನಾಟಕದ ಬೇಡ ಪಾಳೆಯಗಾರರು ಕರ್ನಾಟಕದ ಚರಿತ್ರೆಯಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇವರ ಕುರಿತಾಗಿ ಇನ್ನೂ ಸಮಗ್ರ ಸಂಶೋದನೆಯ ಅಗತ್ಯವಿದೆ.

* * *

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

---

[1] ಬಸಣ್ಣ ಜಾವೂರು, ಸಾ|| ಗುಂತಗೋಳ ಇವರ ಹೇಳಿಕೆಯಿಂದ.

[2] ರಾಜಾ ಕಿಲಚನಾಯಕ- ದೇವದುರ್ಗ ಅರಸುವಂಶಸ್ಥರ ಹೇಳಿಕೆಯಿಂದ

[3] ದೇವರಕೊಂಡಾರೆಡ್ಡಿ (ಸಂ) **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬, ಕೊಪ್ಪಳ ಜಿಲ್ಲೆ** ೨೦೦೪, ಪು. ೩೭೦

[4] ಶರಣಬಸಪ್ಪ ಪಿ. ಕೋಲ್ಕಾರ, **ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿ ಶಿಲ್ಪಗಳು,** ಎಂ.ಫಿಲ್ ನಿಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೪, ಪು. ೫೪

[5] ದುರಗಪ್ಪ ಎಂ.ಕೆ. **ವಿಜಯನಗರರೋತ್ತರ ರಕಾಲೀನ ಬೇಡಜನಾಂಗದಲ್ಲಾದ ಸ್ಥಿತ್ಯಂತರಗಳು: ಚಾರಿತ್ರಿಕ ಅಧ್ಯಯನ,** ೨೦೦೪, ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ, ಪು. ೧೦೭

[6] **ಲಕ್ಷ್ಮಣ್ ತೆಲಗಾವಿ (ಸಂ): ಜರಿಮಲೆ ಸಂಸ್ಥಾನದ ವಂಶಾವಳಿ, ಚಂದ್ರವಳ್ಳಿ, ಪು.** ೩೭

[7] ಕೃಷ್ಣಾಕೋ

# ಸ್ವಾತಂತ್ರ್ಯ ಹೋರಾಟದಲ್ಲಿ ಬೇಡರು

ಜಾಗತಿಕ ಚರಿತ್ರೆಯಲ್ಲಿ ಯಾವುದೇ ರಾಷ್ಟ್ರವು ಒಂದೇ ಬಾರಿಗೆ ಪ್ರವರ್ಧಮಾನಕ್ಕೆ ಬಂದಿಲ್ಲ. ಇದನ್ನು ಚರಿತ್ರೆ ಖಚಿತಪಡಿಸುತ್ತದೆ. ಅಲ್ಲಿನ ಭೌಗೋಳಿಕ ಪರಿಸ್ಥಿತಿ ಕೂಡ ರಾಷ್ಟ್ರದ ಮೇಲೆ ಪರಿಣಾಮ ಬೀರುತ್ತದೆ. ತನ್ನ ಮೂಲಭೂತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರ ಜೊತೆಗೆ ಆರ್ಥಿಕವಾಗಿ ಸದೃಢರಾಗಲು ಪ್ರಯತ್ನಿಸುತ್ತವೆ. ಕಾಲಕ್ರಮೇಣ ಪ್ರಬಲ ರಾಷ್ಟ್ರಗಳು ಬಲಹೀನ ರಾಷ್ಟ್ರಗಳ ಮೇಲೆ ಬಲಪ್ರಯೋಗ ಮತ್ತು ಹೆಜಿಮೋನಿ ಮುಖಾಂತರ ಒತ್ತಡ ತರುತ್ತವೆ. ಇಂತಹ ಪ್ರವೃತ್ತಿಗೆ ಯೂರೋಪಿನ ರಾಷ್ಟ್ರಗಳು ಮುಂಚೂಣಿಯಲ್ಲಿದ್ದವು. ಈ ಪ್ರಕ್ರಿಯೆಯು ರಾಷ್ಟ್ರ-ರಾಷ್ಟ್ರಗಳ ಮಧ್ಯೆ ನಡೆಯುತ್ತಿರುವ ಸಂದರ್ಭದಲ್ಲಿ ಹತೋಟಿ ಸಾಧಿಸಿದ ರಾಷ್ಟ್ರದ ವಿರುದ್ಧ ಹತೋಟಿಗೊಳಪಟ್ಟ ರಾಷ್ಟ್ರದ ಜನತೆ ಹೋರಾಟ ಮನೋಭಾವ ಬೆಳೆಸಿಕೊಳ್ಳುವುದು ಸಹಜ. ಭಾರತವು ಇದಕ್ಕೆ ಹೊರತಾಗಿರಲಿಲ್ಲ. ಬ್ರಿಟನ್ ಸೇರಿದಂತೆ ಯೂರೋಪಿನ ರಾಷ್ಟ್ರಗಳು ಭಾರತದ ಆರ್ಥಿಕ ಸಂಪನ್ಮೂಲವನ್ನು ತನ್ನ ಬೆಳವಣಿಗೆಗೆ ಉಪಯೋಗಿಸಿಕೊಳ್ಳುತ್ತಿದ್ದವು. ಜನತೆಯ ಆಶೋತ್ತರಗಳಿಗೆ ವಿರುದ್ಧವಾಗಿ, ಸ್ವತಂತ್ರ್ಯ ವಿಚಾರಗಳಿಗೆ ಅಡ್ಡಿಯಾಗಿದ್ದರು. ಇವೆಲ್ಲವುದರ ಪರಿಣಾಮವಾಗಿ ಭಾರತೀಯರು ಒಗ್ಗೂಡಿ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದರು. ಈ ಹಿನ್ನೆಲೆಯಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆ, ಹೋರಾಟ ಮಾಡಿ ಸ್ವಯಂ ಆಡಳಿತಕ್ಕಾಗಿ ಅನೇಕ ವರ್ಷಗಳ ಕಾಲ ಸಕ್ರಿಯವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡರು. ಐರೋಪ್ಯರಲ್ಲಿ ಮುಖ್ಯವಾಗಿ ಬ್ರಿಟಿಷರು ಇಲ್ಲಿನ ವ್ಯವಸ್ಥೆಯೊಂದಿಗೆ ಬೆರತುಹೋಗಿದ್ದರು. ೨೦ನೇ ಶತಮಾನದ ಮಧ್ಯಭಾಗದವರೆಗೂ ಕೂಡ ಭದ್ರವಾಗಿ ತಳವೂರಿದ್ದರು. ವಸಾಹತುಶಾಹಿ ನೀತಿಯ ಮುಂದುವರಿದ ಭಾಗಗಳಾದ ಉದಾರೀ ಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಪರಿಣಾಮವಾಗಿ ೨೧ನೇ ಶತಮಾನದ ಈ ದಿನಗಳಲ್ಲಿ ಭಾರತದಂಹ ರಾಷ್ಟ್ರಗಳನ್ನು ನಿಯಂತ್ರಿಸುವ, ಆಕ್ರಮಿಸುವ, ಹಿಡಿದಿಡುವ ಪರಿಸ್ಥಿತಿಗೆ ಬದಲಾಗಿದೆ. ಹೀಗಿರುವಾಗ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅನೇಕ ಪ್ರಾಂತ್ಯಗಳು ಭಾಗವಹಿಸಿ, ಹೋರಾಡಿವೆ. ಇದಕ್ಕೆ ಚರಿತ್ರೆಯಲ್ಲಿ ಸಾಕಷ್ಟು ವಿವರಗಳು ಸಿಗುತ್ತವೆ. ಭಾರತವು ಸ್ವಾತಂತ್ರ್ಯಗಳಿಸುವಾಗ ಹಲವು ವ್ಯಕ್ತಿಗಳು, ಜನತೆ, ರೈತರು, ಬುಡಕಟ್ಟಿನವರು, ನಾಗರಿಕ ಪ್ರತಿಭೆಗಳು, ಸಶಸ್ತ್ರ ಪ್ರತಿಭಟನೆಗಳ ಮುಖಾಂತರ, ದಲಿತರು, ಹಲವು ಜನ-ವರ್ಗಗಳು ಭಾಗವಹಿಸಿವೆ. ಅನೇಕ ಸಮುದಾಯಗಳು ಹೋರಾಡಿವೆ; ಶ್ರಮಿಸಿವೆ, ಪ್ರಾಣತ್ಯಾಗವನ್ನು ಕೂಡ ಮಾಡಿವೆ. ಇದಕ್ಕೆ ಬೇಡ ಸಮುದಾಯಗಳು ಹೊರತಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಬೇಡರು ಎನ್ನುವ ವಿಷಯನ್ನು ಕುರಿತು ಚರ್ಚಿಸಲು ಪ್ರಸ್ತುತ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

**ಸ್ವಾತಂತ್ರ್ಯ ಪದದ ಅರ್ಥ**

'ಸ್ವತಂತ್ರ್ಯ' ಒಂದು ರಾಷ್ಟ್ರದ ಜೀವಾಳ. ಸ್ವಆಡಳಿತ ನಡೆಸಲು ಅತ್ಯಾವಶ್ಯಕ. ವಿಶ್ವದ ಪ್ರಮುಖ ಕ್ರಾಂತಿಗಳನ್ನು ಅವಲೋಕಿಸಿದಾಗ ಸ್ವತಂತ್ರ್ಯ, ಸಮಾನತೆಗಾಗಿ ಸಂಭವಿಸಿವೆ. ೧೭೮೯ರ ಫ್ರಾನ್ಸಿನ ಮಹಾಕ್ರಾಂತಿಯ ಪರಿಣಾಮ ಜಗತ್ತಿನ ಬಹುತೇಕ ರಾಷ್ಟ್ರಗಳು ತಮ್ಮ ಹಕ್ಕುಗಳಿಗಾಗಿ ಹೋರಾಡವುದನ್ನು ರೂಢಿಸಿಕೊಂಡವು. ಮನುಷ್ಯನಿಗೆ ಮೂಲಭೂತ ಬೇಡಿಕೆಗಳಾದ ನೀರು, ಆಹಾರ, ಗಾಳಿ ಎಷ್ಟು

ಅವಶ್ಯಕವೊ ಸ್ವತಂತ್ರ್ಯ ಅಷ್ಟೆ ಅವಶ್ಯಕ. 'ಸ್ವತಂತ್ರ್ಯ' ಎನ್ನುವ ಪದವನ್ನು ಗಮನಿಸಿದಾಗ ತನ್ನಿಚ್ಚೆಯಂತೆ ಇರುವುದು, ಬಂಧನದಿಂದ ವಿಮುಕ್ತಿ ಹೊಂದುವುದು, ಬಿಡುಗಡೆ ಹೊಂದುವುದು, ವಿಶೇಷ ಹಕ್ಕನ್ನು ಪಡೆಯುವುದು, ವ್ಯಕ್ತಿ ಸರಿಯೆನಿಸಿದ್ದನ್ನು ಮಾಡುವಂತಹ ಹಕ್ಕು ಎಂಬರ್ಥಗಳನ್ನು ಒಳಗೊಂಡಿದೆ. ದಂಗೆ, ಕಾಳಗ, ಕ್ರಾಂತಿ, ಯುದ್ಧ, ಸಂಗ್ರಾಮ, ಚಳವಳಿ, ಹೋರಾಟ ಸತ್ಯಾಗ್ರಹ, ಪ್ರತಿಭಟನೆ ಮುಂತಾದ ಆಯಾಮಗಳ ಮುಖಾಂತರ ವ್ಯಕ್ತಿ ಅಥವಾ ರಾಷ್ಟ್ರ ಸ್ವತಂತ್ರ್ಯಗೊಳ್ಳಲು ಪ್ರಯತ್ನಿ ಸುತ್ತದೆ. ರಾಷ್ಟ್ರೀಯ ನೆಲೆಗಟ್ಟಿನಲ್ಲಿ ಅವಲೋಕಿಸಿದಾಗ ಕೇವಲ ಪ್ರತಿಷ್ಠಿತರು ಮಾತ್ರವಲ್ಲದೆ ಜನಸಾಮಾನ್ಯರು ಕೂಡ ಮುಖ್ಯ ಪಾತ್ರ ವಹಿಸಬಲ್ಲರು ಎಂಬುದನ್ನು ಖಚಿತಪಡಿಸ ಬಹುದಾಗಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಇವರ ಕೊಡುಗೆ ಅಮೂಲ್ಯ ವಾದುದು. ಜನರ ಚರಿತ್ರೆಯೇ ಒಂದು ದೇಶದ ವಾಸ್ತವಿಕ ಚರಿತ್ರೆಯೆಂಬುದನ್ನು ಮನಗಾಣ ಬೇಕಾಗಿದೆ. ಅವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಲ್ಲಿಸಿದ ಕೊಡುಗೆಗಳನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಭವಿಷ್ಯತ್ತನ್ನು ಕಟ್ಟಬೇಕಾಗಿದೆ.

ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ೧೬ ನೇ ಶತಮಾನವು ಮಹತ್ವಪೂರ್ಣ ವಾದುದು. ವಿಜಯನಗರ ಸಾಮ್ರಾಜ್ಯ ಪತನದ ತರುವಾಯ ವಿಕೇಂದ್ರಿಕರಣ ಪ್ರಕ್ರಿಯೆ ವಿಸ್ತರಿಸ ತೊಡಗಿತು. ರಾಜರು, ಸಾಮಂತರು, ಪಾಳೆಯಗಾರರು ಸ್ವತಂತ್ರ್ಯವಾಗಲು ಯತ್ನಿಸಿದರು. ಕೆಲವರು ಸ್ವತಂತ್ರ್ಯರಾದರು. ವಿಜಯನಗರ ಬಿಗಿಹಿಡಿತ ಸಡಿಲಿತವಾಯಿತು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಆದುದರಿಂದ ಕೇಂದ್ರಿಕೃತ ಆಡಳಿತ ಕುಸಿಯತೊಡಗಿತು. ಇದು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಪಾಳೆಯಗಾರರ ಆಳ್ವಿಕೆಗೆ ಭದ್ರಬುನಾದಿಯಾಯಿತು. ಈ ಕುರಿತು ಚರಿತ್ರೆಕಾರರು ಮತ್ತು ವಿದ್ವಾಂಸರು ಸಾಕಷ್ಟು ಅಧ್ಯಯನ ಮಾಡಿದ್ದಾರೆ. ವಿಜಯನಗರೋತ್ತರ ಅವಧಿಯಲ್ಲಿ ಈ ಪಾಳೆಯಪಟ್ಟುಗಳು ಮುಖ್ಯವಾಹಿನಿಯಲ್ಲಿದ್ದವು. ಈ ಸಂಕೀರ್ಣ ಸಂದರ್ಭದಲ್ಲಿ ಐರೋಪ್ಯರ ಆಗಮನ ಭಾರತದ ಮೇಲೆ ಪರಿಣಾಮ ಬೀರಲಾರಂಭಿಸಿತು. ಕಾಲಕ್ರಮೇಣ ಪಾಶ್ಚಿಮಾತ್ಯರ ಹತೋಟಿ ದಿನದಿಂದ ದಿನಕ್ಕೆ ಹೆಚ್ಚಾಗ ತೊಡಗಿತು. ಆದುದರಿಂದ ಇಲ್ಲಿನ ಸ್ಥಳೀಯ ರಾಜರು, ಜನಸಾಮಾನ್ಯರು ಬ್ರಿಟಿಷ್ ಆಡಳಿತ ನೀತಿಯ ವಿರುದ್ಧ ತಿರುಗಿಬಿದ್ದರು.

**ವಸಾತುಶಾಹಿಗಳ ಪ್ರಾಬಲ್ಯ**

ಪೋರ್ಚುಗೀಸರು, ಡಚ್ಚರು ಮತ್ತು ಫ್ರೆಂಚರು ಭಾರತಕ್ಕೆ ಕ್ರಮವಾಗಿ ಆಗಮಿಸಿದರು. ರಾಷ್ಟ್ರದ ಸಂಪನ್ಮೂಲವು ಆಕರ್ಷಣೆಯಾಯಿತು. ಇಲ್ಲಿನ ರಾಜಕೀಯ ಅನೈತಿಕತೆ ಕೂಡ ಐರೋಪ್ಯರಿಗೆ ಪ್ರೇರಣೆಯಾಯಿತು. ಬ್ರಿಟಿಷರನ್ನು ಹೊರತುಪಡಿಸಿ ಉಳಿದವರ್ಯಾರು ಭಾರತ ದಲ್ಲಿ ಸುಭದ್ರ ಆಡಳಿತ ನಡೆಸಲು ಸಾಧ್ಯವಾಗಲಿಲ್ಲ. ಇದಕ್ಕೆ ಹಲವು ಕಾರಣಗಳುಂಟು. ಬ್ರಿಟಿಷರು ಸೇರಿದಂತೆ ಐರೋಪ್ಯರು ಇಲ್ಲಿನ ಸ್ಥಳೀಯ ರಾಜರೊಂದಿಗೆ ಹಲವು ಹೋರಾಟ ಗಳನ್ನು ಮಾಡಿದರು. ಈ ಹೋರಾಟಗಳಲ್ಲಿ ಬ್ರಿಟಿಷರು ಮಾತ್ರ ಯಶಸ್ವಿಯಾದರು. ಇದಕ್ಕೆ ಸ್ಥಳೀಯ ರಾಜರ ವೈಫಲ್ಯಕ್ಕೆ ಅನೇಕ ಕಾರಣಗಳಿವೆ. ಪ್ರಾರಂಭದಲ್ಲಿ ಇಂಗ್ಲಿಷರು ಭಾರತದಲ್ಲಿ ಆಡಳಿತ ನಡೆಸಲು ಮತ್ತು ಮುಖ್ಯ ವಸಾಹತು ಮಾಡಿಕೊಳ್ಳಲು ಯತ್ನಿಸದಿದ್ದರೂ, ಕಾಲ ಕ್ರಮೇಣ ಇಲ್ಲಿನ ರಾಜಕೀಯ ಅನೈತಿಕತೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಕಾರಣಗಳು ಪ್ರೇರಣೆಯಾದವು. ಭಾರತೀಯ ಚರಿತ್ರೆಯಲ್ಲಿ ಬ್ರಿಟಿಷರಿಗೆ ಭದ್ರವಾಗಿ ತಳವೂರಲು ಕ್ರಿ.ಶ. ೧೭೫೭ ಪ್ಲಾಸಿ ಪ್ರಮುಖ ಕಾರಣವಾಯಿತು. ಈ ಕದನದ ಪರಿಣಾಮವಾಗಿ ಬ್ರಿಟಿಷರು ಮೇಲುಗೈ ಪಡೆದು ಬಂಗಾಳ, ಬಿಹಾರ, ಒರಿಸ್ಸಾ, ಅಸ್ಸಾಂಗಳನ್ನೊಳಗೊಂಡ ಬಂಗಾಳ ಪ್ರಾಂತದ ಪತನವಾದುದು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯವು ಬಂಗಾಳದ ನವಾಬ ಸಿರಾಜುದೌಲನನ್ನು ಸೋಲಿಸಿದಾಗಲೆ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭ ವಾಯಿತು ಎಂದು ಹೇಳಿದರೆ ತಪ್ಪಗಲಾರದು.

೧೭೬೪ ರಲ್ಲಿ ಬ್ರಿಟಿಷ್ ಕಂಪನಿಗೂ ಮತ್ತು ಮೀರ್ ಖಾಸಿಂನಿಗೆ ನಡೆದ ಕದನದಲ್ಲಿ (ಬಾಕ್ಸಾರ್) ಬ್ರಿಟಿಷರು ಪ್ರಬುದ್ಧತೆಯನ್ನು ಪ್ರದರ್ಶಿಸಿದರು. ಇದರಿಂದ ಮತ್ತೊಂದು ಹೆಜ್ಜೆ ಮುಂದೆ ಹೊದಂತೆ ಕಾಣಲಾರಂಭಿಸಿತು. ಹಾಗೆಯೇ ದಕ್ಷಿಣ ಭಾರತದಲ್ಲಿ ಬ್ರಿಟಿಷರಿಗೆ ಮತ್ತು ಮೈಸೂರಿನ ಅರಸರಿಗೆ ಸ್ವಾತಂತ್ರ್ಯದ ವಿಚಾರದಲ್ಲಿ ಆಗಿಂದಾಗ್ಗೆ ಘರ್ಷಣೆಗಳು ನಡೆಯುತ್ತಲೇ ಇದ್ದವು. ಪ್ರಮುಖವಾಗಿ ನಾಲ್ಕು ಆಂಗ್ಲೊ-ಮೈಸೂರು ಯುದ್ಧಗಳು ಹೈದರ್ ಮತ್ತು ಟಿಪ್ಪು ಸುಲ್ತಾನನನ್ನು ದಮನಿಸಿ ಸಾರ್ವಭೌಮತ್ವ ಸಾರಲು ಮುಂದಾದರು. ಬ್ರಿಟಿಷ್ ಗೌನರರ್-ಜನರಲ್‌ಗಳು

ಜಾರಿಗೆ ತಂದ ಕಾಯಿದೆಗಳು ಕೂಡ ಭಾರತೀಯ ಅರಸರಿಗೆ ಮಾರಕವಾಗಿದ್ದವು. ಸಹಾಯಕ ಸೈನ್ಯ ಪದ್ಧತಿ, ದತ್ತು ಮಕ್ಕಳಿಗೆ ಹಕ್ಕಿಲ್ಲ ಹಾಗೂ ಕರಾರುಗಳು ಸಂಪೂರ್ಣವಾಗಿ ಬ್ರಿಟಿಷರಿಗೆ ಪೂರಕ ಫಲಿತಾಂಶವನ್ನು ಒದಗಿಸಿಕೊಟ್ಟವು. ಹಾಗೆಯೇ ಅವರು ಜಾರಿಗೆ ತಂದ ಭೂಕಂದಾಯ ಮತ್ತು ಭೂಹಿಡುವಳಿ ಪದ್ಧತಿಗಳು ಪ್ರಮುಖ ಕಾರಣೀಭೂತವಾದವು. ಇದರಿಂದಾಗಿ ಸ್ಥಳೀಯ ರಾಜರು ನವಾಬರು, ಪಾಳೆಯಗಾರರು ಸಂಧಾನಕ್ಕೆ ಮುಂದಾದರು.

**ಪಾಳೆಯಗಾರರ ಬಂಡಾಯ**

ಬ್ರಿಟಿಷ್ ಆಳ್ವಿಕೆಯನ್ನು ಭಾರತೀಯರು ಪ್ರಾರಂಭದಿಂದಲೇ ಪ್ರತಿಭಟಿಸಲು ಪ್ರಯತ್ನಿಸಿ ವಿಫಲರಾದರು. ಕ್ರಿ.ಶ. ೧೭೦೭ರಲ್ಲಿ ಔರಂಗಜೇಬನ ಮರಣದ ನಂತರ ಅನೇಕ ಪ್ರಾಂತ್ಯಗಳು ಸ್ವಾತಂತ್ರ್ಯಕ್ಕಾಗಿ ಪ್ರತಿಭಟಿಸಿದವು. ಇವುಗಳಲ್ಲಿ ಮುಖ್ಯವಾಗಿ ಬುಡಕಟ್ಟು, ರೈತರ ಪಾಳೆಯ ಗಾರರ ಪ್ರತಿಭಟನೆಗಳು ಸೇರಿಕೊಂಡಿದ್ದವು. ದಕ್ಷಿಣ ಭಾರತದಲ್ಲಿ ವಿಜಯನಗರದ ಅರಸ ನೊಬ್ಬ ೧೭೯೪ ರಲ್ಲಿ ಬಂಡೆದ್ದನು. ೧೭೯೦ರ ಸುಮಾರಿಗೆ ತಮಿಳುನಾಡಿನ ಪಾಳೆಯಗಾರರು ದಂಗೆಯೆದ್ದರು. ೧೮೦೧ರಲ್ಲಿ ಮಬಾರ್ ಮತ್ತು ದಿಂಡಿಗಲ್‌ನವರು, ೧೮೦೦ರಲ್ಲಿ ಹಾಗೂ ೧೮೩೧ರಲ್ಲಿ ಮೈಸೂರಿನವರು ದಂಗೆಯೆದ್ದರು. ಪಶ್ಚಿಮ ಭಾರತದಲ್ಲಿ ಸೌರಾಷ್ಟ್ರದ ನಾಯಕರು ೧೮೧೬ ರಿಂದ ೧೮೩೨ರವರೆಗೆ ಪದೇ ಪದೇ ದಂಗೆಯೆದ್ದರು.

ತರೀಕೆರೆ ಪಾಳೆಯಗಾರ ಸರ್ಜಾರಂಗಪ್ಪನಾಯಕನಿಗೆ ರಾಷ್ಟ್ರದ ಬಗ್ಗೆ ಕಾಳಜಿಯಿತ್ತು. ಆ ಸಂದರ್ಭದಲ್ಲಿ ಮೈಸೂರಿನ ಮೇಲೆ ಇಂಗ್ಲಿಷ್‌ರ ಅಧಿಪತ್ಯವಿತ್ತು. ಆದುದರಿಂದ ಬ್ರಿಟಿಷರ ವಿರುದ್ಧ ದಂಗೆಯೆದ್ದು ಪ್ರಾಂತ್ಯವನ್ನು ಅವರಿಂದ ಮುಕ್ತಗೊಳಿಸಲು ಪ್ರಯತ್ನಿಸಿದನು. ಈ ರೀತಿಯ ದಂಗೆಗಳು ಬ್ರಿಟಿಷರ ವಿರುದ್ಧ ಪದೇ ಪದೇ ನಡೆಯುತ್ತಿದ್ದವು. ಆದರೆ ಬಿಕ್ಕಟ್ಟಿನ ಕೊರತೆಯಿಂದ ಸಫಲತೆಯನ್ನು ಕಾಣಲಿಲ್ಲ. ಮೈಸೂರು ರಾಜ್ಯದ ನಾನಾ ಕಡೆಗಳಲ್ಲಿ ಬಂಡಾಯವೆದ್ದವರ ಪೈಕಿ ರಂಗಪ್ಪನಾಯಕ ಕೂಡ ಒಬ್ಬರು. ಸಮಕಾಲೀನ ಸಂದರ್ಭದಲ್ಲಿ ಧೋಂಡಿಯವಾಗ್, ಬೇಲೂರಿನ ಕೃಷ್ಣಪ್ಪನಾಯಕ ಮತ್ತು ಉಳಿದ ಪಾಳೆಯಗಾರರು ಪ್ರಮುಖರು. ಭಾರತದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಕಾರ್ಯಾಚರಣೆ ಕೈಗೊಂಡನು. ಇವನಿಗೆ ಬೂದಿ ಬಸವಪ್ಪನಾಯಕನ ಸೈನ್ಯದ ಕಾರ್ಯಾಚರಣೆಯು ಕೂಡ ಸಹಾಯಕ್ಕೆ ಧಾವಿಸಿತು. ಕೊನೆಗೆ ಸರ್ಜಾರಂಗಪ್ಪನಾಯಕನು ಸೋಲನ್ನು ಒಪ್ಪಿಕೊಳ್ಳುವುದರ ಜೊತೆಗೆ ತಾತ್ಕಾಲಿಕವಾಗಿ ತೆರೆಬಿದ್ದಿತು. ಇವನ ಮುಖ್ಯ ಉದ್ದೇಶ ಬ್ರಿಟಿಷರನ್ನು ಇಲ್ಲಿಂದ ತೆರುವು ಗೊಳಿಸುವುದೇ ಆಗಿತ್ತು.

ಸರ್ಜಾರಂಗಪ್ಪನಾಯಕನ ತರುವಾಯ ಸರ್ಜಾಹನುಮಪ್ಪನಾಯಕನು ಬ್ರಿಟಿಷರ ವಿರುದ್ಧ ಹೋರಾಟವನ್ನು ಮುಂದುವರಿಸಿದನು. ಆ ಸಂದರ್ಭದಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಗಳು ದೇಶಿಯ ರಾಜರ ವಿರುದ್ಧ ಶಕ್ತಿಮೀರಿ ಹೋರಾಡುವಂತೆ ಪ್ರೇರಿಪಿಸಲಾಗುತ್ತಿತ್ತು. ರಾಕ್ ಪೋರ್ಟ್‌ಮತ್ತು ಕಾನ್‌ವೇ ಅವರಲ್ಲಿ ಪ್ರಮುಖರು. ಬ್ರಿಟಿಷರು ಮೋಸದಿಂದ ಕಾಮನ ದುರ್ಗಕ್ಕೆ ಮುತ್ತಿಗೆ ಹಾಕಿದಾಗ ಹನುಮಪ್ಪನಾಯಕನನ್ನು ಮೋಸದಿಂದ ಬಂಧಿಸಿ ಗಲ್ಲಿಗೇರಿಸು ತ್ತಾರೆ. ಬ್ರಿಟಿಷರ ವಿರುದ್ಧ ನಗುನಗುತ್ತಾ ಪ್ರಾಣವನ್ನು ಬಿಟ್ಟ ಹನುಮಪ್ಪನಾಯಕನು ಚರಿತ್ರೆ ಯಲ್ಲಿ ಅಮರನಾಗಿ ಉಳಿಯುತ್ತಾನೆ. ಶಿಷ್ಟ ದಾಖಲೆಗಳ ಜೊತೆಗೆ ಮೌಖಿಕ ಚರಿತ್ರೆ ಕೂಡ ಜನಪದಗೀತೆಗಳ ಮುಖಾಂತರ ಮನಮುಟ್ಟುವಂತೆ ಬ್ರಿಟಿಷರ ವಿರುದ್ಧ ಹೋರಾಡಿದ ಸಂಗತಿ ಗಳನ್ನು ತಿಳಿಯಬಹುದಾಗಿದೆ. ಕ್ರಿ.ಶ. ೧೮೦೦-೧೮೫೦ ಸಮಯದಲ್ಲಿ ಹಲವಾರು ದಂಗೆಗಳು ಬ್ರಿಟಿಷರ ವಿರುದ್ಧ ಸ್ಫೋಟಗೊಂಡವು. ಆ ಅವಧಿಯಲ್ಲಿ ಸ್ಥಳೀಯರು ಆಡಳಿತದಲ್ಲಿ ಪಾಲ್ಗೊಳ್ಳಲು ಅವಕಾಶವಿರಲಿಲ್ಲ. ಸಹಜವಾಗಿ ಆಡಳಿತವು ಆಂಗ್ಲರ ಹಿಡಿತದಲ್ಲಿತ್ತು. ಪಾಳೆಯಗಾರರು, ದೇಶಿಯ ಸೈನಿಕರು ಮತ್ತು ಗಿರಿಜನರು ಒಳಗೊಂಡಂತೆ ಬ್ರಿಟಿಷರ ವಿರುದ್ಧ ದಂಗೆಯಲ್ಲಿ ಪಾಲ್ಗೊಂಡಿದ್ದರು. ಆದರೆ ಬ್ರಿಟಿಷರು ಈ ದಂಗೆಗಳನ್ನು ವ್ಯವಸ್ಥಿತವಾಗಿ ವಿಫಲ ಗೊಳಿಸಿದರು. ೧೮೦೩ ರಲ್ಲಿ ಬಳ್ಳಾರಿಯಲ್ಲಿ ಪಾಳೆಯಗಾರರ ದಂಗೆ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಮನ್ರೋ ಗುಡೇಕೋಟೆಗೆ ಭೇಟಿ ನೀಡಿದರು. ಆ ಸಂದರ್ಭದಲ್ಲಿ ಕ್ಷಾಮ ಉಲ್ಬಣಗೊಂಡದ್ದನ್ನು ಮನಗಂಡು ಈ ಭಾಗದ ಅರಸರು, ಪಾಳೆಯಗಾರರ ಮನೆತನಗಳು ತಮ್ಮ ಮೂಲ ಸೌಲಭ್ಯಗಳಿಗಾಗಿ ಗಲಭೆ ನಡೆಸಿದ್ದನ್ನು ಗಮನಿಸಬಹುದು. ೧೮೦೫ರ ಸುಮಾರಿಗೆ ಈ ಪ್ರಾಂತ್ಯಗಳಲ್ಲಿ ಭಯಂಕರ ಬರಗಾಲ ಸಂಭವಿಸಿತು. ಈ ರೀತಿಯ ತುರ್ತುಪರಿಸ್ಥಿತಿಗಳನ್ನು

ನಿವಾರಿಸುವಲ್ಲಿ ಬ್ರಿಟಿಶ್ ಆಡಳಿತ ವಿಫಲವಾಯಿತು ಎಂದರೆ ತಪ್ಪಾಗಲಾರದು. ಒಂದು ಕಡೆ ಮೂಲ ಸೌಲಭ್ಯ ಮತ್ತು ತಮ್ಮ ಹಕ್ಕುಗಳಿಗಾಗಿ ಪಾಳೆಯಗಾರ ಪ್ರತಿಭಟನೆ ನಡೆಸಿದರೆ, ಮತ್ತೊಂದು ಬಗೆಯಲ್ಲಿ ದಾಸ್ಯದ ಸಂಕೋಲೆಯನ್ನು ಕಿತ್ತೊಗೆದು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಆದುದರಿಂದ ಈ ರೀತಿಯ ಪ್ರತಿಭಟನೆ ಮತ್ತು ದಂಗೆಗಳನ್ನು ಕೇವಲ ಏಕಪಕ್ಷೀಯವಾಗಿ ನೋಡದೆ ಭಿನ್ನ ಮಾದರಿಯಲ್ಲಿ ವಿಶ್ಲೇಷಿಸಲು ಸಾಧ್ಯವಿದೆ. ಇದರ ಜೊತೆಗೆ ರಾಜ್ಯಾದ್ಯಾಂತ ಪಾಳೆಯಗಾರರ ಪ್ರತಿಭಟನೆಗಳ ಜೊತೆಗೆ ಇತರೆ ಸಮುದಾಯಗಳು ಸಹ ಭಾಗವಹಿಸಿದ್ದವು ಎಂಬುದನ್ನು ಅವಲೋಕಿಸಬೇಕು. ಕೊಪ್ಪಳದ ವೀರಪ್ಪನ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ದಂಗೆ ಎದ್ದರು. ಕಿತ್ತೂರಿನ ದಂಗೆ, ಬಾದಾಮಿ ಕ್ರಾಂತಿ ಹಾಗೂ ಇತರೆ ಸಂಘಟನೆಗಳು ಭಾಗವಹಿಸಿದ್ದವು.

ಬಳ್ಳಾರಿಯಲ್ಲಿ ಆಡಳಿತಾಧಿಕಾರಿಯಾಗಿದ್ದು ಫ್ರಾನ್ಸಿಸ್ ಎಂಬುವವನು ಈ ಭಾಗದ ಬೇಡರ ಪರಾಕ್ರಮವನ್ನು ಕುರಿತು 'ಧೈರ್ಯವಂತರು, ಪರಾಕ್ರಮಿಗಳು, ಬಲಶಾಲಿಗಳು, ದೃಢಕಾರರು, ಬಹುಸಂಖ್ಯೆಯುಳ್ಳವರು ಎಂದು ಹೇಳಿದ್ದಾನೆ. ಬಹುಶಃ ಬ್ರಿಟಿಷ್ ಸೈನ್ಯಕ್ಕೆ ಪ್ರಬಲ ಪೈಪೋಟಿ ನೀಡಬಲ್ಲ ಸಮುದಾಯವೆಂದರೆ ಬೇಡರು ಎಂಬುದನ್ನು ಬ್ರಿಟಿಷರು ಅರಿತ್ತಿದ್ದರು. ಆದುದರಿಂದ ದೂರಲೋಚನೆಯುಳ್ಳವರಾರು ಇವರು ಸಹಜವಾಗಿ ಬೇಡರ ವಿಶ್ವಾಸವನ್ನು ಗಳಿಸಲು ಮುಂದಾದರು. ಬೇಡರ ಪಡೆಯನ್ನು ಎದುರುಹಾಕಿಕೊಂಡರೆ ತಮಗೆ ಅನ್ಯಾಯ ಎಂಬುದನ್ನು ಮನಗಂಡಿದ್ದರು. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಎರಡು ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಕ್ರಿ.ಶ. ೧೮೦೦ ರಿಂದ ೧೮೫೦ರ ಸುಮಾರಿಗೆ ಅನೇಕ ದಂಗೆಗಳು ಯುದ್ಧೋಪಕರಣಗಳು ಹಾಗೂ ಭಾರತೀಯರ ರಾಜಕೀಯ ಅನೈತಿಕತೆ.

**ಹಲಗಲಿ ಬೇಡರ ದಂಗೆ**

೧೮೫೭ರ ದಂಗೆಯು ಬ್ರಿಟಿಷರ ವಿರುದ್ಧ ಸಂಚಲನ ಮೂಡಿಸಿತು. ಇದನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಮರ ಎಂದು ಕರೆಯಲಾಗಿದೆ. ರಾಷ್ಟ್ರಾದ್ಯಂತ ವ್ಯಾಪಕ ಹೋರಾಟ ನಡೆಯಿತು. ಇದಕ್ಕೆ ಕರ್ನಾಟಕವು ಹೊರತಾಗಿರಲಿಲ್ಲ. ಬ್ರಿಟಿಷರ ಆಡಳಿತ ನೀತಿಯನ್ನು ವಿರೋಧಿಸಿದವರಲ್ಲಿ ಹಲಗಲಿಯ ಬೇಡರು ಮೊದಲಿಗರು. ಉತ್ತರ ಕರ್ನಾಟಕದ ಈ ಸಮುದಾಯದವರು ತಮ್ಮ ಧೈರ್ಯ, ಸಾಮರ್ಥ್ಯ ಮತ್ತು ನಂಬಿಕೆಗೆ ಹೆಸರಾಗಿದ್ದರು. ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳುವಲ್ಲಿ ಆಸ್ಥೆವಹಿಸಿದ್ದರು ಇವರು ಸ್ವಾಭಿಮಾನಕ್ಕೆ ಧಕ್ಕೆ ಉಂಟಾದಾಗ ಎಂತಹ ಪ್ರಬಲ ಶತ್ರುಗಳಾದರೂ ಪ್ರತಿಭಟಸದೇ ಇರುತ್ತಿರಲಿಲ್ಲ. ಬಹು ಪಾಲು ಬೇಡರು ತನ್ನದೇ ಆದ ಸಾಂಸ್ಕೃತಿಕ ಅನನ್ಯತೆಯಿಂದ ಗುರುತಿಸಿಕೊಂಡಿದ್ದಾರೆ. ಇಂದಿಗೂ ಕೂಡ ಹಬ್ಬ-ಹರಿದಿನಗಳಲ್ಲಿ ಆಯುಧಗಳನ್ನು ಪೂಜಿಸುವ ಕ್ರಮವನ್ನು ಆಚರಿಸಿ ಕೊಂಡು ಬರುತ್ತಿದ್ದಾರೆ. ಹಿರಿಯರ ಹಬ್ಬವನ್ನು ಮಾಡುವ ಸಂದರ್ಭದಲ್ಲಿ ಆಯುಧಗಳಿಗೆ ವಿಶೇಷ ಪೂಜೆಸಲ್ಲುತ್ತದೆ. ೧೮೫೭ ರ ದಂಗೆಯಲ್ಲಿ ಹೋರಾಡಿದವರ ಪೈಕಿ ಹಲಗಲಿಯ ಬೇಡರು ಅಪ್ರತಿಮ ಸಾಧನೆಗೈದರು. ಹೋರಾಟಗಳಲ್ಲಿ ಪುರುಷ ಪ್ರಧಾನ ಸಂಗತಿಗಳೆ ಮುಖ್ಯ ಸ್ಥಾನ ಪಡೆಯುತ್ತವೆ ಎಂದು ಭಾವಿಸುವಂತಿಲ್ಲ. ಬೇಡ ಮಹಿಳೆಯರ ಪಾತ್ರ ಕೂಡ ಅಷ್ಟೇ ಮುಖ್ಯ. ಆದರೆ ಚರಿತ್ರೆಯ ಲಿಖಿತ ದಾಖಲೆಗಳಲ್ಲಿ ಈ ಮಹಿಳೆಯರ ವಿವರಗಳು ಲಭ್ಯವಿಲ್ಲ. ಈ ದಂಗೆಯಲ್ಲಿ ಕ್ರಿಯಾತ್ಮಕ ಹೋರಾಟ, ತೋರಿಸಿದ ಶೌರ್ಯ-ಧೈರ್ಯ, ಪರಾಕ್ರಮಗಳನ್ನು 'ರಾಮಿ' ಎಂಬ ಬೇಡ ಸಮುದಾಯದ ಮಹಿಳೆಯ ಸಾಧನೆಯನ್ನು ಕುರಿತು ಲಾವಣಿ ಮನ ಮುಟ್ಟುವಂತೆ ಹೇಳುತ್ತದೆ. ವಸಾಹತುಶಾಹಿ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಸಾಹಿತ್ಯವನ್ನು ಅವಲೋಕಿಸಿದಾಗ ಮತ್ತಷ್ಟು ವಿವರಗಳು ದೊರಕುವ ಸಂಭವವಿದೆ. ಆದರೆ ಲಿಖಿತ ಸಾಹಿತ್ಯ ಇದರ ಬಗ್ಗೆ ಮೌನವಹಿಸುತ್ತದೆ. ರಾಷ್ಟ್ರೀಯ ಹೋರಾಟವನ್ನು ಕುರಿತು ಬ್ರಿಟಿಷ್ ದಾಖಲೆಗಳು ಏನು ಹೇಳುತ್ತವೆ, ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ರಚಿತಗೊಂಡ ರಂಜನೀಯ ಚರಿತ್ರೆ ಹೇಳುವುದೇನು? ಹಾಗೆಯೇ ಕೆಳಸಮುದಾಯಗಳ ಭಾಗವಹಿಸುವಿಕೆಯಲ್ಲಿ ಲಾವಣಿ ಸಾಹಿತ್ಯ ಹೇಗೆ ಬಿಚ್ಚಿಕೊಳ್ಳುತ್ತದೆ ಎಂಬುದನ್ನು ವಿಶ್ಲೇಷಣಾತ್ಮಕ ರೀತಿಯಲ್ಲಿ ಅಧ್ಯಯನ ಮಾಡಿದಾಗ ಮತ್ತಷ್ಟು ವಿವರಗಳು ದೊರಕುವ ಸಂಭವವಿದೆ. ಆದುದರಿಂದ ಏಷ್ಟೋ ಪ್ರಮುಖ ದಾಖಲೆಗಳು ಜನತೆಯ ಮನೆಯಿಂದ ಹೊರಬಂದಿಲ್ಲ. ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಬ್ರಿಟಿಷರು ಬೇಡ ಸಮುದಾಯಗಳನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಫಲ ವಾದುದ್ದು ಹೇಗೆ ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ

ಭವಿಷ್ಯತ್‌ನ್ನು ಕಟ್ಟುವ ಕಡೆಗೆ ಯೋಚಿಸಬೇಕಾಗಿದೆ. ಈ ಸಮುದಾಯಗಳಿಗೆ ದೂರಾ ಲೋಚನೆಯ ಬಗ್ಗೆ ನಿರ್ದಿಷ್ಟ ಮಾರ್ಗದರ್ಶನ ಅವಶ್ಯಕತೆಯಿದೆ ಎಂದರೆ ತಪ್ಪಾಗಲಾರದು.

**ಆರ್ಥಿಕವಾಗಿ ದುರ್ಬಲರು ಆಯುಧಗಳಲ್ಲಿ ಶ್ರೀಮಂತರು**

ರಾಜಕೀಯ ಮತ್ತು ಆರ್ಥಿಕ ಬೆಂಬಲವಿಲ್ಲದ ಈ ಸಮುದಾಯ ಇಂದಿಗೂ ಕೂಡ ಬಡತನ ಬವಣೆಯಲ್ಲಿ ಜೀವನ ಸಾಗಿಸುತ್ತಿದೆ. ಆದರೆ ಸಂಪದ್ಭರಿತ ಸಂಸ್ಕೃತಿಯನ್ನು ಒಳ ಗೊಂಡಿರುವುದರ ಜೊತೆಗೆ ಅದನ್ನು ಮುಂದುವರಿಸಿಕೊಂಡು ಬರುತ್ತದೆ. ಚರಿತ್ರೆಯ ಪುಟ ಗಳನ್ನು ಅವಲೋಕಿಸಿದಾಗ ಕರ್ನಾಟಕದ ವಿವಿಧ ರಾಜವಂಶಗಳ ಆಳ್ವಿಕೆಯ ಸಂದರ್ಭದಲ್ಲಿ ಬೇಡರ ಅಪ್ರತಿಮ ಸಾಧನೆ ಮತ್ತು ಸಂಸ್ಕೃತಿಯಿಂದ ಅವರ ಮಹತ್ವವನ್ನು ಅರಿಯಬಹು ದಾಗಿದೆ. ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ 'ಆಯುಧ ಕಾಯಿದೆ' ಯನ್ನು ಜಾರಿಗೆ ತಂದಿತು. ಅದರ ಪ್ರಕಾರ ಬೇಡ ಜನಾಂಗದವರು ಆಯುಧಗಳನ್ನು ಅಪೇಕ್ಷಿಸುವವರು ಲೈಸೆನ್ಸ್ ಪಡೆಯಬೇಕಾಗಿತ್ತು. ಇದರಿಂದ ಈ ಸಮುದಾಯದಿಂದ ವ್ಯಾಪಕ ಪ್ರತಿಭಟನೆ ಎಂದುರಾಯಿತು. ಬ್ರಿಟಿಷರ ನಿಶ್ಯಸ್ತ್ರೀಕರಣ ಕಾಯಿದೆಯನ್ನು ವಿರೋಧಿಸಿ ಬಾಲಾಜಿ ನಿಂಬಾಳ್ಕರ್ ಮತ್ತು ಬಾಳ್ಯ ಎಂಬುವವರ ನೇತೃತ್ವದಲ್ಲಿ ದಂಗೆ ಎದ್ದರು. ಆದುರಿಂದ ಇದನ್ನು ಹಲಗಲಿಯ ಬೇಡರ ದಂಗೆ ಎಂದು ಕರೆಯಲಾಗಿದೆ. ಮೂಲತಃ ಇವರು ಬೇಟೆ ಮತ್ತು ಸೈನಿಕ ವೃತ್ತಿಯನ್ನು ಅವಲಂಬಿಸಿದ್ದರು. ೧೮೫೭ರ ನವಂಬರ್ ೨೧ ರಂದು ಲೆಫ್ಟಿನೆಂಟ್ ಕರ್ನಲ್ ಸೆಟನ್‌ಕರ್ ಸೈನ್ಯದೊಂದಿಗೆ ಹಲಗಲಿಗೆ ಮುತ್ತಿಗೆ ಹಾಕಿದನು. 'ನಿಮ್ಮ ಶಸ್ತ್ರಾಸ್ತ್ರ ಗಳನ್ನೆಲ್ಲಾ ಕೆಳಗಿಡಿ, ಇಲ್ಲದೆ ಶರಣಾಗತರಾಗಿ ಎಂಬುದಾಗಿ ಬೇಡರಿಗೆ ಹೇಳಿದ. ಇದನ್ನು ತಿರಸ್ಕಸಿದ ಬೇಡರು ಹೋರಾಟಕ್ಕೆ ಮುಂದಾದರು. ಶಸ್ತ್ರಾಸ್ತ್ರಗಳನ್ನು ಒಪ್ಪಿಸುವುದಕ್ಕಿಂತ ಮರಣವನ್ನಪ್ಪುವುದೇ ಲೇಸೆಂದು ದಂಗೆಗೆ ಮುಂದಾದರು ಅಂದರೆ ಪರಂಪರಾನುಗತವಾಗಿ ಹೊಂದಿದ್ದ ಆಯುಧಗಳನ್ನು ಎಷ್ಟು ಪೂಜ್ಯನಾಯ ಸ್ಥಾನದಿಂದ ನೋಡುತ್ತಿದ್ದರು ಎಂಬು ದನ್ನು ನೋಡುವುದರ ಜೊತೆಗೆ ಬ್ರಿಟಿಷರ ಕುಟಿಲ ನೀತಿಯನ್ನು ನಿರ್ಧರಿಸುವಲ್ಲಿ ವಿಫಲ ರಾದರು. ಕೊನೆಗೆ ಸೆಟನ್‌ಕರನು ಈ ಹಳ್ಳಿಗೆ ಬೆಂಕಿ ಹಚ್ಚಿದನು. ಅನೇಕ ಹೋರಾಟಗಾರರನ್ನು ಕಳೆದುಕೊಳ್ಳುವುದರ ಜೊತೆಗೆ ಕೆಲವರನ್ನು ಗಲ್ಲಿಗೇರಿಸಲಾಯಿತು.

ಈ ಮೇಲಿನ ವಿವರಣೆಯನ್ನು ಗಮನಿಸಿದಾಗ ಬೇಡರಲ್ಲಿಯೇ ಬ್ರಿಟಿಷರ ನೀತಿಗಳ ಬಗ್ಗೆ ಭಿನ್ನಾಭಿಪ್ರಾಯವಿತ್ತೆಂಬುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದಾಗಿದೆ. ಬ್ರಿಟಿಷರನ್ನು ಬೆಂಬಲಿಸಿದ ಬೇಡರು ಅನಿವಾರ್ಯ ಸಂದರ್ಭದಲ್ಲಿ ಹೋರಾಡುವುದರಿಂದ ವಿಫಲತೆಯನ್ನು ಕಾಣಬೇಕಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ಆಯುಧ ಕಾಯಿದೆಯಿಂದ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಉಗ್ರರೂಪ ತಾಳಿದರು. ಕರ್ನಾಟಕದ ಚರಿತ್ರೆಯಲ್ಲಿ ಬ್ರಿಟಿಷರ ನೀತಿಗಳ ವಿರುದ್ಧ ಹಾಗೂ ಅವರ ಒಡೆದು ಆಳುವ ನೀತಿಯ ವಿರುದ್ಧ ಬಂಡೆದ್ದವರಲ್ಲಿ ಹಲಗಲಿಯ ಬೇಡರ ಪಾತ್ರ ಮಹತ್ವದಾಗಿದೆ.

**ಸುರಪುರದ ವೆಂಕಟಪ್ಪ ನಾಯಕ**

ಸುರಪುರವನ್ನು ಪ್ರಾರಂಭದಲ್ಲಿ ಶೋರಾಪುರ ಎಂದು ಕರೆಯುತ್ತಿದ್ದರು. ಭೀಮಾ ನದಿ ಯಿಂದ ಕೃಷ್ಣ ನದಿಯವರೆಗೆ ಹಬ್ಬಿದ್ದ ಈ ಪ್ರದೇಶವನ್ನು ಸಗರನಾಡು ಎಂದು ಕರೆಯಲಾ ಗುತ್ತಿತ್ತು. ಇದನ್ನು ಸುರಪುರದ ನಾಯಕ ಅರಸು ಮನೆತನದವರು ಆಳುತ್ತಿದ್ದರು. ಸುರಪುರದ ನಾಲ್ಕನೆ ವೆಂಕಟಪ್ಪನಾಯಕ ೧೮೫೭ರ ದಂಗೆಯಲ್ಲಿ ಭಾಗವಹಿಸಿದ್ದ. ಅದು ಬ್ರಿಟಿಷರ ವಿರುದ್ಧ, ಇದಕ್ಕೂ ಮೊದಲು ಸುರಪುರದ ನಾಯಕರು ಔರಂಗಜೇಬನ ವಿರುದ್ಧ ಹೋರಾಡಿದ್ದರು. ಗುಲ್ಬರ್ಗಾ ಜಿಲ್ಲೆಯಲ್ಲಿರುವ ಈಪ್ರದೇಶ ವಿಜಯನಗರ ಸಾಮ್ರಾಜ್ಯ ಪತನದ ತರುವಾಯ ಬೇಡರ ನಾಡಾಯಿತು. ಸುರಪುರದ ಬೇಡರು ಶೌರ್ಯಪರಾಕ್ರಮಗಳಿಗೆ ಹೇಸರಾಗಿದ್ದು, ಜನತೆ ಸ್ವಾತಂತ್ರ್ಯಾಕ್ಕಾಗಿ ಹಂಬಲಿಸುತ್ತಿದ್ದರು. ಅಂದರೆ ಬ್ರಿಟಿಷರ ಬಿಗಿಹಿಡಿತ ಎಷ್ಟರ ಮಟ್ಟಿಗೆ ಸುರಪುರದ ಮೇಲೆ ಇತ್ತು ಎಂಬುದನ್ನು ಮನಗಾಣಬಹುದು. ವೆಂಕಟಪ್ಪನಾಯಕ ಏಳು ವರ್ಷದವನಿರುವಾಗಲೇ ತಂದೆ ಕೃಷ್ಣಪ್ಪನಾಯಕ ತೀರಿಕೊಂಡ. ಸುರಪುರಕ್ಕೆ ಎರಡು ಕಡೆಗಳಿಂದ ಉಪಟಳವಿತ್ತು; ಬ್ರಿಟಿಷರು ಮತ್ತು

ಹೈದರಾಬಾದಿನ ನಿಜಾಮ. ಇಂತಹ ಸಮಯದಲ್ಲಿ ಮೇಡೋಸ್ ಟೇಲರ್ ಸುರಪುರ ಸಂಸ್ಥಾನಕ್ಕೆ ಏಜೆಂಟಾಗಿ ಬರುತ್ತಾನೆ. ಬ್ರಿಟಿಷರು, ನಿಜಾಮರು ಮತ್ತು ಮರಾಠರು ಸುರಪುರವನ್ನು ದುಃಸ್ಥಿತಿಗೆ ತಂದರು. ಆದರೂ ಸಹ ಸುಶಿಕ್ಷತನದ ವೆಂಕಟಪ್ಪನಾಯಕ ಬ್ರಿಟಿಷರ ನೀತಿ ವಿರುದ್ಧ ಅಸಮಾಧಾನಗೊಂಡಿದ್ದ ನಾನಾಸಾಹೇಬ ಮತ್ತು ಸ್ಥಳೀಯ ಜಮೀನುದಾರರೊಡನೆ ಸಂಪರ್ಕ ಕಲ್ಪಿಸಿದ. ಇವನ ಪ್ರತಿನಿಧಿಗಳು ಬ್ರಿಟಿಷ್ ಸೈನ್ಯದ ಸಿಪಾಯಿಗಳನ್ನು ದಂಗೆ ಏಳುವಂತೆ ಪ್ರೇರೇಪಿಸಿದರು. ಈ ಪಿತೂರಿ ಬ್ರಿಟಿಷರಿಗೆ ತಿಳಿದು ಸುರಪುರ ಮತ್ತು ವೆಂಕಟಪ್ಪನಾಯಕನನ್ನು ಸೆರೆಹಿಡಿಯಲು ಪ್ರಯತ್ನಿಸಿದರು. ೧೮೫೮ ರಲ್ಲಿ ಸುರಪುರವನ್ನು ಆಕ್ರಮಿಸಿದರೂ ವೆಂಕಟಪ್ಪನಾಯಕ ತಪ್ಪಿಸಿಕೊಂಡನು. ಈ ಮೇಲಿನ ಅಂಶಗಳು ಸುರಪುರದ ವೆಂಕಟಪ್ಪನಾಯಕನಿಗೆ ಮತ್ತು ಬ್ರಿಟಿಷರ ವಿರುದ್ಧ ದಂಗೆ ಆರಂಭಿಸಲು ಕಾರಣಗಳಾದವು.

**ತೆರಿಗೆ ವಿವಾದ**

ವೆಂಕಟಪ್ಪನಾಯಕ ಬ್ರಿಟಿಷರ ಅಧೀನದಲ್ಲಿದ್ದರೂ, ಅವರಿಗೆ ಹೇರಳವಾಗಿ ಕಪ್ಪ ಕೊಟ್ಟು ಶೋಷಿತನಾದನು. ಇದರ ಪರಿಣಾಮವಾಗಿ ಸುರಪುರದಲ್ಲಿ ಆರ್ಥಿಕವಾಗಿ ಹಲವಾರು ಪರಿಣಾಮಗಳು ಉಂಟಾದವು. ನಿಗದಿತ ಮತ್ತು ನಿರೀಕ್ಷೆಗಿಂತ ಹೆಚ್ಚಿನ ಕ್ಷವನ್ನು ಬ್ರಿಟಿಷರು ಸಂಗ್ರಹಿಸಿದರು. ಆರ್ಥಿಕ ದೃಷ್ಟಿಕೋನದಿಂದ ಇದರ ಕಾರಣ ಮತ್ತು ಪರಿಣಾಮಗಳನ್ನು ಗಮನಿಸಿದಾಗ ತೆರಿಗೆ ಹಣವು ಕೂಡ ಬ್ರಿಟಿಷರ ಕಣ್ಣು ಕುಕ್ಕಿರಲು ಸಾಧ್ಯವಾಗಿದೆ. ಜನ ಸಾಮಾನ್ಯರು ಸಹಜವಾಗಿ ತೆರಿಗೆ ಕೊಟ್ಟು ದುರ್ಬಲರಾದರು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷ ವಾಗಿ ಸುರಪುರ ಬ್ರಿಟಿಷರ ಅಧೀನದಲ್ಲಿ ಒಳಪಡುವುದರ ಜೊತೆಗೆ ಭದ್ರವಾಗಿ ತಳವೂರಿದರು. ಈ ಮೊದಲು ಗ್ರಿಸ್ಲೆಯ ಸ್ಥಾನಕ್ಕೆ ಕ್ಯಾಪಟನ್ ಟೇಲರ್‌ನನ್ನು ಬ್ರಿಟಿಷ್ ಸರಕಾರ ನೇಮಿಸಿತು. ಟೇಲರ್‌ನು ಗ್ರಿಸ್ಲೆಯಿಂದ ಕೆಲವು ಸಲಹೆ–ಸೂಚನೆಗಳನ್ನು ಪಡೆದುಕೊಂಡನು. ಸುರಪುರದ ರಾಜಕೀಯ ಸ್ಥಿತಿ-ಗತಿಗಳ ಬಗ್ಗೆ ತಿಳಿದುಕೊಂಡನು. ಈ ವೇಳೆಗೆ ಸುರಪುರದಲ್ಲಿ ರಾಜದರ್ಬಾರಿ ಗಾಗಿ ಪಿಡ್ಡನಾಯಕ ಮತ್ತು ರಾಣಿಯ ಮಧ್ಯೆ ಕಿತ್ತಾಟ ನಡೆಯುತಿತ್ತು. ಟೇಲರನು ಸುರಪುರ ಸಂಸ್ಥಾನದಿಂದ ಕೆಲವು ಆಡಳಿತಾತ್ಮಕ ಖರ್ಚು ಬಾಬ್ತುಗಳನ್ನು ಪರಿಶೀಲಿಸಲು ಮುಂದಾದನು. ಇದನ್ನು ಸೂಕ್ಷ್ಮವಾಗಿ ರಾಣಿ ವರ್ಗದವರು ಗಮನಿಸುತ್ತಿದ್ದರು. ಇದರ ಜೊತೆಗೆ ಸಂಸ್ಥಾನವು ಈ ಹಿಂದೆ ಯಾವ ಉದ್ದೇಶಗಳಿಗೆ ಎಷ್ಟು ಹಣ ಖರ್ಚುಮಾಡಿದೆ ಎಂಬ ವಿವರವನ್ನು ಟೇಲರ್‌ನಿಗೆ ಕೊಡಬೇಕಾಗಿತ್ತು. ಇದು ಕೂಡ ಪರೋಕ್ಷವಾಗಿ ಸುರಪುರದ ವೆಂಕಟಪ್ಪನಾಯಕ ಬ್ರಿಟಿಷರ ವಿರುದ್ಧ ಸೇಡಿನ ಮನೋಭಾವನೆ ತಳೆಯಲು ಕಾರಣವಾಯಿತು. ಈ ವೇಳೆಗೆ ರಾಷ್ಟ್ರೀಯ ಮಟ್ಟದಲ್ಲಿ ಸ್ವಾತಂತ್ರ್ಯ ಹೋರಾಟ ಬ್ರಿಟಿಷರ ವಿರುದ್ಧ ಪ್ರಬಲವಾಗಿತ್ತು. ಆರ್ಥಿಕ ಸಂಕಷ್ಟದಿಂದ ಸುರಪುರ ನಲುಗಿ ಹೋಗಿತ್ತು. ಅದನ್ನು ಪುನಃ ಹೇಗಾದರೂ ಮಾಡಿ ಮೊದಲಿನ ಸ್ಥಿತಿಗೆ ತರುವುದು ಹಾಗೂ ಬ್ರಿಟಿಷರ ಹತೋಟಿಯಿಂದ ಸಂಸ್ಥಾನವನ್ನು ಸಂರಕ್ಷಿಸುವುದು ವೆಂಕಟಪ್ಪನಾಯಕನ ಮುಖ್ಯ ಉದ್ದೇಶವಾಗಿತ್ತು.

ಈ ವೇಳೆಗೆ ೧೮೫೭ರ ದಂಗೆಯು ಆರಂಭವಾಯಿತು. ಬ್ರಿಟಿಷರ ಪ್ರಬಲ ಶತೃವಾದ ನಾಲ್ಕನೆ ವೆಂಕಟಪ್ಪನಾಯಕ, ಬ್ರಿಟಿಷರ ದಬ್ಬಾಳಿಕೆ ಮತ್ತು ನ್ಯಾಯ ಬಾಹಿರ ಕಪ್ಪವನ್ನು ಸಲ್ಲಿಸದೇ ಹೋರಾಟಕ್ಕೆ ಸಿದ್ಧವಾದನು. ಈ ಸಮಯಕ್ಕೆ ಉತ್ತರ ಭಾರತದಲ್ಲಿ ನಾನಾ ಸಾಹೇಬನು ಸಹ ಬ್ರಿಟಿಷರ ವಿರುದ್ಧ ಬಂಡಾಯವೆದ್ದಿದ್ದನು. ಕೂಡಲೇ ಅವನೊಂದಿಗೆ ಸಂಪರ್ಕ ಸಾಧಿಸಿ ಸುರಪುರದ ಜನತೆಯನ್ನು ಸಂಘಟಿಸಿ ದಂಗೆಗೆ ಪ್ರಚೋದನೆ ನೀಡಿದನು. ೧೮೫೮ ರಲ್ಲಿ ಬ್ರಿಟಿಷ್ ಕ್ಯಾಪ್ಟನ್ ಮಿಂಡ್ ಹ್ಯಾಂನು ಶಸ್ತ್ರಸಜ್ಜಿತ ಸೈನ್ಯದೊಂದಿಗೆ ಸುರಪುರಕ್ಕೆ ಮುತ್ತಿಗೆ ಹಾಕಿ ವೆಂಕಟಪ್ಪನಾಯಕನನ್ನು ಸೆರೆ ಹಿಡಿದನು. ಇದಕ್ಕೆ ಕೆಲವು ದೇಶದ್ರೋಹಿಗಳು ಕೂಡ ನೆರವಾಗಿದ್ದರು. ಈ ಹಿನ್ನೆಲೆಯಲ್ಲಿ ವೆಂಕಟಪ್ಪನಾಯಕನನ್ನು ವಿಚಾರಣೆಗೆ ಗುರಿಪಡಿಸಿ ಮರಣದಂಡನೆ ವಿಧಿಸಲಾಯಿತು. ಕೊನೆಗೆ ಅವನನ್ನು ಕಾರಾಗೃಹಕ್ಕೆ ಕೊಂಡೊಯ್ಯುತ್ತಿದ್ದಾಗ ದಾರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡನು. ಸುರಪುರವನ್ನು ೧೮೬೧ರಲ್ಲಿ ನಿಜಾಮನಿಗೆ ವಹಿಸಿ ಕೊಡಲಾಯಿತು. ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಹಲಗಲಿಯ ಬೇಡರ ದಂಗೆಯ ಜೊತೆಗೆ ಸುರಪುರದ ಹೋರಾಟ ಅವಿಸ್ಮರಣೀಯ. ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳ ಬ್ರಿಟಿಷರ ದಬ್ಬಾಳಿಕೆಯನ್ನು ಸಹಿಸದೆ ಸ್ವಾತಂತ್ರ್ಯಕ್ಕಾಗಿ ದಂಗೆಗಳಾದವು.

**ಜನಸಾಮಾನ್ಯರ ಪರವಾಗಿ ಹೋರಾಟಕ್ಕಿಳಿದ ಸಿಂಧೂರ ಲಕ್ಷ್ಮಣ**

ಜನಸಾಮಾನ್ಯರಿಗೆ ನ್ಯಾಯ ಒದಗಿಸಲೆಂದೇ ಹೋರಾಟಕ್ಕಿಳಿದ ಸಿಂಧೂರ ಲಕ್ಷ್ಮಣ ದಾಖಲಿಸಿದ ಚರಿತ್ರೆಗಿಂತ ಜನಪದದ ಮೌಖಿಕ ಚರಿತ್ರೆಯಲ್ಲಿ ಅಮರನಾಗಿದ್ದಾನೆ. ಬೇಡ ಸಮುದಾಯದಲ್ಲಿ ಹುಟ್ಟಿದ ಇವನು ಪ್ರಾರಂಭದಿಂದಲೂ ದಬ್ಬಾಳಿಕೆ ಮತ್ತು ಪ್ರಭುತ್ವವನ್ನು ವಿರೋಧಿಸುತ್ತಿದ್ದನು. ಅಧಿಕಾರಶಾಹಿಯಿಂದ ಜನತೆ ನರಳುತ್ತಿದ್ದನ್ನು ಮನಗಂಡಿದ್ದನು. ''ಇವನ ದೃಷ್ಟಿಯಲ್ಲಿ ಈ ದೇಶದ ವೈರಿಗಳೆಂದರೆ ಇಬ್ಬರು ಮಾತ್ರ. ಆಂಗ್ಲರು ಮತ್ತು ಜನರನ್ನು ಸುಲಿಗೆ ಮಾಡುತ್ತಿರುವ ಸ್ಥಾನಿಕ ಆಡಳಿತಗಾರರು. ಇವರೀರ್ವರನ್ನು ಮುಗಿಸಿದ ಹೊರತು ಜನಸಾಮಾನ್ಯರಿಗೆ ಮುಕ್ತಿಯಿಲ್ಲ'' ಎಂದು ಸಾರಿದನು. ಜನಸಾಮಾನ್ಯರನ್ನು ಒಗ್ಗೂಡಿಸಿ ತನ್ನದೇ ಆದ ಒಂದು ಪಡೆಯನ್ನು ಕಟ್ಟಿ ಬ್ರಿಟಿಷರ ವಿರುದ್ಧ ದಂಗೆಗೆ ಸಿದ್ಧನಾದ. ಒಮ್ಮೆ ತಿಗಡಿ ಗ್ರಾಮದಲ್ಲಿ ಪೊಲೀಸರು ಇವನ ಮೇಲೆ ಆಕ್ರಮಣ ಮಾಡಿದರು. ಇವನ ಜೊತೆಗಿದ್ದ ಸಿದ್ದಪ್ಪ ಎಂಬುವವರ ಮುಂಗೈ ಸೀಳಿಹೋಯಿತು. ಪರಿಣಾಮವಾಗಿ ಸಿಂಧೂರ ಲಕ್ಷ್ಮಣ ತನ್ನ ಕಾರ್ಯಾಚರಣೆ ಪ್ರದೇಶವನ್ನು ಬಾಗಕೋಟೆ ಮತ್ತು ಜಮಖಂಡಿಗೆ ವರ್ಗಾಯಿಸಿದ. ಈ ಸಮಯದಲ್ಲಿ ವೆಂಕನಗೌಡ ಎಂಬುವವನು ಲಕ್ಷ್ಮಣನ ಸಹಾಯ ಬಂದರೂ ಪಿತೂರಿ ನಡೆಸಿತೊಡಗಿದ. ಈ ಪ್ರಕ್ರಿಯೆಗಳನ್ನು ಗಮನಿಸುತ್ತಿದ್ದ ಬ್ರಿಟಿಷರು ವೆಂಕನಗೌಡನ ಸಹಾಯದಿಂದ ಸಿಂಧೂರಲಕ್ಷ್ಮಣನನ್ನು ಪತನಗೊಳಿಸಿದರು.

ವೆಂಕನಗೌಡನ ಅನುಯಾಯಿಗಳು, ಸ್ಥಾನಿಕ ಜಮೀನ್‌ದಾರರು ಹಾಗೂ ಬ್ರಿಟಿಷ್ ಅಧಿಕಾರಿಗಳು ಸೇರಿಕೊಂಡು ಲಕ್ಷ್ಮಣನನ್ನು ದೂರಮಾಡಿದರು. ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಮತ್ತು ಸ್ಥಾನಿಕ ಆಡಳಿತಗಾರರನ್ನು ನೇರವಾಗಿ ಪ್ರಶ್ನಿಸುತ್ತಿದ್ದ. ಆದುದರಿಂದ ೧೯೨೨ರ ಸುಮಾರಿಗೆ ನಡೆದ ಈ ಘಟನೆಯಲ್ಲಿ ಬ್ರಿಟಿಷರೆ ಜಯಶಾಲಿ ಗಳಾದರು. ಬ್ರಿಟಿಷರ ಬಗ್ಗೆ ಎಷ್ಟು ಶತ್ರುತ್ವ ಬೆಳೆಸಿಕೊಂಡಿದ್ದ ಎಂಬುದರ ಬಗ್ಗೆ ಜನ ಸಾಮಾನ್ಯರ ಮನದಾಳದಲ್ಲಿರುವ ಈ ಕೆಳಗಿನ ಸಾಲುಗಳೇ ಸಾಕ್ಷಿ.

ಬಂಡೆದ್ದು ನಾವೆಲ್ಲ ಆಂಗ್ಲರ ಹಿಡಿದು
ಕಂಡಲ್ಲಿ ತುಳಿದು ಬರೋಣ/ಬೆನ್ನಟ್ಟಿ
ಬುಡಿನಲ್ಲಿ ಹಾಕಿ ತುಳಿಯೋಣ.

**ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸೆರೆಮನೆ ಕಂಡವರು**

ಕ್ರಿ.ಶ. ೧೮೫೭ ರಿಂದ ೧೯೪೭ರವರೆಗಿನ ರಾಷ್ಟ್ರೀಯ ಹೋರಾಟದ ಘಟ್ಟಗಳನ್ನು ನೋಡಿದಾಗ ಅನೇಕ ರಾಷ್ಟ್ರೀಯ ನಾಯಕರು ಹೋರಾಟದ ಪರಿಣಾಮ ಸೆರೆಮನೆ, ಮರಣದಂಡನೆ ಶಿಕ್ಷೆ ಅನುಭವಿಸಿದ್ದಾರೆ. ೨೦ನೇ ಶತಮಾನದ ಪ್ರಥಮಾರ್ಧದಲ್ಲಿ ಕರ್ನಾಟಕದ ವಿವಿಧ ಪ್ರಾಂತ್ಯಗಳಿಂದ ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಯನ್ನು ಭಾಗವಹಿಸಿ ಸೆರೆಮನೆ ಸೇರಿದರು. ೧೯೪೨ರಲ್ಲಿ ಭಾರತವು ಒಂದು ಘೋಷಣೆಯನ್ನು ಹೊರಡಿಸಿತು. ಕ್ವಿಟ್ ಇಂಡಿಯಾ ಅಥವಾ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಪಿ.ಎಸ್. ಸಣ್ಣಪ್ಪನಾಯಕ ಅವರು ಸೂರ್ಯನಾರಾಯಣರಾವ್ ಅವರ ಮಾರ್ಗದರ್ಶನದಲ್ಲಿ ಹೋರಾಟಕ್ಕಿಳಿದು ಸೆರೆಮನೆ ಸೇರಿದರು. ಅದೇ ರೀತಿಯಾಗಿ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರ ಪಾತ್ರ ಮಹತ್ವದಾಗಿತ್ತು. ಅದರಲ್ಲಿಯೂ ಬೀದಿ ಕಾರ್ಮಿಕರಾದ ನಾಗನಾಯಕರು ಗುಂಡ್ಲು ಪೇಟೆ, ನಂಜನಗೂಡುಗಳಲ್ಲಿ ಪೊಲೀಸರು ಇವರನ್ನು ಸೆರೆಮನೆಗೆ ತಳ್ಳಿದರು. ಅದೇ ರೀತಿಯಾಗಿ ಬೇದೂರಿನಿಂದ ದೊಡ್ಡನಾಯ್ಕ, ಗುಂಡ್ಲುಪೇಟೆಯ ಮಾದನಾಯ್ಕ, ಪುಟ್ಟ ವೀರನಾಯಕ, ರಂಗನಾಯಕ ಮತ್ತು ಹೊಸೂರಿನ ಕಾಳನಾಯಕ ಮೈಸೂರು ಚಲೊ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ಕಂಡರು. ಪ್ರತ್ಯಕ್ಷವಾಗಿ ಮತ್ತು ಪ್ರಾಣವನ್ನೆ ಬಲಿದಾನ ಮಾಡಿದರು.

ಬಹುಪಾಲು ಕೆಳಸಮುದಾಯಗಳು ಒಂದು ನಿರ್ದಿಷ್ಟ ಗುರಿಯಿಲ್ಲದೆ ಪರಿತಪಿಸಿದಂತಾ ಯಿತು. ಇವರಿಗೆ ಮುಖ್ಯವಾಗಿ ಎರಡು ರೀತಿಯ ಸಮಸ್ಯೆಗಳು ಕಾಡುತ್ತಿದ್ದವು. ಒಂದು; ಬ್ರಿಟಿಷರ ಪರಮಾಧಿಕಾರವನ್ನು ಧಿಕ್ಕರಿಸುವುದು ಎರಡು; ಸ್ಥಳೀಯ ಆಡಳಿತಗಾರರ ಕಪಿಮುಷ್ಠಿ ಯಿಂದ ಮುಕ್ತವಾಗುವುದು. ಆದುದರಿಂದ ಚಳುವಳಿಯ ಸಂದರ್ಭದಲ್ಲಿ ರೈತರ ದಂಗೆಗಳು, ಬುಡಕಟ್ಟು ದಂಗೆಗಳು, ನಾಗರಿಕ ಪ್ರತಿಭಟನೆಗಳು ಸ್ವಾತಂತ್ರ್ಯ ಹೋರಾಟಕ್ಕೆ ಕೈಗೂಡಿಸಿದವು. ಅದೇ ರೀತಿಯಾಗಿ ದಲಿತ ವರ್ಗದವರು ಸಹ ಮೇಲ್ಜಾತಿಗಳ ಸೇವೆಯಿಂದ ಮುಕ್ತವಾಗಿರಲಿಲ್ಲ.

ಇನ್ನು ಸಂಪ್ರದಾಯ ವೃತ್ತಿಗಳಿಗೆ ಅಂಟಿಕೊಂಡಿದ್ದರಿಂದ ರಾಷ್ಟ್ರೀಯ ಚಳವಳಿ ಇವರನ್ನು ಹೆಚ್ಚು ಆಕರ್ಷಸಲಿಲ್ಲವೆಂದೆ ಹೇಳಬಹುದು. ಬ್ರಿಟಿಷ್ ಆಡಳಿತಗಾರರು ಜಾರಿಗೆ ತಂದ ಕೆಲವು ನೀತಿಗಳು ಭಾರತಕ್ಕೆ ಮಾರಕವಾಗಿದ್ದವು. ಈ ನೀತಿಗಳಿಂದ ದಕ್ಷಿಣ ಭಾರತವು ಹೊರತಾಗಿರಲಿಲ್ಲ. ಬೇಡಸಮುದಾಯವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಛಾಪು ಮೂಡಿಸಿದ್ದು, ಶ್ರೀಮಂತ ಸಂಸ್ಕೃತಿಗೆ ಹೆಸರಾಗಿದೆ. ನಿರೀಕ್ಷಿತ ಪ್ರಮಾಣದಲ್ಲಿ ಬ್ರಿಟಿಷರ ವಿರುದ್ಧ ಜಯ ದೊರಕದಿದ್ದರೂ ಪ್ರಬಲ ಪೈಪೋಟಿ ನೀಡಿದ್ದು ಸತ್ಯ. ಕರ್ನಾಟಕವು ಒಂದು ರಾಜ್ಯವಾಗಿ ಭೌಗೋಳಿಕ ರೂಪದಲ್ಲಿ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ವಿವಿಧ ಪ್ರಾಂತ್ಯಗಳಲ್ಲಿ ಹಂಚಿಹೋಗಿತ್ತು. ಮುಂಬೈ ಕರ್ನಾಟಕ, ಮದ್ರಾಸ್ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮೈಸೂರು ಪ್ರಾಂತ್ಯ ಮತ್ತು ಕೊಡಗು. ವಿವಿಧ ಪಾಳೆಯಪಟ್ಟುಗಳಲ್ಲಿ ಆಳ್ವಿಕೆ ನಡೆಸುತ್ತಿದ್ದ ಬೇಡರು ತಮ್ಮನ್ನು ಗುರುತಿಸಿಕೊಂಡಿದ್ದು ಹಲಗಲಿಯ ಬೇಡರ ದಂಗೆಯ ಮೂಲಕ. ಇದಕ್ಕಿಂತ ಪೂರ್ವದಲ್ಲಿ ತರೀಕೆರೆಯ ಪಾಳೆಯಗಾರರು ಔರಂಗಜೇಬನ ವಿರುದ್ಧ ಮತ್ತು ಬ್ರಿಟಿಷರ ವಿರುದ್ಧ ಹೋರಾಡಿದ್ದನ್ನು ಸ್ಮರಿಸಬಹುದು. ಬ್ರಿಟಿಷರು ತಮ್ಮ ಕುಟಿಲ ನೀತಿಗಳಿಂದ ಸ್ಥಾನಿಕ ರಾಜರು ಮೂಲ ಉದ್ದೇಶಗಳತ್ತ ಕೇಂದ್ರಿಕರಿಸದಂತೆ ನೋಡಿಕೊಂಡರು. ಪರಿಣಾಮ ವಾಗಿ ಹಲವು ದಂಗೆಗಳು ಆರ್ಥಿಕ ಹಿನ್ನೆಲೆಯಿಂದ ನಡೆದವು. ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಹೋರಾಟಕ್ಕೆ ಬೇಡರ ದಂಗೆಗಳು ಇತರ ಸ್ಥಾನಿಕ ಅರಸರಿಗೆ ಪ್ರೇರಣೆ ಯಾಗಿದ್ದವು. ಸಾಮಾಜಿಕವಾಗಿ ಶೋಷಿತರಾದರೂ ಸಾಂಸ್ಕೃತಿಕವಾಗಿ ಶ್ರೀಮಂತರು. ಸ್ವಾಭಿಮಾನಿಗಳಾದ ಇವರು ಬ್ರಿಟಿಷರು ಜಾರಿಗೆ ತರುತ್ತಿದ್ದ ಮಾರಕ ನೀತಿಗಳನ್ನು ನೇರವಾಗಿ ಪ್ರಶ್ನಿಸುತ್ತಿದ್ದರು. ಇದು ಬೇಡರನ್ನು ಹತ್ತಿಕ್ಕುವಂತೆ ಬ್ರಿಟಿಷರಿಗೆ ಕಾರಣವಾಯಿತು. ಇದರ ಜೊತೆಗೆ ಬೇಡರ ಸಂಸ್ಥಾನಗಳಲ್ಲಿ ಇಂಗ್ಲಿಷರು ಅನಾವಶ್ಯಕ ಹಸ್ತಕ್ಷೇಪ ಮಾಡುತ್ತಿದ್ದರು. ತರೀಕೆರೆ, ಬಳ್ಳಾರಿ ಪಾಳೆಯಗಾರರು, ಸುರಪುರದ ಬೇಡ ಅರಸರು, ಹಲಗಲಿಯ ಬೇಡರು, ಸ್ವಾತಂತ್ರ್ಯ ಹೋರಾಟ ಅಂತಿಮ ಘಟ್ಟದಲ್ಲಿ ಅನೇಕ ಬೇಡ ಸಮುದಾಯದ ಹೋರಾಟ ಗಾರರು ರಾಷ್ಟ್ರಸೇವೆಯಲ್ಲಿ ಭಾಗವಹಿಸಿ ಸ್ಮರಣೀಯರಾಗಿದ್ದಾರೆ. ಇಲ್ಲಿ ಆಕರಗಳನ್ನು ಮತ್ತಷ್ಟು ವಿಶ್ಲೇಷಣೆಗೆ ಒಳಪಡಿಸಿದಾಗ ಹೊಸ ವಿಷಯಗಳು ಗೋಚರವಾಗುವ ಸಂಭವವಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ರಚಿತವಾದ ಬರಹಗಳು ಚರಿತ್ರೆಕಾರರಿಗೆ ಇನ್ನು ಸ್ಪಷ್ಟವಾಗಿ ಕೈಸೇರಿಲ್ಲ. ಆದುರಿಂದ ಈ ಅವಧಿಯ ಚರಿತ್ರೆಯನ್ನು ಕುರಿತು ಚರ್ಚಿಸುವು ದೆಂದರೆ ತುಸು ಕಷ್ಟಸಾಧ್ಯ. ಲಭ್ಯವಿರುವ ಆಕರಗಳನ್ನೆ ಆಧಾರವಾಗಿಟ್ಟುಕೊಂಡು ಚರ್ಚಿಸಲು ಪ್ರಯತ್ನಿಸಲಾಗಿದೆ.

## ಪರಾಮರ್ಶನ ಗ್ರಂಥಗಳು


೧. ಶ್ರೀನಿವಾಸಮೂರ್ತಿ ಎಚ್.ವಿ. ಮತ್ತು ರಾಮಕೃಷ್ಣನ್ ಆರ್, ಸಮಗ್ರ ಕರ್ನಾಟಕ ಚರಿತ್ರೆ, ಓರಿಯಂಟ್ ಲಾಂಗ್‌ಮಾನ್, ಬೆಂಗಳೂರು, ೧೯೯೫

೨. ಚಂದ್ರಶೇಖರ್ ಎಸ್ (ಸಂ), ಚರಿತ್ರೆ ಸಂಪುಟ -೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೭

೩. ಸೂರ್ಯನಾಥ ಯು. ಕಾಮತ್ (ಸಂ),ಕರ್ನಾಟಕ ಗ್ಯಾಜೆಟಿಯರ್ ಭಾಗ -೩, ಕರ್ನಾಟಕ ರಾಜ್ಯ ಸರ್ಕಾರ ಪ್ರಕಟಣೆ, ಬೆಂಗಳೂರು, ೧೯೮೪

೪. ನರಸಿಂಹಮೂರ್ತಿ (ಅನು ಮತ್ತು ಸಂ)ಸ್ವಾತಂತ್ರ್ಯ ಸಂಗ್ರಾಮ, ಸಂಪುಟ -೨೩, ಭಾರತೀಯ ವಿದ್ಯಾಭವನ ಬೆಂಗಳೂರು,೧೯೯೮

೫. ಕಪಟರಾಳ ಕೃಷ್ಣರಾಯ, ಸುರಪುರ ಸಂಸ್ಥಾನ ಇತಿಹಾಸ, ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು ೨೦೦೫

೬. ವಿರೂಪಾಕ್ಷಿ ಪೂಜಾರಹಳ್ಳಿ (ಸಂ), ತರೀಕೆರೆ ಪಾಳೆಯಗಾರ ಸರ್ಜಪ್ಪನಾಯಕನ ಕಥನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೭. Bipan chandra, Amales Tripathi, Braun De, Freedom Struggle, National Book Trust, New Delhi, ೨೦೦೫

# ತರೀಕೆರೆ ಸರ್ಜಪ್ಪನಾಯಕ ಮತ್ತು ಬ್ರಿಟಿಷರು

ಭಾರತದಲ್ಲಿ ಪರಕಿಯರನ್ನು ಹೊರದೂಡುವ ದೇಶಿಯರ ಪ್ರಯತ್ನ ಮಹತ್ವ ಘಟನೆಯಾಗಿದೆ. ಕರ್ನಾಟಕದಲ್ಲಿಯೂ ಅದೊಂದು ರೀತಿಯಲ್ಲಿ ವಿಶೇಷ ಘಟನೆಯಾಗಿ ಸಂಭವಿಸಿದ್ದು ಸ್ಮರಣೀಯ. ಈ ಪೈಕಿ ತರೀಕೆರೆ ಪಾಳೆಯಗಾರರು ಹೊರತಲ್ಲ. ಸರ್ಜಾರಂಗಪ್ಪ ನಾಯಕ ಮತ್ತು ಅವನ ಮಗ ಸರ್ಜಾಹನುಮಪ್ಪನಾಯಕರು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದವರಲ್ಲಿ ಅಗ್ರಗಣ್ಯರಾಗಿದ್ದಾರೆ. ಸರ್ಜಪ್ಪನಾಯಕನನ್ನು ಕುರಿತು ಕರ್ನಾಟಕದ ಚರಿತ್ರೆಯಲ್ಲಿ ನಿಖರವಾಗಿ ಚಿತ್ರಿಸಿಲ್ಲ. ಅವನ ಹುಟ್ಟು, ಬಾಲ್ಯ, ಶಿಕ್ಷಣ, ಯೌವನ, ಅವಸಾನ ಹೀಗೆ ಅವನ ಜೀವನದ ವಿವಿಧ ಮುಖಗಳನ್ನು ಬಿಂಬಿಸುವಲ್ಲಿ ಚರಿತ್ರೆಕಾರರು ವಿಫಲರಾಗಿ ರುವುದು ಸಹಜ. ಕಾರಣ ಈ ಕಾಲಘಟ್ಟದ ಚರಿತ್ರೆಯ ಘಟನೆಗಳು ಇತಿಹಾಸದಲ್ಲಿ ದಾಖಲಾಗದೆ, ಜನರ ಬಾಯಲ್ಲಿ ನರ್ತಿಸುವುದರಿಂದ ಚರಿತ್ರೆಯ ಘಟನೆಯೊಂದು ನಾನಾ ಬಗೆಯಾಗಿ ಜೀವಂತಿಕೆ ಪಡೆದುಕೊಂಡಿದೆ. ಜನಪದ ಕಥೆ, ಲಾವಣಿ, ಕಥನ ಗೀತೆ, ಜನಪದ ಗೀತೆಗಳಲ್ಲಿ ವರ್ಣಿತವಾಗಿರುವ ಸಂಗತಿಗಳ ಮೂಲಕ ಚರಿತ್ರೆಯನ್ನು ಕಟ್ಟಿಕೊಡುವ ಹೊಸ ಆಯಾಮವಿದೆ.

ಸರ್ಜಾಹನುಮಪ್ಪನಾಯಕನ ತಂದೆ ಸರ್ಜಾರಂಗಪ್ಪನಾಯಕ (೧೮೩೧-೩೭) ಮಡಿದ ತರುವಾಯ, ಸರ್ಜಾಹನುಮಪ್ಪನಾಯಕನನ್ನು ಬೆಂಗಳೂರಿಗೆ ಕರೆದೊಯ್ಯುತ್ತಾರೆ. ಕ್ರಿ.ಶ. ೧೮೩೪ರಲ್ಲಿ ಗುಟ್ಟಹಳ್ಳಿ ಅರಮನೆ ಪರಿಸರದ ವನವಿಹಾರದಲ್ಲಿ ಈತನಿಗೆ ಮೂರು ಬಾರಿ ಗಲ್ಲಿಗೇರಿಸಿದರು. ಪ್ರಾಣ ಹೋಗಲಿಲ್ಲವಾದ ಕಾರಣ ಬ್ರಿಟಿಷರು ಪ್ರಾಣ ದಾನ ನೀಡಿದ್ದನ್ನು ವಿರೋಧಿಸಿ ತನ್ನ ಕೈಯಿಂದಲೇ ನೇಣು ಹಾಕಿಕೊಂಡು ಪ್ರಾಣ ಬಿಡುತ್ತಾನೆ. ಹೀಗೆ ಹುತಾತ್ಮ ನಾಗುವುದು ಸರ್ಜಾಹನುಮಪ್ಪನಾಯಕನ ವಾಸ್ತವ ಘಟನೆಯೆಂದು ಒತ್ತಿಹೇಳುವಂತಿಲ್ಲ. ಚಿಕ್ಕಮಗಳೂರು ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಸರ್ಜಪ್ಪನಾಯಕನ ಸಾವಿನ ಬಗ್ಗೆ ಹೀಗೆ ತಿಳಿಸಲಾಗಿದೆ. In october ೧೮೩೧, the British took over the government of mysore. They issued a proclamation severely warning the rebels against their continued operations. Then, while some Insurgents surrendered and others carried on their defiant activities for some time more up to ೧೮೩೩ AD. Sarjappa Nayaka of the family of the old Tarikere chiefs, who tried to continue the fight, was captured about the same time in Kanara which had been annexed by the British (ಪು. ೫೫) ಎಂದು ದಾಖಲಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಪರಿಸರದಲ್ಲಿ ಕಲದುರ್ಗ ಮತ್ತು ಕಾಮನದುರ್ಗ ಗಳಲ್ಲಿ ಕೋಟೆಗಳಿವೆ. ಇಲ್ಲಿ ಪಾಳೆಯಗಾರರು ಆಳ್ವಿಕೆ ನಡೆಸಿದ್ದು, ನಗರ ದಂಗೆಯಲ್ಲಿ ಬೂದಿ ಬಸಪ್ಪನಾಯಕನೊಂದಿಗೆ ಸರ್ಜಪ್ಪನಾಯಕ (೧೮೩೩) ಒಂದಾಗಿ ಬ್ರಿಟಿಷರ ವಿರುದ್ಧ ಹೋರಾಡುತ್ತಾರೆ. ಕೆಲವು ದಾಖಲೆಗಳಲ್ಲಿ ೧೮೩೧ ಎಂದು ಉಲ್ಲೇಖವಾಗಿದೆ. ತರೀಕೆರೆ ಪಾಳೆಯಗಾರರು ಮೂಲತಃ ಬೇಡ ಬುಡಕಟ್ಟಿಗೆ ಸೇರಿದ್ದು, ವಾಲ್ಮೀಕಿ, ವ್ಯಾಧ, ನಾಯಕ, ಪುಳಿಂದ, ಕಿರಾತ, ಶಬರ ಎಂದು ಕರೆಸಿಕೊಂಡ ಯೋಧ ಹಾಗೂ ಸೈನಿಕ ವೃತ್ತಿಯ ಸಮುದಾಯ ವಾಗಿದೆ. ಮೊದಲಿನಿಂದಲೂ ಇವರು ಹೋರಾಡುತ್ತಲೇ ಬ್ರಿಟಿಷರನ್ನು ಹೊರದೂಡಲು ಸತತ ಪ್ರಯತ್ನ ನಡೆಸಿದ್ದಾರೆ.

ಜನಪದರು ಕಟ್ಟಿಕೊಂಡಿರುವ ಕಥನ ಕಾವ್ಯ(ಖಂಡಕಾವ್ಯ)ದಲ್ಲಿ ಚಾರಿತ್ರಿಕ ಪುರುಷನಾದ ಸರ್ಜಪ್ಪನಾಯಕ ಹಾರುವರ ನಿಂಗಮ್ಮ(ಬ್ರಾಹ್ಮಣ)ನನ್ನು ಉಪಪತ್ನಿಯಾಗಿಟ್ಟು ಕೊಂಡಿದ್ದ ರಿಂದ, ನಿಂಗಮ್ಮನ ಅಣ್ಣ ವೆಂಕಪರಾಯ ಹಾಗೂ ಗೋವಿಂದರಾಯರು ಇವನ ಸಾವಿಗೆ ಕುತಂತ್ರ ನಡೆಸುತ್ತಾರೆ. ಚಿತ್ರದುರ್ಗ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿರುವ ಬೇಡ ನಾಯಕರು ಸರ್ಜಪ್ಪನಾಯಕನ ಕಥನ ಕಾವ್ಯವನ್ನು ಕರುಣಾಜನಕವಾಗಿ ಹಾಡುತ್ತಾರೆ. ಇಲ್ಲಿ ಬೇಡರ ಮತ್ತು ಬ್ರಾಹ್ಮಣರ ನಡುವೆ ಸಾಮಾಜಿಕ ಸಂಘರ್ಷವನ್ನು ಕಾಣುತ್ತೇವೆ.

ಏಕಕಾಲದಲ್ಲಿ ಸರ್ಜಪ್ಪನಾಯಕ ಬ್ರಾಹ್ಮಣರ ಮತ್ತು ಬ್ರಿಟಿಷರ ವಿರುದ್ಧ ಹೋರಾಟ ಮಾಡುವುದು ದೊಡ್ಡ ಸಾಹಸವಾಗಿದೆ. ಇಲ್ಲಿ ವಿವಿಧ ವೃತ್ತಿ, ಆಯಗಾರರು, ವಿವಿಧ ಜಾತಿಯವರು ಈ ಪಾಳೆಯ ಪಟ್ಟಿನಲ್ಲಿ ಹೊಂದಿದ್ದ ಪಾತ್ರವನ್ನು ಇಲ್ಲಿ ಬೆಳಕಿಗೆ ತರುವುದು ಅಗತ್ಯ. ಸರ್ಜಪ್ಪನ ಜೀವನ ಶೋಕ, ದುಃಖದಿಂದ ಕೂಡಿದೆ. ತಂದೆ-ತಾಯಿಗಳಲ್ಲಿ ಹಿತವಚನ ಕೇಳಿದ್ದರೆ ಬಹುಶಃ ಸರ್ಜಪ್ಪನ ಬದುಕು ಬದಲಾಗುತ್ತಿತ್ತೇನೋ ಆದರೆ ಹಠಮಾರಿತನ ಧೋರಣೆಯಿಂದ ಹಾಗೂ ಒಬ್ಬ ಸೂಳೆಯಿಂದ ಹತನಾಗುವ ಅಪಕೀರ್ತಿಯನ್ನು ಕಥನ ಕಾವ್ಯದಲ್ಲಿ ತಿಳಿಸುತ್ತದೆ.

ಕರ್ನಾಟಕದಲ್ಲಿ ಹತ್ತೊಂಬತ್ತನೆಯ ಶತಮಾನವು ಅನೇಕ ಪರಿವರ್ತನೆಗಳನ್ನು ಸೃಷ್ಟಿಸಿದೆ. ಬ್ರಿಟಿಷರು ಮತ್ತು ಸ್ಥಳೀಯರ ನಡುವೆ ನಡೆದ ದಂಗೆಗಳೇ ಇದಕ್ಕೆ ಕಾರಣ. ಸರ್ಜಪ್ಪನಾಯಕನ ಸಾವು ದುರಂತಮಯವಾದುದು. ಸಾವಿನ ಘಟನೆಯಿಂದಲೇ ಆತನ ವ್ಯಕ್ತಿತ್ವಕ್ಕೆ ಅಸಾಧಾರಣ ಮೆರಗು ಬಂದಿದೆ.

**ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಸರ್ಜಪ್ಪನಾಯಕ**

ಕರ್ನಾಟಕದ ಜಾನಪದ ಕ್ಷೇತ್ರವು ತನ್ನ ಪ್ರಕಾರಗಳನ್ನು ವಿವಿಧ ಬಗೆಯಾಗಿ ಜೀವಂತ ಗೊಳಿಸಿಕೊಂಡಿರುವುದು ಸ್ಪಷ್ಟ. ಅವುಗಳೆಂದರೆ ಜನಪದ ಕಥನಗೀತೆಗಳು, ಗೀತೆ, ಗದ್ಯಕಥನ, ಹಾಡು, ಐತಿಹ್ಯ, ಲಾವಣಿ, ಪುರಾಣ, ಜನಪದ ಮಹಾಕಾವ್ಯ ಇತರ ಪ್ರಕಾರಗಳನ್ನು ಇಲ್ಲಿ ಪಟ್ಟಿ ಮಾಡಬಹುದು.

ಕಥನ ಕಾವ್ಯ ಹಾಗೂ ಗೀತೆ ಜನಪದ ಸಾಹಿತ್ಯದ ಬಹುಮುಖ್ಯ ಪ್ರಭೇದ. ಕಥನ ಕಾವ್ಯ ಗೀತೆಗಳು ಗ್ರಾಮಾಂತರ ಜನತೆಯ ಮನರಂಜನೆಯ ಮುಖ್ಯ ಸಾಧನವಾಗಿ ಉಳಿದುಬಂದಿದೆ. ಜನಪದ ಕಥನ ಸಾಹಿತ್ಯ ಆಶಯವಾಗಿದೆ. ಇಲ್ಲಿ ಹೆಣ್ಣಿನ ದುಃಖವನ್ನು, ಸಂಕಷ್ಟವನ್ನು, ತ್ಯಾಗವನ್ನು ಬಲಿದಾನವನ್ನು ಸಮರ್ಥವಾಗಿ ಚಿತ್ರಿಸುವುದು, ಸಮರ್ಪಕವಾಗಿ ಪ್ರತಿನಿಧಿಸುವ ಅಪರಿಮಿತ ಕಥನಗೀತೆಗಳು ಕನ್ನಡ ಜನಪದ ಸಾಹಿತ್ಯದ ಅನರ್ಘ್ಯ ರತ್ನಗಳೇ ಆಗಿವೆ. ಇಂಥ ಗಂಭೀರ ಸ್ವರೂಪದ ಕಥೆಗಳನ್ನು ಹೆಣ್ಣುಮಕ್ಕಳೇ ಹಾಡುತ್ತಾರೆ. ಕೆಲವು ಕಡೆ ಗಂಡಿನ ತ್ಯಾಗ, ದುಃಖ, ಶೋಕ, ಕುತಂತ್ರ, ಅನ್ಯಾಯ, ಪರಿತಪಿಸುವುದು, ಪ್ರೇಮ ಸಂಬಂಧ ಘಟನೆಗಳು ರಂಜನೀಯವಾಗಿರುತ್ತವೆ. ಕಥನಗೀತೆಗಳು ತ್ರಿಪದಿಯಲ್ಲಿ ಬರುತ್ತಿರುವುದು ಹೆಚ್ಚು. ಚೊಕ್ಕ ಮಧುರವಾದ ಚಿಕ್ಕ ಕಾವ್ಯ ಎಂದು ಇದಕ್ಕೆ ಕರೆಯಲಾಗಿದೆ. ಆದರೆ ಸರ್ಜಪ್ಪ ನಾಯಕನ ಕಥನ ಕಾವ್ಯ ಹಾಡುಗಾರನ ನಾಲಿಗೆಯ ಮೇಲೆ ನರ್ತಿಸುವಾಗ ಪಂಚಪದಿಯಲ್ಲಿ ನಿರೂಪಣೆಗೊಂಡಿದೆ. ಉದಾ. ಉತ್ತರದೇವ, ಈರೋಬಿ, ನಾಗವ್ವ, ಚಿಕ್ಕೊಳು ಹಿರಿದಿಮ್ಮವ್ವ, ಹುಳಿಯಾರು ಕೆಂಚಮ್ಮ, ಸಂಪನ್ನೆ, ಕೊಂತಮ್ಮ, ಹೊನ್ನಮ್ಮ ಮೊದಲಾದವುಗಳಿಗೆ ಇವನನ್ನು ಹೋಲಿಸಿದಾಗ ಭಿನ್ನವಾಗಿ ಕಂಡುಬರುತ್ತದೆ.

'ಜನಪದ ಕಥನ ಗೀತೆಗಳು' ಎಂಬ ಕೃತಿಯನ್ನು ೧೯೫೬ರಲ್ಲಿ ಕ.ರಾ.ಕೃ ರಚಿಸಿ ಜನಪದ ಸಾಹಿತ್ಯ ಅಕಾಡೆಮಿ ಮೂಲಕ ಪ್ರಕಟಿಸಿದ್ದಾರೆ. ಮೇಲೆ ಕಥನ ಗೀತೆ ಬಗ್ಗೆ ತಿಳಿಸಿರುವಂತೆ ಈ ಕೃತಿಯಲ್ಲಿ ನಾಲ್ಕು ವಿಭಾಗಗಳಿವೆ. ೧. ಅಂಬಿಗರ ಮತ್ತು ಇತರ ಹಾಡುಗಳು ೨. ಉತ್ತರದೇವಿ ಮತ್ತು ಇತರ ಹಾಡುಗಳು ೩. ಪಿರಿಯಾಪಟ್ಟಣದ ಕಾಳಗ ಮತ್ತು ಇತರ ಹಾಡುಗಳು ೪. ಚೆನ್ನಿಜೋಗಯ್ಯ ಮತ್ತು ಇತರ ಹಾಡುಗಳು ಇಲ್ಲಿ ಅನಾವರಣಗೊಂಡಿವೆ. ಪೌರಾಣಿಕ ಕಥನ ಗೀತೆಗಳಲ್ಲಿ ಈಶ್ವರಿ, ಪಾರ್ವತಿ, ಗಂಗೆ, ಕೃಷ್ಣ ರುಕ್ಮಿಣಿಯರನ್ನು ಜನಪದ ವಕ್ತೃಗಳು ಆಪ್ತಬಂಧುಗಳಂತೆ ಕಂಡಿದ್ದಾರೆ. ಕಥನಗೀತೆ, ಕಾವ್ಯಗಳು, ಜನಪದ ಕ್ಷೇತ್ರದಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಜನಪದರ ಹೃದಯದ ರಾಗ-ಭಾವಗಳಿಗೆ ಸಮೀಪವರ್ತಿಯಾಗಿರುತ್ತವೆ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಗದ್ಯಕಥನಗಳು, ಗೀತೆಗಳು, ಕೆಲಸದ ಹಾಡುಗಳು, ಐತಿಹ್ಯ, ಕಥನಗೀತೆ, ಮಹಾಕಾವ್ಯ, ಗದ್ಯಕಥನಗಳಲ್ಲಿ ಪುರಾಣ, ಕಟ್ಟುಕತೆ, ಆಶಯ ಮತ್ತು ವರ್ಗ ಮುಖ್ಯವಾಗಿರುತ್ತದೆ.

ಕನ್ನಡ ಜನಪದ ಗ್ರಂಥಗಳಲ್ಲಿ ಪ್ರಮುಖವಾದವು: ಪಟ್ಟೊಳೆ ಪಳಮೆ, ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು, ಜೀವನ ಸಂಗೀತ, ಮಲ್ಲಿಗೆ ದಂಡೆ, ಜನತೆಯ ಸಂಸ್ಕೃತಿ, ನಾಡಪದ ಗಳು, ಜನಪದ ಕಥನಗೀತೆಗಳು, ಕರ್ನಾಟಕದ ವೃತ್ತಿಗಾಯಕರು, ಜಾನಪದ ಸ್ವರೂಪ, ಜಾನಪದ ಅಧ್ಯಯನ, ಹೊನ್ನ ಬಿತ್ತೆವು ಹೊಲಕೆಲ್ಲ, ಗ್ರಾಮೀಣ, ಸಂಗ್ಯಾಬಾಳ್ಯಾ, ಕನ್ನಡ ಜನಪದ ಗೀತೆಗಳು, ಜಾನಪದ ಸಾಹಿತ್ಯ ದರ್ಶನ, ಫ್ಲೀಟರು ಸಂಗ್ರಹಿಸಿದ ಐದು ಲಾವಣಿಗಳು, ಮಲೆಯ ಮಾದೇಶ್ವರ, ಆನ್ವಯಿಕ ಜಾನಪದ, ಕನ್ನಡದ ಸಾವಿರ ಒಗಟುಗಳು, ಹೆಸರ ಹೇಳ್ತೀನಿ ಒಡಪಕಟ್ಟಿ, ಭಾರತೀಯ ಪರಂಪರೆ ಹಾಗೂ ಸಾಹಿತ್ಯದಲ್ಲಿ ಒಗಟು ಇತರ ಗ್ರಂಥಗಳು ಇತ್ತೀಚೆಗೆ ಸಾಕಷ್ಟು ಪ್ರಕಟವಾಗಿವೆ. ಬುಡಕಟ್ಟು ಮತ್ತು ಜಾನಪದ ನೆಲೆಯಲ್ಲಿ ರಚನೆಗೊಂಡ ಗಾದರಿಪಾಲನಾಯಕ ಮತ್ತು ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು ಕೃತಿಗಳು ಮೌಖಿಕ ಮತ್ತು ಸ್ಥಳೀಯ ಚರಿತ್ರೆಯನ್ನು ಒಳಗೊಂಡಿವೆ. ಇಂಥ ಕೆಲವು ಕೃತಿಗಳಲ್ಲಿ ಸರ್ಜಪ್ಪನಾಯಕನ ಪ್ರಸ್ತಾಪ ಬರುತ್ತದೆ.

ಗ್ರಾಮೀಣ ಪ್ರದೇಶದ ಗೀತೆಗಳಲ್ಲಿ ಕೆಲಸದ ಹಾಡುಗಳು ಇಂದಿಗೂ ಪ್ರಚಲಿತದಲ್ಲಿವೆ. ಬೀಸುವ ಪದ, ಹಂತಿ ಹಾಡು, ಕುಟ್ಟುವ ಹಾಡು, ನಾಟಿಯ ಹಾಡು, ಲಾಲಿಯ ಪದ, ಸಂಪ್ರದಾಯದ ಹಾಡು, ಆಚರಣೆಯ ಹಾಡು, ಅಂಟಿಗೆ-ಪಂಟಿಗೆ ಪದ, ಮದುವೆ ಮತ್ತು ಒಸಗೆಯ ಹಾಡು, ಮೊಹರಂ ಪದ, ಡೊಳ್ಳಿನ ಪದ, ಹರದೇಶಿ-ನಾಗೇಶಿ ಮೊದಲಾದವುಗಳಿವೆ.

'ಕನ್ನಡ ಜನಪದ ಗೀತೆಗಳು' ಎಂಬ ಗ್ರಂಥವನ್ನು ೧೯೫೫ರಲ್ಲಿ ಡಾ. ಬಿ.ಎಸ್. ಗದ್ದಗಿ ಮಠರು ಕರ್ನಾಟಕ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ ಅರ್ಪಿಸಿದ ಈ ನಿಬಂಧ ಸಂಗ್ರಹ ರೂಪದಿಂದ ೧೯೬೨ರಲ್ಲಿ ಪ್ರಕಟವಾಗಿರುತ್ತದೆ. ಜನಪದ ಗೀತೆಗಳಿಗೆ ಸಂವಾದಿಯಾಗಿ ಲೋಕಗೀತೆಗಳೆಂದು ಗದ್ಗಿಮಠರು ಕರೆದಿರುವುದು ವಿಶೇಷ.

ಫ್ಲೀಟರ ಐದು ಲಾವಣಿಗಳು ಇಂಗ್ಲಿಷ್‌ನಲ್ಲಿ ೧೮೮೫ರಲ್ಲಿ ಪ್ರಕಟವಾಗಿವೆ. ಕ್ಯಾತನಹಳ್ಳಿ ರಾಮಣ್ಣ ಸಂಪಾದಕರಾಗಿ ಪ್ರಕಟಿಸಿದ್ದಾರೆ. ಇದರಲ್ಲಿ ಸಂಗೊಳ್ಳಿ ರಾಯಣ್ಣನ ದಂಗೆ, ಆದಾಯ ತೆರಿಗೆ, ಹಲಗಲಿಯ ಬೇಡರು, ಸಂಗ್ಯಾನ ಅಪರಾಧ ಮತ್ತು ಸಾವು, ಕಿತ್ತೂರ ಚನ್ನವ್ವನ ಸೊಸೆ ಎಂಬ ಲಾವಣಿಗಳಿವೆ. ಕರ್ನಾಟಕದ ರಾಜ, ಮಂತ್ರಿ, ರಾಣಿ ಇತರ ವ್ಯಕ್ತಿಗಳ ಬಗ್ಗೆ ಹುಟ್ಟಿಕೊಂಡ ಕಥನ ಕಾವ್ಯ, ಗೀತೆ, ಲಾವಣಿಗಳು ಪ್ರಮುಖವಾದವು. ಕುಮಾರರಾಮನನ್ನು ಇಲ್ಲಿ ಉದಾಹರಿಸಬಹುದು. ಆದರೆ ಪಾಳೆಯಗಾರರ ಬಗ್ಗೆ ಹುಟ್ಟಿಕೊಂಡ ಜನಪದ ಸಾಹಿತ್ಯ ವಿಶೇಷವಾಗಿರುವಂತದ್ದು. ತರೀಕೆರೆಪಾಳೆಯಗಾರರು ಬ್ರಿಟಿಷರ ವಿರುದ್ಧ ಹೋರಾಟ ಮಾಡುವುದು ಸಹಜ. ಈ ಹೋರಾಟದ ಘಟನೆ ಚರಿತ್ರೆ ಮತ್ತು ಜನಪದ ಕ್ಷೇತ್ರಗಳಲ್ಲಿ ಭಿನ್ನ ರೂಪ ತಳೆದಿರುವುದುಂಟು. ಬ್ರಿಟಿಷರ ದಾಖಲೆ, ಕೃತಿಗಳಲ್ಲಿ ವಸ್ತುಸ್ಥಿತಿಗೂ ನಮ್ಮ ಜನಪದರು ಕಟ್ಟಿರುವ ಕಥೆಗೂ ವ್ಯತ್ಯಾಸಗಳಿವೆ. ಹಾಗಾಗಿ ಸ್ಥೂಲವಾಗಿ ಕೆಲವು ದಾಖಲೆಗಳ ಮೂಲಕ ಇಲ್ಲಿ ಅವಲೋಕಿಸಲಾಗಿದೆ. ಸರ್ಜಪ್ಪನಾಯಕನ ಸಾವಿನ ಬಗ್ಗೆ ಲಭ್ಯವಿರುವ ಜನಪದ ಸಾಹಿತ್ಯ ಹೀಗಿದೆ. ಸರ್ಜಾನ, ಆಂಗ್ಲರೆದುರು ತೋಪಿಗೆ ಅಳಲಿಲ್ಲ. ಧೈರ್ಯದಲ್ಲಿ ಎದೆಯೊಡ್ಡಿ ಆಳಿದ ಸರ್ಜಾನ, ಕಥನದಲ್ಲಿ ವೀರನಾಗಿ ಎದ್ದುಬಂದ ನಿಂಗಿಯ ಮೋಸದಲ್ಲಿ ಸಿಲುಕಿ ಆಂಗ್ಲರಲ್ಲಿ ಗಲ್ಲಿಗೆದುರು ಗಂಡಾಗಿ ಬದುಕಿದ ಪ್ರಾಣಭಿಕ್ಷೆಯ ಬೇಡದೆಯೆ ಕೈಯಾರೆ ನೇಣೆಗೇರಿದ.

ಒಟ್ಟಾರೆ ಹೇಳುವುದಾದರೆ, ಸರ್ಜಪ್ಪನಾಯಕ ಬ್ರಿಟಿಷರ ವಿರುದ್ಧ ಹೋರಾಡುವುದು, ಆತನನ್ನು ಕಳ್ಳನೆಂದು ಕರೆದಿರುವುದು ಸಂಘರ್ಷಕ್ಕೆ ನಾಂದಿ ಹಾಡಿದ್ದು ಸ್ಪಷ್ಟ. ಸಾಮಾನ್ಯ ಪಾಳೆಯಗಾರ ಅಪಾರ ಸಂಖ್ಯೆಯ ಬ್ರಿಟಿಷ್ ಸೈನ್ಯವನ್ನು ಎದುರಿಸುವುದಾದರೂ ಹೇಗೆ? ಬ್ರಿಟಿಷ್ ಅಧಿಕಾರಿಗಳು ಈತನನ್ನು ಬೆಂಗಳೂರಿನ ಗುಟ್ಟಹಳ್ಳಿ ಅರಮನೆ ಆವರಣದಲ್ಲಿ ಗಲ್ಲಿಗೆ ಹಾಕಿದಾಗ ಸಾಯುವುದಿಲ್ಲ, ತಾನೇ ಕೊರಳಿಗೆ ಉರುಲು ಹಾಕಿಕೊಂಡು ಸಾಯುತ್ತಾ ನೆಂದು ತಿಳಿಸಲಾಗಿದೆ. ಸೂಳೆ ನಿಂಗಮ್ಮನ ಕಥೆ ಇಲ್ಲಿ ಉಪಕಥೆಯಾಗಿ ವ್ಯಕ್ತಿ ಕಥನಕ್ಕೆ ಪೂರಕವೆಂಬಂತೆ ಬಂದಿರಬೇಕು.

**ಆಧಾರ ಸೂಚಿ**

೧. ಬಿ.ಎನ್. ಸತ್ಯನ್ (ಸಂ.), ಚಿಕ್ಕಮಗಳೂರು ಡಿಸ್ಟ್ರಿಕ್ಸ್ ಗ್ಯಾಸೆಟಿಯರ್.

೨. ಗೊ.ರು. ಚನ್ನಬಸಪ್ಪ (ಸಂ.), ಹೊನ್ನ ಬಿತ್ತೇವು ಹೊಲಕೆಲ್ಲ, ತರೀಕೆರೆ.

೩. ಜಿ.ಶಂ. ಪರಮಶಿವಯ್ಯ, ೧೯೬೯, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪. ಸೆಬಾಸ್ಟೀಯನ್ ಜೊಸೇಫ್, ೧೯೯೭, ಕರ್ನಾಟಕ ಚರಿತ್ರೆ ಸಂಪುಟ. ೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩ ೨೭೬.

೫. ಅಬ್ದುಲ್ ಸತ್ತಾರ್, ೧೯೯೬, ತರೀಕೆರೆ ಪಾಳೆಯಗಾರರು, ಪಾಂಡವಪುರ.

೬. ವಿರೂಪಾಕ್ಷಿ ಪೂಜಾರಹಳ್ಳಿ (ಸಂ.), ೨೦೦೬, ತರೀಕೆರೆ ಪಾಳೆಯಗಾರ ಸರ್ಜಪ್ಪನಾಯಕನ ಕಥನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೭. ವಿರೂಪಾಕ್ಷಿ ಪೂಜಾರಹಳ್ಳಿ (ಸಂ.), ೨೦೦೬, ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩ ೨೭೬.

೮. ಈ ಬಗ್ಗೆ ತರೀಕೆರೆ, ನಾಯಕನಹಟ್ಟಿ, ಯರ್ಜೇನಹಳ್ಳಿ (ಮೊಳಕಾಲ್ಮೂರು ತಾ.)ಗುಡೇಕೋಟೆ, ಜರಿಮಲೆ ಪಾಳೆಯಗಾರರ ವಂಶೀಕರು ತಮ್ಮದೇ ಆದ ಅನುಭವಗಳನ್ನು ತಿಳಿಸುತ್ತಾರೆ. ಬೆಂಗಳೂರಿನ ಕರ್ನಾಟಕ ಲೋಕಾಯುಕ್ತರ ಕಚೇರಿಯಲ್ಲಿ ಎಸ್.ಪಿ. ಆಗಿರುವ ಸನ್ಮಾನ್ಯ ಶ್ರೀ ಎಸ್. ರಂಗಸ್ವಾಮಿ ಅವರು ಈ ಸರ್ಜಪ್ಪನಾಯಕನ ಬಗ್ಗೆ ತಮ್ಮ ತಾತ, ಸಂಬಂಧಿಕರು ತಿಳಿಸುವ ವಿಚಾರಗಳನ್ನು ತಿಳಿಸಿರುತ್ತಾರೆ. ಅವರಿಗೆ ಕೃತಜ್ಞತೆಗಳು.

# ಬ್ರಿಟಿಷರ ವಿರುದ್ಧ ಹಲಗಲಿ ಬೇಡರ ಪ್ರತಿಭಟನೆ

ಸಾಹಿತ್ಯ ಮತ್ತು ಇತಿಹಾಸಕ್ಕೆ ಇರುವ ಸಂಬಂಧ ಪರಸ್ಪರ ಪೂರಕವಾದುದು. ಇತಿಹಾಸವನ್ನು ಸಾಹಿತ್ಯಿಕ ಭಾಷೆಯಲ್ಲಿ ಹೇಳುವುದು, ಸಾಹಿತ್ಯದಲ್ಲಿ ಇತಿಹಾಸವನ್ನು ಸೇರಿಸು ವುದು ಬಹಳ ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಇಷ್ಟಾಗಿಯೂ ಇತಿಹಾಸ ರಚನೆ ಯಲ್ಲಿ ಸಾಹಿತ್ಯ ಕೃತಿಗಳನ್ನು ಮುಖ್ಯ ಪ್ರಮಾಣಗಳೆಂದು ನಾವು ಸ್ವೀಕರಿಸಿಲ್ಲ. ಇತಿಹಾಸ ರಚನೆಯಲ್ಲಿ ಇದುವರೆಗೆ ಶಾಸನ, ನಾಣ್ಯ, ಪುರಾತತ್ವ ಶೋಧದ ದಾಖಲೆ, ಕೈಫಿಯತ್ತು ಮುಂತಾದ ಲಿಖಿತ ಮತ್ತು ಭೌತಿಕ ದಾಖಲೆಗಳನ್ನು ಅಧಿಕೃತ ಪ್ರಮಾಣಗಳೆಂದು ತಿಳಿದಿದ್ದೇವೆ. ಇವುಗಳ ಜೊತೆಗೆ, ಸಾಹಿತ್ಯಿಕ ದಾಖಲೆಗಳನ್ನು ಇತಿಹಾಸ ರಚನೆಗೆ ಪೂರಕವಾಗಿ ಬಳಸಿ ಕೊಳ್ಳಬಹುದೆಂಬ ವಿಚಾರ ವಿದ್ವಾಂಸರ ಮುಂದಿದೆ.

ಸಾಹಿತ್ಯದಲ್ಲಿ ಲಿಖಿತ ಸಾಹಿತ್ಯ ಮತ್ತು ಮೌಖಿಕ ಸಾಹಿತ್ಯ ಎಂಬ ಎರಡು ಪ್ರಭೇದಗಳಿವೆ. 'ಸಾಹಿತ್ಯವೆಂದರೆ ಭಾಷೆಯಲ್ಲಿ ಅಭಿವ್ಯಕ್ತಿಯಾಗುವ ಜೀವನದ ವ್ಯಾಖ್ಯಾನ'. ಕನ್ನಡ ಸಾಹಿತ್ಯದ ಸಂದರ್ಭವನ್ನೇ ಅವಲೋಕನ ಮಾಡಿದಾಗ ಲಿಖಿತ ಸಾಹಿತ್ಯದಲ್ಲಿ ಕೆಲವೇ ಜನಗಳ ಜೀವನ ದಾಖಲೆಯಾಗಿದೆ. ಉಳಿದಂತೆ ಬಹುಪಾಲು ಜನಗಳ ಆಶೋತ್ತರಗಳು ಮೌಖಿಕ ರೂಪದಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಇಂದಿಗೂ ಉಳಿದುಕೊಂಡು ಬಂದಿವೆ. ಇದಕ್ಕೆ ನಿದರ್ಶನ ವಾಗಿ ಸಮೃದ್ಧವಾಗಿರುವ ಕನ್ನಡ ಜನಪದ ಸಾಹಿತ್ಯವನ್ನು ವಿವರಿಸಬಹುದು.

ಲಿಖಿತ ಸಾಹಿತ್ಯಕ್ಕೂ ಜನಪದ ಸಾಹಿತ್ಯಕ್ಕೂ ವಸ್ತು ಸ್ವರೂಪ ಮತ್ತು ಧೋರಣೆಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ಲಿಖಿತ ಸಾಹಿತ್ಯ ಸಾಮಾನ್ಯವಾಗಿ ರಾಜ ಮಹಾರಾಜರ, ಮಂತ್ರಿ ಪುರೋಹಿತರ ಜೀವನದ ಇಫಿಉಟಈ್ಜಲ್ಜ್ಜ ‘ಁನ ದಾಖಲಿಸುತ್ತದೆ. ಇದಕ್ಕೆ ಎದುರಾಗಿ ಜನಪದ ಸಾಹಿತ್ಯ ಸ್ಥಳೀಯ ವೀರರನ್ನು ಜನಸಾಮಾನ್ಯರನ್ನು ಕಥೆಯಾಗಿ, ಹಾಡಾಗಿ ಕಟ್ಟಿಕೊಡುತ್ತದೆ. ಪ್ರಾಚೀನ ಕಾಲದಿಂದಲೂ ಜನಪದ ಸಾಹಿತ್ಯ ದಾಖಲಿಸಿಕೊಂಡು ಬಂದಿರುವ ವಸ್ತು ಸ್ವರೂಪ ವನ್ನು ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದು.

**ಲಾವಣಿ ಸಾಹಿತ್ಯ**

ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಪ್ರಸಿದ್ಧಿಯಲ್ಲಿರುವ ಲಾವಣಿ ಪ್ರಕಾರವು ಒಂದು ಗೀತ ಸಂಪ್ರದಾಯವಾಗಿದೆ. ಇದಕ್ಕೆ ಮರಾಠಿಯ ‘ಪೊವಾಡಗಳು’ ಪ್ರೇರಣೆಯಾಗಿರಬಹು ದೆಂದು ವಿದ್ವಾಂಸರು ಹೇಳುತ್ತಾರೆ. ಅದೇನೇ ಇದ್ದರೂ ಉತ್ತರ ಕರ್ನಾಟಕದಲ್ಲಿ ಲಾವಣಿ ಜನಪ್ರಿಯವಾದ ಒಂದು ಕಲಾ ಪ್ರಕಾರವಾಗಿ ಅಸ್ತಿತ್ವದಲ್ಲಿದೆ. ಇದು ಮೇಳ ರೂಪದಲ್ಲಿದ್ದು, ಮುಮ್ಮೇಳ ಹಾಡುಗಾರ ದಪ್ಪು ಬಾರಿಸುತ್ತ ಮೊದಲಿಗೆ ಹಾಡುತ್ತಾನೆ. ಅದಕ್ಕೆ ತಾಳ ಹಿಡಿದ ಇನ್ನಿಬ್ಬರೂ ‘ದನಿ’ ಕೊಡುತ್ತಾರೆ. ಈ ಮೇಳದಲ್ಲಿ ‘ಚೌಡಕಿ ವಾದ್ಯ’ ಶ್ರುತಿಯಾಗಿರುತ್ತದೆ. ಸುತ್ತಲೂ ನೆರೆದಿರುವ ಜನಸಮೂಹದ ನಡುವೆ ‘ಲಾವಣಿ ಮೇಳ’ದವರು ಹಾಡುಗಳನ್ನು ಹಾಡುತ್ತಿರುವಾಗ ಅದು ಕೇಳುಗರ ಮನಸೂರೆಗೊಳ್ಳುವಂತಿರುತ್ತದೆ.

ಲಾವಣಿ ಪ್ರಕಾರದಲ್ಲಿ ಪುರಾಣ, ಇತಿಹಾಸ, ಕಾಲ್ಪನಿಕ ಸಂಗತಿಗಳು, ಸ್ಥಳೀಯ ವೀರರ ಕಥಾನಕಗಳು, ‘ಹರದೇಶಿ-ನಾಗೇಶಿ’ಯಂತಹ ಸವಾಲು-ಜವಾಬಿನ ಸ್ಪರ್ಧೆಗಳು ಇದರಲ್ಲಿ ನಡೆಯುತ್ತದೆ. ಅಷ್ಟೇಕೆ ‘ಆಧುನಿಕ ಜೀವನದ ಸಾಕ್ಷರತಾ ಕಾರ್ಯಕ್ರಮಗಳು, ಚುನಾವಣಾ ಪ್ರಚಾರಕ್ಕೂ ಮತ್ತು ಏಡ್ಸ್ ಕಾರ್ಯಕ್ರಮಗಳು ಲಾವಣಿ ಹಾಡಿನ ಮೂಲಕ ಪ್ರಸಾರ ಗೊಂಡಿವೆ’.

**ಹಲಗಲಿ ಬೇಡರು**

ಬ್ರಿಟಿಷರ ಜೊತೆ ಕೆಲವು ಸ್ಥಳೀಯ ರಾಜರು ಹೊಂದಾಣಿಕೆ ಮಾಡಿಕೊಂಡು ಅಧಿಕಾರ ನಡೆಸಿದ ನಿದರ್ಶನಗಳು ಇವೆ. ಇದಕ್ಕೆ ಎದುರಾಗಿ ಬ್ರಿಟಿಷರ ಜೊತೆ ಹೋರಾಡಿದ ರಾಜರುಗಳು ಕೆಲವರಿದ್ದಾರೆ. ಟಿಪ್ಪು ಸುಲ್ತಾನ್, ಕಿತ್ತೂರಿನ ಚೆನ್ನಮ್ಮ ಅಂತಹವರಲ್ಲಿ ಕೆಲವರಾಗಿದ್ದಾರೆ. ಕಿತ್ತೂರು ಸಂಸ್ಥಾನಕ್ಕೆ ಸಹಾಯಕನಾಗಿ ಹೋರಾಡಿದ ಸಂಗೊಳ್ಳಿ ರಾಯಣ್ಣನ ಸಾಹಸವು ಲಾವಣಿಗಳಲ್ಲಿ ಪ್ರಸಾರವಾಗಿದೆ. ಮುಧೋಳ ಕೂಡಾ ಒಂದು ಸಂಸ್ಥಾನವಾಗಿದ್ದು, ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಬ್ರಿಟಿಷರು ಸ್ಥಳೀಯ ರಾಜರಲ್ಲಿ, ಅಧಿಕಾರಿಗಳಲ್ಲಿ ಒಡಕು ಹುಟ್ಟಿಸುವುದರ ಮೂಲಕ, ಭೇದ ನೀತಿಯಿಂದ ಸಂಘರ್ಷ ಹಬ್ಬಿಸಿ ತಮ್ಮ ಅಧಿಕಾರವನ್ನು ವಿಸ್ತರಿಸುತ್ತಿದ್ದರು. ಇದಕ್ಕೆ ಸಾಮಂತ ಅರಸರು ಬಲಿಯಾಗುತ್ತಿದ್ದರು.

೧ಲಱ೭ರಲ್ಲಿ ಬ್ರಿಟಿಷರ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಇದರಿಂದ ತಮ್ಮ ಮೇಲೆ ಯಾರು ತಿರುಗಿ ಬೀಳಬಾರದೆಂಬುದು ಬ್ರಿಟಿಷರ ರಾಜಕೀಯ ಹುನ್ನಾರವಾಗಿತ್ತು. ಇದಕ್ಕೆ ಸಾಮಂತ ರಾಜರು ಸಮ್ಮತಿಸಿದರು. ಸ್ಥಳೀಯ ಹಲಗಲಿಯ ಬೇಡರು ತಾವು ಪಾರಂಪರಿಕವಾಗಿ ರಕ್ಷಿಸಿಕೊಂಡು ಬಂದಿದ್ದ, ಶಸ್ತ್ರಾಸ್ತ್ರಗಳನ್ನು ಬ್ರಿಟಿಷರಿಗೆ ಒಪ್ಪಿಸದೆ, ಅವರ ವಿರುದ್ಧ ಹೋರಾಡಿ ಮಡಿದ ಸಂಗತಿಗಳನ್ನು ಹಲಗಲಿಯ ಬೇಡರ ಲಾವಣಿ ದಾಖಲಿಸುತ್ತದೆ.

ಬೇಡರು ಬೇಟೆಯನ್ನೇ ವೃತ್ತಿಯಾಗಿಸಿಕೊಂಡು ಬಂದ ಸಮುದಾಯ. ಬೇಟೆಯೆಂಬುದು ಆದಿಮಾನವನ ಮೊದಲನೆ ವೃತ್ತಿಯಾಗಿತ್ತು. ಕೃಷಿ ಇನ್ನೂ ಆವಿಷ್ಕಾರಗೊಳ್ಳದಿದ್ದ ಆ ಕಾಲ ದಲ್ಲಿ ಬೇಟೆಯಾಡಿ ಮಾಂಸಾಹಾರವನ್ನು ದೊರಕಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ‘ಬೇಟೆ ಜೀವನೋಪಯೋಗಿ ವೃತ್ತಿಯಾಗಿತ್ತು. ಕ್ರೂರ ಪ್ರಾಣಿಗಳನ್ನು ಹಿಮ್ಮೆಟ್ಟಿಸಲು ಅಥವಾ ಹೊಡೆದೋಡಿಸಲು ಬೇಟೆಯಾಡುವ ಕ್ರಿಯೆ (ವಿದ್ಯೆ) ಸಹಕಾರಿಯಾಗಿತ್ತು’. ಮುಂದೆ ಕಳ್ಳ-ಕಾಕರಿಂದ ಊರನ್ನು ರಕ್ಷಿಸಲು, ಶತ್ರುಗಳನ್ನು ಹಿಮ್ಮೆಟ್ಟಿಸಲು ಬೇಟೆಗಾರರು ಮುಖ್ಯಪಾತ್ರ ವಹಿಸಿದರು.

ಇದರಿಂದಾಗಿ ದೊಡ್ಡ ದೊಡ್ಡ ಸಾಮ್ರಾಜ್ಯಗಳಲ್ಲಿ ಬೇಡರ ಪಡೆಗಳನ್ನು ಸುಸಜ್ಜಿತವಾಗಿ ಇಟ್ಟುಕೊಳ್ಳುವುದು ಅನಿವಾರ್ಯವಾಯಿತು. ಇದು ಸೈನ್ಯ ಸಮುದಾಯ ರೂಪು ಗೊಳ್ಳಲು ತಳಹದಿಯಾಗಿ ಪರಿಣಮಿಸಿತು. ಈ ಹಿನ್ನೆಲೆಯಲ್ಲಿ ಬೇಡರ ಇತಿಹಾಸ ನಮಗೆ ದೊರಕುತ್ತದೆ.

ಮುಧೋಳ ಸಂಸ್ಥಾನದಲ್ಲಿ 'ಹಲಗಲಿ' ಒಂದು ಚಿಕ್ಕಹಳ್ಳಿ. ಬೇಡರೇ ಹೆಚ್ಚಾಗಿರುವ ಈ ಹಳ್ಳಿಯಲ್ಲಿದ್ದ, ಪೂಜಾರಿ ಹಣಮ, ಬಾಲ, ಜಡಗ ಮತ್ತು ರಾಮ ಎಂಬ ನಾಲ್ವರು ಬ್ರಿಟಿಷರ ನಿಶ್ಯಸ್ತ್ರೀಕರಣ ಕಾಯಿದೆಯ ವಿರುದ್ಧ ಪ್ರತಿಭಟನೆ ನಡೆಸಿದರು ಎಂಬುದು ಲಾವಣಿಯಲ್ಲಿ ದಾಖಲಾಗಿದೆ. ಬ್ರಿಟಿಷರಿಗೆ ಶರಣಾಗಿ ಆಯುಧಗಳನ್ನು ತಂದೊಪ್ಪಿಸುವಂತೆ ಮುಧೋಳ ಸಂಸ್ಥಾನದ ಆದೇಶವಾದರೂ ಅದಕ್ಕೆ ಹಲಗಲಿಯ ಬೇಡರು ಒಪ್ಪಲಿಲ್ಲ. ಬೇಡರಿಗೆ ಆಯುಧವೇ ಜೀವನಾಧಾರ. ಪೂಜಾರಿ ಹಣಮ, ಬಾಲ, ಜಡಗ, ರಾಮ ಈ ನಾಲ್ವರಿಗೆ ಒಳಗಿಂದೊಳಗೇ ವಚನ ಕೊಟ್ಟಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ನಾಲ್ಕು ಜನ ಶೂರರೇ ಈ ಲಾವಣಿಯ ನಾಯಕರು. ಮಧ್ಯೆ ಯುದ್ಧದ ಸಂದರ್ಭದಲ್ಲಿ ಭೀಮ ಎಂಬ ಮತ್ತೊಂದು ಹೆಸರು ಬರುತ್ತದೆ, ಅವನೂ ಅಸಾಧಾರಣ ಶೌರ್ಯವನ್ನು ಪ್ರದರ್ಶಿಸುತ್ತಾನೆ. 'ರಾಮಿ' ಎಂಬ ಒಂದು ಹೆಣ್ಣಿನ ಶೌರ್ಯವಂತೂ ಕಣ್ಣಿಗೆ ಕಟ್ಟುತ್ತದೆ.

ಈ ಲಾವಣಿಯಲ್ಲಿ ಬರುವ ಹೋಲಿಕೆಗಳೂ ಅಷ್ಟೇ ತೀವ್ರತರ ಪರಿಣಾಮವನ್ನುಂಟು ಮಾಡುತ್ತವೆ. 'ಹಲ್ಲ ಕಿತ್ತಿದಾ ಹಾವಿನ ಪರಿಯು……', 'ಸತ್ತ ಹೆಣಕ್ಕೆ ಶೃಂಗಾರ ಮಾಡಿದ ಪರಿ…..' ಮುಂತಾದುವು ಈಗ ಕ್ಲಿಷ್ಟ ಎನ್ನಿಸಿದರೂ 'ಮಗ್ಗಲದಾಗಿನ ಹೇಣತಿ ಕೊಟ್ಟಾಂಗ…..' ಎನ್ನುವಲ್ಲಿ ಎದ್ದು ಕಾಣುವ ಅವರ ಆ ಗಡುಸು ಗಂಡುಸುತನ ಎಂಥ ಹೇಡಿಯನ್ನೂ ಬಡಿದೆಬ್ಬಿಸುತ್ತದೆ. ''ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು'' ಎಂಬ ವರ್ಣನೆ ಅಷ್ಟೇ ಗಡುಸಾಗಿಯೂ ಅದಕ್ಕಿಂತ ಹೆಚ್ಚು ಅರ್ಥಪೂರ್ಣವಾಗಿಯೂ ಇದೆ. ಒಂದೇ ಏಟಿಗೆ ಒಬ್ಬ ಕೆಳಕ್ಕೆ ಬೀಳುತ್ತಿದ್ದ ಎಂಬ ಸಾಮಾನ್ಯ ಅರ್ಥವೂ ಆ ಬೇಡರ ಶಕ್ತಿಯನ್ನು ವರ್ಣಿಸುವುದಾದರೆ, ಈ ಮಾತು ಅದಕ್ಕಿಂತ ಹೆಚ್ಚಿನ ಅರ್ಥವನ್ನು ಒಳಗೊಂಡಿದೆ. ಆ ಬೇಡ ಧೀರರ ಹೊಡೆತದ ಭಯಂಕರತೆ ಇಲ್ಲಿ ವ್ಯಕ್ತವಾಗುತ್ತದೆ. ಕಾರಕೂನನ ಕಪಾಳಕ್ಕೆ ಬಿದ್ದುದನ್ನು ಕಂಡ ಶಿಪಾಯಿ ಹೆದರಿ ಮೂರ್ಛೆ ಹೋಗಿ ನೆಲಕ್ಕೆ ಬಿದ್ದೆಂಬ ಅರ್ಥವನ್ನು ಧ್ವನಿಸುತ್ತಿರುವಂತಿದೆ. ಆ ಸಂದರ್ಭದಲ್ಲಿ ಲಾವಣಿಯ ಆನೇ ನುಡಿ ಹೀಗೆ ವಿವರಿಸುತ್ತದೆ.

ಹಲಗಲಿ ಅಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತು
ಪೂಜಾರಿ ಹಣವೊ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್ ಇಂದ ಬಾರದ ನಮ್ಮ ಜೀವ ಸತ್ ಓಗುದು ಗೊತ್ತು

ಸುತ್ತಿನ ಹಳ್ಳಿ ಮತ್ತ ಧೋರಿಗಳಿಗೆ ತಿಳಿಶೆರ ಹೀಗ್ ಅಂತು
ಮಾಡರಿ ಜಗಳಾ ಕೂಡ್ ಇರತೇವು ಕುಮಕಿ ಯಾವತ್ತು

ವೊಳಗಿಂದ್ ಒಳಗ ವಚನ ಕೊಟ್ಟರೂ ಬ್ಯಾಡರ್ ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು ||ಚ್ಯಾಲ||

ಬೇಡರನ್ನು ಒಲಿಸಲು ಬಂದ ಕಾರಬಾರಿನ ಕಪಾಳಕ್ಕೆ ಹೊಡೆದು ಕಳುಹಿಸಲಾಯಿತು. ಇದಕ್ಕೆ ಪ್ರತಿಭಟನೆಯಾಗಿ ನಾವೂ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳುವುದು ತಪ್ಪಾದರೆ, ನಿಮ್ಮ ಶಸ್ತ್ರಾಸ್ತ್ರ ಗಳನ್ನು ಏಕೆ ಇಟ್ಟುಕೊಳ್ಳುತ್ತೀರಿ? ಬ್ರಿಟೀಷ್ ಅಧಿಕಾರಿಗಳಿಗೆ ಪ್ರಶ್ನಿಸಿದ ಸಂಗತಿಯು ಲಾವಣಿ ಯಲ್ಲಿ ದಾಖಲಾಗಿದೆ. ಇದಕ್ಕೆ 'ಕೃಷ್ಣಾನಾಯಕ ಗೌಡ ಕುಂದರಗಿ' ಎಂಬಾತ ಹೀಗೆ ಹಠ ಹಿಡಿಯುವುದು ಒಳ್ಳೆಯದಲ್ಲ, ನಿಮ್ಮ ಆಯುಧಗಳನ್ನು

ಸಾಹೇಬರಿಗೆ ಒಪ್ಪಿಸಿರಿ ಎಂದು ಸಂಧಾನದ ಮಾತುಗಳನ್ನು ಆಡುತ್ತಾನೆ. ಅದಕ್ಕೆ ನಾಲ್ವರು ಹಲಗಲಿಯ ಬೇಡರು ಖಾರ ವಾಗಿಯೇ ಪ್ರತಿಕ್ರಿಯಿಸುತ್ತಾರೆ.

ಹತಾರ ಕೊಡಲಿಕೆ ಹೆಂಗಸ್ ಆಗಿ ಬಳಿಯ್ ಇಟ್ಟಿಲ ಕೈಯಾಗ
ಯಾವ ಬಂದೀರಿ ಜೀವ ಹೋದರು ಕೊಡುವುದಿಲ್ಲ ಸುಮ್ಮನ್ ಹೋಗರಿ ಈಗ

ಅಂದ ಮಾತ ಯೆಲ್ಲ ಬಂದ ಹೇಳಿದಾನ ಆವಾಗ ಸಾಹೆಬಗ
ಶಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ ಹುಕುಮ ಕೊಟ್ಟರ್ ಆಗ

ಕುದರಿಯಮಂದಿ ಕೂಡಿ ಮುಟ್ಟಿತೊ ಹಲಗಲಿ ಸ್ಥಳದ ಮೇಗ
ವೊಳಗಿನ ಮಂದಿ ವೊಟ್ಟರಲೆ ಹೊಡೆದರ ಮುಂಗಾರಿ ಮಳಿ ಸುರದ್ ಅಂಗ

ಹೊರಗಿನ ಮಂದಿ ಗುಂಡ ಹತ್ತಿಕೆರೆ ತಿರಿಗೆರ ಆವಾಗ
ಕಾಗದ ಬರದ ಕಳವೆರ ಬೇಗನ ದಂಡ ಬರಲ್ ಎಂತ ಹೀಂ ||ಚ್ಯಾಲ||

ಅಧಿಕಾರ ನಡೆಸುವವರು ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳುವುದು ಸಾಧ್ಯವೆಂದರೆ ನಾವೇಕೆ ಶಸ್ತ್ರಾಸ್ತ್ರಗಳ್ನ ಹೊಂದಬಾರದೆಂಬುದು ಹಲಗಲಿಯ ಬೇಡರ ಮುಖ್ಯ ಪ್ರಶ್ನೆ. ಮೇಲಾಗಿ ಬ್ರಿಟಿಷರು ಭಾರತದಲ್ಲಿ ಅಧಿಕಾರ ಶಸ್ತ್ರಾಸ್ತ್ರಗಳ ಮೂಲಕವೆ, ಅವರೆಂದೂ ಅಹಿಂಸೆಯನ್ನು ಒಂದು ಮೌಲ್ಯವಾಗಿ ಪ್ರತಿಪಾದಿಸಲಿಲ್ಲ. ಹೀಗಿರುವಾಗ ಹಲಗಲಿಯ ಬೇಡರು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸದೇ ಅವರ ವಿರುದ್ಧ ಕೆಚ್ಚದೆಯಿಂದ ಹೋರಾಡಿದುದು ಐತಿಹಾಸಿಕವಾಗಿ ಮಹತ್ವದ್ದಾಗಿದೆ.

ಬ್ರಿಟಿಷರರು ತಮ್ಮ ಅಧಿಕಾರವನ್ನು ಪ್ರಶ್ನೆ ಮಾಡಿದವರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಸಂಧಾನದ ಮೂಲಕವೋ, ಸೈನ್ಯದ ಮೂಲಕವೋ ಎದುರಾಳಿಯನ್ನು ಬಗ್ಗು ಬಡಿಯು ತ್ತಿದ್ದರು. ಸೈನ್ಯದ ತುಕಡಿಯೊಂದಿಗೆ ಪುಟ್ಟ ಹಳ್ಳಿ ಹಲಗಲಿಯನ್ನು ಮುತ್ತಿದಾಗ ನಾಲ್ವರು ಬೇಡರು ತಮ್ಮ ಸಹಾಯಕರೊಂದಿಗೆ ವೀರಾವೇಶದಿಂದ ಹೋರಾಡಿದ ಸಂಗತಿ ದಾಖಲಾಗಿದೆ. ಆ ಸಾಲುಗಳು ಹೀಗಿವೆ :

ಬೆತ್ತ ಹತ್ತಿ ತಿರಿವಿ ಕಡದರೊ ಯೋನು ಉಳಿಯದ್ ಅಂಗ
ನಡವಿ ಹಾಕಿಕೊಂಡ ಹೊಡದರ ಗುಂಡ ದರಜ ಇಲ್ಲದ್ ಹಾಂಗ

ಕವಾತ ಫೈರ್ ಸುತ್ತಗಟ್ಟಿ ತಂಬು ನುಡಿಶಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತುಲ ಬಾಕ ನಡವಿನಾಗ

ಶಿಡಿಲಿನ ಹಂತ ಗುಂಡ ಹೊಡವುತ ಕತ್ತಿಲಿ ಕಡದರ ವೊಲತ್ ಅಂಗ
ನಡುಗಿತು ಬ್ಯಾಡಕಿ-ಕೆನ್ ಧೂಳ ಹರಿದ್-ಅಂಗ ಕಡದಾಟವು ಹ್ಯಾಂಗ ||

ಹಲಗಲಿಯ ಬೇಡರ ವೀರಾವೇಷದ ಹೋರಾಟವನ್ನು ಹತ್ತಿಕ್ಕಲು ಬೆಳಗಾವಿಯಿಂದ ಇನ್ನಷ್ಟು ಸುಸಜ್ಜಿತ ಸೈನ್ಯದ ತುಕಡಿಯನ್ನು ತರಿಸಲಾಯಿತು. ಬ್ರಿಟಿಷರ ಕಾರ್ ಸಾಹೇಬ್ ಎಂಬಾತನು ಈ ಸೈನ್ಯದ ಉಸ್ತುವಾರಿ ವಹಿಸಿ ಹಲಗಲಿಯನ್ನು ಸುತ್ತಿನಿಂದಲೂ ಮುತ್ತಿದರು. ಹಣಮ, ಭೀಮ, ರಾಮ ಮತ್ತು ಜಡಗ ಬ್ರಿಟಿಷ್ ಸೈನ್ಯವನ್ನು ವೀರಾವೇಶದಿಂದ ಎದುರಿಸಿದ ರೀತಿ ರೋಮಾಂಚನಕಾರಿಯಾದುದು. ಈ

ಸಂದರ್ಭದಲ್ಲಿ 'ರಾಮಿ' ಎಂಬ ಹೆಣ್ಣುಮಗಳು ಮೂರು ಮಂದಿ ಬ್ರಿಟಿಷ ಸೈನಿಕರನ್ನು ಕೊಂದುದಲ್ಲದೆ ಆರು ಕುದುರೆಗಳನ್ನು ಕಡಿದು ಹಾಕುತ್ತಾಳೆ. ಭೀಮನು ೫೦೦ ಮಂದಿಗೆ ಎದುರಾಗಿ ನಿಂತ ಎಂಬುದು, ರಾಮನು ರಕ್ತದ ಕಾಲುವೆ ಹರಿಸಿದನೆಂಬುದು, ಬಾಲನು ಹತ್ತಾರು ಕುದುರೆಗಳನ್ನು ಹಿಮ್ಮೆಟ್ಟಿಸಿದನೆಂಬುದು ಲಾವಣಿಯಲ್ಲಿ ಬರುತ್ತದೆ. ತುಂಬಿ ಬಂದ ಸೈನ್ಯದ ಎದುರು ಇವರ ವೀರಾವೇಶದ ಹೋರಾಟ ಬಹಳ ಹೊತ್ತು ನಡೆಯಲಿಲ್ಲವೆಂಬುದು ಬೇರೆ ಮಾತು. ಬ್ರಿಟಿಷರ ಸೈನ್ಯ ಎಷ್ಟು ಕ್ರೂರ ವಾಗಿತ್ತೆಂದರೆ ಇಡೀ ಊರನ್ನು ಲೂಟಿ ಮಾಡಿತ್ತು. ಈ ಯುದ್ಧದಲ್ಲಿ ನಾಲ್ವರು ಬೇಡರು ವೀರ ಮರಣವನ್ನು ಅಪ್ಪಿದರು.

ರಾಜಕೀಯ ಇತಿಹಾಸದಲ್ಲಿ ದೊಡ್ಡ ದೊಡ್ಡ ರಾಜರ ಯುದ್ಧ ವರ್ಣನೆಗಳನ್ನು ನಾವು ಕೇಳುತ್ತೇವೆ. ರಾಜರುಗಳು ನಿಜವಾಗಿ ಯುದ್ಧ ಮಾಡುತ್ತಿದ್ದರೋ ಇಲ್ಲವೋ ಅದು ಬೇರೆ ಮಾತು (ಸೈನಿಕರು ಯುದ್ಧ ಮಾಡಿರಬಹುದು), ಆದರೆ ಹಲಗಲಿಯ ಬೇಡರು ಪಾರಂಪರಿಕವಾಗಿ ಉಳಿಸಿಕೊಂಡು ಬಂದ ಶಸ್ತ್ರಾಸ್ತ್ರಗಳನ್ನು ಬ್ರಿಟಿಷರಿಗೆ ಒಪ್ಪಿಸದೆ ವೀರಾವೇಶ ದಿಂದ ಹೋರಾಡಿದುದು ಲಾವಣಿಗಳಲ್ಲಿ ದಾಖಲಾಗಿದೆ. ಸ್ಥಳೀಯ ಇತಿಹಾಸವನ್ನು ಸಾರುವ ಹಲಗಲಿಯ ಬೇಡರ ಲಾವಣಿ ಚಾರಿತ್ರಿಕವಾಗಿ ಮಹತ್ವ ಪಡೆದಿದೆ.

**ಅಡಿಟಿಪ್ಪಣಿ**

೧. The Bedas of halagali : Indian Antiquary, ೧೮೮೭, Vol. ೧೬, p. ೩೫೬.

೨. ಕ್ಯಾತನಹಳಿ ರಾಮಣ್ಣ (ಸಂ.), ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, ಪು. ೫೯, ೧೯೭೯.

# ಸುರಪುರದ ವೆಂಕಟಪ್ಪನಾಯಕ ಮತ್ತು ಬ್ರಿಟಿಷರು

**ಹಿನ್ನೆಲೆ**

ಭಾರತದ ಇತಿಹಾಸದ ಪುಟಗಳಲ್ಲಿ ಬ್ರಿಟಿಷರ ವಿರುದ್ಧ, ಸ್ವಾತಂತ್ರ್ಯ ಸಂಗ್ರಾಮ ಮಾಡಿದ ಕೆಲವೇ ಸಂಸ್ಥಾನಗಳಲ್ಲಿ ಗಂಡು ಮೆಟ್ಟಿನ ನಾಡು ಸುರುಪುರವು ಒಂದು. ಕೆಚ್ಚೆದೆಯ ವೀರ ಬೇಡರ ಸಂಸ್ಥಾನವೆಂದು ಪ್ರಸಿದ್ಧಿಯೂ ಪಡೆದಿತ್ತು. ಇದನ್ನು ಗಡ್ಡಿಪಿಡ್ಡನಾಯಕ ಆಳ್ವಿಕೆಯಿಂದ ಆರಂಭಗೊಂಡ ವಾಗನಗೆರೆ ಕಿಲ್ಲೆಯ (ಕೋಟೆ) ಪಾಳೆಯಗಾರಿಕೆಯು ಸುರಪುರ ವನ್ನು ಸ್ವತಂತ್ರ ರಾಜಧಾನಿಯಾಗಿ ಸಾಬೀತು ಪಡಿಸಿತು. ಸರಿ ಸುಮಾರು ಎರಡುವರೆ ಶತಮಾನ ಗಳ ಮಹತ್ವದ ಇತಿಹಾಸ ಸೃಷ್ಟಿಸಿದ್ದು ಸುರಪುರ ಸಂಸ್ಥಾನದ ಪುಟಗಳಲ್ಲಿದೆ. ಈ ಸಂಸ್ಥಾನವನ್ನು ಆಳಿದ ಹನ್ನೊಂದು ಜನ ಅಪ್ರತಿಮ ವೀರ ಅರಸರಲ್ಲಿ ನಾಲ್ವಡಿ (ನಾಲ್ಕನೇ) ರಾಜಾ ವೆಂಕಟಪ್ಪನಾಯಕನದು ವಿಶಿಷ್ಟ ವ್ಯಕ್ತಿತ್ವ ಹಾಗೂ ಅಪ್ರತಿಮ ಹೋರಾಟಗಾರ ಎಂದು ಹೇಳುವುದರಲ್ಲಿ ಸಂದೇಹವಿಲ್ಲ.

ಈತನ ತಂದೆ ಕೃಷ್ಣಪ್ಪನಾಯಕ ತೀರಿಕೊಂಡಾಗ ನಾಲ್ವಡಿ ವೆಂಕಟಪ್ಪನಾಯಕ ಕೇವಲ ೮ ವರ್ಷದವನಿದ್ದನು. ಆದಕಾರಣ ರಾಣಿ ಈಶ್ವರಮ್ಮ ಗಂಡ ತೀರಿಕೊಂಡ ಕೂಡಲೇ ಸಂಸ್ಥಾನದ ಅಧಿಕಾರವನ್ನು ತಾನೇ ವಹಿಸಿಕೊಂಡಳು. ಇದಕ್ಕೆ ಕಾರಣವಿಷ್ಟೇ. ಕೃಷ್ಣಪ್ಪನಾಯಕ ತಮ್ಮ ಪಿಡ್ಡನಾಯಕನಿಗೆ ಅಧಿಕಾರ ಹೋಗಬಾರದು ಎಂಬ ಮಹಾದಾಸೆ ಇತ್ತು. ಇದರಿಂದ ರಾಣಿ ಈಶ್ವರಮ್ಮ ತಾನೇ ಅಧಿಕಾರ ವಹಿಸಿಕೊಂಡಳು. ಇದೇ ಸಂದರ್ಭದಲ್ಲಿ ಕ್ಯಾಪಟನ್ ಗ್ರೀಸ್ಲೆ ಅಧಿಕೃತವಾಗಿ ಸುರಪುರ ಸಂಸ್ಥಾನದ ಒಳಾಡಳಿತದಲ್ಲಿ ಕೈಹಾಕಿ ಸುರಪುರದಿಂದ ಬರಬೇಕಾಗಿದ್ದ

ಬಾಕಿ ಹಣದ ವಸೂಲಿಗೆ ಸೈನ್ಯದ ಸಹಾಯ ಕೇಳಿ ರೆಸಿಡೆಂಟನಿಗೆ ಪತ್ರ ಬರೆದನು. ಆದರೆ ಈ ಬೇಡಿಕೆ ತಿರಸ್ಕೃತಗೊಂಡಿತು. ವಿಧಿಯಿಲ್ಲದೆ ಗ್ರೀಸ್ಲೆ ಕ್ಯಾಪ್ಟನ್ ಟೇಲರನನ್ನು ಕಳುಹಿಸಿದನು.

ಕ್ಯಾಪ್ಟನ್ ಟೇಲರನು ಅತ್ಯಂತ ಮುತ್ಸದ್ದಿತನದಿಂದ ರಾಣಿ ಈಶ್ವರಮ್ಮ ರಾಜಕುಮಾರ ಮತ್ತು ರಾಣಿಯ ಮೈದುನನಾದ ಪಿಡ್ಡಿನಾಯಕ ಹಾಗೂ ಇತರ ಮುಖಂಡರನ್ನು ಭೇಟಿಯಾಗಿ ರೆಸಿಡೆಂಟನಿಂದ ಆಗಿದ್ದ ತನ್ನ ಮುಕ್ತಿ ಪತ್ರವನ್ನು ಕೊಟ್ಟು, ರಾಜಾ ವೆಂಕಟಪ್ಪನಾಯಕನು ಪ್ರಾಪ್ತ ವಯಸ್ಕನಾಗುವವರೆಗೆ ಪಾಲಕನಾಗಿ ಪಿಡ್ಡನಾಯಕನನ್ನು ನಿಯಮಿಸಿರುವುದನ್ನು, ವಿರೋಧಿಸಿದಲ್ಲಿ ಸಂಸ್ಥಾನಕ್ಕೆ ಕೇಡು ಸಂಭವಿಸಬಹುದೆಂದೂ ಮಾರ್ಮಿಕವಾಗಿ ತಿಳಿಸಿ, ರಾಜಧಾನಿಯಲ್ಲಿ ಶಾಂತಿ ನೆಲೆಗೊಳ್ಳುವ ಮೊದಲ ಪ್ರಯತ್ನ ಮಾಡಿದನು.

**ನಾಲ್ವಡಿ ರಾಜಾವೆಂಕಟಪ್ಪ ನಾಯಕ**

ಯುವರಾಜ ವೆಂಕಟಪ್ಪ ನಾಯಕ ವರ್ಷಗಳು ಕಳೆದಂತೆ ರೆಸಿಡೆಂಟನಾದ ಜನರಲ್ ಫ್ರೇಜರನು ಗವರ್ನರ್ ಜನರಲ್ಲನ ೧೮.೫.೧೮೪೩ ರಂದು ಪತ್ರದ ಪ್ರತಿಯೊಂದು ಕಳಿಸಿ ಕೊಟ್ಟು ಅದರ ಪ್ರಕಾರ "ಪಿಡ್ಡನಾಯಕ ಅನುಮತಿಯಂತೆ ಚಿಕ್ಕವನಾದ ಯುವರಾಜನನ್ನು ಗಾದಿಗೆ ಕೂಡಿಸಿ" ರಾಜಕುಮಾರನ ಮರ್ಯಾದೆಗೆ ಚ್ಯುತಿಬಾರದಂತೆ ನಡೆದುಕೊಳ್ಳಬೇಕೆಂದೂ, ಯುವರಾಜನು ದೊಡ್ಡವನಾದ ನಂತರ, ಸುಸ್ಥಿತಿ ಸುವ್ಯವಸ್ಥಿತ ರಾಜ್ಯವನ್ನು ಆತನಿಗೊಪ್ಪಿಸ ಬೇಕೆಂದೂ ಮತ್ತು ಆತನಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಆಡಳಿತ ಯೋಗ್ಯ ತರಬೇತಿಯನ್ನು ಕೊಡಿಸುವಂತೆ ಅಭಿಪ್ರಾಯ ಪಟ್ಟಿದ್ದನು. ಟೇಲರನು ಇದಕ್ಕೆ ತಕ್ಕಂತೆ ಎಲ್ಲರನ್ನು ಸಂತೋಷ ಗೊಳಿಸುವುದಕ್ಕಾಗಿ ಬಾಲ ವೆಂಕಟಪ್ಪನಾಯಕನ ರಾಜ್ಯಾರೋಹಣ ಸಮಾರಂಭವನ್ನು ವ್ಯವಸ್ಥೆ ಗೊಳಿಸಲು ಪ್ರಾರಂಭಿಸಿದನು. ಈ ಪ್ರಕ್ರಿಯಗೆ ಪಿಡ್ಡನಾಯಕನು ರಾಜ್ಯಾಭೀಷೇಕವಾದರೆ ತನಗೆ ಅಡಚಣೆಯುಂಟಾಗಬಹುದೇನೋ ಎಂಬ ಸಂಶಯದಿಂದಲೋ ಎನ್ನುವಂತೆ ಅದಕ್ಕೆ ಅನಾನುಕೂಲಗಳಿರುವಂತೆ ತೋರಿಸಿಕೊಟ್ಟನು. ಆದರೆ ಇದು ಸರಕಾರದ ಆಜ್ಞೆ ಎಂಬ ಕಲ್ಪನೆಯನ್ನು ಕೊಟ್ಟಾಗ ಆತನು ಸಮ್ಮತಿಸಿದನು. ಇತ್ತ ಈಶ್ವರಮ್ಮ ರಾಣಿಗೂ ಸಂತೋಷ ವಾಗಿತ್ತು. ರಾಜಮನೆತನದ ಪದ್ಧತಿಗಳಂತೆ ಆಹ್ವಾನಗಳನ್ನು ಕಳಿಸಿಕೊಟ್ಟು ಉತ್ಸವಗಳು ನೆರವೇರಿ ವೆಂಕಟಪ್ಪನಾಯಕನನ್ನು ಸುರಪುರ ಸಂಸ್ಥಾನದ ಗಾದಿಯ ಮೇಲೆ ಕೂಡಿಸಲಾಯಿತು, ದರ್ಬಾರದ ಮರ್ಯಾದಗಳಿಗನುಸಾರ ಕಾಣಿಕೆ ಮುಜುರೆ ಎಲ್ಲವೂ ಸರಳವಾಗಿ ನಡೆದು ಸರ್ವರಿಗೂ ಸಂತೋಷವಾಯಿತು. ಟೇಲರನು ಬಾಲ ವೆಂಕಟಪ್ಪ ನಾಯಕನಿಗೆ ಒಳ್ಳೆಯ ಶಿಕ್ಷಣ ಕೊಡಲು ಡಾ. ಮ್ುರೆರಯನ್ನು ನೇಮಿಸಿದನು. ಇಂಗ್ಲಿಷಿನ ಜೊತೆ ತೆಲುಗು, ಮರಾಠಿ, ಫಾರಸಿ ಭಾಷೆಗಳನ್ನು ಕಲಿಯುತ್ತಿದನು. ಈ ಸಂದರ್ಭದಲ್ಲಿ ಮಹಾನವಮಿ ಹಬ್ಬವು ಸಮೀಪಿಸುತ್ತಿರುವಾಗ ರಾಜನನ್ನು ಕೊಲೆಗೈಯುವ ಸಂಚು ನಡೆದಿರುವುದರ ವಿಚಾರ ಟೇಲರನ ಗಮನಕ್ಕೆ ಬಂದಿತು. ಇಂಥದೊಂದು ದುರ್ಘಟನೆ ನಡೆದರೆ ಪಿಡ್ಡನಾಯಕನೇ ಅದರ ಜವಾಬ್ದಾರಿ ಹೊರಬೇಕಾಗುತ್ತದೆಂಬ ಅಂಶವನ್ನು ಟೇಲರನು ಪಿಡ್ಡನಾಯಕನಿಗೆ ತಿಳಿಸಿದನು. ಇದರಿಂದ ದುರಾಗ್ರಹ ಪೀಡಿತರ ಮೇಲೆ ಹತೋಟಿ ಸಾಧಿಸಿದನು. ಇದೇ ಸಮಯದಲ್ಲಿ ಏನಾದರೂ ಅನಾಹುತ ಜರುಗೀತೆಂಬುದಕ್ಕಾಗಿ ಟೇಲರನು ತಾನು ಸ್ವತ ರಾಜನ ಅಂಗರಕ್ಷಕರ (ವನದುರ್ಗ ಸೈನಿಕರು) ಬಿಗಿಕಾವಲನ್ನು ಹಾಕಿದ್ದಕ್ಕಾಗಿ ಸುಗಮ ರೀತಿಯಲ್ಲಿ ಉತ್ಸವ ಜರುಗಿ ಎಲ್ಲಾ ಧಾರ್ಮಿಕ ವಿಧಿಗಳು ಮುಗಿದ ನಂತರ ರಾಜನನ್ನು ಟೇಲರ್ ಸುರಕ್ಷಿತವಾಗಿ ರಾಣಿಯ ವಶಕ್ಕೊಪ್ಪಿಸಿದನು. ಈಗ ರಾಜನಿಗೆ ಹನ್ನೊಂದು ವರ್ಷಗಳಾಗಿದ್ದವು. ಆತನ ಜಾವಳವು ಆಗಿರಲಿಲ್ಲ. ಇದಕ್ಕಾಗಿ ರೆಸಿಡೆಂಟಿನಿಂದ ಖರ್ಚಿನ ಅನುಮತಿ ಪಡೆದು ಸಂಸ್ಥಾನದ ಮರ್ಯಾದೆ ಗಳಿಗೆ ತಕ್ಕ ರೀತಿಯಲ್ಲಿ ಜಾವಳದ ಕಾರ್ಯಕ್ರಮ ಸಿದ್ಧನ ತೋಟದಲ್ಲಿ ನೆರವೇರಿಸಲಾಯಿತು. ಆ ದಿನವೆಲ್ಲ ಅನ್ನ ಸಂತಾರ್ಪಣೆ ದಾನ ಧರ್ಮ ಹಾಗೂ ಸಂತೋಷದ ಕಾರ್ಯಕ್ರಮಗಳನ್ನು ನಡೆಯಿಸಿ ಅಲ್ಲೇ ಇದ್ದು ಮರುದಿನ ಸಪರಿಹಾರ ಮೆರವಣಿಗೆಯೊಂದಿಗೆ ಊರೊಳಗೆ ಬಂದರು.

ಇದೇ ಸಂದರ್ಭದಲ್ಲಿ ನಾಲ್ವಡಿ ರಾಜವೆಂಕಟಪ್ಪ ನಾಯಕನ ಚಿಕ್ಕಪ್ಪನಾದ ಪಿಡ್ಡ ನಾಯಕನೂ ಪಾರ್ಶ್ವವಾಯುವಿನಿಂದ ಪೀಡಿತನಾಗಿ ಮೃತಪಟ್ಟನು. ಕೂಡಲೇ ಈಶ್ವರಮ್ಮ ರಾಣಿ ಮತ್ತೊಮ್ಮೆ ಅಧಿಕಾರ ಪಡೆಯಲು ಪ್ರಯತ್ನಿಸಿದರು. ಆದರೆ ಚಾಣಾಕ್ಷನಾದ ಟೇಲರನು ತಾನೇ ಅಧಿಕಾರವನ್ನು ವಹಿಸಿಕೊಂಡನು. ಮುಂದೆ ರಾಣಿಯನ್ನು ಅಧಿಕಾರದಿಂದ ದೂರವಿಡ ಲಾಯಿತು. ತದನಂತರದಲ್ಲಿ ೧೮೫೩ ಇಸವಿಯ

ಹೊತ್ತಿಗೆ ರಾಜಾವೆಂಕಟಪ್ಪನಾಯಕನು ಪ್ರೌಢ ವಯಸ್ಕನಾಗುತ್ತಿದ್ದುದರಿಂದ ಸುರಪುರ ಸಂಸ್ಥಾನದ ಅಧಿಕಾರವನ್ನು ಆತನಿಗೆ ಒಪ್ಪಿಸಬೇಕೆಂದು ರೆಸಿಡೆಂಟನು ಬ್ರಿಟೀಷ ಸರಕಾರಕ್ಕೆ ಮನವಿ ಮಾಡಿಕೊಂಡನು. ರಾಜ್ಯವನ್ನು ಒಪ್ಪಿಸಿದರೂ ರಾಜಕೀಯ ಪ್ರತಿನಿಧಿಯಾಗಿ ಟೇಲರನು ಮುಂದುವರೆಯುವುದೊಳ್ಳೆಯದೆಂದೂ ಅದಕ್ಕಾಗಿ ಸಂಸ್ಥಾನದಿಂದ ಆತನಿಗೆ ೧,೫೦೦ ರೂ ಸಂಬಳ ಕೊಡಬೇಕೆಂಬ ವಿಚಾರವನ್ನು ತಿಳಿಸಿದನು.

ರಾಜನಿಗೆ ಟೇಲರನ ಮೇಲೆ ಪ್ರೀತಿ ವಿಶ್ವಾಸಗಳಿದ್ದುದು ನಿಜವಾದರೂ ಪ್ರತಿ ತಿಂಗಳು ಇಷ್ಟು ಹಣವನ್ನು ರಾಜ್ಯದ ಬೊಕ್ಕಸದಿಂದ ಕೊಡಲು ಸಾಧ್ಯವಿಲ್ಲದ ಮಾತಾಗಿದ್ದಿತು. ಆ ಮಾತನ್ನು ರಾಜನು ಟೇಲರನಿಗೆ ಸ್ಪಷ್ಟಪಡಿಸಿದನು. ಅದರಂತೆ ಟೇಲರನೂ ಕೂಡ ಮೇಲಿನ ಅಧಿಕಾರಿಗಳಿಗೆ ಬರೆದುಕೊಂಡನು. ಈಗ ಬ್ರಿಟಿಷ್ ಸರಕಾರವು ಬೇರೇನೂ ಉಪಾಯವಿಲ್ಲದೆ ರಾಜ್ಯದ ಅಧಿಕಾರವನ್ನು ಹಸ್ತಾಂತರಿಸಲು ಟೇಲರನಿಗೆ ತಿಳಿಸಿತು.

**ರಾಜ್ಯಾಧಿಕಾರದ ಹಸ್ತಾಂತರೀಕರಣ**

ಗವ್ಹರ್ನರ ಜನರಲ್ಲನಾದ ಲಾರ್ಡ್ ಡಾಲ ಹೌಸಿಯು ರಾಜಕೀಯ ಪ್ರತಿನಿಧಿಯನ್ನು ನೇಮಿಸಿಕೊಳ್ಳಲಾಗುವುದಿಲ್ಲವೆಂಬ ರಾಜಾ ವೆಂಕಟಪ್ಪನಾಯಕನ ಪತ್ರದಿಂದ ಬಹಳ ಅಸಂತುಷ್ಟ ನಾದನು. ಆದರೆ ಒತ್ತಾಯ ಮಾಡಲು ಸಾಧ್ಯವಿರಲಿಲ್ಲವಾದ ಕಾರಣ ರಾಜ್ಯಭಾರವನ್ನು ವೆಂಕಟಪ್ಪನಾಯಕನಿಗೆ ಒಪ್ಪಿಸಲು ಬರೆಯಬೇಕಾಯಿತು. ಅಂತೆಯೇ ಜೂನ್ ೩೦, ೧೮೫೩ ರಂದು ಟೇಲರನು ದರ್ಬಾರನ್ನು ನೆರೆಯಿಸಿ. ರಾಜನಿಗೆ ಹೂಮಾಲೆಯನ್ನು ಹಾಕಿ ರಾಜಮುದ್ರೆ ಯನ್ನು ವೆಂಕಟಪ್ಪ ನಾಯಕನಿಗೆ ಒಪ್ಪಿಸಿದನು. ಸಂತೋಷವನ್ನು ವ್ಯಕ್ತಗೊಳಿಸಲು ತೋಪುಗಳು ಹಾರಿಸಲ್ಪಟ್ಟವು. ಟೇಲರನ ಬಂಗ್ಲೆಯನ್ನು ೨೦ಸಾವಿರ ರೂಪಾಯಿಗಳಿಗೆ ಖರೀದಿಸಿ ರಾಜನು ಆತನನ್ನು ಕಳಿಸಿಕೊಟ್ಟನೆಂದು ತಿಳಿದು ಬರುತ್ತದೆ.

ರಾಜಾ ವೆಂಕಟಪ್ಪನಾಯಕನು ಆಡಳಿತವನ್ನು ಕೈಯಲ್ಲಿ ತೆಗೆದುಕೊಂಡಾಗ ಭಾರತದ ಉತ್ತರ, ದಕ್ಷಿಣ ಭಾಗಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಕಿಡಿಯು ಹೊತ್ತಿಕೊಂಡು ಉರಿಯ ತೊಡಗಿತ್ತು. ಒಂದುಕಡೆ ಸ್ವಾತಂತ್ರ್ಯ ವೀರರು ಆತ್ಮಾರ್ಪಣೆಗೈಯುತ್ತಿದ್ದ ಸಮಾಚಾರ ಗಳಿಂದಲೂ, ಮತ್ತೊಂದು ಕಡೆ ವೈರಿಗಳಾದ ಬ್ರಿಟಿಷ ನಿಜಾಮರ ಅಪವಿತ್ರ ಕುತಂತ್ರ ಗಳಿಂದಲೂ ಕೋಪವುಕ್ಕಿ ಆತನ ರಕ್ತ ಕುದಿಯತೊಡಗಿತ್ತು. ನೆರೆಹೊರೆಯ ಸಂಸ್ಥಾನಿಕರಾದ ಮುಂಡರಗಿ ಭೀಮರಾಯ, ನರಗುಂದದ ಬಾಬಾಸಾಹೇಬ ಹಾಗೂ ಇತರರು ಈತನಿಗೆ ಸಹಾಯ ನೀಡಲು ಕಾತರರಾಗಿದ್ದರು. ಈ ಬಗ್ಗೆ ಪತ್ರಗಳ ಮುಖಾಂತರವಾಗಿಯೂ ಬ್ರಿಟಿಷರ ವಿರುದ್ಧ ಕಾವಲು ಸಂಪೂರ್ಣ ಸಹಾಯ ಒದಗಿಸಲು ಆಶ್ವಾಸನೆಯನ್ನಿತ್ತಿದ್ದರು. ಸುರಪುರ ಸಂಸ್ಥಾನದ ದೊರೆ ರಾಜಾ ವೆಂಕಟಪ್ಪನಾಯಕನ ಜೊತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಸಂಸ್ಥಾನಿಕರಲ್ಲಿ ಅಕ್ಕಲಕೋಟೆ, ಕೋಲ್ಲಾಪುರ, ಮಿರಜ್, ಜತ್ತ, ಜಮಖಂಡಿ, ಆನೆಗುಂದಿ, ಮುಧೋಳ, ಹುನಗುಂದ, ಶಿರಹಟ್ಟಿ ಇವರುಗಳು ಪ್ರಮುಖರು. ಸಂಗ್ರಾಮದಲ್ಲಿ ಪಾಲುಗೊಳ್ಳಲು ಮೇಲಿನ ದೇಶಾಭಿಮಾನಿಗಳ ಕರೆಬಂತು. ಈ ಅವಕಾಶವನ್ನು ಸುಮ್ಮನೆ ಬಿಟ್ಟಾನೆಯೇ, ತನ್ನ ಅಭಿಮಾನಿಗಳ ಕರೆಗೆ ಓಗೊಟ್ಟ ರಾಜ ಬ್ರಿಟಿಷ್ ಸಾಮ್ರಾಜ್ಯವನ್ನು ರುಳಿಸುವ ಮಹಾನ್ ಕಾರ್ಯವನ್ನೆಸಗಲು ರಣರಂಗದಲ್ಲಿ ಧುಮಿಕಿ, ಮುಂಚೂಣಿಯಲ್ಲಿ ನಿಂತ, ಪರಕೀಯರ ವಿರುದ್ಧ ಕಾದಿ, ಸಮಗ್ರ ದಕ್ಷಿಣ ಭಾರತವನ್ನು ರಕ್ಷಣೆಗೈಯಬಲ್ಲ ನಿರ್ವಿವಾದಿತ ಧುರಂಧರನು ಈ ವೆಂಕಟಪ್ಪ ನಾಯಕನೊಬ್ಬನೇ ಎಂಬುದನ್ನು ಈ ಸಂಸ್ಥಾನಿಕ ರೆಲ್ಲರೂ ತೀರ್ಮಾನಗೈದು ಈತನಿಗೆ ಸಹಾಯವೊದಗಿಸಲು ಸಿದ್ಧರಾಗಿ ನಿಂತರು. ಸುರಪುರವು ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರವಾಗಿ ಪರಿಣಮಿಸಿತು.

ಪ್ರತಿನಿತ್ಯವೂ ದೂರ ಸಮೀಪದ ಸ್ಥಳಗಳಿಂದ ಸ್ವಾತಂತ್ರ್ಯ ವೀರರನ್ನು ಆಂಗ್ಲರು ನಿರ್ದಯ ವಾಗಿ ಮರಣದಂಡನೆಗೆ ಗುರಿ ಮಾಡಿದರು. ಜನಸಂಚಾರೀ ಮಾರ್ಗಗಳ ಪಕ್ಕಗಳಲ್ಲಿದ್ದ ಮರಗಳಿಗೆ ಅವರನ್ನು ನೇತು ಹಾಕಿ ಪೈಶಾಚಿಕ ಕೊಲೆಗಡುಕತನ ಪ್ರದರ್ಶಿಸಿ ಜನಸ್ತೋಮ ಭೀತಿಗೊಳ್ಳುವಂತೆ ಮಾಡಿದ್ದ ಸಮಾಚಾರಗಳು ಬರುತ್ತಲೆ ಇದ್ದವು. ಮೊಗಲರ ಕೊನೆಯ ಚಕ್ರವರ್ತಿ ಬಹಾದ್ದೂರು ಶಾಹನು ೨೧ ಸೆಪ್ಟೆಂಬರ್

೧೮೫೭ರಂದು ಸೆರೆಯಾಗಿ ದಿಲ್ಲಿಯ ಪತನದೊಂದಿಗೆ ಸ್ವಾತಂತ್ರ್ಯ ಸಂಗ್ರಾಮದ ದಿಕ್ಕು ಬದಲಾಯಿತು. ಫಲಿತಾಂಶಗಳು ಖಚಿತವಾಗಿ ಬ್ರಿಟಿಷರ ಪರವಾಗಿ ತಿರುಗ ಹತ್ತಿದವು. ಈಗಾಗಲೇ ತಿಳಿಸಿರುವಂತೆ ಝೂಂಸಿ, ಮೀರತ್, ದಿಲ್ಲಿ, ಕಾನ್ಪುರ, ಲಕ್ನೋ, ಔಧ, ಗ್ವಾಲಿಯಾರ್‌ಗಳು ಬ್ರಿಟಿಷರ ವಶವಾಗಿದ್ದವು. ದಕ್ಷಿಣ ರಾಜ್ಯಗಳ ವಿಧಿಯೂ ಇದಕ್ಕಿಂತ ಬೇರೆಯಾಗಿದ್ದಿಲ್ಲ. ಹೈದರಾಬಾದ್, ರಾಯಚೂರ, ವಿಜಾಪುರ, ಧಾರವಾಡ ಜಿಲ್ಲೆಗಳ ಎಲ್ಲ ಭಾಗಗಳು. ಆಂಗ್ಲರ ವಶವಾಗಿ ಅವರ ಆಡಳಿತ ಸ್ಥಿರವಾಗಿ ನೆಲೆಗೊಂಡಿತ್ತು.

ನಿಜಾಮ ಸರಕಾರದ ಮಂತ್ರಿಯಾದ ಸಾಲಾರಜುಂಗ ಹಾಗೂ ವನವರ್ತಿಯ ರಾಜಾ ರಾಮೇಶ್ವರರಾವ್ ಇವರು ಆಂಗ್ಲರ ಕೈಗೊಂಬೆಗಳಾಗಿ ಅವರ ಸಹಾಯಕರಾಗಿ ನಡೆದುಕೊಳ್ಳು ತ್ತಿದ್ದರು. ಈಗ ಏನಿದ್ದರೂ ಬ್ರಿಟಿಷರ ಅತ್ಯಂತ ಭಯಂಕರ ಎದುರಾಳಿ ಪುಳಿಂದ ಪುಲಿಯಾದ ರಾಜಾವೆಂಕಟಪ್ಪ ನಾಯಕನೊಬ್ಬನೇ. ಆದರೆ ಆತನು ಬಂಡುಗಾರನೆಂದು ಸಾಬೀತು ಪಡಿಸದೆ ಆತನ ಮೇಲೆ ಆಕ್ರಮಣ ಗೈಯುವುದು ಸಾಧ್ಯವಿದ್ದಿಲ್ಲ ಸಾಕ್ಷೀಕರಿಸುವ ಆಧಾರಗಳಿಗಾಗಿಯೇ ಈಗ ಸಿದ್ಧತೆ ನಡೆದಿತ್ತು.

ಕ್ಯಾಂಪಬೆಲ್ಲನಿಂದ ಪತ್ರಗಳ ಸಮಾಚಾರವು ರೆಸಿಡೆಂಟನಿಗೆ ತಲುಪಿದ್ದೇ ತಡ ಆಂಗ್ಲ ಸರ್ಕಾರದ ವಿರುದ್ಧ ಆರಬ-ರೋಹಿಲೆ ಜನರನ್ನು ನೌಕರಿಯಿಲ್ಲಿಟ್ಟುಕೊಂಡದ್ದು ರಾಜ ಅಪರಾಧವಾದರೆ ಆಂಗ್ಲರ ವಿರುದ್ಧ ಹೋರಾಡಬೇಕೆಂಬುದನ್ನು ತಿಳಿದೂ ಸಹ ಅರಬ ಮತ್ತು ರೋಹಿಲೆ ಜನರು ಹೈದರಾಬಾದಿನಿಂದ ಹೊರಗೆ ಹೋಗಬಾರದೆಂಬ ನಿರ್ಬಂಧವನ್ನು ನಿರ್ಲಕ್ಷಿಸಿ ಸುರಪುರ ರಾಜನಲ್ಲಿ ನೌಕರಿಗೆ ಸೇರಿಕೊಂಡದ್ದು ಅವರ ಘೋರ ಅಪರಾಧವಾಗಿದೆ. ಕಾರಣ ರಾಜನನ್ನು ಸೈನಿಕ ಶಿಬಿರಕ್ಕೆ ಕರೆಯಿಸಿ ವಿಚಾರಣೆ ಮಾಡುವುದರ ಜೊತೆಗೆ ಸುರಪುರಕ್ಕೆ ಹೋಗಿರುವ ಎಲ್ಲ ಕೂಲಿಕಾರ ಸಿಪಾಯಿಗಳಿಗೆ ತಕ್ಕ ಶಿಕ್ಷೆಯಾಗಬೇಕು. ಅವರನ್ನು ನಿಶಸ್ತ್ರ ರನ್ನಾಗಿ ಮಾಡಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದೂ ಎಲ್ಲ ಸೈನಿಕ ತುಕಡಿಗಳು ಬರುವವರೆಗೆ ಕಾದಿದ್ದು ಒಮ್ಮೆಗೇ ದಾಳಿ ಮಾಡಿ ಸುರಪುರವನ್ನು ವಶಪಡಿಸಿಕೊಳ್ಳ ತಕ್ಕದೆಂದೂ ಆಜ್ಞೆ ಆತನಿಂದ ಬಂದಿತು. ಅದರಂತೆ ನಿಶ್ಚಿತ ಕಾರ್ಯಕ್ರಮಗಳು ಪ್ರಾರಂಭವಾದವು. ಇಂಗ್ಲಿಷರ ಸೈನ್ಯ ಬರುತ್ತಿರುವ ಸಮಾಚಾರ ದಟ್ಟವಾಗಿ ಹರಡಿತ್ತು. ಕ್ಯಾಂಪಬೆಲ್ಲನು ಈಗ ಸುರಪುರದಲ್ಲಿರುವುದು ಸುರಕ್ಷಿತವಲ್ಲವೆಂದು ತಿಳಿದು ಲಿಂಗಸೂರಿನಲ್ಲಿದ್ದ ಕ್ಯಾಪ್ಟನ್ ವಿಂಡ್‌ಹ್ಯಾಮನ ಕ್ಯಾಂಪಿನತ್ತ ಹೋದನು. ಆಂಗ್ಲ ಸೇನೆಗಳು ಎಲ್ಲಾ ನಾಲ್ಕು ಕಡೆಗಳಿಂದಲೂ ಬಂದು ದೇವದುರ್ಗದಲ್ಲಿ ನೆಲೆಯೂರಿ ಸ್ವಲ್ಪ ಸೈನ್ಯವನ್ನು ಅಲ್ಲಿ ಉಳಿಸಿ ಉಳಿದೆಲ್ಲ ಸೈನಿಕರೊಂದಿಗೆ ದಾಳಿ ಮಾಡಲು ನಿಶ್ಚಯಿಸಿ ರುಕ್ಮಾಪುರದ ಬಯಲಿನಲ್ಲಿ ಸೈನ್ಯವು ಬಂದಿಳಿ ಯಿತು.

೬ನೇ ಫೆಬ್ರವರಿ ೧೮೫೮ ರಂದು ಇನ್ನೊಂದು ಕಡೆಯಿಂದ ಕ್ಯಾಪ್ಟನ್ ವಿಂಡಹ್ಯಾಮನ ಕ್ಯಾಂಪಿನ ಲಿಂಗಸೂಗೂರುನಲ್ಲಿದ್ದ ಸೈನ್ಯವು ಸುರಪುರದೆದುರು ಠಾಣೆ ಹಾಕಿತು. ತಮ್ಮ ಮೇಲೆ ಆಕ್ರಮಣಗೈಯಲು ಬಂದ ಕ್ಯಾಂಪಿನ ಮೇಲೆ ೭.೨.೧೮೫೮ ರಂದು ಸುರಪುರದ ಕಡೆಯಿಂದ ಹಲ್ಲೆ ಪ್ರಾರಂಭವಾಯಿತು. ಎತ್ತರದ ಸ್ಥಳಗಳಿಂದ ತೋಪುಗಳು ಹಾಕಲು ಪ್ರಾರಂಭವಾದ ಕೂಡಲೇ ಕ್ಯಾಪ್ಟನ್ ವಿಂಡ್‌ಹ್ಯಾಮನೂ ಪ್ರತಿಯಾಗಿ ತೋಪುಗಳನ್ನು ಹಾರಿಸಲು ಪ್ರಾರಂಭಿಸಿದಾಗ ಸುರಪುರದ ಸೈನ್ಯವು ಮುಂದುವರೆಯಲು ಸಾಧ್ಯವಾಗದೆ ಸ್ತಬ್ಧ ವಾಗಿ ನಿಂತಿತು. ಮೇಜರ್ ಹ್ಯೋಗ ನೇತೃತ್ವದ ಆಂಗ್ಲಸೇನೆಯೂ ದಿನಾಂಕ ೮.೨.೧೮೫೮ರ ಹೊತ್ತಿಗೆ ಕ್ಯಾಪ್ಟನ ವಿಂಡ್‌ಹ್ಯಾಮನ ಸೈನ್ಯದಲ್ಲಿ ಬಂದು ಸೇರಿಕೊಂಡಿತು. ಬ್ರಿಟಿಷ ಸೈನ್ಯವು ವೆಂಕಾಪುರ ದಿಡ್ಡಿ-ಶಿಬಾರ-ಬಂಡಿ ಸೀಮೆಯಿಂದ ಮುನ್ನುಗ್ಗಿ ಬರುತ್ತಿರುವಾಗ ಎದುರಿನಲ್ಲಿದ್ದ ಸುರಪುರದ ದಂಡು ಪ್ರತಿಭಟಿಸುತ್ತಿರುವುದೆಂದೂ ನ್ಯೂಬೆರಿಯು ಪ್ರತ್ಯತ ಒಡ್ಡಲು ಭಯಂಕರ ಕದನವೇರ್ಪಟ್ಟು ಕ್ಯಾಪ್ಟನ್ ನ್ಯೂಬೆರಿಯು ಮಡಿದ, ಆತನ ಸಹಾಯಕ ಸ್ಟೂಅರ್ಟನೂ ಗಂಭೀರವಾಗಿ ಗಾಯಗೊಂಡನು. ಮರಣಿಸಿದ ನ್ಯೂಬೆರಿಯಾ ಈಗಲೂ ರುಕ್ಷ್ಮಾಪುರದ ಹತ್ತಿರ ನಮಗೆ ನೋಡಲು ಸಿಗುತ್ತದೆ.

ಸುರಪುರದ ಅಧಿಕಾರಿಗಳು ಆಂಗ್ಲರ ಮೋಸಗಾರಿಕೆಯ ತಂತ್ರಕ್ಕೆ ಬಲಿಯಾಗಿ ರಾಜನಿಗೆ ದ್ರೋಹ ಬಗೆದರು. ಇಂಥ ಕೆಟ್ಟ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸೇನೆಯೊಂದಿಗೆ ಕಾಯುವುದು ಕಠಿಣ ತಮ್ಮ ಕೆಲಸವಷ್ಟೇ ಅಲ್ಲದೆ. ಬುದ್ದಿಗೇಡಿತನವೂ ಆಗವುದೆಂದರಿತ ವೆಂಕಟಪ್ಪ ನಾಯಕನು. ಈ ದುರ್ಧರ ಪ್ರಸಂಗದಲ್ಲಿ ಕೋಪಗೊಂಡಿದ್ದ ಬ್ರಿಟಿಷರೊಂದಿಗೆ ವ್ಯವರಿಸುವಲ್ಲಿ ನಿಜಾಮನೇನಾದರೂ ಸಹಾಯಕನಾಗಬಹುದೇನೋ ಎಂದು ಯೋಚಿಸಿ ಆ ಬಗ್ಗೆ ಆಪ್ತಲೋಚನೆಗೈದನು. ದಿವಾನ ಮತ್ತುಆತನ ಅಳಿಯ ಇಬ್ಬರೂ ರಾಜನ ವಿಚಾರ ಸೂಕ್ತ ವೆಂದು ಅಭಿಪ್ರಾಯಪಟ್ಟರು.

ದಿವಾನ ಮುದ್ದೋ ಭೀಮರಾವ್ ಮತ್ತು ಆತನ ಅಳಿಯ ವಾಗಿನಗೇರಿ ರಾಮಣ್ಣರ ಮೋಸದಿಂದ ಸಾಲಾರಜಂಗ ಮನೆಯಲ್ಲಿ ದೊರೆ ಸೆರೆ ಸಿಕ್ಕಾಗ ಆತನನ್ನು ಸಿಕಂದರಬಾದ ಜೈಲಿನಲ್ಲಿಡಲಾಯಿತು.

ಸಿಕಂದರಬಾದಿನಲ್ಲಿ ಸೆರೆಮನೆಯಲ್ಲಿದ್ದಾಗ ರಾಜನಿಗೆ ಟೇಲರನ ಭೇಟಿಯಾಯಿತು. ಟೇಲರನು ಉಲ್ಲೇಖಿಸಿದಂತೆ "ಒಂದು ವೇಳೆ ರಾಜನು ಅಪೇಕ್ಷೆ ಪಟ್ಟರೆ ಸ್ವತಃ ರೆಸಿಡೆಂಟನು ಆತನನ್ನು ಭೇಟಿಯಾಗಲು ಬರುವುನೆಂದು ತಿಳಿಸಿದಾಗ ರಾಜನು ಕೊಟ್ಟ ಉತ್ತರವು ಅತ್ಯಂತ ಗಮನಾರ್ಹವಾಗಿದೆ". ನಾನು ನನ್ನ ಜೀವನವನ್ನುಳಿಸಲು ರೆಸಿಡೆಂಟನನ್ನು ಬೇಡಿಕೊಳ್ಳಬೇಕೆಂಬ ಅಪೇಕ್ಷೆ ಆತನಿಗಿದ್ದುದಾದರೆ ಅದೆಂದಿಗೂ ಆಗದ ಮಾತು. ಇಂಗ್ಲೀಷರು ನನ್ನನ್ನು ಉಳಿಸಿದರೆ ನಾನು ಅವರ ಋಣಿಯಾಗಿರುವೆ. ಆದರೆ ಹೇಡಿಯಂತೆ ಜೀವವನ್ನುಳಿಸಲು ಅವರನ್ನು ಬೇಡಿಕೊಳ್ಳಲಾರೆ. ಮತ್ತು ನನ್ನವರೊಡನೆ ವಿಶ್ವಾಸ ಘಾತಮಾಡಲಾರೆ. ಎಂತಹ ಕೀಳು ಬೇಡನಾದರೂ ಸೆರೆಯಲ್ಲಿದ್ದು ಜೀವಿಸಲಾರ. ನಾನಂತೂ ರಾಜನು. ನನ್ನನ್ನು ತೋಪಿನ ಬಾಯಿಗೆ ಕಟ್ಟಿ ಹಾರಿಸಿದರೆ ನಾನು ಅಂಜುವುದಿಲ್ಲ. ಆದರೆ ಒಂದೇ ಮಾತು. ಕಳ್ಳನಂತೆ ನನ್ನನ್ನು ಗಲ್ಲಿಗೆ ಹಾಕಬಾರದು, ಗಲ್ಲಿಗೆ ಹಾಕುವಂತಹ ಕೆಲಸವನ್ನೇನೂ ನಾನು ಮಾಡಿಲ್ಲ ಎಂದು ಹೇಳಿರುವುದು ತಿಳಿದು ಬರುತ್ತದೆ.

ಈ ಸಂದರ್ಭದಲ್ಲಿ ಬ್ರಿಟಿಷರ ವಿಚಾರ ಲಹರಿಯೆ ಬೇರೆಯಾಗಿತ್ತು. ಬ್ರಿಟಿಷ್ ಬ್ರಿಗೇಡಿ ಯರನ ನೇತೃತ್ವದ ಮಿಲಿಟರಿ ಅಧಿಕಾರಿಗಳ ನ್ಯಾಯಾಲಯವು ರಾಜನ ವಿರುದ್ಧ ವಿಚಾರಣೆಯ ನಾಟಕವೊಂದನ್ನು ನಡೆಸಿತು. ನಿಜವಾಗಿಯೂ ಸ್ವಾತಂತ್ರ್ಯ ಪ್ರೇಮಿ. ಬ್ರಿಟಿಷರ ಅತ್ಯಂತ ದೊಡ್ಡ ಹಗೆಯಾದ ರಾಜಾ ವೆಂಕಟಪ್ಪ ನಾಯಕನನ್ನು ಹೇಗಾದರೂ ಸರಿ ಮುಗಿಸಲೇ ಬೇಕಾಗಿತ್ತು. ಇಲ್ಲದಿದ್ದರೆ ದಕ್ಷಿಣ ಭಾರತದಲ್ಲಿ ಅವರು ನಿಲ್ಲಲು ಸಾಧ್ಯವೇ ಇಲ್ಲದಾಗುತ್ತದೆ ಎಂದು ಅವರ ದೃಢ ನಿಶ್ಚಯ ನೇರವಾಗಿ ಆತನನ್ನು ಕೊಂದರೆ ಇಡೀ ದಕ್ಷಿಣ ಭಾರತದ ಜನ ಬಂಡುಗೈಯುವುದು ನಿಶ್ಚಿತ. ಆದ್ದರಿಂದ ನಾಲ್ಕು ವರ್ಷಗಳವರೆಗೆ ಮದ್ರಾಸ ಸಮೀಪದ ಚಂಗಲ ಪೇಟೆಯ ದುರ್ಗದಲ್ಲಿ ಆತನಿಗೆ ಬೇಕಾದ ಹೆಂಡಂದಿರೊಡನೆ ಸೆರೆಯಲ್ಲಿಟ್ಟರು. ಒಂದು ದಿನ ಒಳ್ಳೆಯ ನಡೆವಳಿಕೆ ತೋರಿದರೆ ಆತನ ರಾಜ್ಯವನ್ನು ಹಿಂದಿರುಗಿಸುವಂತೆ ಆಜ್ಞೆ ಕೊಟ್ಟರು. ಈ ಆಜ್ಞೆಯ ಅನುಷ್ಠಾನಕ್ಕಾಗಿ ಬ್ರಿಟಿಷ ಸೈನಿಕರ ಸರ್ಪಗಾವಲಿನಲ್ಲಿ ರಾಜನನ್ನು ಕರೆದುಕೊಂಡು ಹೋಗುತ್ತಿರುವಾಗ ಅಂಬರ ಪೇಟೆಯಲ್ಲಿ (ಸಿಕಿಂದರಬಾದಿಗೆ ಸಮೀಪವೆ ಇದೆ) ಮೊದಲನೆಯ ವಿಚಾರ ಹಾಕಿದಾಗ, ಮರುದಿನ ಬೆಳಗಿನಲ್ಲಿ ಡೇರೆಯೊಳಗಿನಿಂದ ಗುಂಡು ಹಾರಿದ ಶಬ್ದ ಕೇಳಿಸಿತು. ಗುಂಡು ರಾಜನ ಹೊಟ್ಟೆಯೊಳಗಿನಿಂದ ಹಾಯ್ದು ಬೆನ್ನಲ್ಲಿ ತೂರಿ ಹೊರಗೆ ಹೋಗಿತ್ತು. ಸ್ವಾತಂತ್ರ್ಯ ವೀರ ರಾಜಾ ವೆಂಕಟಪ್ಪನಾಯಕ ವೀರಸ್ವರ್ಗವನ್ನಪ್ಪಿದ್ದ ಆದರೆ ರಾಜನು ತನ್ನನ್ನು ತಾನೇ ಹೊಡೆದುಕೊಂಡು ಮರಣ ಹೊಂದಿದ ಎಂಬ ಸುದ್ದಿ ಹಬ್ಬಿಸಲಾಯಿತು. ಇದರೊಂದಿಗೆ ೨೨೨ ವರ್ಷಗಳ ಕಾಲ ರಾಜ್ಯವಾಳಿದ ಗೋಸಲ ವಂಶಕ್ಕೆ ರಾಜ್ಯ ಲಕ್ಷ್ಮೀಯ ಅನುಗ್ರಹ ತಪ್ಪಿತು. ಹಳೆಯ ವೈಭವಗಳೆಲ್ಲ ಮರೆ ಯಾದವು.

<u>ಆಧಾರ ಗ್ರಂಥಗಳು</u>

೧. ಮರೆಯಲಾಗದ ಸುರಪುರ ರಾಜರ ಚರಿತ್ರೆ, ಶ್ರೀ ಬಿ. ಕೃಷ್ಣಮಾಚಾರ್ಯ ರಾಜಗುರು, ಶ್ರೀಮತಿ ಆರ್.ಪಿ. ಜೈನ್ ಪ್ರಕಾಶನ, ಸುರಪುರ, ೨೦೦೩.

೨. ಸಾಗರನಾಡು ದರ್ಶನ (ಸಂಶೋಧನಾತ್ಮಕ ಲೇಖನ-ಕವನಗಳ-ಸಂಕಲನ)ಸ್ಮರಣ ಸಂಚಿಕೆ, ಮಹಾಕವಿ ಲಕ್ಷ್ಮೀಶ ವಚನ ಸಂಘ, ಸುರಪುರ, ೧೯೮೫.

# ಸಿಂಧೂರ ಲಕ್ಷ್ಮಣ ಮತ್ತು ಬ್ರಿಟಿಷರ ಆಳ್ವಿಕೆ

ಭಾರತದಲ್ಲಿ ವಸಾಹತುಶಾಹಿ ಆಳ್ವಿಕೆ ಆರಂಭವಾದಾಗಿನಿಂದ ಹಲವು ನಿಟ್ಟಿನಲ್ಲಿ ವಿಭಿನ್ನ ವರ್ಗದ ಜನ ಪ್ರತಿಭಟಿಸುತ್ತಾ ಬಂದಿದ್ದಾರೆ. ಎಷ್ಟೋ ಜನ ಎಲೆ ಮರೆಯ ಕಾಯಿಯಂತೆ ಹೋರಾಡಿದ್ದಾರೆ. ಈ ವಸಾಹತು (ಸಾಮ್ರಾಜ್ಯಶಾಹಿ) ಕಟ್ಟಡವನ್ನು ಉರುಳಿಸು ವಲ್ಲಿ ಬಿದ್ದ ಒಂದೊಂದು ಹೊಡೆತವು ಮುಖ್ಯವಾಗುತ್ತವೆ (ಒಂದೇ ಹೊಡೆತದಿಂದ ಅದು ಸ್ಫೋಟಗೊಳ್ಳಲಿಲ್ಲ). ಆದ್ದರಿಂದ ಒಂದು ಹೊಡೆತ ಪ್ರಜ್ಞಾಪೂರ್ವಕ-ವಾಗಿರಬಹುದು. ಆದರೆ ಕೊಟ್ಟಿದ್ದು ಹೊಡೆತನೇ ತಾನೆ?

ಬ್ರಿಟಿಷರು ನಮ್ಮ ದೇಶವನ್ನು ಆಳಲು ಆರಂಭಿಸಿದ ಕಾಲದಿಂದಲೂ ನಮ್ಮವರು ಸಾಮ್ರಾಜ್ಯವನ್ನು ಹೇಗಾದರೂ ಉಳಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಹಲವಾರು ಚಳವಳಿ ಗಳನ್ನು ಆರಂಭಿಸಿದರು. ೧೯೦೮ರಲ್ಲಿ ತಿಲಕರು ಸೆರೆಮನೆ ವಾಸಕ್ಕೆ ಗುರಿಯಾದಾಗ ಕ್ರಾಂತಿಕಾರಿ ಚಳವಳಿ, ೧೯೨೦ರಲ್ಲಿ ಅಸಹಕಾರ ಚಳವಳಿ ಹೀಗೆ ಅನೇಕ ಚಳವಳಿಗಳ ಮುಖಾಂತರ ನಮ್ಮ ಸ್ವರಾಜ್ಯಕ್ಕೆ ಪಣವನ್ನು ತೊಟ್ಟು ಜೀವನ ಮರಣದಿಂದ ಹೋರಾಡಿದ್ದಾರೆ.

ಇಂಥ ಸಂದರ್ಭದಲ್ಲಿ ಬ್ರಿಟಿಷರು ಮೇಲ್ವರ್ಗದವರನ್ನು ಎತ್ತಿಕಟ್ಟುತ್ತಿದ್ದರು. ಯಾಕೆಂದರೆ ಜಮೀನ್ದಾರರ ಜೊತೆಗಿದ್ದು ಅವರನ್ನು ಮಾಂಡಲೀಕರನ್ನಾಗಿ ಮಾಡಿ ತಮ್ಮ ಕೆಲಸ ಮಾಡಿ ಕೊಳ್ಳುತ್ತಿದ್ದರು. ದುರ್ಬಲರನ್ನು ಬ್ರಿಟಿಷರು ಯಾವತ್ತು ಎತ್ತಿಹಿಡಿಯುತ್ತಿದ್ದಿಲ್ಲ. ಬೇಡರು ಕ್ಷಾತ್ರ ಪರಂಪರೆಯುಳ್ಳವರಾಗಿದ್ದರು. ಇವರಿಗೆ ಆಶ್ರಯ ಕೊಡುವ ಯಾವುದೇ ರಾಜ್ಯಗಳು, ಸಂಸ್ಥೆಗಳು ಇರಲಿಲ್ಲ.

ಇವರು ಯೋಧ ವೃತ್ತಿ ನಿಂತು ಹೋಗಿ ಅನುವಂಶಿಕ ಉದ್ಯೋಗ ಇರಲಿಲ್ಲ. ಸಹಜವಾಗಿ ಸ್ವಾತಂತ್ರ್ಯ ಪ್ರಿಯರಾದ ಇವರು ಬ್ರಿಟಿಷರನ್ನು ಕಠೋರವಾಗಿ ವಿರೋಧಿಸುತ್ತಿದ್ದರು. ಉದಾ ಹರಣೆಗೆ ರಾಜವೆಂಕಟಪ್ಪ ನಾಯಕ. ಸಾಮಾನ್ಯ ಬೇಡರು ಸಹ ಬ್ರಿಟಿಷರಿಗೆ ಸಿಂಹ ಸ್ವಪ್ನರಾದರು. ಉದಾಹರಣೆಗೆ ಹಲಗಲಿ ಬೇಡರು.

ಈ ಹಿನ್ನೆಲೆಯಲ್ಲಿ ಸಿಂಧೂರ ಲಕ್ಷ್ಮಣನಂತವರು ಭಾರತೀಯರೇ ಆದ ಬಲಿಷ್ಠರಿಂದ ಕಿರುಕುಳಕ್ಕೆ ಒಳಗಾಗಿ ಬೇರೆ ಉಪಾಯ ಕಾಣದೆ ಸಿಡಿದೇಳಬೇಕಾಯಿತು. ಈ ಬಲಿಷ್ಠರು ಬ್ರಿಟಿಷರ ಹಿಂಬಾಲಕರಾಗಿರುವುದರಿಂದ ಸ್ವಾಭಾವಿಕವಾಗಿ ಬ್ರಿಟಿಷರ ವಿರೋಧಿಯಾಗಿ ಸ್ವಾತಂತ್ರ್ಯ ಕಹಳೆಯನ್ನು ಊದಿದರು.

ಸಿಂಧೂರ ಲಕ್ಷ್ಮಣನಿಗೆ ಸ್ವಾತಂತ್ರ್ಯ ಪ್ರೇಮದ ಸಂಸ್ಥಾನಿಕರಾಗಲಿ, ಸಂಸ್ಥೆಗಳಲ್ಲಾಗಲಿ ಇವನಿಗೆ ಆಶ್ರಯ ದೊರೆಯದೆ ಇದ್ದುದರಿಂದ ಬ್ರಿಟಿಷರನ್ನು ವಿರೋಧಿಸುತ್ತಲೆ ಬಂದನು. ಶ್ರೀಮಂತರ ಲೂಟಿಗೆ ಆರಂಭಿಸಿದರು. ಆದರೆ ಇವನು ನಿಸ್ವಾರ್ಥಿಯಾದ್ದರಿಂದ ಲೂಟಿ ಮಾಡಿದ ಹಣವನ್ನು ಬಡವರಿಗೆ ಹಂಚುತ್ತಿದ್ದನು. ಆದರೆ ಶ್ರೀಮಂತರು ಬಡವರಿಗೆ ಸಹಾಯ ಮಾಡುತ್ತಿರಲಿಲ್ಲ.

ಈ ದಿಸೆಯಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ, ಅದರಲ್ಲೂ ಕಡು ಬಡತನದಿಂದ ಬಂದ ವ್ಯಕ್ತಿ. ಸ್ವಾಭಿಮಾನದ ಆಗರವಾಗಿ, ಬಡವರ ಭಾಗ್ಯನಿಧಿಯಾಗಿ, ಬಲ್ಲವ ಸಿರಿವಂತರಿಗೆ ಶೂಲದ ವಿಧಿಯೂ ಧೂತನಂತೆ ಆಂಗ್ಲರಿಗೆ ಸಿಂಹ ಸ್ವಪ್ನನೂ ಅಪಾರ ಗುಣಮಣಿಯೂ ಆದಂತ ಲಕ್ಷ್ಮಣನಿದ್ದನು. ಮುಂಬಯಿ ಕರ್ನಾಟಕದ ಉತ್ತರ ಗಡಿಯಲ್ಲಿ 'ಜತ್ತ' ಎಂಬುದು ಒಂದು ಚಿಕ್ಕ ಸಂಸ್ಥಾನವಾಗಿತ್ತು. ಅದನ್ನು ಕೊಲ್ಲಾಪುರದ ರಾಜಮನೆತನಕ್ಕೆ ಸಂಬಂಧಿಸಿದ 'ಢಪಳೆ' ಎಂಬ ಅರಸು ಆಳುತ್ತಿದ್ದನು. ಆ ಸಂಸ್ಥಾನದಲ್ಲಿ ಸಿಂಧೂರು ಎಂಬುದು ಒಂದು ಚಿಕ್ಕ ಹಳ್ಳಿ. ಅಲ್ಲಿ ಗ್ರಾಮಸ್ಥರಕ್ಕೆ ಕೆಳಗೆ ಓಲೇಕಾರ(ಹಳಬ)ನಾಗಿ ಕೆಲಸ ಮಾಡುತ್ತಿದ್ದ ಲಕ್ಷ್ಮಣನು.

ಈಗೀನ ಬೀಳಗಿ ತಾಲೂಕಿನಲ್ಲಿ ಬರುವ ಜತ್ತಿ (ಈಗ ಆ ಊರಿಗೆ ತೆಗ್ಗಿಎಂದು ಕರೆಯು ತ್ತಾನೆ) ಎಂಬ ಆಗಿನ ಸಂಸ್ಥಾನದಲ್ಲಿ ಸಿಂಧೂರ ಎಂಬ ಊರಲ್ಲಿ ನಡೆದ ಘಟನೆ ಇದಾಗಿದೆ. ಮುಂಬಯಿ ಕರ್ನಾಟಕ ಇದ್ದಾಗ ಜಮಖಂಡಿ ತಾಲೂಕಿನಲ್ಲಿ ಬೀಳಗಿ ತಾಲೂಕ ಮತ್ತು ಜತ್ತಿ ಉಮಾರಾಣಿ ಸಂಸ್ಥಾನದಲ್ಲಿ ನಡೆದ ಘಟನೆ ಎಂದು ತೋರುತ್ತದೆ.

ಸಿಂಧೂರ ಲಕ್ಷ್ಮಣನನ್ನು ಕುರಿತ ಲಾವಣಿಗಳು ಹಾಗೂ ಮಹಾಕಾವ್ಯಗಳು ಬಂದಿವೆ. ಆ ಪ್ರದೇಶಕ್ಕೆ ಸೇರಿದ ಬಿದರಿ ಉಳ್ಳಾಗಡ್ಡಿ ಪರಪ್ಪನೆಂಬುವವರು ಲಾವಣಿಯನ್ನು ರಚಿಸಿದ್ದಾರೆ. ‘ಬಿಜಾಪೂರ ಜಿಲ್ಲೆಯ ಲಾವಣಿಗಳು’, ‘ಧಾರವಾಡ ಜಿಲ್ಲೆಯ ಲಾವಣಿಗಳು’ ಮತ್ತು ‘ಜನಪದ ವೀರಗೀತೆಗಳು’ ಬಿ.ಬಿ. ಮಹಿಶವಾಡಿ ರಚಿಸಿದ್ದಾರೆ. ಅಲ್ಲದೇ ಡಾ. ಆರ್.ಸಿ. ಮುದ್ದೇಬಿಹಾಳ ರವರು ಸಿಂಧೂರ ಲಕ್ಷ್ಮಣ ಮಹಾಕಾವ್ಯವನ್ನೇ ಬರೆದಿದ್ದಾರೆ.

ಈತನನ್ನು ಕುರಿತ ಹಾಡುಗಳು ಇಂದಿಗೂ ಜನಮನದಲ್ಲಿ ಅಳಿಸದೇ ಹಾಗೇ ಉಳಿದು ಬಂದಿದ್ದು ನಮಗೆ ಕಾಣುತ್ತದೆ.

“ಜಮಖಂಡಿ ನಾಡ ಪರಗಣಿ ಜತ್ತಿ ಉಮರಾಣಿ ಆಳವಂಥ ಧನೀ
ಡಪ್ಪಳೆ ಸರಕಾರ ಡಪ್ಪಳೆ ಸರಕಾರ ||ಪಲ್ಲವಿ||
ಜತ್ತಿ ತಾಲೂಕ ಪೈಕಿ ಸಣ್ಣಹಳ್ಳಿ ಸಿಂಧೂರು
ಸಿಂಧೂರಾಗ ಲಕ್ಷ್ಮಣ ಹುಟ್ಯಾನ | ಬಂಟನೆನಿಸ್ಯಾನ |
ಕೊಟ್ಟ ವಚನ | ತಪ್ಪುದಿಲ್ಲಾ |ತಪ್ಪುದಿಲ್ಲಾ

ಘಟ ಹೋಗು ತನಕ ಹಿಡಿದ ಹಟ ಬಿಡಾವಲ್ಲ
ಪಾಂಡವರೊಳಗ ಇದ್ದಾಂಗ ಭೀಮ | ಚೆಲುವ ಚಂದ್ರಾಮ |
ತೇಟ ಹೋಳಿಕಾಮ ರೂಪದಲ್ಲಿ ಡೌಲಾ ರೂಪದಲ್ಲಿ ಡೌಲಾ |
ಹೆಂತಾ ತಾಯಿ ಹೊಟ್ಟೆಯಲ್ಲಿ ಹುಟ್ಟಿಯಾದ ಪ್ರಭುಲ್”

ಜತ್ತಿ ತಾಲೂಕಿನ ಒಂದು ಪುಟ್ಟಹಳ್ಳಿ ಸಿಂಧೂರ ಲಕ್ಷ್ಮಣನು ಹುಟ್ಟಿದ ಊರು. ಹುಟ್ಟಿ ಆ ವ್ಯಕ್ತಿ ಬಂಟನೆನಿಸಿಕೊಂಡು ಬೆಳೆದವನು. ವಚನ ಕೊಟ್ಟ ಮೇಲೆ ಎಂದೆಂದಿಗೂ ಆತ ತನ್ನ ಘಟ ಹೋದರೂ ಪರವಾಗಿಲ್ಲ. ಆದರೆ ಹಿಡಿದ ಹಟವನ್ನು ಬಿಡುವವ ಅಲ್ಲ. ಪಂಚ ಪಾಂಡವರಲ್ಲಿ ಭೀಮ ಇದ್ದಾಂಗ ಚಂದ್ರಾಮನ ಹಾಗೆ ಚೆಲುವ ನೋಡುವವರಿಗೆ ಹೋಳಿ ಕಾಮನ ಹಾಗೆ ಕಾಣುತ್ತಿದ್ದ ರೂಪದಲ್ಲಿ ಕೂಡ ಡೌಲು. ಇಂಥ ವ್ಯಕ್ತಿ ಒಂದು ದಿನ ಸರಕಾರದ ನೌಕರಿಯಲ್ಲಿ ಓಲೇಕಾರನಾಗಿ ಕೆಲಸ ಮಾಡುತ್ತಿದ್ದ ಅಲ್ಲದೇ ದರೋಡೆಯನ್ನು ಮಾಡುತ್ತಿದ್ದ. ಓಟದಲ್ಲಿ ಕೂಡ ಬಹಳ ಪ್ರಸಿದ್ಧನಾಗಿದ್ದ. ವೇಗದಲ್ಲಿ ಓಡುವಮೊಲವನ್ನು ಅದಕ್ಕಿಂತ ಮುಂದೆ ಓಡಿ ಮೊಲ ಹಿಡಿಯುತ್ತಿದ್ದ. ಅಷ್ಟೇ ಗುರಿಯೂ ಕೂಡ ಇತ್ತು. ಹಾಗೆಯೇ ಇಂಥ ಗುರುತಿಗೆ ಕಲ್ಲು ಎಸೆಯಬೇಕೆಂದರೆ ಅದಕ್ಕೆ ಹೋಗಿ ಬಡಿಯುವ ಹಾಗೆ ಎಸೆಯುತ್ತಿದ್ದ. ಹೀಗಿರುವಾಗ ಒಂದು ದಿನ ಆಕಸ್ಮಾತ್

“ಒಬ್ಬ ಅಯ್ಯನಾರನ ಕಾಲಾಗ ಮರ್ಮ ಬಿತ್ತು |
ಆತ ವಿಪರೀತ ಹೇಳತಾನ ನಿಂತ |ಭಿಡೇ ಇಡಲಿಲ್ಲಾ |
ಒಂದು ದಿನಾ ಲಕ್ಷ್ಮಣ ತಳ್ಳಿ ಮಾಡ್ಯಾನ ಅಯ್ಯನಾರನ ಮ್ಯಾಲ |
ಊರಿದ್ದಲ್ಲಿ ಹೊಲಗೇರಿ ಉಂಟು |ಮಾಡಿ ರಿಪೋರ್ಟ
ಬಂದ ಇನ್ಸ್‌ಪೆಕ್ಟರ್ ಆದ ಬೆಂಕಿ ಲಾಲ |ಬೆಂಕಿ ಬಾಲ
ಕರಕರ ಹಲ್ಲ ತಿಂತಾನ ಲಕ್ಷ್ಮಣನ ಮ್ಯಾಲ”

ಹೀಗೆ ಒಂದು ಸಣ್ಣ ತಪ್ಪಿನಿಂದಾಗಿ ಆತ ಸೊಕ್ಕಿನಿಂದ ಮಾತಾಡಿದ್ದಕ್ಕಾಗಿ ಈತ ಮೊದಲೇ ಕ್ಷಾತ್ರ ತೇಜಕ್ಕೆ ಎಂದು ತಲೆಬಾಗಿ ಗೊತ್ತಿರಲಿಲ್ಲ. ಈಗ ಅಂಥಾ ಪ್ರಸಂಗ ಬಂದ ಲಕ್ಷ್ಮಣ ಅವನನ್ನು ತಳ್ಳಿ ಬಿಡುತ್ತಾನೆ. ಆಗ ಅವನು ರಿಪೋರ್ಟ್ ಮಾಡುತ್ತಾನೆ. ಆಗ ಇನ್ಸ್‌ಪೆಕ್ಟರ್ ಬಂದು ಇವರ ಮೇಲೆ ಕರಕರ ಹಲ್ಲು ಕಡಿದರು. ಸಿಪಾಯಿಗಳೊಂದಿಗೆ ಈತನನ್ನು ಕರೆಕಳಿಸು ತ್ತಾನೆ. ಆಗ ಇನ್ಸ್‌ಪೆಕ್ಟರ್ ಬೇಡಿ ಹಾಕಲಿಕ್ಕೆ ಹೋದ. ಲಕ್ಷ್ಮಣ ಕೈಕೊಸರಿ ಬಾಳ ಹುಸಾರಿಂದಾ ಬಾರೋ ಎದ್ದು ಇಷ್ಟು ಅಂದು ಎರಡು ಹೆಜ್ಜೆ ಹಿಂದ ಸರಿದು ಕಟ್ಟಿ ಜಿಗಿದು ಓಡಿ ಹೋಗು ತ್ತಾನೆ. ಕೂಡಲೇ ಇನ್ಸ್‌ಪೆಕ್ಟರ್ ಅವನನ್ನು ಅವನಿಗಿಂತ ಚದುರಾಗಿ ಓಡುತ್ತಾ ಭರ್ಚಿಯನ್ನು ಎಸೆಯುತ್ತಾನೆ. ಅದು ಲಕ್ಷ್ಮಣನ ತೊಡೆಗೆ ನೆಡುತ್ತದೆ. ಆಗ ಒಮ್ಮೆಲೇ ಗಾಯದಿಂದ ರಾಮಾ ರಾಮಾ ಎಂದು ಭೂಮಿ ಮೇಲೆ ಬಿದ್ದು ಬಿಡುತ್ತಾನೆ. ಆಗ ದಾವಾಖಾನೆಗೆ ಹಾಕುತ್ತಾರೆ. ಡಾಕ್ಟರು ಎರಡು ದಿನಗಳಲ್ಲಿ ಆರಾಮ ಮಾಡುತ್ತಾರೆ. ನಂತರ ಇನ್ಸ್‌ಪೆಕ್ಟರ್ ಅವನನ್ನು ಒಯ್ದು ಜೈಲಿಗೆ ಹಾಕುತ್ತಾರೆ.

ಇತ್ತ ಕಡೆ ಲಕ್ಷ್ಮಣನ ಅಳಿಯರಾದ ಪರಿಸ್ಯಾ, ಬಸ್ಯಾ, ನರಸ್ಯಾ. ಈ ಮೂರು ಜನ ಸೇರಿ ರಾತ್ರೋ ರಾತ್ರಿ ಜತ್ತಿಗೆ ಬಂದು ಜೈಲು ಕಂಬಿ ಮುರಿದು ಲಕ್ಷ್ಮಣನನ್ನು ಕರೆದುಕೊಂಡು ಹೋಗುತ್ತಾರೆ. ಆಗ ಪೇಟೆಯಲ್ಲಿ ನಿಂತು ಜನರಿಗೆ ಎಚ್ಚರಿಕೆ ಕೊಡುತ್ತಾರೆ.

"ಸಾರಿ ಹೇಳತಾರ |ನಿಂತ ಪ್ಯಾಟ್ಯಾಗ |ನಡು ಪ್ಯಾಟ್ಯಾಗ
ಗಂಡಸಿನ ಮಗ ಇದ್ರ ಬಂದ ಹಿಡಿರೋ ನೀವು ನಮಗ |
ಕ್ಯಾಕಿ ಹೊಡೆದು ಹೊಂಟರು ಊರಾಗ
ಯಾರ್ಯಾರು ಬರಲಿಲ್ಲ ಸನೇದಾಗ ||

ಆಗ ಬ್ರಿಟಿಷರಿಗೆ ಹೇಗೋ ಆ ಸುದ್ದಿಯು ತಿಳಿಯುತ್ತದೆ. ಅವರು ಲಕ್ಷ್ಮಣನ ಮೇಲೆ ಸಿಟ್ಟಾಗುತ್ತಾರೆ. ಕೂಡಲೇ ಸಮಾಚಾರವನ್ನು ಕಳಿಸಿ ಅವರನ್ನು ಹುಡುಕಲು ಹಚ್ಚುತ್ತಾರೆ. ಅವರಿಗೆ ಲಕ್ಷ್ಮಣ ಸಿಗುವುದಿಲ್ಲ. ಲಕ್ಷ್ಮಣ ಟೋಳಿ ಕಟಗೊಂಡು ಗುಡ್ಡದಲ್ಲಿ ಅಡಗಿಕೊಂಡು ಕುಳಿತಿದ್ದ. ಈ ಸುದ್ದಿ ಸುತ್ತಕಡೆ ಹಬ್ಬಿತು. ಆಗ ಬ್ರಿಟಿಷರು ಹಿಡಿದುಕೊಟ್ಟವರಿಗೆ ಒಳ್ಳೆಯ ಬಹುಮಾನ ಕೊಡುತ್ತೇವೆ ಎಂದು ಡಂಗೂರ ಸಾರುತ್ತಾರೆ. ಆಗ ಒಬ್ಬ ಇನ್ಸ್‌ಪೆಕ್ಟರ್ ಬಂದು ನಾನು ಹಿಡಿದುಕೊಡುತ್ತೇನೆಂದು ವೀಳ್ಯವನ್ನು ಸ್ವೀಕರಿಸುತ್ತಾನೆ. ನಾಳೆನೇ ಅವನ ನೆತ್ತರವನ್ನು ಕುಡಿಯುತ್ತೇನೆ ಎನ್ನುತ್ತ ಸಂತೋಷದಲ್ಲಿರುವನು. ಆ ಸುದ್ದಿಯೂ ಲಕ್ಷ್ಮಣನಿಗೆ ಮುಟ್ಟುತ್ತದೆ. ಮರುದಿನ ಇನ್ಸ್‌ಪೆಕ್ಟರ್ ಗುಡ್ಡಕ್ಕೆ ಬರುತ್ತಾನೆ ತನ್ನ ಸಿಬ್ಬಂಧಿಗೆ ಹೇಳುತ್ತಾನೆ. ಈಗ ಲಕ್ಷ್ಮಣ ಸಿಕ್ಕರೆ ನೆತ್ತರನ್ನು ಕುಡಿತೀನಿ ಎನ್ನುತ್ತಾನೆ. ಈ ಮಾತು ಲಕ್ಷ್ಮಣನಿಗೆ ಕೇಳುತ್ತದೆ. ಆಗ ಎಲ್ಲಾರು ಸಜ್ಜಾಗುತ್ತಾರೆ. ಇನ್ಸ್‌ಪೆಕ್ಟರ್ ಮುಂದೆ ಬರುವದೊಳಗೆ ಅವನು ಮುಂದೆ ಜಿಗಿದು ನಿಲ್ಲುತ್ತಾನೆ. ಆಗ ಲಕ್ಷ್ಮಣ.....

"ಒಬ್ಬರೊಬ್ಬರು ತಕ್ಕ ಮುಕ್ಕಬಿದ್ದ | ಒಬ್ಬನ ಒಬ್ಬ ವಗದ
ಲಕ್ಷ್ಮಣ ಕೆಳಗೆ ಬಿದ್ದಾನು ಕೆಳಗೆ ಬಿದ್ದಾನು
ಎದಿಮ್ಯಾಲ ಕುಂತು ಇನ್ಸ್‌ಪೆಕ್ಟರ್ ಪಿಸ್ತೂಲ ಹಿಡಿದಾನು |
ಅವಸರಮಾಡಿ ನರಸ್ಯಾ ಓಡಿ ಬಂದು |ಕೊರಳಿಗೆ ಹಗ್ಗ ವಗದ |
ಜಗ್ಗಿ ಜೋಲಿ ಹೊಡೆದ | ಇನ್ಸ್‌ಪೆಕ್ಟರ್‌ನನ್ನು ಕೆಡವ್ಯಾನು ನೆಲಕ್ಕೆ
ಕುಡುಗೋಲು ತಗೊಂಡು ಕರಕರ ಕುತ್ತಿಗೆ ಕೊಯ್ದನು||

ಇನ್ಸ್‌ಪೆಕ್ಟರ್ ಕುತ್ತಿಗೆ ಕೊಯ್ಯು ಅವನ ಕತ್ತನ್ನು ಕಲ್ಲೋಳಗಿ ಊರಿನ ಅಗಸಿಗೆ ಕತ್ತು ಕಟ್ಟಿ ಚಾವಡಿಯಲ್ಲಿ ಕುಳಿತುಕೊಳ್ಳುತ್ತಾರೆ. ಆಗ ಯಾರ ಇವರ ತಂಟೆಗೆ ಬರುವುದಿಲ್ಲ. ಆಗ ವಾಲೀಕಾರಗ ಎಲ್ಲಾ ತಿಳಿಸಿ ಅರಭಾಂವಿ ಕ್ಷೇತ್ರಕ್ಕೆ ಬಂದು ಅಜ್ಜನವರ ಪಾದಕ್ಕೆ ನಮಸ್ಕರಿಸಿ ಅಲ್ಲಿಯೇ ಊಟ ನೀರು ಕೊಟ್ಟರು. ಅಲ್ಲಿ ರಡ್ಡರಬ್ಬಿ ಬಸ್ಯಾ, ದರೂರ ಸಿದ್ದ್ಯಾ, ನೆಡೋಗಿ ಹೊಲಿಯಾ ದುಂಡ್ಯಾ ಇವರೂ ಲಕ್ಷ್ಮಣನ ಟೋಳೆಯಲ್ಲಿ

ಕೂಡಿದರು. ಎಲ್ಲಾರು ಜೊತೆ ಸೇರಿ ಗಲಗಲವಾದ ಮಾಡಿ ದೇಸಾಯೀನುರ ಹಳ್ಳಿ ಕೊಳ್ಳೆ ಹೊಡೆದು ಕಾಕಣರ (ಕಾಬಂಡಿಕಿ) ತೋಟದಲ್ಲಿ ಊಟಮಾಡಿ ಮಲಗುತ್ತಾರೆ.

ಮತ್ತೇ ಬ್ರಿಟಿಷರು ಶೋಧನೆ ನಡೆಸಿ ಇವರು ಇರುವ ಸ್ಥಳವನ್ನು ಪತ್ತೆ ಹಚ್ಚಿ ಜತ್ತಿ ಪೊಲೀಸರು ದಂಡ ಸೇರಿ ಇವರು ಇರುವ ಸ್ಥಳ ನೋಡಿ ಗುಂಡು ಹಾರಿಸುತ್ತಾರೆ. ಆಗ ಮಲಗಿದ್ದ ಇವರು ಗುಂಡಿನ ಸದ್ದು ಕೇಳಿ ಗಾಭರಿಯಾಗಿ ಎದ್ದು ಒಬ್ಬರ ಕೊಟ್ಟರು ಜಿಗಿದು ಪಾರಾಗಾಕ ಹತ್ತಿದರು. ಆಗ ಬ್ರಿಟಿಷರು ಬಸ್ಯಾನ ಹಿಡಿದು ಕೊಂದು ಬಿಟ್ಟರು. ಆದರೆ ನಡೋಗಿ ಹೊಲಿಯಾರ ದುಂಡ್ಯಾ ತಪ್ಪಿಸಿಕೊಂಡು ಪ್ರಾಣವನ್ನು ಉಳಿಸಿಕೊಂಡನು.

ಐದು ಅಕ್ಕಡಿ ಭಾವಿ ಅಡ್ಡ ಅಗಲಾ |
ನರಸ್ಯಾ ಜಿಗಿದ ಹೋದನು ಸಿಗಲಿಲ್ಲಾ ||
ಬಾಳ ಬಂಟ ಸಾವ್ಯಾ ಗೋಪಾಲ
ವೈದ ಹಾಕ್ಯಾರ ಬೆಳಗಾವಿ ಜೈಲಾ
ಲಕ್ಷ್ಮಣ ಹೊಡಿತಾನು ಕಲ್ಲಾ
ಬಹಳ ಮಂದಿದು ಮುರಿದಾನು ಕಾಲ

ಅಲ್ಲಿಂದ ಪಾರಾಗಿ ಬೆಳಗಾಂವಿಯ ಇಂಡಲಗಿ ಜೈಲಿಗೆ ಬಂದು ಜೈಲು ಮುರಿದು ಸಾವ್ಯಾ ಗೋಪಾಲ ಇಬ್ಬರನ್ನು ಬಿಡಿಸಿಕೊಂಡು ಅಲ್ಲಿಂದ ತಿಗಡಿಗೆ ಹೋಗಿ ದರೋಡೆ ಮಾಡಿ ಆ ಊರನ ಚನ್ನಪ್ಪ ಸಾವುಕಾರ ಊಟ ಹಾಕುತ್ತಾನೆ. ಅಲ್ಲಿಂದ ಗೋಪಿಚಂದ ಗುಜ್ಜನ ಅವರ ಮನೆಯನ್ನು ಹಗಲು ದರೋಡೆ ಮಾಡುತ್ತಾರೆ. ಆ ದುಡ್ಡನ್ನು ಬಡ ಬಗ್ಗರಿಗೆ ಹಂಚುತ್ತಾರೆ. ಕಳವು ಮಾಡಿದ ಮಾಲನ್ನು ಹೊರಲಾರದೆ ತೆಗೆದುಕೊಂಡು ಹೊರಟಾಗ ದಾರಿ ದಾರಿಯಲ್ಲಿ ರೂಪಾಯಿ ಚೆಲ್ಲಿ ಬಿಟ್ಟಿದ್ದರು.

ಕೂಡಲೇ ಇವರನ್ನು ಹುಡುಕಲಿಕ್ಕೆ ಅಲ್ಲಲ್ಲಿ ತಪಾಸಣೆಗೆ ಕಳಿಸಿದರು. ಆದರೆ ಒಂದು ತಿಂಗಳ ಆಕಡೆ ತಿರುಗಿ ಹೋಗಲೇ ಇಲ್ಲ. ಆನಂತರ ಮುಂಡಗನೂರಿಗೆ ಬರುತ್ತಾರೆ. ಆಗ ಗಾರ್ಮನ್ ಸಾಹೇಬ ಮೋಟಾರು ತೆಗೆದುಕೊಂಡು ಬರುತ್ತಾನೆ. ಆಗ ಲಡಾಯಿ ಪ್ರಾರಂಭ ವಾಗುತ್ತದೆ.

ಮುಂಜಾನೆ ಲಡಾಯಿ ಸುರುವಾತು
ಸಂಜಿತನ ನಡಿತು |ಸಾಹೇಬ ತೆಳಗ |ಲಕ್ಷ್ಮಣ ಮ್ಯಾಗ |
ಗುಡ್ಡದ ಮ್ಯಾಗ |ಸಾಹೇಬಗ ಹೇಳೆಂಬ ಹುಶಾರಿರಲಿ ಮೈಮ್ಯಾಗ
ಹೇಳಿ ಹೇಳಿ ಹೊಡೆದರೆ ಪಲ್ಲಾ |
ಸಾಹೇಬ ನಿಂತಿದ್ದ ಮೋಟಾರದ ಮ್ಯಾಲ |
ಟೊಪ್ಪಿಗೆಗೆ ಗುಂಡು ಬಡಿದಿತಲ್ಲಾ |
ಸಿಡಿದ ಬಿದ್ದಿತ ಭೂಮಿಯ ಮೇಲಾ |
ಮೋಟಾರ ತಿರುವಿ ಸಾಹೇಬ ನಿಂದರಲಿಲ್ಲಾ |
ಚಣ್ಣದ ತುಂಬ ಮುಳಗಿತು ಮಲಾ |
ಲಕ್ಷ್ಮಣನ ಹೇಳತಾನ ತಿರುಗಿ ನಾಳೆ ಬರತೀನ
ನಿನ್ನ ಹಿಡಿತೇನ ಇರಲಿ ಎಚ್ಚರಾ

ಆಗ ಲಕ್ಷ್ಮಣ ಸಾಹೇಬನಿಗೆ ಹೇಳತಾನೆ ನಾಳೆ ರಾತ್ರಿ ಚಾವಡಿಗೆ ಬರತೇನಿ ಮೈಮರೆತು ಮಲಗಬೇಡ. ಗಂಟು ಹಾಕಿಕೋ ಪದರಿನ್ಯಾಗ ಎಂದು ಗದರಿಸುತ್ತಾನೆ. ಆದರೇನು ಮಾಡು ವುದು ಮೊದಲೇ ಸಾಹೇಬ ಹೆದರಿ ದಣಿದು ಬಂದು ಮಲಗಿದ್ದ ಚೆನ್ನಾಗಿ ನಿದ್ದೆ ಮಾಡುತ್ತಿದ್ದ.

ಆಗ ಲಕ್ಷ್ಮಣ ಸಾಬ್ಯಾನ, ಗೋಪಾಲಗ, ನರಸ್ಯಾಗ, ಹೇಳಿ ಕತ್ತಿ, ಬರ್ಚಿ, ಪಿಸ್ತೂಲ, ಬಂದೂಕ ಕೈಯಲ್ಲಿ ತೆಗೆದುಕೊಂಡು ಬರುತ್ತಾರೆ. ರಾತ್ರಿ ಚೌಡಿಗೆ ಆಗ ಅವರು

"ಇಬ್ಬರ ಪೋಲಿಸರ ಮೀಸೆ ಬಳಿಸ್ಯಾಕ
ನಿಂತ ವದರ್ಯಾರ |
ಜಗ್ಗಿ ಎಬಿಸ್ಯಾರ ಮಲಗಿದ ಸಾಹೇಬಗ
ಕುದುರಿ ಹಗ್ಗ ಕೊಯ್ದು ಪಾರಾ ಆದರೋ ಸಿಗದಂಗೆ"

ಆಗ ಸಾಹೇಬ ಕೋಪ ತಾಳಿ ಗುಡ್ಡವನ್ನು ತಿರುಗುತ್ತಾನೆ. ಆದರೆ ಒಬ್ಬರು ಸಿಗುವುದಿಲ್ಲ. ಆದರೆ ಇವರು ತಮರಿ ಮಟ್ಟ ಗುಡ್ಡದಲ್ಲಿ ತಪ್ಪಿಸಿ ಕುಳಿತಿದ್ದರು. ಅಲ್ಲಿಂದ ಅಮೀನಗಡಕ್ಕೆ ಬಂದರು. ಆಗ ಒಂದು ಸ್ಥಳ ನೋಡಿ ಚಿಂತೆ ಇಲ್ಲದೆ ಆರಾಮದಿಂದ ಇರುತ್ತಾರೆ.

ಮುಂದೆ ಲಕ್ಷ್ಮಣ ತೆಗ್ಗಿನಾಯಕರ ಮನೆಗೆ ಹೋಗುತ್ತಾನೆ. ಆಗ ಸರಕಾರದವರು ಅವನಿಗೆ ಇನಾಮು ಕೊಡುವ ಆಸೆ ಹುಟ್ಟಿಸಿ ಪಿತೂರಿಯಿಂದ ಲಕ್ಷ್ಮಣನನ್ನು ಅವನ ಪಾರ್ಟಿಯ ಜನರನ್ನು ಹಿಡಿಯಲು ಯತ್ನಿಸಿ ವಿಫಲರಾಗಿರುತ್ತಾರೆ. ನಾಯಕ ತನಗೆ ಇನಾಮು ಬರುವುದೆಂದು ತೆಗ್ಗಿನಾಯಕ ಇವರಿಗೆ ಅನ್ನ ನೀರು ಕೊಡುತ್ತಾನೆ. ಆಗ ಇವನನ್ನು ನಂಬಿದ ಲಕ್ಷ್ಮಣ ಇಲ್ಲಿಯವರೆಗೆ ತಾನು ದರೋಡೆ ಮಾಡಿದ ಕಡೇವು, ಕಂತಿಸರ ಒಂದೂ ಉಳಿಯದಂಗ ದರೋಡೆ ಮಾಡಿದ್ದನ್ನು ತೆಗ್ಗಿ ನಾಯಕನಿಗೆ ಕೊಟ್ಟ ಬಿಡುತ್ತಾನೆ.

ಆಗ ಲಕ್ಷ್ಮಣನಿಂದ ಅಪಾರ ಸಂಪತ್ತು ಪಡೆದಿದ್ದು ಬ್ರಿಟಿಷರಿಗೆ ಗೊತ್ತಾಗಿ ಸರಕಾರ ತಪಾಸಣೆ ಮಾಡಿಸುತ್ತಾರೆ. ಪಿತೂರಿ ನಡೆಸಿ ತೆಗ್ಗಿ ನಾಯಕನನ್ನು ಹಿಡಿಯುತ್ತಾರೆ. ಅವನಿಗೆ ಲಕ್ಷ್ಮಣನನ್ನು ಹಿಡಿದು ಕೊಡದೆ ಇದ್ರೇ ನಿನ್ನ ಪ್ರಾಣವನ್ನೇ ತೆಗೆದುಕೊಳ್ಳುತ್ತೇನೆ. ಅವರು ಅಂದಾಗ ತೆಗ್ಗಿ ನಾಯಕನಿಗೆ ಮತ್ತಷ್ಟು ಎಚ್ಚರಿಕೆ ಹುಟ್ಟಿ ಆಗ ತೆಗ್ಗಿ ನಾಯಕ

"ಕಬಲಾದ ತೆಗ್ಗಿನಾಯಕ ಅಂಜಿ ತನ್ನ ಮನಕ್ಕ
ಲಕ್ಷ್ಮಣನ ಕೊಲ್ಲಿಸುದಕ |ಹಾಕಿದಾನ ಲೆಕ್ಕ
ವಚನ ಕೊಟ್ಟನಾಗ"

ಬ್ರಿಟಿಷರ ಪ್ರಾಣ ಬೆದರಿಕೆಯಿಂದ ದ್ರೋಹ ಮಾಡಲಿಕ್ಕೆ ಆತ ಹೇಳುತ್ತಾನೆ. ನಾಳೆ ಶನಿವಾರ ತೋಟದಾಗ ಔತಣಕೂಟ ಇಡುತ್ತೇನೆ. ಅಲ್ಲೇ ನಾನು ದೇವರಿಗೆ ಮಾಡುತ್ತೇನೆ. ಟಗರು ಕಡಿಸುತ್ತೇನೆ. ಶೇರೆ, ಸಿಂದಿ ತರಿಸುತ್ತೇನೆ. ಯಾರದೇನು ಅಂಜಿಕೆ. ತಿಂದು ಮಜಾ ಮಾಡೋನು ಎನ್ನುತ್ತಾನೆ. ಆಗ ನಾಯಕನನ್ನು ನಂಬಿದ ಲಕ್ಷ್ಮಣ ಒಪ್ಪಿಕೊಂಡು ಆ ಔತಣ ಕೂಟಕ್ಕೆ ಹೋಗುತ್ತಾನೆ ಆಗ ನಾಯಕ.

"ಶೆರೆ, ಸಿಂದಿ ಸಾಕಷ್ಟು ಕಳಿಸ್ಯಾನ
ಕುರಿಕೋಳಿ ಮಾಡಸ್ಯಾನ
ಊಟಕ ಕುಂದಿರಸ್ಯಾನ
ಮನಿಯಾಗ ಉಳಿದಾನ"

ಹೀಗೆ ಎಲ್ಲ ಸಜ್ಜು ಮಾಡಿ ತಾನು ಮನೆಯಲ್ಲಿ ಉಳಿದು ವಾಲಿರಾಡಗ ಪಿತೂರಿ ಮಾಡಿ ಎಲ್ಲಿ ಹೇಗೆ ಕೊಲ್ಲಬೇಕೆಂದು ಎಲ್ಲವನ್ನು ತಿಳಿಸುತ್ತಾನೆ. ಊಟ ಮಾಡಲಿಕ್ಕೆ ಆರಂಭಿಸಿದಾಗ ರಾತ್ರಿ ಆಗಿರುತ್ತದೆ. ಆಗ ಲಕ್ಷ್ಮಣನ ಎದುರಿಗೆ ಹತ್ತಿರದಲ್ಲಿ ಒಂದು ಕಂದೀಲು ಇರುತ್ತದೆ. ಅದೇ ಬೆಳಕಿಗೆ ಗುರಿ ಇಟ್ಟು ನೀನು ಗುಂಡು ಹೊಡಿ ಎಂದು ಹೇಳಿರುತ್ತಾನೆ. ಆಗ ಊಟ ಮಾಡಲು ಆರಂಭಿಸುತ್ತಾರೆ.

ತಾಟ ತಂದ ಮುಂದಿಟ್ಟಾನ ಹಾಲಕ್ಕಿ ನುಡಿದಿತಾಗ |
ನರಸ್ಯಾ ಹೇಳತಾನ ಲಕ್ಷ್ಮಣಗ |ಹಾಲಕ್ಕಿ ನುಡಿಯತೈತಿ
ಸಂಶೆ ಬರತೈತಿ | ನಂಗ ತಿಳಿತೈತಿ |ಮೋಸ ಇದರಾಗ |
ಲಕ್ಷ್ಮಣ ಕಬಲಾಗಲಿಲ್ಲ ಒಂದು ತುತ್ತು ಹಾಕಿದ ಬಾಯಾಗ |
ಡಮ್ಮನ್ನು ಶಬ್ದ ಕೇಳಿತ |ಗುಂಡು ಬಡದೀತು |ಘಾತ ಆದೀತ |
ಲಕ್ಷ್ಮಣನ ಎದಿಯಾಗ | ಎದಿಯಾಗ |ಮೋಸ ಮಾಡಿ
ಅಭಿಮನ್ಯುನ ಕೌರವರು ಕೊಲ್ಲಿಸಿದಂಗ |

ನರಸ್ಯಾ ಏಳೋ ಮಾವ ಹಿಡಿಯಾಕ ಬಂದಾರ ಎನ್ನತ್ತಿರುವಂತೆ ಬಂದು ಮುತ್ತಿಗೆ ಹಾಕಿ ಸಾವ್ಯಾ ಗೋಪಾಲರನ್ನು ಹಿಡಿದರು ಅವರನ್ನು ತೆಗೆದುಕೊಂಡು ಜಮಖಂಡ್ಯಾಗ ಘಾಸಿ(ಪಾಸಿ) ಶಿಕ್ಷೆ ಕೊಟ್ಟರು.

ಈ ರೀತಿ ಲಕ್ಷ್ಮಣನು ಸ್ವಾಭಿಮಾನಕ್ಕೆ ಧಕ್ಕೆ ಬಂದು ಅಯ್ಯನ ಮೇಲೆ ಸೇಡು ತೀರಿಸಿ ಕೊಂಡರೆ ಅದೇ ಮುಂದೇ ದೊಡ್ಡದಾಗಿ ಇಷ್ಟೇಲ್ಲಾ ಅನಾಹುತವಾಯಿತು. ಲಕ್ಷ್ಮಣ ಎಂದಿಗೂ ಕೂಡ ಕೊಟ್ಟ ಮಾತಿಗೆ ತಪ್ಪಿ ನಡೆಯದೇ ಬ್ರಿಟಿಷರ ಕೂಡ ತನ್ನ ಛಲವನ್ನೇ ಸಾಧಿಸುತ್ತ ತನ್ನ ಪ್ರಾಣವನ್ನು ಬಲಿಯಾಗಿಸಿಕೊಂಡು ಬಿಡುತ್ತಾನೆ. ಧೀರೋದ್ಧಾತ ಲಕ್ಷ್ಮಣನಂಥವರು ನಮ್ಮ ದೇಶದಲ್ಲಿ ಇದ್ದರೆ ಬ್ರಿಟಿಷರು ಇನ್ನು ಬೇಗ ನಮ್ಮ ದೇಶ ಬಿಟ್ಟು ಹೊರಡುತ್ತಿದ್ದರೋ ಏನೋ? ಏನೇ ಆಗಲಿ ಆತ ತನ್ನ ಹಿತೈಷಿಗಳಿಗಾಗಿ ಹೋರಾಡಿದ ಬಡಬಗ್ಗರಿಗೆ ದರೋಡೆ ಮಾಡಿದುದರಲ್ಲಿ ಹಂಚಿ ಚಿರವಾಗಿ ನಮ್ಮೆಲ್ಲರ ಮಧ್ಯ ಅಮರರಾಗಿ ಉಳಿದಿದ್ದಾರೆ. ಇದು ಸಿಂಧೂರ ಲಕ್ಷ್ಮಣನ ಶೌರ್ಯಕ್ಕೆ ಸಾಕ್ಷಿಯಾಗಿದೆ.

ಪರಾಮರ್ಶನ ಗ್ರಂಥಗಳು

೧. ವಾಲ್ಮೀಕಿ ಬಂಧು, ಅಕ್ಟೋಬರ್ ೨೦೦೨, ಸಂ.ಟಿ.ವಿ. ಕಟ್ಟಿಮನಿ.

೨. ಉತ್ತರ ಕರ್ನಾಟಕ ಜನಪದ ವೀರಗೀತೆಗಳು, ಲೇ. ಡಾ. ವೈ.ಎಫ್. ಸೈದಾಪೂರ.

೩. ಜನಪದ ವೀರಗೀತೆಗಳು, ಲೇ. ಬಿ.ಬಿ. ಮಹೀಶವಾಡಿ

೪. ಸಿಂಧೂರ ಲಕ್ಷ್ಮಣ, ಲೇ. ಡಾ. ಆರ್.ಸಿ. ಮುದ್ದೇಬಿಹಾಳ.

೫. ಬಿಜಾಪೂರ ಜಿಲ್ಲೆಯ ಲಾವಣಿಗಳು.

೬. ಧಾರವಾಡ ಜಿಲ್ಲೆಯ ಲಾವಣಿಗಳು.

# ಬುಡಕಟ್ಟು ನೆಲೆಯಲ್ಲಿ ಬೇಡರು

ಕರ್ನಾಟಕದಲ್ಲಿ ನಾಯಕ, ತಳವಾರ, ವಾಲ್ಮೀಕಿ, ಬೇಡ ಇವೇ ಮೊದಲಾದ ಹೆಸರುಗಳಿಂದ ಗುರುತಿಸಲ್ಪಡುವ ಬೇಡ ಸಮುದಾಯವನ್ನು ಬುಡಕಟ್ಟು ನೆಲೆಯಲ್ಲಿ ಪರಿಶೀಲಿಸುವುದು ಇಲ್ಲಿಯ ಪ್ರಧಾನ ಉದ್ದೇಶ. ಬೇಡರು ಕಾಲಗತಿಯಲ್ಲಿ ಬುಡಕಟ್ಟಿನ ಅನನ್ಯತೆಯನ್ನು ಎಷ್ಟು ಉಳಿಸಿಕೊಂಡಿದ್ದಾರೆ ಎಂದು ಗುರುತಿಸುವ ಕ್ರಮ ಒಂದೆರಡು ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಅಂಥವುಗಳಲ್ಲಿ ಒಂದು ಹೊರಗಿನಿಂದ ಬರುವಂತ ಹದ್ದು. ಮತ್ತೊಂದು ಒಳಗಿನಿಂದ ಬರುವಂತಹದ್ದು. ಬೇಡರು ಬುಡಕಟ್ಟು ಲಕ್ಷಣಗಳನ್ನು ಅಷ್ಟಾಗಿ ಉಳಿಸಿಕೊಂಡಿಲ್ಲ ಎಂದರೆ ಹೊರಗಿನವರು ಹಾಗಾದರೆ ಬೇಡರು ಮೀಸಲಾತಿಗೆ ಅರ್ಹರಲ್ಲ ಎನ್ನಬಹುದು (ನಾಯಕ ಅನ್ನುವ ಪದವನ್ನು ಶ್ರೇಷ್ಠವಾಗಿ ವ್ಯಾಖ್ಯಾನಿಸಿ, ಈ ನಾಯಕರಿಗೆ ಮೀಸಲಾತಿ ಪಟ್ಟಿಯಿಂದ ಹೊರಗಿಡಬೇಕೆಂದು ಕೆಲವು ತಿಂಗಳುಗಳ ಹಿಂದೆ ವಾದಿಸಿದ ದಾಸನೂರು ಕೂಸಣ್ಣ ಅವರ ವಿಚಾರಗಳನ್ನು ಇಲ್ಲಿ ಸ್ಮರಿಸಬಹುದು). ಇಲ್ಲ ಬೇಡರಲ್ಲಿ ಯಾವುದೋ ಒಂದು ಗುಂಪು ಮಾತ್ರ ಸ್ಪಷ್ಟ ಬುಡಕಟ್ಟು ಲಕ್ಷಣಗಳನ್ನು ಹೊಂದಿದೆ ಎಂದು ಹೇಳಿದರೆ ಒಳಗಿನವರು ಅಸೂಯೆ ಪರರಾಗುತ್ತಾರೆ -(ಸೋದರ ಸಮುದಾಯ ಪರಿಶಿಷ್ಟ ಜಾತಿಯಲ್ಲಿ ನಡೆಯುವ ಒಳ ಮೀಸಲಾತಿ ಗದ್ದಲ ಇಲ್ಲಿಯೂ ಆರಂಭವಾಗುತ್ತದೆ). ಹಾಗಾಗಿ ನನ್ನ ಇಲ್ಲಿಯ ಶೋಧನೆಗೆ ಸಂವಿಧಾನಾತ್ಮಕವಾಗಿ ದತ್ತವಾಗುವ ಮೀಸಲಾತಿ ಮತ್ತಿತರ ವಿಶೇಷ ಸೌಲಭ್ಯಗಳನ್ನು ಉಳಿಸಿಕೊಳ್ಳುವ ಅಥವಾ ಬಿಡುವ ಪ್ರಶ್ನೆಯಾಗದೆ, ಇಂಥ ಸೀಮಿತ ಪರಿಕಲ್ಪನೆಯನ್ನು ದಾಟುವ ಸಾಂಸ್ಕೃತಿಕ ಅಸ್ಮಿತೆಯ ಪ್ರಶ್ನೆ ಮುಖ್ಯವಾಗಿದೆ.

ಶೋಧನೆಗೆ ಮೊದಲು ಬುಡಕಟ್ಟು ಎಂದರೇನು? ಬುಡಕಟ್ಟಿನ ಪ್ರಧಾನ ಲಕ್ಷಣಗಳು ಯಾವುವು? ಎಂದು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಬುಡಕಟ್ಟುಗಳ ಬಗ್ಗೆ ಅಧ್ಯಯನ ಆರಂಭಿಸಿದವರಲ್ಲಿ ಭಾರತದ ಮಟ್ಟಿಗೆ ಬ್ರಿಟಿಷರೆ ಮೊದಲೆನ್ನಬಹುದು. ಅಧಿಕಾರಿಗಳು, ಕ್ರೈಸ್ತ ಪಾದ್ರಿಗಳು ಕ್ರಮವಾಗಿ ಆಡಳಿತ ಹಾಗೂ ಧರ್ಮ ಪ್ರಚಾರಗಳಿಗೆ ಅನುಕೂಲವಾಗುವಂತೆ ಬುಡಕಟ್ಟುಗಳ ಅಧ್ಯಯನ ನಡೆಸಿದ್ದಾರೆ. ಇಂಥವರ ಜೊತೆಗೆ ಕುತೂಹಲ ಹಾಗೂ ಅಪಾರ ಮಾನವೀಯ ಅಂತಃಕರಣದಿಂದ ಅಧ್ಯಯನ ನಡೆಸಿದ ವೆರಿಯರ್ ಎಲ್ವಿನ್ ಅಂಥವರು ಇದ್ದಾರೆ. ಬ್ರಿಟಿಷ್ ವಿದ್ವಾಂಸರು ‘Tribe’ ಎನ್ನುವ ಹೆಸರಿನಿಂದ ಗುರುತಿಸಿದ ಸಮುದಾಯ ಗಳನ್ನು ಸ್ವಾತಂತ್ರ್ಯ ನಂತರ ಅಧ್ಯಯನ ಮಾಡಿದ ದೇಶಿ ವಿದ್ವಾಂಸರು ಗಿರಿಜನರು, ಆದಿವಾಸಿ ಗಳು, ಬುಡಕಟ್ಟುಗಳು ಮೊದಲಾದ ಹೆಸರುಗಳಿಂದ ಕರೆದರು. ಮೇಲಿನ ಹೆಸರುಗಳೇ ಸೂಚಿಸುವಂತೆ ಮನುಕುಲದ ಮೂಲಪುರುಷರು, ಗಿರಿಗಳಲ್ಲಿ ವಾಸಮಾಡುವವರು ಬುಡಕಟ್ಟು ಜನ ಎನಿಸಿಕೊಂಡರು. ಬುಡಕಟ್ಟು ಎಂಬ ಪದಶಃ ಅರ್ಥವೂ ಕೂಡ ಅದೇ ಆಗಿದೆ. “ಬುಡ ಅಂದರೆ ಮೂಲ, ಕಟ್ಟು ಎಂದರೆ ಸಾಂಸ್ಕೃತಿಕ ಮೌಲ್ಯಗಳ ಕಟ್ಟುಕಟ್ಟಳೆ ಆಚರಣೆ. ಒಂದೇ ಮೂಲಕ್ಕೆ ಸೇರಿದ ಸಂಪ್ರದಾಯವನ್ನು ಪಾಲಿಸುವವರು ಬುಡಕಟ್ಟು ಜನ” (ಎಚ್.ಜೆ. ಲಕ್ಕಪ್ಪಗೌಡ, ೧೯೯೭; ೩೫೦) ಇಂಥ ವ್ಯಾಖ್ಯಾನಗಳು ಬುಡಕಟ್ಟನ್ನು ನಿಖರವಾಗಿ ವ್ಯಾಖ್ಯಾ ನಿಸಲಾರವು. ಆದ್ದರಿಂದ ಬುಡಕಟ್ಟು ಎಂದರೇನು ಎಂಬುದನ್ನು ವ್ಯಾಖ್ಯಾನಿಸುವುದಕ್ಕಿಂತ ಬುಡಕಟ್ಟು ಎಂದರೆ ಯಾವುದು ಎಂದು ಹೇಳುವುದು ಸುಲಭ. ಕರ್ನಾಟಕದ ಬುಡಕಟ್ಟೊಂ ದನ್ನು ಪ್ರಥಮವಾಗಿ ದೀರ್ಘ ಅಧ್ಯಯನಕ್ಕೆ ಒಳಪಡಿಸಿದ ತೀ.ನಂ.ಶಂಕರನಾರಾಯಣ ಅವರು ಅಂಥದೊಂದು ಪ್ರಯತ್ನ ಮಾಡಿದ್ದಾರೆ. ಅವರು ಹೇಳುವಂತೆ “ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಗಳು ಮಾತ್ರವಲ್ಲದೆ ಹರಿಜನರಿಂದ ಕೂಡಿದ ಐದನೇ ಜಾತಿಯೂ ಇದೆ. ....... ಈ ಜಾತಿಗಳನ್ನು ಬಿಟ್ಟು ಉಳಿದ ಹಿಂದೂ ಸಾಮಾಜಿಕ ವರ್ಗಗಳನ್ನೆಲ್ಲ ಭಾರತದಲ್ಲಿ ಬುಡಕಟ್ಟುಗಳೆಂದು ಕರೆಯಬಹುದು” (ತೀ.ನಂ. ಶಂಕರನಾರಾಯಣ, ೧೯೮೨; ೦೨). ಈ ತರಹದ ವ್ಯಾಖ್ಯಾನ ಕೂಡ ಇಂದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಬುಡಕಟ್ಟು ಜಾತಿಗಳಾಗುವ, ಜಾತಿ ಬುಡಕಟ್ಟುಗಳಾಗುವ ಈಗಿನ ಸಂಕೀರ್ಣ ಸಂದರ್ಭದಲ್ಲಿ ಮೇಲೆ ಸೂಚಿಸಿದಂತೆ ಬುಡಕಟ್ಟು ಗಳನ್ನು ಗುರುತಿಸುವುದು ಅಸಾಧ್ಯ.

ಬುಡಕಟ್ಟು ಎನಿಸಿಕೊಳ್ಳಬೇಕಾದರೆ ಒಂದು ಸಮುದಾಯ ಹೊಂದಿರಬೇಕಾದ ಅನೇಕ ಲಕ್ಷಣಗಳನ್ನು ವಿದ್ವಾಂಸರು ಪಟ್ಟಿ ಮಾಡಿದ್ದಾರೆ. ಅವುಗಳನ್ನು ಮುಂದಿನಂತೆ ಪಟ್ಟಿ ಮಾಡಬಹುದು.

ಅ. ಪ್ರತ್ಯೇಕ ಸಂಸ್ಕೃತಿ

ಆ. ರಕ್ತ ಸಂಬಂಧದ ಅತಿಯಾದ ಅವಲಂಬನೆ

ಇ. ಅನ್ಯವನ್ನು ಅನುಮಾನದಿಂದ ನೋಡುವ ದೃಷ್ಟಿ

ಈ. ಅತಿಯಾದ ಪಾವಿತ್ರ್ಯತೆ

ಉ. ದೈವದ ವಿಶಿಷ್ಟ ಕಲ್ಪನೆ ಹಾಗೂ ಅಪಾರ ಭಕ್ತಿ

ಊ. ಕಾಡಿಗೆ/ಪ್ರಕೃತಿಗೆ ಹತ್ತಿರವಾದ ಹಾಗೂ ಅವಲಂಬನೆಯ ಬದುಕು

ಋ. ಪ್ರತ್ಯೇಕ ಭಾಷೆ

ಈ ಎಲ್ಲಾ ಲಕ್ಷಣಗಳನ್ನು ಒಂದೇ ಸಮುದಾಯದಲ್ಲಿ ದೊರೆಯುವುದು ವಿರಳ. ಇಂದು ಶುದ್ಧ ಬುಡಕಟ್ಟುಗಳೆಂದು ಕರೆಸಿಕೊಂಡು ಸಮುದಾಯಗಳಲ್ಲಿ ಕೂಡ ಈ ಎಲ್ಲಾ ಅಂಶಗಳು ಪೂರ್ಣ ಪ್ರಮಾಣದಲ್ಲಿ ಸಿಗಲಾರವು. ಈ ಹಿನ್ನೆಲೆಯಲ್ಲಿ ಕರ್ನಾಟಕದ ಬೇಡ ಸಮುದಾಯ ದಲ್ಲಿ ದೊರೆಯುವ ಬುಡಕಟ್ಟು ಅಂಶಗಳನ್ನು ಗುರುತಿಸಬಹುದಾಗಿದೆ. ಇಲ್ಲಿಯೇ ಪ್ರಬಂಧದ ಮಿತಿಯನ್ನು ತಿಳಿಸುವುದು ಸೂಕ್ತ. ಪ್ರಸ್ತುತ ಪ್ರಯತ್ನದಲ್ಲಿ ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳ ಮ್ಯಾಸಬೇಡರ/ನಾಯಕರ ಹಟ್ಟಿಗಳ ಸಂಪ್ರದಾಯ, ಆಚರಣೆಗಳನ್ನು ವಿಶೇಷವಾಗಿ ಕ್ಷೇತ್ರಾಧ್ಯಯನದ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಹಾಗೆಯೇ ಆರಂಭದಿಂದ ಇಲ್ಲಿಯವರೆಗೆ ನಡೆದ ವಿದ್ವಾಂಸರ ಅಧ್ಯಯನಗಳಿಂದಲೂ ಹಲವಾರು ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

**ಸಾಂಸ್ಕೃತಿಕ ಅನನ್ಯತೆ**

ಪ್ರತ್ಯೇಕ ಸಂಸ್ಕೃತಿಯನ್ನು ಹೊಂದಿರುವುದು ಬುಡಕಟ್ಟು ಸಮುದಾಯಗಳ ಪ್ರಧಾನ ಲಕ್ಷಣ. ಸಮುದಾಯ ಒಂದರ ಉಗಮದಿಂದ ಆರಂಭಗೊಂಡ ಸಂಸ್ಕೃತಿ ನಿರಂತರವಾಗಿ ತನ್ನ ವಿಶಿಷ್ಟತೆಗಳೊಂದಿಗೆ ಮುಂದುವರೆಯುತ್ತದೆ. ಬುಡಕಟ್ಟುಗಳ ಇಂಥ ಸಂಗತಿಗಳು ಪುರಾಣ-ಆಚರಣೆ-ನಂಬಿಕೆ-ಸಂಪ್ರದಾಯಗಳ ಮೂಲಕ ಉಳಿದು ಬೆಳೆದಿರುತ್ತವೆ. ಈ ಹಿನ್ನೆಲೆಯೊಳಗೆ ಬೇಡರ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗಮನಿಸಬಹುದಾಗಿದೆ.

**ಜನನ :** ಬೇಡರ ಸಮುದಾಯಗಳಲ್ಲಿ ಜನನ ಸಂಬಂಧೀ ಆಚರಣೆಗಳು ಹಲವು ಸಾಮಾನ್ಯ ಸಂಗತಿಗಳಾದರೂ ಕೆಲವು ವೈಶಿಷ್ಟಪೂರ್ಣವಾಗಿವೆ. ಅಂಥವುಗಳಲ್ಲಿ ಜನನದ ಬಗ್ಗೆ ಇಟ್ಟುಕೊಂಡ ಮೈಲಿಗೆ ಭಾವ. ಕಾಡುಗೊಲ್ಲರಂತೆ ಬಾಣಂತಿಯನ್ನು ಪ್ರತ್ಯೇಕ ಗುಡಿಸಲಲ್ಲಿ ಇಡುವುದಿಲ್ಲ. ಆದರೂ ಹೆರಿಗೆಯಾದ ದಿನದಿಂದ ಮೂರು, ಐದು, ಏಳು, ಒಂಬತ್ತು, ಹನ್ನೊಂದು ದಿನಗಳಲ್ಲಿ 'ಮುಟ್ಟು ಹೊರಡಿಸುವ' ಆಚರಣೆ ಮಾಡುತ್ತಾರೆ. ಬೇವಿನ ಸೊಪ್ಪು, ಗೋವು ಗಂಜಳದ ಮೂಲಕ ಬಾಣಂತಿಯನ್ನು ಶುದ್ಧೀಕರಿಸುತ್ತಾರೆ. ಈ ಸಮಯದಲ್ಲಿ ಮಗುವನ್ನು ಮೊರದಲ್ಲಿಟ್ಟು ಪೋಷಿಸುತ್ತಾರೆ. ಹಾಗೆಯೇ ಅನೇಕ ರೀತಿಯ ಭವಿಷ್ಯದ ಭಯಂಕರ ಕಾಯಿಲೆಗಳ ನಿಷೇಧಕ್ಕೆ ಕೆಲವೊಂದು ಪೂರ್ವಯೋಜಿತ ಮದ್ದುಗಳನ್ನು ಮಗುವಿಗೆ ಕುಡಿಸುತ್ತಾರೆ. ಇಲ್ಲಿಯೇ ಹೇಳಿಬಿಡಬಹುದಾದ ಸಂಗತಿ ಮಗುವಿನ ನಾಮಕರಣದ್ದು. ಮಗು ವಿನ ಸೋದರತ್ತೆ ಹುರುಳಿ ಗುಗ್ಗುರಿ ಗಂಟು ಹೊತ್ತು ಹೆಸರನ್ನು ಕರೆಯುತ್ತಾಳೆ. ಗುಗ್ಗರಿ ಗಂಟು ಹೊತ್ತು ಮೂರು ಬಾರಿ ಮನೆಯ ಹೊಸ್ತಿಲನ್ನು ದಾಟಿ ಹೆಸರು ಹೇಳುವ ಕ್ರಮ ಅತ್ಯಂತ ಗಮನಾರ್ಹವಾದುದಾಗಿದೆ.

**ಋತುಮತಿ ಆಚರಣೆ :** ಋತುಮತಿ, ಹೆರಿಗೆ ಮೊದಲಾದವು ಕೃಷಿ ಮೂಲ ಸಂಸ್ಕೃತಿಗಳಲ್ಲಿ ಫಲವಂತಿಕೆಯ ಸಂಕೇತಗಳು. ಆದರೆ ಬುಡಕಟ್ಟು ಸಮುದಾಯಗಳಲ್ಲಿ ಇವು ಮೈಲಿಗೆಯ ಸಂಗತಿಗಳು. ಬೇಡರಲ್ಲಿ ಋತುಮತಿಯಾದ ಹೆಣ್ಣನ್ನು ತಕ್ಷಣವೇ ಹೊರಗೆ ಕಳುಹಿಸಿ, ಹಸಿರು ಸೊಪ್ಪಿನ (ವಿಶೇಷವಾಗಿ ಬೇವು/ಹೊಂಗೆ) ಗುಡಿಸಲು ನಿರ್ಮಿಸಿ ಅದರೊಳಗೆ ಬಿಡುತ್ತಾರೆ. ಒಂಬತ್ತು ಅಥವಾ ಹನ್ನೊಂದು ದಿನಗಳ ಕಾಲ ಋತುಮತಿಯಾದ ಹೆಣ್ಣುಮಗಳು ಆ ಗುಡಿಸಲಲ್ಲಿ ವಾಸಿಸುತ್ತಾಳೆ. ಈ ಮಧ್ಯೆ ನೆಂಟರಿಷ್ಟರು ರುಚಿ ರುಚಿಯಾದ ಬಗೆಬಗೆಯ ತಿಂಡಿ ತಿನಿಸುಗಳನ್ನು ಆಕೆಗೆ ಒದಗಿಸುವ ಕ್ರಮವಿದ್ದು, ಇದನ್ನು ಒಸಗೆ ಎನ್ನುತ್ತಾರೆ. ಸಮಯ ಮುಗಿದ ದಿನ ಸ್ನಾನ ಮಾಡಿಸಿ, ಸೋದರ ಮಾವನ ಹತ್ತಿರ ಬೇವಿನ ಕಡ್ಡಿಯಿಂದ ನಾಲಗೆ ಸುಡಿಸಿ, ಗೋವು ಗಂಜಳವನ್ನು ಪ್ರೋಮನೆಯ ಒಳಗೆ ಕರೆದುಕೊಳ್ಳುತ್ತಾರೆ. ಗಮನಾರ್ಹ ಸಂಗತಿ ಎಂದರೆ ಕೆಲವು ಬೇಡರ ಪ್ರದೇಶಗಳಲ್ಲಿ ಋತುಮತಿಯಾದ ತಕ್ಷಣ ಗುಡಿಸಲಿಗೆ ಕೂರಿಸದೆ, ಮದುವೆಯ ಸಂದರ್ಭಕ್ಕೆ ಆ ಸಂಪ್ರದಾಯವನ್ನು ನಡೆಸುತ್ತಾರೆ. ಗುಂಪು ಗುಂಪಾಗಿ ಮದುವೆ ಮಾಡುವ ಅಲ್ಲಿ ಎಲ್ಲಾ ಹೆಣ್ಣುಗಳನ್ನು ಒಂದೇ ಗುಡಿಸಲಿಯೊಳಗೆ ಇರಿಸುತ್ತಾರೆ. ಈ ಗುಂಪು ಗುಡಿಸಲಲ್ಲಿ ಇರುವಾಗ ಬಂಡೆಯಲ್ಲಿ ಆಹಾರ ಸ್ವೀಕರಿಸುವುದು ವಿಶೇಷ.

**ಮದುವೆ ಸಂಪ್ರದಾಯಗಳು :** ಬೇಡರ ವಿಶೇಷವಾಗಿ ಮ್ಯಾಸಬೇಡರಲ್ಲಿ ಪ್ರಚಲಿತವಿರುವ ಮದುವೆ ಸಂಪ್ರದಾಯಗಳು ಆ ಸಮುದಾಯದ ಬುಡಕಟ್ಟು ಅನನ್ಯತೆಯನ್ನು ಪ್ರತಿಪಾದಿ ಸುತ್ತವೆ. ಮುಖ್ಯವಾಗಿ ಇಲ್ಲಿ ಹೆಣ್ಣಿಗೆ ಪ್ರಾಧಾನ್ಯತೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಹೆಣ್ಣಿನ ಕಡೆಯವರು ಗಂಡಿನ ಮನೆಗೆ ಬಂದು ಮದುವೆ ಮಾಡಿಕೊಳ್ಳುವಂತೆ ಕೇಳುವುದು ಈಗಿರುವ ಕ್ರಮ. ಹಾಗೆಯೇ ಹೆಣ್ಣಿನ ಕಡೆಯವರು ವರದಕ್ಷಿಣೆ ಕೊಡಬೇಕಾದುದು ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದೆ. ಆದರೆ ಈಗಲೂ ಬೇಡರ ಕೆಲವು ಗುಂಪುಗಳಲ್ಲಿ ಇದಕ್ಕೆ ತದ್ವಿರುದ್ಧವಾದ ಸಂಗತಿಗಳಿವೆ. ಹೆಣ್ಣಿದ್ದ ಮನೆಗೆ ಗಂಡಿನ ಕಡೆಯವರು ಔಪಚಾರಿಕ ವಾಗಿ ಹಾಗೂ ಅನೌಪಚಾರಿಕವಾಗಿ ಮೊದಲು ತೆರಳಿ ಹೆಣ್ಣು ಕೇಳುವ ಕ್ರಮವಿದೆ. ವರದಕ್ಷಿಣೆ ಈಗೀಗ ಸ್ವಲ್ಪ ಪ್ರಮಾಣದಲ್ಲಿ ಚಾಲ್ತಿಗೆ ಬಂದಿದ್ದರೂ ವಧು ದಕ್ಷಿಣೆ ಕೊಡುವ ಪದ್ಧತಿ ಕಡ್ಡಾಯವಾಗಿದೆ. 'ಸುಖಮಂಚಿ' (ಕ್ಷೇಮ, ಸವಲತ್ತು) ಎನ್ನುವ ಹೆಸರಲ್ಲಿ ಗಂಡಿನ ಕಡೆಯ ವರು ಒಂದಿಷ್ಟು ಧಾನ್ಯವನ್ನು ಊರಿನ ಹಿರಿಯರ ಸಮ್ಮುಖದಲ್ಲಿ ಹೆಣ್ಣಿನ ಕಡೆಯವರಿಗೆ ಅಳೆದುಕೊಡುವುದು ಒಂದು ಸಂಪ್ರದಾಯವಾಗಿದೆ.

ಮುಂಜಿ ಮ್ಯಾಸಬೇಡರ ಮದುವೆ ಸಂಪ್ರದಾಯಗಳ ಮತ್ತೊಂದು ವಿಶೇಷ. 'ಮುಂಜಿ' ಎನ್ನುವ ಈ ಸಂಪ್ರದಾಯವನ್ನು ಥರ್ಸ್ಟನ್ ಮೊದಲಾದ ಆರಂಭಿಕ ಅಧ್ಯಯನಕಾರರು ಮುಸ್ಲಿಂ ಸಮಾಜಗಳಲ್ಲಿ ಪ್ರಚಲಿತವಿರುವ 'ಮುಂಜಿ ಮಾಡಿಸುವ' ಪದ್ಧತಿಯೊಡನೆ ನಂಟು ಕಲ್ಪಿಸಿದ್ದಾರೆ. ಆದರೆ ಈಗಿರುವ ಕ್ರಮದಲ್ಲಿ ಅಂಥ ಯಾವ ಅಂಶವು ಕಂಡುಬರುವುದಿಲ್ಲ. ಮದುವೆಗೆ ಗಂಡನ್ನು ಸಿದ್ಧಮಾಡುವ ಕ್ರಮ ಇದಾಗಿದೆ. ಮದುವೆಯ ಮೊದಲಶಾಸ್ತ್ರದ ಮುನ್ನದಿನ ರಾತ್ರಿ ಮದುವೆಯ ಗಂಡಿಗೆ ದೇವರ ನೀರು ಹಾಕಿಸಿಕೊಂಡು ವಿಶಿಷ್ಟ ವೇಷದಲ್ಲಿ (ಬರೀಮೈ, ಒಂದು ಚೆಡ್ಡಿ ಧರಿಸಿ ಮೈಗೆ ಒಂದು ಕಂಬಳಿ ಕೋವಿ ಹೊದ್ದು, ಕೈಯಲ್ಲಿ ಕವೆ ಕಟ್ಟಿಗೆ, ಈ ಕವೆ ಕಟ್ಟಿಗೆಗೆ ಎಲೆ ಅಡಿಕೆ ಬೀಡಿ ಗಂಟು ಕಟ್ಟಿರುತ್ತಾರೆ). ಊರ ಹೊರಗೆ ಹೋಗುತ್ತಾರೆ. ಮರುದಿನ ಬೆಳಗ್ಗೆ ನೆಂಟರಿಷ್ಟರು ಒಸಗೆ ರೂಪದಲ್ಲಿ ತಿಂಡಿ ತಿನಿಸುಗಳನ್ನು ಒಯ್ದು ಕೊಡುತ್ತಾರೆ. ಹೀಗೆ ಸಂಗ್ರಹವಾದ ತಿನಿಸುಗಳನ್ನು ಬೇರೆ ಯಾರೂ ತಿನ್ನುವುದಿಲ್ಲ. ಹಾದಿ ಹೋಕರ ಹತ್ತಿರ ಮದುವೆಯ ಗಂಡು ಹಣ ಸಂಗ್ರಹಿಸುತ್ತಾನೆ. ಹೀಗೆ ಒಂದು ದಿನ ಕಳೆದು (ಈಗ ಈ ಸಂಪ್ರದಾಯ ಒಂದು ದಿನ ಮಾತ್ರವಿದ್ದು ಮೊದಲು ಹನ್ನೊಂದು ದಿನ ನಡೆಯುತ್ತಿದೆಂದು ಹಿರಿಯರು ಹೇಳುತ್ತಾರೆ. ಹನ್ನೊಂದು ದಿನ ಊರಿಂದ ಹೊರಗೆ ಇರುತಿದ್ದ ಮದುವೆಯ ಗಂಡುಗಳು ಕಾಡಲ್ಲಿ ಬೇಟೆಯಾಡಿ ಮಾಂಸ ಮತ್ತಿತರ ವಸ್ತುಗಳನ್ನು ತಿನ್ನುತ್ತಿದ್ದರಂತೆ) ಅಂದು ಸಾಯಂಕಾಲ ಸ್ನಾನಮಾಡಿ ಶುದ್ಧರಾಗುತ್ತಾರೆ. ಹಿಂದೆ ಮದುವೆಯ ಋತುಮತಿ ಹೆಣ್ಣುಗಳನ್ನು ಗುಡಿಸಲಿಗೆ ಕೂರಿಸಿ ಒಳಗೆ ಕರೆದುಕೊಳ್ಳುವಾಗ ಮಾಡುವ ಕ್ರಮವನ್ನೇ ಇವರಿಗೂ ಅನುಸರಿಸಿ ಮನೆಯ ಒಳಗೆ ಕರೆದುಕೊಳ್ಳುತ್ತಾರೆ. ಇದನ್ನೇ ಮುಂಜಿ ಸಂಪ್ರದಾಯ ಎನ್ನುತ್ತಾರೆ.

ಬೇಡರಲ್ಲಿ ಮಧುಮಗ ಕೈಯಲ್ಲಿ ಬಾಕು (ಚಿಕ್ಕ ಕತ್ತಿ) ಹಿಡಿಯುವ ಪದ್ಧತಿ ಪ್ರಚಲಿತವಿದ್ದು, ಇದು ಸ್ಪಷ್ಟವಾಗಿ ಬೇಡರ ಲೋಕದೃಷ್ಟಿಯನ್ನು ಬಿಂಬಿಸುತ್ತದೆ. ಇಲ್ಲಿ ಬಾಕನ್ನು ಮಧುಮಗನ ಪ್ರತಿನಿಧಿ ಎಂದು ಭಾವಿಸುವುದು ವಿಶೇಷ.

‘ವೀಳ್ಯದ ಎಲೆ’ ಬೇಡರ ಮದುವೆಯಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ವಸ್ತುವಾಗಿದೆ. ಬೇಡರ ಮದುವೆಗಳಿಗೆ ಬ್ರಾಹ್ಮಣ ಪುರೋಹಿತರ ಬದಲಿಗೆ ಸಮುದಾಯದ ಹಿರಿಯರೇ ಪೌರೋಹಿತ್ಯ ವಹಿಸುವರು.

**ಸಾವಿಗೆ ಆಚರಣೆಗಳು :** ಬೇಡರಲ್ಲಿ ಸಾವಿನ ಸಂದರ್ಭಕ್ಕೆ ನಡೆಯುವ ಆಚರಣೆಗಳಲ್ಲಿ ಬುಡಕಟ್ಟು ಲಕ್ಷಣಗಳ ಹಿನ್ನೆಲೆಯಲ್ಲಿ ಮುಖ್ಯವಾಗುವ ಕೆಲವನ್ನು ಹೆಸರಿಸಬಹುದು.

ಅ. ಹೆಣಗಳನ್ನು ಕಲ್ಲು ಪೊಟರುಗಳಲ್ಲಿಟ್ಟು ಕಲ್ಲು ಮುಚ್ಚುವ ಪದ್ದತಿ ಅನೇಕ ಬೇಡ ಗುಂಪುಗಳಲ್ಲಿ ಇಂದಿಗೂ ಕಾಣಬಹುದು.

ಆ. ಸತ್ತ ವ್ಯಕ್ತಿಯು ಕಾಗೆಯ ರೂಪದಲ್ಲಿ ಮೂರನೇ ದಿನ ತನ್ನ ಸಮಾಧಿ ಸ್ಥಳದಲ್ಲಿ ಕುಟುಂಬದವರು ಹಾಕಿದ ಕೂಳನ್ನು ತಿನ್ನುತ್ತಾನೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ‘ಕೂಳು ಹಾಕುವ’ ಸಂಪ್ರದಾಯ ಸಾಮಾನ್ಯವಾಗಿ ಕಂಡುಬರುತ್ತದೆ.

ಇ. ಬೇಡ ಸಮುದಾಯದಲ್ಲಿ ‘ದಿವಸ’ ಮಾಡುವಾಗ ಅದರ ಕಾರ್ಯವನ್ನು ‘ಗುಡ್ಡೆ ಪೂಜಾರಿ’ಗಳೇ ನೆರವೇರಿಸಬೇಕು ಇದು ಗುಂಪಿನ ಐಕ್ಯತೆಯ ಭಾವವನ್ನು ಸೂಚಿಸುತ್ತದೆ.

**ಹಬ್ಬಗಳು :** ಬೇಡರಲ್ಲಿ ಪ್ರಚಲಿತವಿರುವ ಹಬ್ಬಗಳಲ್ಲಿ ಕೆಲವು ಅವರಿಗೆ ಮಾತ್ರ ಸೀಮಿತ ವಾದಂತಹವುಗಳಿವೆ. ಇನ್ನೂ ಕೆಲವು ಜನಪ್ರಿಯ ಹಬ್ಬಗಳಾಗಿವೆ. ಆದರೆ ಜನಪ್ರಿಯ ಹಬ್ಬಗಳ ಸಂಪ್ರದಾಯಗಳೊಳಗೆ ತಮ್ಮ ವಿಶಿಷ್ಟ ಸಂಪ್ರದಾಯಗಳನ್ನು ಬೆರಸಿ ಆಚರಿಸುತ್ತಿರುವುದು ಇಲ್ಲಿ ಗಮನಾರ್ಹವಾಗುತ್ತದೆ. ಈ ಎರಡೂ ಮಾದರಿಗಳ ಸ್ಪಷ್ಟತೆಗಾಗಿ ಒಂದೆರಡು ಉದಾ ಹರಣೆಗಳನ್ನು ನೋಡಬಹುದು.

**ಪದಿಯಾಗಳ ದೇವರು :** ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳ ಬೇಡರ ಕೆಲವು ಗುಂಪುಗಳಲ್ಲಿ ಈ ‘ಪದಿಯಾಗಳ ದೇವರು’ ಆಚರಣೆಯಲ್ಲಿದೆ. ದೇವರು, ದೇವರೆತ್ತುಗಳನ್ನು ಮುಂದಿರಿಸಿಕೊಂಡು ಇಡೀ ಹಟ್ಟಿಗೆ ಹಟ್ಟಿಯೇ ಕಾಡಿಗೆ ಹೋಗಿ ಅಲ್ಲೇ ಮೂರು ದಿನ ವಾಸಿಸುವ ಸಂಪ್ರದಾಯವಿದು. ದೇವರಿಗೆ ಹಾಗೂ ಜನರಿಗೆ ತಾತ್ಕಾಲಿಕ ಗುಡಿ ಹಾಗೂ ಕೆಲವು ಮನೆಗಳನ್ನು ನಿರ್ಮಿಸಿ ಊಟ, ವಸತಿ ವ್ಯವಸ್ಥೆಯೊಂದಿಗೆ ಕಾಡಲ್ಲಿ ಮೂರು ದಿನವಿದ್ದು ನಂತರ ಹಟ್ಟಿಗೆ ವಾಪಸ್ಸು ಬರುವುದುಂಟು. ಇದು ಈ ಸಮುದಾಯ ಅಲೆಮಾರಿ ಬುಡಕಟ್ಟಾ ಗಿದ್ದರ ಸೂಚನೆಗಳನ್ನು ನೀಡುತ್ತದೆ. ಬುಡಕಟ್ಟೊಂದು ತನ್ನ ಬದುಕಿನ ಕೆಲವು ಮಹತ್ವದ ಕ್ರಮಗಳು ಕಾಲಗತಿಯಲ್ಲಿ ಕಳಚಿಕೊಂಡಾಗ ಅಂಥ ಕ್ರಮಗಳನ್ನು ಆಚರಣೆ ರೂಪದಲ್ಲಿ ಉಳಿಸುತ್ತದೆ ಎಂಬುದಕ್ಕೆ ಇದೊಂದು ಸ್ಪಷ್ಟ ಉದಾಹರಣೆ. ಹಾಗಾಗಿ ಇಂಥ ಪದ್ಧತಿಗಳು ಬೇರೆ ಎಲ್ಲಾ ಸಮುದಾಯಗಳಲ್ಲಿ ದೊರೆಯಲಾರವು.

**ಯುಗಾದಿ :** ಯುಗಾದಿ ಭಾರತದ ಜಾತಿ ಹಾಗೂ ಸಮುದಾಯದ ಸೀಮೆಗಳನ್ನು ಕಳಚಿಕೊಂಡು ಎಲ್ಲರೂ ಆಚರಿಸುವ ಒಂದು ಹಬ್ಬ. ಇಂಥ ಹಬ್ಬದಲ್ಲೂ ಬೇಡ ಸಮುದಾಯ ತನ್ನ ಗುರುತುಗಳನ್ನು ದಾಖಲಿಸಿದೆ ಎಂಬುದನ್ನು ಗಮನಿಸಬೇಕು. ಅಂಥ ಗುರುತುಗಳು ಹೀಗಿವೆ.

ಅ. ಯುಗಾದಿಯಲ್ಲಿ ಬೇವು ಬೆಲ್ಲದ ಬದಲಿಗೆ ಹುಣಸೆ ರಸ ಹಾಗೂ ಬೇವನ್ನು ಬೆರಸಿ ಕುಡಿಯುವುದು ಬೇಡರ ವಿಶೇಷತೆ. ದೇವರ ಗುಡಿಯ ಮುಂದೆ ಹಿರಿಯರು ಹುಣಸೆ ರಸದ ಜೊತೆ ಬೇವನ್ನು ಸ್ವಲ್ಪ ಬೆಲ್ಲದೊಂದಿಗೆ ಬೆರಸಿದ ಪಾನಕವನ್ನು ಸಿದ್ಧ ಮಾಡುತ್ತಾರೆ. ಅದನ್ನು ಹಟ್ಟಿಯ ಪ್ರತಿಯೊಂದು ಮನೆಯವರು ತಂದು ಮನೆಯಲ್ಲಿ ಸೇವಿಸುತ್ತಾರೆ. ಬೇವು ಬೆಲ್ಲದ ಆಧುನಿಕ ಕಲ್ಪನೆಗೆ ಹುಣಸೆ-ಬೇವು-ಬೆಲ್ಲದ ಈ ಪರ್ಯಾಯ ಕಲ್ಪನೆ ಬೇಡರ ವೈಶಿಷ್ಟ್ಯತೆಯಾಗಿದೆ.

ಆ. ಯುಗಾದಿಯ ಮೊದಲ ದಿನವೇ ಬೇಡರ ಗುಂಪುಗಳು ದೇವರ ಮುಖಂಡತ್ವದಲ್ಲಿ ಬೇಟೆ ಹೊರಡುತ್ತವೆ. ಮುಖ್ಯವಾಗಿ ‘ಕಂಪಳ ರಂಗ’ ದೇವರ ಜೊತೆ ಹಟ್ಟಿಗಳ ಮುಖಂಡರು ಮೊಲದ ಬೇಟೆ ಹೋಗುವುದು ಬೇಡರ ಮತ್ತೊಂದು ವಿಶೇಷ.

ಇ. ಯುಗಾದಿಯ ಚಂದ್ರನನ್ನು ದರ್ಶಿಸಿ ಧನ್ಯರಾಗುವುದರ ಜೊತೆಗೆ, ಅಂದಿನ ಅರ್ಧ ಚಂದ್ರನ ಮೂಲಕ ವರ್ಷದ ಧನ ಧಾನ್ಯ ಸೌಲಭ್ಯಗಳ ಬಗ್ಗೆ ತಿಳಿಯುವ ಪ್ರಯತ್ನವಿರುವುದು ಗಮನಾರ್ಹವಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಕಾಣುವ ಅರ್ಧ ಚಂದ್ರ ತೆಂಕ ದಿಕ್ಕುವನ್ನು ಬಡಗ ದಿಕ್ಕುವನ್ನು ಪ್ರತಿನಿಧಿಸುತ್ತವೆ ಎಂಬುದು ಇವರ ನಂಬಿಕೆ. ಇದರ ಆಧಾರದ ಮೇಲೆ ಅರ್ಧ ಚಂದ್ರ ಎರಡು ತುದಿಗಳಲ್ಲಿ ಯಾವ ತುದಿ ಎದ್ದಿದೆ ಯಾವು ತುದಿ ಬಿದ್ದಿದೆ ಎನ್ನುವುದನ್ನು ಗಮನಿಸಿ ಪ್ರಸ್ತುತ ವರ್ಷ ಧನ, ಧಾನ್ಯ ಹೆಚ್ಚು-ಕಡಿಮೆ-ಸಮ ಎಂಬುದನ್ನು ನಿರ್ಧರಿಸುತ್ತಾರೆ. ಪ್ರಕೃತಿಯಲ್ಲಿ ಭವಿಷ್ಯ ನೋಡುವ ಬುಡಕಟ್ಟಿನ ವಿಶಿಷ್ಟ ದೃಷ್ಟಿ ಇದಾಗಿದೆ.

ಹೀಗೆ ಬೇಡರು ತಮಗೆ ವಿಶಿಷ್ಟವೆನಿಸುವ ಹಬ್ಬಗಳನ್ನು ಆಚರಿಸುತ್ತಾರೆ. ಹಾಗೆಯೇ ಬೇರೆ ಸಮೂಹಗಳಿಗೂ ಸಾಮಾನ್ಯವಾಗಿರುವ ಹಬ್ಬಗಳಲ್ಲಿ ತಮ್ಮ ವೈಶಿಷ್ಟ್ಯತೆಗಳನ್ನು ದಾಖಲಿಸುತ್ತಾರೆ.

ಇನ್ನು ಇವರು ಹಬ್ಬಗಳಲ್ಲಿ ಮಾಡುವ ಆಚರಣೆಗಳು ಇವರಲ್ಲಿ ಇನ್ನೂ ಗಟ್ಟಿಯಾಗಿರುವ ಬುಡಕಟ್ಟು ಅಸ್ಮಿತೆಗಳನ್ನು ಕಾಣಿಸುತ್ತವೆ.

ಅ. ಹಬ್ಬಗಳಲ್ಲಿ ವಿಶಿಷ್ಟವಾದ ಛರ್ಚಿ, ಛತ್ರಿಗಳ ಬಳಕೆ.

ಆ. ದೇವರ ಎತ್ತುಗಳಿಗೆ (ಉದಿ-ಪದಿ) ಇನ್ನಿಲ್ಲದ ಪ್ರಾಮುಖ್ಯತೆ.

ಇ. ದೂಪಾರತಿ ಮಾಡುವಾಗ ಬಾಯಿಗೆ ಬಿಳಿ ಬಟ್ಟೆ ಕಟ್ಟಿಕೊಳ್ಳುವುದು.

ಈ. ಹಬ್ಬ ಮುಗಿದ ನಂತರ ಕುಣಿಯುವುದು ಇತ್ಯಾದಿ.

**ವಿಶಿಷ್ಟ ದೈವ ಕಲ್ಪನೆ :** ಬುಡಕಟ್ಟುಗಳಲ್ಲಿ ಸಮುದಾಯಕ್ಕೆ ದುಡಿದ ವೀರರು/ಹಿರಿಯರನ್ನೇ ದೇವರೆಂದು ಪರಿಭಾವಿಸುವ ಕ್ರಮವಿದೆ. ಈ ಹಿನ್ನೆಲೆಯಲ್ಲಿ ಮ್ಯಾಸಬೇಡರ/ಬೇಡರ ಸಾಂಸ್ಕೃತಿಕ ವೀರರದೊಡ್ಡ ಪಟ್ಟಿಯೇ ಇದೆ. ಈ ಪಟ್ಟಿ ದಿನೇ ದಿನೇ ಬೆಳೆಯುತ್ತಲೇ ಇದೆ. ಇಂಥ ನಾಯಕರನ್ನು ದೈವವಾಗಿ ಪೂಜಿಸುವ ಸಂದರ್ಭದಲ್ಲಿ ವೀರರು ಬಳಸಿದ ವಸ್ತುಗಳನ್ನೇ ದೇವರ ಮೂರ್ತಿಗಳಂತಾಗಿಸುವುದು ವಿಶೇಷ. ಈ ಬಗ್ಗೆ ಅಧ್ಯಯನ ನಡೆಸಿದ ಡಿ.ಡಿ. ಕೊಸಾಂಬಿ ಅವರು ಬುಡಕಟ್ಟು ದೈವಗಳಿಗೆ ಯಾವುದೇ ಸ್ಪಷ್ಟ ಮನುಷ್ಯ ರೂಪವಿಲ್ಲದಿರು ವುದರ ಬಗ್ಗೆ ಗಮನ ಸೆಳೆಯುತ್ತಾರೆ. ಇಂದು ಬೇಡರಲ್ಲಿ ಮುಖ್ಯವಾಗಿರುವ ಗಾದ್ರಿಪಾಲ ನಾಯಕ ದೇವರೆಂದರೆ ಆತ ಬಳಸಿದ ಬಿಲ್ಲು ಬಾಣ, ಬಡಿಗೆಗಳೇ ಆಗಿವೆ. ಈ ವಸ್ತುಗಳನ್ನು ಕಂಬಳಿ ಕೋರಿಯಲ್ಲಿ ಸುತ್ತಿ ಕಟ್ಟಿ ದೇವರಾಗಿಸಿರುವುದು ಗಮನಾರ್ಹ ಸಂಗತಿ. ಹಾಗೆಯೇ ಬೊಮ್ಮದೇವರು, ಓಬಳದೇವರು ಮೊದಲಾದ ಹನ್ನೆರಡು ಪೆಟ್ಟಿಗೆ ದೇವರುಗಳಲ್ಲಿ ಪುಟ್ಟಿಯ ಒಳಗೆ ಆಯಾ ವೀರರು ಬಳಸಿದ ವಸ್ತುಗಳಿರುವುದನ್ನು ನೋಡಬಹುದಾಗಿದೆ.

ಇನ್ನೂ ಹಿರಿಯರನ್ನು ಪೂಜಿಸುವಾಗಲೂ ಅವರ ಭಾವಚಿತ್ರವನ್ನು ಈ ಆಧುನಿಕ ಯುಗದಲ್ಲೂ ಬಳಸುವುದಿಲ್ಲ ಎಂಬುದು ವಿಶೇಷ. ಹಿರಿಯರ ಹೆಸರಲ್ಲಿ ಒಂದು ಕಲ್ಲೋ ಅಥವಾ ಮರವೋ ಪೂಜೆಗೊಳ್ಳುತ್ತದೆ. ಮಣ್ಣಿನ ಮಗಿ, ಹಿತ್ತಾಳೆ ಚೆಂಬು, ಬಿದಿರಿನ ಕೋಲು ಮೊದಲಾದವು ಹಿರಿಯರ ಪ್ರತಿನಿಧಿಗಳಾಗಿ ಪೂಜೆಗೊಳ್ಳುತ್ತವೆ.

**ಬೆಡಗುಗಳ ವೈಶಿಷ್ಟ್ಯ :** ಬೇಡರ ಬೆಡಗುಗಳನ್ನು ಸೂರ್ಯವಂಶ-ಚಂದ್ರವಂಶ ಎಂದು ಎರಡು ಮುಖ್ಯ ಭಾಗಗಳನ್ನಾಗಿ ಗುರುತಿಸಲಾಗಿದೆ. ಮತ್ತೆ ಸಂಬಂಧ ಬೆಳೆಸುವ ಕ್ರಮದ ಒಳಗೆ ಎನುಮುಲೋರು, ಮಂದಲೋರು, ಮಳೆಲೋರು ಎಂಬುದಾಗಿ ವಿಂಗಡಿಸಿಕೊಳ್ಳಲಾಗಿದೆ. “ಬೇಡನಾಯಕ ಕುಲಗಳನ್ನೆಲ್ಲ ಗಮನಿಸಿದರೆ ಬಹುಪಾಲು ಕುಲಗಳು ಪ್ರಾಣಿಗಳ ಹೆಸರಿನಲ್ಲಿ ಬರುತ್ತವೆ. ಇದು ಎಲ್ಲಾ ಬುಡಕಟ್ಟಿನ ಕುಲ ಲಕ್ಷಣವೇ ಆಗಿದೆ. ಮುಖ್ಯವಾಗಿ ವೃಕ್ಷಾರಾಧನೆ ಪ್ರಾಣಿಗಳ ಆರಾಧನೆ ದಕ್ಷಿಣ ಭಾರತದ ದ್ರಾವಿಡ ಸಂಸ್ಕೃತಿಯ ಲಕ್ಷಣ ಆಗಿದೆ. ನಿಸರ್ಗದಲ್ಲಿ

ಅಪರಿಮಿತವಾಗಿ ಹರಡಿರುವ ವಸ್ತುಗಳಲ್ಲಿ ಯಾವುದೋ ಒಂದು ಕಲ್ಲು ಬಂಡೆ, ದೊಡ್ಡಮರ ಅಥವಾ ಪ್ರಾಣಿ ಆದಿ ಮಾನವ ಗುಂಪಿಗೆ ರಕ್ಷಣೆಯನ್ನು ಒದಗಿಸಿರಬಹುದು ಅಥವಾ ಭಯಕ್ಕೆ ಕಾರಣವಾಗಿರಬಹುದು ಇಂಥ ಒಂದೊಂದು ವಸ್ತುವು ಆಯಾ ಬುಡಕಟ್ಟು ಗುಂಪಿಗೆ ಯಾವುದೋ ಶಕ್ತಿಯ ಸಂಕೇತವಾಗಿ ಕಂಡಿರಬಹುದು. ಈ ಸಂದರ್ಭದಲ್ಲಿಯೇ ಪ್ರಾಣಿ, ಮರ, ಗುಡ್ಡ, ಬೆಟ್ಟ ಬಂಡೆ ಗುಂಪಿನ ಗುರುತಾಗಿ, ಕುಲಸಂಕೇತವಾಗಿ ಸ್ವೀಕರಿಸಲ್ಪಟ್ಟು ಅದು ಪೂಜಾರ್ಹ ವಸ್ತುವೂ ಆಗಿಬಿಟ್ಟಿತು. ಒಂದೊಂದು ಬುಡಕಟ್ಟಿನ ಒಂದೊಂದು ಕುಲಕ್ಕೆ ಅವವೇ ಹೆಸರು ಉಳಿದುಕೊಂಡು ಬಂದಂತೆ ಕಾಣುತ್ತದೆ (ಹನೂರು ಕೃಷ್ಣಮೂರ್ತಿ; ೧೯೯೩:೯೩).

**ಪ್ರತ್ಯೇಕ ನ್ಯಾಯ ಪಂಚಾಯ್ತಿ :** ಬೇಡರಲ್ಲಿ ತಮ್ಮ ಸಮುದಾಯಕ್ಕೆ ಮಾತ್ರ ಮೀಸಲಾದ ಪಂಚಾಯ್ತಿ ವ್ಯವಸ್ಥೆ ಇದೆ. ಹಟ್ಟಿ ಪಂಚಾಯ್ತಿ ಕಟ್ಟೆಮನೆ ಪಂಚಾಯ್ತಿ ಗುರುಮನೆ. ಸಮಸ್ಯೆ ಮೊದಲಿಗೆ ಹಟ್ಟಿ ಪಂಚಾಯ್ತಿಗೆ ಬರಬೇಕು. ಇಲ್ಲಿ ಸಮಸ್ಯೆ ಬಗೆಹರಿಯಲಿಲ್ಲ ಅಥವಾ ಹಟ್ಟಿ ಪಂಚಾಯ್ತಿ ನೀಡಿದ ತೀರ್ಮಾನ ಒಪ್ಪಿತವಾಗದಿದ್ದರೆ ಕಟ್ಟೆಮನೆಗೆ ಮುಂದಕ್ಕೆ ಗುರುಮನೆಗೆ ಹೋಗಬೇಕು. ಮ್ಯಾಸಗಂಪಳಕ್ಕೆ ಕಂಪಳದೇವರಹಟ್ಟಿ 'ಗುರುಮನೆ' ಎಂಬುದಾಗಿ ಹೇಳಲಾಗಿದೆ. ಇನ್ನೂ ನನ್ನಿವಾಳ, ನಾಯ್ಕನಹಟ್ಟಿ, ಗೋಣೂರು ಮೊದಲಾದ ಹನ್ನೆರಡು ಕಟ್ಟೆಮನೆಗಳಿದ್ದವೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಮ್ಯಾಸಬೇಡರಿಗೆ ನನ್ನಿವಾಳ, ನಾಯ್ಕನಹಟ್ಟಿ, ಗೋನೂರು ಕಟ್ಟೆಮನೆಗಳಾಗಿ ಕಾರ್ಯ ನಿರ್ವಹಿಸಿದ್ದರ ಬಗ್ಗೆ ಸಾಕಷ್ಟು ಮಾಹಿತಿಗಳು ದೊರೆಯುತ್ತವೆ. ನನ್ನಿವಾಳ ಕಟ್ಟೆಮನೆ ಈಗಲೂ ಕಾರ್ಯ ನಿರ್ವಹಿ ಸುತ್ತಿದೆ ಎಂಬುದು ಗಮನಾರ್ಹ.

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಕಂಡುಬರುವ ಜಾತಿ ಪಂಚಾಯ್ತಿಗಳಿಗಿಂತ ಭಿನ್ನವಾಗಿರುವ ಈ ನ್ಯಾಯ ವ್ಯವಸ್ಥೆ ಕೇವಲ ಧರ್ಮದ ರಕ್ಷಕ ವ್ಯವಸ್ಥೆಯಾಗಿ ಕೆಲಸ ಮಾಡದೆ ಸಾಮಾಜಿಕ ನ್ಯಾಯಕ್ಕಾಗಿಯೂ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ.

**ಅನನ್ಯ ಮನೆಗಳ ನಿರ್ಮಾಣ :** ಬೇಡರು ವಿಶೇಷವಾಗಿ ಮ್ಯಾಸಬೇಡರು ಇತ್ತೀಚಿನವರೆಗೆ ಸಂಪೂರ್ಣ 'ಸುತ್ತುಗುಡಿಸಲಲ್ಲೇ' ವಾಸಿಸುತ್ತಿದ್ದರು. ಕೇವಲ ಮರ ಹಾಗೂ ಹುಲ್ಲಿನಿಂದ ದುಂಡಾಗಿ ನಿರ್ಮಿಸುತ್ತಿದ್ದ ಅಂಥಮನೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ಥಳಾಂತರಿಸಲು ಅನುಕೂಲವಾಗಿದ್ದವು. ಮನುಷ್ಯರಿಗಲ್ಲದೆ ದೇವರಿಗೂ ಕೂಡ ಇಂಥ ಸುತ್ತು ಗುಡಿಸಲನ್ನೇ ನಿರ್ಮಿಸಲಾಗುತ್ತಿತ್ತು (ಈಗಲೂ ಹಲವಾರು ಹಟ್ಟಿಗಳಲ್ಲಿ ಮ್ಯಾಸಬೇಡರ ದೈವಗಳು ಇಂಥ ಗುಡಿಸಲುಗಳಲ್ಲಿ ನೆಲಸಿವೆ ಎಂಬುದು ವಿಶೇಷವಾಗಿ ಗಮನಿಸಬೇಕಾದ ಸಂಗತಿ).

ಇವರ ಮನೆಗಳು ಸುತ್ತು ಗುಡಿಸಲಿಂದ, ಸ್ವಲ್ಪಪ್ರಮಾಣ ಗೋಡೆ ಎಬ್ಬಿಸಿ ಮೇಲೆ ಕಾಡಿನ ಹುಲ್ಲನ್ನು ಹೊದಿಸುವ ಕ್ರಮದ ಮನೆಗಳಿಗೆ ಬೆಳವಣಿಗೆ ಸಾಧಿಸಿದೆ. ಒಂದು ಕಡೆ ನೆಲೆ ನಿಂತ ನಂತರ ಗೋಡೆ ಗುಡಿಸಲುಗಳನ್ನು ನಿರ್ಮಿಸಿರುವುದು ನಿರ್ವಿವಾದದ ಸಂಗತಿ. ಈಗ ಮಾಳಿಗೆ ಮನೆಗಳು ಬೇಡರ ವಿಶೇಷವಾಗಿದೆ.

ಬೇಡರ ಮನೆಗಳ ಬಾಗಿಲಿನ ಎತ್ತರ ಅತೀ ಕಡಿಮೆ. ಯಾರೂ ಮನೆಯ ಒಳಗೆ ಹಾಗೆ ನೆಟ್ಟಗೆ ಪ್ರವೇಶಿಸುವಂತಿಲ್ಲ. ಶಿರವನ್ನು ಸಾಕಷ್ಟು ಬಗ್ಗಿಸಿ ಒಳಹೋಗಬೇಕು. ಇದು ಬೇಡ ಬುಡಕಟ್ಟಿನ ಲೋಕ ದೃಷ್ಟಿ. ಮನುಷ್ಯರಿಗೆ ಬೇಡವಾದ ಜಂಭವನ್ನು/ಅಹಂಕಾರವನ್ನು ತೊರೆದು ವಿನಯವನ್ನು ಕಲಿಯಬೇಕೆಂಬ ಸರಳ ಸಂದೇಶ ಇಲ್ಲಿನದು.

ಈಚೆಗೆ ಬೇಡರು ನಿರ್ಮಿಸುತ್ತಿರುವ ಮಾಳಿಗೆ ಮನೆಗಳಲ್ಲಿ ಜಗಲಿ ನಿರ್ಮಾಣ ಸಾಮಾನ್ಯ. ಸಾಮಾನ್ಯವಾಗಿ ಮನೆಯ ಪ್ರವೇಶದ ಬಲಗಡೆಗೆ ಜಗಲಿ ನಿರ್ಮಾಣ. ಬೇರೆಯವರಿಗೆ ಜಗಲಿಯ ಪ್ರವೇಶ ತೀರಾ ವಿರಳ.

**ಆಹಾರ ಪದ್ದತಿ :** ಬೇಡರ ಆಹಾರ ಪದ್ಧತಿಯ ಕೆಲವು ವಿಶಿಷ್ಟತೆಗಳು ಈ ಮುಂದಿನಂತಿವೆ.

ಅ. ಸಜ್ಜೆ ಅನ್ನ-ಮಜ್ಜಿಗೆ ಇವರಿಗೆ ಬಹುಪ್ರಿಯ.

ಆ. ಬೇಡರ ಕೆಲವು ಬೆಡಗಿನವರು (ಉದಾ. ಬೊಮ್ಮದೇವಡ್ಲು) ನವಣೆ ತಿನ್ನುವುದಿಲ್ಲ, ಮುಟ್ಟುವುದೂ ಇಲ್ಲ, ಬೆಳೆಯುವುದು ಮೊದಲೇ ಇಲ್ಲ. ಅಕಸ್ಮಾತ್ ಮುಟ್ಟಿದರೆ ಶುದ್ಧಿ ಮಾಡಿಕೊಳ್ಳದೆ ಒಳಗೆ ಹೋಗುವಂತಿಲ್ಲ.

ಇ. ಇವರಲ್ಲಿ ಈಚಲು ಚಾಪೆ ಬಳಕೆ ನಿಷೇಧ. ಈಚಲು ಹಣ್ಣು ತಿನ್ನುವುದು ಕೂಡ ನಿಷೇಧ.

ಈ. ಹಂದಿ, ಕೋಳಿ ಸಾಕುವುದು/ತಿನ್ನುವುದು ನಿಷೇಧ.

ಇಲ್ಲಿ ಕೆಲವು ಧಾನ್ಯ ಹಾಗೂ ಪ್ರಾಣಿಗಳನ್ನು ತಿನ್ನುವುದನ್ನು ನಿಷೇಧ ಮಾಡಿರುವ ಸಂಗತಿ ಬುಡಕಟ್ಟು ಲಕ್ಷಣಗಳ ಹಿನ್ನೆಲೆಯಲ್ಲಿ ಬಹುಮುಖ್ಯವಾಗುತ್ತದೆ. ''ವಾಸ್ತವವಾಗಿ ಒಂದೊಂದು ಬುಡಕಟ್ಟಿಗೂ ಇಂಥದೊಂದು ನಂಬಿಕೆ ಅಥವಾ ನಿಷೇಧವಿದ್ದುಎಲ್ಲರೂ ಒಂದು ಬಗೆಯ ಪ್ರಾಣಿಯನ್ನು ಕೊಂದು ಆಹಾರವಾಗಿ ಉಪಯೋಗಿಸುವುದನ್ನು ಬಿಟ್ಟು ಕೊಂಡು ಬಂದಿರುವಂತೆ ತಿಳಿದುಬರುತ್ತದೆ. ಇದು ಬಹುಮಟ್ಟಿಗೆ ಪ್ರಪಂಚದ ಎಲ್ಲಾ ಬುಡಕಟ್ಟುಗಳಲ್ಲಿಯೂ ಕಂಡುಬರುವ ಸಾಮಾನ್ಯ ಲಕ್ಷಣ'' (ಕೃಷ್ಣಮೂರ್ತಿ ಹನೂರು:೧೯೯೩ :೮೦).

**ವಿಶಿಷ್ಟ ಭವಿಷ್ಯ ಕ್ರಮಗಳು :** ಬೇಡರಲ್ಲಿ ವಿಶೇಷವಾಗಿ ಮ್ಯಾಸಬೇಡರಲ್ಲಿ ಅನನ್ಯವೆನಿಸುವ ಭವಿಷ್ಯ ಕೇಳುವ ಕ್ರಮಗಳಿವೆ. ಅವುಗಳಲ್ಲಿ ಮಳೆ ಕುರಿತು ಕೇಳುವ ಭವಿಷ್ಯ ಕ್ರಮಗಳಲ್ಲಿ ಒಂದೆರಡನ್ನು ಇಲ್ಲಿ ಪ್ರಸ್ತಾಪಿಸಬಹುದು.

**ಅ. ಕೊಡ ಹಿಡಿಯುವುದು :** ದೇವರ ಗುಡಿಯ ಮುಂದೆ ಸಗಣಿಯಲ್ಲಿ ನೆಲ ಬಳಿದು ಅಲ್ಲಿಗೆ ಹಟ್ಟಿಯ ಎಲ್ಲರೂ ಮನೆಗಳಿಂದ ತಂದ ಧಾನ್ಯವನ್ನು ರಾಶಿಯನ್ನಾಗಿ ಸುರಿದು, ದೊಡ್ಡರಾಶಿ ಮಾಡುತ್ತಾರೆ. ಆ ರಾಶಿ ಮೇಲೆ ತುಂಬಿದ ಮಣ್ಣಿನ ಗಡಿಗೆಯನ್ನು ಇರಿಸುತ್ತಾರೆ. ನಂತರ ದೇವರಿಗೆ ಕೈಮುಗಿದು, ಪ್ರತಿಯೊಂದು ಮಳೆಯ ಹೆಸರು ಹೇಳಿ ಆ ಗಡಿಗೆಯನ್ನು ಇಬ್ಬರು ವ್ಯಕ್ತಿಗಳಾಗಿ ಎದುರು ಬದರಾಗಿ ನಿಂತು ಮುಟ್ಟುತ್ತಾರೆ. ಆಗ ಗಡಿಗೆ ತಿರುಗುವ ಸ್ವರೂಪದ ಮೇಲೆ ಆ ವರ್ಷದ ಮಳೆ ಪ್ರಮಾಣವನ್ನು ನಿಧರಿಸುತ್ತಾರೆ. ಕೊಡ ಜೋರಾಗಿ ತಿರುಗಿ ನೀರು ಚೆಲ್ಲಿದರೆ ಸಾಕಷ್ಟು ಪ್ರಮಾಣದಲ್ಲಿ ಮಳೆ ಬರುವುದೆಂಬ ನಂಬಿಕೆ ಇದೆ.

**ಆ. ಗಣೆ ಊದುವುದು :** ಉದ್ದವಾದ ಕೊಳಲನ್ನೇ 'ಗಣೆ' ಎಂದು ಕರೆಯುತ್ತಾರೆ. ದೇವರ ಎರಡು ಗಣೆಗಳನ್ನು ದೇವರ ಗುಡಿಯ ಮುಂದೆ ಪೂಜಿಸಿ ಹಟ್ಟಿಯ ಹಿರಿಯರ ಸಮ್ಮುಖದಲ್ಲಿ ಇಬ್ಬರು ನುರಿತ ಗಣೆವಾದಕರು ಗಣೆ ಊದುತ್ತಾರೆ. ಮಳೆ ಬರುವುದೆಂದಾದರೆ ಗಣೆ ಸರಾಗವಾಗಿ ನುಡಿಯಬೇಕು ಇಲ್ಲವೇ ನುಡಿಯಬಾರದು ಎಂದು ಕುರುಹು ಕೇಳಲಾಗುತ್ತದೆ. ಅದರಂತೆ ಆ ವರ್ಷದ ಮಳೆಯ ಪ್ರಮಾಣವನ್ನು ತಿಳಿಯಲಾಗುತ್ತದೆ.

**ರಕ್ತ ಸಂಬಂಧದ ಅತಿಯಾದ ಅವಲಂಬನೆ**

ಬುಡಕಟ್ಟುಗಳ ಜೀವಾಳವೇ ರಕ್ತಸಂಬಂಧ. ಇದರ ಹೊರತಾಗಿ ಇವರಿಗೆ ಬೇರೆ ಯಾವುದೇ ಮನುಷ್ಯ ಸಂಬಂಧಗಳಿರುವುದಿಲ್ಲ. ಇವರ ವಿವಾಹಗಳು ರಕ್ತ ಸಂಬಂಧದಲ್ಲಿ ಮಾತ್ರ ನಡೆಯಬೇಕು. ಒಳ ಬೆಡಗುಗಳಲ್ಲಿಯೂ ಮದುವೆ ಸಂಬಂಧಗಳು ನಿಷಿದ್ಧ. ಒಂದು ಊರಿಂದ ಮತ್ತೊಂದು ಊರಿಗೆ ಹೆಣ್ಣು ತರುವುದು ಹಾಗೂ ಕೊಡುವುದು ಕೆಲವೆಡೆ ನಿಷೇಧ. ಹೆಣ್ಣು ತರುವುದು ಮತ್ತು ಕೊಡುವುದರಲ್ಲಿ ಸೋದರತ್ತೆ ಹಾಗೂ ಸೋದರ ಮಾವಂದಿರಿಗೆ ವಿಶೇಷ ಹಕ್ಕು ಬಾಧ್ಯತೆಗಳಿರುವುದು ಇಲ್ಲಿಯ ವಿಶೇಷ. ಇವರು ಬೇರೆ ಜಾತಿ-ಸಮುದಾಯಗಳೊಡನೆ ಸಂಬಂಧ ಬೆಳೆಸುವ ಅನಿವಾರ್ಯತೆ ಬಂದಾಗ ಮಾವ, ಅಣ್ಣ, ಅಕ್ಕ ಅನ್ನುವ ಸ್ವರೂಪದಲ್ಲೇ ಎನ್ನುವುದು ಗಮನಾರ್ಹ.

**ಅತಿಯಾದ ಪಾವಿತ್ರ್ಯತೆ**

ಬೇಡರ ಪಾವಿತ್ರ್ಯ ಕಲ್ಪನೆ ಎಷ್ಟು ಜಟಿಲವಾದುದು ಎಂಬುದು ಇವರ ಕಟ್ಟೆಮನೆಗಳಲ್ಲಿ ನಡೆದಿರುವ ವ್ಯಾಜ್ಯಗಳಿಂದಲೇ ತಿಳಿದುಬರುತ್ತದೆ. ಈ ಸಮುದಾಯದ ಒಬ್ಬ ವ್ಯಕ್ತಿ ಬೇರೊಂದು ಜಾತಿಯವರ ಮನೆಯ ಒಳಗೆ ಪ್ರವೇಶಿಸಿದ್ದು ಒಂದು ದೊಡ್ಡ ಅಪರಾಧ ಎಂದು ಭಾವಿಸುವುದು, ಇನ್ನೊಂದು ಜಾತಿಯವರನ್ನು ಸ್ಪರ್ಶಿಸಿದರು ಎಂದು ಸಮುದಾಯ ದಿಂದ ಹೊರ ಹಾಕುವುದು. ಇಂಥ ಹಲವಾರು ಸಂಗತಿಗಳನ್ನು ಗಮನಿಸಿದರೆ ಬೇಡರ ಪಾವಿತ್ರ್ಯತೆಯ ಸ್ವರೂಪ ಅರ್ಥವಾಗುತ್ತದೆ. ಇವರ ಪಾವಿತ್ರ್ಯತೆಯನ್ನು ಇನ್ನು ಕೆಲವೊಂದು ಅಂಶಗಳು ಮುಂದಿನಂತಿವೆ.

ಅ. ಸಮುದಾಯದ ಒಳಗೇ ಒಬ್ಬರ ಎಂಜಲನ್ನು ಇನ್ನೊಬ್ಬರು ತಿನ್ನುವಂತಿಲ್ಲ. 'ಎಂಜಲು ಏಳು ಮನೆ ಕೆಡಿಸಿತು' ಎಂಬ ನಂಬಿಕೆಯಿಂದಾಗಿ ಇವರಲ್ಲಿ ಒಬ್ಬರ ಎಂಜಲನ್ನು ಇನ್ನೊಬ್ಬರು ತಿನ್ನುವುದು ಕಡ್ಡಾಯವಾಗಿ ನಿಷಿದ್ಧವಾಗಿದೆ.

ಆ. ಯಾರದೋ ಬೇರೆ ಸಮುದಾಯದ ಮನೆಯಲ್ಲಿ ಊಟ ಮಾಡುವಂತಿಲ್ಲ. ಅಷ್ಟೇ ಅಲ್ಲ ಕಿಲಾರಿಗಳು, ಪೂಜಾರಿಗಳು ಮೊದಲಾದ ಸಾಂಸ್ಕೃತಿಕ ಪುರುಷರು ಅವರ ಸ್ವಂತ ಮನೆಯಲ್ಲೇ ಎಲ್ಲರೂ ಉಣ್ಣುವ ತಟ್ಟೆಗಳಲ್ಲಿ ಉಣ್ಣುವಂತಿಲ್ಲ. ಇವರಿಗೇ ಪ್ರತ್ಯೇಕ ತಟ್ಟೆ ಯಿರಬೇಕು.

ಇ. ಇನ್ನು ವಿಶೇಷವೆಂದರೆ ಒಂದು ಊರಿಂದ ಇನ್ನೊಂದೂರಿಗೆ ಪ್ರಯಾಣಿಸುವಾಗ ಸಾರ್ವಜನಿಕ ವಾಹನದ ಬಳಕೆ ನಿಷೇಧ ಮಾಡಿಕೊಂಡಿದ್ದು ಈಗ ಈ ನೀತಿ ಸ್ವಲ್ಪ ಸಡಿಲಗೊಂಡಿದೆ. ಇತ್ತೀಚೆಗೆ ಸಾರ್ವಜನಿಕ ವಾಹನವೇರಿದರೆ ನಾವು ಮಲಿನರಾಗುತ್ತೇವೆ ಎಂದು ಭಾವಿಸಿ ನಡೆದು ಪಟ್ಟಣಗಳಿಗೆ ಹೋಗಿ ಬರುತ್ತಿದ್ದವರನ್ನು ನಾವೆಲ್ಲರೂ ನೋಡಿದ್ದೇವೆ. ಈಗಲೂ ಈ ಮೊದಲೇ ಹೇಳಿದ ಸಾಂಸ್ಕೃತಿಕ ಪುರುಷರು ಸಾರ್ವಜನಿಕ ಬಸ್‌ಗಳಲ್ಲಿ ಪ್ರಯಾಣಿಸದೇ ಇರುವುದನ್ನು ನೋಡಬಹುದಾಗಿದೆ.

ಇಂಥ ನಿರ್ಬಂಧದ ಹಿನ್ನೆಲೆ ಇರುವ ಈ ಸಮುದಾಯದ ಜನ ಬೇರೊಂದು ಸಮುದಾಯ ದವರ ಜೊತೆ ವೈವಾಹಿಕ ಮೊದಲಾದ ಸಾಮಾಜಿಕ ಸಂಬಂಧಗಳನ್ನು ಬೆಳೆಸುವುದು ದೂರದ ಮಾತು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ನಡವಳಿಕೆಗಳಲ್ಲಿ ಪಾವಿತ್ರ್ಯತೆ ಕಳೆದುಕೊಂಡ ವರನ್ನು ಸಮುದಾಯದಿಂದ ಹೊರಹಾಕುವುದು ಸಾಮಾನ್ಯ ಹಾಗೂ ಸಹಜ ಸಂಗತಿ. ಆದರೂ ಎಲ್ಲಾ ತರಹದ ತಪ್ಪಿಗೂ ಇಲ್ಲಿ ಕ್ಷಮೆ ಇದೆ. ಶುದ್ಧೀಕರಿಸುವ ಕೆಲವು ಮಾದರಿಗಳಿದ್ದು, ಶಿಕ್ಷೆಗೊಳಗಾದ ವ್ಯಕ್ತಿ ಮರಳಿ ಸಮುದಾಯದೊಳಗೆ ಬರಲು ಇಚ್ಚೆಸಿದರೆ ಆತನನ್ನು ಶುದ್ಧಿ ಮಾಡಿ ಕರೆದುಕೊಳ್ಳುವ ಉದಾರ ಕ್ರಮಗಳೂ ಇಲ್ಲಿವೆ.

**ಕಾಡಿಗೆ ಹತ್ತಿರವಾದ ಬದುಕು**

"ಬುಡಕಟ್ಟು ಜನ ಸಾಮಾನ್ಯವಾಗಿ ತಮ್ಮ ಸಂತೋಷದ ದುಃಖದ ಸಂದರ್ಭಗಳನ್ನು ಪ್ರಕೃತಿಯ ಮುಂದೆಯೇ ನಿವೇದಿಸಿಕೊಳ್ಳುವುದುಂಟು. ಅಲ್ಲಿ ಪರಿಹಾರವೂ ದೊರೆಯುವುದೆಂಬ ಖಚಿತ ನಂಬಿಕೆಯೂ ಅವರಿಗೆ ಇದೆ" (ಕೃಷ್ಣಮೂರ್ತಿ ಹನೂರು:೧೯೯೩:೯೮). ಇದಕ್ಕೆಲ್ಲ ಕಾರಣ ಬುಡಕಟ್ಟು ಸಮುದಾಯಗಳು ಹುಟ್ಟಿದ್ದು ಕಾಡಲ್ಲಿ ಬೆಳೆದದ್ದು ಕಾಡಲ್ಲಿ. ಬೇಡರ ಈ ಸಮುದಾಯವೂ ಕೂಡ ಕಾಡಿಗೆ ಹತ್ತಿರವಾಗಿ ಬದುಕಿದ ಬದುಕುತ್ತಿರುವ ಬುಡಕಟ್ಟಾಗಿದೆ. ಬೇಡರ/ಮ್ಯಾಸಬೇಡರ ಮೂಲಪುರುಷ "ಚೆಟ್ಲುಗೊಟ್ಲು ಮಲ್ಲಿನಾಯಕ" ಹುಟ್ಟಿದ್ದು ಕಾಡಲ್ಲಿ. ಒಂಟಿಕೊಂಬಿನ ಹಸುವಿನ ಗೊರಸಲ್ಲಿ ಬಿದ್ದ ವಿಭೂತಿ ದೂಳಿನ ಕಣವೊಂದರಿಂದ ಜನಿಸಿದ ಈತ ತಾಯಿಯ ಹಾಲಿನ ಬದಲಿಗೆ ಜೇನು ತುಪ್ಪವನ್ನು ಕುಡಿದು ಬದುಕಿದವನು.

ಇಂದು ಬೇಡರು ವಾಸಿಸುವ ಹಟ್ಟಿಗಳನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿದರೆ ಹಿಂದೆ ಆ ಪ್ರದೇಶಗಳು ದಟ್ಟ ಕಾಡಿನಿಂದ ಕೂಡಿದ್ದವೆಂಬುದಾಗಿ ತಿಳಿದುಬರುತ್ತದೆ. ಅಷ್ಟೇ ಅಲ್ಲ ಇಂದಿಗೂ ಮ್ಯಾಸಬೇಡರ ಅನೇಕ ಹಟ್ಟಿಗಳು ಅರಣ್ಯದಿಂದ ಸುತ್ತುವರೆದಿವೆ. ಹಾಗೆಯೇ ಬೇಡರ ಬದುಕು ಅರಣ್ಯ ಪರಿಕರಗಳಿಂದ ಸಾಕಷ್ಟು ಪ್ರಭಾವಿತಗೊಂಡಿದೆ ಮತ್ತು ಅವಲಂಬಿತ ವಾಗಿದೆ.

**ಪ್ರತ್ಯೇಕ ಭಾಷೆ**

ವಿಶೇಷವಾಗಿ ಚಿತ್ರದುರ್ಗ, ದಾವಣಗೆರೆ, ತುಮಕೂರು ಜಿಲ್ಲೆಗಳ ಸುತ್ತಲಿನ ಮ್ಯಾಸಬೇಡರ ಸಮುದಾಯಗಲ್ಲಿ 'ಕಂದೆಲಗು' ಎಂಬ ಪ್ರತ್ಯೇಕ ಭಾಷೆ ಪ್ರಚಲಿತವಾಗಿದೆ. ತೆಲುಗು ಹಾಗೂ ಕನ್ನಡ ಮಿಶ್ರಿತವಾದ ಈ ಭಾಷೆ ಮುಖ್ಯವಾಗಿ ತೆಲುಗು. ಈ ತೆಲುಗಿಗೆ ಕನ್ನಡ ಮಿಶ್ರಣಗೊಂಡು 'ಕಂದೆಲಗು' ಆಗಿ ಮಾರ್ಪಾಟಾಗಿರುವುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ.

ಇಷ್ಟೆಲ್ಲಾ ಸಾಂಸ್ಕೃತಿಕ ವೈಶಿಷ್ಟತೆಗಳೊಂದಿಗೆ ಬದುಕುತ್ತಿರುವ ಬೇಡರು ಕರ್ನಾಟಕ ಬುಡಕಟ್ಟುಗಳಲ್ಲೇ ಒಂದು ವಿಶಿಷ್ಟ ಸ್ಥಾನ ಉಳಿಸಿಕೊಂಡಿದ್ದಾರೆ. ಆಧುನಿಕ ಕಾಲದ ಈ ಸಂದರ್ಭದಲ್ಲಿ ಬುಡಕಟ್ಟು ಜಾತಿಗಳ ಸ್ಪಷ್ಟಗೆರೆ ಮಾಯವಾಗುತ್ತದೆ. ಆದರೂ ಕೆಲವೊಂದು ಸಮುದಾಯಗಳು ಬುಡಕಟ್ಟಾಗಿ ಮುಂದುವರೆಯುವ ಬದ್ಧತೆಯನ್ನು ತೋರ್ಪಡಿಸಿವೆ. ಬುಡಕಟ್ಟೊಂದು ಸಂಪೂರ್ಣ ಜಾತಿಯಾಗಿದೆ ಎಂದು ತೀರ್ಮಾನಿಸುವುದು ಯಾವ ಸಂದರ್ಭಕ್ಕೆ ಎಂಬುದರ ಬಗ್ಗೆ ವಿಚಾರ ಮಾಡುತ್ತಾ ನಿರ್ಮಲ್ ಕುಮಾರ್ ಬೋಸ್ ಅವರು ಹೇಳಿದ ಮತ್ತೊಂದು ಇಲ್ಲಿ ಉಲ್ಲೇಖಾರ್ಹ. "ಬುಡಕಟ್ಟಿನ ಹುಟ್ಟು, ಮದುವೆ, ಸಾವು ಈ ಮೂರು ಸಂದರ್ಭಗಳಲ್ಲಿ ಬ್ರಾಹ್ಮಣರ ಪುರೋಹಿತ್ಯಕ್ಕೆ ಅವಕಾಶ ಕೊಡದೆ ತಾವೇ ನಡೆಸಿಕೊಂಡು ಹೋಗುತ್ತಾರೆ. ಎಲ್ಲಿಯವರೆಗೆ ಈ ಪರಿಸ್ಥಿತಿ ಉಳಿದಿರುವುದೋ ಅಲ್ಲಿಯವರೆಗೆ ಬುಡಕಟ್ಟು ತನ್ನ ಮೂಲ ರೂಪದಲ್ಲಿ ಉಳಿದಿರುತ್ತದೆ. ಹುಟ್ಟು-ಮದುವೆ ಹಾಗೂ ಸಾವು ಈ ಸಂದರ್ಭಗಳಲ್ಲಿ ಬ್ರಾಹ್ಮಣರ ಪುರೋಹಿತ್ಯಕ್ಕೆ ಅವಕಾಶ ಕೊಡುವುದೋ ಆಗ ಬುಡಕಟ್ಟು ತನ್ನ ಮೂಲ ಸ್ವರೂಪವನ್ನು, ಸ್ವಾತಂತ್ರ್ಯವನ್ನು ಕಳೆದುಕೊಂಡು ಜಾತಿಯಾಗಿ ಪರಿವರ್ತಿತ ವಾಗುತ್ತದೆ (ಉಲ್ಲೇಖ : ತಿಣ.ನಂ. ಶಂಕರನಾರಾಯಣ : ೧೯೮೭ : ೦೭).

ಈ ಮಾತನ್ನು ಬೇಡ ಸಮುದಾಯಕ್ಕೆ ಅನ್ವಯಿಸಿ ನೋಡಿದರೆ ಫಲಿತಾಂಶ ಸ್ಪಷ್ಟವಾಗಿ ರುತ್ತದೆ.

ಆಕರಗಳು

೧. ಕ್ಷೇತ್ರ ಕಾರ್ಯಾಧಾರಿತ ಮಾಹಿತಿಗಳು.

೨. 'ಬುಡಕಟ್ಟು ಅಧ್ಯಯನ ನೆಲೆಯಲ್ಲಿ ಬೇಡನಾಯಕರು'(ಲೇಖನ)ಕೆ.ಎಂ. ಮೈತ್ರಿ (ಇದರಲ್ಲಿ:"ಘಟ್ಟಿ ಹೊಸಳ್ಳಿ ಘಟ್ಟಿಗ", ಸಂ. ಲಕ್ಷ್ಮಣ್ ತೆಲಗಾವಿ, ವಾಸಾಸಂ, ಹರ್ತಿಕೋಟೆ).

೩. "ಮ್ಯಾಸಬೇಡರ ಸಂಸ್ಕೃತಿ", ಕೃಷ್ಣಮೂರ್ತಿ ಹನೂರು, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪. "ಮ್ಯಾಸ ಮಂಡಲ", ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫. "ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು", ತೀ.ನಂ.ಶಂಕರ ನಾರಾಯಣ, ೧೯೮೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೬. "ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ", ಗಂಗಾಧರ ದೈವಜ್ಞ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. "ಮನೆ-ಸಮಾಜ-ಸಂಸ್ಕೃತಿ", ಎಂ.ಪಿ. ವೀಣಾ, ೧೯೯೯, ನೆಲಮನೆ ಪ್ರಕಾಶನ, ಬೆಂಗಳೂರು.

೮. ‘‘ಪ್ರಾಚೀನ ಭಾರತದ ಚರಿತ್ರೆ’’ (ಡಿ.ಡಿ. ಕೊಸಂಬಿಯವರ ಚಿಂತನೆಗಳು), ಮೂಲ. ಬಾಲಗೋಪಾಲ್, ಅನು. ಎಚ್.ಎಸ್. ಶ್ರೀಮತಿ, ೧೯೯೮, ಬೆಳ್ಳಿ-ಚುಕ್ಕಿ ಟ್ರಸ್ಟ್, ಬೆಂಗಳೂರು.

೯. ‘‘ಜಾನಪದ ಕೈಪಿಡಿ’’, ಸಂ. ಎಚ್.ಜೆ. ಲಕ್ಕಪ್ಪಗೌಡ, ೧೯೯೭, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೦. ಬುಡಕಟ್ಟು ಅಧ್ಯಯನ-೧, ಸಂ. ಹಿ.ಚಿ. ಬೋರಲಿಂಗಯ, ಎ.ಎಸ್. ಪ್ರಭಾಕರ, ೨೦೦೩, ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ರಾಜಕೀಯ ಕ್ಷೇತ್ರದಲ್ಲಿ ಬೇಡರು

ಕರ್ನಾಟಕ ರಾಜ್ಯದಲ್ಲಿ ಇರುವ ನಾಯಕ ಸಮುದಾಯದ ಜನಸಂಖ್ಯೆ ಸುಮಾರು ೬೫ ಲಕ್ಷ. ಇಂಥ ಒಂದು ಜಾತಿ ೧೯೯೧ರ ಜನಗಣತಿ ವರದಿ ಪ್ರಕಾರ ಕೇವಲ ೨೦ ಲಕ್ಷದಷ್ಟು, ಮಾತ್ರ, ಇದನ್ನು ಜಾತಿಯ ಬುದ್ದಿಜೀವಿಗಳು ಒಪ್ಪಿಕೊಂಡಿಲ್ಲ. ಏಕೆಂದರೆ ಈ ಗಿರಿಜನರ ಜನಸಂಖ್ಯೆಯನ್ನು ಕೆಲವು ನರಿಜನರು ನಿಖರವಾಗಿ ದಾಖಲು ಮಾಡಿಲ್ಲ ಎಂಬುದು ಜನಾಂಗದ ಹಿರಿಯರ ವಾದ ಇರಲಿ, ಸ್ವಾತಂತ್ರ್ಯಾನಂತರದಲ್ಲಿ ಇವರಲ್ಲಿ ಸಾಕಷ್ಟು ಸುಧಾರಣೆ ಆದದ್ದೂ ನಿಜ. ಆದರೆ ಇವತ್ತು ಗ್ರಾಮಗಳಲ್ಲಿ ವಾಸಿಸುವ ಇವರ ಪರಿಸ್ಥಿತಿ ನಿರೀಕ್ಷಿಸಿದ ಮಟ್ಟದಲ್ಲಿ ಬದಲಾವಣೆಗೊಂಡಿಲ್ಲ. ಆರ್ಥಿಕ ಬೆಂಬಲವಿಲ್ಲದೆ, ಶಿಕ್ಷಣದ ಬೆಂಬಲವಿಲ್ಲದೆ ರಾಜಕೀಯವಾಗಿ ಅರಿವು ಮಾರ್ಗದರ್ಶನಗಳ ನೆರವಿಲ್ಲದೆ ಬವಣೆ ಅನುಭವಿಸುತ್ತಿದ್ದಾರೆ. ‘‘ಖಡ್ಗ ಹಿಡಿದ ಕೈಗಳು ಪೆನ್ನು ಹಿಡಿಯಬೇಕು’’ ಎನ್ನುವ ಸಮಷ್ಟಿ ಪ್ರಜ್ಞೆ ಬರಬೇಕಾಗಿದೆ.

ಕೇವಲ ವಾಲ್ಮೀಕಿ ಜಯಂತಿ, ಸಭೆ, ಸಮಾರಂಭಗಳಷ್ಟೇ ಸಂಘಟನೆಯಲ್ಲಿ ಪ್ರಯೋಜನ ಕಾರಿಯಲ್ಲ. ಆವೇಶಭರಿತವಾದ ಮಾತುಗಳಿಂದ ನ್ಯಾಯ ದೊರೆಯುವುದಿಲ್ಲ. ಪ್ರಾದೇಶಿಕ ವಾಗಿ ಬೇಡರಲ್ಲಿ ಬೇರೂರಿರುವ ತಾರತಮ್ಯವನ್ನು ಗುರುತಿಸಲಾಗುತ್ತಿಲ್ಲ. ಈ ಇವರಿಗಾಗಿ ಪ್ರತ್ಯೇಕವಾದ ಯಾವುದೇ ಸಂಸ್ಥೆ, ಆಯೋಗ ಅಥವಾ ಅಭಿವೃದ್ಧಿ ನಿಯಮಗಳು ಇಲ್ಲ. ಆದರೆ ಜಾತಿಯ ಬಗ್ಗೆ ಕಳಕಳಿ ಇರುವ ಕೆಲವೆ ಈ ಸಮಾಜದ ಹಿರಿಯರು, ಮುಖಂಡರು, ರಾಜಕೀಯ ಪ್ರಾತಿನಿಧ್ಯಕ್ಕಾಗಿ ಪ್ರಯತ್ನ ನಿರಂತರವಾಗಿ ಸಾಗಿರುವುದುಂಟು. ಯಾವ ಪಕ್ಷ ತಮ್ಮ ಜಾತಿಗೆ ಗರಿಷ್ಠ ಪ್ರಾತಿನಿಧ್ಯ ನೀಡುತ್ತವೆಯೋ ಆ ಪಕ್ಷವನ್ನು ಬೆಂಬಲಿಸುವಂತೆ ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಮಹಾಸಂಘ ಹಲವಾರು ಬಾರಿ ಕರೆಕೊಟ್ಟಿದೆ. ಯಾವುದೇ ಪಕ್ಷವಿರಲಿ ಆದರೆ ಒಂದು ಎಚ್ಚರಿಕೆಯ ಮನವಿಯನ್ನು ಜನಾಂಗದ ರಾಜಕಾರಣಿ ಗಳಿಗೆ ನೀಡಿದ್ದನ್ನು ನೋಡಬಹುದು.

“ಸಹಸ್ರಾರು ವರುಷಗಳಿಂದಲೂ ಅತ್ಯಂತ ಉತ್ಸಾಹಿ ಸಮುದಾಯವೆಂದು ಪ್ರಖ್ಯಾತ ವಾಗಿದ್ದು ವೀರಜೀವನ ನಡೆಯಿಸಿ ಬಯಲು ಹುಲಿಗಳಾಗಿ ಚರಿತ್ರೆಯಲ್ಲಿ ಹೆಸರು ಮಾಡಿರುವ ನಮ್ಮ ಪೂರ್ವಪಿತೃಗಳ ಧವಳ ಕೀರ್ತಿಗೆ ಕಳಂಕ ತರಬೇಡಿರೆಂದು ನಮ್ಮ ಕಳಕಳಿಯ ಪ್ರಾರ್ಥನೆ’’. ಎಂದು ಸಮುದಾಯದ ಸ್ವಾಭಿಮಾನವನ್ನು ಮರೆಯಬಾರದು ಎನ್ನುವ ಇವರ ಹಿನ್ನೆಲೆಯಿಂದ ಬಂದ ಕೆಲವು ರಾಜಕೀಯ ಕ್ಷೇತ್ರದ ವ್ಯಕ್ತಿ ಚಿತ್ರಣ ಅವರ ಸಾಧನೆ ಕುರಿತು ಅವಲೋಕಿಸಿದಾಗ ಮುಖ್ಯವಾಗಿ ನಾಯಕರ ರಾಜಕೀಯ ಪ್ರವೇಶವನ್ನು ಈ ವಿವರಿಸಬಹುದಾಗಿದೆ.

**ಸುರಪುರದ ರಾಜ ಪಿಡ್ಡನಾಯಕ**

ಸುರಪುರದ ರಾಜ ವಂಶಜರಾದ ರಾಜಾ ಪಿಡ್ಡನಾಯಕ ಇವರು ಅತ್ಯಂತ ಕೋಮಲ ಹೃದಯದ ಮುಗ್ಧ ಸ್ವಭಾವದವರಾಗಿದ್ದರು. ಇವರು ಸುರಪುರ ವಿಧಾನ ಸಭಾ ಕ್ಷೇತ್ರದಲ್ಲಿ ಸುಮಾರು ೨೦ ವರ್ಷಗಳ ಕಾಲ ಶಾಸಕರಾಗಿ ಸೇವೆಸಲ್ಲಿಸಿದ್ದಾರೆ. ೧೯೯೨ರಲ್ಲಿ ಇವರು ಮರಣ ಹೊಂದಿದರು. ಆದರೆ ಇವರ ಅಧಿಕಾರ ಅವಧಿಯಲ್ಲಿ ಹೇಳಿಕೊಳ್ಳುವಂತಹ ಕೆಲಸ ಕಾರ್ಯಗಳು ಈ ಸಮುದಾಯದ ಅಭಿವೃದ್ಧಿಗೆ ಗಮನ ಹರಿಸಲಿಲ್ಲ ಎನ್ನುವುದು ಇಲ್ಲಿ ಮುಖ್ಯ.

**ಬ್ಯಾರಿಸ್ಟರ್ ರಾಜಾ ವೆಂಕಟಪ್ಪನಾಯಕ**

ಇವರು ಹೈದ್ರಾಬಾದಿನಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಸಿ, ಉಚ್ಚ ವ್ಯಾಸಂಗಕ್ಕಾಗಿ ಲಂಡನ್ನಿಗೆ ತೆರಳಿ ಅಲ್ಲಿಂದ ಬ್ಯಾರಿಸ್ಟರ್ ಪದವಿ ಪಡೆದು ಹೈದ್ರಾಬಾದ್ ನಿಜಾಮರ ಶ್ರೇಷ್ಠ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಿರುವಾಗಲೇ ೧೯೪೮ರಲ್ಲಿ ನಿಜಾಮನಿಂದ ಪ್ರೇರಿತನಾದ ಮತಾಂಧ ಕಾಶೀಮು ರಜವಿಯು ನಿಜಾಮ ರಾಜ್ಯದ ಹಿಂದೂ ಪ್ರಜೆಗಳ ಮೇಲೆ ಅನ್ಯಾಯ ಅತ್ಯಾಚಾರವನ್ನು ಪ್ರಾರಂಭಿಸಿದಾಗ ತಮ್ಮ ವಕೀಲಿ ವೃತ್ತಿಯನ್ನು ಬಿಟ್ಟು ಹೈದ್ರಾಬಾದ್ ವಿಮೋಚನಾ ಚಳುವಳಿಯ ನೇತೃತ್ವವನ್ನು ವಹಿಸಿ ಜನರ ರಕ್ಷಣೆಗಾಗಿ ತಾಳಿಕೋಟೆಯಲ್ಲಿ ತರುಣರ ಕ್ಯಾಂಪನ್ನು ಪ್ರಾರಂಭಿಸಿದರು. ಅಂದಿನ ಕೇಂದ್ರ ಗೃಹಮಂತ್ರಿ ಸರ್ದಾರ್ ವಲ್ಲಬಾಯಿ ಪಟೇಲ್ ಹಾಗೂ ಕೃಷ್ಣ ಮೆನನ್, ಜೊತೆ ಗರಿಷ್ಠ ಸಂಬಂಧ ಹೊಂದಿದ್ದು, ಹೈದ್ರಾಬಾದ್ ವಿಮೋಚನೆಗಾಗಿ ಕೇಂದ್ರ ಸರಕಾರ, ಮಿಲಿಟರಿ ಕಾರ್ಯಚರಣೆ ನಡೆಸಬೇಕೆನ್ನುವ ಇವರ ಪ್ರಯತ್ನದಲ್ಲಿ ಯಶಸ್ವಿಯಾಗಿ ನಿಜಾಮನಿಂದ ಹೈದ್ರಾಬಾದ್ ಪ್ರಾಂತ್ಯವನ್ನು ಸ್ವತಂತ್ರಗೊಳಿಸಿ ಸ್ವಾತಂತ್ರ್ಯ ಹೋರಾಟಗಾರರ ಕೀರ್ತಿಗೆ ಪಾತ್ರರಾದವರು. ೧೯೬೭ರಲ್ಲಿ ಒಂದೇ ಸಲಕ್ಕೆ ಸಂಸದ ಹಾಗೂ ವಿಧಾನಸಭೆಗೆ ಆಯ್ಕೆಯಾಗಿ ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿ ನಂತರ ವಿಧಾನಸಭೆಗೆ ರಾಜೀನಾಮೆ ನೀಡಿ ಸಂಸದ ಸದಸ್ಯನಾಗಿ ಸೇವೆಸಲ್ಲಿಸಿದ್ದಾರೆ. ಇವರಿಗೆ ತಮ್ಮ ಜಾತಿಯ ಬಗ್ಗೆ ಅಪಾರವಾದ ಕಳಕಳಿ ಇತ್ತು ಇವರು ಸ್ವಾಭಿಮಾನದಿಂದ ಬದುಕಿದವರು.

**ಬಿಳಿಚೋಡು ಭೀಮಪ್ಪನಾಯಕರು**

ಬಿಳಿಚೋಡು ಅಂದಿನ ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಹೋಬಳಿಗ್ರಾಮ. ಇಂದು ದಾವಣಗೆರೆ ಜಿಲ್ಲೆಯಲ್ಲಿದೆ. ಇತಿಹಾಸ ಪ್ರಸಿದ್ಧವಾದ ಊರು ಜೊತೆಗೆ ಚಿತ್ರದುರ್ಗದ ಪಾಳೆಯಗಾರರ ಕೇಂದ್ರಸ್ಥಾನ. ಚಿತ್ರದುರ್ಗದ ಪಾಳೆಯಗಾರ ದೈವಭಕ್ತ ಬಿಚ್ಚುಗತ್ತಿ ಭರಮಣ್ಣ ನಾಯಕರ ಹುಟ್ಟು ಊರು. ಇಂಥ ಊರಿನ ಸುಸಂಸ್ಕೃತ ಮನೆತನದಲ್ಲಿ ಜನಿಸಿದವರು ವಕೀಲ ಭೀಮಪ್ಪನಾಯಕರು. ದೊಡ್ಡ ನಿಲುವಿನ ಅಜಾನು ಬಾಹುವಿನ ಕಾಂತಿಯುಕ್ತ ಮುಖಭಾವದ ಭೀಮಪ್ಪನಾಯಕರು ಅಂದಿನ ಕಾಲಕ್ಕೆ ಸ್ವತಂತ್ರ ಚಳುವಳಿಯಲ್ಲಿ ಧುಮುಕಿ ಸುಭಾಷ ಪಂಥದ ನೇತಾರರು ಎಂದು ಪ್ರಸಿದ್ದಿ ಹೊಂದಿದವರು. ದೀನ ದುರ್ಬಲರ ಮೇಲೆ ಅಪಾರವಾದ ಕಳಕಳಿಯನ್ನು ಹೊಂದಿದವರು. ನೇರ ನಡೆ ನುಡಿಗೆ ನಾಡಿಗೆ ಹೆಸರಾದವರು. ಇವರು ವಕೀಲಿ ವೃತ್ತಿಯಲ್ಲಿ ಅತ್ಯಂತ ಸಲಿಗೆಯಿಂದ ಮಾತಾನಾಡಿಸುವ ಗೆಳೆಯರಾದ ಎಸ್. ನಿಜಲಿಂಗಪ್ಪನವರ ಜೊತೆ ಸೇರಿ ಕಾಂಗ್ರೆಸ್ ಪಕ್ಷದಿಂದ ವಿಧಾನಸಭೆಗೆ ಸ್ಪರ್ಧಿಸಿ ಬಾರಿ ಬಹುಮತದಿಂದ ಆಯ್ಕೆಯಾದವರು. ಚುನಾವಣೆಯಲ್ಲಿ ಗೆದ್ದ ಸಂಭ್ರಮದಲ್ಲಿ ಮಣ್ಣಿನ ಮಗನಾದ ನಾನು ಮೆರವಣಿಗೆಯಲ್ಲಿ ನಾನು ಮೆರೆಯುವುದಕ್ಕಿಂತ ನೆಲದ ಜೀವಗಳಾದ ೨೦೦ ಜೋಡಿ ಎತ್ತುಗಳ ಮೆರವಣಿಗೆ ಮಾಡಿ ಪ್ರಾಣಿ ಪ್ರೀತಿಯನ್ನು ಮೆರೆದವರು. ಇವರು ಸದಾ ಪಾದರಸದಂತೆ ವ್ಯಕ್ತಿತ್ವ, ನ್ಯಾಯ ನಿಷ್ಠುರಿ ವಿಧಾನ ಸಭೆಯಲ್ಲಿ ನಿಷ್ಟ, ಗೌರವ, ುದ್ಧತನಕ್ಕೆ ಹೆಸರಾದವರು. ಎಂತಹ ಹಿರಿಯರೇ ರಾಜಕಾರಣಿಗಳೇ ಇರಲಿ ಇವರನ್ನು "ನಾಯಕರೇ", "ದುರ್ಗದ ದೊರೆಗಳೇ" ಎಂದು ಅತ್ಯಂತ್ಯ ಗೌರವ ಪ್ರೀತಿಯಿಂದ ಕರೆಯುತ್ತಿದ್ದುಂಟು. ಪಕ್ಷದಲ್ಲಿ ಇವರಿಗೆ ಬಹಳ ಗೌರವ ಭಾವನೆಯಿತ್ತು. ಇಂದಿರಾಗಾಂಧಿಯವರೆ ಭೀಮಪ್ಪನಾಯಕರ ವ್ಯಕ್ತಿತ್ವ ಗಮನಿಸಿ ಸ್ವಾಗತಿಸಿ ಪಕ್ಷದ ಆಗೂ ಹೋಗುಗಳ ಬಗ್ಗೆ ಚರ್ಚಿಸುವಷ್ಟು ಭಾಷೆ, ಜ್ಞಾನ ಮತ್ತು ಹಿರಿತನವನ್ನು ಉಳಿಸಿಕೊಂಡು ಬಂದವರು.

ನಾಯಕ ಸಮುದಾಯವನ್ನು ಎಸ್.ಟಿ. (ಪರಿಶಿಷ್ಟ ಪಂಗಡಕ್ಕೆ)ಗೆ ಸೇರಿಸಲು ರಾಜ್ಯದ್ಯಾಂತ ಸುದ್ದಿಯಾದಾಗ ಮುಂದುವರೆದ ಕೆಲಶಕ್ತಿಗಳು ಇದನ್ನು ವಿರೋಧಿಸಿದಾಗ ರಾಜರು, ದೊರೆಗಳು ಇವರಿಗೆ ಮೀಸಲಾತಿ ಕೊಡಬಾರದೆಂದು ಇಲ್ಲಸಲ್ಲದ ಆರೋಪಗಳು ಬಂದಾಗ ಭೀಮಪ್ಪನಾಯಕರು, ರಾಜ್ಯಮಟ್ಟದ ನಾಯಕ ಜನಾಂಗದ ಸಭೆ ಕರೆದು ಸಭೆಯಲ್ಲಿ ನಾವು ೭೮ ಪಾಳೆಯ ಪಟ್ಟುಗಳನ್ನು ಆಳಿದ ನಮಗೆ ಕೋಟೆ ಕೊತ್ತಲುಗಳನ್ನು ಕಟ್ಟಿದ ನಮ್ಮ ಜನಾಂಗಕ್ಕೆ ತಮ್ಮ ಜೀವನವನ್ನು ಹೇಗೆ ನಡೆಸಬೇಕೆಂದು ಗೊತ್ತು. ಇಲ್ಲ ಸಲ್ಲದವರ ಕೈಯಲ್ಲಿ ನಮ್ಮ ಪೂರ್ವಿಕರ ಕೀರ್ತಿಗೆ ಧಕ್ಕೆ ಬರದಂತೆ ಬದುಕಬೇಕು ಅವರು ಕೊಡುವ ಮೀಸಲಾತಿ ಯಾವನಿಗೆ ಬೇಕು ನಮಗೆ ಬೇಡ ಎಂದು ಖಂಡತುಂಡಾಗಿ ನಿರಾಕರಿಸಿದರು. ನೂರಾರು ಯುವಕರನ್ನು ಉರಿದುಂಬಿಸಿ ರಾಜಕೀಯ ಕ್ಷೇತ್ರದಲ್ಲಿ ಬೆಳೆಸಿದರು. ಬೇಡರು ಎಂದರೆ ಎಂದು ಯಾವತ್ತೂ ಯಾರನ್ನು ಬೇಡರು ಏನಿದ್ದರೂ ಸ್ವಬಲದ ಮೇಲೆಯೇ ಪಡೆಯಬೇಕು ಎನ್ನುವ ದಿಟ್ಟತನದ ಸ್ವಾಭಿಮಾನಿ ಅವರಾಗಿದ್ದರು.

ಜಗಳೂರು ತಾಲ್ಲೂಕಿನ ನಾಯಕ ಮುಖಂಡರು ತಿಪ್ಪೇರುದ್ರ ಸ್ವಾಮಿ ಶಿಕ್ಷಣ ಸಂಸ್ಥೆಯ ಸ್ಥಾಪಕರಾದ ಎಸ್.ಬಿ. ತಿಪ್ಪನಾಯಕರ ಮಾತಿನಲ್ಲಿ ಹೇಳುವುದಾದರೆ ಜಗಳೂರು ತಾಲ್ಲೂಕಿನ ಕಾನನಕಟ್ಟೆ ಗ್ರಾಮದಲ್ಲಿ ಶಿಕ್ಷಣ ಕೊರತೆಯಿಂದ ಅಜ್ಞಾತವಾಗಿ ಬದುಕುತ್ತಿದ್ದ ನಾಯಕ ಜಾತಿಯ ಮೇಲೆ ಮುಂದುವರೆದ ಕೋಮಿನ ಜನಗಳು ದೌರ್ಜನ್ಯ ಎಸಗುತ್ತಿದ್ದರು. ಅದನ್ನು ಸಹಿಸಲಾರದ ಬೇಡ ಜಾತಿಯ ತಿಪ್ಪನಾಯಕರು, ಹೀರೇಮಲ್ಲನಹೊಳೆ ಸಿದ್ದಬಸಪ್ಪ ನಾಯಕರು ಜೊತೆಗೂಡಿ ವಕೀಲರಾಗಿದ್ದ ಭೀಮಪ್ಪ ನಾಯಕರಿಗೆ ತಮ್ಮ ಕಷ್ಟವನ್ನು ಹೇಳಿದಾಗ ಭೀಮಪ್ಪ ನಾಯಕರು ತಿಪ್ಪನಾಯಕರನ್ನು ಸಿದ್ದಬಸಪ್ಪ ನಾಯಕರನ್ನು ತಮ್ಮ ಕೋಣೆಯಿಂದ ಹೊರಗೆ ಕರೆದು ಚಿತ್ರದುರ್ಗದ ಕೋಟೆಯನ್ನು ತೋರಿಸುತ್ತಾ ನೋಡಿ ಇಂತಹ ಕೋಟೆಯನ್ನು ಕಟ್ಟಿದ ವೀರಜಾತಿಯಲ್ಲಿ ಜನಿಸಿ ನಿಮಗೆ ಬೇರೆಯವರು ಬಂದು ನಿಮ್ಮ ಮೇಲೆ ಕೈ ಮಾಡುತ್ತಾರೆ ಎಂದರೆ ನಿಮಗೆ ನಾಚಿಕೆಯಾಗುವುದಿಲ್ಲವೆ.

ನೀವು ಊರಿಗೆ ಹೋಗಿ ಮೊದಲು ಸ್ವಾಭಿಮಾನದಿಂದ ಸಂಘಟಿತರಾಗಿ ಬೇದಭಾವ ಮರೆತು ಒಂದಾಗಿ ಎಂದು ಸ್ವತಹ ಕಾನನಕಟ್ಟೆಗೆ ಹೋಗಿ ಜನರನ್ನು ಜಾಗೃತಗೊಳಿಸಿ ಅವರಿಗೆ ಶಿಕ್ಷಣದ ಮಹತ್ವ ಹೇಳಿ ತಿಳಿಸಿ ಶಾಲ, ಕಾಲೇಜು ತೆರೆದು ಓದುವುದಕ್ಕೆ ನೆರವು ನೀಡಿದರು. ಕೊನೆಗೆ ಎಸ್.ಬಿ. ತಿಪ್ಪನಾಯಕರು ಪ್ರಥಮ ದರ್ಜೆ ಕಾಲೇಜು, ಹಾಸ್ಟಲ್‌ಗಳನ್ನು ಸ್ವತಹ ಸ್ಥಾಪಿಸಿ ಜಿಲ್ಲೆಯಲ್ಲಿ ಮಾದರಿಯನ್ನಾಗಿ ಮಾಡಲು ಭೀಮಪ್ಪನಾಯಕರು, ಹೋ.ಚಿ. ಬೋರಯ್ಯನವರು ಸಹಕರಿಸಿದರು ಎಂದು ಹೇಳುತ್ತಾರೆ. ಇಂತಹ ಕಷ್ಟಗಳನ್ನು ಬಹಳ ಅರಿತು ಭೀಮಪ್ಪನಾಯಕರು ಒಬ್ಬ ವಾಲ್ಮೀಕಿ ಜನಾಂಗದ ಧೀಮಂತ ನಾಯಕ, ಇವರ ಮನೆತನಕ್ಕೆ ವಕೀಲರ, ಅಂಚೆ ಮನೆಯೆಂದೆ ಜಿಲ್ಲೆಗೆ ಇವತ್ತೂ ಪ್ರಸಿದ್ಧಿ.

**ಹೋ.ಚಿ. ಬೋರಯ್ಯನವರು**

ಚಿತ್ರದುರ್ಗದಲ್ಲಿ ವಕೀಲರಾಗಿದ್ದ ಬೋರಯ್ಯನವರು ಮೂಲತಃ ಶಾಂತ ಸ್ವಭಾವದವರು. ವಕೀಲ ವೃತ್ತಿಯಲ್ಲಿ ಹೆಸರುಗಳಿಸಿ ಇವರು ಅಪ್ಪಟ ಗಾಂಧಿ ವಾದಿಗಳು. ಇವರು ರಾಜಕೀಯ ರಂಗ ಪ್ರವೇಶಿಸಿ ಅಭಿಮಾನಿಗಳ ಒತ್ತಡಕ್ಕೆ ಮಣಿದು ವಿಧಾನ ಸಭೆ ಚುನಾವಣೆಗೆ ನಿಂತು ವಿಜಯ ಸಾಧಿಸಿ ಶಾಸಕರಾಗಿ ವೈಯಕ್ತಿಕ ವರ್ಚಸ್ಸಿನಿಂದ ಸಚಿವರಾಗಿ ನಾಡಿಗೆ ಹೆಸರಾದವರು. ಬಡವರ ಪಾಲಿಗೆ ದುರ್ಗದ ಜನತೆಗೆ ಇವರು ಗಾಂಧಿಯಂತೆ ಕಂಡವರು. ತಮ್ಮ ಉಸಿರು ಇರುವವರೆಗೆ ಕೈ ಬಾಯಿಯನ್ನು ಶುದ್ಧವಾಗಿಟ್ಟುಕೊಂಡ ಸಿದ್ಧಹಸ್ತರು. ಹಿಂದುಳಿದ ಜಾತಿಗಳ ಶಿಕ್ಷಣ, ಸಾಮಾಜಿಕ ಬೆಳವಣಿಗೆಯನ್ನು ಮಾಡಲು ಶಕ್ತಿ ಮೀರಿ ಶ್ರಮಿಸಿದವರು. ರಾಜ್ಯದಲ್ಲಿ ಹಿಂದುಳಿದ ಜಾತಿಯ ಯುವಕರಿಗೆ ಶಿಕ್ಷಣ ಸಂಸ್ಥೆ ತೆರೆಯಲು ಪ್ರೋಜೊತೆಗೆ ಬೆಂಬಲವಾಗಿ ನಿಂತವರು. ಅವರ ಪರಿಣಾಮದಿಂದ ಚಿತ್ರದುರ್ಗದ ಬಹಳಷ್ಟು ಶಿಕ್ಷಣ ಸಂಸ್ಥೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಧೀನದಲ್ಲಿ ಇರುವುದನ್ನು ಕಾಣಬಹುದಾಗಿದೆ. ಎಲ್ಲಾ ಜಾತಿಯ ಬಡವರ ಅಭಿವೃದ್ದಿಗೆ ಶ್ರಮಿಸಿದರು. ಅವರನ್ನು ಕಂಡು ನೋಡಿದ ಮುಖಂಡರನ್ನು ದುರ್ಗದ ಹಿರಿಯರನ್ನು ಕೇಳಿದಾಗ ಅವರಿಗೆ ಹೋಲಿಸು ವಂತೆ ರಾಜಕಾರಣಿಗಳು ಇವತ್ತೂ ಯಾರೂ ಇಲ್ಲ ಎಂದೇ ಹೇಳುತ್ತಾರೆ.

**ಎಲ್.ಜಿ. ಹಾವನೂರು**

ಖ್ಯಾತ ನ್ಯಾಯವಾದಿ ಎಂದು ದೇಶಕ್ಕೆ ಹೆಸರಾದ ಲಕ್ಷ್ಮಣ ಜಿ. ಹಾವನೂರರು ಕರ್ನಾಟಕ ವಾಲ್ಮೀಕಿ ಸಮಾಜದ ರಾಜಕಾರಣಿಗಳಲ್ಲೇ ಮೊತ್ತಮೊದಲ ಕ್ಯಾಬಿನೆಟ್ ಮಂತ್ರಿ. ದೇವರಾಜ ಅರಸು ಸರಕಾರದಲ್ಲಿ ಕಾನೂನು ಮಂತ್ರಿಯಾಗಿದ್ದ ಇವರು ಆಫ್ರಿಕಾ ದೇಶದ ಸಂವಿಧಾನದ ಸಮಿತಿಯ ಸದಸ್ಯರು ಹೌದು. ಕರ್ನಾಟಕದಲ್ಲಿ ಅರಸು ಅವರ ಜೊತೆಗೆ ರಾಜ್ಯದಲ್ಲೇ ಮೊದಲ ಬಾರಿಗೆ ಹಿಂದುಳಿದ ವರ್ಗಗಳನ್ನು ಸಂಘಟಿಸುವ ಮೂಲಕ ಅವರುಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ಜಾಗೃತಿಯನ್ನು ಮೂಡಿಸಲು ಕಾರಣರಾದವರು. ಹಾವನೂರರ ಜ್ಞಾನವನ್ನು ಸಮಾಜ ಮತ್ತು ಕಾನೂನನ್ನು ಅರ್ಥೈಸಿಕೊಂಡ ವಿಧಾನವನ್ನು ಮನಗಂಡು ಅರಸರು ಹಾವನೂರರನ್ನು ಹಿಂದುಳಿದ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹತ್ವದ ಜವಬ್ದಾರಿಯನ್ನು ಹೆಗಲಿಗೆ ಹಾಕಿದರು. ಅವರ ಜೊತೆಯಲ್ಲಿ ಒಂದು ನಿಯೋಗವನ್ನು ರಚಿಸಿ ಹಾವನೂರರ ಅಧ್ಯಕ್ಷತೆಯಲ್ಲಿ, ವೈ. ರಾಮಚಂದ್ರ, ಕೆ.ಆರ್. ಶ್ರೀನಿವಾಸಲು ನಾಯ್ಡು, ಕೆ.ಎಸ್. ನಾಗಣ್ಣ, ಎ. ಮಸಣಶೆಟ್ಟಿ, ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಮತ್ತು ಪಿ.ಟಿ. ಹಬೀಬ್ ಇವರುಗಳನ್ನು ಸದಸ್ಯರನ್ನಾಗಿ ಆಯೋಗಕ್ಕೆ ನೇಮಿಸಲಾಯಿತು. ಮುಖ್ಯವಾಗಿ ಹಾವನೂರು ಆಯೋಗವು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ವರದಿ ತಯಾರಿಸಿದೆ.

೧. ಹಿಂದುಳಿದ ವರ್ಗಗಳ ಆಯೋಗವು ‘‘ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ ಯನ್ನು ಯಾವ ಆಧಾರದ ಮೇಲೆ ನಿರ್ಧರಿಸಬೇಕು ಎಂಬುದರ ಬಗ್ಗೆ ಸಲಹೆ ಕೊಡುವುದು.

೨. ಹಿಂದುಳಿದ ವರ್ಗಗಳ ಪಟ್ಟಿ ತಯಾರಿಸುವುದು.

೩. ಇವುಗಳ ಉನ್ನತಿಗಾಗಿ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡು ವುದು.

೪. ಹಿಂದುಳಿದ ವರ್ಗಗಳಿಗೆ ಕಲ್ಪಿಸಬೇಕಾದ ಮೀಸಲಾತಿ ಪ್ರಮಾಣದ ಬಗ್ಗೆ ಸಲಹೆ ನೀಡು ವುದು.

ಈ ಆಯೋಗವು ೧೯೩ ಗ್ರಾಮಗಳಲ್ಲಿ ೧೮೫ ನಗರ ಪ್ರದೇಶಗಳಲ್ಲಿ ಸಮೀಕ್ಷೆಯನ್ನು ಕೈಗೊಂಡಿತು. ಹಾವನೂರರು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗುರುತಿಸಲು ಈ ಕೆಳಕಂಡ ಮಾನದಂಡಗಳನ್ನು ಬಳಸಲಾಗಿದೆ.

೧. ಗ್ರಾಮೀಣ ಪ್ರದೇಶಗಳಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ ವಾಸಿಸುವುದು.

೨. ಬಡತನದಿಂದಾಗಿ ಜಮೀನು, ಮನೆ, ಮತ್ತಿತರ ಯಾವುದೇ ಆಸ್ತಿಯನ್ನು ಹೊಂದಲು ಅಸಮರ್ಥರಾಗಿರುವುದು.

೩. ಸಾಮಾಜಿಕವಾಗಿ ನಿಕೃಷ್ಟವಾದ, ಆರ್ಥಿಕವಾಗಿ ಲಾಭದಾಯಕವಲ್ಲದ ವೃತ್ತಿಗಳಲ್ಲಿ ನಿರತರಾಗಿರುವುದು.

೪. ಮೇಲ್ಜಾತಿಯವರಿಂದ ಹೀನಯವಾಗಿ ನಡೆಸಿಕೊಳ್ಳಲ್ಪಟ್ಟವರು.

೫. ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಸ್ಥಳಗಳಿಗೆ ಪ್ರವೇಶ ಸಿಗದಂತವರು.

೬. ಉತ್ತಮ ಜಾತಿಯರೊಡನೆ ಸಹಭೋಜನ, ವಿವಾಹ ಹಾಗೂ ಇತರ ಸಹಜೀವನಕ್ಕೆ ಸಾಮಾಜಿಕ ನಿಷೇಧಕ್ಕೆ ಒಳಪಟ್ಟವರು.

೭. ಶಿಕ್ಷಣಕ್ಕೆ ಉತ್ತೇಜನ ಇಲ್ಲದ ಕಾರಣಕ್ಕಾಗಿ ಅನಕ್ಷರಸ್ಥರಾಗಿರುವವರು.

ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿತು. ಅವುಗಳೆಂದರೆ

೧. ಹಿಂದುಳಿದ ಸಮುದಾಯಗಳು

೨. ಹಿಂದುಳಿದ ಜಾತಿಗಳು

೩. ಹಿಂದುಳಿದ ಬುಡಕಟ್ಟುಗಳು

ಈ ರೀತಿಯಾಗಿ ಸಮಾಜದ ಕೆಳವರ್ಗಗಳಿಗೆ ಅವಿಶ್ರಾಂತವಾಗಿ ದುಡಿದ ಹಾವನೂರರು ಬೇಡ ಸಮುದಾಯದ ಗಣ್ಯರಲ್ಲಿ ಮುಖ್ಯರಾಗಿದ್ದಾರೆ.

**ತಿಪ್ಪೇಸ್ವಾಮಿಯವರು**

ಚಳ್ಳಕೆರೆಯ ಶಾಸಕರಾಗಿ, ಚಿತ್ರದುರ್ಗದ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿ, ರಾಜಕಾರಣದಲ್ಲಿ ಪ್ರಭಾವಿ ವ್ಯಕ್ತಿಯಾಗಿ, ಸಮಾಜವಾದದ ಹಿನ್ನೆಲೆಯಿಂದ, ಬಂದ ತಿಪ್ಪೇಸ್ವಾಮಿಯವರು ಮುಖ್ಯವಾಗಿ ಶಾಂತಪ್ರಿಯರು. ಬಡತನದ ಹಂತದಿಂದ ಬೆಳೆದು ಬಂದವರು. ಅಬಕಾರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರಾಗಿ ನಾಡಿಗೆ ಸೇವೆ ಸಲ್ಲಿಸಿದವರು. ಈ ಸಮಾಜದ ಬಗ್ಗೆ ಅಪಾರ ಕಳಕಳಿ ಜೊತೆಗೆ ನೋವನ್ನು ಅನುಭವಿಸಿದವರು. ಶತಮಾನಗಳ ಕಾಲ ನಾಯಕರಿಗೆ ಕನಸಾಗಿಯೇ ಉಳಿದಿದ್ದ, ಚಿತ್ರದುರ್ಗದ ದೊರೆ ರಾಜ ವೀರ ಮದಕರಿನಾಯಕರ ಕಂಚಿನ ಪುತ್ತಳಿಯನ್ನು ಚಿತ್ರದುರ್ಗದ ಹೃದಯ ಭಾಗದಲ್ಲಿ ಸ್ಥಾಪಿಸಬೇಕೆಂಬ ಆಸೆಯನ್ನು ಪೂರೈಸಿದವರು. ಕರ್ನಾಟಕದ್ಯಾಂತ ಸುತ್ತುವರೆದು ಸಮಾಜದ ಬೆಳವಣಿಗೆಗೆ ಶ್ರಮಿಸಿದವರು. ಚಳ್ಳಕೆರೆಯಲ್ಲಿ ಭವ್ಯವಾದ ವಾಲ್ಮೀಕಿ ಮಂಗಲ ಮಂದಿರವನ್ನು ನಿರ್ಮಿಸುವಲ್ಲಿ ಕಾರಣಿಭೂತರಾದವರು. ಜೊತೆಗೆ ನಾಡಿನ ಸಮುದಾಯಕ್ಕೆ ಮುಂದೆ ಗುರಿ ಇಲ್ಲ ಹಿಂದೆ ಗುರುವಿಲ್ಲ ಎನ್ನುವುದನ್ನು ಮನಗಂಡು ಹಿರಿಯ ಶಾಸಕರಾದ ಎಂ. ಬಸಪ್ಪನವರನ್ನು ಜೊತೆ ಗೂಡಿಸಿಕೊಂಡು ರಾಜ್ಯಾದ್ಯಾಂತ ಪ್ರವಾಸ ಮಾಡಿ ನಾಯಕ ಸಮಾಜಕ್ಕೆ ಒಂದು ಗುರುಪೀಠವನ್ನು ಮಾಡಬೇಕೆಂದು ತೀರ್ಮಾನ ಮಾಡಿ ಎಲ್ಲಾ ರಾಜಕಾರಣಿಗಳ, ಸಾಹಿತಿಗಳ, ಹಿರಿಯರ, ಗುರುಗಳ, ಅಭಿಪ್ರಾಯವನ್ನು ಸಂಗ್ರಹಿಸಿ ತಮ್ಮ ಕಾರ್ಯಗಳನ್ನು ಬದಿಗೊತ್ತಿ ಹಣಸಂಗ್ರಹಣೆ, ಭೂಮಿ ಖರೀದಿ, ಗುರುಗಳ ನೇಮಕ, ಎಲ್ಲಾ ಜವಾಬ್ದಾರಿಗಳನ್ನು ಸಮಾಜ ಮುಖಂಡರ ಎದುರಲ್ಲಿ ಹಣಕಾಸು ಸಮಿತಿ, ಸ್ವಾಗತ ಸಮಿತಿ, ಪೂಜಾ ಮತ್ತು ಪಟ್ಟಾಭಿಷೇಕ ಸಮಿತಿ, ಸನ್ಮಾನ ಸಮಿತಿ, ಪ್ರಚಾರ ಸಮಿತಿ ರಚಿಸಿ ಶ್ರೀ ವಾಲ್ಮೀಕಿ ನಾಯಕ ಸಮಾಜದ ಶ್ರೀ ಮಹರ್ಷಿ ವಾಲ್ಮೀಕಿ ಮಹಾ ಸಂಸ್ಥಾನದ ಗುರು ಪೀಠವನ್ನು ರಾಜನಹಳ್ಳಿ ಹರಿಹರ ತಾಲೂಕು, ಮಧ್ಯನದಿ ದಂಡೆಯಲ್ಲಿ ರಾಜ್ಯದ ಮಂತ್ರಿಗಳ, ಶಾಸಕರ, ಹಿರಿಯರ ಸಮ್ಮುಖದಲ್ಲಿ ದಿನಾಂಕ ೯.೨.೧೯೯೮ರಂದು ಪ್ರಾಂತಃಕಾಲ ೫.೧೫ ಗಂಟೆಯಿಂದ ೬ ಗಂಟೆಯವರೆಗೆ ಪಟ್ಟಾಭಿಷೇಕವು ನೆರವೇರಿತು.

**ಅಲ್ಲೀಪುರದ ಹನುಮಂತಪ್ಪ**

ಬಳ್ಳಾರಿ ಜಿಲ್ಲೆಯ ತಾತರೆಂದು ಪ್ರಖ್ಯಾತರಾಗಿದ್ದ ಅಲ್ಲೀಪುರ ಹನುಮಂತಪ್ಪನವರು ರಾಜ್ಯ ವಾಲ್ಮೀಕಿ ಸಮಾಜದ ಧುರೀಣರು. ಈ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿದ್ದವರು ಸಮಾಜಕ್ಕೆ ಶಿಕ್ಷಣ, ರಾಜಕೀಯ, ಸಾಮಾಜಿಕ ಸ್ಥಿತಿ-ಗತಿಗಳನ್ನು ತಿಳಿಸಿಕೊಟ್ಟ ಹರಿಕಾರ ಈ ಜಾತಿಯ ಅಭಿವೃದ್ಧಿಗಾಗಿ ೧. ವಾಲ್ಮೀಕಿ ಶಿಕ್ಷಣ ಸಂಸ್ಥೆ ೨. ವಾಲ್ಮೀಕಿ ಆಶ್ರಮ, ವಾಲ್ಮೀಕಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಮಾದರಿ ವ್ಯಕ್ತಿಯಾಗಿ ಬಾಳಿದವರು. ಯಾವುದೇ ಸ್ವಾರ್ಥವಿಲ್ಲದೆ ಶಾಲೆಗೆ, ಹಾಸ್ಟೆಲ್‌ಗೆ ತಮ್ಮದೇ ಬೆಲೆ ಬಾಳುವ ಭೂಮಿಯನ್ನು ಪುಕ್ಕಟೆಯಾಗಿ ಕೊಟ್ಟವರು. ಅಲ್ಲದೆ ಸಮಾಜದ ಕಳಕಳಿಯಿದ್ದ ಇವರು ಅಲ್ಲೀಪುರದಲ್ಲಿ ಸರಕಾರಿ ಪ್ರಾಥಮಿಕ ಶಾಲೆಗೂ ಊರ ಮುಂದಿನ ಜಾಗವನ್ನು ದಾನವಾಗಿ ಕೊಟ್ಟು ಗ್ರಾಮೀಣ ಬಡಮಕ್ಕಳಿಗೆ ನೆರವಾದವರು. ಈಗಲೂ ಆ ಶಾಲೆಗೆ ಗಂಗಾಲಾಪುರದ ಹನುಮಂತಪ್ಪ ಪ್ರಾಥಮಿಕ ಶಾಲೆ ಎಂದು ನಾಮಕರಣ ಮಾಡಲಾಗಿದೆ.

ನಾಯಕ ಸಮಾಜದ ರಾಜಕಾರಣಿಗಳಿಗೆ ಬೆಂಬಲವಾಗಿ ನಿಂತವರು ಇಂತಹ ಗುಣದ ಹನುಮಂತಪ್ಪನವರು ಎಂದೂ ರಾಜಕಾರಣಿಯಾಗಲು ಬಯಸಲಿಲ್ಲ. ಅವರು ಮನಸ್ಸು ಮಾಡಿದ್ದರೆ ಜಿಲ್ಲೆಗೆ ಎಂದೂ ಶಾಸಕರಾಗಿ ಸಚಿವರಾಗಿ ಅಧಿಕಾರ ಅನುಭವಿಸಬಹುದಾಗಿತ್ತು. ಆದರೆ ಸುತ್ತಣ ಯುವಕರನ್ನು ಬೆಳಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮುಖ್ಯವಾಗಿ ಇವರು ಗಾಂಧೀವಾದಿಗಳಾಗಿ ಶಾಂತ ಸ್ವಭಾವದವರಾಗಿದ್ದರು.

**ತೆಕ್ಕಲಕೋಟೆ ಸಿದ್ದಪ್ಪನವರು**

ಹಾಲಿ ಶಿರುಗುಪ್ಪ ಶಾಸಕ ಎಂ.ಎಸ್. ಸೋಮಲಿಂಗಪ್ಪನವರ ತಂದೆಯವರಾದ ಈ ಸಿದ್ಧಪ್ಪನವರು "ಬಳ್ಳಾರಿ ಜಿಲ್ಲೆಯ ದೇವರಾಜ ಅರಸರು" ಎಂದೆ ಪ್ರಖ್ಯಾತರಾದವರು. ಹಿಂದುಳಿದ ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯಲ್ಲಿ ಅಜ್ಞಾತವಾಗಿ ಬದುಕುತ್ತಿದ್ದ ಹಿಂದುಳಿದ ವರ್ಗಗಳನ್ನು ಕಂಡು ಅವರ ನೋವುಗಳನ್ನು ಉಂಡವರು. ಇಂತಹ ಅನಿಷ್ಟ ಪದ್ಧತಿಯ ವಿರುದ್ಧ ಸಿಡಿದೆದ್ದ ಸಿದ್ದಪ್ಪನವರು ಸಾಮಾಜಿಕ ಕ್ರಾಂತಿಯನ್ನು ಮಾಡಿದವರು. ಜಿಲ್ಲೆಯಲ್ಲಿ ಮೊದಲ ಬಾರಿಗೆ ಹಿಂದುಳಿದವರನ್ನು ಸಂಘಟಿಸಿ ಹೋರಾಟ ನಡೆಸಿದವರು. ಈ ಮೂಲಕ ನಮ್ಮ ಜನಗಳಿಗೆ ಸಾಮಾಜಿಕ ನ್ಯಾಯ ಸಿಗಬೇಕಾದರೆ ನಮಗೆ ರಾಜಕೀಯ ಮುಖ್ಯ ಎಂಬುದನ್ನು ಮನಗಂಡು ಸಿದ್ದಪ್ಪನವರು ಗ್ರಾಮ ಪಂಚಾಯ್ತಿಯಿಂದ ತಾಲ್ಲೂಕು ಪಂಚಾಯ್ತಿಯವರೆಗೆ ರಾಜಕಾರಣವನ್ನು ಮಾಡಿದವರು. ಸಣ್ಣ ಅಧಿಕಾರದಲ್ಲಿ ಇದ್ದರು ಜಿಲ್ಲೆಯಲ್ಲಿ ಯಾವೊಬ್ಬ ಶಾಸಕ, ಸಚಿವರು ಮಾಡದಂತ ಗಣನೀಯವಾದ ಸಮಾಜ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಟ ನಡೆಸಿ ಬಡವರಿಗೆ ಆತ್ಮಾಭಿಮಾನವನ್ನು ತುಂಬಿದವರು ಅವರು ಎಂದೂ ಶ್ರೀಮಂತರ ಮನೆ ಬಾಗಿಲಲ್ಲಿ ನಿಲ್ಲಲಿಲ್ಲ. ಕೆಳವರ್ಗದ ಹರಿಜನ ಕೇರಿಗಳಿಗೆ ಹೋಗಿ ಗುಡಿ ಗುಂಡಾರಗಳಲ್ಲಿ ಕುಳಿತು ಸಮಸ್ಯೆಗಳನ್ನು ತಿಳಿದುಕೊಂಡು ನ್ಯಾಯವನ್ನು ಕೊಡಿಸಿದವರು, ಸಿದ್ಧಪ್ಪನವರು ಬರುತ್ತಾರೆ ಎಂದು ತಿಳಿದರೆ ಸಾಕು ಜನಸ್ತೋಮ ಇಂತಹ ವ್ಯಕ್ತಿ ರಾಜ್ಯ ರಾಜಕಾರಣ ಕನಸು ಕಂಡಿದ್ದರು. ಭೀಮಪ್ಪನಾಯಕರು, ಹೋ.ಚಿ. ಬೋರಯ್ಯ, ನಿಜಲಿಂಗಪ್ಪನಂತವರ ಸಂಪರ್ಕವು ಇತ್ತು. ಆದರೆ ಇವರ ಏಳಿಗೆಯನ್ನು ಸಹಿಸಲಾರದ ಮುಂದುವರೆದ ಶಕ್ತಿಗಳ ಜಾತಿಗಳ ಪಿತೂರಿ, ವಂಚಕತನಕ್ಕೆ ಇವರ ಅಪಾರವಾದ ವ್ಯಕ್ತಿತ್ವ ಬಲಿಯಾಗಬೇಕಾಯಿತು ಎಂಬುದು ದುರಂತ.

**ತಳವಾರ ಸಣ್ಣ ವೆಂಕಟಪ್ಪನವರು**

ಹೂವಿನಹಡಗಲಿಯ ವಾಲ್ಮೀಕಿ ಸಮಾಜಕ್ಕೆ ಸೇರಿದ ಶ್ರೀ ತಳವಾರ ಸಣ್ಣ ವೆಂಕಟಪ್ಪನವರು ಪಂಚಾಯ್ತಿ ಮುಖಂಡನಾಗಿ ತನ್ನ ಊರಿನ ಪರಿಸರದ ಎಲ್ಲಾ ವರ್ಗದ ಜಾತಿಯ ಜನರ ನ್ಯಾಯ ನಿರ್ಣಯವನ್ನು ಮಾಡುವುದರಲ್ಲಿ ಹೆಸರು ಮಾಡಿದವರು. ಈ ಪಂಚಾಯ್ತಿ "ತಳವಾರ ವೆಂಕಟಪ್ಪನವರ ಪಂಚಾಯ್ತಿ" ಎಂದು ಪ್ರಸಿದ್ದಿ ಪಡೆದಿದ್ದವರು ಶ್ರೀಮಂತರಲ್ಲದಿದ್ದರೂ ಕೃಷಿಕ ಕಾಯಕವನ್ನು ಮಾಡುತ್ತಾ ಊರಿನಲ್ಲಿ ಸಮಾಜದ ಸುಧಾರಣೆಗಳು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದವರು.

**ಹೊಸಪೇಟೆಯ ಗುಜ್ಜಲ ಹನುಮಂತಪ್ಪನವರು**

ಅಪ್ಪಟ ಗಾಂಧೀವಾದಿಯಾಗಿದ್ದ ಗುಜ್ಜಲ ಹನುಮಂತಪ್ಪನವರು ಸಾಮಾನ್ಯ ಕೃಷಿಕ ಕುಟುಂಬದಲ್ಲಿ ಜನಿಸಿದವರು. ಸರಳಜೀವಿಗಳು, ಮಿತಭಾಷಿಗಳು ಜೊತೆಗೆ ಜಿಪುಣ ಸ್ವಭಾವದವರು. ಗ್ರಾಮ ಪಂಚಾಯ್ತಿ ಹಾಗೂ ನಗರಸಭೆಯಿಂದ ಪದವಿಯ ಎಲ್ಲಾ ರಾಜಕೀಯ ಅಧಿಕಾರವನ್ನು ಅನುಭವಿಸಿದವರು. ಅಧಿಕಾರವನ್ನು ಜನಕ್ಕೆ ಮೀಸಲಿಟ್ಟವರು ಎಂದು ಸ್ವಾರ್ಥಕ್ಕೆ ಬಳಸಿಕೊಂಡವರಲ್ಲ. ಅವರ ಜೀವನ ನೋಡುವುದಾದರೆ ಅವರ ಮನೆ ಯಲ್ಲಿ ಒಂದು ರೇಡಿಯೊ ಸಹ ಇರಲಿಲ್ಲ. ಟಿ.ವಿ., ಟೆಲಿಫೋನ್, ಕಾರು ದೂರದ ಮಾತು. ಶಾಸಕರಾಗಿದ್ದಾಗ ಅಭಿಮಾನಿಗಳು ಒತ್ತಡ ತಂದು ದೂರವಾಣಿ ಸಂಪರ್ಕ ಕಲ್ಪಿಸಿದರು. ಬಡತನ ಬಗ್ಗೆ ಬಹಳಷ್ಟು ಮಮತೆ ಇದ್ದ ಇವರು ಶಿಕ್ಷಣಕ್ಕೆ ಒತ್ತುಕೊಡುತ್ತಿದ್ದರು. ಆದರೆ ನೌಕರಿ ಬೇಕು ಎನ್ನುವವರಿಗೆ ಕೋಪದಿಂದ ಟೀಕಿಸುತ್ತಿದ್ದು ಉಂಟು. ನಾವು ನೆಲದ ಮಕ್ಕಳು ನೆಲವನ್ನು

ನಂಬಬೇಕು ಎಂದು ಬದುಕಿದವರು ರಾಮಕೃಷ್ಣ ಹೆಗಡೆಯವರ ನಿಕಟವರ್ತಿಗಳು ಆಗಿದ್ದರು. ಈ ಸಮಾಜದ ಮೇಲೆ ಅಪಾರ ಮಮತೆ, ಪ್ರೀತಿ ಬೆಳಸಿಕೊಂಡವರು ಇಂತಹ ಹನುಮಂತಪ್ಪನವರು ೧೯೮೯ರಲ್ಲಿಶಾಸಕರಾಗಿದ್ದಾಗ ಹೃದಯಘಾತದಿಂದ ನಿಧನ ಹೊಂದಿದರು.

**ಎನ್.ಟಿ. ಬೊಮ್ಮ್ಮಣ್ಣನವರು**

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹಿಂದುಳಿದ ಗ್ರಾಮವಾದ ನರಸಿಂಹಗಿರಿ ಎನ್ನುವ ಊರಿನ ಸಾಮಾನ್ಯ ಕುಟುಂಬದಿಂದ ಬಂದವರು. ಎನ್.ಟಿ. ಬೊಮ್ಮ್ಮಣ್ಣನವರು ಬಳ್ಳಾರಿ ಜಿಲ್ಲೆಯ ನಾಯಕ ಸಮಾಜದ ನಾಡಿ ಮಿಡಿತ ಅರಿತ ಗುಣವಂತರು ಕಪಟತೆ ಇಲ್ಲದೆ, ನೇರ ನಡೆ ನುಡಿಗೆ ಹೆಸರಾದವರು. ಕೂಡ್ಲಿಗಿ ವಿಧಾನ ಸಭೆಗೆ ೧೦ ವರ್ಷಗಳ ಕಾಲ ಶಾಸಕರಾಗಿ ಜನತೆಯ ಸೇವೆಯನ್ನು ಮಾಡಿದವರು. ಈ ಮಣ್ಣಿನ ಹದವನ್ನು ಅರಿತವರು ಅಧಿಕಾರ ಅವಧಿಯಲ್ಲಿ ಸಮಾಜದ ಏಳಿಗೆಗೆ ಶ್ರಮಿಸಿದವರು.

**ಎಂ.ಎಸ್. ಸೋಮಲಿಂಗಪ್ಪನವರು**

ತಂದೆಯಾದ ಸಿದ್ದನವರ ಗುಣಗಳನ್ನು ಮೈಗೂಡಿಸಿಕೊಂಡು ತಂದೆ ಕಂಡ ಕನಸನ್ನು ನನಸು ಮಾಡಿದವರು. ಸಿರುಗುಪ್ಪ ಶಾಸಕ ಎಂ.ಎಸ್. ಸೋಮಲಿಂಗಪ್ಪನವರು, ತಂದೆಯಂತೆ ಸದಾ ಬಡವರ ಪರಧ್ವನಿ ಮಾಡುತ್ತಲೆ ಬಂದಿದ್ದಾರೆ. ದಿನ ದುರ್ಬಲರಿಗೆ ಬಹಳಷ್ಟು ನೇರವಾಗಿದ್ದಾರೆ.

**ಬಿ. ಶ್ರೀ ರಾಮುಲು**

ಬಳ್ಳಾರಿ ಜಿಲ್ಲೆಯ ನಾಯಕ ಸಮಾಜದ ಮೊದಲ ಕ್ಯಾಬಿನೆಟ್ ಮಂತ್ರಿಯಾದ ಬಿ. ಶ್ರೀರಾಮುಲು ರಾಜ್ಯ ರಾಜಕಾರಣದಲ್ಲಿಯೇ ಚಿಕ್ಕ ವಯಸ್ಸಿನವರು. ತೀರ ಬಡತನದ ಕುಟುಂಬದಿಂದ ಬಂದವರು. ಸ್ವಬಲದಿಂದಲೇ ನಗರಸಭೆ ಸದಸ್ಯರಾಗಿ ಜನಮನ್ನಣೆಗೆ ಪಾತ್ರರಾದವರು. ನಂತರ ಕಾಂಗ್ರೆಸ್ ತೊರೆದು ಬಿ.ಜೆ.ಪಿಯನ್ನು ಸೇರಿ ಬಳ್ಳಾರಿಯ ಕಾಂಗ್ರೆಸ್ ಕೋಟೆಯನ್ನು ಛಿದ್ರ ಮಾಡಿ ಬಿ.ಜೆ.ಪಿಯ ನಾಯಕ ಎಂದು ಅಭಿಮಾನಿಗಳಿಂದ ಘೋಷಣೆ ಗಳನ್ನು ಕೂಗಿಸಿಕೊಂಡವರು. ಅಜ್ಞಾನವಾಗಿ ಕಗ್ಗತ್ತಲೆಯ ನಗರವಾಗಿದ್ದ ಬಳ್ಳಾರಿಯನ್ನು ಬೆಳಕಿನ ನಗರವಾಗಿ ನಿರ್ಮಿಸಿ ಬಳ್ಳಾರಿ ಶ್ರೇಷ್ಠ ರಾಜಕಾರಣಿ ಎಂದು ಹೆಸರಾಗಿದ್ದಾರೆ. ಜಿಲ್ಲೆಯ ಹಿರಿಯರ ಸಾವಿನ ನಂತರ ಅನಾಥವಾಗಿ ಹೋಗಿದ್ದ ವಾಲ್ಮೀಕಿ ಸಂಘದ ಜಾಗ ಹಾಸ್ಟಲ್‌ನ ಜಾಗವನ್ನು ಹೀಗೆ ಸುಂದರಿಕರಣಗೊಳಿಸಿ ಕಟ್ಟಡ ಕಟ್ಟಲು ಜವಬ್ದಾರಿಯನ್ನು ಮಾನ್ಯ ಮಂತ್ರಿಗಳು ಸಹಕರಿಸುತ್ತಿದ್ದಾರೆ. ಆದರೆ ನಿರೀಕ್ಷಿಸಿದಂತೆ ಕೆಲಸ ಇನ್ನು ಆಗಬೇಕಾಗಿದೆ.

**ರಾಜಕೀಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ನಾಯಕ ಸಮಾಜದ ಗಣ್ಯರು**

| | |
|---|---|
| ಎಂ.ಬಸಪ್ಪ | ಜಗಳೂರು ಶಾಸಕರಾಗಿದ್ದರು |
| ವಿ. ಎಸ್. ಉಗ್ರಪ್ಪ | ತುಮಕೂರು ಎಂ.ಎಲ್.ಸಿ |
| ಡಿ.ಎಮ್. ಸಾಲಿ | ಹಿರೇಕೆರೂರು ಎಂ.ಎಲ್.ಸಿ |
| ಶ್ರೀ ಗಂಗಾಧರ ನಾಯಕ | ಮಾನ್ವಿ ಎಂ.ಎಲ್.ಎ |
| ಶ್ರೀ ಎನ್.ವೈ. ಗೋಪಾಲಕೃಷ್ಣ | ಮೊಳಕಾಲ್ಮೂರು ಎಂ.ಎಲ್.ಎ |
| ಶ್ರೀ ಸತೀಶ್ ಜಾರಕಿಹೋಳಿ | ಗೋಕಾಕ್ ಎಂ.ಎಲ್.ಸಿ., ಮಾಜಿ ಸಚಿವರು |
| ಶ್ರೀ ಕೆ.ಎನ್. ರಾಜಣ್ಣ | ತುಮಕೂರು ಎಂ.ಎಲ್.ಎ |

| | |
|---|---|
| | (ಬೆಳ್ಳಾವಿ) |
| ಶ್ರೀ ರಾಜವೆಂಕಟಪ್ಪ ನಾಯಕ | ಸುರಪುರ ಮಾಜಿ ಎಂ.ಎಲ್.ಎ |
| ಶ್ರೀ ರಾಜರಂಗಪ್ಪನಾಯಕ | ರಾಯಚೂರು ಮಾಜಿ ಎಂ.ಪಿ |
| ಶ್ರೀ ಎ. ವೆಂಕಟೇಶ ನಾಯಕ | ರಾಯಚೂರು ಎಂ.ಪಿ |
| ಶ್ರೀ ಎನ್.ಟಿ. ಬೊಮ್ಮಣ್ಣ | ಕೂಡ್ಲಿಗಿ ಮಾಜಿ ಎಂ.ಎಲ್.ಎ |
| ಶ್ರೀ ಟಿ. ಸೋಮಪ್ಪ | ಕೂಡ್ಲಿಗಿ ಮಾಜಿ ಎಂ.ಎಲ್.ಎ |
| ಶ್ರೀ ಸೋಮಲಿಂಗಪ್ಪ ನಲವಾಗಿಲ | ರಾಣಿಬೆನ್ನೂರು ಮಾಜಿ ಎಂ.ಎಲ್.ಎ |
| ಶ್ರೀ ರಾಜಾಮದನ ಗೋಪಾಲನಾಯಕ | ಸುರಪುರ ಎಂ.ಎಲ್.ಎ., ಸಚಿವರು |
| ಶ್ರೀ ರಾಜ ಅಮರೇಶ ನಾಯಕ | ಗುರುಗುಂಟಾ-ಗುಂತಗೋಳ ಮಾಜಿ ಮಂತ್ರಿಗಳು |
| ಶ್ರೀ ಸಾ. ಲಿಂಗಯ್ಯ | ಸಿರಾ ಮಾಜಿ ಶಾಸಕರು |
| ಶ್ರೀ ಎಂ.ಎಲ್. ಮುತ್ತಣ್ಣನವರು | ಗೋಕಾಕ್ ಮಾಜಿ ಶಾಸಕರು |
| ಶ್ರೀ ರಮೇಶ ಜಾರಕಿಹೋಳಿ | ಗೋಕಾಕ್ ಶಾಸಕರು |
| ಶ್ರೀ ಎಂ.ಬಿ. ಕರಿನಿಂಗ | ಗೋಕಾಕ್ ಮಾಜಿ ಶಾಸಕರು |
| ಶ್ರೀ ಬಾಲಚಂದ್ರ ಜಾರಕಿಹೋಳಿ | ಅರಭಾವಿ ಕ್ಷೇತ್ರ ಗೋಕಾಕ್ ಸಚಿವರು |
| ಶ್ರೀ ಚಂದ್ರಶೇಖರ ಗುಡ್ಡಕಾಯಿ | ಗೋಕಾಕ್ ಮಾಜಿ ಶಾಸಕರು |
| ಶ್ರೀ ಸಿ. ವೀರಣ್ಣ | ಕೊರಟಗೆರೆ ಮಾಜಿ ಮಂತ್ರಿಗಳು |
| ಶ್ರೀ ಗೋವಿಂದಪ್ಪ ಜುಟ್ಟಲ್ | ಕುಂದಗೋಳ್ ಮಾಜಿ ಶಾಸಕರು |
| ಶ್ರೀ ಶಾಂತಕ್ಕ ಗುಜ್ಜಲ | ಧಾರವಾಡ ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯ್ತಿ |
| ಶ್ರೀ ಎಸ್. ಚಿಕ್ಕಮಾದು | ಹುಣಸೂರು ಶಾಸಕರು |
| ಶ್ರೀ ಪು್ನರ ಮುತ್ತಪ್ಪ | ಮೊಳಕಾಲ್ಮೂರು ಮಾಜಿ ಶಾಸಕರು |
| ಶ್ರೀ ಎನ್.ಜಿ. ನಾಯಕ | ಮೊಳಕಾಲ್ಮೂರು ಮಾಜಿ ಶಾಸಕರು |
| | ಉಗ್ರಾಣ ನಿಗಮದ ಅಧ್ಯಕ್ಷರಾಗಿದ್ದರು |
| ಶ್ರೀ ಪಟೇಲ್ ಪಾಪನಾಯಕ | ಮೊಳಕಾಲ್ಮೂರುಮಾಜಿ ಶಾಸಕರು |

ಇನ್ನು ಅನೇಕರು ರಾಜಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದನ್ನು ನೋಡಬಹುದು.

# ಬೇಡ ಬುಡಕಟ್ಟಿನ ಮಹಿಳೆ

ಸಮಾಜದಲ್ಲಿ ಲಿಂಗಭೇದದ ನೆಲೆ ಅಥವಾ ಜೈವಿಕ ಅಂಶದ ಎರಡು ಸಮೂಹಗಳಿದ್ದು, ಈ ಎರಡು ಸಮೂಹಗಳ ಮಧ್ಯ ಪ್ರಕೃತಿ ದತ್ತವಾಗಿ ಕೆಲ ಭಿನ್ನತೆಗಳಿವೆ. ಈ ಭಿನ್ನತೆಯಿಂದಾಗಿಯೇ ಮಾನವನ ಹುಟ್ಟು ಸಮಾಜದ ಉಳಿವು, ನಿರಂತರತೆಗೆ ಕಾರಣವಾಗಿದೆ. ಸ್ತ್ರೀಪುರುಷರಿಬ್ಬರೂ ಸಮಾಜದ ಎರಡು ಕಣ್ಣುಗಳು, ಒಂದು ನಾಣ್ಯದ ಎರಡು ಮುಖಗಳು ಅಥವಾ ಸಮಾಜವೆಂಬ ರಥದ ಎರಡು ಗಾಲಿಗಳಿದ್ದಂತೆ. ಹೆಣ್ಣಿಗೆ ಗಂಡಿನ ಅಗತ್ಯತೆ ಎಷ್ಟಿದೆಯೋ, ಗಂಡಿಗೂ ಹೆಣ್ಣಿನ ಅವಶ್ಯಕತೆ ಅಷ್ಟೇ ಇದೆ. ಈ ರೀತಿ ಇವರಿಬ್ಬರ ಮಧ್ಯೆ ಅಗತ್ಯತೆ, ಅವಶ್ಯಕತೆ, ಸಮಾನತೆ ಇದ್ದರೂ ವಾಸ್ತವಿಕವಾಗಿ ಕೆಲ ಅನುಭವ, ಸತ್ಯ ಹಾಗೂ ಸಂಗತಿ ಸಂಶೋಧನೆಗಳ ಆಧಾರದ ಮೇಲೆ ಸ್ತ್ರೀಯೇ ಪುರುಷನಿಗಿಂತ ಹೆಚ್ಚು ಶ್ರೇಷ್ಠತೆ ಹೊಂದಿದ್ದಾಳೆನ್ನಬಹುದು.

ನಮ್ಮ ಸಮಾಜವು ಬಹು ಧರ್ಮ, ಜಾತಿ ಸಂಸ್ಕೃತಿಯನ್ನು ಹೊಂದಿದ್ದು, ಇಲ್ಲಿನ ಮಹಿಳೆಯರನ್ನು ಸಮಾನ ರೂಪದ ಒಂದೇ ವರ್ಗವಾಗಿ ಚಿತ್ರಿಸಿರುವುದು ಅಥವಾ ನೋಡು ವುದು ಸರಿಯಲ್ಲ. ಕಾಲದಿಂದ ಕಾಲಕ್ಕೆ, ವರ್ಗದಿಂದ ವರ್ಗಕ್ಕೆ, ಧರ್ಮದಿಂದ ಧರ್ಮಕ್ಕೆ, ಭಿನ್ನವಾದ ಮಹಿಳೆಯರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬೇಡ ಬುಡಕಟ್ಟು ಮಹಿಳೆಯ ಸ್ಥಿತಿಗತಿಯನ್ನು ವಿಶ್ಲೇಷಿಸಬಹುದಾಗಿದ್ದು ಇವರ ಇತಿಹಾಸವೆಂದರೆ, ಅವರಿಗಿದ್ದ ಗೌರವ ಮತ್ತು ಸ್ವಾತಂತ್ರ್ಯ ಗತಿಸಿ ಹೋದ ಇತಿಹಾಸವೇ ಆಗಿದ್ದು ವೇದಗಳ ಕಾಲದವರೆಗೂ ಭಾರತೀಯ ಆದಿವಾಸಿಗಳು ಸ್ತ್ರೀಯನ್ನು ದೈವ ಸೃಷ್ಟಿಯಲ್ಲಿ ಒಂದು ಅಸಂಗತ ಪವಾಡ ಎಂದು ನಂಬಿ ವಿಶೇಷ ಸ್ಥಾನ ನೀಡಿ ದೈವೀ ಸ್ವರೂಪದಲ್ಲಿ ಪೂಜ್ಯತೆಯಿಂದ ಕಾಣಲಾಗುತ್ತಿತ್ತು. ಈಕೆ ಮನೆಯ ಒಡತಿಯಾಗಿದ್ದು ಅಸ್ತಿಯ ಮಾಲೀಕಳಾಗಿ ಹಿಂದಿನ ಸಮಾಜವು ಮಾತೃ ಪ್ರಾಧಾನತೆಯ ವ್ಯವಸ್ಥೆಯಿಂದ ಕೂಡಿತ್ತು. ಸ್ತ್ರೀಯು ಬರೆ ಬೀಸಿ ಬೇಟೆಯಾಡುವ ಗುಂಪು ಕ್ರಿಯೆಯಲ್ಲಿ ಗಂಡಸಿನ ಜೊತೆ ಸೇರಿ ದುಡಿಯುತ್ತಿದ್ದು ಕೆಲವೊಮ್ಮೆ ತಾವೇ ಬೇಟೆಯಾಡಿ ಕುಟುಂಬ ಸಾಕುತ್ತಿದ್ದುದಕ್ಕೆ ಸಾಕ್ಷಿಗಳಿವೆ. ಯುದ್ಧ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದುದಕ್ಕೆ ನಿದರ್ಶನಗಳಿವೆ. ಕುಟುಂಬದ ಪೋಷಣೆಯ ಜವಾಬ್ದಾರಿ ಹೊತ್ತ ಈಕೆ ಕೃಷಿಯನ್ನು ಕಂಡು ಹಿಡಿದ ಮೊದಲಿಗಳಾಗಿ ಆಹಾರೋತ್ಪಾದನೆಯ ಅನ್ವೇಷಕಿ ಎಂಬ ವಾದವೂ ಇದೆ. ತನ್ನ ವಿಶಿಷ್ಟ ಗುಣಗಳಾದ ತಾಳ್ಮೆ, ಜಾಣ್ಮೆ, ಸಹಿಷ್ಣುತೆ, ದೈಹಿಕ ದಣಿವನ್ನು ಗೌಣವಾಗಿಸಿ ಮುನ್ನಡೆಯುವ ದಿಟ್ಟತನವಿದ್ದು, ಜನ್ಮತಾ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿದ್ದಾಳೆ, ಕುಟುಂಬ ವನ್ನು ಪೋಷಿಸುವ, ಪಾಲಿಸುವ ಸದಸ್ಯರನ್ನು ಕ್ಷಮಿಸುವ ಪ್ರೀತಿಸುವ, ತಿದ್ದುವ ಭಾವ ಸಂಪತ್ತನ್ನು ಸಮೃದ್ಧವಾಗಿ ಹೊರಹೊಮ್ಮಿಸುವ ಈಕೆಯೇ ಸತ್ಯವಾಗಿ, ತಂದೆಗಿಂತ ಸಾವಿರ ಪಾಲು ಪೂಜ್ಯನೀಯಳಾಗಿದ್ದಾಳೆ. ಈಕೆಯು ಮಗುವಿಗೆ ಮೊಲೆಯುಣಿಸುವ ಕ್ರಿಯೆ ಸರಳ ವಾದುದಲ್ಲ. ಈ ಕ್ರಿಯೆಗೆ ಆಕೆ ಕನಿಷ್ಟ ದಿನವೊಂದಕ್ಕೆ ೫೦೦ ಕ್ಯಾಲರಿಗಳನ್ನು ವ್ಯಯ ಮಾಡಬೇಕು. ಇದು ಹೆಚ್ಚು ಕಡಿಮೆ ೮ ಕಿ.ಮೀ. ಗಳ ನಡಿಗೆಗೆ ತಿನ್ನುವ ಹದ್ದುಗಳ ಸಂಕೇತ ಎನ್ನುವುದು ಮಹಿಳೆಯರ ಪಾಲಿಗೆ ಅಕ್ಷರಶಃ ನಿಜವಾಯಿತು. ವಿದ್ಯೆಯ ಆಧಿದೇವತೆ ಶಾರದೆ ಎನಿಸಿಕೊಂಡ ಈಕೆಯನ್ನು ಅಕ್ಷರಸ್ಥಳನ್ನಾಗಿ ಮಾಡಲಾಯಿತು. ಐಶ್ವರ್ಯ ಸಂಪತ್ತಿನ ಅಧಿದೇವತೆ ಲಕ್ಷ್ಮಿಗೆ ಹೋಲಿಸಿಕೊಂಡ ಈಕೆ ಆರ್ಥಿಕ ಸ್ವಾತಂತ್ರ್ಯವಿಲ್ಲದೇ ಪರಾವಲಂಬಿ ಜೀವಿಯಾಗಬೇಕಾಯಿತು. ಶಕ್ತಿ ಸ್ವರೂಪಿಣಿ ಎಂದು ಹೆಸರು ಪಡೆದ ಈಕೆಯನ್ನು ನಿಶ್ಯಕ್ತಿಗೆ ದೂಡಿ ಶೋಷಣೆ, ದೌರ್ಜನ್ಯ, ತುಳಿತರಲ್ಲಿ ಒಳಗಾಗುವ ಪರಿಸ್ಥಿತಿಯನ್ನು ತಂದು, ವಿಧವೆಯಾಗಿ, ಮಹಾಸತಿಯಾಗಿ, ದೇವದಾಸಿಯಾಗಿ, ದಾಸಿ, ಗುಲಾಮಳಾಗಿ ಅನುಭಸಿದ ಹಿಂಸೆ, ನೋವು ನರಳಾಟಗಳಿಗೆ ಎಣೆಯೇ ಇಲ್ಲದಂತಾಗಿ, ಗಂಡಿನ ಭೋಗದ ಸಾಧನವಾಗಿ ಅವನಿಗಾಗಿ ಮಕ್ಕಳನ್ನು ಹೇರುವ ಯಂತ್ರವಾಗಿ ವೈದಿಕರು ಧರ್ಮ ಸ್ತ್ರೀ ಪರಾಧೀನತೆ ಎತ್ತಿ ಹಿಡಿದು, ಗಂಡು ಸಂತಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ಬಂದು ಸುಪುತ್ರೋಕುಲದೀಪಕ, ಸಂಸಾರದ ಆಶಾಜ್ಯೋತಿ, ತಂದೆ ತಾಯಿಯರನ್ನು ಪೋಷಿಸುವುದು ಎಂದು ಗಂಡು ಮಕ್ಕಳಿಗೆ ಹಂಬಲಿಸಿ, ದೇವರಿಗೆ ಹರಿಕೆ ಹೊತ್ತ ನಿದರ್ಶನಗಳು ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಗಾದೆಯೊಂದು ಹೀಗಿದೆ. 'ಮಗ ಸತ್ತರೆ ಮನೆಹಾಳು, ಸೊಸೆ ಸತ್ತರೆ ಶೋಬಾನ' ಎನ್ನುವಂತೆ ಸ್ತ್ರೀ ಸತ್ತರೆ ಮರುಕಪಡದೇ ಪುನರ್ ವಿವಾಹ ಮಾಡುವರು. ಸ್ತ್ರೀಯ ಈ ಸ್ಥಿತಿಯನ್ನು ಕಂಡು ಕವಯಿತ್ರಿ ಒಬ್ಬರು ತನ್ನ ಅಳಲನ್ನು ಈ ರೀತಿ ತೋಡಿಕೊಂಡಿದ್ದಾರೆ. ನಾವು ಅಪ್ಪಟ ನಾರಿಯರು ತತ್ವಗಳಲ್ಲಿ ದೇವಿಯಾದವರು, ಭ್ರೂಣವಿರುವಾಗಲೇ ಬೇಡವಾದವರು, ಬೆಳೆಯುತ್ತಾ ಹೊರೆಯಾದವರು. ಮದುವೆ ಮಾರುಕಟ್ಟೆಯಲ್ಲಿ ಸರಕಾದವರು.

ಬದುಕಿಡೀ ಯಾರದೋ ದಯೆಗೆ ಕೈಯೊಡ್ಡಿ ಬಗ್ಗಿ ಹೋದವರು, ನಾವು ಮಗಳಾದೆವು, ಹೆಂಡತಿಯಾದೆವು, ತಾಯಿ ಯಾದವು, ಬದಿಕಿಡೀ ಯಾರದೋನೆರಳಾದವು. ಕೊನೆಗೂ ನಾವು ನಾವಗಲೇ ಇಲ್ಲ. ಎಂಬ ಪಾಪಜೀವನಕ್ಕಾಗಿಯೇ ಹುಟ್ಟಿದವರು ನಾವೆಂಬ ನೋವನ್ನು ವ್ಯಕ್ತಪಡಿಸಿದ್ದಾರೆ.

ಜನಸಂಖ್ಯೆ ನಿಯಂತ್ರಣದ ಯೋಜನೆಗಳಂತೂ ಸ್ತ್ರೀಯ ಮೇಲೆ ದೌರ್ಜನ್ಯಗಳನ್ನೇ ನಡೆಸಿ, ಆಕೆಯ ಬೇಕು, ಬೇಡ, ಒತ್ತಡ ಮಾನಸಿಕ ತಯಾರಿ, ಈ ಯಾವುದಕ್ಕೂ ಗಮನ ಕೊಡದೇ ಆಕೆಯ ಗರ್ಭದ ಮೇಲೆ ಆಕ್ರಮಣವನ್ನೇ ಮಾಡಿವೆ.

ಸ್ತ್ರೀಯರ ಹುಟ್ಟಿನೊಂದಿಗೆ ಬೆಳೆದುಕೊಂಡ ಬಂದ ಬದುಕನ್ನು ಕಸಿದುಕೊಂಡು ಈ ನೆಲೆಯಿಂದ ಹೊರಬಂದು ಅಪರಿಚಿತ ನೆಲೆಯಲ್ಲಿ ಬಾಳಬೇಕಾದ ಅನಿವಾರ್ಯತೆ, ಇದನ್ನು ಪ್ರಶ್ನಿಸಲು ಅವಕಾಶವಿಲ್ಲದಂತೆ ಅದಕ್ಕೊಂದು ಭಾವನಾತ್ಮಕ ನೆಲೆ ಬೆಲೆ ಸೃಷ್ಟಿಸಿ, ಗಂಡ ಮನೆ ಮಕ್ಕಳು ಎಂದು ಹಲಬುತ್ತಾ ತನ್ನನ್ನು ದುಡಿಸಿಕೊಳ್ಳುವವರ ಕಟುನುಡಿಗಳನ್ನು ನಿತ್ಯ ಸುರಿಮಳೆಯಾಗುತ್ತಿದ್ದರೂ ಮನಸ್ಸನ್ನು ಮುಕ್ತವಾಗಿ ಬಿಚ್ಚಿಕೊಳ್ಳುವಂತಿಲ್ಲ. ಬಿಚ್ಚಿಕೊಂಡರೆ ತನ್ನ ಮತ್ತು ಮಕ್ಕಳ ಭವಿಷ್ಯದ ಭಯ ಕಾಡುವುದು. ಪರಿಣಾಮ ತನ್ನದೇ ಆದ ಭಾವ ಲಯಗಳಲ್ಲದೇ, ಅಭಿರುಚಿಗಳಲ್ಲದೇ, ಅವರ ಬದುಕು ಜಿಡ್ಡುಗಟ್ಟಿದ ವ್ಯವಸ್ಥೆಯಡಿ ನಿಂತ ನೀರಾಗಿ ನಾರುತ್ತಿದೆ. ಪುರುಷರು, ವರ್ಗ, ವರ್ಣ, ಜಾತಿ ವೈಷಮ್ಯಗಳಿಗಾಗಿ ಹೋರಾಡಿ ಬಡಿದಾಡಿ ಸತ್ತರೆ, ಸ್ತ್ರೀ ಆಶ್ರಯಕ್ಕಾಗಿ ಬಡಿದಾಡಬೇಕಾಗಿ ಬಂದಿರುವುದು ಅವರ ಜೀವನದಲ್ಲಿ ಶೋಷಣೆ, ಅಗತ್ಯ, ಅನಿವಾರ್ಯವೆನ್ನುವಂತೆ ಮಾಡಿ ಅವರ ನಿಟ್ಟುಸಿರು ಇಂದು ದಟ್ಟೈಸಿದೆ. ಅದ್ದರಿಂದ ಚಿಂತಕ ಲಕನ್ ಹೇಳುತ್ತಾರೆ ''ಮಹಿಳೆ ಎಂದರೆ ಅಸ್ತಿತ್ವದಲ್ಲಿದ್ದು ಅದೊಂದು ಖಾಲಿ ಸ್ಥಳ ಒಂದು ಮಾನ, ಅದೃಶ್ಯ, ಕಣ್ಣೀರಿನ ತೊಟ್ಟಿ, ಮಾಲ್ಯರಹಿತ ವಸ್ತು, ಭೋಗಕ್ಕೆ ಮಾತ್ರ ಸೀಮಿತ, ನೋವಿನ ಕಡಲನ್ನು ಹೊತ್ತ ಅಸಹಾಯಕ" ಎಂದಿದ್ದಾರೆ.

ನ್ಯಾಯ ಶಾಸ್ತ್ರ, ಧರ್ಮ ಶಾಸ್ತ್ರಗಳು, ಪುರುಷ ಪ್ರಾಧಾನ್ಯತೆಯನ್ನು ಎತ್ತಿಹಿಡಿದು ಹೊಸ ವಿಚಾರಗಳನ್ನು ವ್ಯಕ್ತಪಡಿಸಿ, ಸ್ತ್ರೀ ಹಿತಕ್ಕೆ ದಕ್ಕೆ ತಂದು ಆ ಮೂಲಕ ಸ್ತ್ರೀ ಸಂಬಂಧಿತ ಹಲವಾರು ಸಮಸ್ಯೆಗಳು ಬಾಲ್ಯ ವಿವಾಹ, ವರದಕ್ಷಿಣೆ, ಸತಿಪದ್ಧತಿ ವಿಧವಾ ಸಮಸ್ಯೆ, ದೇವದಾಸಿ ಪದ್ದತಿ ಮುಂತಾದವುಗಳ ಬೆಳವಣಿಗೆಗೆ ಕಾರಣವಾದವು. ಉದಾಹರಣೆಗೆ ಇವರ ಕೆಲವು ಹೇಳಿಕೆಗಳು ಹೀಗಿವೆ.

೧. ದಕ್ಷ: ಎಂಬ ಶಾಸ್ತ್ರಕಾರ ಪತಿ ಪೌನೌಸಶ ವ್ಯಭಿಚಾರಿಯಾಗಿದ್ದರೂ ಪತ್ನಿ ಆತನನ್ನು ಸೇರಬೇಕು ಸಣ್ಣ ಜಿಗಣಿ ಕೇವಲ ರಕ್ತ ಹೀರುತ್ತದೆ. ಆದರೆ ಸ್ತ್ರೀ ಒಬ್ಬ ಪುರುಷನ ಆಸ್ತಿ ಸತ್ವ, ಶಕ್ತಿ, ಬಲ ಎಲ್ಲಾ ಹೀರುತ್ತಾಳೆ ಎಂದಿದ್ದಾನೆ.

೨. ಅತ್ರಿ: ಎಂಬ ಮತ್ತೊಬ್ಬ ಶಾಸ್ತ್ರಕಾರ ''ಪತ್ನಿ ಪುಣ್ಯ ಸಂಪಾದನೆ ಮಾಡಲು ತನ್ನ ಗಂಡನ ಪಾದ ತೊಳೆದು ಆ ನೀರನ್ನು ಕುಡಿಯಬೇಕಷ್ಟೇ'' ಎಂದಿದ್ದಾರೆ.

೩. ಗೌತಮ, ನಾರದ, ಮನು, ಯಾಜ್ಞವಲ್ಕ ಮುಂತಾದ ಶಾಸ್ತ್ರಕಾರರು ''ಸ್ತ್ರೀಯರು ಸ್ವಭಾವತಃ ಸುಳ್ಳನು ಹೇಳುವವರಾಗಿದ್ದರಿಂದ ಅವರನ್ನು ಕೊಲೆಗಡುಕರು, ಹಾವಾಡಿಗರು, ಹುಚ್ಚರು ಬಾಲಕರ ಪಟ್ಟಿಯಲ್ಲಿ ಸ್ತ್ರೀಯರು ಸೇರಿದ್ದಾರೆ'' ಎನ್ನುವರು.

೪. ಮನು: ''ಗಂಡನು ಕೋಪಿಸಿಕೊಂಡರೂ ಸರಿಯೇ ನೀನು ಕೋಪಗೊಳ್ಳಬೇಡ, ಗಂಡನ ಮನೆಯಲ್ಲಿ ದಾಸಿಯಾಗಿದ್ದರೂ ಸರಿಯೇ ನಿನ್ನ ಮೇಲಿನ ಒಡೆತನವನ್ನು ಅವನಿಗೆ ಒಪ್ಪಿಸಬೇಕು'' ಎಂದಿದ್ದಾನೆ.

ಹೀಗೆ ಸ್ತ್ರೀಯನ್ನು ಅತಂತ್ರ, ಅಭದ್ರತೆ, ಪರಾವಲಂಬಿ, ಅಸಮಾನತೆಯ ಜೀವನಕ್ಕೆ ಸಿಲುಕಿಸಿದ್ದು ವಿಷಾದನೀಯವಾಗಿದೆ.

ಸ್ತ್ರೀಯ ಲೈಂಗಿಕ ಸ್ವಾತಂತ್ರ್ಯದ ಹಕ್ಕನ್ನು ಕಿತ್ತುಕೊಂಡು ಆಕೆಯ ದೇಹ ಮತ್ತು ಮನಸ್ಸಿನ ಮೇಲೆ ಅತಿಯಾದ ನಿರ್ಬಂಧಗಳನ್ನು ಹೇರಿ ಆಕೆಯ ದೇಹ, ಭಯ ಆತಂಕಗಳ ಮೂಲವಾಗಿ ಮಾಡಿ, ಆ ಮೂಲಕ ಸ್ತ್ರೀಯ ದೇಹ ಸಂರಕ್ಷಿಸಲ್ಪಡುವ ವಸ್ತುವಾಗಿರುವುದರಿಂದ, ಅದು ಕೆಡುವ ಕಳೆದುಹೋಗುವ ಭಯ ಒಡ್ಡಿದೆ. ಈ ಭಯದ ನೆಲೆಯಲ್ಲಿ ಹೆಣ್ಣಿನ ದೇಹ ಸಂಪತ್ತಾಯಿತು. ಈ ಸಂಪತ್ತು ಒಡೆಯನನ್ನು ಪಡೆಯಿತು. ಆ ಒಡೆತನ ಪಡೆದ ಪುರುಷ ಆಕೆಯನ್ನು ಆತನ ಸ್ವತ್ತಾಗಿ ಮಾಡಿಕೊಂಡ. ಆದರೂ ಸ್ತ್ರೀಯು ಯಾವುದೇ ಸ್ಥಳದಲ್ಲಾಗಲೀ ಸುರಕ್ಷಿತಳಲ್ಲ. ಭೀತಿಯ ನೆರಳು ಆಕೆ ಹೋದೆಡೆಯಲ್ಲೆಲ್ಲ ಅಟ್ಟಿಸಿಕೊಂಡು ಬರುತ್ತದೆ. ಸಾರ್ವಜನಿಕ ಸ್ಥಳದಲ್ಲಾಗಲೀ ಕಾನೂನು ಮತ್ತು ವ್ಯವಸ್ಥೆಯ ರಕ್ಷಕರೆನಿಸಿಕೊಂಡವರ ಆಶ್ರಯದಲ್ಲಾಗಲೀ ಎಲ್ಲೂ ಸುರಕ್ಷತವಲ್ಲ. ಸ್ತ್ರೀಯರ ಮೇಲೆ ದಾಖಲಾದ ಅಪರಾಧಗಳ ಸಂಖ್ಯೆಯು ಒಂದು ವರ್ಷದಲ್ಲಿ ೧,೪೪,೦೦೦ ವನ್ನು ಮೀರಲಿದೆ. ಎನ್ನಬಹುದಾಗಿದೆ. ಮೇಲ್ಜಾತಿಯ ಮಹಿಳೆಗಿಂತಲೂ ಬೇಡ ಬುಡಕಟ್ಟು ಮಹಿಳೆ ಹೆಚ್ಚು ಸ್ವಾತಂತ್ರ್ಯರಾಗಿದ್ದು ಜಾತಿಯ ಬಿಗುವಿನಿಂದ ಸ್ವಲ್ಪ ಮಟ್ಟಿಗೆ ಮುಕ್ತಾರಾಗಿದ್ದಾರೆ. ಹಾಗೇ ಸಾರ್ವಜನಿಕ ಜೀವನಕ್ಕೂ ಅವಕಾಶವಿದ್ದು ಕೆಲ ಮಹಿಳೆಯರನ್ನು ತಮ್ಮ ಗಂಡಂದಿರೊಂದಿಗೆ ಕೃಷಿ ಕಾರ್ಯಗಳಲ್ಲಿ ಕರಕುಶಲ ವೃತ್ತಿಗಳಲ್ಲಿ ತೊಡಗಿ ಚಲನವಲನಗಳ ಸ್ವಾತಂತ್ರ್ಯ ಸ್ವಲ್ಪಮಟ್ಟಿಗೆ ಅನುಭವಿಸು ವುದೂ ಇದೆ. ಆದರೂ ಕೆಲವು ಕಡೆ ದಲಿತ ಹೆಣ್ಣುಗಳನ್ನು ಹಾಡು ಹಗಲೇ ಬೆತ್ತಲೆಗೊಳಿಸುವ ಲೈಂಗಿಕ ಕಿರುಕುಳ ನೀಡುವ ಗಂಡಸರು ನಾಡಿನುದ್ದಕ್ಕೂ ಆವರಿಸಿಕೊಂಡಿದ್ದು, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಹಿತ್ಯಿಕ ಕ್ಷೇತ್ರಗಳಲ್ಲೂ ಇವರನ್ನು ಅನುಕೂಲಸಿಂಧುವಾಗಿ ಬಳಸಿಕೊಳ್ಳಲಾಗುತ್ತಿದೆ. ಕಾರಣ ಆರ್ಥಿಕ ದಮನಕ್ಕೆ ಒಳಗಾದ ಈ ಸ್ತ್ರೀಯರು ಇಂದು ಸಾಮಾಜಿಕ ದಮನಕ್ಕೂ ಒಳಗಾಗಿರುವುದು ಸಹಜವೆನಿಸಿದೆ. ಮೇಲಿನ ಎಲ್ಲಾ ಬಗೆಯ ಶೋಷಣೆಗಳು ಸಾಮಾನ್ಯವಾಗಿ ಬೇಡ ಬುಡಕಟ್ಟು ಸ್ತ್ರೀಯರ ಸಹಿತ ಎಲ್ಲಾ ಸ್ತ್ರೀಯರು ಅನುಭವಿಸುತ್ತಿರುವುದು ದುರದೈವದ ಸಂಗತಿ. ಈ ಸಾಮಾನ್ಯ ಶೋಷಣೆಯ ಜೊತೆಗೆ ಸಮಾಜದ ದ್ವಿಮುಖ ನೀತಿಯಿಂದಾಗಿ ಬೇಡ ಮಹಿಳೆಯರಿಗಾಗಿ ಕೆಲವು ವಿಶೇಷ, ಪ್ರತ್ಯೇಕ ಸಮಸ್ಯೆಗಳು ಇವೆ. ಅವುಗಳೆಂದರೆ ಬೆತ್ತಲೆ ಸೇವೆ, ದೇವದಾಸಿ ಪದ್ಧತಿ, ವೇಶ್ಯಾವೃತ್ತಿ, ಇವುಗಳನ್ನು ಗುರುತಿಸಬಹುದಾಗಿದೆ.

ಬೇಡ ಬುಡಕಟ್ಟಿನ ಸ್ತ್ರೀಯರು ವೇದಗಳ ಕಾಲದಿಂದ ಇಂದಿನವರೆಗೂ ಈ ಪ್ರತ್ಯೇಕ ಸಮಸ್ಯೆಗಳಿಂದ ಬಳಲುತ್ತಿದ್ದು ಇದರಲ್ಲಿ ಸಾವಿರಾರು ಮಹಿಳೆಯರು ತಮ್ಮ ಬದುಕಿನ ಮೂಲ ಭೂತ ಅಗತ್ಯಗಳಿಗಾಗಿ ದೇವದಾಸಿ ಸಂಪ್ರದಾಯದ ಹೆಸರಿನಲ್ಲಿ ದೇಹ ಮಾರಿಕೊಳ್ಳಬೇಕಾದ ಪರಿಸ್ಥಿತಿ ಇದ್ದು, ಮೇಲ್ವರ್ಗ, ಮೇಲ್ಜಾತಿ ಮಹಿಳೆಯರನ್ನು ನೈತಿಕ ನೆಲೆಗಟ್ಟಿನಲ್ಲಿ ಪ್ರತಿನಿಧಿಕರಿಸಿದೆ. ಇವರು ಸುಲಭವಾಗಿ ಎಲ್ಲರಿಗೂ ಲೈಂಗಿಕವಾಗಿ ಲಭ್ಯ. ಅವರ ಕೌಟುಂಬಿಕ ಸಾಮಾಜಿಕ ಹಿನ್ನೆಲೆಯನ್ನು ಹಾಗೆ ರೂಪಿಸಲಾಗಿದೆ. ಪುರುಷ ಪ್ರಾಧಾನ್ಯ ವ್ಯವಸ್ಥೆಯನ್ನು ಲೈಂಗಿಕ ಸ್ವೇಚ್ಛಾಚಾರಕ್ಕಾಗಿಯೇ ಸೃಷ್ಟಿಸಿಕೊಂಡ ಸೂಳೆ ವ್ಯವಸ್ಥೆ. ತಳ ಸಮುದಾಯದ ಮಹಿಳೆಯರನ್ನು ದಾಸಿ ನೆಲೆಯಲ್ಲಿ ಪ್ರತಿನಿಧಿಕರಿಸಿ ಪುರುಷರನ್ನು ಗುಲಾಮರಂತೆ ನಡೆಸಿ ಕೊಳ್ಳುತ್ತಾ ಧರ್ಮ, ಜಾತಿ, ಬಡತನ, ಲಿಂಗ ವ್ಯವಸ್ಥೆಗಳು ಅವರನ್ನು ನಿಸ್ಸಹಾಯಕನ್ನಾಗಿಸಿ ಮೇಲ್ಜಾತಿ ಪುರುಷರನ್ನು ಪ್ರಶ್ನಿಸುವ ಧೈರ್ಯ ಕೆಳಜಾತಿಗಳಿಗೆಲ್ಲ ತಮ್ಮ ಕನ್ಯೆಯರನ್ನು ಅಪಹರಿಸಿದರೂ, ಅವರನ್ನು ಸೂಳೆಯನ್ನಾಗಿಸಿಕೊಂಡರೂ ಅಸಹಾಯಕತೆಯಿಂದ ಮಾನವಾಗಿರುವರು. ಮಾನವಿಯತೆಗೆ ಮಸಿಬಳಿಯುವ ಬೆತ್ತಲೆ ಸೇವೆ, ದೇವದಾಸಿ ಪದ್ಧತಿ, ವೇಶ್ಯಾವೃತ್ತಿ, ಮುಂತಾದ ದುಷ್ಟಪದ್ಧತಿಗಳು, ಈ ಸಮುದಾಯದ ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ನೆಲೆ ಇಲ್ಲದೇ ಸಾವಿರಾರು ಸ್ತ್ರೀಯರನ್ನು ಕಾಡುತ್ತಿದ್ದ ಇವರನ್ನು ವಿವಾಹ ಸಂಸಾ್ಕರದಿಂದ ದೂರವಿಟ್ಟು, ದಾಂಪತ್ಯ ಸುಖ ಜೀವನದ ಅನುಭವದಿಂದ ವಂಚಿತರನ್ನಾಗಿ ಮಾಡಿ. ಪತಿ ಪತ್ನಿ ಮಕ್ಕಳು ಎಂಬ ಪವಿತ್ರ ಪದ ಮೌಲ್ಯಗಳಿಂದ ಹೊರಗಿಟ್ಟು, ಲೈಂಗಿಕ ಶೋಷಣೆಗೆ ಒಳಪಡಿಸಿ ಇವರಿಗೆ ಹುಟ್ಟಿದ ಮಕ್ಕಳು ತಂದೆ ಇಲ್ಲದೇ ಹಟ್ಟಿದವರೆಂಬ ಕಳಂಕ ಹೊತ್ತು ಅವಮಾನದಿಂದ ನಗೆಪಾಟಲಿಗೆ ಗುರಿಯಾಗುವಂತೆ ಮಾಡುವ ಮೂಲಕ ಜನಾಂಗದ ಸ್ವಾಭಿಮಾನವನ್ನು ನಾಶಪಡಿಸಲಾಗುತ್ತಿದೆ. ಇಂಥ ಮೌಲ್ಯಗಳನ್ನು ನಾವಿಂದು ಪ್ರಶ್ನಿಸುವ ಆತ್ಮಾವಲೋಕನ ಮಾಡಿಕೊಳ್ಳುವ ಜವಾಬ್ದಾರಿ ಈ ಜನಾಂಗದ ಮೇಲಿದೆ. ಈ ಬಗ್ಗೆ ಇಂದಿಗೂ ಮಾನವೀಯ ಅನುಕಂಪವಲ್ಲದೇ ರಾಜಕೀಯವಾಗಿ ಕಾಡಿಕೊಂಡು ಬರುತ್ತವೆ. ವೀರಶೈವ ಧರ್ಮದ ತತ್ವಗಳು, ಧಾರ್ಮಿಕ ಚಳುವಳಿ, ಸಮಾಜ ಸುಧಾರಣಾ ಅಂದೋಲನ ಪಾತ್ರ ಜೊತೆಗೆ ಭಕ್ತಿ ಪಂಥದ ಪ್ರಯತ್ನಗಳಿಂದಾಗಿ ಸ್ತ್ರೀಯರ ಸ್ವಾತಂತ್ರ್ಯದ ಅಗತ್ಯತೆ ಮನಗಂಡು ಉತ್ತಮಪಡಿಸಲು ಶ್ರಮಿಸಿದರು. ಬ್ರಿಟಿಷರ ಆಳ್ವಿಕೆಯಲ್ಲಿ ಬುಡಕಟ್ಟು ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರೋನೀಡಲಾಯಿತು.

ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆಯ ಮಹತ್ವ ಅರಿತು, ತಮ್ಮ ಹೋರಾಟದಲ್ಲಿ ಈ ಸ್ತ್ರೀಯರನ್ನು ಭಾಗವಹಿಸಲು ಮನ ಒಲಿಸಿ ಆ ಮೂಲಕ ರಾಷ್ಟ್ರಕ್ಕೆ ಸ್ವಾತಂತ್ರ್ಯ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ನಗರೀಕರಣ, ವಿಭಕ್ತ ಕುಟುಂಬಗಳ ಹೆಚ್ಚಳ, ಶಿಕ್ಷಣ, ಉದ್ಯೋಗವಕಾಶಗಳ ಪರಿಣಾಮ ದಿಂದ ಸ್ತ್ರೀಯರು, ಮನೆಯಿಂದ, ಹೊರಬಂದು ಕಾರ್ಖಾನೆ, ಕಛೇರಿ ಕೈಗಾರಿಕೆಗಳಲ್ಲಿ, ವ್ಯಾಪಾರ, ಕೃಷಿ, ಹೈನುಗಾರಿಕೆ, ಕೂಲಿ ಜೊತೆಗೆ ಮಿಸಲಾತಿ ವ್ಯವಸ್ಥೆಯಿಂದಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾವಹಿಸುವ ಅಧಿಕಾರ ಪಡೆಯುವಲ್ಲಿಯೂ ಸಮರ್ಥಳಾಗಿ ಹಲವಾರು ಸಂಘ ಸಂಸ್ಥೆಗಳನ್ನು, ಸ್ತ್ರೀ ಶಕ್ತಿ, ಸ್ವಶಕ್ತಿಗಳನ್ನು ಸ್ಥಾಪಿಸಿಕೊಂಡು ಸ್ವಾವಲಂಬಿಯಾಗಿ ಬದುಕು ತ್ತಿದ್ದಾರೆ. ತಮ್ಮ ಮನೆಯ ಕೆಲವು ಪುರುಷರು ಹಲವಾರು ದಶ್ಚಟಗಳಿಗೆ ದಾಸರಾಗಿ, ಮನೆಯ ಜವಾಬ್ದಾರಿಯಿಂದ ಜಾರಿಕೊಂಡು ತಮ್ಮ ಸ್ತ್ರೀಯರನ್ನು ಪೀಡಿಸುತ್ತಾ ಕಾಡಿಸುತ್ತಾ ಅಲೆದಾಡುವುದು ಕಂಡುಬರುತ್ತದೆ. ಇಂಥ ಕುಟುಂಬಗಳ ಸ್ತ್ರೀಯರು ಸಾವಿರಾರು ಸಂಖ್ಯೆ ಯಲ್ಲಿದ್ದು ತಮ್ಮ ಮನೆ ಮಕ್ಕಳ ಜವಾಬ್ದಾರಿಯನ್ನು ಹೊತ್ತು ತಮ್ಮ ಕುಟುಂಬ ಬೆಳಗುವ ಜ್ಯೋತಿಯಾಗಿ ಆ ಮೂಲಕ ಇಡೀ ಸಮಾಜವನ್ನು ಜಗಮಗಿಸುತ್ತಿದ್ದಾಳೆ. ಕುಟುಂಬದಲ್ಲಿ ಮೊದಲೇ ಎದ್ದು ದಿನವಿಡೀ ದುಡಿದು ಕೊನೆಯಲ್ಲಿ ಮಲಗುವವಳು ಇವಳೇ ಆಗಿದ್ದಾಳೆ. ಕುಟುಂಬ ವೃದ್ಧಿಯಾಗಲು ಅಥವಾ ಪತನವಾಗಲು ಹೆಣ್ಣು ಕಾರಣವಾಗುತ್ತಿದ್ದು ಕುಟುಂಬಗಳ ಆಧಾರ ಸ್ಥಂಭವಾಗಿ ಉಳಿತಾಯದ ರೂವಾರಿಯಾಗಿ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುವ ಮೂಲಕ ಸ್ವಸ್ಥ್ಯ ಸಮಾಜಕ್ಕೂ ಕಾರಣವಾಗಿದ್ದಾರೆ.

ಜೇಮ್ಸ ಮಿಲ್‌ರವರು ಒಂದು ಸಮಾಜದ ಅಭಿವೃದ್ಧಿಯಲ್ಲಿ ಅಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ಲಕ್ಷಿಸಿ ಗುರುತಿಸಬಹುದು ಎಂದಿದ್ದಾರೆ. ಇದಕ್ಕೆ ಪೂರಕವೆನ್ನುವಂತೆ ನಮ್ಮ ಸಂವಿಧಾನವು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ನೀತಿ ಆಚರಣೆಗೆ ತರುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ತ್ರೀಯರ ಹಿತರಕ್ಷಣೆಗಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಅವರ ಕಲ್ಯಾಣಭಿವೃದ್ಧಿಯಿಂದ, ಅನೇಕ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಜಾರಿಗೊಳಿಸಿದ್ದು, ಇಡೀ ಜಗತ್ತಿನಲ್ಲಿ ಅತೀ ಹೆಚ್ಚಿನ ರಾಜಕೀಯ, ಆರ್ಥಿಕ, ಸಾಮಾಜಿಕ ಹಕ್ಕುಗಳನ್ನು ಹೊಂದಿದ್ದು ಜೊತೆಗೆ ಕಾನೂನು ಶಾಸನಗಳಿದ್ದರೂ ಪುಡಾರಿ ರಾಜಕಾರಣಿಗಳು ಅಧಿಕಾರಿಗಳ ಅಸಡ್ಡೆತೆ ಅನಾಸಕ್ತಿಯಿಂದ ಅಂದುಕೊಂಡ ಮಟ್ಟಿಗೆ ಸುಧಾರಣೆ ತರಲಾಗಿಲ್ಲ. ಕೆಲವರಿಗೆ ಯೋಜನೆಗಳು ಪೂರ್ಣ ತಿಳಿದು, ಅವುಗಳಾವುವು ಎನ್ನುವುದು ತಿಳಿಯದಾಗಿದೆ. ಕಾರಣ ಇವರು ಸ್ತ್ರೀ ಸುಧಾರಣೆಯ ಹಾದಿಯಲ್ಲಿ ಮುಳ್ಳುಗಳಾಗಿದ್ದಾರೆ. ಅದರೂ ಕೆಲವು ನಗರ ಪಟ್ಟಣದ ಬೇಡ ಬುಡಕಟ್ಟು ಮಹಿಳೆಯರು ಇತರ ಸಮುದಾಯದ ಮಹಿಳೆಯರಿಗಿಂತ ಕಡಿಮೆ ಇಲ್ಲ. ಶಿಕ್ಷಣ ಪಡೆದು ಪ್ರಜ್ಞಾವಂಥರಾಗಿ ರಾಜಕೀಯವಾಗಿ ಅಧಿಕಾರ ಪಡೆದವರಿದ್ದು ಇನ್ನು ಕೆಲವರು ವಿಜ್ಞಾನಿಗಳು, ಅಧ್ಯಾಪಕರು, ಎಂಜಿನಿಯರಗಳು, ವಕೀಲರು, ನ್ಯಾಯಾಧೀಶರು, ಅಭಿಯೋಜಕರು, ಸಂಶೋಧಕರಾಗಿ ಕಾರ್ಯನಿರ್ವಹಿಸುತ್ತಾ ವಿದೇಶಕ್ಕೋ, ಉದ್ಯೋಗಗಳ ನಿಮಿತ್ತ ಹೋದವರು, ಹೋಗಿ ಬಂದವರು ಇದ್ದಾರೆ.

ಆದರೂ ಪುರುಷ ಪ್ರಧಾನತೆಯ ಈ ಸಮಾಜದಲ್ಲಿ ಜೀವಿಸುವ ಈ ಸ್ತ್ರೀಯು ಬುದ್ಧಿ ಮನಸ್ಸು, ಎಷ್ಟೇ ವೈಚಾರಿಕವಾಗಿದ್ದರೂ ಅನಿವಾರ್ಯವಾಗಿ ಪುರುಷ ಪ್ರಧಾನ್ಯತೆಯ ಮೌಲ್ಯ ಕಟ್ಟುಪಾಡುಗಳನ್ನು ಮೈಗೂಡಿಸಿಕೊಂಡು ಅವುಗಳಂತೆ ನಡೆದು ಪುರುಷರ ಪರವಾಗಿಯೇ ಕೆಲಸ ಮಾಡುತ್ತಾ, ಪುರುಷ ಪ್ರಾಧಾನ್ಯತೆ ವಿರುದ್ಧ ನಡೆದರೆ ಅಥವಾ ಕಾಲಿಟ್ಟರೆ ಎದುರಿಸ ಬಹುದಾದ ಆಘಾತಗಳನ್ನು, ಭಯಾನಕ ಪರಿಸ್ಥಿತಿಯನ್ನು ಅರಿತು ಸದಾ ತನ್ನ ಕೊರಳಿಗೆ ಎಚ್ಚರಿಕೆಯ ಕರಗಂಟೆ ತೂಗು ಹಾಕಿಕೊಂಡು ತಮ್ಮನ್ನು ತಾವೇ ಬಂಧಿಸಿಕೊಂಡು ಬಳಲುತ್ತಾ, ಬಿಡುವಿಲ್ಲದೇ ನರಳುವ ಅವಸ್ಥೆಯನ್ನು ತಲುಪಿದ್ದಾರೆ. ಇದು ಭಾರತದ ಮಹಿಳೆಯರ ರಾಷ್ಟ್ರೀಯ ಫೆಡರೇಷನ್ ಸ್ತ್ರೀಯರ ಸುಧಾರಣೆ ಮತ್ತು ಸ್ಥಿತಿ-ಗತಿ ಉತ್ತರಿಸಲು ಪ್ರಯತ್ನಿ ಸುತ್ತಿದೆ. ಜೊತೆಗೆ ವಿಶ್ವ ಸಂಸ್ಥೆಯು ೧೯೭೫ರ ವರ್ಷವನ್ನು ಅಂತರ ರಾಷ್ಟ್ರೀಯ ಮಹಿಳಾ ವರ್ಷ ವೆಂದು ಘೋಷಿಸುವ ಮೂಲಕ ಮಹಿಳಾ ಶೋಷಣೆ, ಅಸಮಾನತೆ ದಬ್ಬಾಳಿಕೆ, ವಿರುದ್ಧ ಸಿಡಿದೆದ್ದು, ಸಂಘಟಿತರಾಗಿ ಹೋರಾಡುವ ಮೂಲಕ ಎಲ್ಲಾ ವರ್ಗಗಳ ಸ್ತ್ರೀಯರ ಘನತೆ, ಗೌರವ ಹೆಚ್ಚಳಕ್ಕೆ ಕಾರಣವಾಗುವ ಮಂದಗತಿಯ ಸುಧಾರಣೆಯ ಮೆಟ್ಟಿಲು ಎರುತ್ತಿರುವುದು ಸಮಾಧಾನಕರ ವಿಷಯವಾಗಿದೆ.

# ಬೇಡರ ಸಾಂಸ್ಕೃತಿಕ ನಾಯಕರು

ಬೇಡರ ಸಾಂಸ್ಕೃತಿಕ ನಾಯಕರು ಎಂದು ಮಾತನಾಡುವಾಗ ಡಾ. ವಿರೂಪಾಕ್ಷಿ ಪೂಜಾರಹಳ್ಳಿಯ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಕೃತಿಯನ್ನು ಉಲ್ಲೇಖಿಸ ಬಹುದು. ಪ್ರಸ್ತುತ ಪ್ರಬಂಧದ ಚರ್ಚೆಯನ್ನು ಅವರ ಪ್ರಸ್ತಾವನೆಯ ಭಾಗದ ಉಲ್ಲೇಖ ದಿಂದಲೇ ಪ್ರಾರಂಭಿಸುತ್ತೇನೆ. ಆಧುನಿಕ ಸಂಸ್ಕೃತಿಯಿಂದ ನಮ್ಮ ಪ್ರಾಚೀನ ಸಂಸ್ಕೃತಿ ನೆಲಕಚ್ಚು ವಂತಾಗಿದೆ. ಬುಡಕಟ್ಟು ವೀರರನ್ನು ಆರಾಧಿಸುವ ಬೇಡರು ಇತರರ ಪ್ರಭಾವಕ್ಕೆ ಒಳಗಾಗಿ ಶ್ಯುತಿ ಪಡೆದ ದೇವರನ್ನು ಪೂಜಿಸುತ್ತಾಅನುಯಾಯಿಗಳಾಗುತ್ತಾರೆ. ಜೊತೆಗೆ ತಮ್ಮ ವಂಶದ ಅಥವಾ ಪರಂಪರೆಯ ಪೂರ್ವಿಕ ವ್ಯಕ್ತಿಯನ್ನು ಆರಾಧಿಸುವುದುಂಟು. ಮ್ಯಾಸಬೇಡರ ವಿಶೇಷತೆಯೆಂದರೆ ಎಂಥ ಜಗದ್ವಿಖ್ಯಾತ ದೇವರಗಳಿದ್ದರೂ ತಮ್ಮ ಮಾತ್ರ ದೇವತೆಗಳಿಗೆ ಮೊದಲ ಆಧ್ಯತೆ ಕೊಡುವರು. ಆದುದರಿಂದ ಇಂಥಾ ವೀರರ ಸಾಂಸ್ಕೃತಿ ಬದುಕು ಅಜ್ಞಾತವಾಗಿದ್ದನ್ನು ತೆರೆದು ತೋರಿಸಬೇಕಾಗಿದೆ (ಪುಟ ೭).

ಈ ಉಲ್ಲೇಖವನ್ನು ಗಮನಿಸಿದರೆ ಕೆಲವು ಅಪಸ್ವಷ್ಯವಾಗುತ್ತದೆ. ಸಮುದಾಯಗಳನ್ನು ಅಧ್ಯಯನ ಮಾಡುವ, ದುಂಡು ಹೇಳಿಕೆಗಳನ್ನು ಸಾರಾಸಗಾಟಾಗಿ ನೀಡುವ, ಸಾಮಾನ್ನೀಕರಣದ ವ್ಯಾಖ್ಯಾನ ಜನಪ್ರಿಯ ಮಾದರಿ. ಈ ಮಾದರಿ ಒಂದು ಸಮುದಾಯದ ಅಂತಸತ್ವದ ಸೂಕ್ಷ್ಮ ಒಳನೋಟಗಳನ್ನು ಬಿಟ್ಟುಕೊಂಡುತ್ತದೆ. ಅಂತೆಯೇ ಒಂದು ಸಿದ್ಧಮಾರಿಯಲ್ಲಿ ಇಡಿಸಮುದಾಯದ ವಿಶ್ಲೇಷಣೆಗಳನ್ನು ಒರಟು ಒರಟಾಗಿ ತುರುಕಿದಂತಾಗುತ್ತದೆ. ಇದು ವಿರೂಪಾಕ್ಷಿ ಪೂಜಾರಳ್ಳಿಯವರ ಒಬ್ಬರ ಸಮಸ್ಯೆಯಲ್ಲಿ ಸಂಸ್ಕೃತಿಯಿಂದ ನಮ್ಮ ಪ್ರಾಚೀನ ಸಂಸ್ಕೃತಿ ನೆಲಕಚ್ಚುವಂತಾಗಿದೆ. ಎನ್ನುವುದು ಒಂದು ಜನಪ್ರಿಯ ವ್ಯಾಖ್ಯಾನ ಸರಿ ಇದನ್ನು ನಾವೇ ಹೇಳುತ್ತಿದ್ದೇವಾ ಸಮುದಾಯ ಹೇಳುತ್ತಿದೆಯಾ? ಅಥವಾ ಅಧ್ಯಯನಕಾರರು ಆಧುನಿಕತೆಯ ಸೌಲಭ್ಯಗಳೆಲ್ಲವನ್ನೂ ಬಳಸಿಕೊಂಡು, ಸಮುದಾಯ ಮಾತ್ರ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಬಾರದು ಎನ್ನುವ ಪಕ್ಷಪಾತ ತೋರುತ್ತಿದ್ದೇವೆಯೆ? ಹೋಗಲಿ ಈ ವ್ಯಾಖ್ಯಾನವನ್ನು ಪರೀಕ್ಷಿಸಲು ಸಮುದಾಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅದರ ಫಲಿತಗಳ ನ್ನೇನಾದರೂ ನೋಡಿದ್ದೇವೆಯೇ? ಇಲ್ಲ. ನನ್ನ ಅಧ್ಯಯನದ ಮಿತಿಯೊಳಗೆ ಕನ್ನಡದಲ್ಲಿ ಸಮುದಾಯಗಳನ್ನು ತುಂಬಾ ಸೂಕ್ಷ್ಮವಾಗಿ ಗ್ರಹಿಸಿ ಅದರ ಅಂತಸತ್ವದ ಒಳಹುಗಳನ್ನು ಹಿಡಿಯುವ ಒಂದೇ ಒಂದು ಅಧ್ಯಯನ ಸಿಕ್ಕಂತೆ ಕಾಣುವುದಿಲ್ಲ. "ಬುಡಕಟ್ಟು ವೀರರನ್ನು ಆರಾಧಿಸುವ ಬೇಡರು ಇತರರ ಪ್ರಭಾವಕ್ಕಗೆ ಒಳಗಾಗಿ ಖ್ಯಾತಿ ಪಡೆದ ದೇವರನ್ನು ಪೂಜಿಸುತ್ತಾ ಅನುಯಾಯಿಗಳಾಗುತ್ತಾರೆ" ಈ ವ್ಯಾಖ್ಯಾನವು ಸಹ ಬುಡಕಟ್ಟು ಅಧ್ಯಯನದ ಸಾರ್ವತ್ರಿಕ ನಂಬಿಕೆ. ಯಾಕಾಗಿ ಇತರ ದೇವರುಗಳ ಪ್ರಭಾವ ಬುಡಕಟ್ಟುಗಳ ಮೇಲೆ ಆಗುತ್ತಿದೆ? ಬುಡಕಟ್ಟುಗಳೇಕೆ ಇತರ ದೇವರುಗಳನ್ನು ಆರಾಧಿಸುವ ಕಡೆ ಚಲಿಸುತ್ತಿದ್ದಾರೆ? ಎಂದು ನಾವು ಪ್ರಶ್ನಿಸಿಕೊಂಡು ಉತ್ತರ ಉಡುಕವುದಿಲ್ಲ.

ಈ ಪ್ರವೇಶಿಕೆಯ ಚರ್ಚೆಗೆಕಾರಣ ಕರ್ನಾಟಕದಲ್ಲಿ ಸಮುದಾಯಗಳನ್ನು ದುಂಡಾಗಿ ಗ್ರಹಿಸುವ ಮಾದರಿಗಳ ಕಟ್ಟೆಯಾಗಿ ನೆಲೆಯೂರಿವೆ. ಹಾಗಾಗಿ ನಮಗೆ ಸೂಕ್ಷ್ಮವಾಗಿ ಸಮುದಾಯಗಳ ಚಲನೆಯನ್ನು ಹಿಡಿಯಲು ಸಾಧ್ಯವಾಗಿಲ್ಲ. 'ಕರ್ನಾಟಕದಲ್ಲಿ ಸಾಂಸ್ಕೃತಿಕ' ನಾಯಕರು ಪದ ಅಧ್ಯಯನಗಳ ಹೊಸ ಪ್ಯಾಶನ್ನಿನಂತೆ ಮತ್ತೆ ಮತ್ತೆ ಬಳಕೆಯಾಗುತ್ತಿದೆ. ಈ ಅಧ್ಯಯನಗಳ ಮೂಲ ಆಶಯ 'ಆಜ್ಞಾತವಾಗಿದ್ದ ಸಾಂಸ್ಕೃತಿಕ ವೀರರ ಬದುಕನ್ನು ಸಮುದಾಯಗಳಿಗೆ ತೆರೆದು ತೋರಿಸಬೇಕು' ಎನ್ನುವುದು. ಸಮುದಾಯದ ಸ್ಮೃತಿಲೋಕ ದಿಂದಲೇ 'ಸಾಂಸ್ಕೃತಿಕ ನಾಯಕರ' ಜೀವನಚಿತ್ರವನ್ನು ಪಡೆದ ಅಧ್ಯಯನಕಾರರು, ಮತ್ತೆ ಸಮುದಾಯಕ್ಕೆ ತೆರೆದು ತೋರಿಸುತ್ತೇವೆ ಎಂದು ಹೊರಡುವ ಕ್ರಮವೇ ವಿಚಿತ್ರವಾಗಿದೆ. ಆದರೆ ಸಾಂಸ್ಕೃತಿಕ ನಾಯಕರನ್ನು ಸಾಂಸ್ಕೃತಿ ಶಕ್ತಿಯನ್ನಾಗಿ ರೂಪಿಸುವ ಮೂಲಕ ಆ ಸಮುದಾಯದೊಳಗೆ 'ಆತ್ಮವಿಶ್ವಾಸ'ವನ್ನು ಬೆಳೆಸುವ ಕಡೆ ಈ ಅಧ್ಯಯನಗಳು ಚಲಿಸ ಬೇಕಾಗಿದೆ. ಈ ಬಗೆಯ ಚಲನೆ ನನಗೆ ಗೊತ್ತಿರುವಂತೆ 'ಮಂಟೇಸ್ವಾಮಿ' ಕುರಿತ ಅಧ್ಯಯನ ಗಳಲ್ಲಿ ಮಾತ್ರ ನಡೆಯುತ್ತಿದೆ. ಉಳಿದಂತೆ ಕರ್ನಾಟಕದಲ್ಲಿ ಮೈಲಾರಲಿಂಗ, ಜುಂಜಪ್ಪ, ಮಾದೇಶ್ವರ, ಯಲ್ಲಮ್ಮ, ಸಿರಿ,

ಗಾದ್ರಿ ಪಾಲನಾಯಕ, ಇನ್ನೂ ಮಾರಕ್ಕೂ ಹೆಚ್ಚು ಸಾಂಸ್ಕೃತಿಕ ನಾಯಕರ ಅಧ್ಯಯನಗಳು ನಡೆಯುತ್ತಿವೆ. ಇವುಗಳ ಚಲನೆ ಮಾತ್ರ ಜನಪ್ರಿಯ ನಂಬಿಕೆಯ ಕಡೆ ಸಾಗಿದೆ.

ಬೇಡ ಸಮುದಾಯದ 'ಸಾಂಸ್ಕೃತಿಕ ವೀರರ' ಅಧ್ಯಯನಗಳಿಗೂ ಮೇಲಿನ ಸರಹದ ಮಿತಿಗಳಿವೆ. ಈ ಹೊತ್ತು ಬೇಡ ಸಮುದಾಯ ಸಾಂಸ್ಕೃತಿ ನಾಯಕರನ್ನು ಅಧ್ಯಯನ ಮಾಡುವುದೆಂದರೆ ಇತರೆ ಸಮುದಾಯಗಳಿಗೆ ಈ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ತೋರಿಸುವುದು ಎಂಬ ಅರ್ಥಪಡೆದಿದೆ. ಈಗ ಸಮುದಾಯಗಳು ರಾಜಕೀಯ ಸೌಲಭ್ಯಗಳನ್ನು ಪಡೆದು ಸಬಲವಾಗುವತ್ತ ಹೆಜ್ಜೆ ಇಟ್ಟಿವೆ. ಇಲ್ಲಿಯೂ ಸಹ ಸಮುದಾಯದ ಕಲಿತ ಸುಶಿಕ್ಷಿತರು ಒಂದು ಸಮುದಾಯದ ಮೂಲಕ ಈ ಸಮುದಾಯಕ್ಕೆ ಪಾರಂಪರಿಕ ಚರಿತ್ರೆ ಇದೆ. ಆದರೆ ವರ್ತಮಾನದಲ್ಲಿ ಅಸಹನೀಯವಾಗಿ ರೂಪಕಗಳನ್ನು ಈ ಕಾಲದ ಸಮುದಾಯ ಶಕ್ತಿಯಾಗಿಸಿ ಕೊಂಡು ಬಲಗೊಳ್ಳಬೇಕೆಂಬ ನಿಲುವ ಬೇಡಸಮುದಾಯಗಳನ್ನು ಪಡೆದ ಆಶಯಗಳು ಅನ್ನಿಸುವುದಿಲ್ಲ.

ಮ್ಯಾಸಬೇಡರಲ್ಲಿ ಸಾಂಸ್ಕೃತಿಕ ನಾಯಕ ಆರಾಧನ ಲೋಕವೇ ಇದೆ. ಈ ನಾಯಕರ 'ಕಥನ'ವನ್ನು ಹೇಳುವುದಕ್ಕೂ ಈಗ ಸಮುದಾಯ ಆ ನಾಯಕರನ್ನು ಆರಾಧನೆಗಳ ಭಾಗವಾಗಿ ನಾಯಕರ ಕಥನಗಳನ್ನು ಕಟ್ಟುವ ಒಂದು ಕ್ರಮವಿದೆ. ಎಂ.ಜಿ. ಈಶ್ವರಪ್ಪ, ಕರಿಶೆಟ್ಟಿ ರುದ್ರಪ್ಪ, ಕೃಷ್ಣಮೂರ್ತಿ ಹನೂರ್, ಪುಟ್ಟಣ್ಣ ಎಂ.ಎಸ್. ಲಕ್ಷ್ಮಣ್ ತೆಲಗಾವಿ, ವಿರೂಪಾಕ್ಷಿ ಪೂಜಾರಹಳ್ಳಿ ಮುಂತಾದವರ ಅಧ್ಯಯನಗಳನ್ನು ಇದರ ಭಾಗವಾಗಿ ಪರಿಶೀಲಿಸಬಹುದು. ಈ ಬಗೆಯ ಅಧ್ಯಯನದಿಂದ ಸಾಧ್ಯವಾದದ್ದು, ಕರ್ನಾಟಕದ ತಳಸಮುದಾಯಗಳ ಚರಿತ್ರೆಗೆ ಪೂರಕವಾಗಿ ಬೇಡರನ್ನು ಗುರುತಿಸಿದ್ದು. ಅಂತೆಯೇ ಕರ್ನಾಟಕದ ಇತರೆ ಸಮುದಾಯ ಗಳೊಂದಿನ ಸಾಂಸ್ಕೃತಿ ಕೊಡುಕೋಳೆಗಳನ್ನು ಅಧ್ಯಯನ ಮಾಡುವ ಮೂಲಕ ಅಖಂಡ ಕರ್ನಾಟಕ ಮಾದರಿಯ ಚರಿತ್ರೆಯ ಕಲ್ಪನೆಯನ್ನು ಒಡೆದು ಪ್ರಾದೇಶಿಕ ಚರಿತ್ರೆಯನ್ನು ಕಟ್ಟಾಯಿಸಾಧ್ಯವಾಯಿತು. ಯಾವ ಸಮುದಾಯ 'ಅಕಾಡೆಮಿಕ್' ಶಿಸ್ತಿಗೆ ಒಳಪಡಿಸುವುದೇ ಅಸ್ಪೃಶ್ಯತೆ ಎನ್ನುಗ್ರಹಿಕೆಗಳನ್ನು ಪರೋಹಿತಶಾಹಿ ಅಧ್ಯಯನಕಾರರು ರೂಪಿಸಿದ್ದರೋ, ಅಂತಹ ಮಾದರಿಯನ್ನು ಈ ಬಗೆಯ ಅಧ್ಯಯನಗಳು ಒಡೆದವು.

ಆದರೆ ಈಬಗೆಯ ಅಧ್ಯಯನಗಳು ಮತ್ತೆ ಸಮುದಾಯಕ್ಕೆ ಮರಳಿ ಆ ಮೂಲಕ ಹೊಸ ಜಾಗ್ರತೆ ಉಂಟಾಗುತ್ತದೆಯೋ? ಕೇಳಿಕೊಳ್ಳಬೇಕಾದ ಪ್ರಶ್ನೆ. ಹೆಜ್ಜೆಂದರೆ ಆ ಸಮುದಾಯ 'ಕಲಿತ'ವರು ಅದರಲ್ಲೂ ಸಮುದಾಯದ ಬಗೆಗೆ ಸ್ವತಃ ಅಭಿಮಾನವಿದ್ದು, ತನ್ನ ಸಮುದಾಯದ ಸಾಂಸ್ಕೃತಿಕ ಚರಿತ್ರೆಯ ಬಗೆಗೆ ತಿಳಿಯಬೇಕೆಂಬ ಹಂಬಲವಿರುವ ಕೆಲವೇ ಕೆಲವರು ಮಾತ್ರ ಈ ಅಧ್ಯಯನಗಳನ್ನು ಓದಬಲ್ಲರು. ಈ ಅಧ್ಯಯನಗಳನ್ನೇ ಉಪನ್ಯಾಸಗಳ ಮೂಲಕ ಸಮುದಾಯಕ್ಕೆ ತಲುಪಿಸುವ ಕೆಲಸವನ್ನು ವಿಶ್ವವಿದ್ಯಾಲಯಗಳು ಮಾಡುತ್ತಿವೆ. ಉದಾಹರಣೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠದಿಂದ, ಕೂಡ್ಲಿಗಿ, ಮರಿಯಮ್ಮನಹಳ್ಳಿ, ಕೊಪ್ಪಳ ಮುಂತಾದ ಕಡೆ ಉಪನ್ಯಾಸ ಕಾರ್ಯ ಕ್ರಮಗಳನ್ನು ಕೂಡಿತು. ಆದರೆ ಸೆಮಿನಾರಿನಲ್ಲಿ ಪ್ರಬಂಧಮಂಡಿಸುವವರನ್ನು ಅಟಾಕಿ ಬೆರಳೆಣಿಕೆಯ ಕೇಳುಗರು ಮಾತ್ರ ಹಾಜರಿದ್ದರು. ಇದು ಏನನ್ನು ಸೂಚಿಸುತ್ತದೆ? ಈ ಬಗೆಯ ಅಕಾಡೆಮಿಕ್ ಅಧ್ಯಯನಗಳು ಸಮುದಾಯದಿಂದ ದೂರ ಉಳಿಯುತ್ತಿದೆ ಎನ್ನುವುದು ಮೊದಲ ನೋಟಕ್ಕೆ ಗೋಚರಿಸುವ ಸತ್ಯ.

ಬೇಡರ ಸಾಂಸ್ಕೃತಿಕ ನಾಯಕರ ಕಥನವನ್ನು ನೋಡುತ್ತಿದ್ದಾರೆ. 'ಪಶುಪಾಲಕ' ಸಂಸ್ಕೃತಿ ಯಲ್ಲಿ ಹುಟ್ಟಿಕೊಂಡಹವು. ಪ್ರಭುತ್ವದ ಜೊತೆ ನೇರ ಸಂಘರ್ಷವನ್ನು ಏರ್ಪಡಿಸಿಕೊಂಡವರು. ಮ್ಯಾಸ ಬೇಡರ ಸಾಂಸ್ಕೃತಿಕ ನಾಯಕ ಜಗಳೂರ ಜಿನಿಗೂ ಮತ್ತು ತಿರುಪತಿಯ ವೆಂಕಟೇಶ್ವರನಿಗೂ ನಡೆದಿರುವ ವಾಗ್ವಾದ ಮ್ಯಾಸಬೇಡರ ಜನತದ ಸಾಹಿತ್ಯದಲ್ಲಿ ಪ್ರಖ್ಯಾತ ವಾದದ್ದು. ಮಂಟೇಸ್ವಾಮಿ ಕಲ್ಯಾಣದಲ್ಲಿ ಬಸವಣ್ಣನನ್ನು ಮುಖಾಮುಖಿರುಗಳು ರೀತಿಯಲ್ಲೇ ಜಗಳೂರಜ್ಜೈ ವೆಂಕಟೆಶನನ್ನು ಮುಖಾಮುಖಿಯಾಗುತ್ತಾನೆ.

# ಬೇಡ ಬುಡಕಟ್ಟಿನ ವೈಶಿಷ್ಟ್ಯಗಳು

ಭಾರತ ಅನೇಕ ಬುಡಕಟ್ಟುಗಳಿಂದ ಕೂಡಿರುವ ದೇಶ. ಸಾವಿರಾರು ಬುಡಕಟ್ಟುಗಳು ಇಲ್ಲಿ ವಾಸಿಸುತ್ತಿದ್ದು, ತಮ್ಮದೇ ಆದ ವೈಶಿಷ್ಟ್ಯಗಳಿಂದ ಕೂಡಿರುತ್ತವೆ. ಅಂಥವುಗಳಲ್ಲಿ ಈ 'ಬೇಡ' ಬುಡಕಟ್ಟು ಒಂದಾಗಿದೆ. ಇದರ ಮೂಲ ಪ್ರಾಚೀನ ಕಾಲದ್ದು. ಮೂಲತಃ ಆದಿಮಾನವನ ಕಾಲದಿಂದಲೂ ಈ ವರ್ಗ ಹಾಗೆಯೇ ಬಂದಿರುವಂಥದ್ದು. ಇವರ ವೃತ್ತಿ ಆದಿಯಿಂದಲೂ 'ಬೇಟೆ'ಯಾಡುವುದು, ಗೆಡ್ಡೆ ಗೆಣಸುಗಳನ್ನು ಅಗೆಯುವುದು, ಇವೇ ಅವರ ಆಹಾರದ ಮೂಲಗಳಾಗಿದ್ದವು. ಆದರೆ ಇಂದು ನಾಗರಿಕ ಜಗತ್ತಿಗೆ ಹೊಂದಿಕೊಂಡಿ ದ್ದಾರೆ.

ಈ 'ಬೇಟೆ'ಯಾಡುವ ವೃತ್ತಿಯಿಂದಲೇ ಇವರಿಗೆ 'ಬೇಡ' ಎನ್ನುವ ಹೆಸರು ಬಂದಿರು ವಂತಿದೆ. ಸಂಸ್ಕೃತದಲ್ಲಿನ 'ವ್ಯಾಧ' ಪದವು ಕನ್ನಡದಲ್ಲಿ 'ಬೇಡ' ಎಂಬುವ ರೂಪವನ್ನು ಪಡೆದಿದೆ. ಪ್ರಾಚೀನ ಕಾವ್ಯಗಳಲ್ಲಿ ಈ ರೀತಿಯ ಪದಗಳು ಬಳಕೆಯಾಗಿವೆ. ಬೇಡ, ಕಿರಾತ, ನಿಷಾಧ, ಶಬರ, ಪುಳಿಂದ ಇತ್ಯಾದಿ ಹೆಸರುಗಳಿಂದ ಇವರನ್ನು ಕರೆಯಲಾಗಿದೆ. ಹಾಗಾಗಿ ಇವರನ್ನು ಆದಿವಾಸಿಗಳೆಂದು ಗುರುತಿಸಲಾಗಿದೆ. ಬುಡಕಟ್ಟಿನ ಬಗ್ಗೆ ಅನೇಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ವೆರಿಯಲ್ ಎಲ್ವಿನ್‌ರೇ ಆದಿಯಾಗಿ ಬಿ.ಎಚ್. ಹಟ್ಸನ್, ಜೆ.ಪಿ. ಮಿಲ್ಸ್, ಸ್ಮಿಥ್, ಹೈಮಂಡ್ ಡಾರ್ಫ್ ಇಂಥವರೆಲ್ಲ ಉತ್ತರ ಭಾರತದ ಬುಡಕಟ್ಟುಗಳನ್ನು ಅಧ್ಯಯನ ಮಾಡಿದರು. ದಕ್ಷಿಣ ಭಾರತದ ಬುಡಕಟ್ಟುಗಳ ಬಗೆಗೆ ಮಾಡಿದ ವಿದ್ವಾಂಸರು ಎಡ್ಗರ್ ಥರ್‌ಸ್ಟನ್ ಮತ್ತು ಕೆ. ರಂಗಾಚಾರಿ. ಎಲ್.ಕೆ. ಅನಂತಕೃಷ್ಣ ಅಯ್ಯರ್ ಮತ್ತು ಎಚ್.ವಿ. ನಂಜುಂಡಯ್ಯ ಮುಂತಾದವರು. ಈ ಮಾನವಶಾಸ್ತ್ರಜ್ಞರ ಹಿನ್ನೆಲೆಯಲ್ಲಿ ನಾವು ಬೇಡರ ಬಗ್ಗೆ ಅಧ್ಯಯನ ಕೈಗೊಂಡಾಗ ಅನೇಕ ಪ್ರಮುಖ ಅಂಶಗಳು ಕಂಡುಬರುತ್ತವೆ. ಈ ಮೇಲಿನ ವಿದ್ವಾಂಸರು ಸೂಚಿಸಿರುವಂತೆ ಈ ಬುಡಕಟ್ಟಿನಲ್ಲಿ ವಿಭಿನ್ನ ರೀತಿಯ ವೈಶಿಷ್ಟ್ಯಗಳನ್ನು ನಾವು ಕಾಣುತ್ತೇವೆ. ಈಗಲೂ ಇವರ ಉಳಿದುಕೊಂಡು ಬಂದಿರುವ ಸಂಪ್ರದಾಯ, ಆಚರಣೆಗಳು ಅವರ ಮೂಲದ ಪರಿಸರದ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕದವರೇ ಆದ ಡಾ. ಕೃಷ್ಣಮೂರ್ತಿ ಹನೂರು, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಡಾ. ಕರಿಶೆಟ್ಟಿ ರುದ್ರಪ್ಪ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಇತ್ಯಾದಿಯಾಗಿ ಅನೇಕ ಜನ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಈ ಎಲ್ಲಾ ವಿದ್ವಾಂಸರ ಅಭಿಪ್ರಾಯದಂತೆ ಬೇಡ ಬುಡಕಟ್ಟಿನ ವೈಶಿಷ್ಟ್ಯಗಳು ವಿಭಿನ್ನವಾಗಿರುವುದು ಕಂಡುಬರುತ್ತದೆ.

ಬೇಡ ಬುಡಕಟ್ಟಿನಲ್ಲಿ ಎರಡು ಪಂಗಡಗಳು ಬರುತ್ತವೆ. ಒಂದು ಮ್ಯಾಸಬೇಡರು, ಇನ್ನೊಂದು ಊರುಬೇಡರು. ಊರ ಹೊರಗಿನ ಹಟ್ಟಿ ಬೇಡರನ್ನು ಮ್ಯಾಸಬೇಡರೆಂದು, ಊರೊಳಗೆ ಬಂದು ನೆಲಸಿದವರನ್ನು ಊರುಬೇಡರೆಂದು ಕರೆದಿದ್ದಾರೆ. ಆದರೆ ಇಂದು ಮ್ಯಾಸನಾಯಕರೂ ಸಹ ನಾಗರಿಕತೆಯಲ್ಲಿ ಸೇರಿಹೋಗಿದ್ದು ಇಂದು ಎರಡೂ ಪಂಗಡಗಳೂ ಊರೊಳಗೆ ವಾಸಿಸುತ್ತವೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಮ್ಯಾಸರ ಹಟ್ಟಿಗಳು ಪ್ರತ್ಯೇಕವಿದ್ದು ತಮ್ಮತನವನ್ನು ಇನ್ನು ಉಳಿಸಿಕೊಂಡಿವೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೆಲವು ಹಟ್ಟಿಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ, ದಾವಣಗೆರೆ ಜಿಲ್ಲೆಯ ಜಗಳೂರು ಪ್ರದೇಶಗಳಲ್ಲಿ ಅಲ್ಲಲ್ಲಿ ಈ ಮ್ಯಾಸನಾಯಕರು ತಮ್ಮ ಹಟ್ಟಿಗಳಲ್ಲೇ ವಾಸಿಸಿರುವುದನ್ನು ನೋಡುತ್ತೇವೆ.

**ವೈಶಿಷ್ಟ್ಯಗಳು**

೧. ಮ್ಯಾಸಬೇಡರ ಉಡುಗೆ-ತೊಡುಗೆಗಳು

೨. ಮ್ಯಾಸಬೇಡರ ಬೇಟೆ ವೃತ್ತಿ

೩. ಮ್ಯಾಸಬೇಡರ ಹಬ್ಬ ಹರಿದಿನ, ಆಚರಣೆಗಳು

೪. ಮ್ಯಾಸಬೇಡರ ಕಲೆಗಳು

೫. ಮ್ಯಾಸಬೇಡರ ಉಪಜೀವನ ವೃತ್ತಿಗಳು

೬. ಮ್ಯಾಸಬೇಡರ ಮದುವೆ ಪದ್ದತಿ

೭. ಮ್ಯಾಸಬೇಡರ ಶವಸಂಸ್ಕಾರ ಪದ್ಧತಿ ಇತ್ಯಾದಿ.

'ಮ್ಯಾಸ' ಎನ್ನುವ ಪದವೇ ಇವರ ಉಪಜೀವನದ ವೃತ್ತಿಯನ್ನು, ಕಾಯಕವನ್ನು ಸೂಚಿಸುತ್ತದೆ. ಅಂದರೆ ಇವರು ದನಕರುಗಳನ್ನು, ಮೇಕೆಗಳನ್ನು, ಕುರಿಗಳನ್ನು ಮೇಯಿಸಿ ಕೊಂಡು ಕಾಡುಗೊಲ್ಲರಂತೆಯೇ ಕೆಲವೊಂದು ಕಾಲದಲ್ಲಿ ಅಲೆಮಾರಿಯಾಗಿದ್ದವರು. ನಂತರದಲ್ಲಿ ಒಂದು ಕಡೆ ನೆಲೆಸಿ ಹಟ್ಟಿಗಳನ್ನು ನಿರ್ಮಿಸಿಕೊಂಡು ವಾಸಿಸತೊಡಗಿದರು. ಈ ರೀತಿಯಿಂದ ಇವರು ಮೇಸರು > ಮೇಯಿಸುವವರು > ಮೇಯಿಸುವ ಮ್ಯಾಸರು ಎಂದು ಕರೆದುಕೊಂಡಿದ್ದಾರೆ.

'ಮ್ಯಾಸಬೇಡರು' ಎಂಬ ಪದದಲ್ಲಿ ಎರಡು ವೃತ್ತಿಸೂಚಕ ಪದಗಳು ಕೂಡಿದ್ದು ಒಂದು ದನ ಮೇಯಿಸುವವರು, ಇನ್ನೊಂದು ಬೇಟೆಯಾಡುವುದು. ಈ ವೃತ್ತಿಗಳಿಂದ ಇವರ ಜಾತಿಯನ್ನು 'ಮ್ಯಾಸಬೇಡರು' ಎಂದು ಕರೆದುಕೊಂಡಿದ್ದಾರೆ ಅಥವಾ ಕರೆದಿದ್ದಾರೆ.

ಇಂದಿಗೂ ಯುಗಾದಿ ಹಬ್ಬದಲ್ಲಿನ ಆಚರಣೆ ಇವರ ಮೂಲದ ಬಗೆಗೆ, ಮೂಲವೃತ್ತಿಯ ಬಗೆಗೆ ವಿವರವನ್ನು ಸೂಚಿಸುತ್ತದೆ. ಯುಗಾದಿ ಹಬ್ಬದ ಎರಡನೇ ದಿನ ಬೇಡ ಜನಾಂಗದವರು ಬೇಟೆ ಹೋಗುವುದು ಸಂಭ್ರಮದ ಹಬ್ಬವಾಗಿದೆ. ಅಷ್ಟೇ ಏಕೆ ಇಂದು ಸಹ ಕೆಲವೊಂದು ಮ್ಯಾಸರಹಟ್ಟಿಗಳಲ್ಲಿ ಬೇಟೆಯಾಡುವುದು ಇನ್ನೂ ಇದೆ. ನಿತ್ಯವೂ ನಾಯಿ ಜೊತೆ ಬೇಟೆಗೆ ಹೋಗುವುದನ್ನು ನೋಡಬಹುದು.

ಮ್ಯಾಸನಾಯಕರೆಂದರೆ ಒಂದು ಕಾಲದಲ್ಲಿ ಸಮುದಾಯದ ನಾಯಕತ್ವವನ್ನು ಹೊಂದಿರು ವವರೆ ಕಾಲಾಂತರದಲ್ಲಿ ಹರಳುಗಟ್ಟಿ ಒಂದು ಬುಡಕಟ್ಟೆಂದು ಗುರುತಿಸಲ್ಪಟ್ಟರು. ನಾಯಕ ಎಂದರೆ ಇನ್ನೊಂದು ಅರ್ಥದಲ್ಲಿ ಆಳುವ ವರ್ಗವೆನ್ನಬಹುದು. ಆದರೆ ಇಂದು ತನ್ನ ಆ ಸ್ಥಾನ ಕಳೆದುಕೊಂಡು ಆಳಿಸಿಕೊಳ್ಳುವ ವರ್ಗವಾಗಿರುವುದು ಚಿಂತನಾರ್ಹ. ವಿಶ್ವದ ಮೂಲಿ ಗರೇ ಬೇಡರು. ಅಲ್ಲಿಂದಲೇ ಸಾಮಾಜಿಕ ವಿಕಸನದ ಘಟ್ಟಗಳನ್ನು ಗಣಿಸಬಹುದು. ಬೇಟೆ ಹಾಗೂ ಆಹಾರ ಸಂಗ್ರಹಣೆಯೇ ಇವರ ಮೂಲಕಸುಬು.

**ಮ್ಯಾಸಬೇಡರ ಉಡುಗೆ–ತೊಡುಗೆಗಳು**

ಈ ಬುಡಕಟ್ಟಿನವರು ಮಧ್ಯ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕಂಡುಬರುವಂತೆ ಇವರ ಉಡುಗೆ-ತೊಡುಗೆಗಳು ವಿಶಿಷ್ಟವಾದವು. ಇವರಲ್ಲಿ ಗಂಡಸರು ಚಲ್ಯಾಣವನ್ನು ತೊಡುತ್ತಾರೆ. ತಲೆಗೆ ದಪ್ಪನಾಗಿ ರುಮಾಲು ಸುತ್ತುತ್ತಾರೆ. ಹೆಗಲ ಮೇಲೆ ಅಡ್ಡವಲ್ಲಿ ಅಥವಾ ಕಂಬಳಿಯನ್ನು ಹಾಕಿಕೊಳ್ಳುತ್ತಾರೆ. ಇನ್ನು ಹೆಂಗಸರು ಕುಪ್ಪಸವನ್ನು ತೊಡುವುದಿಲ್ಲ. ಉಟ್ಟ ಸೀರೆಯ ಸೆರಗನ್ನೇ ಎದೆ ಮುಚ್ಚಿಕೊಳ್ಳಲು ಬಳಸುತ್ತಾರೆ. ಕೆಲವು ಕಡೆ ಗಂಡಸರು ಕಚ್ಚೆಪಂಜೆ ಹಾಕುತ್ತಾರೆ. ತೋಳಂಗಿ ತೊಡುತ್ತಾರೆ. ತಲೆಗೊಂದು ಟವೆಲ್ಲು ಸುತ್ತಿರುತ್ತಾರೆ. ಇವು ಈ ಬುಡಕಟ್ಟಿನವರ ಉಡುಗೆಗಳಾಗಿವೆ. ಆದರೆ ಇಂದು ಅನೇಕ ಕಡೆ ನಾಗರಿಕತೆಗೆ ಹೊಂದಿಕೊಂಡ ಜನರ ಉಡುಗೆ-ತೊಡುಗೆ ಬದಲಾಗಿದೆ.

ಇನ್ನು ತೊಡುಗೆಗಳೆಂದರೆ ಕೈಕಡಗ, ತೋಳ್ಬಂದಿ, ಮಣಿಸರಗಳು, ಮುತ್ತಿನ ಸರಗಳು, ಓಲೆಗಳು, ಮೂಗುತಿಗಳು, ಮೇಸರಿಗಳು ಇತ್ಯಾದಿ ಆಭರಣಗಳನ್ನು ತೊಡುಗೆಯಾಗಿ ಬಳಸು ತ್ತಾರೆ. ಆದರೆ ಇಂದು ಆಧುನಿಕ ಜಗತ್ತಿನಲ್ಲಿ ಎಲ್ಲಾ ಕಡೆಯೂ ಇತ್ತೀಚಿನ ತೊಡುಗೆಗಳು ಬಳಕೆಯಾಗುತ್ತಿರುವುದನ್ನು ಕಾಣುತ್ತೇವೆ. ಬಂಗಾರ, ಬೆಳ್ಳಿ ಆಭರಣಗಳು ಉಳ್ಳವರು, ಉಳ್ಳದವರೂ ಸಹ ಹಾಕುತ್ತಾರೆ.

ಬೇಡನಾಯಕರ ಮೈಬಣ್ಣ ಸಾಮಾನ್ಯವಾಗಿ ಕಪ್ಪು. ಉದ್ದ ಶರೀರ, ತಲೆ ಮೇಲೆ ಪೇಟ, ಬರಿಮೈ, ಹೆಗಲ ಮೇಲೆ ಒಂದು ಕಪ್ಪು ಕಂಬಳಿ. ಈ ಕಂಬಳಿ ಹಾಕಿಕೊಳ್ಳಲು, ಹೊದ್ದು ಕೊಳ್ಳಲು ಬೇಕಾದರೆ ಒಂದು ಕಡೆ ಗುಡ್ಡೆ ಇಟ್ಟು ಕೂತುಕೊಳ್ಳಲು ಬರುವಂಥದ್ದು. ಮಳೆಗಾಲ ದಲ್ಲಿ ಹೊದ್ದುಕೊಂಡು ಮಲಗಿದರೂ ನೆನೆಯದಂತೆ ಬಿದ್ದ ಹನಿ ಅತ್ತ ಇತ್ತ ಸೋರಿ ಹೋಗಿ ಬಿಡುವಂಥ ಕಂಬಳಿ ಇದು.

ಇವರು ಮೈಗೆ ಧರಿಸುವ ಉಡುಪು ಒಂದು ಚಲ್ಲಣ ನಡುವಿನಲ್ಲಿ, ಕೈಯಲ್ಲಿ ಒಂದು ಕೋಲು, ಹೆಂಗಸಾದರೆ ಬಿಳಿಯ ಸೀರೆ ಉಟ್ಟು ಅದರ ಸೆರಗನ್ನು ಹೆಗಲು ಬಳಸಿ ಎದೆ ಮುಚ್ಚಿಕೊಳ್ಳುವ ರೂಢಿ. ಇದ್ದು, ರವಿಕೆ ತೊಡುವ ರೂಢಿ ಇವರಲ್ಲಿರಲಿಲ್ಲ. ಆದರೆ ಈಗೀಗ ಬೇಡನಾಯಕ ಸಮಾಜ ಆಧುನಿಕತೆಗೆ ಹೊಂದಿಕೊಂಡು ಹಳೆಯ ಸ್ವರೂಪವನ್ನು ಬಿಟ್ಟುಕೊಡುತ್ತಿರುವುದನ್ನು ಎಲ್ಲ ಕಡೆ ಗಮನಿಸಬಹುದಾಗಿದೆ.

[1]
**ಮ್ಯಾಸಬೇಡರ ಬೇಟೆ ವೃತ್ತಿ**

ಈ ಬುಡಕಟ್ಟಿನವರ ಮೂಲಕಸುಬು ಬೇಟೆಯಾಡುವುದೇ ಆಗಿದ್ದರೂ, ಕೃಷಿಯನ್ನ ವಲಂಬಿಸಿದ್ದರು. ದನಕರುಗಳನ್ನು, ಮೇಕೆಗಳನ್ನು, ಕುರಿಗಳನ್ನು ಸಾಕುತ್ತಿದ್ದರು. ಈ ಜನಾಂಗದವರಲ್ಲಿ ಬೇಟೆಯಾಡುವುದು ಆಸಕ್ತ ವಿಷಯ. ಇವರಿಗೆ ಬೇಟೆ ಎಂದರೆ ಪರಮಾ ನಂದ. ಇವರು ತಮ್ಮ ಜೀವನದಲ್ಲಿ ಸಾಹಸ, ಶೌರ್ಯ ಪ್ರವೃತ್ತಿಯುಳ್ಳವರು. ಕಾಡುಪ್ರಾಣಿಗಳನ್ನು ಬೇಟೆಯಾಡುವುದಿರಲಿ, ಪಳಗಿಸುವಲ್ಲಿಯೂ ಸಹ ನಿಪುಣರಾಗಿದ್ದರು. ಹುಲಿಗಳನ್ನು ಪಳಗಿಸಿದ ಅನೇಕ ಉದಾಹರಣೆಗಳು ದೊರೆಯುತ್ತವೆ. ಮ್ಯಾಸಬೇಡರ ಕಥನಕಾವ್ಯಗಳನ್ನು ನೋಡಿದರೆ ಇಂಥ ಅನೇಕ ಸಂಗತಿಗಳು ದೊರೆಯುತ್ತವೆ.

ಮೊಲ, ಜಿಂಕೆ, ಕಾಡುಹಂದಿ, ಮುಳ್ಳುಹಂದಿ, ಚಿಪ್ಪುಹಂದಿ, ಉಡ ಇತ್ಯಾದಿ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಇಂದಿಗೂ ಇವರಲ್ಲಿ ಈ ಪ್ರವೃತ್ತಿಯನ್ನು ಕಾಣುತ್ತೇವೆ. ಯುಗಾದಿ ಹಬ್ಬದಲ್ಲಿನ ಆಚರಣೆಯಲ್ಲಿ ಎರಡನೇ ದಿನ ಬೇಟೆಗೆ ಹೋಗುತ್ತಾರೆ. ಈ ಬೇಟೆಯು ಊರಿನ ಗೌರವ, ಸ್ವಾಭಿಮಾನ ಪ್ರಶ್ನೆಯಾಗಿರುತ್ತದೆ. ನಾಯಿಯನ್ನು ಬೇಟೆಯ ಸಹಾಯಕ್ಕಾಗಿ ಸಾಕುತ್ತಾರೆ.

ಬೇಟೆಗಾರಿಕೆ ಈಗ ಕಡಿಮೆಯಾಗಿದೆ. ಸರಕಾರದ ಕಾನೂನು ಇರುವುದರಿಂದ ಬೇಟೆ ಯಾಡುವುದು ಇಂದು ಅಪರಾಧವಾಗುವುದರಿಂದ ಈ ಜನಾಂಗದವರು ಬೇಟೆಯನ್ನು ಕಡಿಮೆ ಮಾಡಿದ್ದಾರೆ. ಎಲ್ಲೋ ಕೆಲವು ಕಡೆ ಈ ಸಂಸ್ಕೃತಿ ಉಳಿದ ಕಡೆ ಬೇಟೆಗಾರಿಕೆ ಇರುವುದನ್ನು ನೋಡುತ್ತೇವೆ. “ಬೇಟೆಯೇ ಪ್ರಮುಖ ಉದ್ಯೋಗವಾಗಿದ್ದ ಬೇಡರು ದಾರಿಹೋಕರನ್ನು ದೋಚುವುದನ್ನು ಬಹುಶಃ ಜಗತ್ತು ಹೆಚ್ಚುಚ್ಚು ವ್ಯಾವಹಾರಿಕವಾಗುತ್ತ ಬಂದಂತೆಲ್ಲಾ ಕಲಿತಿರ ಬೇಕಷ್ಟೆ. ಅತ್ಯಂತ ಪ್ರಾಚೀನ ಕಾಲದಲ್ಲಿ ಮಾನವ ಬೇಟೆ ಜೀವನವನ್ನು ಕೈಗೊಂಡು ಒಂದು ಕಡೆ ನೆಲೆಯಾಗಿ ನಿಂತು ನಾಗರಿಕತೆಯ ಹಾದಿಹಿಡಿದ. ಆದರೆ ಮಾನವ ಜನಾಂಗವೆಲ್ಲ ಏಕಪ್ರಕಾರವಾಗಿ ನಾಗರಿಕತೆಯ ಹಾದಿಯಲ್ಲಿ ನಡೆಯಲಿಲ್ಲ. ಏಕೆಂದರೆ ಹತ್ತೊಂಬತ್ತನೆಯ ಶತಮಾನದ ಯಂತ್ರಯುಗದ ಆರಂಭದಲ್ಲಿಯೂ ಅರಣ್ಯವಾಸಿಗಳು ತಮ್ಮ ಪ್ರಾಚೀನ ಮಾದರಿಯ ಬೇಟೆಯ ಬದುಕನ್ನೇ ನಡೆಸುತ್ತಿರುವ ಸಂಗತಿ ನಮಗೆ ಇಂದಿಗೂ ಸಿಗುತ್ತದೆ (ಕೃಷ್ಣಮೂರ್ತಿ ಹನೂರು, ೧೯೭೭, ಪು. ೩೪).

ಪಶುಪಾಲನೆ, ಬೇಟೆಯನ್ನು ಮುಖ್ಯವೃತ್ತಿಯನ್ನಾಗಿಸಿಕೊಂಡಿದ್ದ ಬೇಡ ನಾಯಕರು ಈಗಲೂ ತಮ್ಮ ದೇವತೆಗಳ ಮುಖ್ಯ ಉತ್ಸವಗಳು ಮುಗಿದ ಬಳಿಕ ಬೇಟೆಯಾಡುವ ಸಂಪ್ರದಾಯವನ್ನಿರಿಸಿಕೊಂಡಿದ್ದಾರೆ. ಚಳ್ಳಕೆರೆ ತಾಲೂಕಿನ ನನ್ನಿವಾಳ ಗ್ರಾಮದಲ್ಲಿ ಗಾದ್ರಿಪಾಲನಾಯಕನ ಉತ್ಸವ ನಡೆದ ಮಾರನೆಯ ದಿನ ಜಾತ್ರೆಯಲ್ಲಿ ಸೇರಿದ ಮ್ಯಾಸ ಮಂಡಳಿಯ ಯುವಕರೆಲ್ಲ ಬೇಟೆಗೆ ಹೊರಡುವರು. ಹಾಗೆ ಬೇಟೆಗೆ

ಹೋಗುವಾಗ ಉರಿಮೆ, ತಪ್ಪಡಿ ಬಡಿಸಿಕೊಂಡು ಒಂದು ಬಂಡೆಯ ಕಡೆ ಬರುತ್ತಾರೆ. ಆ ಬಂಡೆಯ ಕಡೆಗೆ ಮನಮ ಲೋರ ಕೋಮಿನವರು ಹೊಂಬಾಳೆ, ಎಲೆ, ಅಡಿಕೆ ತಂದಿಟ್ಟುಕೊಂಡು ಕೂತಿರುತ್ತಾರೆ. ಬೇಟೆಯಾಡಲು ಹೋಗುವ ಪ್ರತಿಯೊಬ್ಬರಿಗೂ ವೀಳ್ಯ ಕೊಡುವರು. ವೀಳ್ಯ ತೆಗೆದುಕೊಂಡ ವರು ದೇವರಿಗೆ ಕೈಮುಗಿದು ಅರಣ್ಯದ ಕಡೆಗೆ ಹೊರಡುತ್ತಾರೆ. ನನ್ನಿವಾಳಕ್ಕೆ ಹತ್ತಿರವಿರುವ ಸೋಮಲಬಂಡೆ ಕಾಡಿನಲ್ಲಿ ಒಂದೋ ಎರಡೋ ಮೊಲ ಬೇಟೆಯಾಡುತ್ತಾರೆ. ಹಿಂದೆ ಅರಣ್ಯವು ಸಮೃದ್ಧವಾಗಿ ಇದ್ದಾಗ ಜಿಂಕೆ, ಕಡವೆ, ಸಾರಂಗ, ಹಂದಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು (ಕೃಷ್ಣಮೂರ್ತಿ ಹನೂರು, ೧೯೯೩, ಪು. ೧೭೭).

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಇಂದಿಗೂ ಬೇಟೆ ಸಂಸ್ಕೃತಿ ಇರುವುದನ್ನು ನೋಡಬಹುದು ಮತ್ತು ಸಂಡೂರು ತಾಲೂಕಿನ ಕೆಲವು ಹಳ್ಳಿಗಳಲ್ಲಿ, ಇಂದಿಗೂ ಚಿತ್ರದುರ್ಗ ಜಿಲ್ಲೆಯ ಹಟ್ಟಿಗಳಲ್ಲಿಯೂ ಬೇಟೆಗಾರಿಕೆಯು ಉಳಿದಿರುವುದನ್ನು ನೋಡುತ್ತೇವೆ.

**ಮ್ಯಾಸಬೇಡರ ಹಬ್ಬ–ಹರಿದಿನ ಮತ್ತು ಆಚರಣೆಗಳು**

ಈ ಜನಾಂಗದವರು ಅರಣ್ಯವಾಸಿಗಳಾಗಿದ್ದರು. ಇವರು ತಮ್ಮದೇ ಆದ ಹಬ್ಬ ಹರಿದಿನ ಗಳನ್ನು ಆಚರಿಸುತ್ತಿದ್ದರು. ಇಂದಿಗೂ ಈ ಹಬ್ಬಗಳು ಆಚರಣೆಯಲ್ಲಿರುವುದನ್ನು ನೋಡು ತ್ತೇವೆ. ಮ್ಯಾಸರು ಹಟ್ಟಿವಾಸಿಗಳಾಗಿದ್ದು, ಅವರು ತಮ್ಮ ಹಟ್ಟಿಗಳಲ್ಲಿ ತಮ್ಮ ಕುಲದೇವತೆಯ ಆರಾಧನೆ ಪ್ರಮುಖವಾಗಿತ್ತು. ಒಂದೊಂದು ಹಟ್ಟಿಯವರೂ ಅವರ ಜನಾಂಗದ ದೇವತೆಗಳ ಹೆಸರಿನಲ್ಲಿ ಆಚರಿಸುವ ಜಾತ್ರೆಗಳೇ ಅವರಿಗೆ ಹಬ್ಬದಂತೆ. ಆದರೆ ಈಗ ಹಟ್ಟಿಯೊಳಗಿನ ಬೇಡನಾಯಕರು ಸಹ ನಾಗರಿಕತೆಯಿಂದಾಗಿ ಎಲ್ಲರೂ ಆಚರಿಸುವ ಹಬ್ಬಗಳನ್ನು ಆಚರಿಸು ತ್ತಾರೆ. ಹಿಂದಿನ ದಿನಗಳಲ್ಲಿ ಅವರು ಹಿರಿಯರ ಹಬ್ಬ, ಗುಗ್ಗರಿಹಬ್ಬ, ಪಂಚಮಿಹಬ್ಬ (ನಾಗಪ್ಪನ ಪೂಜೆ), ಮುಂಗಾರಿನಲ್ಲಿನ ಸುಗ್ಗಿಹಬ್ಬ (ಸುಗ್ಗಿಮಾರಮ್ಮನ ಹಬ್ಬ), ಮನೆದೇವರ ಜಾತ್ರೆ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಿದ್ದರು.

**೧. ಹಿರಿಯರ ಹಬ್ಬ:** ಈ ಹಬ್ಬವನ್ನು ಪಿತೃದೇವತಾ ಆರಾಧನೆಯಾಗಿ, ತಮ್ಮ ಹಿರಿಯರ ಸ್ಮರಣಾರ್ಥವಾಗಿ ಆಚರಿಸುತ್ತಿದ್ದರು. ಸಾಮಾನ್ಯವಾಗಿ ಈ ಹಬ್ಬ ಆಶ್ವೀಜ ಮಾಸದಲ್ಲಿ ಬರುವಂಥದ್ದು. ಆ ದಿನದಂದು ಮ್ಯಾಸನಾಯಕರು ತಮ್ಮ ಪೂರ್ವಜರಿಂದ ಬಂದಂತಹ ಆಯುಧಗಳು, ಬಿಲ್ಲು, ಬಾಣ, ಭರ್ಚಿ, ಕಠಾರಿ, ಕತ್ತಿ ಎಲ್ಲವನ್ನು ಇಡುವರು. ಈ ವಸ್ತುಗಳು ತಮ್ಮ ಹಿರಿಯರಿಗೆ ಬೇಟೆಯಾಡುವುದರಲ್ಲಿ ನೆರವಾಗಿವೆ. ಅವರಿಗೆ ಈ ಆಯುಧಗಳು ತುಂಬ ಬೇಕಾದ ವಸ್ತುಗಳಾಗಿದ್ದವು. ಅದರಿಂದ ಹಿರಿಯರ ಹೆಸರಿನಲ್ಲಿ ಅವರ ಆಯುಧಗಳನ್ನೇ ಪೂಜಿಸುತ್ತಾರೆ. ಒಂದು ತುಂಬಿದ ಬಿಂದಿಗೆ ಅಂದರೆ ಹೊಳೆಯಿಂದಲೋ ಕೆರೆಯಿಂದಲೂ ತಂದ ಗಂಗಾಜಲವನ್ನು ತುಂಬಿದ ಬಿಂದಿಗೆಯನ್ನು ಇಟ್ಟಿರುತ್ತಾರೆ. ಇಲ್ಲಿ ಹಿರಿಯರಿಗೆ ಬಟ್ಟೆಗಳನ್ನು ಹಾಕಿ ಅಂದರೆ ಗಂಡಸರಿಗೆ ಪಂಚೆ (ಧೋತಿ), ರುಮಾಲು (ಟವೆಲ್ಲು) ಒಂದು ಅಂಗಿ ಬಟ್ಟೆಯನ್ನು ಹಾಕಿರುತ್ತಾರೆ. ಅಂತೆಯೇ ಹೆಂಗಸರಿಗೆ ಸೀರೆಯನ್ನು ಹಾಕಿಕೊಳ್ಳುತ್ತಾರೆ. ಹೀಗೆ ಹಾಕಿದ ಬಟ್ಟೆಗಳನ್ನು ಮನೆಯ ಯಜಮಾನ ಮತ್ತು ಯಜಮಾನಿಯರು ತೊಟ್ಟುಕೊಳ್ಳುತ್ತಾರೆ.

ಈ ಹಿರಿಯರ ಹಬ್ಬದ ದಿನ ವಿಶೇಷವಾದ ಅಡಿಗೆಯನ್ನು ಮಾಡಿರುತ್ತಾರೆ. ಹೆಚ್ಚಾಗಿ ಮಾಂಸಾಹಾರ ಮಾಡುತ್ತಾರೆ. ಜೊತೆಗೆ ಕೆಲವೊಬ್ಬರು ಸಿಹಿ ಅಡಿಗೆಗಳನ್ನು ಮಾಡಿಸುವುದುಂಟು. ಬಂಧು ಬಳಗವನ್ನೆಲ್ಲ ಕರೆಸಿ ಊಟ ಹಾಕಿಸಿ ವೀಳ್ಯೆಯನ್ನು ಕೊಡುವ ಪದ್ಧತಿ ಇಂದಿಗೂ ಇರುವುದನ್ನು ನೋಡುತ್ತೇವೆ.

**೨. ಗುಗ್ಗರಿ ಹಬ್ಬ:** ಮ್ಯಾಸಬೇಡರ ಆಚರಣೆಗಳಲ್ಲಿ ಈ ಗುಗ್ಗರಿ ಹಬ್ಬ ವಿಶೇಷವಾದುದು. ತಮ್ಮ ಹೊಲದಲ್ಲಿ ಬೆಳೆದ ಹುಳ್ಳಿ, ತೊಗರಿ, ಹಲಸಂದೆ, ಹೆಸರುಕಾಳು, ಮಡಕೆ ಮುಂತಾದ ಗುಗ್ಗರಿ ಬೇಯಿಸಲು ಬರುವಂತಹ ದ್ವಿದಳ ಧಾನ್ಯಗಳನ್ನು ಬೆಳೆದರೂ, ಗುಗ್ಗರಿಹಬ್ಬ ಮಾಡುವ ವರೆಗೂ ಒಂದು ಕಾಳನ್ನು ಬಳಸುವಂತಿಲ್ಲ ಬೇಯಿಸುವಂತಿಲ್ಲ.

ಗುಗ್ಗರಿಹಬ್ಬದ ದಿನ ಎಲ್ಲರೂ ತಾವು ಬೆಳೆದ ಈ ಧಾನ್ಯಗಳನ್ನು ತಂದು ದೇವಸ್ಥಾನದಲ್ಲಿ ಸುರಿಯುತ್ತಾರೆ. ಬೇಯಿಸಿದ ನಂತರ ದೇವರುಗಳಿಗೆ ಎಡೆ ಹಾಕುತ್ತಾರೆ. ನಂತರ ಪ್ರಸಾದವೆಂದು ತಿನ್ನುತ್ತಾರೆ. ನಂತರ ಮುಂದಿನ ಗುಗ್ಗರಿ ಹಬ್ಬದವರೆಗೂ ಬಳಸುತ್ತಾರೆ.

ಈ ಹಬ್ಬವನ್ನು ಸಾಮಾನ್ಯವಾಗಿ ಎಲ್ಲಾ ಭಾಗದ ಮ್ಯಾಸನಾಯಕರು ಆಚರಿಸುತ್ತಾರೆ. ಆದರೆ ಅಲ್ಪಸ್ವಲ್ಪ ವ್ಯತ್ಯಾಸ ಆಚರಣೆಯಲ್ಲುಂಟು. ಕೆಲವು ಕಡೆ ಗುಗ್ಗರಿಹಬ್ಬ ಮಾಡಿ ಅಂದು ಹುರುಳಿ ಗುಗ್ಗರಿ ಹಾಕಿ, ಹುರುಳಿ ಹೂರಣ ಮಾಡಿ ಓಣಿಯೊಳಗಿನ ಜನರನ್ನು ತಮ್ಮ ಬಂಧುಬಳಗವನ್ನು ಕರೆದು ಗುಗ್ಗರಿ ಹಂಚಿ, ಊಟ ಮಾಡಿಸುತ್ತಾರೆ. ಹೀಗೆ ಊಟಕ್ಕೆ ಬಂದವರು ಅವರ ಮನೆದೇವರಿಗೆ ನಮಸ್ಕರಿಸಿ, ಲೋಬಾನ ಹಾಕಿಯೋ ಅಥವಾ ಅಕ್ಷತೆಯನ್ನು ಹಾಕಿಯೋ ಹೋಗುವುದುಂಟು. ಇದೊಂದು ಇವರ ವೈಶಿಷ್ಟ್ಯವಾಗಿದೆ.

**೩. ಪಂಚಮಿಹಬ್ಬ ಅಥವಾ ನಾಗರಪೂಜೆ:** ಈ ಹಬ್ಬವನ್ನು ಎಲ್ಲಾ ಜಾತಿ ಸಮುದಾಯದವರು ಆಚರಿಸುತ್ತಾರೆ. ಆದರೆ ಮ್ಯಾಸನಾಯಕರಿಗೆ ಇದು ಅತ್ಯಂತ ಸಂಭ್ರಮದ ಹಬ್ಬ. ಏಕೆಂದರೆ ಇವರಿಗೆ ಇದು ಪೂರ್ವಜರು ಆಚರಿಸಿಕೊಂಡು ಬಂದಂತಹ ಹಬ್ಬ. ಒಂದು ಕಾಲಕ್ಕೆ ನಾಗಾರಾಧನೆಯನ್ನು ವಿಶೇಷವಾಗಿ ಆಚರಿಸಿದ್ದು ಬೇಡ ಬುಡಕಟ್ಟಿನ ವೈಶಿಷ್ಟ್ಯವಾಗಿದೆ. ಅರಣ್ಯವಾಸಿಗಳಾಗಿದ್ದಾಗಲೇ ಇದು ಆಚರಣೆಗೆ ಬಂದಿರಬೇಕು.

ಇದು ಶ್ರಾವಣಮಾಸದಲ್ಲಿ ಆಚರಿಸುವಂತಹ ಹಬ್ಬವಾಗಿದೆ. ಪಂಚಮಿ ತಿಥಿಯಂದು ಈ ಹಬ್ಬವನ್ನು ಆಚರಿಸುತ್ತಾರೆ. ನಾಗರಪಂಚಮಿ ಹಬ್ಬವೆಂದು ಹೆಸರಾದ ಈ ದಿನದಂದು ಸ್ತ್ರೀಯರು ಬೆಳಗಿನ ಜಾವದಲ್ಲಿ ನಾಗಪೂಜೆಯನ್ನು ಮಾಡುತ್ತಾರೆ. ಊರ ಮುಂದಿನ ನಾಗಶಿಲ್ಪಗಳಿಗೋ ಅಥವಾ ತಮ್ಮ ಹೊಲಗಳಲ್ಲಿನ ಹುತ್ತಗಳಿಗೂ ಅಥವಾ ದೇವಸ್ಥಾನದಲ್ಲಿನ ನಾಗಶಿಲ್ಪಗಳಿಗೂ ಹಾಲು ಎರೆದು, ನೂಲುಸುತ್ತಿ, ದೀಪ ಹಚ್ಚಿ, ವಡೆ ಗಾರಿಗೆಯ ಎಡೆಯನ್ನು ಇಟ್ಟು ನಾಗಾರಾಧನೆಯನ್ನು ಮಾಡುತ್ತಾರೆ. ಈ ಆಚರಣೆಯನ್ನು ಬಹಳ ಭಕ್ತಿಯಿಂದ ಮಡಿಯಿಂದ ಆಚರಿಸುವುದುಂಟು. ಎರಡನೇ ದಿವಸ ಹೋಳಿಗೆ ಅಥವಾ ಕರಿಗಡುಬು ಮಾಡುತ್ತಾರೆ. ಮೂರನೇ ದಿವಸ ತಂಬಿಟ್ಟು, ನಾಲ್ಕನೇ ದಿವಸ ಬೇಟೆ, ಮಾಂಸಾಹಾರದ ದಿನವಾಗಿರುತ್ತದೆ. ಹೀಗೆ ಇಡೀ ವಾರಾಂತ್ಯವೂ ಈ ಹಬ್ಬ ಜರುಗುತ್ತಿರುವುದನ್ನು ಇಂದಿಗೂ ನೋಡಬಹುದು.

**೪. ಮುಂಗಾರಿ ಹಬ್ಬ (ಕಾರಹುಣ್ಣಿಮೆ):** ಇದು ಎತ್ತುಗಳಿಗೆ ಸೀಮಿತವಾದ ಹಬ್ಬ. ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿಯೂ ದನಕರುಗಳನ್ನು ಅಲಂಕರಿಸಿ ಪೂಜಿಸುವ, ಕಿಚ್ಚು ಹಾಯಿಸುವ ಹಬ್ಬ. ಬೇರೆ ಬೇರೆ ಹೆಸರುಗಳಲ್ಲಿ ಪ್ರಚಲಿತವಿದೆ. ಉತ್ತರ ಕರ್ನಾಟಕದ ಕಡೆ ಇದನ್ನು ಕಾರಹುಣ್ಣಿಮೆ ಹಬ್ಬ ಎಂತಲೂ ಕರೆಯುತ್ತಾರೆ. ಈ ಹಬ್ಬದ ದಿನ ಎತ್ತುಗಳನ್ನು ಮೈತೊಳೆದು ಅವುಗಳ ಕೋಡುಗಳಿಗೆ ಹಬ್ಬ ಎಂತಲೂ ಕರೆಯುತ್ತಾರೆ. ಈ ಹಬ್ಬದ ದಿನ ಎತ್ತುಗಳನ್ನು ಮೈತೊಳೆದು ಅವುಗಳ ಕೋಡುಗಳಿಗೆ ಬಣ್ಣ ಬಳಿದು ಅಲಂಕರಿಸುತ್ತಾರೆ. ಕೊಂಬುಗಳಿಗೆ ಮತ್ತು ಮೈಗೆ ಕೆಂಪು ಬಣ್ಣವನ್ನು ಬಳಿದು, ವಿಭೂತಿ, ಕುಂಕುಮ, ಹೂವಿಟ್ಟು ಪೂಜಿಸುತ್ತಾರೆ. ಪೂಜೆಯಾದ ಮೇಲೆ ಎತ್ತುಗಳಿಗೆಂದೇ ಮೀಸಲಾಗಿ ಹೊನ್ನುಗ್ಗಿ ಅಂದರೆ ಜೋಳದ ಹುಗ್ಗಿ ಮಾಡಿರುತ್ತಾರೆ. ಗುಗ್ಗರಿ ಹಾಕಿರುತ್ತಾರೆ. ಈ ಹೊನ್ನುಗ್ಗಿಯನ್ನು ಎತ್ತುಗಳಿಗೆ ತಿನ್ನಿಸುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಒಂದು ಗಾದೆ ಮಾತು ಸಹ ಇದೆ. "ಹೂಡಿ ಬಂದ ಎತ್ತಿಗೆ ಹೊನ್ನುಗ್ಗಿ, ಆಡಿ ಬಂದ ಎತ್ತಿಗೆ ಹೋಳಿಗಿ ಹುಗ್ಗಿ" ಎಂದು ಹೇಳುತ್ತಾರೆ.

ಈ ಹಬ್ಬದ ಮೊದಲನೇ ದಿನ ಎತ್ತು ಹಾಗೂ ದನಕರುಗಳನ್ನು ಪೂಜಿಸುತ್ತಾರೆ. ಅದೇ ದಿನ ಹೊನ್ನುಗ್ಗಿ ನೀಡುತ್ತಾರೆ. ಆದರೆ ಎರಡನೇ ದಿನ 'ಕರಿ ಹರಿಯುವುದು' ಎನ್ನುವ ಒಂದು ವಿಶೇಷ ಕಾರ್ಯಕ್ರಮ ಇರುತ್ತದೆ. ಅಂದರೆ ಎತ್ತುಗಳನ್ನು, ಹೋರಿಗಳನ್ನು ಓಟದಲ್ಲಿ ಜೂಜು ಬಿಡುವುದು. ಊರಿನ ಮುಂದೆ ಒಂದು ಪ್ರಮುಖ ಸ್ಥಳದಲ್ಲಿ ಅಂದರೆ ಊರನ್ನು ಪ್ರವೇಶಿಸುವಂತಹ ಜಾಗದಲ್ಲಿ ಅಡ್ಡವಾಗಿ ಒಂದು ಬೆಳ್ಳಿಯಿಂದ ತಯಾರಿಸಿದ ಉದ್ದನೆಯ ಎಣಿಕೆಯನ್ನು ಕಟ್ಟಿರುತ್ತಾರೆ. ದೂರದಿಂದ ಓಡಿ ಬಂದ ಎತ್ತುಗಳು ಅದನ್ನು ದಾಟಬೇಕು. ಯಾವುದು ಮೊದಲು ದಾಟುವುದೋ ಅದಕ್ಕೆ ಮೊದಲ ಸ್ಥಾನ. ಅದನ್ನು ಮೆರವಣಿಗೆ ಮಾಡುತ್ತಾರೆ. ಇದು ಮುಂಗಾರಿ ಹಬ್ಬದ ವಿಶಿಷ್ಟವಾಗಿದೆ.

**೫. ಮನೆದೇವರ ಜಾತ್ರೆ:** ಮ್ಯಾಸಬೇಡರ ಪ್ರಮುಖ ಹಬ್ಬಗಳಲ್ಲಿ ಈ ಮನೆದೇವರ ಜಾತ್ರೆಯು ಒಂದು. ಇವರ ಒಳಪಂಗಡಗಳಿಗನುಸಾರವಾಗಿ, ಬೆಡಗುಗಳಿಗನುಸಾರವಾಗಿ ಒಬ್ಬೊಬ್ಬ ದೇವರನ್ನು ಮನೆದೇವರನ್ನಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ಆಯಾಯ ದೇವರ ಜಾತ್ರೆ ಗಳಂದು ಅವರು ಸಂಭ್ರಮದಿಂದ ಮನೆದೇವರ ಜಾತ್ರೆಯನ್ನು ಆಚರಿಸುತ್ತಾರೆ.

ಈ ಬೇಡ ಬುಡಕಟ್ಟಿನ ದೇವರುಗಳ ಮೂಲಸ್ಥಾನ ಚಿತ್ರದುರ್ಗ ಜಿಲ್ಲೆಯ ಕಂಪಳದೇವ ಹಟ್ಟಿ, ಚಳ್ಳಕೆರೆ, ಜಗಳೂರು ಮುಂತಾದ ಸ್ಥಳಗಳು ಮಾತ್ರ. ಇವರು ಪೂಜಿಸುವ ಪ್ರಮುಖ ದೈವಗಳು ಕಾಟಂಲಿಂಗ, ಚಿತ್ರಲಿಂಗ, ಗಂಗಿಮಾಳವ್ವ, ಬೋರೆದೇವರು, ಬೋಸೇದೇವರು, ಗಾದ್ರಿಪಾಲನಾಯಕ, ಜಗಳೂರು ಪಾಪನಾಯಕ, ಮಾರಮ್ಮ, ಬಂಗಾರದೇವರು, ಬೊಮ್ಮ ಲಿಂಗ, ಓಬಳನರಸಿಂಹಸ್ವಾಮಿ ಮುಂತಾದವು.

ಮನೆದೇವರ ಜಾತ್ರೆಯಂದು ಅವರವರ ಯೋಗ್ಯತಾನುಸಾರ ಹಬ್ಬ ಮಾಡಿ, ತಮ್ಮ ಬಂಧು ಬಾಂಧವರನ್ನು ಕರೆದು ಉಣಬಡಿಸುತ್ತಾರೆ. ಇದು ಗೌರವ, ಸ್ವಾಭಿಮಾನದ ಪ್ರಶ್ನೆಯೂ ಆಗಿರುತ್ತದೆ. ಇದನ್ನು ನಾವು ಇಂದೂ ಸಹ ಈ ಜನಾಂಗದಲ್ಲಿ ನೋಡಬಹುದಾಗಿದೆ. ಈ ಜಾತ್ರೆಗಳಿಗೆ ಸಕುಟುಂಬ ಸಮೇತರಾಗಿ ಬಂಡಿಯನ್ನು ಕಟ್ಟಿಕೊಂಡು ಹೋಗುತ್ತಾರೆ.

**ಮ್ಯಾಸಬೇಡರ ಹನ್ನೆರಡು ಪೆಟ್ಟಿಗೆ ದೇವತೆಗಳು ಮತ್ತು ಸ್ಥಳಗಳು**

೧. ಮಾಕನಡುಕು ಓಬಳದೇವರು, ಮಾಕನಡುಕು, ಕೂಡ್ಲಿಗಿ ತಾ., ಬಳ್ಳಾರಿ ಜಿ.

೨. ಗೆದ್ದಲಗಟ್ಟೆ ಓಬಳದೇವರು, ಗೆದ್ದಲಗಟ್ಟೆ, ಕೂಡ್ಲಿಗಿ ತಾ., ಬಳ್ಳಾರಿ ಜಿ.

೩. ನಲ್ಲಿಜರುವು ಓಬಳದೇವರು, ರುದ್ರಮ್ಮನಹಳ್ಳಿ, ಚಳ್ಳಕೆರೆ ತಾ., ಚಿತ್ರದುರ್ಗ ಜಿ.

೪. ಗಾದ್ರಿಪಾಲನಾಯಕ ದೇವರು, ಬೊಮ್ಮಗೊಂಡನಕೆರೆ, ಮೊಳಕಾಲ್ಮೂರು ತಾ., ಚಿತ್ರದುರ್ಗ ಜಿ.

೫. ಸೂರಲಿಂಗೇಶ್ವರ ದೇವರು, ಕಾಮಗೇತನಹಳ್ಳಿ, ಜಗಳೂರು ತಾ., ಚಿತ್ರದುರ್ಗ ಜಿ.

೬. ರಾಜಲದೇವರು, ಮಲ್ಲೂರಹಳ್ಳಿ, ಚಳ್ಳಕೆರೆ ತಾ., ಚಿತ್ರದುರ್ಗ ಜಿ.

೭. ಬೋರೆದೇವರು, ಬೋರೆದೇವರಹಟ್ಟಿ, ಚಳ್ಳಕೆರೆ ತಾ., ಚಿತ್ರದುರ್ಗ ಜಿ.

೮. ಬೋಸೇದೇವರು, ಬೋಸೇದೇವರಹಟ್ಟಿ, ಚಳ್ಳಕೆರೆ ತಾ., ಚಿತ್ರದುರ್ಗ ಜಿ.

೯. ಚೆಂತಲಗುಟ್ಟ ಬೋರಸ್ವಾಮಿ, ಚೆಂತಲಗುಟ್ಟ, ಚಳ್ಳಕೆರೆ ತಾ., ಚಿತ್ರದುರ್ಗ ಜಿ.

೧೦. ಬಂಜಗೆರೆ ಓಬಳದೇವರು, ಥಳಕು, ಚಳ್ಳಕೆರೆ ತಾ., ಚಿತ್ರದುರ್ಗ ಜಿ.

೧೧. ಕುರಹಟ್ಟೆ ಬೊಮ್ಮದೇವರು, ಕುರಿಹಟ್ಟೆ, ಕೂಡ್ಲಿಗಿ ತಾ., ಬಳ್ಳಾರಿ ಜಿ.

೧೨. ದಡ್ಡಿಸೂರನಾಯಕ, ಹಿರೇಹಳ್ಳಿ, ಚಳ್ಳಕೆರೆ ತಾ., ಚಿತ್ರದುರ್ಗ ಜಿ.

ಈ ಮೇಲಿನ ಹನ್ನೆರಡು ದೇವತೆಗಳು ಮ್ಯಾಸನಾಯಕರ ಮನೆದೇವರುಗಳಾಗಿವೆ. ಆಯಾಯ ಒಳಪಂಗಡದವರು, ಒಬ್ಬೊಬ್ಬ ದೇವತೆಯನ್ನು ಆರಾಧಿಸುತ್ತಾರೆ. ಜಾತ್ರಾ ಸಮಯದಲ್ಲಿ ಭಾಗವಹಿಸುತ್ತಾರೆ. ಇದು ಇವರ ವೈಶಿಷ್ಟ್ಯವಾಗಿದೆ.

**ಮ್ಯಾಸಬೇಡರ ಕಲೆಗಳು**

ಮ್ಯಾಸಬೇಡ ಬುಡಕಟ್ಟಿನ ಸ್ತ್ರೀ-ಪುರುಷರೂ ಕಲಾವಂತಿಕೆ ಉಳ್ಳವರಾಗಿದ್ದರು. ಹಾಡು, ಕತೆಗಳನ್ನು ಕಟ್ಟುತ್ತಿದ್ದರು. ಬೇರೆ ಬೇರೆ ಆಚರಣೆ ಸಂದರ್ಭದಲ್ಲಿ ವಿಶೇಷವಾದಂತಹ ಕಲೆಗಳನ್ನು ಪ್ರದರ್ಶಿಸುತ್ತಿರುವುದನ್ನು ಇಂದಿಗೂ ಸಹ ಕಾಣುತ್ತೇವೆ. ದೇವರ ಮೇಲಿನ ತ್ರಿಪದಿ ಹಾಡುಗಳನ್ನು ಹೆಂಗಸರು ಇಂದೂ ಹಾಡುತ್ತಾರೆ. ಸ್ತುತಿ ಗೀತೆಗಳನ್ನು ಹಾಡುತ್ತಾರೆ. ಮಳೆ ಬಾರದೇ ಇದ್ದಾಗ ಮಳೆರಾಯನ ಮೇಲೆ ಪದಕಟ್ಟಿ ಹಾಡುತ್ತಾರೆ. ಸೋಬಾನೆ ಪದಗಳು, ಮದುವೆ ಸಂದರ್ಭದ ಹಾಡುಗಳು ಇವರಲ್ಲಿನ ಕಲೆಯನ್ನು ಸೂಚಿಸುತ್ತವೆ.

ಜಾನಪದ ಕಲೆಗಳೆಂದು ಗುರುತಿಸಲಾದ ಕೋಲಾಟ, ಜಾತ್ರೆ ಸಂದರ್ಭದಲ್ಲಿ ಅಂದರೆ ಉದಾ. ಮಾರಿ ಜಾತ್ರೆ, ದುರ್ಗಿ ಜಾತ್ರೆ ಮುಂತಾದ ಜಾತ್ರೆಗಳಲ್ಲಿ ‘ಗಾವು’ ಜಿಗಿಯುವುದು, ಇದನ್ನು ಪೋತರಾಜರು ಮಾಡುತ್ತಾರೆ. ವರ್ಣಾಲಂಕೃತವಾಗಿ ಕೇಕೆ ಹಾಕಿಕೊಂಡು ಅದರಿಂದ ತಮ್ಮ ಮೈಯನ್ನು ಒಡೆದುಕೊಳ್ಳುತ್ತಾ ಕುಣಿಯುತ್ತಾ ಗಾವು ಜಿಗಿಯುತ್ತಾರೆ. ಇದೊಂದು ವಿಶೇಷವಾದ ರೌದ್ರಮಯ ಕಲೆಯಾಗಿರುತ್ತದೆ.

**ಮ್ಯಾಸಬೇಡರ ಉಪಜೀವನ ವೃತ್ತಿಗಳು**

ಮ್ಯಾಸಬೇಡರು ಅವಲಂಬಿಸಿರುವ ಉಪಜೀವನ ವೃತ್ತಿಗಳೆಂದರೆ ಕೃಷಿ, ಕೃಷಿ ಕೂಲಿ, ಕುರಿಸಾಕಾಣಿಕೆ, ಮೇಕೆ ಸಾಕಾಣಿಕೆ, ಹಸುಗಳ ಸಾಕಾಣಿಕೆಗಳು ಪ್ರಮುಖವಾದುವು. ಇವುಗಳ ಜೊತೆ ಬೇಟೆಯಾಡುವುದು ಇವರ ಹವ್ಯಾಸದ ವೃತ್ತಿಯಾಗಿದೆ. ಈಗ ಹೆಚ್ಚಾಗಿ ಕೃಷಿಯನ್ನ ವಲಂಬಿಸಿ ಜೀವನ ಸಾಗಿಸುತ್ತಾರೆ. ಕೃಷಿಯ ಜೊತೆಗೇನೇ ಕುರಿ ಸಾಕುವುದು, ದನ ಸಾಕುವುದು ಇತ್ಯಾದಿ ಉಪವೃತ್ತಿಗಳನ್ನು ಅವಲಂಬಿಸಿದ್ದಾರೆ. ಅಲೆಮಾರಿಯಾದ ಕಾಲದಿಂದ ಇಂದಿಗೂ ಈ ವೃತ್ತಿಗಳು ಉಳಿದುಕೊಂಡು ಬಂದಿವೆ. ಅಂದು ಹುಲ್ಲು ನೀರು ಹುಡುಕುತ್ತಾ ಸ್ಥಳದಿಂದ ಸ್ಥಳಕ್ಕೆ, ಕಾಡಿನಿಂದ ಕಾಡಿಗೆ ಹೋಗುತ್ತಿದ್ದ ಜನರು ಇವರು. ಆದರೆ ನಾಗರಿಕತೆಗೆ ಹೊಂದಿ ಕೊಂಡು ಇಂದು ಜೀವನ ಸಾಗಿಸುತ್ತಿದ್ದಾರೆ. ಆದರೂ ತಮ್ಮ ಕುಲಕಸುಬುಗಳನ್ನು ಸಂಪೂರ್ಣ ತ್ಯಾಗ ಮಾಡಿಲ್ಲ.

ಈಗ ಶೈಕ್ಷಣಿಕವಾಗಿ ಬಹಳ ಮುಂದುವರಿದಿದ್ದರೂ, ಇನ್ನೂ ಕೆಲವು ಕಡೆ ಮಾತ್ರ ಈ ಸಂಸ್ಕೃತಿ ಉಳಿದಿರುವುದನ್ನು ಕಾಣುತ್ತೇವೆ. ಮಧ್ಯ ಕರ್ನಾಟಕದ ಕೆಲವು ಭಾಗಗಳಲ್ಲಿ ಹಟ್ಟಿ ಗಳಿರುವ ಕಡೆಯಲ್ಲಿ ಇನ್ನೂ ಸಂಸ್ಕೃತಿ ಉಳಿದಿದೆ. ಸಂಪ್ರದಾಯ, ಆಚರಣೆಗಳಿವೆ. ಆದರೆ ಬಹುತೇಕ ಜನರು ಇಂದು ಆಧುನಿಕತೆಗೆ ಬದಲಾಗಿರುವುದನ್ನು ನೋಡುತ್ತೇವೆ. ಉಪಜೀವನಕ್ಕೆ ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡು ಜೀವನ ಸಾಗಿಸುತ್ತಿದ್ದಾರೆ. ಆದರೆ ಪಶುಪಾಲನೆ ಮಾತ್ರ ಬಿಟ್ಟಿಲ್ಲ. ಹಸು, ಕುರಿ, ಮೇಕೆಗಳನ್ನು ಇನ್ನೂ ಇವರು ಸಾಕುತ್ತಿರುವುದನ್ನು ಕಾಣುತ್ತೇವೆ.

**ಮ್ಯಾಸಬೇಡರ ಮದುವೆ ಪದ್ಧತಿ**

ಬೇಡನಾಯಕ ಬುಡಕಟ್ಟಿನಲ್ಲಿ ಹೆಣ್ಣುಮಕ್ಕಳನ್ನು ಪಡೆದವರು ಗಂಡನ್ನು ಹುಡುಕಿಕೊಂಡು ಹೋಗುವಂತಿಲ್ಲ. ಗಂಡಿನ ಕಡೆಯವರೇ ಹೆಣ್ಣುಗಳಿರುವ ಮನೆಯನ್ನು ಹುಡುಕಿಕೊಂಡು ಹೋಗುವುದು ಹೆಚ್ಚು. ಹಾಗೆ ಗಂಡಿನವರು ಒಸಗೆ ತೆಗೆದುಕೊಂಡು ಹೆಣ್ಣಿನ ಮನೆಗೆ ಹೋಗುವ ಪದ್ಧತಿಯನ್ನು ಈಗಲೂ ಕಾಣಬಹುದು. ಒಸಗೆ ಎಂದರೆ ಎಲೆ, ಅಡಿಕೆ, ಐದು ಚಿಪ್ಪು ಬಾಳೆಹಣ್ಣು, ಐದು ಉತ್ತತ್ತಿ, ಐದು ಕೊಬ್ಬರಿ, ಅರಿಶಿಣ ಕೊಂಬು, ಜತೆಗೆ ಉಡಿ ಸಾಮಾನು ಎಂದು ಎರಡು ಕಾಯಿ ಮತ್ತು ಅಕ್ಕಿ ಇವುಗಳ ಜೊತೆಗೆ ಹೆಣ್ಣು ಹುಡುಕಿದ್ದು, ತೀರ್ಮಾನ ಮಾಡಿಕೊಂಡು ಬರಲು ಹೋಗುವಾಗ ಒಂದು ದೊಡ್ಡ ಪುಟ್ಟಿಯ ತುಂಬ ನಾಲ್ಕು ಐದು ಸೇರು ಹಸಿ ಅಕ್ಕಿ ಹಿಟ್ಟಿನ ಒಂದೇ ಉಂಡೆ, ಐದು ಸೇರು ಕಾಳು ಬೀಸಿ

ಮಾಡಿದ ಐವತ್ತು ಸಜ್ಜೆ ರೊಟ್ಟಿ ಇವಿಷ್ಟು ತೆಗೆದುಕೊಂಡು ಹೋಗಬೇಕು. ಇದನ್ನೆಲ್ಲ ಹೆಣ್ಣಿನವರು ಹೆಣ್ಣು ಒಪ್ಪಂದದ ನಂತರ ತಮ್ಮ ಕುಲಸ್ಥರಿಗೆ ಹಂಚುತ್ತಾರೆ.

ಇಂದಿಗೂ ಬೇಡನಾಯಕ ಸಮೂಹದಲ್ಲಿ ವರದಕ್ಷಿಣೆ ಪದ್ಧತಿ ಇಲ್ಲ. ಬದಲಾಗಿ ಹೆಣ್ಣಿನವರಿಗೇ ಗಂಡಿನವರು ವಧುವಿನ ತೆರವು ಕೊಟ್ಟು ಮಾಡಿಕೊಳ್ಳಬೇಕು. ಬೇಡನಾಯಕರು ವಿವಾಹಪೂರ್ವ ಹೆಣ್ಣಿಗೆ ಹಣದ ರೂಪದಲ್ಲಿ ತೆರ ಸಲ್ಲಿಸುವುದಲ್ಲದೆ ಗಂಡಿನವರು ಎರಡು ಚೀಲ ದವಸವನ್ನು 'ಸುಖ ಮಂಚಿಕೆ' ದವಸ ಎಂದು ಕೊಡಬೇಕು. ಅಲ್ಲದೆ ಇವರ ಮದುವೆ ಗಳಲ್ಲಿ ಎಲೆ ಅಡಿಕೆ ಅತಿಯಾಗಿ ಖರ್ಚಾಗುತ್ತದೆ. ನಾಯಕರ ಮದುವೆಗಳಲ್ಲಿ ಖರ್ಚೆಲ್ಲ ಬಹುಮಟ್ಟಿಗೆ ಗಂಡಿನ ಕಡೆಯವರಿಗೆ ಬೀಳುತ್ತದೆ. ಬೇಡನಾಯಕರು ಹೆಣ್ಣಿಗೆ ಕೊಟ್ಟಿರುವ ಅವಕಾಶ, ಸ್ಥಾನಮಾನಗಳೂ ವಿಶೇಷವಾಗಿವೆ. ಹುಟ್ಟಿದ ಮಗು ಸಹಜವಾಗಿ ತಂದೆಯ ಕುಲಕ್ಕೆ ಸೇರುತ್ತದೆ. ಒಂದು ವೇಳೆ ಮಕ್ಕಳಿರುವ ಹೆಂಗಸಿಗೆ ಗಂಡ ತೀರಿಕೊಂಡರೆ ತಂದೆಯಿಂದ ಆಕೆಗೆ ಬರಬೇಕಾದ ಆಸ್ತಿಯ ಭಾಗವು ವಿಧವೆಯಾದವಳಿಗೆ ಬರುತ್ತದೆ. ಆದರೆ ಆಕೆ ಅದನ್ನು ಪಡೆದು ತಂದೆಯ ಮನೆಗೆ ಬಂದು ಜೀವಿಸುವಂತಿಲ್ಲ. ಬಹಳಮಟ್ಟಿಗೆ ಅತ್ತೆ ಮಾವಂದಿರ ಮನೆಯಲ್ಲಿಯೇ ಇರಬೇಕಾಗುತ್ತದೆ. ಒಂದು ವೇಳೆ ಮಕ್ಕಳಿಲ್ಲದಿದ್ದರೆ ಆಸ್ತಿಯ ಭಾಗ ಬರುವುದಿಲ್ಲ. ಜೀವನಾಂಶ ಬರುತ್ತದೆ ಅಷ್ಟೆ.

ಬೇಡರಲ್ಲಿ ವಿಧವಾ ವಿವಾಹ ಇತ್ತು ಎಂಬುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಇಂದಿಗೂ ಸೀರುಡಿಕೆ ಮನೆತನವು ಅದನ್ನೇ ಸೂಚಿಸುತ್ತದೆ. ಅಂದರೆ ವಿಧವೆಯಾದ ಹೆಂಗಸು ಮತ್ತೆ ಸೀರುಡಿಕೆ ಲಗ್ನ ಆಗಬಹುದು. ಕೆಲವರು ಈ ಸೀರುಡಿಕೆಯವರ ಮನೆಯಲ್ಲಿ ಮದುವೆ ಆಗುವುದಿಲ್ಲ. ಕನ್ಯೆ ತರುವುದಿಲ್ಲ.

ಅಂತರ್ಜಾತಿಯ ವಿವಾಹವಾದರೆ ನಾಯಕ ಸಮಾಜ ಗಂಡು ಹೆಣ್ಣಿಗೆ ಬಹಿಷ್ಕಾರ ಹಾಕುವುದುಂಟು. ಒಂದು ವೇಳೆ ಈ ಮಾದರಿಯ ವಿವಾಹ ಆದವನು ಮತ್ತೆ ಈ ಜಾತಿ ಯೊಳಗೆ ಬರಬೇಕಾದರೆ ಕಟ್ಟಿಕೊಂಡ ಅನ್ಯಜಾತಿಯ ಹೆಂಡತಿಯನ್ನು ಬಿಟ್ಟುಬಿಡಬೇಕಾ ಗುತ್ತದೆ. ಇದು ಸಂಪ್ರದಾಯಸ್ಥರಲ್ಲಿ ಮಾತ್ರ. ಆದರೆ ಇಂದು ಆಧುನಿಕ ಯುಗದಲ್ಲಿ ಅನೇಕ ಅಂತರ್ಜಾತಿಯ ವಿವಾಹಗಳನ್ನು ನೋಡುತ್ತೇವೆ.

ಮ್ಯಾಸಬೇಡರಾಗಿರಲಿ, ಊರುನಾಯಕರಾಗಿರಲಿ ಮದುವೆ ಸಂದರ್ಭದಲ್ಲಿ ಚಪ್ಪರ ಹಾಕುವರು. ಅಲ್ಲದೆ ಇವರು ಮದುವಣಗಿತ್ತಿಯ ಪಕ್ಕದಲ್ಲಿ ಚಿಕ್ಕಮ್ಮನನ್ನು ಕೂರಿಸುವ ಸಂಪ್ರದಾಯವಿದೆ. ಊರನಾಯಕರು ಮದುವೆಯ ತರುವಾಯದಲ್ಲಿ ಕೋಳಿ ಮಾಂಸ, ಮದ್ಯ ಸೇವನೆ ಮಾಡಬಹುದು. ಆದರೆ ಮ್ಯಾಸಬೇಡನಾಯಕರಿಗೆ ಇದು ನಿಷೇಧವಿರುವು ದರಿಂದ ಈ ಸಂಪ್ರದಾಯವನ್ನು ಇಟ್ಟುಕೊಂಡಿಲ್ಲ. ಇತ್ತೀಚಿನ ದಿನಮಾನಗಳಲ್ಲಿ ಆಧುನಿಕ ರೀತಿಯಲ್ಲಿ ಮದುವೆ ಸಂಭ್ರಮವನ್ನು ಕಾಣುತ್ತೇವೆ.

ಈ ಸಮುದಾಯದಲ್ಲಿ ಅನೇಕ ಬೆಡಗುಗಳುಂಟು. ತಮ್ಮ ಬೆಡಗನ್ನು ಹೊರತುಪಡಿಸಿ ಇತರೆ ಬೆಡಗುಗಳಲ್ಲಿ ಕನ್ನೆಯನ್ನು ತಂದು ಮದುವೆಯಾಗಬಹುದು. ಇಂದು ಮ್ಯಾಸನಾಯಕರು ಮತ್ತು ಊರನಾಯಕರಲ್ಲಿ ಸಂಬಂಧಗಳು ನಡೆದಿರುವ ಅನೇಕ ಉದಾಹರಣೆಗಳಿವೆ. ಇಂದು ಈ ಎರಡೂ ಪಂಗಡಗಳೂ ಒಂದಾಗುವ ಲಕ್ಷಣಗಳು ಕಂಡುಬರುತ್ತಿವೆ.

**ಬೇಡರ ಉಪಪಂಗಡಗಳು**

ಬೇಡರಲ್ಲಿ ಹಲವು ಉಪಪಂಗಡಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು. ೧. ಊರನಾಯಕರು (ಚಿನ್ನಬೋಯಿ), ೨. ಮ್ಯಾಸಬೇಡರು (ಪೆದ್ದಬೋಯಿ), ೩. ಗುಡ್ಲಬೇಡ (ಗುಡಿಸಲು ಬೇಡ), ೪. ಮತ್ಯಮ್ಮ ಅಥವಾ ಉರಸಿಬೇಡ ಮತ್ತು ಸಾದರಬೇಡ, ೫. ಹಾಲುಬೇಡ ಮತ್ತು ೬. ಮೊಂಡಬೇಡ ಎಂಬ ಪ್ರಮುಖ ಉಪಪಂಗಡಗಳನ್ನು ಕಾಣಬಹುದು (ಅನಂತಕೃಷ್ಣ ಎಲ್.ಕೆ., ೧೯೮೮, ಪು. ೨೦೫).

ಒಂದೇ ಕುಲಕ್ಕೆ ಅಥವಾ ಪಂಗಡಕ್ಕೆ ಸೇರಿದ್ದರೋ ಈ ಉಪಪಂಗಡಗಳ ನಡುವೆ ವೈವಾಹಿಕ ಸಂಬಂಧಕ್ಕೆ ಅವಕಾಶವಿಲ್ಲ. ಅಲ್ಲದೆ ಉಪಪಂಗಡಗಳಲ್ಲೇ ಅನೇಕ ಬೆಡಗುಗಳಿವೆ. ಸ್ವಬೆಡಗಿನಲ್ಲಿ ವೈವಾಹಿಕ ಸಂಬಂಧವಿಲ್ಲ. ಒಂದೇ ಬೆಡಗಿನವರು ಅಣ್ಣತಮ್ಮಂದಿರಾಗುವರು. ಮ್ಯಾಸಬೇಡರಲ್ಲಿ ಮಂದಲರು ಮತ್ತು ಮಲ್ಲಿನಾಯಕರು ಎಂದು ಎರಡು ಪ್ರಮುಖ ವಿಭಾಗಗಳಿವೆ. ಇವು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಿಗೆ ಸೇರಿದವರು ಎಂದು ಕರೆದುಕೊಳ್ಳುತ್ತಾರೆ. ಇವೆರಡೂ ಗುಂಪುಗಳಲ್ಲಿಯೂ ಸಂಬಂಧ ಬೆಳಿಸಿಕೊಂಡ ಬೆಡಗುಗಳೂ ಇವೆ.

**ಬೆಡಗುಗಳು**

೧. ನೆಲ್ಲಬಾಮುಡ್ಲು

೨. ಮಳೇಲೂರು

೩. ಎನುಮುಲರು

೪. ಬೋಸುರ್ಲು

೫. ದೊಣಮಂಡ್ಲು

೬. ಮುನ್ನುಲು

೭. ಗಟ್ಟಮತ್ತೆ

೮. ಕುಂಟ್ರೇಲು

೯. ಸೂರ್ಯಕಾಮ

೧೦. ಕಾಮಗೇತ್ಲರು

೧೧. ಮಂದ್ಲಾರು

೧೨. ಎತ್ತಿನವರು

೧೩. ದಡ್ಡಿದಾಸರಿ

೧೪. ಪಾಲಜ್ಜಿಯವರು

೧೫. ಓಬಲಿನಾಯಕರು

೧೬. ಗಾಡವುಲು

೧೭. ಪೂಲಾರು (ಪುವ್ವಲರು)

೧೮. ಕೋಸಲವರು

೧೯. ಕುರುಬರು

೨೦. ಗುಜ್ಜುಡ್ಲು

೨೧. ಪಟ್ಟಪಲ್ಲಾರು

೨೨. ಭಾನೂರು

೨೩. ಉರೆಬಲಾದ್ಯ

೨೪. ಬೋನಹಳ್ಳಿ ಮೂರು

೨೫. ಚಿನ್ನನಾಯ್ಕ

೨೬. ಬಂಟುಗ್ಲು

೨೭. ಪಾಮಿಡಲು

೨೮. ಬಡಸಲೋರು

೨೯. ಮುಮ್ಮುಡ್ಲು

೩೦. ರಾಯಬೋರು

೩೧. ಒಕ್ಲಾರು

೩೨. ಅಜ್ಜಡ್ಲು

೩೩. ಕುಂಡ್ರುಲು

ಸೂರ್ಯವಂಶ ಮತ್ತು ಚಂದ್ರವಂಶ ಬೆಡಗುಗಳು

| **ಅ. ಮಲ್ಲಿನಾಯಕರ ಉಪಬೆಡಗುಗಳು** | **ಆ. ಮಂದಲಾರ ಉಪಬೆಡಗುಗಳು** |
| --- | --- |

| | |
|---|---|
| ೧. ಈಶ್ವರನೋರು | ೧. ಕಾಮಗೇತಿ |
| ೨. ಎನುಮಲೋರು | ೨. ಗಾದ್ರಿಪಾಲೋರು |
| ೩. ಓಬನಾಯಕನೋರು | ೩. ಬುಲ್ಲುಡ್ಲು |
| ೪. ಕಾಟಮಲ್ಲನಾಯಕರನೋರು | ೪. ಮ್ಯಾಸಲೋರು |
| ೫. ಚೆನ್ನಕೌದನೋರು | ೫. ಸಾಕಲರು |
| ೬. ಪೆದ್ದನಾಯಕನೋರು | **ಆ. ಬುಡಗ್ಲೋರಲ್ಲಿನ ಉಪಪಂಗಡಗಳು** |
| ೭. ಪೇಯಲೋರು | ೧. ಕುರಿಹಟ್ಟಿ ಬುಡಗ್ಲು |
| ೮. ಬಂಗಾರುನೋರು | ೨. ನಲ್ಲದೇವರಬುಡುಗ್ಲು |
| ೯. ಮೇಸಲೋರು | ೩. ಬೊಮ್ಮದೇವರು ಬುಡುಗ್ಲು |
| ೧೦. ವಡೇಲೂರು | ೪. ಮಾರವ್ವನ ಬುಟುಗ್ಲು |
| **ಆ. ಯರಮಂಚನಾಯಕರ ಉಪಬೆಡಗುಗಳು** | ೫. ಸಂಗವರ ಬುಟುಗ್ಲು |
| ೧. ಅಚ್ಚಪಲೋರು | ೬. ಸಿದ್ಧಪಲ್ಲಿ ಬುಟುಗ್ಲು |
| ೨. ಕರಿನೋರು | **ಇ. ಮಂಡ್ಲೋರು ಉಪಪಂಗಡಗಳು** |
| ೩. ನಲಗೇತಿ | ೧. ಜರಕಡ್ಲು ಪಾಮುಡ್ಲು |
| ೪. ಯರಗೋತಿ | ೨. ನಲ್ಲಿಪಾಮುಡ್ಲು |
| ೫. ಯರಗಾಟ್ಲವರು | ೩. ಪೂಜಾರಹಳ್ಳಿ ಪಾಮುಡ್ಲು |
| ೬. ಎಡೇಲರು | ೪. ಯಕಪಾಮುಡ್ಲು |
| **ಇತರೆ ಬೆಡಗುಗಳು** | |
| ೧. ಅಜ್ಜಡ್ಲೋರು | |
| ೨. ಅಲಕೇರು | |
| ೩. ಕರಿನೋರು | |

**ದಾಸರಲ್ಲಿ ಕೆಲವು ಉಪಪಂಗಡಗಳಿವೆ.**

೧. ಗುಗ್ರಿ ದಾಸರು

೨. ಗೊಡಗು ದಾಸರು

೩. ಬೋಡ ದಾಸರು

೪. ದಡ್ಡಿದಾಸರು

| **ಬೆಡಗು** | **ದೇವರು** |
|---|---|
| ಮಳೇಲಾರು | ಓಬಳದೇವರು (ಅಹೋಬಲ ನರಸಿಂಹಸ್ವಾಮಿ) |

| | |
|---|---|
| ಎನುಮ್ಲಾರು | ಗಾದ್ರಿಪಾಲನಾಯಕ |
| ಬುಟುಗ್ಲಾರು | ಮಾರೆಮ್ಮ |
| ಮಂದ್ಲಾರು | ಓಬಳ |
| ಪೋಲಾರು | ಗುಂಡು ಬೋರದೇವರು |
| ಪೊಟ್ಟಿಪೊಲ್ಲಾರು | ಬೋರದೇವರು |
| ಕಾಮಗೇತಿ | ಸೂರಪ್ಪದೇವರು (ಕರಿಶೆಟ್ಟಿ ರುದ್ರಪ್ಪ, ೧೯೯೯, ಪು. ೨೨). |

ಮ್ಯಾಸಬೇಡರ ಶವಸಂಸ್ಕಾರ ಪದ್ಧತಿ

ಮ್ಯಾಸಬೇಡರ ಹಟ್ಟಿಗಳಲ್ಲಿ ಯಾರಾದರೂ ತೀರಿಕೊಂಡರೆ ಆತನ ಶವ ಬೀಳುತ್ತಿ ದ್ದಂತೆಯೇ ಅದರ ತಲೆಯನ್ನು ದಕ್ಷಿಣಕ್ಕೆ ಇಟ್ಟು ಉತ್ತರಕ್ಕೆ ಕಾಲು ಇರಿಸಿ ಶಿರದ ಬಳಿ ಒಂದು ದೀವಿಗೆ ಹಚ್ಚಿ ಇಡುವರು. ಅತ್ತ ಗುಡಿಸಿಲ ಮುಂದೆಯೂ ಕಟ್ಟಿಗೆಯಿಟ್ಟು ಬೆಂಕಿ ಹಾಕುವರು. ಅದೇ ಬೆಂಕಿಯ ಮೇಲೆ ಒಂದು ಮೊಗೆ ಇಟ್ಟು ನೀರು ಕುದಿಸಿ, ಅದರೊಳಗೆ ಒಂದಿಷ್ಟು ಅಕ್ಕಿಹಾಕಿ ಅದು ಬೇಯಲು ಬಿಡುವರು. ಇದನ್ನು ಕೂಳು ಕುಚ್ಚುವುದು ಎನ್ನುತ್ತಾರೆ. ಸಾವಿನ ಸುದ್ದಿಯನ್ನು ಕೇಳಿದ ನಂತರ ಅವನ ಬೀಗರು ಹೆಣ್ಣುಮಕ್ಕಳು ಸಾಯುವ ಮೊದಲೇ ಆರೋಗ್ಯ ಸರಿಯಿಲ್ಲವೆಂದು ಸಮಾಚಾರ ಕೇಳಿಬಂದಿದ್ದರೆ ತಮ್ಮ ಕೈಯ ಸೇವೆ ಮಾಡಿಕೊಂಡು ಸ್ವಲ್ಪಕಾಲ ಅವನ ಬಳಿ ಇರುತ್ತಾರೆ.

ಗಂಡಸರು ಕಳ್ಳಿಕಟ್ಟಿಗೆ ಅಥವಾ ಬಿದಿರು ಬೊಂಬುಗಳಿಂದ ಸಿದಿಗೆ ಕಟ್ಟಲು ಆರಂಭಿಸು ವರು. ಸಿದಿಗೆಗೆ ಮೂಲೆ ಮೂಲೆಗೆ ಸೇರಿಸಿ ಹಗ್ಗ ಬಿಗಿದು ಕಟ್ಟುತ್ತಾರೆ. ಅತ್ತ ಮಾದಿಗರು ಹಟ್ಟಿಯಾಚೆ ಹೋಗಿ ಸ್ಮಶಾಸನದಲ್ಲಿ ಏಳು ಹೆಜ್ಜೆ ಭೂಮಿಯನ್ನು ಕಾಲಿನಿಂದ ಅಳೆದು ಅಷ್ಟು ಅಳತೆಯ ಭೂಮಿಯನ್ನು ಒಂದು ಆಳುಮಟ್ಟ ಇಳಿಸುತ್ತಾರೆ. ಅಂದರೆ ಅಗೆಯುತ್ತಾರೆ. ಅಥವಾ ಜಾಗವನ್ನು ಅಳತೆ ಮಾಡಿಬಿಡುತ್ತಾರೆ. ಇವರೇ ಕುಣಿಯನ್ನು ತೋಡಿ ಶವವನ್ನು ಹೂಳುತ್ತಾರೆ.

ಮನೆಯ ಯಜಮಾನ ಅಥವಾ ಯಜಮಾನಿ ಸತ್ತರೆ ಮಗ ಅಥವಾ ಮೊಮ್ಮಗನೋ ಕೂಳನ್ನು ಹೊತ್ತಿರುತ್ತಾನೆ. ಇಲ್ಲ ಅಣ್ಣತಮ್ಮಂದಿರಾದರೂ ಕೂಳು ಹಿಡಿದಿರುತ್ತಾರೆ. ಶವವನ್ನು ಕುಣಿಯಲ್ಲಿ ಇಡುವಾಗ ಶವದ ತಲೆಯನ್ನು ದಕ್ಷಿಣ ದಿಕ್ಕಿಗೆ ಮಾಡಿಕೊಂಡು ಸಮಾಧಿ ಕುಣಿದು ಹತ್ತಿರ ತಂದು ಸಂಪ್ರದಾಯದ ಪ್ರಕಾರ ತಂಗಡಿಕೆ ಪತ್ರಿಯಿಂದಲೋ ಲೆಕ್ಕಿಪತ್ರಿ ಯಿಂದಲೋ, ಶವದ ಮೇಲೆ ಹಾಕಿ ಎಡಗೈಯಿಂದ ಮೂರು ಹಿಡಿ ಮಣ್ಣನ್ನು ಹಾಕಿ ಶವಸಂಸ್ಕಾರ ಮಾಡುತ್ತಾರೆ. ಆದ ಬಳಿಕೆ ಎಲ್ಲರೂ ಹಿಂದಕ್ಕೆ ತಿರುಗಿ ನೋಡದೇ ಕೆರೆಗೋ, ಬಾವಿಗೋ ಅಥವಾ ಮನೆಗೋ ಹೋಗಿ ಸ್ನಾನ ಮಾಡಿ ಆಂಜನೇಯದ ದೇವಸ್ಥಾನಕ್ಕೆ ಹೋಗುತ್ತಾರೆ.

ಮಣ್ಣು ಮಾಡಿದ ಮೂರು ದಿನದಲ್ಲಿ ಒಂದು ಕಾರ್ಯವನ್ನು ಆಚರಿಸುತ್ತಾರೆ. ಅಣ್ಣ ತಮ್ಮಂದಿರೆಲ್ಲ ಕೂಡಿ ಇಂಡಿ ಮೂರು ಕೂಳು ಮಾಡಿ ಬಂದು, ಅವರೆಲ್ಲ ಕೂಳು ತಿಂದು ತಮ್ಮ ತಮ್ಮ ಮನೆಗೆ ಹೋಗುತ್ತಾರೆ. ನಂತರ ಒಂಬತ್ತು ದಿವಸದಲ್ಲಾಗಲೀ, ತಿಂಗಳು ತುಂಬುವಾಗಾಗಲೀ ಇನ್ನೊಂದು ಕಾರ್ಯವನ್ನು ಮಾಡಿಕೊಳ್ಳುತ್ತಾರೆ. ಇಲ್ಲಿಗೆ ಅದರ ಮುಕ್ತಾಯವಾಗುತ್ತದೆ. ಕೆಲವೊಬ್ಬರು ವಾರ್ಷಿಕಾಚರಣೆಯನ್ನು ಮಾಡುವುದುಂಟು. ಅದು ಅವರವರ ಅಭಿಪ್ರಾಯಕ್ಕೆ ಬಿಟ್ಟಿರುತ್ತದೆ. ಇಷ್ಟು ಬೇಡನಾಯಕರ ಶವಸಂಸ್ಕಾರ ವಿಧಿ ಯಾಗಿರುತ್ತದೆ.

ಒಟ್ಟಿನಲ್ಲಿ ಬುಡಕಟ್ಟು ಸಂಸ್ಕೃತಿಯಲ್ಲೇ ಈ ಬೇಡ ಬುಡಕಟ್ಟಿನ ಸಂಸ್ಕೃತಿ ವೈಶಿಷ್ಟ್ಯ ವಾದುದು. ಇವರ ಜೀವನ ಮತ್ತು ಸಮಾಜ ವ್ಯವಸ್ಥೆ, ಆಚರಿಸುವ ಹಬ್ಬಗಳು, ಸಂಪ್ರದಾಯದ ಆಚರಣೆಗಳು, ವೃತ್ತಿ, ಉಪವೃತ್ತಿ ಕಲೆ ಹಾಗೂ ಬೇಟೆಗಾರಿಕೆ, ಮದುವೆ ಸಂಪ್ರದಾಯ ಇತ್ಯಾದಿ ಆಚರಣೆಗಳು ಬಹುವಿಶಿಷ್ಠವಾಗಿವೆ. ಇದೊಂದು ಅಧ್ಯಯನಶೀಲ ಬುಡಕಟ್ಟು ಎಂಬುದರಲ್ಲಿ ಸಂಶಯವೇ ಇಲ್ಲ. ಇನ್ನೂ ಸಾಕಷ್ಟು ವಿಧಾನದಲ್ಲಿ ಅಧ್ಯಯನ ಮಾಡುವ ಅಗತ್ಯವೂ ಇದೆ.

ಪರಾಮರ್ಶನ ಗ್ರಂಥಗಳು

೧. ಮ್ಯಾಸಬೇಡರ ಸಂಸ್ಕೃತಿ, ಡಾ. ಕೃಷ್ಣಮೂರ್ತಿ ಹನೂರು, ೧೯೯೩.

೨. ಮ್ಯಾಸಮಂಡಲ, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩.

೩. ವಾಲ್ಮೀಕಿ ಸಂಪದ, (ಸಂ.)ಡಾ. ಮಂಜುನಾಥ ಬೇವಿನಕಟ್ಟಿ, ಡಾ. ತಾರೀಹಳ್ಳಿ ಹನುಮಂತಪ್ಪ.

೪. ಘಟ್ಟ ಹೊಸಹಳ್ಳಿ ಗಟ್ಟಿಗ, (ಸಂ.)ಹರ್ತಿಕೋಟೆ ವೀರೇಂದ್ರಸಿಂಹ, ಡಾ. ತೇಜಸ್ವಿ ಕಟ್ಟಿಮನಿ.

೫. ಮನೆ, ಸಮಾಜ ಮತ್ತು ಸಂಸ್ಕೃತಿ, ಎಂ.ಪಿ. ವೀಣಾ.

೬. ಮ್ಯಾಸನಾಯಕರು ಒಂದು ಜನಾಂಗೀಯ ಅಧ್ಯಯನ, ಡಾ. ಕರಿಶೆಟ್ಟಿ ರುದ್ರಪ್ಪ.

೭. ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ.

೮. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ.

---

[1]

# ಬುಡಕಟ್ಟು ನೆಲೆಯಲ್ಲಿ ಬೇಡರು

ಕರ್ನಾಟಕದಲ್ಲಿ ನಾಯಕ, ತಳವಾರ, ವಾಲ್ಮೀಕಿ, ಬೇಡ ಇವೇ ಮೊದಲಾದ ಹೆಸರುಗಳಿಂದ ಗುರುತಿಸಲ್ಪಡುವ ಬೇಡ ಸಮುದಾಯವನ್ನು ಬುಡಕಟ್ಟು ನೆಲೆಯಲ್ಲಿ ಪರಿಶೀಲಿಸುವುದು ಇಲ್ಲಿಯ ಪ್ರಧಾನ ಉದ್ದೇಶ. ಬೇಡರು ಕಾಲಗತಿಯಲ್ಲಿ ಬುಡಕಟ್ಟಿನ ಅನನ್ಯತೆಯನ್ನು ಎಷ್ಟು ಉಳಿಸಿಕೊಂಡಿದ್ದಾರೆ ಎಂದು ಗುರುತಿಸುವ ಕ್ರಮ ಒಂದೆರಡು ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಅಂಥವುಗಳಲ್ಲಿ ಒಂದು ಹೊರಗಿನಿಂದ ಬರುವಂತ ಹದ್ದು. ಮತ್ತೊಂದು ಒಳಗಿನಿಂದ ಬರುವಂತಹದ್ದು. ಬೇಡರು ಬುಡಕಟ್ಟು ಲಕ್ಷಣಗಳನ್ನು ಅಷ್ಟಾಗಿ ಉಳಿಸಿಕೊಂಡಿಲ್ಲ ಎಂದರೆ ಹೊರಗಿನವರು ಹಾಗಾದರೆ ಬೇಡರು ಮೀಸಲಾತಿಗೆ ಅರ್ಹರಲ್ಲ ಎನ್ನಬಹುದು (ನಾಯಕ ಅನ್ನುವ ಪದವನ್ನು ಶ್ರೇಷ್ಠವಾಗಿ ವ್ಯಾಖ್ಯಾನಿಸಿ, ಈ ನಾಯಕರಿಗೆ ಮೀಸಲಾತಿ ಪಟ್ಟಿಯಿಂದ ಹೊರಗಿಡಬೇಕೆಂದು ಕೆಲವು ತಿಂಗಳುಗಳ ಹಿಂದೆ ವಾದಿಸಿದ ದಾಸನೂರು ಕೂಸಣ್ಣ ಅವರ ವಿಚಾರಗಳನ್ನು ಇಲ್ಲಿ ಸ್ಮರಿಸಬಹುದು). ಇಲ್ಲ ಬೇಡರಲ್ಲಿ ಯಾವುದೋ ಒಂದು ಗುಂಪು ಮಾತ್ರ ಸ್ವಷ್ಟ ಬುಡಕಟ್ಟು ಲಕ್ಷಣಗಳನ್ನು ಹೊಂದಿದೆ ಎಂದು ಹೇಳಿದರೆ ಒಳಗಿನವರು ಅಸೂಯೆ ಪರರಾಗುತ್ತಾರೆ -(ಸೋದರ ಸಮುದಾಯ ಪರಿಶಿಷ್ಟ ಜಾತಿಯಲ್ಲಿ ನಡೆಯುವ ಒಳ ಮೀಸಲಾತಿ ಗದ್ದಲ ಇಲ್ಲಿಯೂ ಆರಂಭವಾಗುತ್ತದೆ). ಹಾಗಾಗಿ ನನ್ನ ಇಲ್ಲಿಯ ಶೋಧನೆಗೆ ಸಂವಿಧಾನಾತ್ಮಕವಾಗಿ ದತ್ತವಾಗುವ ಮೀಸಲಾತಿ ಮತ್ತಿತರ ವಿಶೇಷ ಸೌಲಭ್ಯಗಳನ್ನು ಉಳಿಸಿಕೊಳ್ಳುವ ಅಥವಾ ಬಿಡುವ ಪ್ರಶ್ನೆಯಾಗದೆ, ಇಂಥ ಸೀಮಿತ ಪರಿಕಲ್ಪನೆಯನ್ನು ದಾಟುವ ಸಾಂಸ್ಕೃತಿಕ ಅಸ್ಮಿತೆಯ ಪ್ರಶ್ನೆ ಮುಖ್ಯವಾಗಿದೆ.

ಶೋಧನೆಗೆ ಮೊದಲು ಬುಡಕಟ್ಟು ಎಂದರೇನು? ಬುಡಕಟ್ಟಿನ ಪ್ರಧಾನ ಲಕ್ಷಣಗಳು ಯಾವುವು? ಎಂದು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಬುಡಕಟ್ಟುಗಳ ಬಗ್ಗೆ ಅಧ್ಯಯನ ಆರಂಭಿಸಿದವರಲ್ಲಿ ಭಾರತದ ಮಟ್ಟಿಗೆ ಬ್ರಿಟಿಷರೆ ಮೊದಲೆನ್ನಬಹುದು. ಅಧಿಕಾರಿಗಳು, ಕ್ರೈಸ್ತ ಪಾದ್ರಿಗಳು ಕ್ರಮವಾಗಿ ಆಡಳಿತ ಹಾಗೂ ಧರ್ಮ ಪ್ರಚಾರಗಳಿಗೆ ಅನುಕೂಲವಾಗುವಂತೆ ಬುಡಕಟ್ಟುಗಳ ಅಧ್ಯಯನ ನಡೆಸಿದ್ದಾರೆ. ಇಂಥವರ ಜೊತೆಗೆ ಕುತೂಹಲ ಹಾಗೂ ಅಪಾರ ಮಾನವೀಯ ಅಂತಃಕರಣದಿಂದ ಅಧ್ಯಯನ ನಡೆಸಿದ ವೆರಿಯರ್ ಎಲ್ವಿನ್ ಅಂಥವರು ಇದ್ದಾರೆ. ಬ್ರಿಟಿಷ್ ವಿದ್ವಾಂಸರು 'Tribe' ಎನ್ನುವ ಹೆಸರಿನಿಂದ ಗುರುತಿಸಿದ ಸಮುದಾಯ ಗಳನ್ನು ಸ್ವಾತಂತ್ರ್ಯ ನಂತರ ಅಧ್ಯಯನ ಮಾಡಿದ ದೇಶಿ ವಿದ್ವಾಂಸರು ಗಿರಿಜನರು, ಆದಿವಾಸಿ ಗಳು, ಬುಡಕಟ್ಟುಗಳು ಮೊದಲಾದ ಹೆಸರುಗಳಿಂದ ಕರೆದರು. ಮೇಲಿನ ಹೆಸರುಗಳೇ ಸೂಚಿಸುವಂತೆ ಮನುಕುಲದ ಮೂಲಪುರುಷರು, ಗಿರಿಗಳಲ್ಲಿ ವಾಸಮಾಡುವವರು ಬುಡಕಟ್ಟು ಜನ ಎನಿಸಿಕೊಂಡರು. ಬುಡಕಟ್ಟು ಎಂಬ ಪದಶಃ ಅರ್ಥವೂ ಕೂಡ ಅದೇ ಆಗಿದೆ. "ಬುಡ ಅಂದರೆ ಮೂಲ, ಕಟ್ಟು ಎಂದರೆ ಸಾಂಸ್ಕೃತಿಕ ಮೌಲ್ಯಗಳ ಕಟ್ಟುಕಟ್ಟಳೆ ಆಚರಣೆ. ಒಂದೇ ಮೂಲಕ್ಕೆ ಸೇರಿದ ಸಂಪ್ರದಾಯವನ್ನು ಪಾಲಿಸುವವರು ಬುಡಕಟ್ಟು ಜನ" (ಎಚ್.ಜೆ. ಲಕ್ಕಪ್ಪಗೌಡ, ೧೯೯೭; ೩೫೦) ಇಂಥ ವ್ಯಾಖ್ಯಾನಗಳು ಬುಡಕಟ್ಟನ್ನು ನಿಖರವಾಗಿ ವ್ಯಾಖ್ಯಾ ನಿಸಲಾರವು. ಆದ್ದರಿಂದ ಬುಡಕಟ್ಟು ಎಂದರೇನು ಎಂಬುದನ್ನು ವ್ಯಾಖ್ಯಾನಿಸುವುದಕ್ಕಿಂತ ಬುಡಕಟ್ಟು ಎಂದರೆ ಯಾವುದು ಎಂದು ಹೇಳುವುದು ಸುಲಭ. ಕರ್ನಾಟಕದ ಬುಡಕಟ್ಟೊಂ ದನ್ನು ಪ್ರಥಮವಾಗಿ ದೀರ್ಘ ಅಧ್ಯಯನಕ್ಕೆ ಒಳಪಡಿಸಿದ ತೀ.ನಂ.ಶಂಕರನಾರಾಯಣ ಅವರು ಅಂಥದೊಂದು ಪ್ರಯತ್ನ ಮಾಡಿದ್ದಾರೆ. ಅವರು ಹೇಳುವಂತೆ "ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಗಳು ಮಾತ್ರವಲ್ಲದೆ ಹರಿಜನರಿಂದ ಕೂಡಿದ ಐದನೇ ಜಾತಿಯೂ ಇದೆ. .......ಈ ಜಾತಿಗಳನ್ನು ಬಿಟ್ಟು ಉಳಿದ ಹಿಂದೂ ಸಾಮಾಜಿಕ ವರ್ಗಗಳನ್ನೆಲ್ಲ ಭಾರತದಲ್ಲಿ ಬುಡಕಟ್ಟುಗಳೆಂದು ಕರೆಯಬಹುದು" (ತಿಣ.ನಂ. ಶಂಕರನಾರಾಯಣ, ೧೯೮೨; ೦೨). ಈ ತರಹದ ವ್ಯಾಖ್ಯಾನ ಕೂಡ ಇಂದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ಬುಡಕಟ್ಟು ಜಾತಿಗಳಾಗುವ, ಜಾತಿ ಬುಡಕಟ್ಟುಗಳಾಗುವ ಈಗಿನ ಸಂಕೀರ್ಣ ಸಂದರ್ಭದಲ್ಲಿ ಮೇಲೆ ಸೂಚಿಸಿದಂತೆ ಬುಡಕಟ್ಟು ಗಳನ್ನು ಗುರುತಿಸುವುದು ಅಸಾಧ್ಯ.

ಬುಡಕಟ್ಟು ಎನಿಸಿಕೊಳ್ಳಬೇಕಾದರೆ ಒಂದು ಸಮುದಾಯ ಹೊಂದಿರಬೇಕಾದ ಅನೇಕ ಲಕ್ಷಣಗಳನ್ನು ವಿದ್ವಾಂಸರು ಪಟ್ಟಿ ಮಾಡಿದ್ದಾರೆ. ಅವುಗಳನ್ನು ಮುಂದಿನಂತೆ ಪಟ್ಟಿ ಮಾಡಬಹುದು.

ಅ. ಪ್ರತ್ಯೇಕ ಸಂಸ್ಕೃತಿ

ಆ. ರಕ್ತ ಸಂಬಂಧದ ಅತಿಯಾದ ಅವಲಂಬನೆ

ಇ. ಅನ್ಯವನ್ನು ಅನುಮಾನದಿಂದ ನೋಡುವ ದೃಷ್ಟಿ

ಈ. ಅತಿಯಾದ ಪಾವಿತ್ರ್ಯತೆ

ಉ. ದೈವದ ವಿಶಿಷ್ಟ ಕಲ್ಪನೆ ಹಾಗೂ ಅಪಾರ ಭಕ್ತಿ

ಊ. ಕಾಡಿಗೆ/ಪ್ರಕೃತಿಗೆ ಹತ್ತಿರವಾದ ಹಾಗೂ ಅವಲಂಬನೆಯ ಬದುಕು

ಋ. ಪ್ರತ್ಯೇಕ ಭಾಷೆ

ಈ ಎಲ್ಲಾ ಲಕ್ಷಣಗಳನ್ನು ಒಂದೇ ಸಮುದಾಯದಲ್ಲಿ ದೊರೆಯುವುದು ವಿರಳ. ಇಂದು ಶುದ್ಧ ಬುಡಕಟ್ಟುಗಳೆಂದು ಕರೆಸಿಕೊಂಡು ಸಮುದಾಯಗಳಲ್ಲಿ ಕೂಡ ಈ ಎಲ್ಲಾ ಅಂಶಗಳು ಪೂರ್ಣ ಪ್ರಮಾಣದಲ್ಲಿ ಸಿಗಲಾರವು. ಈ ಹಿನ್ನೆಲೆಯಲ್ಲಿ ಕರ್ನಾಟಕದ ಬೇಡ ಸಮುದಾಯ

ದಲ್ಲಿ ದೊರೆಯುವ ಬುಡಕಟ್ಟು ಅಂಶಗಳನ್ನು ಗುರುತಿಸಬಹುದಾಗಿದೆ. ಇಲ್ಲಿಯೇ ಪ್ರಬಂಧದ ಮಿತಿಯನ್ನು ತಿಳಿಸುವುದು ಸೂಕ್ತ. ಪ್ರಸ್ತುತ ಪ್ರಯತ್ನದಲ್ಲಿ ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳ ಮ್ಯಾಸಬೇಡರ/ನಾಯಕರ ಹಟ್ಟಿಗಳ ಸಂಪ್ರದಾಯ, ಆಚರಣೆಗಳನ್ನು ವಿಶೇಷವಾಗಿ ಕ್ಷೇತ್ರಾಧ್ಯಯನದ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ. ಹಾಗೆಯೇ ಆರಂಭದಿಂದ ಇಲ್ಲಿಯವರೆಗೆ ನಡೆದ ವಿದ್ವಾಂಸರ ಅಧ್ಯಯನಗಳಿಂದಲೂ ಹಲವಾರು ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

**ಸಾಂಸ್ಕೃತಿಕ ಅನನ್ಯತೆ**

ಪ್ರತ್ಯೇಕ ಸಂಸ್ಕೃತಿಯನ್ನು ಹೊಂದಿರುವುದು ಬುಡಕಟ್ಟು ಸಮುದಾಯಗಳ ಪ್ರಧಾನ ಲಕ್ಷಣ. ಸಮುದಾಯ ಒಂದರ ಉಗಮದಿಂದ ಆರಂಭಗೊಂಡ ಸಂಸ್ಕೃತಿ ನಿರಂತರವಾಗಿ ತನ್ನ ವಿಶಿಷ್ಟತೆಗಳೊಂದಿಗೆ ಮುಂದುವರೆಯುತ್ತದೆ. ಬುಡಕಟ್ಟುಗಳ ಇಂಥ ಸಂಗತಿಗಳು ಪುರಾಣ-ಆಚರಣೆ-ನಂಬಿಕೆ-ಸಂಪ್ರದಾಯಗಳ ಮೂಲಕ ಉಳಿದು ಬೆಳೆದಿರುತ್ತವೆ. ಈ ಹಿನ್ನೆಲೆಯೊಳಗೆ ಬೇಡರ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಗಮನಿಸಬಹುದಾಗಿದೆ.

**ಜನನ:** ಬೇಡರ ಸಮುದಾಯಗಳಲ್ಲಿ ಜನನ ಸಂಬಂಧೀ ಆಚರಣೆಗಳು ಹಲವು ಸಾಮಾನ್ಯ ಸಂಗತಿಗಳಾದರೂ ಕೆಲವು ವೈಶಿಷ್ಟಪೂರ್ಣವಾಗಿವೆ. ಅಂಥವುಗಳಲ್ಲಿ ಜನನದ ಬಗ್ಗೆ ಇಟ್ಟುಕೊಂಡ ಮೈಲಿಗೆ ಭಾವ. ಕಾಡುಗೊಲ್ಲರಂತೆ ಬಾಣಂತಿಯನ್ನು ಪ್ರತ್ಯೇಕ ಗುಡಿಸಲಲ್ಲಿ ಇಡುವುದಿಲ್ಲ. ಆದರೂ ಹೆರಿಗೆಯಾದ ದಿನದಿಂದ ಮೂರು, ಐದು, ಏಳು, ಒಂಬತ್ತು, ಹನ್ನೊಂದು ದಿನಗಳಲ್ಲಿ 'ಮುಟ್ಟು ಹೊರಡಿಸುವ' ಆಚರಣೆ ಮಾಡುತ್ತಾರೆ. ಬೇವಿನ ಸೊಪ್ಪು, ಗೋವು ಗಂಜಳದ ಮೂಲಕ ಬಾಣಂತಿಯನ್ನು ಶುದ್ದೀಕರಿಸುತ್ತಾರೆ. ಈ ಸಮಯದಲ್ಲಿ ಮಗುವನ್ನು ಮೊರದಲ್ಲಿಟ್ಟು ಪೋಷಿಸುತ್ತಾರೆ. ಹಾಗೆಯೇ ಅನೇಕ ರೀತಿಯ ಭವಿಷ್ಯದ ಭಯಂಕರ ಕಾಯಿಲೆಗಳ ನಿಷೇಧಕ್ಕೆ ಕೆಲವೊಂದು ಪೂರ್ವಯೋಜಿತ ಮದ್ದುಗಳನ್ನು ಮಗುವಿಗೆ ಕುಡಿಸುತ್ತಾರೆ. ಇಲ್ಲಿಯೇ ಹೇಳಿಬಿಡಬಹುದಾದ ಸಂಗತಿ ಮಗುವಿನ ನಾಮಕರಣದ್ದು. ಮಗು ವಿನ ಸೋದರತ್ತೆ ಹುರುಳಿ ಗುಗ್ಗುರಿ ಗಂಟು ಹೊತ್ತು ಹೆಸರನ್ನು ಕರೆಯುತ್ತಾಳೆ. ಗುಗ್ಗರಿ ಗಂಟು ಹೊತ್ತು ಮೂರು ಬಾರಿ ಮನೆಯ ಹೊಸ್ತಿಲನ್ನು ದಾಟಿ ಹೆಸರು ಹೇಳುವ ಕ್ರಮ ಅತ್ಯಂತ ಗಮನಾರ್ಹವಾದುದಾಗಿದೆ.

**ಋತುಮತಿ ಆಚರಣೆ:** ಋತುಮತಿ, ಹೆರಿಗೆ ಮೊದಲಾದವು ಕೃಷಿ ಮೂಲ ಸಂಸ್ಕೃತಿಗಳಲ್ಲಿ ಫಲವಂತಿಕೆಯ ಸಂಕೇತಗಳು. ಆದರೆ ಬುಡಕಟ್ಟು ಸಮುದಾಯಗಳಲ್ಲಿ ಇವು ಮೈಲಿಗೆಯ ಸಂಗತಿಗಳು. ಬೇಡರಲ್ಲಿ ಋತುಮತಿಯಾದ ಹೆಣ್ಣನ್ನು ತಕ್ಷಣವೇ ಹೊರಗೆ ಕಳುಹಿಸಿ, ಹಸಿರು ಸೊಪ್ಪಿನ (ವಿಶೇಷವಾಗಿ ಬೇವು/ಹೊಂಗೆ) ಗುಡಿಸಲು ನಿರ್ಮಿಸಿ ಅದರೊಳಗೆ ಬಿಡುತ್ತಾರೆ. ಒಂಬತ್ತು ಅಥವಾ ಹನ್ನೊಂದು ದಿನಗಳ ಕಾಲ ಋತುಮತಿಯಾದ ಹೆಣ್ಣುಮಗಳು ಆ ಗುಡಿಸಲಲ್ಲಿ ವಾಸಿಸುತ್ತಾಳೆ. ಈ ಮಧ್ಯೆ ನೆಂಟರಿಷ್ಟರು ರುಚಿ ರುಚಿಯಾದ ಬಗೆಬಗೆಯ ತಿಂಡಿ ತಿನಿಸುಗಳನ್ನು ಆಕೆಗೆ ಒದಗಿಸುವ ಕ್ರಮವಿದ್ದು, ಇದನ್ನು ಒಸಗೆ ಎನ್ನುತ್ತಾರೆ. ಸಮಯ ಮುಗಿದ ದಿನ ಸ್ನಾನ ಮಾಡಿಸಿ, ಸೋದರ ಮಾವನ ಹತ್ತಿರ ಬೇವಿನ ಕಡ್ಡಿಯಿಂದ ನಾಲಗೆ ಸುಡಿಸಿ, ಗೋವು ಗಂಜಳವನ್ನು ಪ್ರೋಮನೆಯ ಒಳಗೆ ಕರೆದುಕೊಳ್ಳುತ್ತಾರೆ. ಗಮನಾರ್ಹ ಸಂಗತಿ ಎಂದರೆ ಕೆಲವು ಬೇಡರ ಪ್ರದೇಶಗಳಲ್ಲಿ ಋತುಮತಿಯಾದ ತಕ್ಷಣ ಗುಡಿಸಲಿಗೆ ಕೂರಿಸದೆ, ಮದುವೆಯ ಸಂದರ್ಭಕ್ಕೆ ಆ ಸಂಪ್ರದಾಯವನ್ನು ನಡೆಸುತ್ತಾರೆ. ಗುಂಪು ಗುಂಪಾಗಿ ಮದುವೆ ಮಾಡುವ ಅಲ್ಲಿ ಎಲ್ಲಾ ಹೆಣ್ಣುಗಳನ್ನು ಒಂದೇ ಗುಡಿಸಲಿಯೊಳಗೆ ಇರಿಸುತ್ತಾರೆ. ಈ ಗುಂಪು ಗುಡಿಸಲಲ್ಲಿ ಇರುವಾಗ ಬಂಡೆಯಲ್ಲಿ ಆಹಾರ ಸ್ವೀಕರಿಸುವುದು ವಿಶೇಷ.

**ಮದುವೆ ಸಂಪ್ರದಾಯಗಳು:** ಬೇಡರ ವಿಶೇಷವಾಗಿ ಮ್ಯಾಸಬೇಡರಲ್ಲಿ ಪ್ರಚಲಿತವಿರುವ ಮದುವೆ ಸಂಪ್ರದಾಯಗಳು ಆ ಸಮುದಾಯದ ಬುಡಕಟ್ಟು ಅನನ್ಯತೆಯನ್ನು ಪ್ರತಿಪಾದಿ ಸುತ್ತವೆ. ಮುಖ್ಯವಾಗಿ ಇಲ್ಲಿ ಹೆಣ್ಣಿಗೆ ಪ್ರಾಧಾನ್ಯತೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಹೆಣ್ಣಿನ ಕಡೆಯವರು ಗಂಡಿನ ಮನೆಗೆ ಬಂದು ಮದುವೆ ಮಾಡಿಕೊಳ್ಳುವಂತೆ ಕೇಳುವುದು ಈಗಿರುವ ಕ್ರಮ. ಹಾಗೆಯೇ ಹೆಣ್ಣಿನ ಕಡೆಯವರು ವರದಕ್ಷಿಣೆ ಕೊಡಬೇಕಾದುದು ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದೆ. ಆದರೆ ಈಗಲೂ ಬೇಡರ ಕೆಲವು ಗುಂಪುಗಳಲ್ಲಿ ಇದಕ್ಕೆ

ತದ್ವಿರುದ್ಧವಾದ ಸಂಗತಿಗಳಿವೆ. ಹೆಣ್ಣಿದ್ದ ಮನೆಗೆ ಗಂಡಿನ ಕಡೆಯವರು ಔಪಚಾರಿಕ ವಾಗಿ ಹಾಗೂ ಅನೌಪಚಾರಿಕವಾಗಿ ಮೊದಲು ತೆರಳಿ ಹೆಣ್ಣು ಕೇಳುವ ಕ್ರಮವಿದೆ. ವರದಕ್ಷಿಣೆ ಈಗೀಗ ಸ್ವಲ್ಪ ಪ್ರಮಾಣದಲ್ಲಿ ಚಾಲ್ತಿಗೆ ಬಂದಿದ್ದರೂ ವಧು ದಕ್ಷಿಣೆ ಕೊಡುವ ಪದ್ಧತಿ ಕಡ್ಡಾಯವಾಗಿದೆ. 'ಸುಖಮಂಚಿ' (ಕ್ಷೇಮ, ಸವಲತ್ತು) ಎನ್ನುವ ಹೆಸರಲ್ಲಿ ಗಂಡಿನ ಕಡೆಯ ವರು ಒಂದಿಷ್ಟು ಧಾನ್ಯವನ್ನು ಊರಿನ ಹಿರಿಯರ ಸಮ್ಮುಖದಲ್ಲಿ ಹೆಣ್ಣಿನ ಕಡೆಯವರಿಗೆ ಅಳೆದುಕೊಡುವುದು ಒಂದು ಸಂಪ್ರದಾಯವಾಗಿದೆ.

ಮುಂಜಿ ಮ್ಯಾಸಬೇಡರ ಮದುವೆ ಸಂಪ್ರದಾಯಗಳ ಮತ್ತೊಂದು ವಿಶೇಷ. 'ಮುಂಜಿ' ಎನ್ನುವ ಈ ಸಂಪ್ರದಾಯವನ್ನು ಥರ್ಸ್ಟನ್ ಮೊದಲಾದ ಆರಂಭಿಕ ಅಧ್ಯಯನಕಾರರು ಮುಸ್ಲಿಂ ಸಮಾಜಗಳಲ್ಲಿ ಪ್ರಚಲಿತವಿರುವ 'ಮುಂಜಿ ಮಾಡಿಸುವ' ಪದ್ಧತಿಯೊಡನೆ ನಂಟು ಕಲ್ಪಿಸಿದ್ದಾರೆ. ಆದರೆ ಈಗಿರುವ ಕ್ರಮದಲ್ಲಿ ಅಂಥ ಯಾವ ಅಂಶವು ಕಂಡುಬರುವುದಿಲ್ಲ. ಮದುವೆಗೆ ಗಂಡನ್ನು ಸಿದ್ಧಮಾಡುವ ಕ್ರಮ ಇದಾಗಿದೆ. ಮದುವೆಯ ಮೊದಲಶಾಸ್ತ್ರದ ಮುನ್ನದಿನ ರಾತ್ರಿ ಮದುವೆಯ ಗಂಡಿಗೆ ದೇವರ ನೀರು ಹಾಕಿಸಿಕೊಂಡು ವಿಶಿಷ್ಟ ವೇಷದಲ್ಲಿ (ಬರೀಮೈ, ಒಂದು ಚೆಡ್ಡಿ ಧರಿಸಿ ಮೈಗೆ ಒಂದು ಕಂಬಳಿ ಕೋವಿ ಹೊದ್ದು, ಕೈಯಲ್ಲಿ ಕವೆ ಕಟ್ಟಿಗೆ, ಈ ಕವೆ ಕಟ್ಟಿಗೆಗೆ ಎಲೆ ಅಡಿಕೆ ಬೀಡಿ ಗಂಟು ಕಟ್ಟಿರುತ್ತಾರೆ). ಊರ ಹೊರಗೆ ಹೋಗುತ್ತಾರೆ. ಮರುದಿನ ಬೆಳಗ್ಗೆ ನೆಂಟರಿಷ್ಟರು ಒಸಗೆ ರೂಪದಲ್ಲಿ ತಿಂಡಿ ತಿನಿಸುಗಳನ್ನು ಒಯ್ದು ಕೊಡುತ್ತಾರೆ. ಹೀಗೆ ಸಂಗ್ರಹವಾದ ತಿನಿಸುಗಳನ್ನು ಬೇರೆ ಯಾರೂ ತಿನ್ನುವುದಿಲ್ಲ. ಹಾದಿ ಹೋಕರ ಹತ್ತಿರ ಮದುವೆಯ ಗಂಡು ಹಣ ಸಂಗ್ರಹಿಸುತ್ತಾನೆ. ಹೀಗೆ ಒಂದು ದಿನ ಕಳೆದು (ಈಗ ಈ ಸಂಪ್ರದಾಯ ಒಂದು ದಿನ ಮಾತ್ರವಿದ್ದು ಮೊದಲು ಹನ್ನೊಂದು ದಿನ ನಡೆಯುತ್ತಿದೆಂದು ಹಿರಿಯರು ಹೇಳುತ್ತಾರೆ. ಹನ್ನೊಂದು ದಿನ ಊರಿಂದ ಹೊರಗೆ ಇರುತಿದ್ದ ಮದುವೆಯ ಗಂಡುಗಳು ಕಾಡಲ್ಲಿ ಬೇಟೆಯಾಡಿ ಮಾಂಸ ಮತ್ತಿತರ ವಸ್ತುಗಳನ್ನು ತಿನ್ನುತ್ತಿದ್ದರಂತೆ) ಅಂದು ಸಾಯಂಕಾಲ ಸ್ನಾನಮಾಡಿ ಶುದ್ಧರಾಗುತ್ತಾರೆ. ಹಿಂದೆ ಮದುವೆಯ ಋತುಮತಿ ಹೆಣ್ಣುಗಳನ್ನು ಗುಡಿಸಲಿಗೆ ಕೂರಿಸಿ ಒಳಗೆ ಕರೆದುಕೊಳ್ಳುವಾಗ ಮಾಡುವ ಕ್ರಮವನ್ನೇ ಇವರಿಗೂ ಅನುಸರಿಸಿ ಮನೆಯ ಒಳಗೆ ಕರೆದುಕೊಳ್ಳುತ್ತಾರೆ. ಇದನ್ನೇ ಮುಂಜಿ ಸಂಪ್ರದಾಯ ಎನ್ನುತ್ತಾರೆ.

ಬೇಡರಲ್ಲಿ ಮಧುಮಗ ಕೈಯಲ್ಲಿ ಬಾಕು (ಚಿಕ್ಕ ಕತ್ತಿ) ಹಿಡಿಯುವ ಪದ್ಧತಿ ಪ್ರಚಲಿತವಿದ್ದು, ಇದು ಸ್ಪಷ್ಟವಾಗಿ ಬೇಡರ ಲೋಕದೃಷ್ಟಿಯನ್ನು ಬಿಂಬಿಸುತ್ತದೆ. ಇಲ್ಲಿ ಬಾಕನ್ನು ಮಧುಮಗನ ಪ್ರತಿನಿಧಿ ಎಂದು ಭಾವಿಸುವುದು ವಿಶೇಷ.

'ವೀಳ್ಯದ ಎಲೆ' ಬೇಡರ ಮದುವೆಯಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ವಸ್ತುವಾಗಿದೆ. ಬೇಡರ ಮದುವೆಗಳಿಗೆ ಬ್ರಾಹ್ಮಣ ಪುರೋಹಿತರ ಬದಲಿಗೆ ಸಮುದಾಯದ ಹಿರಿಯರೇ ಪೌರೋಹಿತ್ಯ ವಹಿಸುವರು.

**ಸಾವಿಗೆ ಆಚರಣೆಗಳು:** ಬೇಡರಲ್ಲಿ ಸಾವಿನ ಸಂದರ್ಭಕ್ಕೆ ನಡೆಯುವ ಆಚರಣೆಗಳಲ್ಲಿ ಬುಡಕಟ್ಟು ಲಕ್ಷಣಗಳ ಹಿನ್ನೆಲೆಯಲ್ಲಿ ಮುಖ್ಯವಾಗುವ ಕೆಲವನ್ನು ಹೆಸರಿಸಬಹುದು.

ಅ. ಹೆಣಗಳನ್ನು ಕಲ್ಲು ಪೊಟರುಗಳಲ್ಲಿಟ್ಟು ಕಲ್ಲು ಮುಚ್ಚುವ ಪದ್ದತಿ ಅನೇಕ ಬೇಡ ಗುಂಪುಗಳಲ್ಲಿ ಇಂದಿಗೂ ಕಾಣಬಹುದು.

ಆ. ಸತ್ತ ವ್ಯಕ್ತಿಯು ಕಾಗೆಯ ರೂಪದಲ್ಲಿ ಮೂರನೇ ದಿನ ತನ್ನ ಸಮಾಧಿ ಸ್ಥಳದಲ್ಲಿ ಕುಟುಂಬದವರು ಹಾಕಿದ ಕೂಳನ್ನು ತಿನ್ನುತ್ತಾನೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ 'ಕೂಳು ಹಾಕುವ' ಸಂಪ್ರದಾಯ ಸಾಮಾನ್ಯವಾಗಿ ಕಂಡುಬರುತ್ತದೆ.

ಇ. ಬೇಡ ಸಮುದಾಯದಲ್ಲಿ 'ದಿವಸ' ಮಾಡುವಾಗ ಅದರ ಕಾರ್ಯವನ್ನು 'ಗುಡ್ಡೆ ಪೂಜಾರಿ'ಗಳೇ ನೆರವೇರಿಸಬೇಕು ಇದು ಗುಂಪಿನ ಐಕ್ಯತೆಯ ಭಾವವನ್ನು ಸೂಚಿಸುತ್ತದೆ.

**ಹಬ್ಬಗಳು:** ಬೇಡರಲ್ಲಿ ಪ್ರಚಲಿತವಿರುವ ಹಬ್ಬಗಳಲ್ಲಿ ಕೆಲವು ಅವರಿಗೆ ಮಾತ್ರ ಸೀಮಿತ ವಾದಂತಹವುಗಳಿವೆ. ಇನ್ನೂ ಕೆಲವು ಜನಪ್ರಿಯ ಹಬ್ಬಗಳಾಗಿವೆ. ಆದರೆ ಜನಪ್ರಿಯ ಹಬ್ಬಗಳ ಸಂಪ್ರದಾಯಗಳೊಳಗೆ ತಮ್ಮ ವಿಶಿಷ್ಟ ಸಂಪ್ರದಾಯಗಳನ್ನು ಬೆರಸಿ ಆಚರಿಸುತ್ತಿರುವುದು ಇಲ್ಲಿ ಗಮನಾರ್ಹವಾಗುತ್ತದೆ. ಈ ಎರಡೂ ಮಾದರಿಗಳ ಸ್ಪಷ್ಟತೆಗಾಗಿ ಒಂದೆರಡು ಉದಾ ಹರಣೆಗಳನ್ನು ನೋಡಬಹುದು.

**ಪದಿಯಾಗಳ ದೇವರು:** ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳ ಬೇಡರ ಕೆಲವು ಗುಂಪುಗಳಲ್ಲಿ ಈ 'ಪದಿಯಾಗಳ ದೇವರು' ಆಚರಣೆಯಲ್ಲಿದೆ. ದೇವರು, ದೇವರೆತ್ತುಗಳನ್ನು ಮುಂದಿರಿಸಿಕೊಂಡು ಇಡೀ ಹಟ್ಟಿಗೆ ಹಟ್ಟಿಯೇ ಕಾಡಿಗೆ ಹೋಗಿ ಅಲ್ಲೇ ಮೂರು ದಿನ ವಾಸಿಸುವ ಸಂಪ್ರದಾಯವಿದು. ದೇವರಿಗೆ ಹಾಗೂ ಜನರಿಗೆ ತಾತ್ಕಾಲಿಕ ಗುಡಿ ಹಾಗೂ ಕೆಲವು ಮನೆಗಳನ್ನು ನಿರ್ಮಿಸಿ ಊಟ, ವಸತಿ ವ್ಯವಸ್ಥೆಯೊಂದಿಗೆ ಕಾಡಲ್ಲಿ ಮೂರು ದಿನವಿದ್ದು ನಂತರ ಹಟ್ಟಿಗೆ ವಾಪಸ್ಸು ಬರುವುದುಂಟು. ಇದು ಈ ಸಮುದಾಯ ಅಲೆಮಾರಿ ಬುಡಕಟ್ಟಾಗಿದ್ದರ ಸೂಚನೆಗಳನ್ನು ನೀಡುತ್ತದೆ. ಬುಡಕಟ್ಟೊಂದು ತನ್ನ ಬದುಕಿನ ಕೆಲವು ಮಹತ್ವದ ಕ್ರಮಗಳು ಕಾಲಗತಿಯಲ್ಲಿ ಕಳಚಿಕೊಂಡಾಗ ಅಂಥ ಕ್ರಮಗಳನ್ನು ಆಚರಣೆ ರೂಪದಲ್ಲಿ ಉಳಿಸುತ್ತದೆ ಎಂಬುದಕ್ಕೆ ಇದೊಂದು ಸ್ಪಷ್ಟ ಉದಾಹರಣೆ. ಹಾಗಾಗಿ ಇಂಥ ಪದ್ಧತಿಗಳು ಬೇರೆ ಎಲ್ಲಾ ಸಮುದಾಯಗಳಲ್ಲಿ ದೊರೆಯಲಾರವು.

**ಯುಗಾದಿ:** ಯುಗಾದಿ ಭಾರತದ ಜಾತಿ ಹಾಗೂ ಸಮುದಾಯದ ಸೀಮೆಗಳನ್ನು ಕಳಚಿಕೊಂಡು ಎಲ್ಲರೂ ಆಚರಿಸುವ ಒಂದು ಹಬ್ಬ. ಇಂಥ ಹಬ್ಬದಲ್ಲೂ ಬೇಡ ಸಮುದಾಯ ತನ್ನ ಗುರುತುಗಳನ್ನು ದಾಖಲಿಸಿದೆ ಎಂಬುದನ್ನು ಗಮನಿಸಬೇಕು. ಅಂಥ ಗುರುತುಗಳು ಹೀಗಿವೆ.

ಅ. ಯುಗಾದಿಯಲ್ಲಿ ಬೇವು ಬೆಲ್ಲದ ಬದಲಿಗೆ ಹುಣಸೆ ರಸ ಹಾಗೂ ಬೇವನ್ನು ಬೆರಸಿ ಕುಡಿಯುವುದು ಬೇಡರ ವಿಶೇಷತೆ. ದೇವರ ಗುಡಿಯ ಮುಂದೆ ಹಿರಿಯರು ಹುಣಸೆ ರಸದ ಜೊತೆ ಬೇವನ್ನು ಸ್ವಲ್ಪ ಬೆಲ್ಲದೊಂದಿಗೆ ಬೆರಸಿದ ಪಾನಕವನ್ನು ಸಿದ್ಧ ಮಾಡುತ್ತಾರೆ. ಅದನ್ನು ಹಟ್ಟಿಯ ಪ್ರತಿಯೊಂದು ಮನೆಯವರು ತಂದು ಮನೆಯಲ್ಲಿ ಸೇವಿಸುತ್ತಾರೆ. ಬೇವು ಬೆಲ್ಲದ ಆಧುನಿಕ ಕಲ್ಪನೆಗೆ ಹುಣಸೆ-ಬೇವು-ಬೆಲ್ಲದ ಈ ಪರ್ಯಾಯ ಕಲ್ಪನೆ ಬೇಡರ ವೈಶಿಷ್ಟ್ಯತೆಯಾಗಿದೆ.

ಆ. ಯುಗಾದಿಯ ಮೊದಲ ದಿನವೇ ಬೇಡರ ಗುಂಪುಗಳು ದೇವರ ಮುಖಂಡತ್ವದಲ್ಲಿ ಬೇಟೆ ಹೊರಡುತ್ತವೆ. ಮುಖ್ಯವಾಗಿ 'ಕಂಪಳ ರಂಗ' ದೇವರ ಜೊತೆ ಹಟ್ಟಿಗಳ ಮುಖಂಡರು ಮೊಲದ ಬೇಟೆ ಹೋಗುವುದು ಬೇಡರ ಮತ್ತೊಂದು ವಿಶೇಷ.

ಇ. ಯುಗಾದಿಯ ಚಂದ್ರನನ್ನು ದರ್ಶಿಸಿ ಧನ್ಯರಾಗುವುದರ ಜೊತೆಗೆ, ಅಂದಿನ ಅರ್ಧ ಚಂದ್ರನ ಮೂಲಕ ವರ್ಷದ ಧನ ಧಾನ್ಯ ಸೌಲಭ್ಯಗಳ ಬಗ್ಗೆ ತಿಳಿಯುವ ಪ್ರಯತ್ನವಿರುವುದು ಗಮನಾರ್ಹವಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಕಾಣುವ ಅರ್ಧ ಚಂದ್ರ ತೆಂಕ ದಿಕ್ಕುವನ್ನು ಬಡಗ ದಿಕ್ಕುವನ್ನು ಪ್ರತಿನಿಧಿಸುತ್ತವೆ ಎಂಬುದು ಇವರ ನಂಬಿಕೆ. ಇದರ ಆಧಾರದ ಮೇಲೆ ಅರ್ಧ ಚಂದ್ರ ಎರಡು ತುದಿಗಳಲ್ಲಿ ಯಾವ ತುದಿ ಎದ್ದಿದೆ ಯಾವು ತುದಿ ಬಿದ್ದಿದೆ ಎನ್ನುವುದನ್ನು ಗಮನಿಸಿ ಪ್ರಸ್ತುತ ವರ್ಷ ಧನ, ಧಾನ್ಯ ಹೆಚ್ಚು-ಕಡಿಮೆ-ಸಮ ಎಂಬುದನ್ನು ನಿರ್ಧರಿಸುತ್ತಾರೆ. ಪ್ರಕೃತಿಯಲ್ಲಿ ಭವಿಷ್ಯ ನೋಡುವ ಬುಡಕಟ್ಟಿನ ವಿಶಿಷ್ಟ ದೃಷ್ಟಿ ಇದಾಗಿದೆ.

ಹೀಗೆ ಬೇಡರು ತಮಗೆ ವಿಶಿಷ್ಟವೆನಿಸುವ ಹಬ್ಬಗಳನ್ನು ಆಚರಿಸುತ್ತಾರೆ. ಹಾಗೆಯೇ ಬೇರೆ ಸಮೂಹಗಳಿಗೂ ಸಾಮಾನ್ಯವಾಗಿರುವ ಹಬ್ಬಗಳಲ್ಲಿ ತಮ್ಮ ವೈಶಿಷ್ಟ್ಯತೆಗಳನ್ನು ದಾಖಲಿಸುತ್ತಾರೆ.

ಇನ್ನು ಇವರು ಹಬ್ಬಗಳಲ್ಲಿ ಮಾಡುವ ಆಚರಣೆಗಳು ಇವರಲ್ಲಿ ಇನ್ನೂ ಗಟ್ಟಿಯಾಗಿರುವ ಬುಡಕಟ್ಟು ಅಸ್ಮಿತೆಗಳನ್ನು ಕಾಣಿಸುತ್ತವೆ.

ಅ. ಹಬ್ಬಗಳಲ್ಲಿ ವಿಶಿಷ್ಟವಾದ ಛರ್ಚಿ, ಛತ್ರಿಗಳ ಬಳಕೆ.

ಆ. ದೇವರ ಎತ್ತುಗಳಿಗೆ (ಉದಿ-ಪದಿ) ಇನ್ನಿಲ್ಲದ ಪ್ರಾಮುಖ್ಯತೆ.

ಇ. ದೂಪಾರತಿ ಮಾಡುವಾಗ ಬಾಯಿಗೆ ಬಿಳಿ ಬಟ್ಟೆ ಕಟ್ಟಿಕೊಳ್ಳುವುದು.

ಈ. ಹಬ್ಬ ಮುಗಿದ ನಂತರ ಕುಣಿಯುವುದು ಇತ್ಯಾದಿ.

**ವಿಶಿಷ್ಟ ದೈವ ಕಲ್ಪನೆ:** ಬುಡಕಟ್ಟುಗಳಲ್ಲಿ ಸಮುದಾಯಕ್ಕೆ ದುಡಿದ ವೀರರು/ಹಿರಿಯರನ್ನೇ ದೇವರೆಂದು ಪರಿಭಾವಿಸುವ ಕ್ರಮವಿದೆ. ಈ ಹಿನ್ನೆಲೆಯಲ್ಲಿ ಮ್ಯಾಸಬೇಡರ/ಬೇಡರ ಸಾಂಸ್ಕೃತಿಕ ವೀರರದೊಡ್ಡ ಪಟ್ಟಿಯೇ ಇದೆ. ಈ ಪಟ್ಟಿ ದಿನೇ ದಿನೇ ಬೆಳೆಯುತ್ತಲೇ ಇದೆ. ಇಂಥ ನಾಯಕರನ್ನು ದೈವವಾಗಿ ಪೂಜಿಸುವ ಸಂದರ್ಭದಲ್ಲಿ ವೀರರು ಬಳಸಿದ ವಸ್ತುಗಳನ್ನೇ ದೇವರ ಮೂರ್ತಿಗಳಂತಾಗಿಸುವುದು ವಿಶೇಷ. ಈ ಬಗ್ಗೆ ಅಧ್ಯಯನ ನಡೆಸಿದ ಡಿ.ಡಿ. ಕೊಸಾಂಬಿ ಅವರು ಬುಡಕಟ್ಟು ದೈವಗಳಿಗೆ ಯಾವುದೇ ಸ್ಪಷ್ಟ ಮನುಷ್ಯ ರೂಪವಿಲ್ಲದಿರು ವುದರ ಬಗ್ಗೆ ಗಮನ ಸೆಳೆಯುತ್ತಾರೆ. ಇಂದು ಬೇಡರಲ್ಲಿ ಮುಖ್ಯವಾಗಿರುವ ಗಾದ್ರಿಪಾಲ ನಾಯಕ ದೇವರೆಂದರೆ ಆತ ಬಳಸಿದ ಬಿಲ್ಲು ಬಾಣ, ಬಡಿಗೆಗಳೇ ಆಗಿವೆ. ಈ ವಸ್ತುಗಳನ್ನು ಕಂಬಳಿ ಕೋರಿಯಲ್ಲಿ ಸುತ್ತಿ ಕಟ್ಟಿ ದೇವರಾಗಿಸಿರುವುದು ಗಮನಾರ್ಹ ಸಂಗತಿ. ಹಾಗೆಯೇ ಬೊಮ್ಮದೇವರು, ಓಬಳದೇವರು ಮೊದಲಾದ ಹನ್ನೆರಡು ಪೆಟ್ಟಿಗೆ ದೇವರುಗಳಲ್ಲಿ ಪುಟ್ಟಿಯ ಒಳಗೆ ಆಯಾ ವೀರರು ಬಳಸಿದ ವಸ್ತುಗಳಿರುವುದನ್ನು ನೋಡಬಹುದಾಗಿದೆ.

ಇನ್ನೂ ಹಿರಿಯರನ್ನು ಪೂಜಿಸುವಾಗಲೂ ಅವರ ಭಾವಚಿತ್ರವನ್ನು ಈ ಆಧುನಿಕ ಯುಗದಲ್ಲೂ ಬಳಸುವುದಿಲ್ಲ ಎಂಬುದು ವಿಶೇಷ. ಹಿರಿಯರ ಹೆಸರಲ್ಲಿ ಒಂದು ಕಲ್ಲೋ ಅಥವಾ ಮರವೋ ಪೂಜೆಗೊಳ್ಳುತ್ತದೆ. ಮಣ್ಣಿನ ಮಗಿ, ಹಿತ್ತಾಳೆ ಚೆಂಬು, ಬಿದಿರಿನ ಕೋಲು ಮೊದಲಾದವು ಹಿರಿಯರ ಪ್ರತಿನಿಧಿಗಳಾಗಿ ಪೂಜೆಗೊಳ್ಳುತ್ತವೆ.

**ಬೆಡಗುಗಳ ವೈಶಿಷ್ಟ್ಯ:** ಬೇಡರ ಬೆಡಗುಗಳನ್ನು ಸೂರ್ಯವಂಶ-ಚಂದ್ರವಂಶ ಎಂದು ಎರಡು ಮುಖ್ಯ ಭಾಗಗಳನ್ನಾಗಿ ಗುರುತಿಸಲಾಗಿದೆ. ಮತ್ತೆ ಸಂಬಂಧ ಬೆಳೆಸುವ ಕ್ರಮದ ಒಳಗೆ ಎನುಮುಲೋರು, ಮಂದಲೋರು, ಮಳೆಲೋರು ಎಂಬುದಾಗಿ ವಿಂಗಡಿಸಿಕೊಳ್ಳಲಾಗಿದೆ. "ಬೇಡನಾಯಕ ಕುಲಗಳನ್ನೆಲ್ಲ ಗಮನಿಸಿದರೆ ಬಹುಪಾಲು ಕುಲಗಳು ಪ್ರಾಣಿಗಳ ಹೆಸರಿನಲ್ಲಿ ಬರುತ್ತವೆ. ಇದು ಎಲ್ಲಾ ಬುಡಕಟ್ಟಿನ ಕುಲ ಲಕ್ಷಣವೇ ಆಗಿದೆ. ಮುಖ್ಯವಾಗಿ ವೃಕ್ಷಾರಾಧನೆ ಪ್ರಾಣಿಗಳ ಆರಾಧನೆ ದಕ್ಷಿಣ ಭಾರತದ ದ್ರಾವಿಡ ಸಂಸ್ಕೃತಿಯ ಲಕ್ಷಣ ಆಗಿದೆ. ನಿಸರ್ಗದಲ್ಲಿ ಅಪರಿಮಿತವಾಗಿ ಹರಡಿರುವ ವಸ್ತುಗಳಲ್ಲಿ ಯಾವುದೋ ಒಂದು ಕಲ್ಲು ಬಂಡೆ, ದೊಡ್ಡಮರ ಅಥವಾ ಪ್ರಾಣಿ ಆದಿ ಮಾನವ ಗುಂಪಿಗೆ ರಕ್ಷಣೆಯನ್ನು ಒದಗಿಸಿರಬಹುದು ಅಥವಾ ಭಯಕ್ಕೆ ಕಾರಣವಾಗಿರಬಹುದು ಇಂಥ ಒಂದೊಂದು ವಸ್ತುವು ಆಯಾ ಬುಡಕಟ್ಟು ಗುಂಪಿಗೆ ಯಾವುದೋ ಶಕ್ತಿಯ ಸಂಕೇತವಾಗಿ ಕಂಡಿರಬಹುದು. ಈ ಸಂದರ್ಭದಲ್ಲಿಯೇ ಪ್ರಾಣಿ, ಮರ, ಗುಡ್ಡ, ಬೆಟ್ಟ ಬಂಡೆ ಗುಂಪಿನ ಗುರುತಾಗಿ, ಕುಲಸಂಕೇತವಾಗಿ ಸ್ವೀಕರಿಸಲ್ಪಟ್ಟು ಅದು ಪೂಜಾರ್ಹ ವಸ್ತುವೂ ಆಗಿಬಿಟ್ಟಿತು. ಒಂದೊಂದು ಬುಡಕಟ್ಟಿನ ಒಂದೊಂದು ಕುಲಕ್ಕೆ ಅವವೇ ಹೆಸರು ಉಳಿದುಕೊಂಡು ಬಂದಂತೆ ಕಾಣುತ್ತದೆ (ಹನೂರು ಕೃಷ್ಣಮೂರ್ತಿ; ೧೯೯೩:೯೩).

**ಪ್ರತ್ಯೇಕ ನ್ಯಾಯ ಪಂಚಾಯಿತಿ:** ಬೇಡರಲ್ಲಿ ತಮ್ಮ ಸಮುದಾಯಕ್ಕೆ ಮಾತ್ರ ಮೀಸಲಾದ ಪಂಚಾಯ್ತಿ ವ್ಯವಸ್ಥೆ ಇದೆ. ಹಟ್ಟಿ ಪಂಚಾಯ್ತಿ ಕಟ್ಟೆಮನೆ ಪಂಚಾಯ್ತಿ ಗುರುಮನೆ. ಸಮಸ್ಯೆ ಮೊದಲಿಗೆ ಹಟ್ಟಿ ಪಂಚಾಯ್ತಿಗೆ ಬರಬೇಕು. ಇಲ್ಲಿ ಸಮಸ್ಯೆ ಬಗೆಹರಿಯಲಿಲ್ಲ ಅಥವಾ ಹಟ್ಟಿ ಪಂಚಾಯ್ತಿ ನೀಡಿದ ತೀರ್ಮಾನ ಒಪ್ಪಿತವಾಗದಿದ್ದರೆ ಕಟ್ಟೆಮನೆಗೆ ಮುಂದಕ್ಕೆ ಗುರುಮನೆಗೆ ಹೋಗಬೇಕು. ಮ್ಯಾಸಗಂಪಳಕ್ಕೆ ಕಂಪಳದೇವರಹಟ್ಟಿ 'ಗುರುಮನೆ' ಎಂಬುದಾಗಿ ಹೇಳಲಾಗಿದೆ. ಇನ್ನೂ ನನ್ನಿವಾಳ, ನಾಯ್ಕನಹಟ್ಟಿ, ಗೋಣೂರು ಮೊದಲಾದ ಹನ್ನೆರಡು ಕಟ್ಟೆಮನೆಗಳಿದ್ದವೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಮ್ಯಾಸಬೇಡರಿಗೆ ನನ್ನಿವಾಳ, ನಾಯ್ಕನಹಟ್ಟಿ, ಗೋನೂರು ಕಟ್ಟೆಮನೆಗಳಾಗಿ ಕಾರ್ಯ

ನಿರ್ವಹಿಸಿದ್ದರ ಬಗ್ಗೆ ಸಾಕಷ್ಟು ಮಾಹಿತಿಗಳು ದೊರೆಯುತ್ತವೆ. ನನ್ನಿವಾಳ ಕಟ್ಟೆಮನೆ ಈಗಲೂ ಕಾರ್ಯ ನಿರ್ವಹಿ ಸುತ್ತಿದೆ ಎಂಬುದು ಗಮನಾರ್ಹ.

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಕಂಡುಬರುವ ಜಾತಿ ಪಂಚಾಯ್ತಿಗಳಿಗಿಂತ ಭಿನ್ನವಾಗಿರುವ ಈ ನ್ಯಾಯ ವ್ಯವಸ್ಥೆ ಕೇವಲ ಧರ್ಮದ ರಕ್ಷಕ ವ್ಯವಸ್ಥೆಯಾಗಿ ಕೆಲಸ ಮಾಡದೆ ಸಾಮಾಜಿಕ ನ್ಯಾಯಕ್ಕಾಗಿಯೂ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ.

**ಅನನ್ಯ ಮನೆಗಳ ನಿರ್ಮಾಣ:** ಬೇಡರು ವಿಶೇಷವಾಗಿ ಮ್ಯಾಸಬೇಡರು ಇತ್ತೀಚಿನವರೆಗೆ ಸಂಪೂರ್ಣ 'ಸುತ್ತುಗುಡಿಸಲಲ್ಲೇ' ವಾಸಿಸುತ್ತಿದ್ದರು. ಕೇವಲ ಮರ ಹಾಗೂ ಹುಲ್ಲಿನಿಂದ ದುಂಡಾಗಿ ನಿರ್ಮಿಸುತ್ತಿದ್ದ ಅಂಥಮನೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ಥಳಾಂತರಿಸಲು ಅನುಕೂಲವಾಗಿದ್ದವು. ಮನುಷ್ಯರಿಗಲ್ಲದೆ ದೇವರಿಗೂ ಕೂಡ ಇಂಥ ಸುತ್ತು ಗುಡಿಸಲನ್ನೇ ನಿರ್ಮಿಸಲಾಗುತ್ತಿತ್ತು (ಈಗಲೂ ಹಲವಾರು ಹಟ್ಟಿಗಳಲ್ಲಿ ಮ್ಯಾಸಬೇಡರ ದೈವಗಳು ಇಂಥ ಗುಡಿಸಲುಗಳಲ್ಲಿ ನೆಲಸಿವೆ ಎಂಬುದು ವಿಶೇಷವಾಗಿ ಗಮನಿಸಬೇಕಾದ ಸಂಗತಿ).

ಇವರ ಮನೆಗಳು ಸುತ್ತು ಗುಡಿಸಲಿಂದ, ಸ್ವಲ್ಪಪ್ರಮಾಣ ಗೋಡೆ ಎಬ್ಬಿಸಿ ಮೇಲೆ ಕಾಡಿನ ಹುಲ್ಲನ್ನು ಹೊದಿಸುವ ಕ್ರಮದ ಮನೆಗಳಿಗೆ ಬೆಳವಣಿಗೆ ಸಾಧಿಸಿದೆ. ಒಂದು ಕಡೆ ನೆಲೆ ನಿಂತ ನಂತರ ಗೋಡೆ ಗುಡಿಸಲುಗಳನ್ನು ನಿರ್ಮಿಸಿರುವುದು ನಿರ್ವಿವಾದದ ಸಂಗತಿ. ಈಗ ಮಾಳಿಗೆ ಮನೆಗಳು ಬೇಡರ ವಿಶೇಷವಾಗಿದೆ.

ಬೇಡರ ಮನೆಗಳ ಬಾಗಿಲಿನ ಎತ್ತರ ಅತೀ ಕಡಿಮೆ. ಯಾರೂ ಮನೆಯ ಒಳಗೆ ಹಾಗೆ ನೆಟ್ಟಗೆ ಪ್ರವೇಶಿಸುವಂತಿಲ್ಲ. ಶಿರವನ್ನು ಸಾಕಷ್ಟು ಬಗ್ಗಿಸಿ ಒಳಹೋಗಬೇಕು. ಇದು ಬೇಡ ಬುಡಕಟ್ಟಿನ ಲೋಕ ದೃಷ್ಟಿ. ಮನುಷ್ಯರಿಗೆ ಬೇಡವಾದ ಜಂಭವನ್ನು/ಅಹಂಕಾರವನ್ನು ತೊರೆದು ವಿನಯವನ್ನು ಕಲಿಯಬೇಕೆಂಬ ಸರಳ ಸಂದೇಶ ಇಲ್ಲಿನದು.

ಈಚೆಗೆ ಬೇಡರು ನಿರ್ಮಿಸುತ್ತಿರುವ ಮಾಳಿಗೆ ಮನೆಗಳಲ್ಲಿ ಜಗಲಿ ನಿರ್ಮಾಣ ಸಾಮಾನ್ಯ. ಸಾಮಾನ್ಯವಾಗಿ ಮನೆಯ ಪ್ರವೇಶದ ಬಲಗಡೆಗೆ ಜಗಲಿ ನಿರ್ಮಾಣ. ಬೇರೆಯವರಿಗೆ ಜಗಲಿಯ ಪ್ರವೇಶ ತೀರಾ ವಿರಳ.

**ಆಹಾರ ಪದ್ಧತಿ:** ಬೇಡರ ಆಹಾರ ಪದ್ಧತಿಯ ಕೆಲವು ವಿಶಿಷ್ಟತೆಗಳು ಈ ಮುಂದಿನಂತಿವೆ.

ಅ. ಸಜ್ಜೆ ಅನ್ನ-ಮಜ್ಜಿಗೆ ಇವರಿಗೆ ಬಹುಪ್ರಿಯ.

ಆ. ಬೇಡರ ಕೆಲವು ಬೆಡಗಿನವರು (ಉದಾ. ಬೊಮ್ಮದೇವಡ್ಲು) ನವಣೆ ತಿನ್ನುವುದಿಲ್ಲ, ಮುಟ್ಟುವುದೂ ಇಲ್ಲ, ಬೆಳೆಯುವುದು ಮೊದಲೇ ಇಲ್ಲ. ಅಕಸ್ಮಾತ್ ಮುಟ್ಟಿದರೆ ಶುದ್ಧಿ ಮಾಡಿಕೊಳ್ಳದೆ ಒಳಗೆ ಹೋಗುವಂತಿಲ್ಲ.

ಇ. ಇವರಲ್ಲಿ ಈಚಲು ಚಾಪೆ ಬಳಕೆ ನಿಷೇಧ. ಈಚಲು ಹಣ್ಣು ತಿನ್ನುವುದು ಕೂಡ ನಿಷೇಧ.

ಈ. ಹಂದಿ, ಕೋಳಿ ಸಾಕುವುದು/ತಿನ್ನುವುದು ನಿಷೇಧ.

ಇಲ್ಲಿ ಕೆಲವು ಧಾನ್ಯ ಹಾಗೂ ಪ್ರಾಣಿಗಳನ್ನು ತಿನ್ನುವುದನ್ನು ನಿಷೇಧ ಮಾಡಿರುವ ಸಂಗತಿ ಬುಡಕಟ್ಟು ಲಕ್ಷಣಗಳ ಹಿನ್ನೆಲೆಯಲ್ಲಿ ಬಹುಮುಖ್ಯವಾಗುತ್ತದೆ. ''ವಾಸ್ತವವಾಗಿ ಒಂದೊಂದು ಬುಡಕಟ್ಟಿಗೂ ಇಂಥದೊಂದು ನಂಬಿಕೆ ಅಥವಾ ನಿಷೇಧವಿದ್ದುಎಲ್ಲರೂ ಒಂದು ಬಗೆಯ ಪ್ರಾಣಿಯನ್ನು ಕೊಂದು ಆಹಾರವಾಗಿ ಉಪಯೋಗಿಸುವುದನ್ನು ಬಿಟ್ಟು ಕೊಂಡು ಬಂದಿರುವಂತೆ ತಿಳಿದುಬರುತ್ತದೆ. ಇದು ಬಹುಮಟ್ಟಿಗೆ ಪ್ರಪಂಚದ ಎಲ್ಲಾ ಬುಡಕಟ್ಟುಗಳಲ್ಲಿಯೂ ಕಂಡುಬರುವ ಸಾಮಾನ್ಯ ಲಕ್ಷಣ'' (ಕೃಷ್ಣಮೂರ್ತಿ ಹನೂರು:೧೯೯೩ :೮೦).

**ವಿಶಿಷ್ಟ ಭವಿಷ್ಯ ಕ್ರಮಗಳು:** ಬೇಡರಲ್ಲಿ ವಿಶೇಷವಾಗಿ ಮ್ಯಾಸಬೇಡರಲ್ಲಿ ಅನನ್ಯವೆನಿಸುವ ಭವಿಷ್ಯ ಕೇಳುವ ಕ್ರಮಗಳಿವೆ. ಅವುಗಳಲ್ಲಿ ಮಳೆ ಕುರಿತು ಕೇಳುವ ಭವಿಷ್ಯ ಕ್ರಮಗಳಲ್ಲಿ ಒಂದೆರಡನ್ನು ಇಲ್ಲಿ ಪ್ರಸ್ತಾಪಿಸಬಹುದು.

**ಅ. ಕೊಡ ಹಿಡಿಯುವುದು:** ದೇವರ ಗುಡಿಯ ಮುಂದೆ ಸಗಣಿಯಲ್ಲಿ ನೆಲ ಬಳಿದು ಅಲ್ಲಿಗೆ ಹಟ್ಟಿಯ ಎಲ್ಲರೂ ಮನೆಗಳಿಂದ ತಂದ ಧಾನ್ಯವನ್ನು ರಾಶಿಯನ್ನಾಗಿ ಸುರಿದು, ದೊಡ್ಡರಾಶಿ ಮಾಡುತ್ತಾರೆ. ಆ ರಾಶಿ ಮೇಲೆ ತುಂಬಿದ ಮಣ್ಣಿನ ಗಡಿಗೆಯನ್ನು ಇರಿಸುತ್ತಾರೆ. ನಂತರ ದೇವರಿಗೆ ಕೈಮುಗಿದು, ಪ್ರತಿಯೊಂದು ಮಳೆಯ ಹೆಸರು ಹೇಳಿ ಆ ಗಡಿಗೆಯನ್ನು ಇಬ್ಬರು ವ್ಯಕ್ತಿಗಳಾಗಿ ಎದುರು ಬದರಾಗಿ ನಿಂತು ಮುಟ್ಟುತ್ತಾರೆ. ಆಗ ಗಡಿಗೆ ತಿರುಗುವ ಸ್ವರೂಪದ ಮೇಲೆ ಆ ವರ್ಷದ ಮಳೆ ಪ್ರಮಾಣವನ್ನು ನಿಧರಿಸುತ್ತಾರೆ. ಕೊಡ ಜೋರಾಗಿ ತಿರುಗಿ ನೀರು ಚೆಲ್ಲಿದರೆ ಸಾಕಷ್ಟು ಪ್ರಮಾಣದಲ್ಲಿ ಮಳೆ ಬರುವುದೆಂಬ ನಂಬಿಕೆ ಇದೆ.

**ಆ. ಗಣೆ ಊದುವುದು:** ಉದ್ದವಾದ ಕೊಳಲನ್ನೇ 'ಗಣೆ' ಎಂದು ಕರೆಯುತ್ತಾರೆ. ದೇವರ ಎರಡು ಗಣೆಗಳನ್ನು ದೇವರ ಗುಡಿಯ ಮುಂದೆ ಪೂಜಿಸಿ ಹಟ್ಟಿಯ ಹಿರಿಯರ ಸಮ್ಮುಖದಲ್ಲಿ ಇಬ್ಬರು ನುರಿತ ಗಣೆವಾದಕರು ಗಣೆ ಊದುತ್ತಾರೆ. ಮಳೆ ಬರುವುದೆಂದಾದರೆ ಗಣೆ ಸರಾಗವಾಗಿ ನುಡಿಯಬೇಕು ಇಲ್ಲವೇ ನುಡಿಯಬಾರದು ಎಂದು ಕುರುಹು ಕೇಳಲಾಗುತ್ತದೆ. ಅದರಂತೆ ಆ ವರ್ಷದ ಮಳೆಯ ಪ್ರಮಾಣವನ್ನು ತಿಳಿಯಲಾಗುತ್ತದೆ.

**ರಕ್ತ ಸಂಬಂಧದ ಅತಿಯಾದ ಅವಲಂಬನೆ**

ಬುಡಕಟ್ಟುಗಳ ಜೀವಾಳವೇ ರಕ್ತಸಂಬಂಧ. ಇದರ ಹೊರತಾಗಿ ಇವರಿಗೆ ಬೇರೆ ಯಾವುದೇ ಮನುಷ್ಯ ಸಂಬಂಧಗಳಿರುವುದಿಲ್ಲ. ಇವರ ವಿವಾಹಗಳು ರಕ್ತ ಸಂಬಂಧದಲ್ಲಿ ಮಾತ್ರ ನಡೆಯಬೇಕು. ಒಳ ಬೆಡಗುಗಳಲ್ಲಿಯೂ ಮದುವೆ ಸಂಬಂಧಗಳು ನಿಷಿದ್ಧ. ಒಂದು ಊರಿಂದ ಮತ್ತೊಂದು ಊರಿಗೆ ಹೆಣ್ಣು ತರುವುದು ಹಾಗೂ ಕೊಡುವುದು ಕೆಲವೆಡೆ ನಿಷೇಧ. ಹೆಣ್ಣು ತರುವುದು ಮತ್ತು ಕೊಡುವುದರಲ್ಲಿ ಸೋದರತ್ತೆ ಹಾಗೂ ಸೋದರ ಮಾವಂದಿರಿಗೆ ವಿಶೇಷ ಹಕ್ಕು ಬಾಧ್ಯತೆಗಳಿರುವುದು ಇಲ್ಲಿಯ ವಿಶೇಷ. ಇವರು ಬೇರೆ ಜಾತಿ-ಸಮುದಾಯಗಳೊಡನೆ ಸಂಬಂಧ ಬೆಳೆಸುವ ಅನಿವಾರ್ಯತೆ ಬಂದಾಗ ಮಾವ, ಅಣ್ಣ, ಅಕ್ಕ ಅನ್ನುವ ಸ್ವರೂಪದಲ್ಲೇ ಎನ್ನುವುದು ಗಮನಾರ್ಹ.

**ಅತಿಯಾದ ಪಾವಿತ್ರ್ಯತೆ**

ಬೇಡರ ಪಾವಿತ್ರ್ಯ ಕಲ್ಪನೆ ಎಷ್ಟು ಜಟಿಲವಾದುದು ಎಂಬುದು ಇವರ ಕಟ್ಟೆಮನೆಗಳಲ್ಲಿ ನಡೆದಿರುವ ವ್ಯಾಜ್ಯಗಳಿಂದಲೇ ತಿಳಿದುಬರುತ್ತದೆ. ಈ ಸಮುದಾಯದ ಒಬ್ಬ ವ್ಯಕ್ತಿ ಬೇರೊಂದು ಜಾತಿಯವರ ಮನೆಯ ಒಳಗೆ ಪ್ರವೇಶಿಸಿದ್ದು ಒಂದು ದೊಡ್ಡ ಅಪರಾಧ ಎಂದು ಭಾವಿಸುವುದು, ಇನ್ನೊಂದು ಜಾತಿಯವರನ್ನು ಸ್ಪರ್ಶಿಸಿದರು ಎಂದು ಸಮುದಾಯ ದಿಂದ ಹೊರ ಹಾಕುವುದು. ಇಂಥ ಹಲವಾರು ಸಂಗತಿಗಳನ್ನು ಗಮನಿಸಿದರೆ ಬೇಡರ ಪಾವಿತ್ರ್ಯತೆಯ ಸ್ವರೂಪ ಅರ್ಥವಾಗುತ್ತದೆ. ಇವರ ಪಾವಿತ್ರ್ಯತೆಯನ್ನು ಇನ್ನು ಕೆಲವೊಂದು ಅಂಶಗಳು ಮುಂದಿನಂತಿವೆ.

ಅ. ಸಮುದಾಯದ ಒಳಗೇ ಒಬ್ಬರ ಎಂಜಲನ್ನು ಇನ್ನೊಬ್ಬರು ತಿನ್ನುವಂತಿಲ್ಲ. 'ಎಂಜಲು ಏಳು ಮನೆ ಕೆಡಿಸಿತು' ಎಂಬ ನಂಬಿಕೆಯಿಂದಾಗಿ ಇವರಲ್ಲಿ ಒಬ್ಬರ ಎಂಜಲನ್ನು ಇನ್ನೊಬ್ಬರು ತಿನ್ನುವುದು ಕಡ್ಡಾಯವಾಗಿ ನಿಷಿದ್ಧವಾಗಿದೆ.

ಆ. ಯಾರದೋ ಬೇರೆ ಸಮುದಾಯದ ಮನೆಯಲ್ಲಿ ಊಟ ಮಾಡುವಂತಿಲ್ಲ. ಅಷ್ಟೇ ಅಲ್ಲ ಕಿಲಾರಿಗಳು, ಪೂಜಾರಿಗಳು ಮೊದಲಾದ ಸಾಂಸ್ಕೃತಿಕ ಪುರುಷರು ಅವರ ಸ್ವಂತ ಮನೆಯಲ್ಲೇ ಎಲ್ಲರೂ ಉಣ್ಣುವ ತಟ್ಟೆಗಳಲ್ಲಿ ಉಣ್ಣುವಂತಿಲ್ಲ. ಇವರಿಗೇ ಪ್ರತ್ಯೇಕ ತಟ್ಟೆ ಯಿರಬೇಕು.

ಇ. ಇನ್ನು ವಿಶೇಷವೆಂದರೆ ಒಂದು ಊರಿಂದ ಇನ್ನೊಂದೂರಿಗೆ ಪ್ರಯಾಣಿಸುವಾಗ ಸಾರ್ವಜನಿಕ ವಾಹನದ ಬಳಕೆ ನಿಷೇಧ ಮಾಡಿಕೊಂಡಿದ್ದು ಈಗ ಈ ನೀತಿ ಸ್ವಲ್ಪ ಸಡಿಲಗೊಂಡಿದೆ. ಇತ್ತೀಚಿಗೆ ಸಾರ್ವಜನಿಕ ವಾಹನವೇರಿದರೆ ನಾವು ಮಲಿನರಾಗುತ್ತೇವೆ ಎಂದು ಭಾವಿಸಿ ನಡೆದು ಪಟ್ಟಣಗಳಿಗೆ ಹೋಗಿ ಬರುತ್ತಿದ್ದವರನ್ನು ನಾವೆಲ್ಲರೂ ನೋಡಿದ್ದೇವೆ. ಈಗಲೂ ಈ ಮೊದಲೇ ಹೇಳಿದ ಸಾಂಸ್ಕೃತಿಕ ಪುರುಷರು ಸಾರ್ವಜನಿಕ ಬಸ್‌ಗಳಲ್ಲಿ ಪ್ರಯಾಣಿಸದೇ ಇರುವುದನ್ನು ನೋಡಬಹುದಾಗಿದೆ.

ಇಂಥ ನಿರ್ಬಂಧದ ಹಿನ್ನೆಲೆ ಇರುವ ಈ ಸಮುದಾಯದ ಜನ ಬೇರೊಂದು ಸಮುದಾಯ ದವರ ಜೊತೆ ವೈವಾಹಿಕ ಮೊದಲಾದ ಸಾಮಾಜಿಕ ಸಂಬಂಧಗಳನ್ನು ಬೆಳೆಸುವುದು ದೂರದ ಮಾತು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ನಡವಳಿಕೆಗಳಲ್ಲಿ ಪಾವಿತ್ರ್ಯತೆ ಕಳೆದುಕೊಂಡ ವರನ್ನು ಸಮುದಾಯದಿಂದ ಹೊರಹಾಕುವುದು ಸಾಮಾನ್ಯ ಹಾಗೂ ಸಹಜ ಸಂಗತಿ. ಆದರೂ ಎಲ್ಲಾ ತರಹದ ತಪ್ಪಿಗೂ ಇಲ್ಲಿ ಕ್ಷಮೆ ಇದೆ. ಶುದ್ಧೀಕರಿಸುವ ಕೆಲವು ಮಾದರಿಗಳಿದ್ದು, ಶಿಕ್ಷೆಗೊಳಗಾದ ವ್ಯಕ್ತಿ ಮರಳಿ ಸಮುದಾಯದೊಳಗೆ ಬರಲು ಇಚ್ಛಿಸಿದರೆ ಆತನನ್ನು ಶುದ್ಧಿ ಮಾಡಿ ಕರೆದುಕೊಳ್ಳುವ ಉದಾರ ಕ್ರಮಗಳೂ ಇಲ್ಲಿವೆ.

**ಕಾಡಿಗೆ ಹತ್ತಿರವಾದ ಬದುಕು**

"ಬುಡಕಟ್ಟು ಜನ ಸಾಮಾನ್ಯವಾಗಿ ತಮ್ಮ ಸಂತೋಷದ ದುಃಖದ ಸಂದರ್ಭಗಳನ್ನು ಪ್ರಕೃತಿಯ ಮುಂದೆಯೇ ನಿವೇದಿಸಿಕೊಳ್ಳುವುದುಂಟು. ಅಲ್ಲಿ ಪರಿಹಾರವೂ ದೊರೆಯುವುದೆಂಬ ಖಚಿತ ನಂಬಿಕೆಯೂ ಅವರಿಗೆ ಇದೆ" (ಕೃಷ್ಣಮೂರ್ತಿ ಹನೂರು:೧೯೯೩:೯೮). ಇದಕ್ಕೆಲ್ಲ ಕಾರಣ ಬುಡಕಟ್ಟು ಸಮುದಾಯಗಳು ಹುಟ್ಟಿದ್ದು ಕಾಡಲ್ಲಿ ಬೆಳೆದದ್ದು ಕಾಡಲ್ಲಿ. ಬೇಡರ ಈ ಸಮುದಾಯವೂ ಕೂಡ ಕಾಡಿಗೆ ಹತ್ತಿರವಾಗಿ ಬದುಕಿದ ಬದುಕುತ್ತಿರುವ ಬುಡಕಟ್ಟಾಗಿದೆ. ಬೇಡರ/ಮ್ಯಾಸಬೇಡರ ಮೂಲಪುರುಷ "ಚೆಟ್ಲುಗೊಟ್ಲು ಮಲ್ಲಿನಾಯಕ" ಹುಟ್ಟಿದ್ದು ಕಾಡಲ್ಲಿ. ಒಂಟಿಕೊಂಬಿನ ಹಸುವಿನ ಗೊರಸಲ್ಲಿ ಬಿದ್ದ ವಿಭೂತಿ ದೂಳಿನ ಕಣವೊಂದರಿಂದ ಜನಿಸಿದ ಈತ ತಾಯಿಯ ಹಾಲಿನ ಬದಲಿಗೆ ಜೇನು ತುಪ್ಪವನ್ನು ಕುಡಿದು ಬದುಕಿದವನು.

ಇಂದು ಬೇಡರು ವಾಸಿಸುವ ಹಟ್ಟಿಗಳನ್ನೆಲ್ಲ ಸೂಕ್ಷ್ಮವಾಗಿ ಪರಿಶೀಲಿಸಿದರೆ ಹಿಂದೆ ಆ ಪ್ರದೇಶಗಳು ದಟ್ಟ ಕಾಡಿನಿಂದ ಕೂಡಿದ್ದವೆಂಬುದಾಗಿ ತಿಳಿದುಬರುತ್ತದೆ. ಅಷ್ಟೇ ಅಲ್ಲ ಇಂದಿಗೂ ಮ್ಯಾಸಬೇಡರ ಅನೇಕ ಹಟ್ಟಿಗಳು ಅರಣ್ಯದಿಂದ ಸುತ್ತುವರೆದಿವೆ. ಹಾಗೆಯೇ ಬೇಡರ ಬದುಕು ಅರಣ್ಯ ಪರಿಕರಗಳಿಂದ ಸಾಕಷ್ಟು ಪ್ರಭಾವಿತಗೊಂಡಿದೆ ಮತ್ತು ಅವಲಂಬಿತ ವಾಗಿದೆ.

**ಪ್ರತ್ಯೇಕ ಭಾಷೆ**

ವಿಶೇಷವಾಗಿ ಚಿತ್ರದುರ್ಗ, ದಾವಣಗೆರೆ, ತುಮಕೂರು ಜಿಲ್ಲೆಗಳ ಸುತ್ತಲಿನ ಮ್ಯಾಸಬೇಡರ ಸಮುದಾಯಗಲ್ಲಿ 'ಕಂದೆಲಗು' ಎಂಬ ಪ್ರತ್ಯೇಕ ಭಾಷೆ ಪ್ರಚಲಿತವಾಗಿದೆ. ತೆಲುಗು ಹಾಗೂ ಕನ್ನಡ ಮಿಶ್ರಿತವಾದ ಈ ಭಾಷೆ ಮುಖ್ಯವಾಗಿ ತೆಲುಗು. ಈ ತೆಲುಗಿಗೆ ಕನ್ನಡ ಮಿಶ್ರಣಗೊಂಡು 'ಕಂದೆಲಗು' ಆಗಿ ಮಾರ್ಪಾಟಾಗಿರುವುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ.

ಇಷ್ಟೆಲ್ಲಾ ಸಾಂಸ್ಕೃತಿಕ ವೈಶಿಷ್ಟತೆಗಳೊಂದಿಗೆ ಬದುಕುತ್ತಿರುವ ಬೇಡರು ಕರ್ನಾಟಕ ಬುಡಕಟ್ಟುಗಳಲ್ಲೇ ಒಂದು ವಿಶಿಷ್ಟ ಸ್ಥಾನ ಉಳಿಸಿಕೊಂಡಿದ್ದಾರೆ. ಆಧುನಿಕ ಕಾಲದ ಈ ಸಂದರ್ಭದಲ್ಲಿ ಬುಡಕಟ್ಟು ಜಾತಿಗಳ ಸ್ಪಷ್ಟಗೆರೆ ಮಾಯವಾಗುತ್ತದೆ. ಆದರೂ ಕೆಲವೊಂದು ಸಮುದಾಯಗಳು ಬುಡಕಟ್ಟಾಗಿ ಮುಂದುವರೆಯುವ ಬದ್ಧತೆಯನ್ನು ತೋರ್ಪಡಿಸಿವೆ. ಬುಡಕಟ್ಟೊಂದು ಸಂಪೂರ್ಣ ಜಾತಿಯಾಗಿದೆ ಎಂದು ತೀರ್ಮಾನಿಸುವುದು ಯಾವ ಸಂದರ್ಭಕ್ಕೆ ಎಂಬುದರ ಬಗ್ಗೆ ವಿಚಾರ ಮಾಡುತ್ತಾ ನಿರ್ಮಲ್ ಕುಮಾರ್ ಬೋಸ್ ಅವರು ಹೇಳಿದ ಮತ್ತೊಂದು ಇಲ್ಲಿ ಉಲ್ಲೇಖಾರ್ಹ. "ಬುಡಕಟ್ಟಿನ ಹುಟ್ಟು, ಮದುವೆ, ಸಾವು ಈ ಮೂರು ಸಂದರ್ಭಗಳಲ್ಲಿ ಬ್ರಾಹ್ಮಣರ ಪುರೋಹಿತ್ಯಕ್ಕೆ ಅವಕಾಶ ಕೊಡದೆ

ತಾವೇ ನಡೆಸಿಕೊಂಡು ಹೋಗುತ್ತಾರೆ. ಎಲ್ಲಿಯವರೆಗೆ ಈ ಪರಿಸ್ಥಿತಿ ಉಳಿದಿರುವುದೋ ಅಲ್ಲಿಯವರೆಗೆ ಬುಡಕಟ್ಟು ತನ್ನ ಮೂಲ ರೂಪದಲ್ಲಿ ಉಳಿದಿರುತ್ತದೆ. ಹುಟ್ಟು-ಮದುವೆ ಹಾಗೂ ಸಾವು ಈ ಸಂದರ್ಭಗಳಲ್ಲಿ ಬ್ರಾಹ್ಮಣರ ಪುರೋಹಿತ್ಯಕ್ಕೆ ಅವಕಾಶ ಕೊಡುವುದೋ ಆಗ ಬುಡಕಟ್ಟು ತನ್ನ ಮೂಲ ಸ್ವರೂಪವನ್ನು, ಸ್ವಾತಂತ್ರ್ಯವನ್ನು ಕಳೆದುಕೊಂಡು ಜಾತಿಯಾಗಿ ಪರಿವರ್ತಿತ ವಾಗುತ್ತದೆ (ಉಲ್ಲೇಖ: ತಿಣ.ನಂ. ಶಂಕರನಾರಾಯಣ: ೧೯೮೨: ೦೨).

ಈ ಮಾತನ್ನು ಬೇಡ ಸಮುದಾಯಕ್ಕೆ ಅನ್ವಯಿಸಿ ನೋಡಿದರೆ ಫಲಿತಾಂಶ ಸ್ಪಷ್ಟವಾಗಿ ರುತ್ತದೆ.


ಆಕರಗಳು

೧. ಕ್ಷೇತ್ರ ಕಾರ್ಯಾಧಾರಿತ ಮಾಹಿತಿಗಳು.

೨. 'ಬುಡಕಟ್ಟು ಅಧ್ಯಯನ ನೆಲೆಯಲ್ಲಿ ಬೇಡನಾಯಕರು'(ಲೇಖನ)ಕೆ.ಎಂ. ಮೈತ್ರಿ (ಇದರಲ್ಲಿ:"ಘಟ್ಟಿ ಹೊಸಳ್ಳಿ ಘಟ್ಟಿಗ", ಸಂ. ಲಕ್ಷ್ಮಣ್ ತೆಲಗಾವಿ, ವಾಸಾಸಂ, ಹರ್ತಿಕೋಟೆ).

೩. "ಮ್ಯಾಸಬೇಡರ ಸಂಸ್ಕೃತಿ", ಕೃಷ್ಣಮೂರ್ತಿ ಹನೂರು, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪. "ಮ್ಯಾಸ ಮಂಡಲ", ಮೀರಾಸಾಬಿಹಳ್ಳಿ ಶಿವಣ್ಣ, ೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫. "ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು", ತೀ.ನಂ.ಶಂಕರ ನಾರಾಯಣ, ೧೯೮೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೬. "ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ", ಗಂಗಾಧರ ದೈವಜ್ಞ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. "ಮನೆ-ಸಮಾಜ-ಸಂಸ್ಕೃತಿ", ಎಂ.ಪಿ. ವೀಣಾ, ೧೯೯೯, ನೆಲಮನೆ ಪ್ರಕಾಶನ, ಬೆಂಗಳೂರು.

೮. "ಪ್ರಾಚೀನ ಭಾರತದ ಚರಿತ್ರೆ"(ಡಿ.ಡಿ. ಕೊಸಂಬಿಯವರ ಚಿಂತನೆಗಳು), ಮೂಲ. ಬಾಲಗೋಪಾಲ್, ಅನು. ಎಚ್.ಎಸ್. ಶ್ರೀಮತಿ, ೧೯೯೮, ಬೆಳ್ಳಿ-ಚುಕ್ಕಿ ಟ್ರಸ್ಟ್, ಬೆಂಗಳೂರು.

೯. "ಜಾನಪದ ಕೈಪಿಡಿ", ಸಂ. ಎಚ್.ಜೆ. ಲಕ್ಕಪ್ಪಗೌಡ, ೧೯೯೭, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೦. ಬುಡಕಟ್ಟು ಅಧ್ಯಯನ-೧, ಸಂ. ಹಿ.ಚಿ. ಬೋರಲಿಂಗಯ, ಎ.ಎಸ್. ಪ್ರಭಾಕರ, ೨೦೦೩, ಕನ್ನಡ ವಿಶ್ವವಿದ್ಯಾಲಯ, ಹಂಪಿ.


***